ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ
ಎಸ್.ಕೆ. ಸಣ್ಣಬೊಬಯ್ಯ

ಮಾರ್ಗದರ್ಶಕರು
ಡಾ.ಕೆ.ಎಂ. ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಿಸೆಂಬರ್ - ೨೦೦೨

27

27

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ
ಎಸ್.ಕೆ. ಸಣ್ಣಓಬಯ್ಯ

ಮಾರ್ಗದರ್ಶಕರು
ಡಾ.ಕೆ.ಎಂ. ಮೈತ್ರಿ
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಿಸೆಂಬರ್ - ೨೦೦೨

ದೃಢೀಕರಣ ಪತ್ರ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಪಿಎಚ್.ಡಿ. ಮಹಾಪ್ರಬಂಧವನ್ನು ಎಸ್.ಕೆ.ಸಣ್ಣಓಬಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಮಹಾಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಯಾವುದೇ ಪದವಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 20.12.2009
ಸ್ಥಳ : ವಿದ್ಯಾರಣ್ಯ

ಡಾ.ಕೆ.ಎಂ.ಮೈತ್ರಿ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪ್ರಮಾಣ ಪತ್ರ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ.ಕೆ.ಎಂ.ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.


ದಿನಾಂಕ : ೩೦.೧೨.೦೭
ಸ್ಥಳ : ವಿದ್ಯಾರಣ್ಯ

ಎಸ್.ಕೆ.ಸಣ್ಣಓಬಯ್ಯ
ಸಂಶೋಧನಾ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಪರಿಶಿಷ್ಟಗಳು

ಚಿತ್ರದುರ್ಗ ಜಿಲ್ಲೆ


ರಾಂಪುರ
ದೇವಸಮುದ್ರ
ಮೊಣಕಾಲ್ಮೂರು
ಕೊನಸಾಗರ
ನಾಯಕನಹಟ್ಟಿ
ತಳಕು
ರಾಮದುರ್ಗ
ಭರಮಸಾಗರ
ಚಳ್ಳಕೆರೆ
ಪರಶುರಾಂಪುರ
ಚಿತ್ರದುರ್ಗ
ಸಿದ್ದೇಶ್ವರದುರ್ಗ
ಐಮಂಗಲ
ಮೇಟಿಕುರ್ಕೆ
ಭರಮಗೆರೆ
ಹಿರಿಯೂರು
ಹೊಳಲ್ಕೆರೆ
ರಾಮಗಿರಿ
ಜಾನಕಲ್ಲು
ಜವನಗೊಂಡನಹಳ್ಳಿ
ಹೊಸದುರ್ಗ ರೋಡ್
ಬಾಗೂರು
ಹೊಸದುರ್ಗ
ಮತ್ತೋಡು
ಕಂಚೀಪುರ
ಶ್ರೀರಾಂಪುರ
ಆಲಗಟ್ಟ
ನದಿಗಳು
ವೇದಾವತಿ
ಚಿನ್ನಹಗರಿ
ತಾಲ್ಲೂಕುಗಳು
ಮೊಣಕಾಲ್ಮೂರು
ಚಳ್ಳಕೆರೆ
ಹಿರಿಯೂರು
ಚಿತ್ರದುರ್ಗ
ಹೊಳಲ್ಕೆರೆ
ಹೊಸದುರ್ಗ

ಅಧ್ಯಾಯ - ೧

ವಿಷಯ ಪ್ರವೇಶ

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨. ಬುಡಕಟ್ಟುಗಳ ಅಧ್ಯಯನ ಕ್ರಮ

೩. ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

೪. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

೫. ನಡೆದಿರುವ ಅಧ್ಯಯನಗಳ ಸಮೀಕ್ಷೆ

೧. ವಿಷಯ ಪ್ರವೇಶ

ಮಾನವನು ಮೂಲತಃ ಸಮಾಜಜೀವಿ ಎಂಬ ಮಾತನ್ನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದ. ಮಾನವ ಸಮಾಜಜೀವಿ ಮತ್ತು ಸಮೂಹಜೀವಿಯಾಗಿ ಸಾಮಾಜಿಕ ನಿಯಮಗಳ ಚೌಕಟ್ಟಿನಲ್ಲೇ ಬದುಕುವುದು ಆತನಿಗೆ ಅನಿವಾರ್ಯವಾಗಿತ್ತು. ಹೀಗೆ ಸಮೂಹಗಳ ಸಹವಾಸದಿಂದ ಮಾತ್ರ ಮಾನವನು ಮಾನವನಾಗಿ ಜೀವಿಸಬಲ್ಲ. ಆತನ ಸಾಮಾಜಿಕ ನಡತೆ ಮತ್ತು ವ್ಯಕ್ತಿತ್ವವೆಂಬುದು ಸಮೂಹಗಳ ಕೊಡುಗೆ. ಇತಿಹಾಸದ ಆರಂಭದಿಂದಲೂ ಮಾನವನು ಸಮೂಹಗಳಲ್ಲಿ ಜೀವಿಸುತ್ತ ಬಂದವನು. ತನ್ನ ಒಡನಾಡಿಗಳ ಸಹವಾಸ ಸಹಯೋಗದಿಂದ ಹೊಸ ಸಮೂಹಗಳನ್ನು ಸ್ಥಾಪಿಸುತ್ತ ಬಂದಿದ್ದಾನೆ. ಮಾನವನು ಸೃಷ್ಟಿಸುತ್ತಾ ಬಂದಿರುವ ಹಲವು ಬಗೆಯ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳಿಂದಾಗಿ ಸಮೂಹಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ವ್ಯಕ್ತಿಗಳಿಗೆ ಸಾಧ್ಯವಾಗಿದೆ. ಮಾನವರ ದೈನಂದಿನ ವ್ಯವಹಾರಗಳಲ್ಲಿ ಕಂಡು ಬರುವ ಅಸಂಖ್ಯಾತ ಸಮೂಹಗಳೇ 'ಸಮಾಜ' ಎಂಬ ಬೃಹತ್ ವ್ಯವಸ್ಥೆಯನ್ನು ನಿರ್ಮಿಸಿವೆ. ಆದುದರಿಂದಲೇ ಸಮಾಜವೆಂದರೆ **ಸಮೂಹಗಳ ಸಮೂಹ** ಎಂದು ಕರೆಯಲ್ಪಟ್ಟಿದೆ.

ಇಂಥ ಸಮಾಜದ ಉದ್ದಗಲಗಳಿಗೂ ವ್ಯಾಪಿಸಿ, ನಗರ ಮತ್ತು ಗ್ರಾಮೀಣ ಸಮುದಾಯಗಳಿಂದ ದೂರವಿದ್ದು ಕಾಡು-ಅರಣ್ಯ, ಬೆಟ್ಟ-ಗುಡ್ಡ, ಕಣಿವೆ ಮುಂತಾದ ಸ್ಥಳಗಳಲ್ಲಿ ವಾಸಿಸುವ ಆದಿವಾಸಿ ಸಮೂಹಗಳ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡುವುದೇ ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿರುವುದರಿಂದ, ಚಿತ್ರದುರ್ಗ ಜಿಲ್ಲೆಯ ಎರಡು ಪ್ರಮುಖ ಬುಡಕಟ್ಟುಗಳಾದ **ಮ್ಯಾಸಬೇಡ ಮತ್ತು ಕಾಡುಗೊಲ್ಲ** ಸಮುದಾಯಗಳನ್ನು ಕುರಿತು ವಿವರಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಜೊತೆಗೆ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಬುಡಕಟ್ಟುಗಳ ಅಧ್ಯಯನ ಕ್ರಮ, ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ, ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಹಾಗೂ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ವಿವರವಾಗಿ ಮತ್ತು ಅರ್ಥಪೂರ್ಣವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪಶುಪಾಲನೆ ಮೂಲದ ಭಾರತದ ಅತ್ಯಂತ ಆದಿಮ ಬುಡಕಟ್ಟುಗಳಲ್ಲಿ ಬೇಡ ಮತ್ತು ಗೊಲ್ಲ ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಯನ್ನು ಮುಂದುವರಿಸಿಕೊಂಡು ಬರುತ್ತಿವೆ. ಬೇಡರಲ್ಲಿಯ ಮ್ಯಾಸಬೇಡರು ಮೂಲತಃ ಬೇಟೆಗಾರರಾಗಿದ್ದು, ಕಾಲಾಂತರದಲ್ಲಿ ಮೇಷಪಾಲನೆಗೆ ಒಗ್ಗಿಕೊಂಡು ಮೇಷ(ಮ್ಯಾಸ)ನಾಯಕರಾದರು.

[illegible]

[illegible]

[illegible]

[illegible]

ಆದರೆ, ಗೊಲ್ಲರಲ್ಲಿಯ ಕಾಡಾಡಿಗಳು ಕೂಡ ಮೂಲತಃ ಬೇಟೆಗಾರರಾಗಿದ್ದು ಕಾಲಾಂತರದಲ್ಲಿ ಪಶುಗಳ ಪಾಲಕರಾಗಿರುವುದರಿಂದ ಅದರಲ್ಲೂ ಮುಖ್ಯವಾಗಿ ಗೋವುಗಳ ಪಾಲಕರಾಗಿರುವುದರಿಂದ ಗೊಲ್ಲರೆನಿಸಿಕೊಂಡರು. ಕಾಡಾಡಿ ಗೊಲ್ಲರಿಗೆ ಕಾಡುಗೊಲ್ಲರು ಇಲ್ಲವೇ ಅಡವಿ ಗೊಲ್ಲರೆಂದು ಕರೆಯುವರು. ಮೂಲತಃ ಈ ಎರಡು ಸಮುದಾಯಗಳು ಒಂದೇ ಬುಡಕಟ್ಟುಗಳಾಗಿದ್ದು, ಕಾಲಾಂತರದಲ್ಲಿ ಕಾರಣಾಂತರಗಳಿಂದ ವಿಭಜನೆ ಹೊಂದಿ ಸಮಾನಾಂತರದಲ್ಲಿ ಸ್ವತಂತ್ರವಾಗಿ ತಮ್ಮ ಅಸ್ತಿತ್ವವನ್ನು ಇಟ್ಟುಕೊಂಡಿವೆ. ಈ ಎರಡು ಬುಡಕಟ್ಟುಗಳು ಮುಖ್ಯ ಪ್ರವಾಹಕ್ಕೆ ಬರಲು ಸಿದ್ಧವಾಗುತ್ತಿವೆ. ಆದರೆ ಮುಖ್ಯ ದಾರಿಗೆ ಬರಲು ಆಗಿರುವ ಇಷ್ಟೊಂದು ವಿಳಂಬಕ್ಕೆ ಕಾರಣಗಳೇನಿರಬಹುದು? ಎಂಬುದನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಗಿದೆ ಹಾಗೂ ಈ ಎರಡು ಬುಡಕಟ್ಟುಗಳು ಒಂದೇ ತಾಯಿ ಮೂಲದವು ಎಂಬಲ್ಲಿರುವ ಗ್ರಹಿಕೆಗಳನ್ನು ಶೋಧಿಸುವುದು ಪ್ರಸ್ತುತ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಈ ಎರಡು ಬುಡಕಟ್ಟುಗಳ ಜೀವನ ಕ್ರಮಗಳು, ಮುಖ್ಯವಾಗಿ ಅವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಕೌಟುಂಬಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ಮತ್ತಿತರ ಅಂಶಗಳನ್ನು ತಿಳಿದುಕೊಳ್ಳುವ ಅವರನ್ನು ಕಾಡುವ ಸಮಸ್ಯೆಗಳ, ಸಂಕಷ್ಟಗಳ ವೈಜ್ಞಾನಿಕ ಪರಿಚಯ ಮಾಡಿಕೊಂಡು ಅವುಗಳಿಗೆ ಇದುವರೆಗೆ ಕಲ್ಪಿಸಿ ಕೊಡಲಾದ ಪರಿಹಾರ ಕ್ರಮಗಳ ಅವಲೋಕನ ಮಾಡುವ ಮತ್ತು ಉತ್ತಮ ಭವಿಷ್ಯದೆಡೆಗೆ ಅವರನ್ನು ಮುನ್ನಡೆಸಲು ಇರುವ ಅಡ್ಡಿ ಆತಂಕಗಳನ್ನು ಹೇಗೆ ಪರಿಹಾರ ಮಾಡಿಕೊಳ್ಳಬಹುದಾಗಿದೆ ಎಂಬುದನ್ನೂ ಪತ್ತೆ ಹಚ್ಚುವುದು ಸಹ ಈ ಅಧ್ಯಯನದ ಮಹತ್ವವಾಗಿದೆ.

ಕರ್ನಾಟಕದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ಎಂಬ ಆರು ತಾಲ್ಲೂಕುಗಳಿಗೆ ಸಂಬಂಧ ಪಟ್ಟಿರುವ ಮ್ಯಾಸಬೇಡ ಮತ್ತು ಕಾಡುಗೊಲ್ಲ ಈ ಎರಡು ಬುಡಕಟ್ಟುಗಳ ಸಮಗ್ರ ಸಮೀಕ್ಷೆ ಮಾಡುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಮೂಲತಃ ಒಂದೇ ಎಂಬುದನ್ನು ಶೋಧಿಸುವುದರ ಜೊತೆಗೆ ಈ ಎರಡು ಬುಡಕಟ್ಟುಗಳಲ್ಲಿರುವ ಸಾಮ್ಯತೆಗಳನ್ನು ಮತ್ತು ಭಿನ್ನತೆಗಳನ್ನು ತೌಲನಿಕವಾಗಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಸಾಮಾಜಿಕ ಅಂಶಗಳ ಪ್ರಭಾವದಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳು ಸಾಮಾಜಿಕ ಪರಿವರ್ತನೆಗೆ ಹೇಗೆ ಒಳಗಾಗುತ್ತಿವೆ ಎಂಬುದನ್ನು ಪತ್ತೆ ಹಚ್ಚಲು ತೌಲನಿಕ ವಿಧಾನ, ಪ್ರಶ್ನಾವಳಿ ವಿಧಾನ, ಸಂದರ್ಶನ ವಿಧಾನ, ಅವಲೋಕನ ವಿಧಾನ, ಸಮೀಕ್ಷೆ ವಿಧಾನ, ಅಂಕಿ ಸಂಖ್ಯಾಶಾಸ್ತ್ರೀಯ ವಿಧಾನ, ಐತಿಹಾಸಿಕ ವಿಧಾನ ಮತ್ತು ಸಹಭಾಗಿತ್ವ ವಿಧಾನಗಳನ್ನು ಈ ಅಧ್ಯಯನದಲ್ಲಿ ಅಳವಡಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಐದು ಹಳ್ಳಿಗಳಂತೆ ಒಟ್ಟು ಮೂವತ್ತು ಹಳ್ಳಿಗಳನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆಮಾಡಿಕೊಂಡು, ಪ್ರತಿಯೊಂದು ಕುಟುಂಬಕ್ಕೆ ಭೇಟಿ ಕೊಟ್ಟು ಪ್ರಶ್ನಾವಳಿ ವಿಧಾನದ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಮಹಾಪ್ರಬಂಧದಲ್ಲಿ ಪ್ರತಿಪಾದಿಸಿರುವ ವಿಷಯ ಸಾಮಗ್ರಿಗೆ ಹೆಚ್ಚಿನ ಆಧಾರ ಒದಗಿಸಲು ಪ್ರಮುಖವಾದ ಛಾಯಾಚಿತ್ರಗಳನ್ನೂ ಕೂಡ ಜೋಡಿಸಲಾಗಿದೆ.

ಕ್ಷೇತ್ರಕಾರ್ಯ ಮತ್ತು ಗ್ರಂಥಿಕ ಸಾಹಿತ್ಯದ ಆಧಾರದ ಮೇಲೆ ಪ್ರಸ್ತುತ ಮಹಾಪ್ರಬಂಧದಲ್ಲಿ ಎಂಟು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ವಿಷಯ ಪ್ರವೇಶ, ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಬುಡಕಟ್ಟುಗಳ ಅಧ್ಯಯನದ ಕ್ರಮ, ಭಾರತ ಮತ್ತು ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ ಹಾಗೂ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಜನಾಂಗದ ಹಿನ್ನೆಲೆ, ಪದ ನಿಷ್ಪತ್ತಿ, ಮೂಲ ಮತ್ತು ಪರಂಪರೆ, ಪುರಾಣಗಳು ಮತ್ತು ಐತಿಹ್ಯಗಳು, ಸಾಮ್ಯತೆ ಮತ್ತು ಭಿನ್ನತೆ, ಪ್ರದೇಶ ಮತ್ತು ಜನಸಂಖ್ಯೆಗಳನ್ನು ಕುರಿತು ಚರ್ಚಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗು, ರಕ್ತಸಂಬಂಧ, ಕುಟುಂಬ ನ್ಯಾಯಪದ್ಧತಿ ಮತ್ತು ವಿಧಿ-ನಿಷೇಧಗಳನ್ನೊಳಗೊಂಡಿದೆ. ನಾಲ್ಕನೆಯ ಅಧ್ಯಾಯದಲ್ಲಿ ಸಂಸ್ಕಾರಗಳು ಮತ್ತು ಸಂಪ್ರದಾಯಗಳಲ್ಲಿ ಬರುವ ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ ಶಾಸ್ತ್ರ, ವಿವಾಹ ಮತ್ತು ಶವ-ಸಂಸ್ಕಾರ ಪದ್ಧತಿಗಳನ್ನು ವಿವರಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ನಂಬಿಕೆಗಳು ಮತ್ತು ಆಚರಣೆಗೆ ಸಂಬಂಧಿಸಿದ ಪ್ರಕೃತಿ ಆರಾಧನೆ, ಧಾರ್ಮಿಕ ಕೇಂದ್ರಗಳು, ಪೌಳಿ ಕುಟ್ಟುವುದು, ದೇವರು, ಪೂಜೆ, ಹಬ್ಬ, ಜಾತ್ರೆ, ಪೂಜಾರಿ, ದಾಸಯ್ಯ, ದೇವರೆತ್ತು ಮತ್ತು ಕಿಲಾರಿಗಳ ಬಗ್ಗೆ ವಿವರವಾದ ಮಾಹಿತಿ ಕೊಡಲಾಗಿದೆ. ಆರನೆಯ ಅಧ್ಯಾಯದಲ್ಲಿ ಭಾಷೆ, ಸಾಹಿತ್ಯ ಮತ್ತು ಕಲೆಗಳ ವಿವರವಿದೆ. ಏಳನೆಯ ಅಧ್ಯಯದಲ್ಲಿ ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳನ್ನು ಕುರಿತು ಈ ಎರಡು ಬುಡಕಟ್ಟುಗಳ ಭೌಗೋಳಿಕ ಪರಿಸರ, ಸಾಂಸ್ಕೃತಿಕ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ, ಆರ್ಥಿಕತೆ, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ಧಾರ್ಮಿಕತೆ ಮತ್ತು ರಾಜಕೀಯ ಕ್ರಮ ಎಂಬ ವಿಷಯವನ್ನು ಒಳಗೊಂಡಿದೆ. ಎಂಟನೆಯ ಸಮಾರೋಪ ಅಧ್ಯಾಯದಲ್ಲಿ ಈ ಎರಡು ಬುಡಕಟ್ಟುಗಳ ಪ್ರಸ್ತುತ ಸ್ಥಿತಿಗತಿ ಮತ್ತು ಸಾಮಾಜಿಕ ಪರಿವರ್ತನೆಗಳನ್ನು ಸಮಾಜಶಾಸ್ತ್ರೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ನಂತರ ಅನುಬಂಧದಲ್ಲಿ ಮಹಾಪ್ರಬಂಧಕ್ಕೆ ಸಂಬಂಧಿಸಿ, ಪ್ರಬಂಧದಲ್ಲಿ ಸೇರಿಸಲಾಗದ ಹಲವು ಉಪಯುಕ್ತ ಹಾಡುಗಳು, ಉರುಮೆ ಪದ, ತಿರುಮಂತ್ರ, ಗಂಟೆ ಹೆಳವರ ನುಡಿ, ಹಸ್ತಪ್ರತಿಗಳು, ಸಮೀಕ್ಷೆ ಮಾಡಿದ ಗ್ರಾಮಗಳು ನಕ್ಷೆ, ಕ್ಷೇತ್ರಕಾರ್ಯ ಕೈಗೊಂಡ ಗ್ರಾಮಗಳ ಅಂಕಿಅಂಶಗಳು, ಪ್ರಶ್ನಾವಳಿ, ವಕ್ತೃಗಳು, ಪರಾಮರ್ಶವನ ಗ್ರಂಥಗಳು, ಪ್ರಾದೇಶಿಕ ಪದಗಳ ಅರ್ಥಸೂಚಿ ಮತ್ತು ಛಾಯಾಚಿತ್ರಗಳನ್ನು ಕೊಡಲಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಹರಡಿಕೊಂಡಿರುವುದರಿಂದ ಈ ಎರಡು ಬುಡಕಟ್ಟುಗಳ ಕುರಿತು ಸಮಗ್ರ ಅಧ್ಯಯನ ಮಾಡುವುದು ಒಬ್ಬ ಸಂಶೋಧಕನಿಗೆ ಕಷ್ಟಸಾಧ್ಯ. ಆದ್ದರಿಂದ ಪ್ರಸ್ತುತ ಅಧ್ಯಯನದ ವ್ಯಾಪ್ತಿ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕಗಳಿಗೆ ಸಂಬಂಧಿಸಿದ್ದರೂ ತುಮಕೂರು ಮತ್ತು ಬಳ್ಳಾರಿ ಜಿಲ್ಲೆಯ ಕೆಲವೊಂದು ತಾಲ್ಲೂಕುಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಲಾಗಿದೆ. ಈ ಎರಡು ಬುಡಕಟ್ಟುಗಳಿಗೆ ಸಂಬಂಧಿಸಿದ ಪ್ರಮುಖ ಧಾರ್ಮಿಕ ಕೇಂದ್ರಗಳು, ಹಟ್ಟಿಗಳು, ಗುಡಿಕಟ್ಟೆಗಳು, ಕಟ್ಟೆಮನೆಗಳು, ದೇವರು, ಹಬ್ಬ, ಜಾತ್ರೆ, ವಿವಾಹ, ಮೊದಲಾದ ಆಚರಣೆಗಳಲ್ಲಿ ಅವರೊಡನೆ ಬೆರೆತು ಆತ್ಮೀಯವಾಗಿ ಚರ್ಚಿಸಿ, ಸಂದರ್ಶಿಸಿ, ಪ್ರಶ್ನಾವಳಿ ಮೊದಲಾದ ವಿಧಿವಿಧಾನಗಳ ಮೂಲಕ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲಾಗಿದೆ. ಸುಮಾರು ಎರಡು ವರ್ಷಗಳ ಕಾಲ ಈ ಬುಡಕಟ್ಟು ಜನಾಂಗಗಳ ಪ್ರತಿಯೊಂದು ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳಲ್ಲಿ ಪಾಲ್ಗೊಂಡು, ಅವಲೋಕಿಸಿ, ಅನುಭವಿಸಿ, ಅದೇ

ಬುಡಕಟ್ಟಿನ ಅನುಭವವುಳ್ಳ ಹಟ್ಟಿಯ ಗೌಡ, ಯಜಮಾನ, ಪೂಜಾರಿ, ದಾಸಯ್ಯ, ಎತ್ತಿನ ಕಿಲಾರಿ,ಗುಡಿಗೌಡ, ವಯೋವೃದ್ಧರು ಮತ್ತು ಈ ಎರಡು ಬುಡಕಟ್ಟುಗಳಿಗೆ ಸಂಬಂಧಪಟ್ಟ ಆಯಗಾರರೊಡನೆ ಲಿಂಗಭೇದವಿಲ್ಲದೆ ಚರ್ಚಿಸಿ ಕೆಲವೊಂದು ಜನಪದ ಹಾಡು,ಕಥೆ, ಗಾದೆ, ಒಗಟು, ತಿರುಮಂತ್ರ, ಉರುಮೆ ಪದ, ಕಗ್ಗದ ಪದ, ಮೊದಲಾದವುಗಳನ್ನು ಧ್ವನಿಮುದ್ರಣ ಮಾಡಿಕೊಳ್ಳಲಾಗಿದೆ. ಅಧ್ಯಯನ ಯೋಗ್ಯ ಛಾಯಾಚಿತ್ರಗಳನ್ನು ಸೆರೆಹಿಡಿಯಲಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ಬುಡಕಟ್ಟುಗಳಾಗಿದ್ದರೂ ಪ್ರಸ್ತುತ "ನಾಗರಿಕತೆಯ ಪ್ರಭಾವದಿಂದಾಗಿ ಅವರಲ್ಲಿರುವ ಮೂಲದ ಎಷ್ಟೋ ಅಂಶಗಳು ಮರೆಯಾಗುವ ಸ್ಥಿತಿಯಲ್ಲಿವೆ. ಅವು ಹಾಗೆ ಮರೆಯಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸುವ, ದಾಖಲಿಸುವ, ವಿಶ್ಲೇಷಿಸುವ ಕಾರ್ಯ ನಡೆಯಬೇಕಾಗಿದೆ. ಅಂದಾಗ ಮಾತ್ರ ಮಾನವ ಸಂಸ್ಕೃತಿಯ ಪೂರ್ಣಚಿತ್ರ ಲಭ್ಯವಾಗುತ್ತದೆ."[೧] ಮ್ಯಾಸಬೇಡ ಮತ್ತು ಕಾಡುಗೊಲ್ಲ ಈ ಎರಡು ಬುಡಕಟ್ಟುಗಳ ಬಗ್ಗೆ ಈಗಾಗಲೇ ಪ್ರತ್ಯೇಕವಾಗಿ ಅಧ್ಯಯನಗಳು ನಡೆದಿದ್ದರೂ ಸಹ ಸಮಗ್ರ ಅಧ್ಯಯನ ಹಾಗೂ ಕ್ಷೇತ್ರಕಾರ್ಯದ ಕೊರತೆಗಳು ಎದ್ದು ಕಾಣುತ್ತವೆ. ಪ್ರಸ್ತುತ ಕರ್ನಾಟಕದಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಕುರಿತು ತೌಲನಿಕವಾಗಿ ಅಧ್ಯಯನ ನಡೆಯದೇ ಇರುವುದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಆನುಷಂಗಿಕ ಸಾಮಗ್ರಿಗಳಿಗಿಂತ ಹೆಚ್ಚಾಗಿ ಮೂಲ ಸಾಮಗ್ರಿಗಳ ವಿಷಯಕ್ಕೆ ಬಹಳ ಮಹತ್ವ ಕೊಟ್ಟು ವಿವರಣಾತ್ಮಕ ಅಧ್ಯಯನ ಮಾಡಲಾಗಿದೆ. **ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ** ಎಂಬ ವಿಷಯ ಬುಡಕಟ್ಟು ಅಥವಾ ಸಮಾಜಶಾಸ್ತ್ರಕ್ಕೆ ಮಾತ್ರ ಸೀಮಿತವಾಗದೇ ಉಳಿದೆಲ್ಲ ಸಮಾಜ ವಿಜ್ಞಾನ ಕ್ಷೇತ್ರಕ್ಕೂ ಉಪಯುಕ್ತವಾಗಬಹುದಾಗಿದೆ.

೨. ಬುಡಕಟ್ಟುಗಳ ಅಧ್ಯಯನದ ಕ್ರಮ

ಬುಡಕಟ್ಟುಗಳೆಂದು ಕರೆಯಿಸಿಕೊಳ್ಳುವ ಆದಿವಾಸಿಗಳು ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. ಅದರಂತೆ ಭಾರತದ ಎಲ್ಲ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ-ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದು ತುಂಬ ಕಷ್ಟ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ ಪದ್ಧತಿಗಳಿಂದ ಅವರೊಂದಿಗೆ ಬೆರೆತು ವಿವರಣಾತ್ಮಕವಾಗಿ ಅಧ್ಯಯನ ಕೈಗೊಳ್ಳುವುದು ಸಂಶೋಧಕರಿಗೆ ಒಂದು ದೊಡ್ಡ ತೊಡಕಾಗಿದೆ. ಸ್ವತಂತ್ರ ಪೂರ್ವ ಭಾರತೀಯ ಸಮಾಜಗಳಲ್ಲಿ ದೇಶ-ವಿದೇಶಗಳ ವಿದ್ವಾಂಸರುಗಳಿಂದ ಬುಡಕಟ್ಟುಗಳ ಅಧ್ಯಯನ ನಡೆದಿದ್ದವು. ಆದರೆ, ಯಾವುದೇ ಬುಡಕಟ್ಟನ್ನು ಕುರಿತು ಸಮಗ್ರವಾದ ಅಧ್ಯಯನಗಳು ನಡೆಯಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೇ ಮುಖ್ಯ ಕಾರಣವಾಗಿತ್ತು. ಆದರೆ ಇತ್ತೀಚಿಗೆ ರಾಜ್ಯ ಸರಕಾರ ಕೇಂದ್ರ ಸರಕಾರ ಹಾಗೂ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳು ಬುಡಕಟ್ಟು ಅಧ್ಯಯನಗಳ ಕುರಿತು ವಿಶೇಷ ಆಸಕ್ತಿವಹಿಸುತ್ತಿವೆ. ಹಲವು ಸಂಘ-ಸಂಸ್ಥೆಗಳು ಕೂಡ ಖಾಸಗಿಯಾಗಿ ಅಧ್ಯಯನ ಕೈಗೊಳ್ಳುತ್ತಿವೆ. ಆದರೆ, ನಾಗರಿಕತೆಯ ಪ್ರಭಾವದಿಂದ ಆದಿವಾಸಿಗಳ ಮೂಲ ಸಂಸ್ಕೃತಿ, ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಸಾಕಷ್ಟು ಪರಿವರ್ತನೆಗಳು ಕಂಡು ಬರುವುದರಿಂದ ಅವುಗಳ ಮೂಲ ಸ್ವರೂಪ ಬದಲಾಗುವುದಕ್ಕಿಂತ ಮೊದಲೇ ಅವುಗಳನ್ನು ಗುರುತಿಸಿ ದಾಖಲಿಸಿಕೊಳ್ಳುವುದು ತೀರ ಅಗತ್ಯವಾಗಿದೆ.

ದೇಶದ ಉದ್ದಗಲಕ್ಕೂ ಹರಡಿಕೊಂಡಿರುವ ಮತ್ತು ಗುರುತಿಸಲಾಗದಂಥ ಅನೇಕ ಬುಡಕಟ್ಟುಗಳು ಇಂದಿಗೂ ಭಾರತದಲ್ಲಿದ್ದಾರೆ. ಈ ಬುಡಕಟ್ಟು ಜನಾಂಗದ ಅಧ್ಯಯನಕ್ಕೆ ವಿದೇಶಿಯ ವಿದ್ವಾಂಸರು ತೋರಿಸಿದ ಆಸಕ್ತಿ ನಮ್ಮ ಭಾರತೀಯ ವಿದ್ವಾಂಸರು ತೋರಿಸಲಿಲ್ಲ. ಕಾಲಕ್ರಮೇಣ ಪಾಶ್ಚಾತ್ಯ ವಿದ್ವಾಂಸರುಗಳ ಅಧ್ಯಯನ ಪದ್ಧತಿಗಳ ಜಾಡನ್ನೇ ತುಳಿದ ಭಾರತೀಯ ವಿದ್ವಾಂಸರು ಅಲ್ಪ ಸ್ವಲ್ಪ ಬುಡಕಟ್ಟು ಅಧ್ಯಯನಗಳ ಕುರಿತು ಆಸಕ್ತಿ ಬೆಳೆಸಿಕೊಂಡರು. ಪ್ರಸ್ತುತ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಘ ಸಂಸ್ಥೆಗಳು ಬುಡಕಟ್ಟು ಜನಾಂಗಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಪ್ರೋತ್ಸಾಹ ಕೊಡುತ್ತಿವೆ.

ಭಾರತದ ಯಾವುದೇ ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಬೇಕಾದರೆ ಸಂಶೋಧಕರು ಕೆಲವೊಂದು ಅಧ್ಯಯನದ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕ್ಷೇತ್ರದ ಪೂರ್ಣ ಪರಿಚಯ ಮತ್ತು ಯೋಜನೆ ಅತ್ಯವಶ್ಯಕವಾಗಿದೆ. ಸಂಶೋಧನ ಸಾಮಗ್ರಿಗಳಾದ ನಕ್ಷೆ, ಪ್ರಶ್ನಾವಳಿ, ಚಕ್‌ಲಿಸ್ಟ, ಸಂದರ್ಶನ ಕೈಪಿಡಿ, ಟೇಪರೆಕಾರ್ಡು, ಕ್ಯಾಮರಾ, ಹಣ ಮತ್ತು ಒಂದಿಬ್ಬರು ಸಹಾಯಕರು ಜೊತೆಯಲ್ಲಿರಬೇಕು. ಯಾವುದೇ ಬುಡಕಟ್ಟು ಜನಾಂಗ ಪ್ರಾರಂಭದಲ್ಲಿ ತಮ್ಮ ಜನರನ್ನು ಬಿಟ್ಟು ಉಳಿದವರೊಂದಿಗೆ ಸುಲಭವಾಗಿ ಬೆರೆಯುವುದಿಲ್ಲ. ಆದ್ದರಿಂದ ಆರಂಭದಲ್ಲಿ ತಾವು ತಿಳಿದುಕೊಂಡಂತೆ ಬುಡಕಟ್ಟು ಜನರಿಂದ ಸಹಕಾರ ಸಿಗುವುದಿಲ್ಲ. ಆಗ ಸಂಶೋಧಕ ನಿರುತ್ಸಾಹಗೊಳ್ಳದೆ ತಾಳ್ಮೆಯಿಂದ ಆ ಜನಾಂಗದ ಮುಖಂಡರ ಪರಿಚಯ ಮಾಡಿಕೊಳ್ಳುವುದರ ಮುಖಾಂತರ ತನ್ನ ಗುರಿ ಮತ್ತು ಉದ್ದೇಶಗಳನ್ನು ತಲುಪಬಹುದು. ಬುಡಕಟ್ಟು ಅಧ್ಯಯನ ಕೈಗೊಂಡ ಸಂಶೋಧಕನಿಗೆ ತಾಳ್ಮೆ ಮತ್ತು ಕಠಿಣ ಶ್ರಮ ಅತ್ಯವಶ್ಯಕವಾಗಿದೆ. ಏಕೆಂದರೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಈ ಪ್ರದೇಶದ ಕಾಡುಗೊಲ್ಲರು ಪ್ರಾರಂಭದಲ್ಲಿ ಸಂಶಯದಿಂದಲೇ ವರ್ತಿಸಿ ಸರಿಯಾದ ಮಾಹಿತಿ ಕೊಡುತ್ತಿರಲಿಲ್ಲ, ನಂತರ ಅವರ ಗುಂಪಿನ ಒಂದಿಬ್ಬರು ಮುಖಂಡರ ಪೂರ್ಣ ವಿಶ್ವಾಸಗಳಿಸಿದ ಮೇಲೆ ಅಲ್ಲಿಯ ಜನ ಸಹಕಾರ ಕೊಟ್ಟು ಊಟಹಾಕಿ ಕಳುಹಿಸಿದ ಘಟನೆಗಳು ಸಾಕಷ್ಟಿವೆ.

ಬುಡಕಟ್ಟು ಅಧ್ಯಯನ ಕೈಗೊಂಡಾಗ ಕೆಲವೊಂದು ಮಹಿಳೆಯರನ್ನು ಸಂದರ್ಶನ ಮಾಡುವಾಗ ಅವರ ಕುಟುಂಬದ ಮುಖ್ಯಸ್ಥರ ಒಪ್ಪಿಗೆ ಪಡೆಯಬೇಕಾಗುತ್ತದೆ. ಅವರ ಧರ್ಮ ಸಂಸ್ಕೃತಿಗೆ ಸಂಬಂಧಿಸಿದ ಕೆಲವೊಂದು ಸಂಪ್ರದಾಯಗಳನ್ನು ಬುಡಕಟ್ಟಿನವರು ಅಷ್ಟು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ಋತುಮತಿಯಾದ ಹೆಣ್ಣುಮಕ್ಕಳು, ಹೆರಿಗೆ ಗುಡ್ಲು, ದೇವರು, ಪವಿತ್ರಸ್ಥಳ, ಪೌಳಿ, ಹುಟ್ಟು, ಸಾವು ಮೊದಲಾದ ಸಂದರ್ಭಗಳಲ್ಲಿ ಛಾಯಾಚಿತ್ರಗಳನ್ನು ತೆಗೆಯುವಾಗ ಅವರ ಒಪ್ಪಿಗೆ ಇಲ್ಲವೆ ಆ ಗುಂಪಿನ ಮುಖಂಡರನ್ನು ಜೊತೆಗೆ ಕರೆದುಕೊಂಡು ಹೋಗುವುದರಿಂದ ಸಮಸ್ಯೆಗಳು ಉದ್ಭವಿಸುವುದಿಲ್ಲ. ಅಪ್ಪಿ ತಪ್ಪಿಯೂ ಅವರಿಗೆ ಗೊತ್ತಿಲ್ಲದಂತೆ ಛಾಯಾಚಿತ್ರ ತೆಗೆಯುವುದಾಗಲಿ, ಧ್ವನಿಮುದ್ರಣ ಮಾಡಿಕೊಳ್ಳುವುದಾಗಲಿ ಮಾಡಬಾರದು. ಸಂಶೋಧಕ ತನ್ನ ಗುರಿ ಮತ್ತು ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡ ಮೇಲೆಯೇ ಛಾಯಾಚಿತ್ರ ಅಥವಾ ಧ್ವನಿಮುದ್ರಣ ಮಾಡಿಕೊಳ್ಳಬೇಕು.ಸಂದರ್ಶನ ಮಾಡುವಾಗ ಬರೆದುಕೊಳ್ಳುವುದಕ್ಕಿಂತ ಧ್ವನಿಮುದ್ರಣ ಮಾಡಿಕೊಳ್ಳುವುದು ಸಂಶೋಧನೆಗೆ ಹೆಚ್ಚು ಉಪಯುಕ್ತ ವಾಗುತ್ತದೆ.ಇಲ್ಲವಾದರೆ ಅವರ ಭಾಷೆ, ಶಬ್ದಗಳ ಉಚ್ಚರಣೆ ಬರವಣಿಗೆಗೆ ತೊಡಕಾಗುತ್ತವೆ.

ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರ ಮಾತೃಭಾಷೆ ಕನ್ನಡವಾದರೆ ಮ್ಯಾಸಬೇಡರದ್ದು ತೆಲುಗು. ಈ ಎರಡು

ಭಾಷೆಗಳನ್ನು ಸಂಶೋಧಕ ಬಲ್ಲವನಾಗಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ಧುಭಾಷಿಯವರ ಅವಶ್ಯಕತೆ ಬೀಳಲಿಲ್ಲ.

೩.ಭಾರತದಲ್ಲಿ ಬುಡಕಟ್ಟುಗಳ ಅಧ್ಯಯನ

ಪರಿಶಿಷ್ಟ ಪಂಗಡವೆಂದು ಕರೆಯಿಸಿಕೊಳ್ಳುವ ಬುಡಕಟ್ಟುಗಳು ಭಾರತದಾದ್ಯಂತ ಹರಡಿಕೊಂಡಿವೆ. ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದ ಇವರು ಬೆಟ್ಟ ಗುಡ್ಡ, ಕಣಿವೆ-ಕಾನನ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಆರ್ಯರು ಭಾರತಕ್ಕೆ ಬಂದೊಡನೆ ಭಾರತದಲ್ಲಿದ್ದ ಮೂಲನಿವಾಸಿಗಳನ್ನು ಯುದ್ಧದಲ್ಲಿ ಸೋಲಿಸಿ ಹೊಡೆದೋಡಿಸಿದ ನಂತರ ಆ ಮೂಲನಿವಾಸಿಗಳು ಚದುರಿ ಗುಡ್ಡಗಾಡುಗಳಲ್ಲಿ ವಾಸಿಸುತ್ತಿದ್ದಾರೆಂದು ಇತಿಹಾಸ ತಜ್ಞರು ಅಭಿಪ್ರಾಯ ಪಡುವರು. ೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟಿನವರು ಶೇಕಡ ೮.೦೮ರಷ್ಟಿದ್ದರೆ, ಕರ್ನಾಟಕದಲ್ಲಿ ಶೇಕಡ ೪.೨೬ರಷ್ಟು ಬುಡಕಟ್ಟಿನವರಿದ್ದರು. ಅತಿ ಹೆಚ್ಚು ಬುಡಕಟ್ಟಿನವರು ಇರುವ ಮಧ್ಯಪ್ರದೇಶದಲ್ಲಿ ಒಂದು ಕೋಟಿಗೂ ಅಧಿಕ ಸಂಖ್ಯೆಯ ಆದಿವಾಸಿಗಳಿದ್ದಾರೆ. ಅತ್ಯಂತ ಕಡಿಮೆ ಆದಿವಾಸಿಗಳಿರುವುದು ಪಂಜಾಬ್ ರಾಜ್ಯದಲ್ಲಿ. ಸ್ವಾತಂತ್ರ್ಯದ ನಂತರ ಭಾರತದ ಸಂವಿಧಾನದಲ್ಲಿ ಇವರನ್ನು 'ಪರಿಶಿಷ್ಟ ಬುಡಕಟ್ಟು' ಎಂದು ಕರೆದು ಕಾನೂನಿನ ಬೆಂಬಲವನ್ನು ನೀಡಿರುತ್ತದೆ. ಪ್ರಸ್ತುತ ಭಾರತದಲ್ಲಿ ಸುಮಾರು ೬೩೦ ಅಂಗೀಕೃತ ಆದಿವಾಸಿಗಳ ಬುಡಕಟ್ಟುಗಳಿವೆ. ಈ ಬುಡಕಟ್ಟು ಜನಾಂಗವನ್ನು ಭಾರತದ ಬಹುಪಾಲು ರಾಜ್ಯಗಳಲ್ಲಿ 'ಆದಿವಾಸಿಗಳು' ಎಂದೇ ಕರೆಯುತ್ತಾರೆ.

೩.೧. ಆದಿವಾಸಿಗಳ ಅರ್ಥ ವಿವರಣೆ

ಸಾಮಾನ್ಯವಾಗಿ ಒಂದು ದೇಶದ ಮೂಲನಿವಾಸಿಗಳನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ಇವರನ್ನು ಸಂಚಾರಿ ಜನಾಂಗ, ಆದಿಪ್ರಜಾ, ಅನಾಗರಿಕರು, ಬುಡಕಟ್ಟು ಜನಾಂಗ, ಅರಣ್ಯ ವಾಸಿಗಳು, ಜನಜಾತಿ, ಪಂಗಡ, ಗಿರಿಜನರು, ಸಂಪ್ರದಾಯ ಪ್ರಿಯರು, ಸರ್ವಚೇತನವಾದಿಗಳು, ಹಿಂದುಳಿದ ಹಿಂದುಗಳು, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಹಾತ್ಮಗಾಂಧೀಜಿಯವರು ಆದಿವಾಸಿಗಳನ್ನು 'ಗಿರಿಜನರು' ಎಂದು ಕರೆದಿದ್ದಾರೆ. ಡಾ.ಜಿ.ಎಸ್. ಘುರ್ಯೆ ಆದಿವಾಸಿಗಳನ್ನು 'ಹಿಂದುಳಿದ ಹಿಂದುಗಳು' ಎಂದು ಕರೆದಿದ್ದಾರೆ. ಭಾರತದ ಸಂವಿಧಾನದ ೩೪೨ನೇ ಕಲಮಿನಲ್ಲಿ ಆದಿವಾಸಿಗಳನ್ನು 'ಪರಿಶಿಷ್ಟ ಬುಡಕಟ್ಟುಗಳು' ಎಂದು ಉಲ್ಲೇಖಿಸಲಾಗಿದೆ. ಸಂವಿಧಾನವು ೪೭೨ ಪರಿಶಿಷ್ಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದ್ದರೂ ಈ ಬುಡಕಟ್ಟುಗಳ ಸಂಖ್ಯೆಯು ಇನ್ನೂ ಅಧಿಕವಾಗಿದೆ. ದೇಶದ ಒಟ್ಟು ೩೨೯ ತಾಲ್ಲೂಕುಗಳಲ್ಲಿ ಬುಡಕಟ್ಟು ಜನಾಂಗಗಳೇ ಬಹು ಸಂಖ್ಯಾತರಾಗಿ ವಾಸಿಸುವರು. ನಾಗಾಲ್ಯಾಂಡ, ಮೇಘಾಲಯ, ಅರುಣಾಚಲ ಪ್ರದೇಶ, ಮಿಜೋರಾಂ, ಅಸ್ಸಾಂ, ಮಧ್ಯಪ್ರದೇಶ, ಒರಿಸ್ಸಾ, ಬಿಹಾರ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿ ಆದಿವಾಸಿಗಳು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಾರೆ.

ಆದಿವಾಸಿ ಸಮುದಾಯಗಳ ಬಗೆಗೆ ಆಳವಾದ ಅಧ್ಯಯನವನ್ನು ನಡೆಸಿ, ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಮಾನವಶಾಸ್ತ್ರಜ್ಞರಿಗೆ ಸಲ್ಲುವದು. ಎಡ್ಗರ್ ಥರ್‍ಸ್ಟನ್, ವೆರಿಯರ್ ಎಲ್ವಿನ್, ಆರ್.ಎನ್. ಸಕ್ಸೇನಾ, ಡಾ.ಜಿ.ಎಸ್.ಘುರ್ಯೆ,ಫೇರ್ ಚೈಲ್ಡ್, ಮಿಲ್ಸ್, ಎ.ಎ.ಡಿ ಲೂಯಿಸ್, ಸ್ಮಿಥ್, ಕೆ.ರಂಗಾಚಾರಿ, ಎಲ್.ಕೆ.ಅಯ್ಯರ್, ಎಚ್.ವಿ.ನಂಜುಂಡಯ್ಯ,ಡಾ.ಡಿ.ಎನ್.ಮಜುಮದಾರ ಮುಂತಾದ ಮಾನವಶಾಸ್ತ್ರಜ್ಞರು ಆದಿವಾಸಿ ಸಮುದಾಯ ಹಾಗೂ ಸಂಸ್ಕೃತಿಕಗಳ ಬಗ್ಗೆ ಅಧ್ಯಯನ ನಡೆಸಿ ಉತ್ಕೃಷ್ಟ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೦೯ರಲ್ಲಿ ಎಡ್ಗರ್

ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ “Caste and tribes of southern India” ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳು.

ಆದಿವಾಸಿಗಳೆಂದರೆ ಯಾರು ಎಂಬುದಕ್ಕೆ “ಭಾರತದ ಇಂಪೀರಿಯಲ್ ಗೆಜೆಟಿಯರ್ ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ, ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ ಪೂರ್ವದಲ್ಲಿ, ಒಳ-ಪಂಗಡ ವಿವಾಹ ಪದ್ಧತಿಗೆ ಬದ್ಧವಾಗಿದ್ದಿರ ಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಆದಿವಾಸಿ ಸಮಾಜ ಎನ್ನಬಹುದು.”[೨] ಅದೇ ರೀತಿ ಮಾನವಶಾಸ್ತ್ರದ ನಿಘಂಟಿನ ಪ್ರಕಾರ “ಒಂದು ಸಾಮಾಜಿಕ ಸಮೂಹವು ನಿರ್ಧಿಷ್ಟನೆಲೆ, ಭಾಷೆ, ಸಾಂಸ್ಕೃತಿಕ ಸಾಮ್ಯತೆ ಮತ್ತು ಸಂಘಟನಾ ಸ್ವರೂಪವನ್ನು ಹೊಂದಿದ್ದರೆ ಅಂತಹ ಸಮೂಹವು ಬುಡಕಟ್ಟು ಎನಿಸಿಕೊಳುತ್ತದೆ.” ಡಬ್ಲ್ಯು.ಜೆ.ಪೆರ್ರಿ ಪ್ರಕಾರ ‘ಒಂದು ಸ್ಥಳದಲ್ಲಿ ನೆಲೆಸಿಕೊಂಡು ಒಂದೇ ಭಾಷೆಯನ್ನಾಡುವ ಜನಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯಬಹುದು’ ಎಂದಿದ್ದಾರೆ. ಬೋಗಾರ್ಡಸ್ ಎಂಬಾತನ ಅಭಿಪ್ರಾಯದಲ್ಲಿ ‘ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ,ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಆದಿವಾಸಿ ಸಮೂಹ’ ಎಂದಿದ್ದಾರೆ. ಒಟ್ಟಾರೆ ಒಂದು ದೇಶದ ಮೂಲನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವಜರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗಿದೆ.

೩.೨. ಬುಡಕಟ್ಟು ಜನಾಂಗದ ಗುಣಲಕ್ಷಣಗಳು

ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಹೊರಗಿರುವ, ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ಬೇರ್ಪಟ್ಟ,ಗುಡ್ಡಗಾಡುಗಳಲ್ಲಿ ವಾಸಿಸುವ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದ ಅಸಂಖ್ಯಾ ‘ಬುಡಕಟ್ಟು’ ಜನಾಂಗ ಭಾರತದಲ್ಲಿದ್ದಾರೆ. ಒಂದೊಂದು ಬುಡಕಟ್ಟುಗಳು, ಒಂದೊಂದು ಗುಣಲಕ್ಷಣಗಳನ್ನು ಹೊಂದಿರುವುದರ ಜೊತೆಗೆ ಪರಸ್ಪರ ಹೋಲಿಕೆ ಮತ್ತು ಏಕತೆಗಳು ಕಂಡುಬರುತ್ತವೆ. ಅಂತಹ ಪ್ರಮುಖ ಗುಣಲಕ್ಷಣಗಳೆಂದರೆ.

೧. ನಿರ್ಧಿಷ್ಟ ಭೂ ಪ್ರದೇಶ : ಪ್ರತಿಯೊಂದು ಬುಡಕಟ್ಟುಗಳಿಗೆ ತಮ್ಮದೇ ಆದ ನಿಶ್ಚಿತ ನೆಲೆ ಇರುತ್ತದೆ. ಬೇಟೆ, ಪಶುಪಾಲನೆ,ಕೃಷಿ, ವ್ಯಾಪಾರ ಹಾಗೂ ಉಪಜೀವನಕ್ಕಾಗಿ ಅನೇಕ ಕಡೆ ಸಂಚರಿಸುತ್ತಾರೆ. ಆದರೂ ತಾವು ಹುಟ್ಟಿದ ಸ್ಥಳ ಮತ್ತು ಪ್ರದೇಶದ ಬಗೆಗೆ ಸಾಮೂದಾಯಿಕ ಭಾವನೆಗಳು ಸದಾ ಜಾಗೃತವಾಗಿರುತ್ತವೆ. ಇವರು ವಾಸಿಸುವ ಪ್ರದೇಶಗಳಿಗೆ ಹಟ್ಟಿ, ಪಾಳ್ಯ, ಹಾಡಿ, ರೊಪ್ಪ, ದೊಡ್ಡಿ ಮೊದಲಾದ ಹೆಸರುಗಳಿಂದ ಕರೆದುಕೊಳ್ಳುತ್ತಾರೆ. ನಾಗಾ, ಖಾಸಿ, ಗಾರೊ ಜನರು ಅಸ್ಸಾಂ ಭಾಗದಲ್ಲಿಯೂ; ತೊಡರು, ಬಡಗರು ನೀಲಗಿರಿ ಬೆಟ್ಟಗಳಲ್ಲಿಯೂ; ಗೊಂಡರು ಗೊಂಡಾರಣ್ಯದಲ್ಲಿಯೂ; ವೆಡ್ಡಾ ಜನರು ಸಿಲೋನಿನಲ್ಲಿಯೂ; ಮ್ಯಾಸಬೇಡ, ಕಾಡುಗೊಲ್ಲ, ಕಾಡುಕುರುಬ ಕರ್ನಾಟಕದಲ್ಲಿಯೂ; ಅಂಗೆ, ಒಂಗೆ, ಮತ್ತು ಜಾರವ ಅಂಡಮಾನ್ ಮತ್ತು ನಿಕೋಬಾರ ದ್ವೀಪಗಳಲ್ಲಿಯೂ; ಜಿಪ್ಸಿ, ಜ್ಯೂ ಮತ್ತು ಚೆಂಚರು ಆಂಧ್ರಪ್ರದೇಶದಲ್ಲಿಯೂ ವಾಸಿಸುತ್ತಿದ್ದಾರೆ. ಇಂತಹ ನಿರ್ಧಿಷ್ಟ ಭೂ ಪ್ರದೇಶದಲ್ಲಿ ವಾಸಮಾಡುವುದರಿಂದ ಅವರಲ್ಲಿ ಸಹಕಾರ ಒಗ್ಗಟ್ಟು ಮತ್ತು ಸಾಮುದಾಯಿಕ ಭಾವನೆ ಅಧಿಕವಾಗಿರುತ್ತದೆ.

೨. ನಿರ್ಧಿಷ್ಟ ಹೆಸರು : ಭಾರತದಲ್ಲಿ ನೆಲೆಸಿರುವಂತಹ ಪ್ರತಿಯೊಂದು ಬುಡಕಟ್ಟುಗಳಿಗೂ ತಮ್ಮದೇ ಆದ ವಿಶಿಷ್ಟ ಅಥವಾ ನಿರ್ಧಿಷ್ಟ ಹೆಸರುಗಳಿವೆ. ಉದಾ : ನಾಗ, ತೋಡ, ಭಿಲ್, ಚೆಂಚು, ಬೇಡ, ಗೊಂಡ, ಶಬರ,

ತಳವಾರ, ಗುರಿಕಾರ, ಮ್ಯಾಸಬೇಡ, ಕಾಡುಗೊಲ್ಲ, ಕಾಡುಕುರುಬ, ಸಂತಾಲ, ಜಿಪ್ಸಿ, ಲಿಂಬು, ಗಾರೋ, ಬಡಗ, ಮುಂಡಾ ಮುಂತಾದವು ಆದಿವಾಸಿಗಳ ಹೆಸರುಗಳಾಗಿವೆ. ಈ ಹೆಸರುಗಳ ಸಹಾಯದಿಂದ ಬೇರೆ ಬೇರೆ ಆದಿವಾಸಿ ಪಂಗಡಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಬಹುದು.

೩.ಸಾಮಾನ್ಯ ಭಾಷೆ : ಆದಿವಾಸಿಗಳು ತಮ್ಮದೇ ಆದ ಸ್ವತಂತ್ರ ಭಾಷೆಯನ್ನು ಹೊಂದಿರುತ್ತಾರೆ. ಆ ಭಾಷೆಯನ್ನು ಬೇರೆಯವರು ಅರ್ಥಮಾಡಿಕೊಳ್ಳುವುದು ಕಷ್ಟ. ಆದಿವಾಸಿ ಭಾಷೆಗೆ ಲಿಪಿಯಿಲ್ಲದೇ ಇರುವುದರಿಂದ ಇವರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಆದಿವಾಸಿ ಭಾಷೆಗಳ ಮೇಲೆ ನೆರೆಹೊರೆಯ ಪ್ರದೇಶಗಳ ಭಾಷೆಯ ಪ್ರಭಾವವನ್ನು ಕಾಣಬಹುದು. ಉದಾಹಾರಣೆಗೆ ಕರ್ನಾಟಕದ ಮ್ಯಾಸಬೇಡರು ತೆಲುಗು ಮಿಶ್ರಿತ ಕನ್ನಡವನ್ನು ಮಾತನಾಡುತ್ತಾರೆ. ನೀಲಗಿರಿ ಬೆಟ್ಟಗಳಲ್ಲಿ ವಾಸಿಸುವ ಬಡಗರು ಮತ್ತು ತೋಡರು ಕನ್ನಡ, ತೆಲುಗು, ತಮಿಳು, ಮಲೆಯಾಳಿ ಮತ್ತು ಹಿಂದಿ ಮುಂತಾದ ಭಾಷೆಗಳಲ್ಲಿ ಒಂದೊಂದು ಶಬ್ದಗಳನ್ನು ಮಾತನಾಡುವಾಗ ಬಳಸುತ್ತಾರೆ. ಆದ್ದರಿಂದ ಆದಿವಾಸಿಗಳ ಭಾಷೆಗಳನ್ನು ನಾಡಭಾಷೆಗಳೆಂದು ಕರೆಯುತ್ತಾರೆ.

೪. ಒಂದೇ ರೀತಿಯ ರಾಜಕೀಯ ವ್ಯವಸ್ಥೆ : ಪ್ರತಿಯೊಂದು ಆದಿವಾಸಿ ಪಂಗಡವು ತನ್ನದೇ ಆದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿರುತ್ತವೆ. ಸಮುದಾಯದ ಮುಖ್ಯಸ್ಥನ ಅಧಿಕಾರ ವಿರುತ್ತದೆ. ಈತ ಸದಸ್ಯರ ವರ್ತನೆಗಳ ಮೇಲೆ ನಿಯಂತ್ರಣವನ್ನು ತರುತ್ತಾನೆ. ತಪ್ಪಿತಸ್ಥರಿಗೆ ದಂಡ, ಶಿಕ್ಷೆ, ಬಹಿಷ್ಕಾರ ಮುಂತಾದ ಕಠಿಣ ಶಿಕ್ಷೆವಿಧಿಸುವ ಅಧಿಕಾರವನ್ನು ಆದಿವಾಸಿ ಸಮುದಾಯದ ಮುಖ್ಯಸ್ಥ ಅಥವಾ ನಾಯಕ ಪಡೆದಿರುತ್ತಾನೆ. ನಾಯಕನನ್ನು ಆಯ್ಕೆಮಾಡುವ ಪದ್ಧತಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಅನುವಂಶಿಯವಾಗಿ ಇಲ್ಲವೇ ಚುನಾವಣೆಯ ಮೂಲಕ ನಡೆಯುತ್ತದೆ. ಕರ್ನಾಟಕದ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಗುಡಿಕಟ್ಟೆ, ಕಟ್ಟೆಮನೆ, ಯಜಮಾನ, ಹಟ್ಟಿಗೌಡ, ತಳವಾರ ಮೊದಲಾದ ಅಧಿಕಾರಯುತ ಹುದ್ದೆಗಳು ಸಾಮಾನ್ಯವಾಗಿ ಅನುವಂಶೀಯವಾಗಿ ಆಯ್ಕೆ ಮಾಡುತ್ತಾರೆ. ಅಸ್ಸಾಂಮದ ನಾಗಾ ಬುಡಕಟ್ಟಿನಲ್ಲಿ ಯಾವ ವ್ಯಕ್ತಿ ತನ್ನ ಮನೆಯಲ್ಲಿ ಹೆಚ್ಚು ಜನರ ತಲೆ ಬುರುಡೆಗಳನ್ನು ಸಂಗ್ರಹಿಸಿಟ್ಟುಕೊಂಡಿರುವನೋ ಅವನನ್ನು ನಾಯಕನೆಂದು ಆಯ್ಕೆ ಮಾಡುತ್ತಾರೆ. ಕೆಲವೂ ಆದಿವಾಸಿ ಸಮೂಹಗಳಲ್ಲಿ ಪ್ರತಿಯೊಂದು ಪಂಗಡಕ್ಕೂ ಒಂದೊಂದು 'ಪಂಚಾಯ್ತಿ' ವ್ಯವಸ್ಥೆ ಇರುತ್ತದೆ.ಅದು ನ್ಯಾಯಗಳನ್ನು ಬಗೆಹರಿಸುವ ಮತ್ತು ತಪ್ಪಿತಸ್ಥನನ್ನು ಶಿಕ್ಷಿಸುವ ಕಾರ್ಯದಲ್ಲಿ ಮುಖ್ಯಸ್ಥನಿಗೆ ನೆರವು ನೀಡುತ್ತದೆ. ಕಟ್ಟು ನಿಟ್ಟಾದ ರಾಜಕೀಯ ಸಂಘಟನೆ ಮತ್ತು ಅನೌಪಚಾರಿಕ ಸಾಮಾಜಿಕ ನಿಯಂತ್ರಣಗಳು ಬುಡಕಟ್ಟು ಜನರ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ತರುತ್ತವೆ.

೫. ಸರಳ ಮತ್ತು ಸ್ವತಂತ್ರ ಜೀವನ : ಆದಿವಾಸಿ ಪಂಗಡಗಳು ಬಹಳಮಟ್ಟಿಗೆ ಸರಳವೂ, ಸ್ವತಂತ್ರವೂ ಮತ್ತು ಸ್ವಯಂ ಪರಿಪೂರ್ಣವೂ ಆಗಿರುತ್ತವೆ. ನಗರದ ಕೃತಕ ಹಾಗೂ ಆಡಂಬರದಿಂದ ಆದಿವಾಸಿಗಳು ಬಹುದೂರವಿರುತ್ತಾರೆ. ಅವರು ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲೂ ಮುಂದೆ ಬಂದಿಲ್ಲ. ಹಿಂದೆ ಮರದ ತೊಗಟೆ, ಪ್ರಾಣಿಗಳ ಚರ್ಮ, ಕಾಡಿನ ಎಲೆ, ಹುಲ್ಲಿನಿಂದ ಮಾಡಿದ ಉಡುಪುಗಳನ್ನೇ ಧರಿಸುತ್ತಿದ್ದರು. ಅಂಡಮಾನ್ ದ್ವೀಪದ ಒಂಗೆಗಳು ಇಂದಿಗೂ ಬೇಟೆಯಾಡಿ, ಮೀನುಹಿಡಿದು, ಗೆಡ್ಡೆಗೆಣಸುಗಳನ್ನು ತಿಂದು ಬದುಕುತ್ತಾರೆ. ಕೆಲವೊಂದು ಆದಿವಾಸಿಗಳು ಕಲ್ಲನ್ನು ಕುಟ್ಟಿ ಬೆಂಕಿ ಹಚ್ಚಿಸಿಕೊಳ್ಳುವುದು, ಮರದ ಮೇಲೆ ಜೋಲಿ ಕಟ್ಟಿ ಮಲಗುವುದು,ಸರಳ

ಆಹಾರ ಪದ್ಧತಿ, ಸಾಮೂಹಿಕ ನೃತ್ಯ,ಜಾತ್ರೆ, ಉತ್ಸವ, ಹಬ್ಬಗಳಿಂದ ಅವರು ತಮ್ಮ ಕ್ಷೇತ್ರದಲ್ಲಿಯೇ ಮನರಂಜನೆ ಪಡೆಯುತ್ತಾರೆ. ಕಳ್ಳತನ, ಮೋಸ, ಕಪಟ ಇವುಗಳಾವು ತಿಳಿಯುವುದಿಲ್ಲ. ಇಂದಿಗೂ ಕೆಲವೊಂದು ಆದಿವಾಸಿಗಳಲ್ಲಿ "ಅದಲು ಬದಲು ಪದ್ಧತಿ" ಅಸ್ಥಿತ್ವದಲ್ಲಿದೆ. ಇವರ ಪ್ರಮುಖ ವೃತ್ತಿ ಬೇಟೆ, ಮೀನು ಹಿಡಿಯುವುದು,ಅರಣ್ಯಗಳಿಂದ ಜೇನು, ಹಣ್ಣು, ಹಂಪಲು, ಗೆಡ್ಡೆಗೆಣಸು, ಕಾಡುಮೆಣಸು, ಔಷಧಿಯ ಗಿಡಮೂಲಿಕೆಗಳು ಮುಂತಾದವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಇತ್ತೀಚೆಗೆ ಪಶುಪಾಲನೆ ಮತ್ತು ಕೃಷಿ ಪ್ರಧಾನ ವೃತ್ತಿಯಾಗಿದೆ. ಹೀಗಾಗಿ ಜೀವನದ ಹಲವಾರು ಕ್ಷೇತ್ರಗಳಲ್ಲಿಯೂ ಅವರು ಸಂಪೂರ್ಣವಾಗಿ ಸ್ವತಂತ್ರರೆಂದು ಹೇಳಬಹುದು.

೬. ರಕ್ತ ಸಂಬಂಧದ ಬಾಂಧವ್ಯ : ಬುಡಕಟ್ಟು ಸಮುದಾಯಗಳಲ್ಲಿ 'ಕರುಳುಬಳ್ಳಿಯ' ಸಂಬಂಧ ಅಥವಾ 'ರಕ್ತ ಸಂಬಂಧ'ಗಳಿಗೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಕುಟುಂಬ, ವಂಶ, ಕುಲ,ಬಳಿ,ಬೆಡಗು, ಮುಂತಾದ ಚಿಕ್ಕ ಸಮೂಹಗಳು ರಕ್ತ ಸಂಬಂಧದ ಆಧಾರದ ಮೇಲೆಯೇ ರಚಿತವಾಗಿವೆ. ಬಂಧು ಪ್ರೇಮದ ತಳಹದಿಯ ಮೇಲೆ ಸಹಕಾರ ಮತ್ತು ಸಂಬಂಧಗಳು ಬೆಳೆಯುತ್ತವೆ. ಮದುವೆ ಮಂಗಳ ಕಾರ್ಯಗಳಲ್ಲಿ ಸೋದರಮಾವ ಮತ್ತು ಸೋದರತ್ತೆಗೆ ವಿಶೇಷ ಮಹತ್ವ ಕೊಡುತ್ತಾರೆ. ಯಾವುದೇ ಕೌಟುಂಬಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಐಕ್ಯತೆ, ಒಗ್ಗಟ್ಟು ಮತ್ತು ಸಹಕಾರ ಭಾವನೆ ಪ್ರಧಾನವಾಗಿರುತ್ತದೆ. ಕೆಲವೊಂದು ಸಲ ಕುಲ, ಬಳಿ, ಬೆಡಗುಗಳು ಬೇರೆ ಬೇರೆಯಿದ್ದರೂ ಸಹೋದರ ಭಾವನೆಯಿಂದ ವರ್ತಿಸುತ್ತಾರೆ. ಉದಾ : ಕರ್ನಾಟಕದಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ನಾವು ಸಹೋದರ ಸಂಬಂಧಿಗಳೆಂದೇ ಹೇಳಿಕೊಳ್ಳುತ್ತಾರೆ. ತಾವೆಲ್ಲರು ಒಬ್ಬ ಮೂಲ ಪುರುಷ ಅಥವಾ ಬುಡಕಟ್ಟಿಗೆ ಸೇರಿದವರೆಂದು ಭಾವಿಸುತ್ತಾರೆ.

೭. ಒಂದೇ ಧರ್ಮ ಮತ್ತು ಸಂಸ್ಕೃತಿ : ಸರ್ವಚೇತನ ಪಂಥವು ಆದಿವಾಸಿಗಳ ಧಾರ್ಮಿಕ ಭಾವನೆಯಾಗಿದೆ. ಧಾರ್ಮಿಕ ನಿಷ್ಠೆ, ಸಂಪ್ರದಾಯ ಶರಣತೆ, ಪ್ರಕೃತಿ ಪೂಜೆ, ಮೂರ್ತಿ ಪೂಜೆ ಮತ್ತು ಕುಲದೇವತಾ ಪೂಜೆಗಳನ್ನು ಆಚರಿಸುತ್ತಾರೆ. ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ಕಲ್ಲು ಬಂಡೆಗಳನ್ನು ಅವರು ಪೂಜಿಸುತ್ತಾರೆ. ಭೂತ-ಪ್ರೇತ, ಮಾಟ-ಮಂತ್ರಗಳ ಬಗೆಗೆ ನಂಬಿಕೆಯುಳ್ಳವರು. ಜೀವನದ ಕಷ್ಟ ನಷ್ಟ, ರೋಗ ರುಜಿನಗಳು ಬಂದಾಗ ಅವರು ವಿಶೇಷವಾಗಿ ಮಾಟ-ಮಂತ್ರಗಳಿಂದಲೇ ಪರಿಹಾರ ಕಂಡು ಕೊಳ್ಳುತ್ತಾರೆ. ಪ್ರತಿಯೊಂದು ಚಟುವಟಿಕೆಗಳಲ್ಲಿ ಧಾರ್ಮಿಕ ಮನೋಭಾವನೆಗಳು ಅವರಲ್ಲಿ ಎದ್ದು ಕಾಣುತ್ತವೆ. ಭಾರತದ ಜನಗಣತಿಯ ವರದಿಯಲ್ಲಿ ಆದಿವಾಸಿ ಬುಡಕಟ್ಟುಗಳನ್ನು 'ಸರ್ವಚೇತನವಾದಿಗಳು' ಎಂದು ಕರೆದಿದ್ದಾರೆ. "ಸರ್. ಜೇಮ್ಸ್ ಫ್ರೇಜರ್ ಹೇಳುವಂತೆ "ಆದಿವಾಸಿಗಳ ಜೀವನವು ಧರ್ಮದೊಂದಿಗೆ ಲೀನವಾಗಿದೆ. ಅವರ ಇಡೀ ಜೀವನವು ಧರ್ಮದಲ್ಲಿ ಅದ್ದಿ ತೆಗೆದಂತಿದೆ"[೩] ಎಂದಿದ್ದಾರೆ.

೮. ಒಳ ಪಂಗಡ ವಿವಾಹ ಪದ್ಧತಿ : ಬುಡಕಟ್ಟುಗಳಲ್ಲಿ ಒಳಪಂಗಡ ವಿವಾಹಗಳು ಜರುಗುತ್ತವೆ. ಸಮುದಾಯದ ಪವಿತ್ರತೆ ಮತ್ತು ಐಕ್ಯತೆಯ ದೃಷ್ಟಿಯಿಂದ ಈ ಪದ್ಧತಿಗಳು ಅಸ್ಥಿತ್ವಕ್ಕೆ ಬಂದಿವೆ. ವ್ಯಕ್ತಿಯು ತನ್ನ ಬಾಳ ಸಂಗಾತಿಯನ್ನು ತಾನು ಹುಟ್ಟಿದ ಪಂಗಡದಲ್ಲಿಯೇ ಆರಿಸಿಕೊಳ್ಳಬೇಕು. ಅವರವರ ಕುಲಪದ್ಧತಿಗೆ ತಕ್ಕಂತೆ ಗಂಡು ಹೆಣ್ಣುಗಳ ಆಯ್ಕೆ, ವಿವಾಹದ ನಿಯಮಗಳನ್ನು ಪಾಲಿಸುತ್ತಾರೆ. ಬ್ರಾಹ್ಮಣ ಪೌರೋಹಿತ್ಯಕ್ಕೆ ಇವರಲ್ಲಿ ಅವಕಾಶವಿಲ್ಲ. ರಕ್ತ ಸಂಬಂಧಕ್ಕೆ ಬಹಳ ಮಹತ್ವ ಕೊಟ್ಟು ವಿವಾಹ ಸಂಬಂಧ ಬೆಳೆಸುತ್ತಾರೆ. ಉದಾ: ಕಾಡುಗೊಲ್ಲರ ಗಂಡು ಕಾಡುಗೊಲ್ಲರ ಹೆಣ್ಣನ್ನೇ ವಿವಾಹಕ್ಕೆ ಆಯ್ಕೆ ಮಾಡಿದರೂ ಅವರಿಬ್ಬರ ಕುಲ ಅಥವಾ

ಬೆಡಗುಗಳು ಬೇರೆಯಾಗಿರುತ್ತವೆ. ಅರಿತೋ ಅರಿಯದೆಯೋ ಅಂತು ಒಂದೇ ಬೆಡಗಿನಲ್ಲಿ ಮದುವೆಯಾಗಬಾರದು ಇಂದರಿಂದ ವಂಶಾಭಿವೃದ್ಧಿಗೆ ಹಾನಿ ಎಂಬ ವೈಜ್ಞಾನಿಕ ಸತ್ಯವನ್ನು ಬುಡಕಟ್ಟು ಜನಾಂಗ ತಿಳಿದುಕೊಂಡಂತೆ ಕಾಣುತ್ತದೆ. ಆದಿವಾಸಿಗಳು ಒಳಪಂಗಡ ವಿವಾಹ ಪದ್ಧತಿ ಅನುಸರಿಸಿದರೂ, ಅವರ ವಿವಾಹ ನಿಯಮ, ವಿವಾಹದ ವಯಸ್ಸು, ಸಂಗಾತಿಗಳ ಆಯ್ಕೆ ಕ್ರಮ, ವಿವಾಹ ವಿಚ್ಛೇಧನ, ಲೈಂಗಿಕ ಕಟ್ಟುಪಾಡುಗಳು ಮೊದಲಾದವುಗಳ ವಿಷಯವಾಗಿ ಆದಿವಾಸಿಗಳು ಇತರರಿಗಿಂತ ಭಿನ್ನವಾದ ತನ್ನದೇ ಆದ ನಿಯಮಗಳನ್ನು ಪಾಲಿಸುತ್ತಾರೆ.

೯. ಸೌಂದರ್ಯದ ಪ್ರಜ್ಞೆ ಉಳ್ಳವರು : ಸರಳ ಮತ್ತು ಸ್ವತಂತ್ರ ಜೀವಿಗಳಾದ ಆದಿವಾಸಿಗಳು, ತಮ್ಮ ಸೌಂದರ್ಯಕ್ಕೆ ಅಷ್ಟೇ ಮಹತ್ವ ಕೊಡುತ್ತಾರೆ. ಸೌಂದರ್ಯೋಪಾಸಕರು ಮತ್ತು ಕಲಾರಾಧಕರು. ಆದಿವಾಸಿಗಳ ಜೀವನದಲ್ಲಿ ಗಾಯನ, ನೃತ್ಯ, ಕೆತ್ತನೆ, ಅಲಂಕಾರ, ವಿಚಿತ್ರ ರೀತಿಯ ಒಡವೆ ವಸ್ತ್ರಗಳನ್ನು ಹೊಂದಿದ ಕಲಾವಂತರು. ಗುಹೆ, ಬಂಡೆ ಮತ್ತು ಮಾನವನ ತಲೆಬುರುಡೆಗಳ ಮೇಲೆ ಚಿತ್ರ ಬರೆಯುವುದು, ಬುಟ್ಟಿ ಹೆಣೆಯುವುದು, ಆಟದ ಸಾಮಾನುಗಳನ್ನು ತಯಾರಿಸುವುದು, ಬಿಲ್ಲು, ಬಾಣ ಮತ್ತು ದೇವರುಗಳನ್ನು ಅನೇಕ ಬಗೆಯಲ್ಲಿ ಅಲಂಕರಿಸಿಕೊಳ್ಳುತ್ತಾರೆ. ಆದಿವಾಸಿ ಸ್ತ್ರೀಯರು ಕೇಶಾಲಂಕಾರ, ಹೂವು, ಮುಡಿಯುವುದು, ಆಭರಣ, ಕೈ ಬಳೆಗಳು, ಗೊಲ್ಲ ಕಡಗ, ಬದ್ದು, ಕಂಠಾಭರಣ, ಬಾಚಣಿಕೆ, ಬಿದರಿನ ವಸ್ತುಗಳು, ವಿವಿಧ ಜಾತಿಯ ಮಣಿ ಸರಗಳು ಮತ್ತು ದೇಹದ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು, ಪ್ರಾಣಿಗಳ ಗರಿ, ಕೊಂಬು, ಹಲ್ಲು, ಉಗುರುಗಳನ್ನು ಕೊಡ ಅಲಂಕಾರಕ್ಕಾಗಿ ಬಳಸುತ್ತಾರೆ.

೧೦. ರಕ್ಷಣೆ ಮತ್ತು ಐಕ್ಯತೆಯ ಭಾವನೆ : ಆದಿವಾಸಿಗಳು ಯಾವಾಗಲೂ ರಕ್ಷಣೆ ಮತ್ತು ಭದ್ರತೆಗೆ ಹೆಚ್ಚಿನ ಮಹತ್ವ ಕೊಡುತ್ತಾರೆ. ತಮ್ಮ ಸಮುದಾಯದ ಗುಟ್ಟನ್ನು ಕಾಪಾಡಿಕೊಂಡು ಬರುತ್ತಾರೆ. ಹೊರಗಿನ ಜನರನ್ನು ಸಂಶಯದಿಂದಲೇ ಕಾಣುತ್ತಾರೆ. ಕೆಲವೊಂದು ಹಟ್ಟಿ, ಹಾಡಿ, ಪಾಳ್ಯ, ದೊಡ್ಡಿಗಳಿಗೆ ಸುತ್ತ ಮುಳ್ಳುಬೇಲಿಯನ್ನು ಹಾಕಿ ಕೊಳ್ಳುತ್ತಾರೆ. ಈ ಬೇಲಿ ರಕ್ಷಣ ಮತ್ತು ಪವಿತ್ರತೆ ಎರಡೂ ದೃಷ್ಟಿಯಿಂದ ಅನುಕೂಲವಾಗುತ್ತದೆ. ಉದಾ: ಕರ್ನಾಟಕದ ಕಾಡುಗೊಲ್ಲರ ಹಟ್ಟಿಗಳು. ಅಪಾಯ ಮತ್ತು ಸಮಸ್ಯೆಗಳು ಎದುರಾದಾಗ ಸಾಮುದಾಯಿಕ ಭಾವನೆ ಅವರಲ್ಲಿ ತೀವ್ರವಾಗಿರುತ್ತದೆ. ತಮ್ಮ ಸಮೂಹಕ್ಕೋಸ್ಕರ ಪ್ರಾಣಕೊಡಲು ಸಿದ್ಧರಾಗುತ್ತಾರೆ. ಉದಾ : ಹಲಗಲಿ ಬೇಡರ ದುರಂತ.

ಆದಿವಾಸಿಗಳು ರಕ್ಷಣೆ ಮತ್ತು ಐಕ್ಯತೆಗೆ ಬಹಳ ಮಹತ್ವ ಕೊಡುವುದರಿಂದ ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ವಾಸಿಸುವ ಮ್ಯಾಸಬೇಡ, ಕಾಡುಗೊಲ್ಲ, ಕಾಡುಕುರುಬ, ಚೆಂಚು ಮೊದಲಾದ ಬುಡಕಟ್ಟು ಜನಾಂಗ ತಾವು ವಾಸಿಸುವ ಪ್ರದೇಶದ ಸುತ್ತ ಮುಳ್ಳು ಬೇಲಿ ಹಾಕಿಕೊಳ್ಳುತ್ತಾರೆ.

೩.೩. ಭಾರತದಲ್ಲಿ ಬುಡಕಟ್ಟುಗಳ ವಿಂಗಡಣೆ

ಆದಿವಾಸಿಗಳು ದೇಶಾದ್ಯಂತ ಚದುರಿಹೋಗಿ ವಿವಿಧ ಭಾಷೆ, ಸಂಸ್ಕೃತಿ, ಮತ್ತು ಜನಾಂಗಿಯ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದಾರೆ. ಬಹುಸಂಖ್ಯಾತ ಆದಿವಾಸಿಗಳನ್ನು ಹೊಂದಿರುವ ರಾಜ್ಯಗಳು ಪ್ರಮುಖವಾಗಿ ಮಧ್ಯಪ್ರದೇಶ, ಒರಿಸ್ಸಾ ಮತ್ತು ಬಿಹಾರ ಈ ಮೂರು ರಾಜ್ಯಗಳಲ್ಲಿ ಅರ್ಧದಷ್ಟು ಆದಿವಾಸಿಗಳು ಕಂಡು ಬರುತ್ತಾರೆ. ಇದರಲ್ಲಿ ಮಧ್ಯ ಪ್ರದೇಶದಲ್ಲಿ ಹೆಚ್ಚು ಆದಿವಾಸಿಗಳು ಕಂಡು ಬರುತ್ತಾರೆ. ಬಂಗಾಲ ಉಪಸಾಗರದಲ್ಲಿರುವ ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ಅಂಗೆ, ಒಂಗೆ, ಮತ್ತು ಜಾರವ ಆದಿವಾಸಿ ಪಂಗಡಗಳಿವೆ.. ಆದಿವಾಸಿಗಳ

ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಅವರು ವಾಸಿಸುವ ಭೂಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಮೂರು ವಲಯಗಳಾಗಿ ವರ್ಗೀಕರಿಸಲಾಗಿದೆ.

೧. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು

ಭಾರತದ ಈಶಾನ್ಯ ಗಿರಿಕಣಿವೆ, ಹಾಗೂ ಜಮುನಾ, ಪದ್ಮಾ ಮತ್ತು ಬ್ರಹ್ಮಪುತ್ರಾ ನದಿ ದಂಡೆಗಳಲ್ಲಿ ವಾಸಿಸುವ ಆದಿವಾಸಿಗಳನ್ನು ಈಶಾನ್ಯ ವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಈ ವಲಯದ ಆದಿವಾಸಿಗಳು ದೇಶದ ಒಟ್ಟು ಆದಿವಾಸಿಗಳ ೧೨.೩೩%ರಷ್ಟಿದ್ದಾರೆ. ಅಸ್ಸಾಂ, ನಾಗಾಲ್ಯಾಂಡ್, ಪಂಜಾಬ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ,ಅರುಣಾಚಲ ಪ್ರದೇಶ, ನೇಪಾಳ, ಭೂತಾನ, ಮೇಘಾಲಯ ಮತ್ತು ಸಿಕ್ಕಿಂ ಕೂಡ ಈ ವಲಯಕ್ಕೆ ಸೇರಿಕೊಂಡಿವೆ. ಬಂಗಾಳ ಮತ್ತು ಬಿಹಾರ ರಾಜ್ಯಗಳು ಈ ವಲಯದಲ್ಲಿಯೇ ಇವೆ. ಈ ಭಾಗದ ಮುಖ್ಯ ಆದಿವಾಸಿಗಳೆಂದರೆ ನಾಗಾ, ಅಂಗಾಮಿ, ಖಾಸಿ, ಆಕಾ, ಗಾರೋ, ಲಿಂಬೂ, ಲೆಪ್ಚಾ, ಗುರುಂಗ, ಮಿಖಿರ್,ಕಚಾಲಿ, ರಾಭಾ, ದುಶ್ಮೀ, ಚಕ್ಮೀ, ದಾಪ್ಲಾ ಇತ್ಯಾದಿ.

ಈಶಾನ್ಯ ವಲಯದ ಆದಿವಾಸಿಗಳು ಸಾಮಾನ್ಯವಾಗಿ ಮಂಗೋಲಿಯಾ ಬುಡಕಟ್ಟಿಗೆ ಸೇರಿದವರಾಗಿದ್ದಾರೆ. ಇವರ ಭಾಷೆ "ಟಿಬೆಟೊ-ಚೀನ" ಸೇರಿದ ಭಾಷೆಗಳನ್ನಾಡುತ್ತಾರೆ. ಇವರ ಪ್ರಮುಖ ಗುಣಲಕ್ಷಣಗಳೆಂದರೆ ಹಳದಿ ಬಣ್ಣ, ಅರ್ಧತೆರೆದಂತೆ ಕಾಣುವ ಕಣ್ಣುಗಳು, ಚಪ್ಪಟೆ ಮೂಗು, ಒರಟಾದ ಕೂದಲು, ಉದ್ದತಲೆ, ಸರಸಾರಿ ಎತ್ತರ, ಈ ಪ್ರದೇಶದ ಆದಿವಾಸಿಗಳು ನಾಗರಿಕತೆ ಮತ್ತು ಕೃಷಿಯಲ್ಲಿ ಮುಂದುವರೆದ ಆಧುನಿಕ ಗುಣಲಕ್ಷಣಗಳು ಹಾಗೂ ರಾಜಕೀಯ ಪ್ರಜ್ಞೆ ಉಳ್ಳವರು ಆಗಿದ್ದಾರೆ. ಗೃಹ ಕೈಗಾರಿಕೆಗಳಲ್ಲಿ ನೂಲುವುದು, ನೇಕಾರಿಕೆ ಮೊದಲಾದ ವೃತ್ತಿಗಳನ್ನು ಮಾಡುತ್ತಾರೆ. ಆದರೆ ಕಷ್ಟ ಸಹಿಷ್ಣುಗಳು, ಸದೃಢಕಾಯದವರೂ, ಸ್ವತಂತ್ರ ಪ್ರಿಯರೂ ಆಗಿರುವುದರ ಜೊತೆಗೆ ಯುದ್ಧ, ಕಲಹ ಹಾಗೂ ಬೇಟೆಯಲ್ಲಿ ಆಸಕ್ತಿಯುಳ್ಳ ಜನಾಂಗ. ಸೌಂದರ್ಯೋಪಾಸಕರು ಹಾಗೂ ಕಲಾಭಿರುಚಿಯುಳ್ಳವರು ಆಗಿರುತ್ತಾರೆ.ನಾಗಾ ಜನರ ಸಮೂಹ ನೃತ್ಯ ಮತ್ತು ಗಾಯನ ವಿಶ್ವವಿಖ್ಯಾತಿಯನ್ನು ಪಡೆದಿದೆ. ಇವರು ಮಾನವನ ಬೇಟೆಯಾಡಿ ಮನೆಯಲ್ಲಿ ತಲೆಬುರುಡೆಗಳನ್ನು ಶೇಖರಿಸಿಡುತ್ತಾರೆ. ದೇವರು ಧರ್ಮ ಮತ್ತು ದೈವಿಕ ನಂಬಿಕೆಗೆ ಹೆಚ್ಚಿನ ಮಹತ್ವ ಕೊಡುತ್ತರೆ. ಇತ್ತೀಚೆಗೆ ವ್ಯವಸಾಯ ವೃತ್ತಿ ಕೈಗೊಂಡು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುತ್ತಿದ್ದಾರೆ.

೨. ಮಧ್ಯವಲಯದ ಆದಿವಾಸಿಗಳು

ಈ ವಲಯವು ಕೃಷ್ಣ, ನರ್ಮದ ಮತ್ತು ಗೋದವರಿ ನದಿಗಳ ಎಡ ಬಲ ದಂಡೆಗಳಲ್ಲಿ ವಾಸಿಸುವ ಆದಿವಾಸಿ ಗಳನ್ನು ಮಧ್ಯವಲಯದ ಆದಿವಾಸಿಗಳೆಂದು ಕರೆಯುತ್ತಾರೆ. ಮಧ್ಯ ಪ್ರದೇಶ, ಒರಿಸ್ಸಾ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಬಿಹಾರ, ರಾಜ್ಯಗಳು ಮಧ್ಯವಲಯದಲ್ಲಿ ಸಮಾವೇಶ ಗೊಂಡಿರುತ್ತವೆ. ದಕ್ಷಿಣ ಪ್ರಸ್ಥಭೂಮಿಯೆಂದು ಕರೆಯಲ್ಪಡುವ ಈ ಪ್ರದೇಶಗಳಲ್ಲಿ ಸಂತಾಲ, ಮುಂಡಾ, ಗೊಂಡಾ, ಸವರಾ, ಭಿಲ್ಲ, ಬೈಗಾ, ಗಡಬ ಕೋಳಿ, ಖರಿಯಾ, ಮುಂಡ್, ಬಿರ್‌ಹಾರ್, ಜುವಾಂಗ, ಕಂಧ ಮುಂತಾದ ಆದಿವಾಸಿಗಳು ಈ ವಲಯದಲ್ಲಿ ನೆಲೆಸಿದ್ದಾರೆ. ಆರ್ಯ ಮತ್ತು ಆಸ್ಟ್ರಿಕ್ ಭಾಷೆಗಳನ್ನು ಬಳಸುತ್ತಾರೆ. ಈ ವಲಯದ ಆದಿವಾಸಿಗಳಲ್ಲಿ 'ಗೊಂಡಾ' ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಅವರು ವಾಸಿಸುವ ಪ್ರದೇಶವನ್ನು 'ಗೊಂಡಾರಣ್ಯ' ಎಂದು ಕರೆಯಲಾಗುತ್ತದೆ. ಗೊಂಡರ ನಂತರ ಹೆಚ್ಚು ಪ್ರಮಾಣದಲ್ಲಿ ಕಂಡು ಬರುವರೆಂದರೆ 'ಸಂತಾಲರು'. ಈ ವಲಯ ಜನಸಂಖ್ಯೆ ಮತ್ತು ಪ್ರದೇಶಗಳ ವಿಸ್ತಾರ ದೃಷ್ಟಿಯಿಂದ ಅತ್ಯಂತ ದೊಡ್ಡದಾಗಿದೆ.

ಮಧ್ಯವರ್ತಿ ನಿಲವು, ಕಪ್ಪು ಬಣ್ಣ, ಉದ್ದ ತಲೆ, ಗುಂಗುರು ಕೂದಲು, ಚಿಕ್ಕದಾದ ಚಪ್ಪಟೆಯಾದ ಮೂಗು, ಸಧೃಡವಾದ ಶರೀರ, ಚಿಕ್ಕದಾದ ಹಣೆ ಇವು ಮಧ್ಯ ವಲಯದ ಆದಿವಾಸಿಗಳ ದೈಹಿಕ ಲಕ್ಷಣಗಳು. ಇವರು ಅತೀ ಹಿಂದುಳಿದ ಅನಾಗರಿಕರಾಗಿದ್ದಾರೆ. ಬೇಟೆ, ಆಹಾರ ಸಂಗ್ರಹಣೆ, ಸಂಚಾರಿ ಬೇಸಾಯ,ಬೆತ್ತಲೆಯಾಗಿ ತಿರುಗುವುದು, ತೊಗಲಿನ ಅಥವಾ ಹುಲ್ಲಿನ ಉಡುಪು ಧರಿಸುವುದು, ಸಮೂಹಗಾನ ಮತ್ತು ನೃತ್ಯ ಕಾರ್ಯಕ್ರಮಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಪಿತೃ ಪ್ರಧಾನ ಕುಟುಂಬ, ಅಪಹರಣ ವಿವಾಹ, ತಮ್ಮದೇ ಆದ ಪಂಚಾಯಿತಿ ವ್ಯವಸ್ಥೆ, ಕುಲ ಪದ್ಧತಿಗಳು ಮೊದಲಾದ ರೂಢಿ ಸಂಪ್ರಾದಯಗಳು ಇವರಲ್ಲಿ ಕಂಡು ಬರುತ್ತವೆ. ಈ ಪ್ರದೇಶದ ಭಿಲ್ಲ ಮತ್ತು ಬೇಡ ಜನಾಂಗದಲ್ಲಿ 'ಪರೀಕ್ಷೆ ಮದುವೆ' ಮತ್ತು 'ಅಪಹರಣ' ವಿವಾಹ ಪದ್ಧತಿಗಳಿವೆ. ಗೊಂಡಾ ಆದಿವಾಸಿಗಳಲ್ಲಿ ಬಹುಪತ್ನಿತ್ವ ಹಾಗೂ ಸಂತಾಲರಲ್ಲಿ ಬಹುಪತಿತ್ವ ವಿವಾಹ ಪದ್ಧತಿಗಳು ಬಳಕೆಯಲ್ಲವೆ. ಬುಟ್ಟಿ ಹೆಣೆಯುವುದು, ಮರದ ಕೆತ್ತನೆಯ ಕೆಲಸದಲ್ಲಿ ಇವರು ನಿಪುಣರಾಗಿದ್ದಾರೆ. ವ್ಯವಸಾಯ ಪ್ರಧಾನ ವೃತ್ತಿಯಾಗಿದೆ. ಆದರೂ ಆರ್ಥಿಕವಾಗಿ ಸ್ವಾವಲಂಭಿಗಳಾಗಿಲ್ಲ ಆದರೆ ಶಾಂತ ಸ್ವಾಭಾವದವರು.

೩. ದಕ್ಷಿಣ ವಲಯದ ಆದಿವಾಸಿಗಳು

ದಕ್ಷಿಣ ಪ್ರಸ್ಥ ಭೂಮಿಯಿಂದ, ಕೃಷ್ಣಾ ನದಿಯ ದಕ್ಷಿಣ ಪ್ರದೇಶಗಳಲ್ಲಿ ಹಾಗೂ ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲಿ ವಾಸಿಸುವ ಆದಿವಾಸಿಗಳನ್ನು ದಕ್ಷಿಣ ವಲಯದ ಆದಿವಾಸಿಗಳೆಂದು ಕರೆಯಲಾಗುವುದು. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ನೀಲಗಿರಿಬೆಟ್ಟ ಮತ್ತು ಪಶ್ಚಿಮ ಘಟ್ಟ ಪ್ರದೇಶಗಳನ್ನು ಒಳಗೊಂಡಿದೆ. ಈ ವಲಯದ ಪ್ರಮುಖ ಆದಿವಾಸಿಗಳೆಂದರೆ ತೋಡಾ, ಬಡಗಾ, ಸೋಲಿಗ, ಇರುಳಾ, ಚೆಂಚು,ಮ್ಯಾಸ ಬೇಡ, ಕಾಡುಗೊಲ್ಲ, ಕಾಡುಕುರುಬ, ಜಿಪ್ಸಿ, ಜ್ಯೂ ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ಬರುತ್ತಾರೆ.

ಉಳಿದ ವಲಯಗಳ ಆದಿವಾಸಿಗಳಿಗೆ ಹೋಲಿಸಿದರೆ ಈ ಪ್ರದೇಶದ ಆದಿವಾಸಿಗಳು ನಾಗರಿಕತೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಕಲ್ಲನ್ನು ತಿಕ್ಕಿ ಬೆಂಕಿ ಹಚ್ಚುವುದು, ಎಲೆ ಹಾಗೂ ಹುಲ್ಲುಗಳ ಉಡುಪು ಧರಿಸುವುದು. ಬಿದಿರು ಬೊಂಬುಗಳಲ್ಲಿ ನೀರು ಕುಡಿಯುವುದು, ಮರದ ಮೇಲೆ ಜೋಲಿ ಕಟ್ಟಿ ಮಲಗುವುದು, ಕಂದ ಮೂಲಗಳನ್ನು ಸಂಗ್ರಹಿಸುವುದು ಮತ್ತು ಬೇಟೆ, ಪಶುಪಾಲನೆ ಹಾಗೂ ಕೃಷಿಯನ್ನು ಅವಲಂಭಿಸಿದ್ದಾರೆ. ಭಾರತದ ಮೂಲನಿವಾಸಿಗಳೆಂದು ಕರೆಯುವ ಈ ವಲಯದ ಆದಿವಾಸಿಗಳು, ದ್ರಾವಿಡ ಭಾಷೆ ಮತ್ತು ಸಂಸ್ಕೃತಿಯನ್ನು ಹೋಲುತ್ತಾರೆ. ಕನ್ನಡ, ತೆಲಗು, ಮಲೆಯಾಳಿ ಮುಂತಾದ ಭಾಷೆಗಳನ್ನು ಅಪಭ್ರಂಶವಾಗಿ ಬಳಸುತ್ತಾರೆ. ಬಹುಸಂಖ್ಯಾ ಆದಿವಾಸಿಗಳಲ್ಲಿ ಮಾತೃ ಪ್ರಧಾನ ಕುಟುಂಬಗಳು ಅಸ್ಥಿತ್ವದಲ್ಲಿವೆ. ಕರ್ನಾಟಕದ ಆದಿವಾಸಿಗಳಲ್ಲಿ ಸಾಮಾನ್ಯವಾಗಿ ಪಿತೃಪ್ರಧಾನ ಕುಟುಂಬಗಳು ಅಸ್ಥಿತ್ವದಲ್ಲಿವೆ.

ನಿಗ್ರೋಯಿಡ್ ಜನಾಂಗದವರಂತೆ ಕಪ್ಪುಬಣ್ಣ, ಚಪ್ಪಟೆ ಅಗಲ ಮೂಗು, ದಪ್ಪ ತುಟಿ, ಒರಟಾದ ಕೊದಲು, ಮಧ್ಯಮ ನಿಲುವು, ಉದ್ದತಲೆ, ಸದೃಢ ಶಾರೀರ, ಧೈರ್ಯಶಾಲಿಗಳು ಮುಂತಾದ ಗುಣಲಕ್ಷಣಗಳನ್ನು ಈ ಪ್ರದೇಶದ ಆದಿವಾಸಿಗಳು ಹೊಂದಿದ್ದಾರೆ. ಸೌಂದರ್ಯದ ಸಂಕೇತವಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ತೋಡರು ಎಮ್ಮೆಗಳನ್ನು ಪೂಜಿಸುತ್ತಾರೆ. ಈ ಪ್ರದೇಶಗಳಲ್ಲಿ ಹೆಣ್ಣು ಶಿಶುಹತ್ಯೆ ಅಸ್ಥಿತ್ವದಲ್ಲಿದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ 'ಮ್ಯಾಸಬೇಡ' ಮತ್ತು 'ಕಾಡುಗೊಲ್ಲರು' ದಕ್ಷಿಣ ವಲಯದ

ಆದಿವಾಸಿಗಳ ಗುಂಪಿನಲ್ಲಿಯೇ ಬರುತ್ತಾರೆ. ಈ ವಲಯದಲ್ಲಿ ಬರುವ ಆದಿವಾಸಿಗಳ ಎಲ್ಲಾ ಗುಣಲಕ್ಷಣಗಳನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗ ಹೊಂದಿದ್ದಾರೆ.

೪. ಕರ್ನಾಟಕದಲ್ಲಿ ಬುಡಕಟ್ಟುಗಳ ಅಧ್ಯಯನ

ಬುಡಕಟ್ಟುಗಳ ಅಧ್ಯಯನ ಕುರಿತು ಹೇಳಿಕೊಳ್ಳುವಂತ ಕೆಲಸ-ಕಾರ್ಯಗಳು ಕರ್ನಾಟಕದಲ್ಲಿ ನಡೆದಿಲ್ಲ. "ಭಾರತ ಸರಕಾರ ಕರ್ನಾಟಕದಲ್ಲಿ ಗುರುತಿಸಿರುವ ಅರವತ್ತೂ್ಮರು ಬುಡಕಟ್ಟುಗಳಲ್ಲಿ ಕೆಲವನ್ನು ಪರಿಶಿಷ್ಟಜಾತಿಗೆ, ಕೆಲವನ್ನು ಪರಿಶಿಷ್ಟ ಪಂಗಡಕ್ಕೆ ಮತ್ತು ಉಳಿದವುಗಳನ್ನು ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳೆಂದು ಪರಿಗಣಿಸಿ ಹಿಂದುಳಿದ ವರ್ಗಗಳಿಗೆ ಸೇರಿಸಿದ್ದಾರೆ. ಈ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಗಣನೆಗೆ ತೆಗೆದುಕೊಂಡರೆ ಕರ್ನಾಟದಲ್ಲಿ ಬುಡಕಟ್ಟುಗಳ ಅಧ್ಯಯನ ಅಷ್ಟಾಗಿ ನಡೆದಿಲ್ಲ."[೪] ಬುಡಕಟ್ಟುಗಳ ಸಾಂಸ್ಕೃತಿಕ ಅಧ್ಯಯನ ಕುರಿತಂತೆ ಇಂಗ್ಲೀಷಿನಲ್ಲಿ ಪ್ರಕಟವಾಗಿರುವಷ್ಟು ಕೃತಿಗಳು ಕನ್ನಡದಲ್ಲಿ ಪ್ರಕಟವಾಗಲಿಲ್ಲ. ಇದಕ್ಕೆ ಸರ್ಕಾರಿ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹೊಂದಿರುವ ಅನಾಸಕ್ತಿಯೆ ಕಾರಣ. "ಎ.ಎ.ಡಿ. ಲೂಯಿಜ್ ಅವರು Tribes of Mysore ಎಂಬ ತಮ್ಮ ಕೃತಿಯಲ್ಲಿ ಮೈಸೂರು ದೇಶದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ. ಭಾರತ ಸರ್ಕಾರ ಮೈಸೂರು ರಾಜ್ಯದಲ್ಲಿ ೬೩ ಪರಿಶಿಷ್ಟ ಬುಡಕಟ್ಟುಗಳನ್ನು ಮಾನ್ಯ ಮಾಡಿದೆ."[೫] ಆದರೆ ಭಾರತದ ಯಾವುದೇ ಒಂದು ಜಾತಿ ಅಥವಾ ಜನಾಂಗ ಪರಿಶಿಷ್ಟ ಬುಡಕಟ್ಟಿನ ಮಾನ್ಯತೆ ಪಡೆಯಬೇಕಾದರೆ ಭಾರತದ ಸಂವಿಧಾನದ ೩೪೨ನೆಯ ನಿಯಮದ ಪ್ರಕಾರ ಅದು ರಾಷ್ಟ್ರಾಧ್ಯಕ್ಷರಿಂದ ಮೊದಲು ಸೂಚಿತವಾಗಿ ನಂತರ ಸಂಸತ್ತಿನಲ್ಲಿ ಒಪ್ಪಿತವಾಗಬೇಕು.ಭಾರತ ಸರ್ಕಾರ 'ಪರಿಶಿಷ್ಟ ಬುಡಕಟ್ಟು' ಎಂದು ಗುರುತಿಸುವಾಗ ಆ ಜನಾಂಗದ ಗುಣಲಕ್ಷಣ ಮತ್ತು ಆರ್ಥಿಕ ಸ್ಥಿತಿಗತಿಗಳ ಆಧಾರದ ಮೇಲೆಯೇ 'ಪರಿಶಿಷ್ಟ ವರ್ಗಗಳ' ಪಟ್ಟಿಮಾಡುತ್ತದೆ. ಈ ಕಾರಣದಿಂದಾಗಿ ಭಾರತದ ಕೆಲವು 'ಬುಡಕಟ್ಟುಗಳು' ಪರಿಶಿಷ್ಟ ಬುಡಕಟ್ಟುಗಳ ಮಾನ್ಯತೆ ಪಡೆಯದೆ ಹೋಗಬಹುದು. ಆದ್ದರಿಂದ ಕರ್ನಾಟಕದ ಪ್ರಮುಖ ಎರಡು ಬುಡಕಟ್ಟುಗಳಾದ 'ಮ್ಯಾಸಬೇಡರು' ಪರಿಶಿಷ್ಟ ಬುಡಕಟ್ಟುಗಳಲ್ಲಿ ಬಂದರೆ, 'ಕಾಡುಗೊಲ್ಲರು' ಹಿಂದುಳಿದ ವರ್ಗಗಳಲ್ಲಿ, ಅರೆ ಅಲೆಮಾರಿ ಬುಡಕಟ್ಟುಗಳ ವರ್ಗಕ್ಕೆ ಸೇರಿದ್ದಾರೆ. ಒಂದು ಬುಡಕಟ್ಟಿಗೆ 'ಪರಿಶಿಷ್ಟ ಪಂಗಡಗಳ' ಮಾನ್ಯತೆ ಕೊಟ್ಟು; ಇನ್ನೊಂದು ಬುಡಕಟ್ಟಿಗೆ 'ಹಿಂದುಳಿದ ವರ್ಗಗಳ' ಮಾನ್ಯತೆ ಕೊಟ್ಟಿರುವ ಸರ್ಕಾರದ ಈ ದ್ವಂದ್ವನೀತಿ ಸರಿಯಲ್ಲ. ಏಕೆಂದರೆ 'ಮ್ಯಾಸಬೇಡರ' ಎಲ್ಲ ಗುಣಲಕ್ಷಣಗಳನ್ನು ಹೊಂದಿದ "ಕಾಡುಗೊಲ್ಲ ಬುಡಕಟ್ಟು" ಜನಾಂಗವನ್ನೂ ಕೂಡ 'ಪರಿಶಿಷ್ಟ ಪಂಗಡ'ಗಳ ಪಟ್ಟಿಯಲ್ಲಿ ಸರ್ಕಾರ ಸೇರಿಸಬೇಕಾಗಿತ್ತು.

ಕರ್ನಾಟಕದಲ್ಲಿ ಇಲ್ಲಿಯವರೆಗೆ ನಡೆದಿರುವ ಬುಡಕಟ್ಟುಗಳ ಅಧ್ಯಯನ ಕ್ರಮವನ್ನು ಅವಲೋಕಿಸಿದರೆ ಪ್ರಾರಂಭದ ದಿನಗಳಲ್ಲಿ ಹೇಳಿಕೊಳ್ಳುವಂತ ಅಧ್ಯಯನಗಳು ನಡೆಯದಿದ್ದರೂ ನಡೆದಿರುವಷ್ಟು ಅಧ್ಯಯನ ಮುಂದಿನ ಸಂಶೋಧಕರಿಗೆ ಮಾರ್ಗಸೂಚಿಗಳಾಗಿವೆ. ಮೊಟ್ಟ ಮೊದಲು ದೇಶ ಮತ್ತು ವಿದೇಶಗಳ ವಿದ್ವಾಂಸರುಗಳಿಂದ ಕರ್ನಾಟಕದ ಬುಡಕಟ್ಟಗಳ ಅಧ್ಯಯನ ನಡೆದಿದ್ದವು. ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ 'Caste and tribes of southern India' ಎಂಬ ಕೃತಿಯು ದಕ್ಷಿಣ ಭಾರತದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ೧೯೨೭-೧೯೩೫ರಲ್ಲಿ ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ 'The Mysore tribes and castes' ಎಂಬ

ಕೃತಿಗಳು ಬುಡಕಟ್ಟು ಅಧ್ಯಯನದ ಮಹತ್ವ ಕೊಡುಗೆಗಾಳಗಿವೆ. ೧೯೨೬ರಲ್ಲಿ ಸೈಯದ್ ಸಿರಾಜ್-ಉಲ್-ಹುಸೇನ್ ಅವರ 'The caste and tribes of Nizam's Daminion' ಎಂಬ ಗ್ರಂಥ ಹೈದರಾಬಾದ್ ಕರ್ನಾಟಕದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಪರಿಚಯವಿದೆ. ಎ.ಎ.ಡಿ.ಲೂಯಿಸ್ ಅವರು ೧೯೬೩ರಲ್ಲಿ 'Tribes of Mysore' ಎಂಬ ಕೃತಿಯಲ್ಲಿ ಮೈಸೂರು ರಾಜ್ಯದಲ್ಲಿರುವ ೨೭ ಬುಡಕಟ್ಟುಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಗಳನ್ನು ಕೊಟ್ಟಿದ್ದಾರೆ. ೧೯೭೫ರಲ್ಲಿ ಎಲ್.ಜಿ.ಹಾವನೂರು ಅವರ 'Karnataka Backward class commission report'ದಲ್ಲಿ ಕರ್ನಾಟಕದ ವಿವಿಧ ಬುಡಕಟ್ಟುಗಳ ಮಾಹಿತಿಯಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಐ.ಬಿ..ಹೆಚ್. ಪ್ರಕಾಶನ ಮತ್ತು ಮೈಸೂರಿನ ಭಾರತೀಯ ಸರ್ವೇಕ್ಷಣ ಸಂಸ್ಥೆಯ ಮಾನವ ವಿಜ್ಞಾನಿಗಳು ಕರ್ನಾಟಕದ ವಿವಿಧ ಬುಡಕಟ್ಟುಗಳ ಕುರಿತು ಅನೇಕ ಸಣ್ಣ-ಪುಟ್ಟ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟುಗಳ ಅಧ್ಯಯನಕ್ಕಾಗಿ ವಿಶೇಷ ವಿಭಾಗಗಳು ಇಲ್ಲದಿದ್ದರೂ ಇತ್ತೀಚೆಗೆ ೧೯೯೪ರಿಂದ ಕನ್ನಡ ವಿಶ್ವವಿದ್ಯಾಲಯ-ಹಂಪಿಯಲ್ಲಿ "ಬುಡಕಟ್ಟು ಅಧ್ಯಯನ ವಿಭಾಗ" ಅಸ್ತಿತ್ವಕ್ಕೆ ಬಂದಿದೆ. ಪ್ರಸ್ತುತ ಈ ವಿಭಾಗದಲ್ಲಿ ಸುಮಾರು ಮೂವತ್ತು ಜನ ವಿದ್ಯಾರ್ಥಿಗಳು ಅಧ್ಯಯನ ಕೈಗೊಂಡಿದ್ದಾರೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಬುಡಕಟ್ಟು ಅಧ್ಯಯನಗಳಿಗೆ ಡಾಕ್ಟರೇಟ್ ಪದವಿ ದೊರೆತು ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಬುಡಕಟ್ಟು ಜನಾಂಗಗಳನ್ನು ಕುರಿತು ಅಧ್ಯಯನ ಮಾಡಿದ ಪ್ರಕಟಿತ ಮತ್ತು ಅಪ್ರಕಟಿತ ಕೆಲವೊಂದು ಪಿಎಚ್.ಡಿ. ಮಹಾ ಪ್ರಬಂಧಗಳು ಮತ್ತು ಸಂಶೋಧಕರ ಹೆಸರುಗಳನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ.

೧. ಕಾಡುಗೊಲ್ಲರ ಜಾನಪದ : ಒಂದು ಅಧ್ಯಯನ -ಡಾ. ಕಾಳೇಗೌಡನಾಗವಾರ

೨. ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು -ಡಾ. ತೀ.ನಂ.ಶಂಕರನಾರಾಯಣ

೩. ಬೇಡ ನಾಯಕರು -ಡಾ. ಕೃಷ್ಣಮೂರ್ತಿ ಹನೂರು

೪. ಮ್ಯಾಸ ನಾಯಕರು : ಒಂದು ಜನಾಂಗಿಕ ಅಧ್ಯಯನ - ಡಾ. ಕರಿಶೆಟ್ಟಿ ರುದ್ರಪ್ಪ

೫. ಬೀದರ ಜಿಲ್ಲೆಯ ಗೊಂಡ ಆದಿವಾಸಿ ಸಮುದಾಯ : ಒಂದು ಸಮಾಜಶಾಸ್ತ್ರೀಯ ಅಧ್ಯಯನ
- ಡಾ. ಕೆ.ಎಂ.ಮೈತ್ರಿ

೬. ಬುಡುಬುಡುಕೆಯವರು : ಒಂದು ಅಧ್ಯಯನ -ಡಾ. ಬಿ.ಎಸ್.ಪಮ್ಮಾರ

೭. ಸುಡುಗಾಡು ಸಿದ್ದರು : ಒಂದು ಸಾಂಸ್ಕೃತಿಕ ಅಧ್ಯಯನ -ಡಾ. ಟಿ.ಎಂ. ಭಾಸ್ಕರ್

೮. ಕರ್ನಾಟಕದ ಹೆಳವರು : ಒಂದು ಅಧ್ಯಯನ (ಜಾನಪದೀಯ)-ಡಾ. ಹರಿಲಾಲ್ ಕೆ.ಪವಾರ್

೯. ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ -ಡಾ. ನಿಂಗಣ್ಣ ಸಣ್ಣಕ್ಕಿ

೧೦. ಎತ್ತಪ್ಪ ಜುಂಜಪ್ಪ : ಒಂದು ಅಧ್ಯಯನ -ಡಾ. ಪಿ.ಬಿ.ಶಿವಣ್ಣ

೧೧. ಕರ್ನಾಟಕದ ಲಂಬಾಣಿಗಳು : ಒಂದು ಸಾಂಸ್ಕೃತಿಕ ಅಧ್ಯಯನ-ಡಾ. ಪಿ.ಕೆ.ಖಂಡೋಬಾ

೧೨. ಹಾಲಕ್ಕಿ ಸಮಾಜ : ಒಂದು ಅಧ್ಯಯನ -ಡಾ. ಗೋಪಾಲಕೃಷ್ಣ ಹೆಗಡೆ

ಮೇಲ್ಕಂಡ ಪ್ರಬಂಧಗಳ ಜೊತೆಗೆ ಅವರವರ ಜಾತಿ ಮತ್ತು ಜನಾಂಗಕ್ಕೆ ಸಂಬಂಧಿಸಿದ ಕೆಲವೊಂದು ಪತ್ರಿಕೆಗಳು ಕೂಡ 'ಬುಡಕಟ್ಟು ಜನಾಂಗದ' ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡುತ್ತಿವೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು 'ಉಪಸಂಸ್ಕೃತಿಗಳ' ಅಧ್ಯಯನ ಎಂಬ ವಿಶೇಷ ಯೋಜನೆಯ ಅಡಿಯಲ್ಲಿ, ಬುಡಕಟ್ಟುಗಳ ಉಪ ಸಂಸ್ಕೃತಿಯನ್ನು ಕುರಿತು ಸುಮಾರು ೩೬ ಪುಸ್ತಕಗಳನ್ನು ಪ್ರಕಟಿಸಿದೆ. ಬುಡಕಟ್ಟುಗಳ ಕುರಿತು ಅಧ್ಯಯನ ಮಾಡುವ ಸಂಶೋಧಕರು ಅಗತ್ಯವಾಗಿ ಈ ಎಲ್ಲಾ ಪುಸ್ತಕಗಳನ್ನು ನೋಡಲೇಬೇಕಾಗುತ್ತದೆ.

೪.೧. ಭಾರತದಲ್ಲಿ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು

ಭಾರತದಲ್ಲಿ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು ತುಂಬಾ ಶೋಚನೀಯವಾಗಿವೆ. ಅತಿವೃಷ್ಟಿ, ಅನಾವೃಷ್ಟಿ, ಸೂರ್ಯನ ಬೆಳಕು ಕೂಡ ಅಪರೂಪವಾಗಿರುವ, ಗಾಳಿ ಬೆಳಕಿನ ಕೊರತೆ, ಕಾಡು ಪ್ರಾಣಿ ಮತ್ತು ಪ್ರವಾಹಕ್ಕೆ ಬಲಿ ಮುಂತಾದ ನೈಸರ್ಗಿಕ ದುರಂತಕ್ಕೆ ಆದಿವಾಸಿಗಳು ಒಳಗಾಗುತ್ತಿದ್ದಾರೆ. ಮೂಢನಂಬಿಕೆ, ಬಾಲ್ಯವಿವಾಹ, ದೇವದಾಸಿ ಪದ್ಧತಿ, ಶಿಶುಹತ್ಯೆ, ನರಬಲಿ, ಪ್ರಾಣಿಬಲಿ ಮುಂತಾದ ಸಾಮಾಜಿಕ ಸಮಸ್ಯೆಗಳು ಇನ್ನೂ ಜೀವಂತವಾಗಿವೆ. ಕಡಿಮೆ ಉತ್ಪಾದನೆ, ದುಂದುವೆಚ್ಚ, ಯುವತಿಯರ ಮಾರಾಟ, ಶ್ರೀಮಂತರಿಂದ ಶೋಷಣೆ, ಉಪಜೀವನಕ್ಕಾಗಿ ಕೊಲೆ, ಸುಲಿಗೆ, ದರೋಡೆ ಮುಂತಾದ ಅಪರಾಧ ಕೃತ್ಯಗಳಿಂದ ಬದುಕನ್ನು ಸಾಗಿಸುವುದರಿಂದ ಅವರ ಆರ್ಥಿಕ ಜೀವನ ಕಷ್ಟಕರವಾಗಿದೆ. ಬೆಟ್ಟ, ಗುಡ್ಡ, ಕೊರಕಲು, ಅರಣ್ಯ ಪ್ರದೇಶ ಮುಂತಾದ ದುರ್ಗಮ ಪ್ರದೇಶಗಳಲ್ಲಿ ವಾಸಿಸುವ ಆದಿವಾಸಿಗಳಿಗೆ ಸಾರಿಗೆ ಸಂಪರ್ಕಗಳ ಕೊರತೆಯಿಂದ ನಾಗರೀಕ ಜನರ ಸಂಪರ್ಕವೇ ಇರಲಾರದು.ಅವರ ರೀತಿ ನೀತಿ, ಆಹಾರ, ಉಡುಗೆ ತೊಡುಗೆ, ರಾಜಕೀಯ, ಆರ್ಥಿಕ ಚಟುವಟಿಕೆಗಳ ಮೇಲೆ ಆಧುನಿಕ ಜನಾಂಗದ ಪರಿಣಾಮ ವಿರಲಾರದು.

ಚತುರ್ವರ್ಣ ಮತ್ತು ಜಾತಿ ಪದ್ಧತಿಯಿಂದ ಬೇರ್ಪಟ್ಟಿರುವ ಆದಿವಾಸಿ ಜನಾಂಗದ ಮೇಲೆ ಹಿಂದೂ ಮತ್ತು ಕ್ರೈಸ್ತ ಧರ್ಮಗಳ,ಪ್ರಭಾವದಿಂದಲೂ ಅವರ ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳು ಕಂಡು ಬಂದವು. ಹಲವು ಸಂಸ್ಕೃತಿಗಳ ಪ್ರಭಾವ ಮತ್ತು ಒತ್ತಡದಿಂದ ಆದಿವಾಸಿಗಳು ಸಾಮಾಜಿಕ ಒಗ್ಗಟ್ಟು ಮತ್ತು ಐಕ್ಯತೆಗಳು ನಾಶವಾದವು. ೧೯ನೇ ಶತಮಾನದಲ್ಲಿ ಇಂಗ್ಲೆಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಭಾರತಕ್ಕೆ ಬಂದ ಪಾದ್ರಿ ವೆರಿಯರ್ ಎಲ್ವಿನ್ ಬುಡಕಟ್ಟುಗಳ ಅಧ್ಯಯನದಲ್ಲಿ ತೊಡಗಿ ನಂತರ ತನ್ನ ಧರ್ಮದ ಪ್ರಚಾರ ಕಾರ್ಯವನ್ನೇ ಕೈ ಬಿಟ್ಟಂಥ ವ್ಯಕ್ತಿ, ಮುಂದೆ ಆದಿವಾಸಿಗಳ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಕೊನೆಗೆ ಗೊಂಡರ ಗಿರಿಜನ ಕನ್ಯೆ 'ಲೀಲಾ'ಳನ್ನೇ ವಿವಾಹ ಮಾಡಿಕೊಂಡ. ಆದಿವಾಸಿಗಳಿಗೆ ನಾಗರೀಕತೆಯ ಪ್ರಭಾವ ಉಂಟುಮಾಡುವ ಅಥವಾ ಹಿಂದೂ ಸಂಸ್ಕೃತಿಯೊಡನೆ ಗಿರಿಜನರ ಸಂಸ್ಕೃತಿಯನ್ನು ವಿಲೀನಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳನ್ನು ವೆರಿಯರ್ ಎಲ್ವಿನ ಒಪ್ಪಲಿಲ್ಲ.

ಭಾರತದ ಬುಡಕಟ್ಟು ಜನಾಂಗದ ಸ್ಥಿತಿಗತಿಗಳು ಕಾಲದಿಂದ ಕಾಲಕ್ಕೆ ನಿರಂತರವಾಗಿ ಪರಿವರ್ತನೆ ಹೊಂದುತ್ತಲೇ ಬಂದಿವೆ. ದೇಶದ ಸಂಪತ್ತನ್ನು ದೋಚಿಕೊಳ್ಳಲು ಪ್ರಯತ್ನಿಸುತ್ತಿದ್ದ ಬ್ರಿಟಿಷರಿಗೆ, ಆದಿವಾಸಿಗಳೊಂದಿಗೆ ನಿರಂತರ ಘರ್ಷಣೆ ಮಾಡಬೇಕಾದ ಪ್ರಸಂಗಗಳು ಉಂಟಾದವು. ಕೆಲವೊಂದು ಆದಿವಾಸಿಗಳ ನೆಲೆಗಳಿಗೆ ಕ್ರೈಸ್ತ ಪಾದ್ರಿಗಳನ್ನು ಕಳುಹಿಸಿ, ಧರ್ಮ ಪ್ರಚಾರ ಮಾಡುವ ನೆಪದಲ್ಲಿ ಬುಡಕಟ್ಟು ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರ ಗೊಳಿಸಲು ಪ್ರಯತ್ನಿಸಿದರು. ತಮ್ಮ ಸಂಸ್ಕೃತಿ ಮತ್ತು ಸಮುದಾಯಗಳಿಗೆ ಧಕ್ಕೆ ಉಂಟುಮಾಡುವ, ಸ್ಥಳಾಂತರಿಸುವ,

ಕಿರುಕುಳ ಕೊಡುವ, ಬ್ರಿಟಿಷರ ನೀತಿ ಮತ್ತು ಧೋರಣೆಗಳಿಗೆ ಪ್ರತಿಭಟಿಸಿದ ಆದಿವಾಸಿಗಳಿಗೆ ವಿನಾಕಾರಣವಾಗಿ ಅಪರಾಧಿಗಳೆಂಬ ಅಪವಾದವನ್ನು ಕೊಟ್ಟರು. ಬ್ರಿಟಿಷರ ಹೊಸ ಹೊಸ ಯೋಜನೆಗಳು ಮತ್ತು ಆಡಳಿತ ನಡೆಸುವ <ಆ ತ್ರ ಕ 'ಬುಡಕಟ್ಟು ಜನರಿಗೆ' ಪ್ರತ್ಯಕ್ಷವಾಗಿ ಇಲವೇ ಅಪ್ರತ್ಯಕ್ಷವಾಗಿ ಅನೇಕ ಸಮಸ್ಯೆಗಳನ್ನು ಹುಟ್ಟಿ ಹಾಕುತ್ತಿದ್ದರು. ಕೆಲವೊಂದು ಆದಿವಾಸಿಗಳು ಹಣದ ಆಸೆಯಿಂದ ದೇಶ ದ್ರೋಹಿ ಕಾರ್ಯಗಳಲ್ಲಿತೊಡಗಿದರು. ಮತ್ತೇ ಕೆಲವರು ಬ್ರಿಟಿಷ ಸೈನ್ಯ ಪಡೆಯಲ್ಲಿ ಸೇರಿಕೊಂಡು ನಮ್ಮ ದೇಶದ ವಿರುದ್ಧವೇ ಕದನರಂಗಕ್ಕಿಳಿದು ದೇಶ ದ್ರೋಹಿಗಳಾದರು. ಸ್ವತಂತ್ರ ನಂತರ ಆದಿವಾಸಿಗಳ ಕಲ್ಯಾಣ ಕಾರ್ಯಕ್ರಮಗಳ ದೃಷ್ಟಿಯಿಂದ ಭಾರತ ಹಲವು ಉಪಯುಕ್ತ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಆದಿವಾಸಿಗಳು ವಾಸಿಸುವ ಪ್ರದೇಶಗಳಲ್ಲೇ ಶಾಲೆಗಳನ್ನು ತೆಗೆಯುವುದರ ಜೊತೆಗೆ ಅವರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಲವಾರು ಯೋಜನೆಗಳನ್ನು ರೂಪಿಸಲಾಯಿತು. ಆದಿವಾಸಿಗಳ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ "ಆದಿವಾಸಿಗಳ ಸಮಗ್ರ ಅಭಿವೃದ್ಧಿ ಯೋಜನೆ"ಯನ್ನು ಪ್ರಾರಂಭಿಸಲಾಗಿದೆ. ವ್ಯಾಪಾರಿಗಳಿಂದಾಗುವ ಆರ್ಥಿಕ ಶೋಷಣೆ ತಪ್ಪಿಸಲು "ಬೃಹತ್ ಗಾತ್ರದ ವಿವಿದೋದ್ದೇಶ ಸಹಕಾರಿ ಸಂಘ"ಗಳನ್ನು ಸ್ಥಾಪಿಸಲಾಗಿದೆ. ಆರೋಗ್ಯ ಮತ್ತು ನೈರ್ಮಲ್ಯಗಳ ದೃಷ್ಟಿಯಿಂದ ಆದಿವಾಸಿ ಪ್ರದೇಶಗಳಲ್ಲಿಯೇ ಪ್ರಾಥಮಿಕ ಚಿಕಿತ್ಸಾಲಯ ಹಾಗೂ ಸಂಚಾರಿ ಆಸ್ಪತ್ರೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಆದಿವಾಸಿಗಳು ಮುಂದೆ ಬರಲು ಸಾರಿಗೆ ಸಂಪರ್ಕಗಳ ವ್ಯವಸ್ಥೆ ಕಲ್ಪಿಸಿ ಕೊಡಲಾಗಿದೆ.

ಸರಕಾರ ಬುಡಕಟ್ಟು ಜನಾಂಗಗಳ ಪ್ರಗತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಇದಕ್ಕಾಗಿ ಅಪಾರ ಪ್ರಮಾಣದಲ್ಲಿ ಹಣ ಖರ್ಚು ಮಾಡಲಾಗುತ್ತಿದೆ. ಸಂವಿಧಾನದ ೧೫ನೇ ವಿಧಿಯ ಪ್ರಕಾರ ಜಾತಿ, ಜನಾಂಗ,ಮತ-ಪಂಥ,ಮತ- ಪಂಗಡಗಳೆಂಬ ಭೇದವಿಲ್ಲದೆ ಆದಿವಾಸಿಗಳನ್ನೊಳಗೊಂಡಂತೆ ದೇಶದ ಎಲ್ಲಾರಿಗೂ ಸಮಾನಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ.

೫. ನಡೆದಿರುವ ಅಧ್ಯಯನಗಳ ಸಮೀಕ್ಷೆ

ವೇದಗಳಷ್ಟೇ ಪ್ರಾಚೀನತೆಯನ್ನೂ ಹೊಂದಿದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಕುರಿತು ನಡೆದಿರುವ ಅಧ್ಯಯನಗಳು ಅತ್ಯಂತ ಕಡಿಮೆಯೆಂದೆ ಹೇಳಬಹುದು. ಮಹಾ ಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳಲ್ಲಿ ಬೇಡ ಮತ್ತು ಗೊಲ್ಲ ಜನಾಂಗಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿಗಳಿವೆ. ನಂತರ "ರಾಮಾಯಣ-ಮಹಾಭಾರತಗಳಲ್ಲದೆ ಇನ್ನಿತರ ಪ್ರಾಚೀನ ಗ್ರಂಥಗಳಾದ ಅರ್ಥಶಾಸ್ತ್ರ, ಸ್ಮೃತಿಗಳು, ಭಾಸ-ಕಾಳಿದಾಸರಂತಹ ಕವಿ ಕೃತಿಗಳು ಕೂಡ ಜನಾಂಗಕ್ಕೆ ಸಂಬಂಧಪಟ್ಟ ವಿವರಗಳನ್ನು ಒದಗಿಸುತ್ತವೆ".[೬] ಅದೇ ರೀತಿ ೧೯೦೯ರಲ್ಲಿ ಎಡ್ಗರ್ ಥರ್‌ಸ್ಟನ್ ಮತ್ತು ಕೆ.ರಂಗಾಚಾರಿ ಅವರ "Caste and tribes of southern India" ಎಂಬ ಏಳು ಸಂಪುಟಗಳ ಕೃತಿಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಕುರಿತು ಸಂಕ್ಷಿಪ್ತ ವಿವರಣೆಗಳಲ್ಲಿ, ಮ್ಯಾಸಬೇಡ ಮತ್ತು ಕಾಡುಗೊಲ್ಲರ ವೃತ್ತಿ ಮತ್ತು ಗುಣಲಕ್ಷಣಗಳಿವೆ. ೧೯೨೮-೧೯೩೫ ರಲ್ಲಿ ಎಚ್.ವಿ.ನಂಜುಂಡಯ್ಯ ಮತ್ತು ಎಲ್.ಕೆ.ಅಯ್ಯರ್ ಅವರ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿರುವ "The Mysore tribes and castes" ಎಂಬ ಕೃತಿಗಳಲ್ಲಿ ಕಾಡುಗೊಲ್ಲ ಮತ್ತು ಮ್ಯಾಸಬೇಡ ಶಬ್ದಗಳ ವಿವರಣೆಗಳಿವೆ. ೧೯೬೭ರಲ್ಲಿ ಪ್ರಕಾಟವಾದ "Chitra

durga District Gazettere"ನಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಂಕ್ಷಿಪ್ತವಾದ ಮಾಹಿತಿಗಳಿವೆ. ೧೯೭೫ ರಲ್ಲಿ ಎಲ್.ಜಿ.ಹಾವನೂರು ಅವರ "Karnataka Backward class commission report"ದಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಹಾಗೂ ಎರಡು ಬುಡಕಟ್ಟುಗಳ ಸಂಕ್ಷಿಪ್ತವಾದ ವಿವರಣೆಗಳಿವೆ.

೧೯೭೮ರಲ್ಲಿ ಬಿ.ರಾಮರಾಜ (ಅನುವಾದ) ಅವರ "ಆಂಧ್ರಪ್ರದೇಶದ ಜಾನಪದ" ಎಂಬ ಕೃತಿಯಲ್ಲಿ ಮ್ಯಾಸಬೇಡರಿಗೆ ಸಂಬಂಧಿಸಿದ ಹಿನ್ನೆಲೆ, ನರಸಿಂಹಸ್ವಾಮಿ ಮತ್ತು ಅಡವಿ ಚೆಂಚರ ಕನ್ಯೆ ಚೆಂಚುಲಕ್ಷ್ಮೀಯ ಮದುವೆ ಸಂಭಾಷಣೆ ತುಂಬಾ ಸೊಗಸಾಗಿ ಚಿತ್ರಿಸಲಾಗಿದೆ. ೧೯೭೮ರಲ್ಲಿ ಎ.ಹಿರಿಯಣ್ಣ (ಸಂ) ಅವರ "ಕಾಡುಗೊಲ್ಲರ ಜನಪದ ಗೀತೆಗಳು" ಎಂಬ ಪುಸ್ತಕ ಕಾಡುಗೊಲ್ಲರ ಧಾರ್ಮಿಕ, ಲೌಕಿಕ ಮತ್ತುಇತರ ಜನಪದ ಗೀತೆಗಳ ಸಂಗ್ರಹವನ್ನು ಒಳಗೊಂಡಿದೆ. ೧೯೮೨ರಲ್ಲಿ ಆರ್.ರಾಜಣ್ಣನವರ "ನಾಯಕ ಜನಾಂಗದ ಇತಿಹಾಸ" ಎಂಬ ಕೃತಿಯಲ್ಲಿ ಬೇಡರನ್ನು ಗುರುತಿಸುವುದು, ಬೇಡರ ಮೂಲ ಮತ್ತು ಪರಂಪರೆ, ಪ್ರಾಥಃಸ್ಮರಣೀಯ ನಾಯಕ ಮಣಿಗಳು, ಧರ್ಮ ಮತ್ತು ಸುವ್ಯವಸ್ಥೆಗೆ ಅರ್ಪಿಸಿಕೊಂಡ ನಾಯಕ ವೀರಾಗ್ರಣಿಗಳ ಕುರಿತು ವಿವರಣೆಗಳಿವೆ. ೧೯೮೨ರಲ್ಲಿ ಎಂ.ಜಿ.ಈಶ್ವರಪ್ಪನವರ "ಮ್ಯಾಸಬೇಡರು" ಎಂಬ ಕೃತಿಯಲ್ಲಿ ಮ್ಯಾಸಬೇಡರ ಪರಿಚಯ, ಮ್ಯಾಸಬೇಡರು ಯಾರು,ಮ್ಯಾಸಬೇಡರ ಹಟ್ಟಿಗಳು ಮತ್ತು ದೇವಸ್ಥಾನಗಳು, ವೇಷ-ಭೂಷಣಗಳು, ಮ್ಯಾಸಬೇಡರ ವೃತ್ತಿ, ಆಹಾರ ಪದ್ಧತಿ, ಧಾರ್ಮಿಕ ವ್ಯವಸ್ಥೆ, ಕುಂಟುಬ ಪದ್ಧತಿ, ಸಂಪ್ರದಾಯಗಳು,ಹಬ್ಬ ಹರಿದಿನಗಳು, ಮುಂಜಿ, ಜನಪದ ಸಾಹಿತ್ಯ,ಸಾಮಾಜಿಕ ಸ್ಥಾನಮಾನ ಮುಂತಾದ ವಿಷಯಗಳನ್ನು ಬಹಳ ಸಂಕ್ಷಿಪ್ತವಾಗಿ ಮತ್ತು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ೧೯೮೨ರಲ್ಲಿ ಡಾ. ತೀ.ನಂ.ಶಂಕರ ನಾರಾಯಣ ಅವರ "ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು" ಎಂಬ ಗ್ರಂಥ ಕಾಡು ಗೊಲ್ಲರ ಸಂಪ್ರದಾಯಗಳು, ನಂಬಿಕೆಗಳು, ಪುರಾಣಗಳು ಮತ್ತು ಐತಿಹ್ಯಗಳ ಕುರಿತು ಸಾಕಷ್ಟು ಮಾಹಿತಿಗಳನ್ನೊಳಗೊಂಡ ಉತ್ತಮ ಕೃತಿಯಾಗಿದೆ. ಇದುವರೆಗೆ ಪ್ರಕಟವಾಗಿರುವ ಕಾಡುಗೊಲ್ಲರ ಎಲ್ಲ ಕೃತಿಗಳಿಗಿಂತ, ಇದು ಉತ್ತಮವಾಗಿದೆ. ೧೯೮೪ರಲ್ಲಿ ಡಾ. ಕಾಳೇಗೌಡ ನಾಗವಾರ ಅವರ "ಕಾಡುಗೊಲ್ಲರ ಜಾನಪದ-ಒಂದು ಅಧ್ಯಯನ" ಎಂಬ ಪಿಎಚ್.ಡಿ. ಮಹಾಪ್ರಬಂಧ ಕಾಡುಗೊಲ್ಲರ ಜಾನಪದ ಕ್ಷೇತ್ರದ ವಿವರಣೆಗಳನ್ನು ಒಳಗೊಂಡ ಮಹಾಪ್ರಬಂಧವಾಗಿದೆ. ೧೯೮೪ರಲ್ಲಿ ಬಿ.ಎಸ್.ಶ್ರೀನಿವಾಸನಾಯಕ ಅವರ "ಚಿತ್ರದುರ್ಗದ ಕಾಮಗೇತಿ ಅರಸರು" ಎಂಬ ಪುಸ್ತಕದಲ್ಲಿ ಚಿತ್ರದುರ್ಗ ಅರಸು ಮನೆತನಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳು ಮತ್ತುಇತಿಹಾಸವನ್ನು ಒಳಗೊಂಡ ಉಪಯುಕ್ತ ಕೃತಿಯಾಗಿದೆ. ೧೯೮೭ರಲ್ಲಿ ಹೆಚ್.ವಿ. ವೀರನಾಯಕ ಅವರ "ಕ್ಷಾತ್ರಾಂಶ ಪ್ರಬೋಧ" ಎಂಬ ಪುಸ್ತಕದಲ್ಲಿ ವಾಲ್ಮೀಕಿ ನಾಯಕ ಜನಾಂಗದ ಇತಿಹಾಸ ಮತ್ತು ಜನಾಂಗದ ಸ್ಥಿತಿಗತಿಗಳ ವಿವರಣೆ ಅರ್ಥಪೂರ್ಣವಾಗಿದೆ. ೧೯೮೭ರಲ್ಲಿ ಲಕ್ಷ್ಮಣ್ ತೆಲಗಾವಿ(ಸಂ) ಅವರ "ಹರತಿಸಿರಿ" ಎಂಬ ಹೆಚ್.ವಿ.ವೀರನಾಯಕ'ಹರತಿ' ನೆನಪಿನಸಂಪುಟದ ಒಟ್ಟು ೬೮ ಲೇಖನಗಳಲ್ಲಿ ಕೆಲವೊಂದು ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಉಪಯಕ್ತವಾದ ಲೇಖನಗಳಿವೆ. ೧೯೮೮ರಲ್ಲಿ ಬಿ.ವಿ.ನಾಗಾರಾಜು ಅವರ "ಗೊಲ್ಲರಹಟ್ಟಿ" ಎಂಬ ಕೃತಿ ಕಾಡುಗೊಲ್ಲರಿಗೆ ಸಂಬಂಧಿಸಿದ ಸಾಮಾಜಿಕ, ಆರ್ಥಿಕ, ಶಿಕ್ಷಣ, ಸಾಂಸ್ಕೃತಿಕ ಪರಂಪರೆ ಮತ್ತು ಪ್ರಗತಿ ಕುರಿತು ವಿವರವಾಗಿ ಮತ್ತು ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ೧೯೯೧ರಲ್ಲಿ ಟಿ.ಗಿರಿಜ ಅವರ "ಚಿತ್ರದುರ್ಗ ಜಿಲ್ಲಾ ದರ್ಶಿನಿ" ಎಂಬ ಪುಸ್ತಕದಲ್ಲಿ ಚಿತ್ರದುರ್ಗ

ಜಿಲ್ಲೆಯಲ್ಲಿ ಬರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಸ್ಥಳನಾಮಗಳ ಬಗ್ಗೆ ಸಂಕ್ಷಿಪ್ತವಾದ ಮಾಹಿತಿಯಿದೆ. ೧೯೯೩ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಉಪ ಸಂಸ್ಕೃತಿ ಅಧ್ಯಯನ ಮಾಲೆ ಅಡಿಯಲ್ಲಿ ಡಾ. ಕೃಷ್ಣಮೂರ್ತಿ ಹನೂರು ಅವರು ಬರೆದ "ಮ್ಯಾಸಬೇಡರ ಸಂಸ್ಕೃತಿ" ಎಂಬ ಪುಸ್ತಕ ತುಂಬ ಸೊಗಸಾಗಿ ಮೂಡಿ ಬಂದಿದೆ. ಈ ಕೃತಿಯಲ್ಲಿ ಮ್ಯಾಸಬೇಡರ ಹಿನ್ನಲೆ, ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಆಚರಣೆ ಮತ್ತು ಕಲೆ, ಭಾಷೆ ಮತ್ತು ಸಾಹಿತ್ಯ, ಪ್ರದರ್ಶನಾತ್ಮಕ ಕಲೆಗಳು, ಕ್ರೀಡೆಗಳು ಮತ್ತು ಸಾಮಾಜಿಕ ಪರಿವರ್ತನೆ ಮುಂತಾದ ಅಂಶಗಳನ್ನು ವಿವರವಾಗಿ ಕೊಟ್ಟಿದ್ದಾರೆ. ಸಂಪೂರ್ಣ ಕ್ಷೇತ್ರ ಕಾರ್ಯವನ್ನು ಆಧರಿಸಿ ರಚಿಸಿದ ಈ ಕೃತಿ ಮ್ಯಾಸಬೇಡರ ಅಧ್ಯಯನಕ್ಕೆ ತುಂಬ ಉಪಯುಕ್ತವಾಗಿದೆ. ಅದೇ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩ರಲ್ಲಿ ಪ್ರಕಟಿಸಿದ ಪ್ರಹ್ಲಾದ ಬೆಟಗೇರಿ ಅವರ "ಅಡವಿ ಚೆಂಚರ ಸಂಸ್ಕೃತಿ" ಎಂಬ ಕೃತಿಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮೂಲಕ್ಕೆ ಸಂಬಂಧಿಸಿದ ಒಂದೆರೆಡು ಘಟನೆಗಳಿವೆ. ೧೯೯೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಡಾ.ಕರಿಶೆಟ್ಟಿರುದ್ರಪ್ಪ ಅವರ "ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ" ಎಂಬ ಕೃತಿಯಲ್ಲಿ ಮ್ಯಾಸಬೇಡರ ಕೌಟುಂಬಿಕ, ಸಾಮಾಜಿಕ, ಧಾರ್ಮಿಕ, ಮೊದಲಾದ ಉಪಯುಕ್ತ ಮಾಹಿತಿಯನ್ನು ಒಳಗೊಂಡಿದೆ.

೧೯೯೭ರಲ್ಲಿ ಸಿ.ಸದ್ಯೋಜಾತ ಮೂರ್ತಿ ಅವರ "ವಿಭೂತಿ ಪುರುಷರು" ಎಂಬ ಕೃತಿಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಗೋಸಿಕೆರೆ ಸಾರ್ವಾಡೀಶ್ವರ ಸ್ವಾಮಿಗಳ ನೇತೃತ್ವದಲ್ಲಿ, ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಅನೇಕ ಐತಿಹಾಸಿಕ ಘಟನೆಗಳನ್ನು ವಿವರಿಸಲಾಗಿದೆ.೧೯೯೭ ರಲ್ಲಿ ಡಾ.ಪಿ.ಬಿ.ಶಿವಣ್ಣನವರು "ಎತ್ತಪ್ಪ ಜುಂಜಪ್ಪ ಒಂದು ಅಧ್ಯಯನ" ಎಂಬ ಪಿಎಚ್.ಡಿ.ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ ಕಾಡುಗೊಲ್ಲರ ಇಬ್ಬರು ಸಾಂಸ್ಕೃತಿಕ ವೀರರಾದ ಎತ್ತಪ್ಪ ಮತ್ತು ಜುಂಜಪ್ಪ ಹಾಗೂ ಕಾಡುಗೊಲ್ಲರ ವಿವರಣೆಗಳನ್ನೊಳಗೊಂಡ ಉತ್ತಮ ಪ್ರಬಂಧವಾಗಿದೆ. ೧೯೯೯ರಲ್ಲಿ ವಿರೂಪಾಕ್ಷಿ ಪೂಜಾರಹಳ್ಳಿ ಅವರ "ಗಾದರಿ ಪಾಲನಾಯಕ" ಎಂಬ ಕೃತಿಯಲ್ಲಿ ಮ್ಯಾಸಬೇಡರ ಸಾಂಸ್ಕೃತಿಕ ವೀರ ಗಾದರಿ ಪಾಲನಾಯಕನ ಹಿನ್ನೆಲೆ, ಜನಪದ ಕತೆ, ಮತ್ತು ಮ್ಯಾಸಬೇಡರಿಗೆ ಸಂಬಂಧಿಸಿದ ಕೆಲವೊಂದು ವಿವರಣೆಗಳನ್ನು ಕೊಟ್ಟಿದ್ದಾರೆ. ೨೦೦೦ರಲ್ಲಿ ಡಾ.ಕೆ.ಎಂ.ಮೈತ್ರಿ (ಸಂ) ಅವರ "ಕೃಷ್ಣಗೊಲ್ಲರ ಕಥನ ಕಾವ್ಯಗಳು" ಎಂಬ ಕೃತಿಯಲ್ಲಿ ತಾಳಿಕೆರೆ, ಬಂಜಿಗೆರೆ, ಮತ್ತು ಕಸ್ತೂರಿ ತಿಮ್ಮನಹಳ್ಳಿಯ ಕಾಡುಗೊಲ್ಲರಿಂದ ಸಂಗ್ರಹಿತ ಕಾವ್ಯ ಮತ್ತು ಪ್ರಸ್ತಾವನೆಯಲ್ಲಿ ಕಾಡುಗೊಲ್ಲ ಮತ್ತು ಮ್ಯಾಸ ಬೇಡರಿಗೆ ಸಂಬಂಧಿಸಿದ ವಿವರಣೆಗಳು ಅರ್ಥಪೂರ್ಣವಾಗಿವೆ. ೨೦೦೦ರಲ್ಲಿ ಎಂ.ಪಿ.ವೀಣಾ ಅವರ "ಮನೆ ಸಮಾಜ ಮತ್ತು ಸಂಸ್ಕೃತಿ" ಎಂಬ ಪುಸ್ತಕ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಮತ್ತು ತಿಮ್ಮಲಾಪುರಕ್ಕೆ ಸಂಬಂಧಿಸಿದ 'ಮ್ಯಾಸನಾಯಕರು' ಮತ್ತು 'ಊರುನಾಯಕರು' ಎಂಬ ಬೇಡರ ಎರಡು ಉಪ ಪಂಗಡಗಳ ಸಂಕ್ಷಿಪ್ತ ಮಾಹಿತಿಯನ್ನೊಳಗೊಂಡಿದೆ. ೨೦೦೨ರಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಡಾ.ಕೆ.ಎಂ.ಮೈತ್ರಿ ಅವರ "ಬುಡಕಟ್ಟು ಕುಲಕಸುಬುಗಳು" ಎಂಬ ಕೃತಿಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಕೆಲವೊಂದು ಮಾಹಿತಿಗಳಿವೆ. ೨೦೦೨ರಲ್ಲಿ ಎ.ಎಸ್.ಪ್ರಭಾಕರ (ಸಂ) ಅವರ "ಮ್ಯಾಸಬೇಡರ ಕಥನಗಳು" ಎಂಬ ಕೃತಿಯಲ್ಲಿ ಮ್ಯಾಸಬೇಡರಿಗೆ ಸಂಬಂಧಿಸಿದ ಜನಪದ ಹಾಡುಗಳಿವೆ. ೨೦೦೨ರಲ್ಲಿ ಹರ್ತಿಕೋಟೆ ವೀರೇಂದ್ರಸಿಂಹ-ತೇಜಸ್ವಿ ಕಟ್ಟೀಮನಿ (ಸಂ) ಅವರ "ಘಟ್ಟಿ ಹೊಸಹಳ್ಳಿ ಗಟ್ಟಿಗ" ಎಂಬ ಸಿ.ಮಲೆಸಿದ್ದಪ್ಪ ಅವರ ಸ್ಮರಣ ಸಂಪುಟ

ಕೃತಿಯಲ್ಲಿ ಮ್ಯಾಸಬೇಡರಿಗೆ ಸಂಪಾದಿಸಿದ ಕೆಲವೊಂದು ಉಪಯುಕ್ತ ಲೇಖನಗಳಿವೆ. ಗೋಸಿಕೆರೆ ಶ್ರೀಗುರು ಸಾರ್ವಾಡೇಶ್ವರಸ್ವಾಮಿಗಳ ವಂಶಸ್ಥರಾದ ಶ್ರೀ.ಜಿ.ಎಂ.ಶ್ರೀಶೈಲ ಸ್ವಾಮಿಗಳ ಹತ್ತಿರ ಇರುವ ಹಸ್ತಪ್ರತಿಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ದೇವರು, ಗುಡಿಕಟ್ಟೆ, ಕಟ್ಟೆಮನೆ, ಕುಲಪದ್ಧತಿ, ಬೆಡಗು, ಪೂಜಾರಿ, ದಾಸಯ್ಯ ಮತ್ತು ಧಾರ್ಮಿಕತೆಗೆ ಸಂಬಂಧಿಸಿದ ವಿವರವಾದ ಮಾಹಿತಿಗಳಿವೆ.

ಚಿತ್ರದುರ್ಗದ ಎಂ.ಕೆ.ನಾಯಕ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ವಾಲ್ಮೀಕಿವಾಣಿ"; ಧಾರವಾಡದ ಪರಮೇಶ್ವರಪ್ಪ ಕಟ್ಟೀಮನಿ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ವಾಲ್ಮೀಕಿ ಬಂಧು" ಮತ್ತು ಬೆಂಗಳೂರಿನ ಎಂ.ನರಸಿಂಹಯ್ಯ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ವಾಲ್ಮೀಕಿ ಕರ್ನಾಟಕ" ಎಂಬ ಮೂರು ಕನ್ನಡ ಮಾಸ ಪತ್ರಿಕೆಗಳಲ್ಲಿ ಮ್ಯಾಸಬೇಡರಿಗೆ ಸಂಬಂಧಿಸಿದ ಹಲವು ಉಪಯುಕ್ತ ಲೇಖನಗಳು ಪ್ರಕಟವಾಗುತ್ತಿವೆ.

ಒಟ್ಟಿನಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳು ತೃಪ್ತಿಕರವಾಗಿಲ್ಲ. ಕೆಲವೊಂದು ಪ್ರಬಂಧ, ಪುಸ್ತಕ ಮತ್ತು ಬಿಡಿ ಲೇಖನಗಳು ಈ ಎರಡು ಬುಡಕಟ್ಟುಗಳ ಕುರಿತು ಸಮಗ್ರ ವಿವರಣೆ ಕೊಡಲು ವಿಫಲವಾಗಿವೆ. ಆದ್ದರಿಂದ ಅವರ ಸಮಗ್ರ ಸಂಸ್ಕೃತಿಯನ್ನು ಪರಿಚಯಿಸುವ ದೃಷ್ಟಿಯಿಂದ **ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ** ಎಂಬ ವಿಷಯವನ್ನು ಕೈಗೆತ್ತಿಕೊಂಡು, ಕ್ಷೇತ್ರಕಾರ್ಯದ ಆಧಾರದ ಮೇಲೆ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಕರಿಶೆಟ್ಟಿ ರುದ್ರಪ್ಪ, 'ಮ್ಯಾಸನಾಯಕರು ಒಂದು ಜನಾಂಗಿಕ ಅಧ್ಯಯನ', ೧೯೯೫, ಪುಟ: ೧

೨. ಚ.ನ.ಶಂಕರ್ ರಾವ್, 'ಭಾರತೀಯ ಸಮಾಜ',೧೯೯೧, ಪುಟ: ೩೮೩

೩. ಅದೇ, ಪುಟ:೩೮೪,೩೮೫

೪. ಡಾ. ಬಿ.ಎನ್.ಪಮ್ಮಾರ, 'ಬುಡುಬುಡುಕೆಯವರು ಒಂದು ಅಧ್ಯಯನ', ೧೯೯೪, ಪುಟ:೪

೫. ಡಾ. ತೀ.ನಂ.ಶಂಕರನಾರಾಯಣ, 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು', ೧೯೮೯, ಪುಟ:೧೬

೬. ಡಾ. ಎಂ.ಬಿ.ನೇಗಿನಹಾಳ-ಕರ್ನಾಟಕದ ಬೇಡ ಜನಾಂಗ: ಒಂದು ಪರಿಚಯ (ಲೇಖನ) 'ಹರತಿಸಿರಿ', ೧೯೮೭, ಪುಟ:೩೨೭

ಅಧ್ಯಾಯ - ೨

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಿನ್ನೆಲೆ

೧. ಪದ ನಿಷ್ಪತ್ತಿ

೨. ಮೂಲ ಮತ್ತು ಪರಂಪರೆ

೩. ಪುರಾಣಗಳು ಮತ್ತು ಐತಿಹ್ಯಗಳು

೪. ಸಾಮ್ಯತೆ ಹಾಗೂ ಭಿನ್ನತೆ

೫. ಪ್ರದೇಶ ಮತ್ತು ಜನಸಂಖ್ಯೆ

೨. ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಿನ್ನೆಲೆ

ವೇದಗಳಿಗೂ ಪುರಾತನವಾದ ಇತಿಹಾಸವನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಹೊಂದಿವೆ. ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ 'ಬೇಡ' ಮತ್ತು 'ಗೊಲ್ಲ' ಜನಾಂಗಗಳ ಪ್ರಸ್ತಾಪಗಳಿವೆ. ಅನೇಕ ಕಥೆ, ಪುರಾಣ, ಐತಿಹ್ಯಗಳಲ್ಲಿ ಬೇಡ ಮತ್ತು ಗೊಲ್ಲ ಬುಡಕಟ್ಟುಗಳ ವಿವರಣೆಗಳಿವೆ. ದೇಶದ ಉದ್ದಗಲಕ್ಕೂ ಹರಡಿಕೊಂಡ ಈ ಎರಡು ಬುಡಕಟ್ಟು ಜನಾಂಗ, ಒಂದೊಂದು ರಾಜ್ಯದಲ್ಲಿ ಇವರ ಸಂಸ್ಕೃತಿ ಮತ್ತು ಸಂಪ್ರದಾಯಗಳು ಭಿನ್ನವಾಗಿವೆ. ದ್ರಾವಿಡ ಜನಾಂಗ ಮೂಲದ ಈ ಎರಡು ಬುಡಕಟ್ಟುಗಳು ಬೇರೆ ಬೇರೆಯಾಗಿ ಕಂಡು ಬಂದರೂ ಇವರಲ್ಲಿಯ ಮೂಲ, ಪರಂಪರೆ, ಪುರಾಣಗಳು, ಐತಿಹ್ಯ, ಸಂಪ್ರದಾಯ, ನಂಬಿಕೆ, ಪ್ರದೇಶ ಮತ್ತು ಜನಸಂಖ್ಯೆಗಳಲ್ಲಿ ಪರಸ್ಪರ ಸಾಮ್ಯತೆಗಳಿವೆ.

ಪ್ರಾಚೀನ ಋಷಿ, ಮೂಲ ರಾಮಾಯಣದ ಕರ್ತೃ 'ವಾಲ್ಮೀಕಿ'ಯು ಬೇಡ ಬುಡಕಟ್ಟಿಗೆ ಸೇರಿದವನಾಗಿದ್ದಾನೆ ಎಂಬ ನಂಬಿಕೆಯಿಂದ ಬೇಡರು ತಾವು ವಾಲ್ಮೀಕಿ ಮತಕ್ಕೆ ಸೇರಿದವರೆಂದು; ಕಾಡುಗೊಲ್ಲರು ಸಾಂಪ್ರದಾಯಿಕವಾಗಿ ತಾವು ಭಗವಾನ್ ಶ್ರೀ ಕೃಷ್ಣನ (ಜನನ: ಕ್ರಿ.ಪೂ. ೧೯-೦೧-೩೨೭, ಬುಧವಾರ, ಶ್ರಾವಣ ಕೃಷ್ಣ ಅಷ್ಟಮಿ) ಮೂಲದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಆದರೆ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮೂಲ ನೆಲೆ ಉತ್ತರ ಭಾರತವಾಗಿದೆ. ಮೂಲತಃ ಬೇಟೆ, ಪಶುಪಾಲನೆ ಅಥವಾ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿದ್ದಾಗ, ನಾಗರಿಕ ಜನರ ಸಂಪರ್ಕ ಉಂಟಾಗಿ, ಇವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಸಂಘರ್ಷಗಳು ಉದ್ಭವಿಸಿವೆ. ಆಗ ಬುಡಕಟ್ಟು ಜನಾಂಗದ ಕಂಪಳ ಮಾನ, ಪ್ರಾಣ ಮತ್ತು ಧರ್ಮ ರಕ್ಷಣೆಗಾಗಿ ದಕ್ಷಿಣ ಭಾರತದ ಕಡೆ ವಲಸೆ ಬಂದು, ಆಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ ನೆಲೆಸಿದರು. ಕೆಲವು ಐತಿಹ್ಯಗಳ ಪ್ರಕಾರ ಮುಸ್ಲಿಂ ಆಕ್ರಮಣಕಾರರಿಂದ ಮಾನ, ಪ್ರಾಣ ರಕ್ಷಣೆಗಾಗಿ ವಲಸೆ ಬಂದವರೆಂದು ಹೇಳಿಕೊಂಡರೂ, ಇದರ ಹಿಂದೆ ಭೌಗೋಳಿಕ ದುರಂತಗಳು ಸಂಭವಿಸಿರುವ ಸಾಧ್ಯತೆಗಳಿವೆ. ಒಟ್ಟಿನಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಈ ಎರಡು ಜನಾಂಗದ ಹಿನ್ನೆಲೆಯನ್ನು ವಿವರವಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

೧. ಪದ ನಿಷ್ಪತ್ತಿ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಎಂಬೆರಡೂ ಜನಾಂಗದ 'ರೂಪ' ಅಥವಾ 'ಪದ'ದ ನಿಷ್ಪತ್ತಿ ಅಸ್ಪಷ್ಟವಾಗಿಯೇ ಉಳಿದಿದೆ. ಅನೇಕ ವಿದ್ವಾಂಸರು ಮತ್ತು ಅಧ್ಯಯನಕಾರರು ಕೂಡ 'ಬೇಡ' ಮತ್ತು 'ಗೊಲ್ಲ'

[illegible]

ಎಂಬ ಪದ ನಿಷ್ಪತ್ತಿ ಕುರಿತು ಅಸ್ಪಷ್ಟವಾದ ಅರ್ಥವಿವರಣೆ ಕೊಟ್ಟಿರುವುದರಿಂದ ಮುಂದಿನ ಅಧ್ಯಯನಕಾರರಿಗೆ ಬಹುದೊಡ್ಡ ಕಗ್ಗಂಟಾಗಿ ಪರಿಣಮಿಸಿದೆ. ವೇದಗಳ ಕಾಲದಲ್ಲಿ ಗುಣಕರ್ಮಗಳ ಆಧಾರದ ಮೇಲೆ ವರ್ಣ-ಜಾತಿ-ಪಂಗಡಗಳು ಬೆಳದು ಬಂದಿದ್ದವು. "ವೃತ್ತಿ ಸಿದ್ಧಾಂತವನ್ನು ಬಲವಾಗಿ ಪ್ರತಿಪಾದಿಸಿದ ನೆಸಫೀಲ್ಡ್ ರವರು ವೃತ್ತಿ ಮತ್ತು ಕಾರ್ಯವೊಂದೇ ಜಾತಿ ವ್ಯವಸ್ಥೆಯ ಉಗಮಕ್ಕೆ ಕಾರಣವಾಗಿದೆ" ಎಂದಿದ್ದಾರೆ. ಆದರೆ ಜಾತಿ ಮತ್ತು ಪಂಗಡ ಬೇರೆ ಬೇರೆಯಾಗಿದ್ದರೂ, ವರ್ಣ ಪದ್ಧತಿಯಿಂದಲೇ 'ಬುಡಕಟ್ಟು' ಶಬ್ದೋತ್ಪತ್ತಿಯಾಗಿದೆ. ಈ ಬುಡಕಟ್ಟು ಮೂಲದ 'ಬೇಡ' ಮತ್ತು 'ಗೊಲ್ಲ'ರು ಮೂಲತಃ ಬೇಟೆ ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಅರಣ್ಯವಾಸಿಗಳು. ಆದ್ದರಿಂದ ಇವರ "ವೃತ್ತಿ"ಯ ಆಧಾರದ ಮೇಲೆಯೇ 'ಬೇಡ' ಮತ್ತು 'ಗೊಲ್ಲ' ಎಂಬ ಪದ ನಿಷ್ಪತ್ತಿ ಹುಡುಕಾಡಬೇಕಾಗಿದೆ. ಬೇಡ ಮತ್ತು ಗೊಲ್ಲರ ವೃತ್ತಿಗಳೇ ಅವರ ಜಾತಿ ಪಂಗಡವನ್ನು ಸೂಚಿಸುತ್ತವೆ.

ಕಾಡಾಡಿ ಬದುಕಿನ ಸಂಕೇತವಾಗಿ ಗುಡ್ಡಗಾಡು ಪ್ರದೇಶದ ಸುತ್ತ ಮುತ್ತ ಹಲವಾರು ಹಟ್ಟಿ ಅಥವಾ ಊರುಗಳಲ್ಲಿ ಈಗಲೂ ಬೇಡ ಮತ್ತು ಗೊಲ್ಲ ಜನಾಂಗದವರೇ ಅಧಿಕ ಸಂಖ್ಯೆಯಲ್ಲಿ ನೆಲೆಸಿ ಬೇಟೆ, ಪಶುಪಾಲನೆ ಮತ್ತು ಕೃಷಿ ವೃತ್ತಿಯಲ್ಲಿ ತೊಡಗಿದ್ದಾರೆ. ಬೇಡರ ಮೂಲ ವೃತ್ತಿ ಬೇಟೆ, ನಂತರ ಪಶುಪಾಲನೆಯಾಗಿರುವುದರಿಂದ ಸಾಂಕೇತಿಕವಾಗಿಯಾದರು ಯುಗಾದಿಯ ಹಬ್ಬದ ದಿನ ಬೇಟೆಗೆ ಹೋಗಿ ಬರುವ ಪದ್ಧತಿ ಬೇಡರಲ್ಲಿದೆ. ಗೊಲ್ಲರ ಮೂಲವೃತ್ತಿ ಪಶುಪಾಲನೆ ನಂತರ ಕುರಿ, ಮೇಕೆ, ಕೃಷಿಯಲ್ಲಿ ತೊಡಗಿದವರು. ಗೋ ಸಂಪತ್ತೇ ಗೊಲ್ಲರಿಗೆ ಪ್ರಮುಖ ಆಸ್ತಿ. ಆದ್ದರಿಂದ ಈ ಎರಡೂ ಬುಡಕಟ್ಟುಗಳ ಪ್ರಧಾನ ಮೂಲವೃತ್ತಿ 'ಬೇಟೆ' ಮತ್ತು 'ಪಶುಪಾಲನೆ' ಯಾಗಿರುವುದರಿಂದ, ಬೇಟೆ ಮತ್ತು ಪಶುಪಾಲನೆ ಎಂಬೆರಡು ಪದದ ಹಿನ್ನೆಲೆಯಲ್ಲಿಯೇ 'ಮ್ಯಾಸಬೇಡ' ಮತ್ತು 'ಕಾಡುಗೊಲ್ಲ' ಜನಾಂಗದ ಪದ ನಿಷ್ಪತ್ತಿ ಅಡಗಿದೆ.

೧.೧. ಮ್ಯಾಸಬೇಡ ಪದ ನಿಷ್ಪತ್ತಿ

ಮ್ಯಾಸಬೇಡ ಪದ ನಿಷ್ಪತ್ತಿ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. 'ಬೇಡ' ಎಂಬ ಪದವು 'ವ್ಯಾಧ' ಎಂಬ ಸಂಸ್ಕೃತ ಪದದ ಸಮಾನಾರ್ಥವಾಗಿದೆ. ಬೇಡ ಅಥವಾ ವ್ಯಾಧ ಎಂದರೆ ಬೇಟೆಗಾರ, ಬಿಲ್ಲುಗಾರ, ಶಬರ, ಕಿರಾತ ಮೊದಲಾದ ಅರ್ಥಗಳು ಇವೆ. 'ಮ್ಯಾಸ' ಎಂಬ ಪದವು ಪಶುಪಾಲನೆಯ ಮೂಲದ ಮೇಯಿಸು ಎಂಬ ರೂಪದಿಂದ ಬಂದಿದೆ. ಬೇಟೆ ಮತ್ತು ಪಶುಪಾಲನೆ ಎರಡೂ ವೃತ್ತಿಗಳ ಸಂಕೇತವಾಗಿ "ಮ್ಯಾಸಬೇಡ" ಎಂಬ ಪದ ವ್ಯುತ್ಪತ್ತಿಯಾಗಿದೆ. 'ಬೇಡರಲ್ಲಿಯ ಮ್ಯಾಸಬೇಡರು ಮೂಲತಃ ಬೇಟೆಗಾರರಾಗಿದ್ದು ಕಾಲಾಂತರದಲ್ಲಿ ಮೇಷಪಾಲನೆಗೆ ಒಗ್ಗಿಕೊಂಡು ಮೇಷ (ಮ್ಯಾಸ) ನಾಯಕರಾದರು' ಎಂದು ಹೇಳುತ್ತಾರೆ. ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಬೇಡರು ಪಶುಗಳನ್ನು ಮೇಯಿಸುತ್ತಾ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುತ್ತಿದ್ದುದರಿಂದ ಮೇಸರು ಎಂಬ ಪದವೇ ಮ್ಯಾಸರು ಎಂದಾಗಿದೆ. "ಕೆಲವು ಐತಹ್ಯಗಳ ಪ್ರಕಾರ ಇವರು ರಾಜರಾಗಿದ್ದರಂತೆ. ಮ್ಯಾಸರಾಜರು ಎಂದೇ ಎಲ್ಲರೂ ಇವರನ್ನು ಕರೆಯುತ್ತಿದ್ದರಂತೆ. ಪರಶುರಾಮ ಭೂ ಪ್ರದಕ್ಷಿಣೆ ಮಾಡುತ್ತ ರಾಜರನ್ನೆಲ್ಲ ಕೊಲ್ಲುತ್ತಾನೆ ಎಂದು ಗೊತ್ತಾದಾಕ್ಷಣ ರಾಜರ ವೇಷ ಮರೆಸಿ ಕುರಿ ಹಸುಗಳನ್ನು ಮೇಯಿಸುತ್ತ ಹೊರಟರಂತೆ. ಆವಾಗಿನಿಂದ ಮೇಯಿಸುವವರು, ಮೇಸೋರು, ಮ್ಯಾಸರು ಆದೇವು ಎನ್ನುತ್ತಾರೆ."

ಬೇಟೆ ಹಂತವನ್ನು ದಾಟಿ, ಪಶುಪಾಲನೆ ವೃತ್ತಿ ಕೈಗೊಂಡ ಬೇಡರು ಹುಲ್ಲು ನೀರಿಗಾಗಿ ಸ್ಥಳ ಬದಲಾಯಿಸುತ್ತಿದ್ದುದರಿಂದ ಮೇಯಿಸುವವರು, ಮೇಸುವರು ಎಂಬ ಪದ 'ಮ್ಯಾಸರು' ಎಂದಾಗಿರಬಹುದು. ಕೆಲವು ವಕ್ತೃಗಳ ಪ್ರಕಾರ "ಒಂದು ಕುಟುಂಬದಲ್ಲಿ ಇಬ್ಬರು ಅಣ್ಣ ತಮ್ಮಗಳಿದ್ದರಂತೆ ತಮ್ಮ ದಿನ ನಿತ್ಯ ದನ ಕಾಯಲು ಕಾಡಿಗೆ ಹೋಗುತ್ತಿದ್ದನಂತೆ, ಅಣ್ಣ ಯಜಮಾನ ಮನೆಯಲ್ಲಿರುತ್ತಿದ್ದನಂತೆ. ಒಂದು ದಿನ ಕಾಡಿನಲ್ಲಿ 'ಹಸು' ಕರು ಹಾಕಿತಂತೆ,ಆಗ ತಮ್ಮ ಕರು ಎತ್ತಿಕೊಂಡು ಮುಂದೆ ಹೊರಟರೂ ಹಸು ಹಿಂದೆ ಬರಲಿಲ್ಲವಂತೆ, ಕೊನೆಗೆ ಸಿಟ್ಟು ಬಂದು ಅದರ 'ಮಾಸು'ವನ್ನೇ ತಿಂದು ಮನೆಗೆ ಬಂದು ಅಣ್ಣನಿಗೆ ನಿಜಸಂಗತಿ ತಿಳಿಸಿದನಂತೆ. ಆಗ ಅಣ್ಣ ನೀನು 'ಮಾಸು' ತಿಂದವನು ನಮಗೆ ಬ್ಯಾಡ ಹೋಗು ಅಂದ್ನಂತೆ, ಅಂದಿನಿಂದ ಮನೆ ಬಿಟ್ಟು ಹೋಗಿ ಕಾಡು ಸೇರಿದವನು 'ಮ್ಯಾಸಬೇಡ' ಆದ; ಮನೆಯಲ್ಲೇ ಉಳಿದು ಕೊಂಡವನು 'ಊರುಬೇಡ' ಆದನಂತೆ."

ವಿಜಯನಗರ ಮತ್ತು ಚಿತ್ರದುರ್ಗದ ಅರಸರ ಸೈನ್ಯದಲ್ಲಿ ಮೀಸಲು ಪಡೆಯ ಬೇಡರಿದ್ದರಂತೆ. 'ಈ ಮೀಸಲು ಬೇಡಪಡೆ' ಯೇ ಮುಂದೆ ಮ್ಯಾಸಬೇಡರಾದರು ಎಂದು ಕೆಲವರು ಹೇಳುತ್ತಾರೆ. ಚಿತ್ರದುರ್ಗದ ಮದಕರಿ ನಾಯಕನ ಕಾಲದಲ್ಲಿ ಅರವತ್ತು ಸಾವಿರ ಸೈನಿಕರಲ್ಲಿ ಇಪ್ಪತ್ತು ಸಾವಿರ 'ವೀರ ಬೇಡರ' ಪಡೆಗಳಿದ್ದವು. ಕ್ರಿ.ಶ. ೧೭೭೯ರಲ್ಲಿ ಹೈದರ್ ಅಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡಾಗ, ಈ ಇಪ್ಪತ್ತು ಸಾವಿರ ವೀರಪಡೆ ಯೋಧರಿಂದ ಮುಂದೆ ನಮ್ಮ ಜೀವಗಳಿಗೆ ಅಪಾಯ ತಪ್ಪಿದ್ದಲ್ಲ ಎಂಬುದನ್ನು ಮನಗಂಡ ಹೈದರ್ ಈ "ಇಪ್ಪತ್ತು ಸಾವಿರ ಬೇಡ ಯೋಧರೊಂದಿಗೆ ದೊಡ್ಡ ಮದಕರಿನಾಯಕರನ್ನೂ ಹೈದರ್‌ನು ಸೆರೆ ಹಿಡಿದು ಬಿಕ್ಕಟ್ಟಿನ ಪಹರೆಯೊಂದಿಗೆ ಶ್ರೀರಂಗ ಪಟ್ಟಣಕ್ಕೆ ಸಾಗಿಸಿದನು."[೨] ಆದ್ದರಿಂದ ಇಂತಹ ಮೀಸಲು ಪಡೆಯ ಬೇಡರಿಂದ'ಮೀಸಲು'ಎಂಬ ಪದ'ಮ್ಯಾಸರು'ಎಂದಾಗಿದೆ. ಆದರೆ ಮ್ಯಾಸಬೇಡರು ಬೇಟೆ ಮತ್ತು ಸೈನಿಕ ವೃತ್ತಿಗಿಂತ ಹೆಚ್ಚಾಗಿ ಪಶುಪಾಲಕರಾಗಿದ್ದರಿಂದ 'ಮೇಸರು' ಎಂಬ ಪದವೇ 'ಮ್ಯಾಸರು' ಎಂದಾಗಿದೆ.

೧.೨. ಕಾಡುಗೊಲ್ಲ ಪದ ನಿಷ್ಪತ್ತಿ

ಕಾಡುಗೊಲ್ಲ ಎಂಬ ಪದ 'ಕಾಡು' ಮತ್ತು'ಗೊಲ್ಲ' ಎಂಬೆರಡು ಪದಗಳ ಸಂಯೋಜನೆಯಿಂದ ಕಾಡುಗೊಲ್ಲ ಎಂದಾಗಿದೆ. 'ಕಾಡು' ಎಂಬ ಪದಕ್ಕೆ ಅಡವಿ, ಅರಣ್ಯ, ಕಾನನ, ವನ, ಅನಾಗರೀಕ ಮುಂತಾದ ಅರ್ಥಗಳಿವೆ. ಅದೇ ರೀತಿ 'ಗೊಲ್ಲ' ಎಂಬ ಪದಕ್ಕೆ ಗೋಪಾಲ, ದನಗಾಹಿ, ಗೋವಳ, ದನಕಾಯುವವನು, ಹಾಲು ಮೊಸರು ಮಾರುವವನು ಎಂಬರ್ಥಗಳಿವೆ. ಒಟ್ಟಿನಲ್ಲಿ ಕಾಡುಗೊಲ್ಲ ಎಂದರೆ ಕಾಡಿನಲ್ಲಿ ವಾಸಿಸುವ ಗೊಲ್ಲನೆಂದು ಅರ್ಥ ಬರುತ್ತದೆ. ಕಾಡಾಡಿಗಳಾದ ಗೊಲ್ಲರು ಮೂಲತಃ ಬೇಟೆಗಾರರಾಗಿದ್ದು ಕಾಲಾಂತರದಲ್ಲಿ ಪಶುಗಳ ಪಾಲಕರಾಗಿರುವುದರಿಂದ ಗೊಲ್ಲರೆನಿಸಿಕೊಂಡರು. ಕಾಡಾಡಿ ಗೊಲ್ಲರಿಗೆ 'ಕಾಡುಗೊಲ್ಲರು' 'ಅಡವಿಗೊಲ್ಲರು' 'ಹಟ್ಟಿಗೊಲ್ಲರು' ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. "ಕಾಡುಗೊಲ್ಲ ಎಂಬ ಪದ ಎರಡು ಭಿನ್ನ ಸಂಸ್ಕೃತಿಗಳ, ಭಾಷಿಗರ ಸಂಗಮದ ಸಂಕೇತ. ಇದು ಕಾಡು ಮತ್ತು ಗೊಲ್ಲ ಎಂಬೆರಡು ಶಬ್ದಗಳ ಜೋಡುನುಡಿ. 'ಕಾಡು' ದ್ರಾವಿಡ ಮೂಲದ ಕನ್ನಡಿಗರ ಪದವಾದರೆ 'ಗೊಲ್ಲ' (ಗೋವಲ) ಸಂಸ್ಕೃತ ಮೂಲದ ಆರ್ಯರ ಪದವಾಗಿದೆ. ಸಂಸ್ಕೃತದ 'ಗೋವಲ' ಶಬ್ದದಿಂದ ಕನ್ನಡದ 'ಗೊಲ್ಲ' ಶಬ್ದ ರೂಪಗೊಂಡಿರುವುದು".[೩]

ಸಾಂಪ್ರದಾಯಿಕವಾಗಿ ಕಾಡುಗೊಲ್ಲರು ಪಶುಪಾಲಕರು ಹಾಗೆಯೇ ಹೈನುಗಾರಿಕೆಯಲ್ಲಿ ಶ್ರದ್ಧೆಯುಳ್ಳವರು. ಆದ್ದರಿಂದ "ಗೊಲ್ಲರು ಎಂಬುದಕ್ಕೆ ಅರ್ಥ ಹೇಳುವ ಅವಶ್ಯಕತೆ ಏನಿಲ್ಲ. ಗೋವುಗಳ ಪಾಲಕನೆ ಗೊಲ್ಲ. ಇವರಲ್ಲಿ ಕಾಡು ಮೇಡುಗಳಲ್ಲಿ ಜೀವನ ಸಾಗಿಸುತ್ತಿರುವ ಗೊಲ್ಲರೆಲ್ಲ ಕಾಡುಗೊಲ್ಲರು.ಹಳ್ಳಿ, ಊರು, ಪಟ್ಟಣಗಳಲ್ಲಿ ಜೀವನ ಸಾಗಿಸುತ್ತಿರುವವರು ಬೇರೆ ಯಾರಾಗಲು ಸಾಧ್ಯ. ಅವರೆಲ್ಲ ಊರುಗೊಲ್ಲರು."[೪] ಈ 'ಗೊಲ್ಲ'ರಲ್ಲಿ ಚಿತ್ತಮುತ್ತಿ, ಚಂದಮುತ್ತಿ ಮತ್ತು ರಾಮೇಗೌಡನ ಕುಲದವರು ಎಂಬ ಉಪವರ್ಗಗಳು ಕಂಡು ಬರುತ್ತವೆ. ಕರಡಿ, ಕಲ್ಲಿ, ಕಳ್ಳಿ, ಕಹಳೆ, ಕಂಬಿ, ಒನಕೆ, ಪಲ್ಲೇ ಮೊದಲಾದ ಪದಗಳು ಅವರ ಕುಲದ ಸಂಕೇತಗಳಾಗಿವೆ. ಮೊದಲು ಪಂಗಡಗಳನ್ನು ನೋಡಿ ನಂತರ 'ಕುಲ' ಅಥವಾ 'ಬೆಡಗು' ಗಳನ್ನು ಗುರುತಿಸಿಕೊಳ್ಳುತ್ತಾರೆ.

ಕಾಡುಗೊಲ್ಲರು ತಮ್ಮ ಹಟ್ಟಿಯ ಸುತ್ತ ಜಾಲಿಕಳ್ಳೆ, ಬಾರೆಕಳ್ಳೆ, ತರೇದಕಳ್ಳೆ ಮುಂತಾದ ಸ್ಥಳೀಯವಾಗಿ ಹಟ್ಟಿಯ ಸುತ್ತ ಮುತ್ತ ಸಿಗುವಂತ ಮುಳ್ಳಗಿಡಗಳನ್ನು ಕಡಿದು ಬೇಲಿ ಹಾಕಿಕೊಳ್ಳುತ್ತಾರೆ. ಒಂದು ಹತ್ತಿರ ಮಾತ್ರ ಹಟ್ಟಿ ಹುದಿ ಅಥವಾ ಹೊಳೆ ಬಿಟ್ಟಿರುತ್ತಾರೆ. ಕಾಡುಗೊಲ್ಲರು ತಮ್ಮನ್ನು 'ಹಟ್ಟಿಗೊಲ್ಲರು' ಎಂದೇ ಹೆಚ್ಚು ಗುರುತಿಸಿಕೊಳ್ಳುತ್ತಾರೆ. ಕಾಡುಗೊಲ್ಲರು ಅಥವಾ ಅಡವಿಗೊಲ್ಲರು ಎಂದು ಕರೆದರೆ ಅವರು ಒಪ್ಪುವುದಿಲ್ಲ. ಚಳ್ಳಕೆರೆ ತಾಲ್ಲೂಕು ಸೂರನಹಳ್ಳಿ ನಿವೃತ್ತ ಶಿಕ್ಷಕ ಹಾಗೂ ಹಟ್ಟಿಗೊಲ್ಲರಾದ ಎಂ.ತಿಪ್ಪೀರಯ್ಯನವರು "ನಾವು ಕಾಡುಗೊಲ್ಲರು ಅಲ್ಲ; ಅಡವಿಗೊಲ್ಲರು ಅಲ್ಲ; ನಾವು 'ಹಟ್ಟಿಗೊಲ್ಲರು' ಎಂದು ಹೇಳುತ್ತಾರೆ." ಕಾಡುಗೊಲ್ಲರ ಒಂದು 'ಕುಲ'ವಾದ ಕರಡಿಗೊಲ್ಲರನ್ನು "ಕರಡೇರಗೊಲ್ಲರು" ಎಂದು ಉಚ್ಚಾರಣೆ ಮಾಡಬೇಕೇ ವಿನಃ 'ಕರಡಿಗೊಲ್ಲರು' ಎಂದು ಕರೆಯಬಾರದು,ಎಂದು ಹೊಳಲ್ಕೆರೆ ತಾಲ್ಲೂಕು, ಚಿತ್ರಹಳ್ಳಿಯ ಕರಡೇರಗೊಲ್ಲರ ಗೌಡರು ಜಿ.ಎಸ್.ಹಳ್ಳಪ್ಪನವರು ಹೇಳುತ್ತಾರೆ. ಪ್ರಸ್ತುತ ಕಾಡುಗೊಲ್ಲರನ್ನು ಮತ್ತು ಊರುಗೊಲ್ಲರನ್ನು 'ಯಾದವರು' ಮತ್ತು 'ಕೃಷ್ಣಗೊಲ್ಲರು' ಎಂದು ಕರೆದುಕೊಳ್ಳುತ್ತಾರೆ.ತಾವೆಲ್ಲರೂ ಯಾದವ ಕುಲದವರು, ಶ್ರೀಕೃಷ್ಣನ ವಂಶದವರೆಂದು ಹೇಳಿ ಕೊಳ್ಳುತ್ತಾರೆ.

೨. ಮೂಲ ಮತ್ತು ಪರಂಪರೆ

ಭಾರತದ ಅತ್ಯಂತ ಆದಿಮ ಬುಡಕಟ್ಟುಗಳಲ್ಲಿ 'ಬೇಡ' ಮತ್ತು 'ಗೊಲ್ಲ' ಸಮುದಾಯಗಳು ತನ್ನದೇ ಆದ ಮೂಲ ಮತ್ತು ಪರಂಪರೆಗಳನ್ನು ಹೊಂದಿವೆ. ಈ ಎರಡು ಬುಡಕಟ್ಟುಗಳ ಮೂಲ ಉತ್ತರ ಭಾರತವಾದರೂ ದಕ್ಷಿಣ ಭಾರತಕ್ಕೆ ವಲಸೆ ಬಂದ ಕಾಲ ಮತ್ತು ಕಾರಣಗಳಲ್ಲಿ ಬಹಳ ಅಂತರ ವಿರುವುದರಿಂದ 'ಮ್ಯಾಸಬೇಡ' ಮತ್ತು 'ಕಾಡುಗೊಲ್ಲರ' ಮೂಲ ಮತ್ತು ಪರಂಪರೆ ಕುರಿತು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಬೇಕಾಗಿದೆ.

೨.೧. ಮ್ಯಾಸಬೇಡರ ಮೂಲ ಮತ್ತು ಪರಂಪರೆ

ಮ್ಯಾಸಬೇಡರ ಮೂಲ ಮತ್ತು ಪರಂಪರೆ ಕುರಿತು ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಉತ್ತರ ಭಾರತದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು; ಮತ್ತೆ ಕೆಲವರು ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಹೇಳುತ್ತಾರೆ.

ವೇದ ಪೂರ್ವ ಕಾಲದಲ್ಲಿ ಬೇಡರ ಮೂಲ ಸ್ಥಾನ "ನೇಪಾಳದ ಗಂಡಕಿ ನದಿ ಬಯಲು ಪ್ರದೇಶ" ಬೇಟೆ ಮತ್ತು ಪಶುಪಾಲನೆಗಾಗಿ ಸ್ಥಳಗಳನ್ನು ಬದಲಾಯಿಸುತ್ತಿದ್ದರಿಂದ ಕಾಲ ಕ್ರಮೇಣ ವಿಂಧ್ಯಪರ್ವತ ಪ್ರದೇಶಗಳಿಗೆ ವಲಸೆ ಬಂದರು. ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲೇ ಬೇಡರು ಗಂಗಾನದಿ ಬಯಲಿನ ಅನೇಕ ಶಿಖರಾಗ್ರಗಳಲ್ಲಿ ತಮ್ಮ ವಸತಿಗಳನ್ನು ನಿರ್ಮಿಸಿಕೊಂಡಿದ್ದು, ಸಪ್ತ ಶಿಖರಗಳ ಅಧಿಪತಿಗಳಾಗಿದ್ದರು.ಇವರು ತಮ್ಮ ಮುಖ್ಯ ಕಸುಬಾಗಿದ್ದ ಬೇಟೆ ಮತ್ತು ಪಶುಪಾಲನೆಯಿಂದ ಜೀವಿಸುತ್ತಿದ್ದರು. ಆದರೆ ನಾಗರಿಕ ಜೀವನ ಕ್ರಮ ಇನ್ನೂ ಇವರಿಗೆ ತಿಳಿದಿರಲಿಲ್ಲ. ಬೇಟೆಯಾಡಲು, ಪ್ರಾಣಿಗಳ ಚರ್ಮ ಸುಲಿಯಲು ಮತ್ತು ಮಾಂಸ ಬೇರ್ಪಡಿಸಲು ಒರಟಾದ ಆಯುಧಗಳನ್ನು ಉಪಯೋಗಿಸುತ್ತಿದ್ದರು. ವ್ಯವಸಾಯ ಮತ್ತು ವಲಸೆಗೆ ಅನುಕೂಲವಾಗಲೆಂದು 'ಎತ್ತು'ಗಳನ್ನು ವಾಹನವಾಗಿಯೂ ಬಳಸುತ್ತಿದ್ದರು.ಆದ್ದರಿಂದ 'ಎತ್ತು' ಬೇಡರ ಮೊದಲ ಸಾಕುಪ್ರಾಣಿಯಾಗಿದ್ದು ಅದು ಪೂಜ್ಯನೀಯವಾಗಿತ್ತು. ಆದ್ದರಿಂದಲೇ ಬೇಡರ ಮೂಲ ವೃತ್ತಿ ಬೇಟೆ ನಂತರ ಪಶುಪಾಲನೆಯಾಗಿತ್ತು. ಬೇಡರು ಅಲೆಮಾರಿಗಳಾದರೂ ತಾತ್ಕಾಲಿಕ ವಸತಿ ವ್ಯವಸ್ಥೆಗೆ ನದಿ ಬಯಲು ಪ್ರದೇಶಗಳನ್ನು ಆರಿಸಿಕೊಳ್ಳುತ್ತಿದ್ದರು. ಸೂರ್ಯ, ಚಂದ್ರ ಮತ್ತು ಸಾಲಿಗ್ರಾಮಗಳ ಆರಾಧಕರಾದ ಬೇಡರು 'ಸೂರ್ಯನಾರಾಯಣ'ಗೆ ಪ್ರಥಮ ಆದ್ಯತೆ ಕೊಟ್ಟು ಪೂಜಿಸುತ್ತಿದ್ದರು. ಇಂದಿಗೂ ಬೇಡ ಮತ್ತು ಗೊಲ್ಲರು ಯಾವುದೇ ಶುಭಕಾರ್ಯದಲ್ಲಿ ಸೂರ್ಯಾರಾಧನೆ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಬೇಡರು ವಲಸೆ ಹೋಗುವಾಗ ತಮ್ಮ ಜೊತೆಯಲ್ಲಿಯೇ ಸಾಲಿಗ್ರಾಮಗಳನ್ನಿಟ್ಟ ಬಿದಿರು ಅಥವಾ ಬೆತ್ತದ ಪುಟ್ಟಿಗಳನ್ನು ಹಾಗೂ ದೇವರ ಗುಬ್ಬಗಳನ್ನು ಹೊತ್ತುಕೊಂಡು ಹೋಗುತ್ತಿದ್ದರು. ಭಾರತದಲ್ಲಿ ಅತ್ಯಂತ ಪೂಜನೀಯವಸ್ತುವಾದ ಸಾಲಿಗ್ರಾಮ ಎಂಬ ಶಿಲೆಯು ನೈಸರ್ಗಿಕವಾಗಿ ದೊರಕುವ ಶಿಲೆ. ಈ ಶಿಲೆಯು ಜಗತ್ತಿನಲ್ಲಿ ಬೇರೆ ಯಾವ ಭಾಗದಲ್ಲೂ ದೊರೆಯದೆ ನೇಪಾಳದ ಗಂಡಕಿ ನದಿಯಲ್ಲಿ, ಅಲ್ಲಿನ ಶಿಲಾ ಪ್ರದೇಶಗಳಲ್ಲಿ ಮಾತ್ರ ಸಿಗುತ್ತದೆ. ಭಾರತದ ಮೂಲನಿವಾಸಿ ಬುಡಕಟ್ಟುಗಳಾದ ಕಿರಾತರು, ಭಿಲ್ಲರು, ಬೇಡರು, ಶಬರರು ಮಾತ್ರ ಈ ಸಾಲಿಗ್ರಾಮ ಆರಾಧಕರಾಗಿರುವುದನ್ನು ಕಾಣಬಹುದಾಗಿದೆ. ಏಕೆಂದರೆ ಇಂದಿಗೂ ಕೂಡ ಬೇಡರ ಆರಾಧ್ಯದೈವವೇ ಸಾಲಿಗ್ರಾಮ. ಈ ಸಾಲಿಗ್ರಾಮಮನ್ನೇ ಇವರು ತಮ್ಮ ವಲಸೆ ವೇಳೆಯಲ್ಲಿ ಬಿದಿರು ಪುಟ್ಟಿಗಳಲ್ಲಿಟ್ಟುಕೊಂಡು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸುಲಭವಾಗಿ ತೆಗೆದುಕೊಂಡು ಹೋಗಲು ಅನುಕೂಲವಾಗಿದ್ದರಿಂದ, ಈ ಪುಟ್ಟಿಯನ್ನೇ ತಲೆಯ ಮೇಲೆ ಹೊತ್ತೊಯ್ಯುತ್ತಿದ್ದರು. ಈ ಒಂದು ಪುಟ್ಟಿಯನ್ನು ಒಯ್ಯುವ ಒಂದು ಗುಂಪಿಗೆ 'ಕಂಪಳ'ಎಂದು ಕರೆಯುತ್ತಿದ್ದರು.

ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿ ಕಣಿವೆ, ಕಾನನ, ನದಿ ಬಯಲು ಪ್ರದೇಶಗಳಲ್ಲಿ ಜೀವಿಸುತ್ತಿದ್ದ 'ಕಂದು ವರ್ಣದ' ಬೇಡರನ್ನು ಆರ್ಯರು ಕಿರಾತರು ಎಂದು ಕರೆಯುತ್ತಿದ್ದರು. ಈ ಕಿರಾತ ರಾಜ್ಯವು ಇಂದಿನ ಹಿಮಾಲಯ ಪರ್ವತದ ಕೊಳದಲ್ಲಿರುವ ಗಂಡಕಿ ನದಿಯ ಭಾಗಗಳಿಂದ ಕೂಡಿ ನೇಪಾಳ ಪ್ರಾಂತ್ಯದ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು. ಈ ಕಿರಾತರು, ಸಪ್ತಸಿಂಧೂ ನದಿ ಬಯಲಿನಿಂದ ಹಿಡಿದು ಗಂಗಾ ನದಿ ಬಯಲಿನವರೆಗೂ ಹರಡಿದ್ದು ಬೇಟೆಯಾಡುವುದು ಮತ್ತು ಪಶುಪಾಲನೆಯ ಮೂಲ ವೃತ್ತಿಯನ್ನೇ ಜೀವನಕ್ಕೊಸ್ಕರ

ಅವಲಂಬಿಸಿದ್ದರು. ಆದ್ದರಿಂದ ಅವರು ಕಾಡು ಕೊಳ್ಳಗಳಲ್ಲಿಯೂ, ಪರ್ವತಾಗ್ರಗಳಲ್ಲಿಯೂ ವಾಸಿಸಲು ಇಂತಹ ಪ್ರದೇಶಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅವರು ಬಯಲು ಪ್ರದೇಶಗಳಲ್ಲಿ ತಮ್ಮ ದನಕರುಗಳ ಪಶುಪಾಲನೆ ಮಾಡುತ್ತಿದ್ದರು. ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ಬೇಟೆಯಾಡುತ್ತಿದ್ದರು.ಒಂದು ಬುಡಕಟ್ಟು ಸಮುದಾಯ ಬೇಟೆ ಮತ್ತು ಪಶುಪಾಲನೆಗೆ ಆಯ್ಕೆ ಮಾಡಿಕೊಂಡ ಪ್ರದೇಶಕ್ಕೆ, ಮತ್ತೊಂದು ಬುಡಕಟ್ಟು ಸಮುದಾಯ ಬೇಟೆ ಮತ್ತು ಪಶುಪಾಲನೆಗಾಗಿ ಅತಿಕ್ರಮಿಸಿದರೆ ಆಯಾಯ ಬುಡಕಟ್ಟುಗಳು ತಮ್ಮ ಹಕ್ಕುಗಳಿಗಾಗಿ ಮರಣಾಂತಿಕ ಸಂಘರ್ಷಗಳು ಉಂಟಾಗುತ್ತಿದ್ದವು. ಆದ್ದರಿಂದ ಬೇರೊಂದು ಸಮುದಾಯದ ವಿರುದ್ಧ ಹೋರಾಟ ಮಾಡಲು, ತಮ್ಮ ಸಮುದಾಯವನ್ನು ರಕ್ಷಿಸಿಕೊಳ್ಳಲು ಹಾಗೂ ಬೇಟೆ ಪಶುಪಾಲನೆಗೆ ಸಹಾಯಕವಾಗಲೆಂದು ಗುಂಪು ಗುಂಪಾಗಿ ವಾಸಿಸುತ್ತಿದ್ದರು. ಇಂಥ ಚಿಕ್ಕ ಸಮುದಾಯಗಳಿಗೆ "ಹಟ್ಟಿ" ಎಂದು ಕರೆಯುತ್ತಿದ್ದರು.

ಬೇಟೆ ಮತ್ತು ಆಯುಧಗಳಲ್ಲಿ ಪರಿಣಿತಿ ಹೊಂದಿದ ಬೇಡರಿಗೆ 'ಮುಂದಾಳು' ಇದ್ದು, ಅವನನ್ನು "ನಾಯಕ" ಎಂದು ಕರೆಯುತ್ತಿದ್ದರು. ಇವನೇ ಆ ಬುಡಕಟ್ಟಿನ ನಾಯಕನಾಗಿದ್ದು ಇವನ ನೇತೃತ್ವದಲ್ಲಿಯೇ ನ್ಯಾಯ ನಿರ್ಣಯಗಳು ನಡೆಯುತ್ತಿದ್ದವು. ಇಂತಹ ಹಟ್ಟಿಗಳು ಅಲ್ಲಲ್ಲಿ ನೂರಾರು ಸಂಖ್ಯೆಯಲ್ಲಿದ್ದು ಹೊರಗಿನ ಆಕ್ರಮಣವನ್ನು ಎದುರಿಸಲು ಯಾವಾಗಲೂ ಒಂದು ರಕ್ಷಣಾ ಪಡೆಯು ಯುದ್ಧ ಸನ್ನದ್ಧರಾಗಿರುತ್ತಿದ್ದುದರಿಂದ ಕ್ರಮೇಣ ಇದಕ್ಕೆ "ಪಾಳೆಗಳೆಂಬ" ಹೆಸರುಂಟಾಯಿತು. ಈ ಬುಡಕಟ್ಟು ಜನಾಂಗಕ್ಕೆ ಬೇರೆಯವರಿಂದ ಹೋರಾಡಲು ತಮ್ಮ ಪಾಳೆಯದ ಜನರನ್ನು ಕರೆತರಲು ಕರೆ ಬಂದಾಗ, ಆಯುಧ ಸಮೇತ ಸಿದ್ಧರಾಗಿ ಯುದ್ಧಕ್ಕೆ ಹೊರಡುತ್ತಿದ್ದರು. ಇಂಥ ಪಾಳ್ಯೆಗಳ ಯೋಧರನ್ನು "ಪಾಳೆಯಗಾರರು" ಎಂದು ಕರೆಯುತ್ತಿದ್ದರು.ನೈಸರ್ಗಿಕವಾಗಿ ಬೆಟ್ಟ, ಗುಡ್ಡ, ನದಿ, ಕೊಳ, ಮೊದಲಾದ ಪ್ರದೇಶಗಳಲ್ಲಿ ವಾಸಿಸುತ್ತಾ, ಅಸಮಾನ್ಯ ಶಕ್ತಿಯುತವಾದ ಪರಿಣಿತಿ ಪಡೆದಿದ್ದರಿಂದ ಸಹಜವಾಗಿಯೇ ಹೋರಾಟದ ಅಭ್ಯಾಸವು ಅವರ ಪ್ರವೃತ್ತಿಯಾಗಿತ್ತು. ಆದ್ದರಿಂದ ಶತೃಗಳನ್ನು ಹೊಡೆದೊಡಿಸುವಲ್ಲಿ ಅಪಾರ ಶಕ್ತಿಯುತರಾಗಿ ಹಾಗೂ ಯುದ್ಧ ಕಲೆಗಳಲ್ಲಿ ಅನುಭವ ವುಳ್ಳವರಾಗಿದ್ದರು. ಬೇಟೆ, ಪಶುಪಾಲನೆ ಮತ್ತು ಹೋರಾಟದ ಬದುಕನ್ನು ಮೈಗೂಡಿಸಿಕೊಂಡ ಬೇಡರು ಉತ್ತರ ಪ್ರದೇಶ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಬಿಹಾರ, ಒರಿಸ್ಸಾ ಮೊದಲಾದ ಕಡೆ ಕೋಲ, ಮುಂಡಾ, ಶಬರ, ನಿಶಾಧ, ಭಿಲ್ಲ, ಪುಳಿಂದ, ಬೇಡ ಮೊದಲಾದ ಹೆಸರುಗಳಿಂದ ಚದುರಿ ಹೋಗಿದ್ದಾರೆ. ಇಂದಿಗೂ ಉತ್ತರ ಭಾರತದ ಕ್ರೌಂಚಾಟವಿ ಎಂಬ ಅರಣ್ಯದಲ್ಲಿ ಬೇಡರ ಕಂಪಳಗಳಿವೆ.

ಕಾಲಕ್ರಮೇಣ ಆರ್ಯರ ಆಕ್ರಮಣಗಳ, ಪ್ರವಾಹಗಳ ಸೆಳತಕ್ಕೆ ಈ ಆದಿವಾಸಿ ಬುಡಕಟ್ಟುಗಳು ಸಿಲುಕಿ ದಿಕ್ಕು ತೋಚದೆ, ತಮಗೆ ಸರಿಬಂದ ಕಡೆ ವಲಸೆ ಹೋಗಲು ಪ್ರಾರಂಭಿಸಿದರು. ಅದೇ ಸಂದರ್ಭಕ್ಕೆ 'ಬೇಡರ' ಒಂದು ಕಂಪಳ ದಕ್ಷಿಣ ಭಾರತಕ್ಕೆ ವಲಸೆ ಬಂದು ಈಗಿನ ಆಂಧ್ರಪ್ರದೇಶದ ಶ್ರೀಶೈಲ, ಕದರಿ, ತಿರುಪತಿ, ಯರ್ರಮಲೆ, ನಲ್ಲಮಲೆ, ಅಹೋಬಲ ಮತ್ತು ತಮಿಳುನಾಡು, ಕೇರಳ, ಲಂಕಾದ್ರಿ ಪರ್ವತಗಳವರೆಗೂ ಬೇಡರ ಕಂಪಳ ಹರಡಿಕೊಂಡು ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದರು.

ಆಂಧ್ರಪ್ರದೇಶದಲ್ಲಿ ನೆಲೆಸಿಂತ ಬೇಡರ ಒಂದು ತಂಡ ತಮ್ಮನ್ನು ಅಡವಿಚೆಂಚರು, ಕಾಡುಸಂಚರು ಮತ್ತು

ಬಾಯೋಳು (ಬೋಯ) ಎಂದು ಕರೆದುಕೊಂಡರು. ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಅಡವಿಚೆಂಚರು ಉಪಜೀವನಕ್ಕಾಗಿ ದರೋಡೆ ವೃತ್ತಿಗಳಲ್ಲಿ ತೊಡಗಿದರು. "ನಲ್ಲಾಮಲೈ ಬೆಟ್ಟಗಳಲ್ಲಿ ವಾಸಿಸುತ್ತಿದ್ದ ಚೆಂಚರು ಶ್ರೀಶೈಲಕ್ಕೆ ಹೋಗುವ ದಾರಿಯಲ್ಲಿ ಯಾತ್ರಾರ್ಥಿಗಳನ್ನು ಪ್ರತಿಯೊಂದು ಹಂತದಲ್ಲೂ ದೋಚುತ್ತಿದ್ದರು. ಜನಸಾಮಾನ್ಯರು ಹೋಗಲಾರದಂಥ ಇಕ್ಕಟ್ಟಾದ ಎತ್ತರದ ಬೆಟ್ಟ ಪ್ರದೇಶದಲ್ಲಿ ವಾಸಿಸುತ್ತಿದ್ದ ಚೆಂಚರು, ಬಹಳ ಚಮತ್ಕಾರದಿಂದ ಯಾತ್ರಿಕರನ್ನು ಕೊಳ್ಳೆ ಹೊಡೆಯುತ್ತಿದ್ದರೆಂದು ಎಡ್ಗರ್ ಥರಸ್ಟ್‌ನ್ ಬರೆಯುತ್ತಾನೆ".[*] ನಲ್ಲಾಮಲೈ ಬೆಟ್ಟಗಳಲ್ಲಿ ನೆಲಸಿದ್ದ ಅಡವಿಚೆಂಚರು ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿಕೊಂಡರು. ವಿಷ್ಣುವಿನ ನಾಲ್ಕನೇ ಅವತಾರವಾದ ನರಸಿಂಹನು ಅಹೋಬಲದ ಬೆಟ್ಟ ಪ್ರದೇಶಗಳಲ್ಲಿ ಹಿರಣ್ಯಕಶ್ಯಪುವನ್ನು ಕೊಂದು ಉಗ್ರರೂಪದಿಂದ ಆರ್ಭಟಿಸುತ್ತಿದ್ದಾಗ ಇದೇ ಅಡವಿಚೆಂಚರ ಹೆಣ್ಣು 'ಚೆಂಚುಲಕ್ಷ್ಮೀ'ಗೆ ಮೋಹಿತನಾಗಿ, ನರಸಿಂಹಸ್ವಾಮಿ ಮತ್ತು ಚೆಂಚುಲಕ್ಷ್ಮೀ ವಿವಾಹ ಸಮಾರಂಭದ ಚಿತ್ರಣ ಕುರಿತು ಅನೇಕ ಜನಪದ ಸಾಹಿತ್ಯ ಆಂಧ್ರಪ್ರದೇಶದಲ್ಲಿ ಪ್ರಚಲಿತದಲ್ಲಿದೆ. ಮುಂದೆ ಚೆಂಚುಲಕ್ಷ್ಮೀ ಮತ್ತು ನರಸಿಂಹಸ್ವಾಮಿಯ ಸಂತತಿಯವರೇ ಅಂಧ್ರಪ್ರದೇಶ, ತಮಿಳುನಾಡು, ಕೇರಳ ಮತ್ತು ಕರ್ನಾಟಕದಲ್ಲಿ ನೆಲಸಿರುವ ಬೇಡರು ಎಂದು ಹೇಳುತ್ತಾರೆ.

ನರಸಿಂಹಸ್ವಾಮಿಯನ್ನು ಅಡವಿಚೆಂಚರು ಅಥವಾ ಬೇಡರು 'ಅಳಿಯದೇವರು' ಎಂದು ಆರಾಧಿಸುವ ಪದ್ಧತಿ ಆಚರಣೆಗೆ ಬಂದಿತು. ಕಾಲಕ್ರಮೇಣ ಅಳಿಯದೇವರು ಎಂಬ ಪದ 'ಮನೆದೇವರು' ಎಂದಾಗಿದೆ. ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಕೇರಳದಲ್ಲಿ ನೆಲಸಿದ ಬೇಡರಿಗೆ ಅಹೋಬಲನರಸಿಂಹಸ್ವಾಮಿ ಮತ್ತು ಶ್ರೀಶೈಲ ಮಲ್ಲಿಕಾರ್ಜುನ ಮನೆ ದೇವರುಗಳಾಗಿ ಆರಾಧಿಸುತ್ತಿದ್ದುದರಿಂದ ಒಂದೇ ಬುಡಕಟ್ಟಿನ ಬೇಡರಿಗೆ, ವೈಷ್ಣವ ಮತ್ತು ಶೈವ ಎರಡೂ ಸಂಪ್ರದಾಯಗಳು ಬೆಳೆದು ಬಂದವು.

ಆಂಧ್ರಪ್ರದೇಶದಲ್ಲಿ ಅತಿವೃಷ್ಟಿ, ಅನಾವೃಷ್ಟಿ, ಇಲ್ಲವೆ ಮುಸ್ಲಿಂ ಆಕ್ರಮಣಕಾರರಿಂದ ತಮ್ಮ ಮಾನ ಪ್ರಾಣ ರಕ್ಷಣೆಗಾಗಿ ನೆರೆಹೊರೆ ರಾಜ್ಯಗಳಿಗೆ ವಲಸೆ ಹೋದ ಬುಡಕಟ್ಟು ತಂಡಗಳಲ್ಲಿ ಒಂದಾದ 'ಬೇಡರ ಕಂಪಳ' ಪಶುಗಳನ್ನು ಮೇಯಿಸಿಕೊಳ್ಳುತ್ತಾ ಹುಲ್ಲು ನೀರು ಸಮೃದ್ಧಿ ಇರುವ ಪ್ರದೇಶಗಳನ್ನು ಹುಡುಕಿಕೊಂಡು ಕರ್ನಾಟಕದ ಕಡೆಗೆ ವಲಸೆ ಬಂದರು. ಅದೇ ಸಂದರ್ಭದಕ್ಕೆ ಉತ್ತರ ಭಾರತದಿಂದ ಮುಸ್ಲಿಂ ಆಕ್ರಮಣಕಾರರಿಂದ ತಪ್ಪಿಸಿಕೊಂಡು ದಕ್ಷಿಣ ಭಾರತಕ್ಕೆ ವಲಸೆ ಬಂದಿದ್ದ ಗೊಲ್ಲರು, ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗಗಳಲ್ಲಿ ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದಾಗ ಗೊಲ್ಲರ ಸಂಪರ್ಕ ಬೇಡರಿಗೆ ಉಂಟಾಯಿತು. ಈ ಎರಡು ಬುಡಕಟ್ಟುಗಳ ಪ್ರಧಾನ ವೃತ್ತಿ ಪಶುಪಾಲನೆಯಾಗಿದ್ದರಿಂದ ಇವರ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಪರಸ್ಪರ ಸಾಮ್ಯತೆ ಕಂಡು ಬಂದಿತು.

ಬೇಡ ಮತ್ತು ಗೊಲ್ಲರಲ್ಲಿ ಸಾಮ್ಯತೆ ಕಂಡುಬರುವುದರ ಜೊತೆಗೆ ಭಿನ್ನತೆಗಳು ಗೋಚರಿಸಿದವು. ಕಾಡಾಡಿ ಬದುಕಿಗೆ ಹೊಂದಿಕೊಂಡ ಬೇಡರಿಗೆ 'ಮ್ಯಾಸಬೇಡರು' ಎಂದು; ನಾಡಿನ ಸಂಪರ್ಕ ಬೆಳೆಸಿದ ಬೇಡರಿಗೆ 'ಊರು ಬೇಡರು' ಎಂದು ಕರೆಯಲಾರಂಭಿಸಿದರು. ಅದೇ ರೀತಿ ಕಾಡಿನಲ್ಲಿ ಗೋಪಾಲಕರಾಗಿ ಜೀವಿಸುತ್ತಿದ್ದ ಗೊಲ್ಲರಿಗೆ 'ಕಾಡುಗೊಲ್ಲರು' ಎಂದು; ನಾಡಿನ ಸಂಪರ್ಕ ಬೆಳೆಸಿದ ಗೊಲ್ಲರಿಗೆ 'ಊರುಗೊಲ್ಲರು' ಎಂದು ಕರೆಯತೊಡಗಿದರು. ಅದಕ್ಕಾಗಿಯೇ 'ಮ್ಯಾಸಬೇಡರ' ಭಾಷೆ ತೆಲುಗಾದರೆ, 'ಊರುಬೇಡರ' ಭಾಷೆ ಕನ್ನಡವಾಗಿದೆ. ಅದೇ ರೀತಿ

‘ಕಾಡುಗೊಲ್ಲರ’ ಭಾಷೆ ಕನ್ನಡವಾದರೆ, ‘ಊರುಗೊಲ್ಲರ’ ಭಾಷೆ ತೆಲುಗಾಗಿದೆ.

ಆಂಧ್ರಪ್ರದೇಶದ ಯರ್ರಮಲೆ, ನಲ್ಲಮಲೆ, ಕಡೆಯಿಂದ ಕ್ರಿ.ಶ. ಸುಮಾರು ೬ ಮತ್ತು ೭ ನೇ ಶತಮಾನದ ಮಧ್ಯಾವಧಿಯಲ್ಲಿ ಶುಕ್ಲಮಲ್ಲಿನಾಯಕ ಮತ್ತು ದಾನಸಾಲಮ್ಮನ ಮಕ್ಕಳಾದ ಸೂರ್ಯರಾಜ, ಗ್ಯಾರೆಬೈಯಪ್ಪರಾಜ, ಕನಕಧರ್ಮರಾಜ, ತಿಪ್ಪಂಡೆರಾಜ, ಭಾನುಕೋಟೆರಾಜ, ಗೊರ್ರುಲ್ಲಬೈಯಪ್ಪರಾಜ ಮತ್ತು ಪೆದಕ್ಕರಾಯಮ್ಮ ಎಂಬ ಏಳು ಮಂದಿ, ಪಶುಪಾಲಕರಾಗಿ ಕರ್ನಾಟಕದ ಕಡೆಗೆ ವಲಸೆ ಬಂದು ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹತ್ತಿರ, ಅಂದರೆ ಈಗಿನ ತಿಪ್ಪೇಸ್ವಾಮಿ ಒಳಮಠದ ಪೂರ್ವಕ್ಕೆ ಸ್ವಲ್ಪದೂರ ನಾಗರಕಲ್ಲುಗಳ ಕಟ್ಟೆಯ ಹತ್ತಿರ ಈ ‘ಮ್ಯಾಸಬೇಡರ ಕಂಪಳ’ ನೆಲಸಿತು.

ನಾಯಕನಹಟ್ಟಿ ಹತ್ತಿರ ನೆಲೆನಿಂತ ಮ್ಯಾಸಬೇಡರ ಕಂಪಳ ಎರಡು ಪದಿಗಳನ್ನು ಕಟ್ಟಿಕೊಂಡು ಒಂದು ಪದಿಗೆ ಒಣ ಕಳ್ಳೆ (ವಿಷ್ಣುಕಂಪಳ); ಇನ್ನೊಂದು ಪದಿಗೆ ಹಸಿರು ಕಳ್ಳೆ (ಶಿವಕಂಪಳ) ಹಾಕಿಕೊಂಡು ಎರಡು ‘ಪದಿ’ ನಿರ್ಮಾಣ ಮಾಡುತ್ತಾರೆ. ಶ್ರೀಕೃಷ್ಣ ನಿಂದ ಬಳುವಳಿಯಾಗಿ ಬಂದ ಗೋವುಗಳಿಗೆ ವಿಷ್ಣುಕಂಪಳ (ಒಣಕಳ್ಳೆ ಪದಿ) ಎಂದು; ಈ ವಿಷ್ಣುಕಂಪಳಕ್ಕೆ ಮಂದಲನಾಯಕನ ಪದಿ ಎಂದು ಕರೆಯುತ್ತಿದ್ದರು. ಶ್ರೀಶೈಲ ಮಲ್ಲಿಕಾರ್ಜುನನಿಂದ ಬಳುವಳಿಯಾಗಿ ಬಂದ ಗೋವುಗಳಿಗೆ ಶಿವಕಂಪಳ (ಹಸಿರುಕಳ್ಳೆ ಪದಿ) ಎಂದು; ಈ ಶಿವಕಂಪಳಕ್ಕೆ ಶುಕ್ಲಮಲ್ಲಿನಾಯಕನ ಪದಿ ಎಂದು ಕರೆಯುತ್ತಿದ್ದರು. ಈ ಶುಕ್ಲಮಲ್ಲಿನಾಯಕನ ‘ಪದಿ’ ನೇ ಮುಂದೆ “ನಾಯಕನಹಟ್ಟಿ” ಎಂದು ಹೆಸರು ಬರಲು ಕಾರಣವಾಯಿತು. ಹಂಪಿ ತಿರುವಿನ ಮಡು ಹತ್ತಿರ ಸೂರ್ಯನಾರಾಯಣ ಬೇಡರ ಕುಲಕ್ಕೆ ಕೊಟ್ಟ ಹನ್ನೆರಡು ಪೆಟ್ಟಿಗೆ ದೇವರುಗಳನ್ನು ಇವರು ಆರಾಧಿಸುತ್ತಿದ್ದರು. ಮ್ಯಾಸಬೇಡರಿಗೆ ‘ಹುದಿ-ಪದಿ-ನೋಮು’ ಎಂಬ ಪದಗಳು ಬಹಳ ಮುಖ್ಯವಾದವು. ಇಲ್ಲಿ ಹುದಿ ಎಂದರೆ ಪೌಳಿ, ಪದಿ ಎಂದರೆ ಕಳ್ಳೆ ಮತ್ತು ನೋಮು ಎಂದರೆ ಪೂಜೆ ಎಂದರ್ಥ. ಮಂದಲನಾಯಕನ ಸಂತತಿಯವರಿಗೆ ‘ಪೂಜಾರಿಕೆ’; ಮಲ್ಲಿನಾಯಕನ ಸಂತತಿಯವರಿಗೆ ‘ದೊರೆತನ’ ಎಂದು ನಿಗದಿಪಡಿಸಲಾಯಿತು. ಮಂದಲನಾಯಕನ ಕಂಪಳದವರಿಗೆ ನಾಮದವರು, ಮಲ್ಲಿನಾಯಕನ ಕಂಪಳದವರಿಗೆ ಲಿಂಗದವರು, ಎಂದು ಕರೆಯತೊಡಗಿದರು. ಈ ಎರಡು ಕಂಪಳದವರು ಸೇರಿ “ಕಂಪಳ ದೇವರನ್ನು” ಸ್ಥಾಪಿಸಿದರು. ಆದ್ದರಿಂದ ಮೊಳಕಾಲ್ಮೂರು ತಾಲ್ಲೂಕು (ಚಿಕ್ಕುಂತಿ) ಕಂಪಳದೇವರ ಹಟ್ಟಿಯ “ಕಂಪಳರಂಗಸ್ವಾಮಿ” ಇಡೀ ಮ್ಯಾಸಮಂಡಲಕ್ಕೆ ಮೂಲದೇವರು ಮತ್ತು “ಗುರುಸ್ಥಾನ”ವಾಗಿದೆ. ಪೆದಕ್ಕರಾಯಮ್ಮನ ಆರು ಜನ ಅಣ್ಣತಮ್ಮಗಳ ಸಂತತಿಯವರು ‘ಹಟ್ಟಿ’ಯಲ್ಲಿ ನೆಲೆಸಿದ್ದಾಗ ಪಂಚಗಣಾಧೀಶ್ವರರಲ್ಲಿ ಒಬ್ಬರಾದ ತಿಪ್ಪಯ್ಯಸ್ವಾಮಿಗಳು ನಿಡಗಲ್ಲು, ರಾಯದುರ್ಗ, ಆನೆಗೊಂದಿ, ಹಂಪಿ,ಉಜ್ಜನಿ, ಕೊಂಡ್ಲಹಳ್ಳಿ, ಜೋಗಿಹಟ್ಟಿ ಮಾರ್ಗವಾಗಿ ಬೇಡರ ಕಂಪಳದ ಹಟ್ಟಿಯ ಹತ್ತಿರ ಬರುತ್ತಾರೆ.ಮುಗ್ಧ ಭಕ್ತಿಯವರಾದ ಬೇಡರು ಯಾರೋ ಜಂಗಮರು ಬಂದರು ಎಂದು ಕರಿಕಂಬಳಿ ಗದ್ದುಗೆ ಹಾಸಿ ಕೂಡ್ರಿಸಿ “ಜೆನ್ನಿಗೆ ಹಸು”ವಿನ ಹಾಲು ಕರೆದು ಸ್ವಾಮಿಗಳಿಗೆ ಕುಡಿಯಲು ಕೊಡುತ್ತಾರೆ. ಆಗ ಸ್ವಾಮಿಗಳು ಬಿಸಿಲಿನಲ್ಲಿ ಬಂದ ನನಗೆ ಮನಸ್ಸು ತಂಪು ಮಾಡಿದ ನಿಮ್ಮ “ಬೇಡರ ಪದಿ” ಬೆಳೆಯಲಿ ಎಂದು ಹರಸಿದರಂತೆ. ಕೆಲಕಾಲ ಬೇಡರ ಪದಿ ಹತ್ತಿರವೇ ಇದ್ದ ತಿಪ್ಪಯ್ಯಸ್ವಾಮಿಗಳು ನಂತರ ಮಾರಮ್ಮನ ಗುಡಿಯ ಹತ್ತಿರ ಕಲ್ಲಿನ ಮಂಟಪದಲ್ಲಿ ಧ್ಯಾನಾಸಕ್ತರಾಗಿ

ಕುಳಿತುಕೊಳ್ಳುತ್ತಿದ್ದರಂತೆ. ಆಗ ಮ್ಯಾಸಬೇಡರು ಪ್ರತಿನಿತ್ಯ 'ಜೆನ್ನಿಗೆಹಸು'ವಿನ ಹಾಲನ್ನು ಕರೆದು ಮಾರಮ್ಮನ ಗುಡಿಯ ಹತ್ತಿರವಿರುವ ತಿಪ್ಪಯ್ಯಸ್ವಾಮಿಗಳಿಗೆ ಕೊಟ್ಟು ಬರುತ್ತಿದ್ದರಂತೆ. ಬೇಡರ ಸೇವೆ ಮತ್ತು ಭಕ್ತಿಗೆ ಮೆಚ್ಚಿದ ತಿಪ್ಪಯ್ಯ ಸ್ವಾಮಿಗಳು, ಬೇಡರ ವಿಷ್ಣುಕಂಪಳ ಮತ್ತು ಶಿವಕಂಪಳದ ದನಕರುಗಳಿಗೆ ಮತ್ತು ಬೇಡರನ್ನು ಕೃಷಿಯಲ್ಲಿ ತೊಡಗಿಸಲು ಐದು ಕೆರೆಗಳನ್ನು ಕಟ್ಟಿಸಿದರಂತೆ. ಇದರ ಕೃತಾರ್ಥವಾಗಿ ಬೇಡರು ಕೂಡ ತಮ್ಮಲಿದ್ದ ಅಮೂಲ್ಯವಾದ ರುದ್ರಾಕ್ಷಿಗೊಡಗು, ಆಸನತೊಳು, ಅಡ್ಡಪಲ್ಲಕ್ಕಿ, ಮಂದಾಸನ, ಜಿಂಕೆ ಚರ್ಮ ಮೊದಲಾದ ವಸ್ತುಗಳನ್ನು ತಿಪ್ಪಯ್ಯಸ್ವಾಮಿಗಳಿಗಿತ್ತು ಅವರನ್ನು ಗುರುವೆಂದು ಸ್ವೀಕರಿಸಿದರು. ಮುಂದೆ ತಿಪ್ಪಯ್ಯಸ್ವಾಮಿಗಳು ಇದೇ ಶುಕ್ಲಮಲ್ಲಿನಾಯಕನ ಸಂತತಿಯವರಿಗೆ ಹಟ್ಟಿ ಕಟ್ಟಲು, ಸಾಮ್ರಾಜ್ಯ ಸ್ಥಾಪಿಸಲು ಅನೇಕ ರೀತಿಯಿಂದ ಬೆಂಬಲ ಕೊಟ್ಟಿದ್ದಾರೆ. ತಿಪ್ಪೇಸ್ವಾಮಿಗಳ ನೇತೃತ್ವದಲ್ಲಿ ಮೀಸೆಮಲ್ಲಪ್ಪನಾಯಕನಿಗೆ ಪಟ್ಟಕಟ್ಟಿ ದೊರೆಗಳು ಎಂದು ನಾಮಕರಣ ಮಾಡುತ್ತಾರೆ. ಅಲ್ಲಿಯವರೆಗೂ ತಿಪ್ಪೇಸ್ವಾಮಿಗಳು ಈಗಿನ ಹೊರಮಠದ ಹತ್ತಿರ ಮಾರಮ್ಮನ ದೇವಸ್ಥಾನದಲ್ಲೇ ಇರುತ್ತಾರೆ. ಆಗ ಹಟ್ಟಿದೊರೆ ಮೀಸೆಮಲ್ಲಪ್ಪನಾಯಕ ತಿಪ್ಪೇಸ್ವಾಮಿಗಳಿಗೆ ರಾಜಗುರುವಿನ ಪೀಠವಿತ್ತು ಸತ್ಕರಿಸಿ, ಒಳಮಠ ಕಟ್ಟಲು ಅಸ್ತಿಭಾರ ಹಾಕಿದ. ನಂತರ ಅದರ ಹಿಂಭಾಗ ಅರಮನೆ ಕಟ್ಟಿಸಿಕೊಳ್ಳುತ್ತಾನೆ. ಆಗ ನಾಗರ ಕಲ್ಲುಗಳ ಕಟ್ಟೆ ಹತ್ತಿರ ಇದ್ದ 'ಬೇಡರ ಕಂಪಳ' ಅರಮನೆಗೆ ಬರುತ್ತದೆ. ಮೀಸೆಮಲ್ಲಪ್ಪನಾಯಕನ ಕಾಲದಲ್ಲಿ ಒಳಮಠ ಕಟ್ಟಿಸಿ ಸ್ವಾಮಿಗಳಿಗೆ ದೊಡ್ಡತೇರು ಕಟ್ಟಿಸಿಕೊಡುತ್ತಾನೆ. ಆದ್ದರಿಂದಲೇ ಇಡೀ ಮ್ಯಾಸಮಂಡಲಕ್ಕೆ ಮೊದಲನೆ ಕಟ್ಟೆಮನೆ 'ನಾಯಕನಹಟ್ಟಿ' ಎಂದು; ಎರಡನೆ ಕಟ್ಟೆಮನೆ 'ನನ್ನಿವಾಳ' ಎಂದು; ಮೂರನೆ ಕಟ್ಟೆಮನೆ 'ಗೋನೂರು' ಎಂದು ನಾಮಕರಣ ಮಾಡಲಾಯಿತು.ಮ್ಯಾಸಬೇಡರ ಹನ್ನೆರಡು ಪೆಟ್ಟಿಗೆ ದೇವರುಗಳನ್ನು ಚಳ್ಳಕೆರೆ, ಚಿತ್ರದುರ್ಗ, ಕೂಡ್ಲಿಗಿ, ಜಗಳೂರು, ಮೊಳಕಾಲ್ಮೂರು ಮತ್ತು ರಾಯದುರ್ಗ ತಾಲ್ಲೂಕುಗಳಲ್ಲಿ ಸ್ಥಾಪನೆ ಮಾಡಲಾಯಿತು. ಈ ಹನ್ನೆರಡು ಪೆಟ್ಟಿಗೆದೇವರು ಸ್ಥಾಪನೆಯಾದ ಸ್ಥಳಗಳೇ ಮ್ಯಾಸಬೇಡರ "ಹನ್ನೆರಡು ಗುಡಿಕಟ್ಟೆ"ಗಳಾದವು.

ಕೆಲವು ವಕ್ತೃಗಳ ಪ್ರಕಾರ ಈಗಿನ ತಿಪ್ಪೇರುದ್ರ ಸ್ವಾಮಿಗಳಿಗೆ ಬೇಡರು ತಿಪ್ಪಯ್ಯಸ್ವಾಮಿಗಳೆಂದು ಕರೆಯುತ್ತಿದ್ದರು. ಈ 'ತಿಪ್ಪಯ್ಯ' ಎಂಬ ಪದ ಶೂದ್ರರಲ್ಲಿ ಮಾತ್ರ ಬಳಕೆಯಲ್ಲಿದೆ. ಶೈವ ಸಂಸ್ಕೃತಿಯ ಪ್ರಭಾವದಿಂದ 'ತಿಪ್ಪೇರುದ್ರ' ಎಂದಾಗಿದೆ. ಮೂಲತಃ ತಿಪ್ಪಯ್ಯ ಶೂದ್ರ ಜಾತಿಯವನೇ ವಿನಹ ಮೇಲ್ಜಾತಿಯ ವ್ಯಕ್ತಿಯಲ್ಲ. ಇದಕ್ಕೆ ಪೂರಕ ವೆಂಬಂತೆ ತಿಪ್ಪೇಸ್ವಾಮಿಗಳು ಕೊಡ ಆಂಧ್ರಪ್ರದೇಶದ ಶ್ರೀಶೈಲದಿಂದಲೇ ನಾಯಕನಹಟ್ಟಿಗೆ ಬಂದಿದ್ದಾರೆ. ಇವರು ಪವಾಡ ಮಾಡಿದ ಮತ್ತು ಭೇಟಿಕೊಟ್ಟ ಸ್ಥಳಗಳಲ್ಲಿ ಬೇಡ ನಾಯಕರ ಅಧಿಕ ಸಂಖ್ಯೆಯಲ್ಲಿ ನೆಲಸಿದ್ದಾರೆ ಮತ್ತು ಭಕ್ತರಾಗಿದ್ದಾರೆ. ತಿಪ್ಪೇಸ್ವಾಮಿಗಳು ಜೀವೈಕ್ಯ ಸಮಾಧಿಯಾಗುವಾಗ, ಜೀವಸಮಾಧಿಯ ಪೂಜಾರಿಕೆ ವೃತ್ತಿ ಮಳೆಲವರು ಬೆಡಗಿನ ಮ್ಯಾಸಬೇಡರಿಗೆ ಬಿಟ್ಟು ಕೊಟ್ಟಿದ್ದಾರೆ. ಇಂದಿಗೂ ಸಹ ಮ್ಯಾಸಬೇಡರು ಹೊರಮಠದ ಸುತ್ತ ಮುತ್ತ ಕುರಿ ಮೇಕೆಗಳನ್ನು ಕಡಿದು ಮಾಂಸಾಹಾರವನ್ನು ತಿಪ್ಪೇಸ್ವಾಮಿಗಳಿಗೆ ಎಡೆ ಹಾಕುತ್ತಾರೆ. ಬಹುಪಾಲು ಮ್ಯಾಸಬೇಡರು ಹುಟ್ಟಿದ ಮಕ್ಕಳಿಗೆ ತಿಪ್ಪೇಸ್ವಾಮಿಯೆಂದು ನಾಮಕರಣ ಮಾಡುತ್ತಾರೆ. ಕೆಲವೊಂದು ಪ್ರದೇಶದ ಮ್ಯಾಸಬೇಡರು ನಾಯಕನಹಟ್ಟಿ ತಿಪ್ಪೇಸ್ವಾಮಿ ನಮ್ಮ ಮನೆದೇವರೆಂದು ಹೇಳಿಕೊಳ್ಳುತ್ತಾರೆ. ಸ್ವಾಮಿಗಳ ಕಥೆಯು

ಕೂಡ ನಿಡಗಲ್ಲು, ರಾಯದುರ್ಗ, ಹರಪನಹಳ್ಳಿ, ಗುಡೆಕೋಟೆ ಮತ್ತು ನಾಯಕನಹಟ್ಟಿ ಪಾಳೆಯಗಾರರೊಂದಿಗೆ ತಳಕು ಹಾಕಿಕೊಂಡಿರುವುದರಿಂದ, **ತಿಪ್ಪೇಸ್ವಾಮಿಗಳು ಕೂಡ ಮೂಲತಃ ಬೇಡರವನೇ ಇರಬೇಕೆಂದು** ಹಲವು ವ್ಯಕ್ತಿಗಳು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಅದೇನೇ ಇದ್ದರೂ ನಾಯಕನಹಟ್ಟಿ ತಿಪ್ಪೇಸ್ವಾಮಿಗಳ ಕುರಿತು ಪ್ರತ್ಯೇಕ ಅಧ್ಯಯನ ಕೈಗೊಂಡರೆ ಈಗಿನ ಇತಿಹಾಸವೇ ಬದಲಾಗುವ ಸಾಧ್ಯತೆಗಳಿವೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಬೇಡರು ಸಾಮಾನ್ಯವಾಗಿ ಬೆಟ್ಟ, ಗುಡ್ಡ, ನದಿ ಬಯಲು ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಇದೇ ಬೇಡರ ಒಂದು ಬೆಡಗಿನವರು ಕೋಟೆ ಕೊತ್ತಲಗಳನ್ನು ಕಟ್ಟಿ ಸಣ್ಣಪುಟ್ಟ ಪಾಳೆಯಗಾರರೆಂದು ಹೆಸರು ಗಳಿಸಿದರು. ಬೇಡರ ಪ್ರಮುಖ ಪಾಳೇಪಟ್ಟುಗಳಲ್ಲಿ ಒಂದಾದ ಚಿತ್ರದುರ್ಗ ಕ್ರಿ.ಶ. ೧೫೬೮ ರಿಂದ ೧೭೭೯ ರವರೆಗೆ ಸುಮಾರು ೨೧೧ ವರ್ಷಗಳ ಕಾಲ ಚಿತ್ರದುರ್ಗದ ಪಾಳೇಪಟ್ಟನ್ನು ಇದೇ ಮ್ಯಾಸಬೇಡರು ಆಳ್ವಿಕೆ ನಡೆಸಿದ್ದಾರೆ. **ಚಿತ್ರದುರ್ಗದ ಪಾಳೆಯಗಾರನಾದ ರಾಜವೀರ ಮದಕರಿನಾಯಕ ಕಾಮಗೇತಲ ಕುಲದ ಮ್ಯಾಸಬೇಡರು.** ಚಿತ್ರದುರ್ಗದ ಅಧೀನ ಪಾಳೇಪಟ್ಟುಗಳಾಗಿ ನಾಯಕನಹಟ್ಟಿ, ನನ್ನಿವಾಳ ಮತ್ತು ಗೋನೂರು ಪಾಳೆಯಗಾರರು ಆಳ್ವಿಕೆ ನಡೆಸಿದ್ದರು. ಇಂದಿಗೂ ನಾಯಕನಹಟ್ಟಿ, ನನ್ನಿವಾಳ ಮತ್ತು ಗೋನೂರು ಎಂಬ ಮೂರು ಕಟ್ಟೆಮನೆಗಳು ಮ್ಯಾಸಬೇಡರಿಗೆ ಬಹಳ ಮುಖ್ಯವಾಗಿವೆ.

ಪ್ರಾಚೀನ ಪಾಳೇಪಟ್ಟುಗಳೆಂದು ಹೆಸರಾಗಿದ್ದ ಆನೆಗೊಂದಿ, ನಿಡಗಲ್ಲು, ಚಿತ್ರದುರ್ಗ, ಹರ್ತಿಕೋಟೆ, ತರಿಕೆರೆ, ರತ್ನಗಿರಿ,ರಾಯದುರ್ಗ, ಮಿಡಿಗೇಶಿ, ಐಮಂಗಲ, ಹಾಗಲವಾಡಿ, ಪಾವಗಡ, ಪೆನುಗೊಂಡ ಎಂಬ ಹನ್ನೆರಡು ಸಂಸ್ಥಾನಗಳು ಬೇಡರ ಪಾಳೇಪಟ್ಟುಗಳಾಗಿದ್ದವು. ಅದೇ ರೀತಿ ಗೋವಾ, ಹಾವೇರಿ, ಬಿಜಾಪುರ, ಬೀರೂರು, ಸುರಪುರ, ಗದಗ,ಪಾವಗಡ, ಮಡಕಶಿರಾ, ಗೌರಿಬಿದನೂರು, ಬಸವಪಟ್ಟಣ, ಹೈದಾರಬಾದ್, ಗೊಲಕೊಂಡ, ಗುತ್ತಿ, ಕಲ್ಯಾಣದುರ್ಗ, ಯಾದಗಿರಿ, ರಾಯಚೂರು, ಪುತ್ತೂರು, ಶಿರಾ, ಶಿವಮೊಗ್ಗ, ಕದರಿ, ಹೇಮಾವತಿ, ಮುಳಬಾಗಿಲು, ಹರಪನಹಳ್ಳಿ, ಹುಚ್ಚಂಗಿದುರ್ಗ, ತೀರುನೆಲ್ಲಿ, ಬಳ್ಳಾರಿ, ಮೊಳಕಾಲ್ಮೂರು, ಇಕ್ಕೇರಿ, ಸ್ವಾದಿ, ಕೊಲ್ಲಾಪುರ, ಬಂಕಾಪುರ, ಸಿರಸಂಗಿ, ಬಿದನೂರು, ನಂದಿಯಾಳ, ದಾವನಹಳ್ಳಿ, ಮುಟ್ಟಿ, ಕಡಪ, ಬೇಲೂರು, ಮಂಗಳೂರು, ಕುಂದುರ್ಪಿ, ಗುಡೆಕೋಟೆ, ಬಾಣಾವರ, ಕಮ್ಮಟದುರ್ಗ, ಚಿಕ್ಕನಾಯಕನಹಳ್ಳಿ, ಸುರಪುರ ಮುಂತಾದ ಕಡೆಗಳಲ್ಲಿದ್ದ ಪಾಳೆಯಗಾರರು ಕೂಡ ಈ ಬೇಡ ಜನಾಂಗಕ್ಕೆ ಸೇರಿದವರಾಗಿದ್ದಾರೆ.

೨.೨. ಕಾಡುಗೊಲ್ಲರ ಮೂಲ ಮತ್ತು ಪರಂಪರೆ

ಕಾಡುಗೊಲ್ಲರ ಮೂಲ ಮತ್ತು ಪರಂಪರೆ ಕುರಿತು ಸಂಶೋಧಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಉತ್ತರ ಭಾರತದ ದೆಹಲಿ ಮತ್ತು ಸುತ್ತಮುತ್ತ ಪ್ರದೇಶದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದವರು ಎಂದು ಹೇಳಬಹುದು. ಉತ್ತರ ಭಾರತದಲ್ಲಿ ಗೊಲ್ಲರನ್ನು ಯಾದವರು ಎಂದೇ ಕರೆಯುತ್ತಾರೆ. ಯಾದವರು ರಾಜರಾಗಿ ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದವರು. ಯಾದವರು ಪ್ರಮುಖ ಪ್ರದೇಶಗಳಾದ ಅಯೋಧ್ಯೆ, ದ್ವಾರಕೆ, ದೇವಗಿರಿ ಮೊದಲಾದ ಸ್ಥಳಗಳು ಕೂಡ ಉತ್ತರ ಭಾರತದಲ್ಲೇ ಬರುತ್ತವೆ. ಪ್ರಸ್ತುತ ಕಾಡುಗೊಲ್ಲರ ಹಲವು ಕಥೆ, ಪುರಾಣ, ಐತಿಹ್ಯಗಳು ಕೂಡ ದೆಹಲಿಯ ಮೂಲವನ್ನೇ ಸೂಚಿಸುತ್ತವೆ. ಬಿ.ವಿ. ನಾಗರಾಜುರವರು

'ಗೊಲ್ಲರಹಟ್ಟಿ' ಎಂಬ ಪುಸ್ತಕದಲ್ಲಿ (೧೯೮೮-ಪು.ಸಂ:೪) "ಗೊಲ್ಲರ ಮೂಲ ಸ್ಥಳ ಹುಡುಕಿ ಹೊರಟಾಗ ದೆಹಲಿ ಮತ್ತು ಸುತ್ತ ಮುತ್ತಲಿನ ಗ್ರಾಮ-ಪಟ್ಟಣಗಳಿದ್ದವರು ಎಂಬುದು ವಿಚಿತ್ರವಾಗಿ ಕಂಡರೂ ಮೊಗಲರ ಕಾಲಕ್ಕೆ ಅವರುಗಳ ಹಿಂಸೆ ತಾಳಲಾರದೆ ಬುಡಕಟ್ಟಿನ ಪ್ರಧಾನರನ್ನು ಒಳಗೊಂಡಂತೆ ಎಲ್ಲರೂ ದಕ್ಷಿಣಕ್ಕೆ ವಲಸೆ ಬಂದವರು ಎಂಬುದು ಆವರ ಬದುಕಿನ ಬಗ್ಗೆ ಅಧ್ಯಯನವೊಂದು ತಿಳಿಸುತ್ತದೆ". ಎಂಬ ಮಾತು ಕಾಡುಗೊಲ್ಲರ ಮೂಲ ಮತ್ತು ಪರಂಪರೆಯನ್ನು ಸೂಚಿಸುತ್ತದೆ.

ಚಂದ್ರವಂಶದ ಚಂದಮುತ್ತಿ ಮತ್ತು ಸೂರ್ಯವಂಶದ ಚಿತ್ತಮುತ್ತಿ ಎಂಬುವರು ಕಾಡುಗೊಲ್ಲರ ಮೂಲ ಪುರುಷರು. ಇವರು ದೆಹಲಿ ಮತ್ತು ಸುತ್ತ ಮುತ್ತ ಪ್ರದೇಶಗಳಲ್ಲಿ ಪಶುಪಾಲನೆ ಹಾಗೂ ಹೈನುಗಾರಿಕೆ ವೃತ್ತಿಯಲ್ಲಿ ತೊಡಗಿದ್ದವರು. ಇವರಿಬ್ಬರ ಹೆಣ್ಣುಮಕ್ಕಳು ದೆಹಲಿ ಪಟ್ಟಣದಲ್ಲಿ ಹಾಲು ಮೊಸರು ಮಾರುತ್ತಿರುವಾಗ, ಈ ಹೆಣ್ಣು ಮಕ್ಕಳ ಸೌಂದರ್ಯಕ್ಕೆ ದೆಹಲಿಯ ನವಾಬ ಮೋಹಿತನಾಗಿ ಅವರನ್ನೇ ಮದುವೆಯಾಗಬೇಕೆಂದು, ಚಂದಮುತ್ತಿ ಮತ್ತು ಚಿತ್ತಮುತ್ತಿಗೆ ಹೇಳಿ ಕಳುಹಿಸುತ್ತಾನೆ. ಈ ನವಾಬನ ದುಡುಕುತನಕ್ಕೆ 'ಚಂದಮುತ್ತಿ' ಬಂಧುಗಳಾದ ಬಲ್ಲಾಳು ಸೋಮಗೊಂಡನಗೌಡ, ಭೂಮಮುತ್ತಿ, ಚಿತ್ತಮುತ್ತಿ, ರಾಮಚಂದ್ರಮುತ್ತಿ, ಅರೇರಾಯ ಗೊಂಡ, ಮರೇರಾಯಗೊಂಡ, ಎಗಡಿಮುತ್ತಿ, ಅಜ್ಜಿಮುತ್ತಿ, ಅತ್ತೆರಾಯ, ಮುತ್ತೆರಾಯ, ಕರಡಿಬುಳ್ಳನಾಯ್ಕ, ಬಾಲಮುತ್ತನಾಯ್ಕ, ಪದ್ಮಳ್ಳನಾಯ್ಕ ಮೊದಲಾದವರು ಉದ್ರೇಕಿತರಾಗಿ ಹಾಲಿನಂತ ಕುಲ ನೀರಾಗಬಾರದೆಂದು; ಗೋಕುಲದ ಹೆಣ್ಣು ಮಕ್ಕಳನ್ನು ತುರುಕರಿಗೆ ಕೊಟ್ಟು ಮದುವೆ ಮಾಡುವುದು ನಮ್ಮ ಗೊಲ್ಲಾಳಿಕೆಗೆ ಅಪಮಾನ ವೆಂದು ಎಲ್ಲಾರೂ ಕುಳಿತು ವಿಚಾರಮಾಡಿ, ಸಾರ್ವಾಡೇಶ್ವರಸ್ವಾಮಿಗಳ ನೇತೃತ್ವದಲ್ಲಿ ದೆಹಲಿ ಪಟ್ಟಣವನ್ನು ಬಿಟ್ಟು ದಕ್ಷಿಣ ಭಾರತದ ಕಡೆ ವಲಸೆ ಹೋಗಲು ನಿರ್ಧಾರ ಕೈಗೊಂಡರು.

ಈ ವಿಷಯ ಹೇಗೋ ನವಾಬನಿಗೆ ಗೊತ್ತಾಗಿ ದೆಹಲಿ ಬಿಟ್ಟು ಹೋಗುವ ಗೊಲ್ಲರು ಇಲ್ಲಿರುವ ಹದ್ದು ಕಾಗೆಗಳನ್ನು ಒಯ್ಯುವರೇ? ಎಂದು ತಿರಸ್ಕಾರದಿಂದ ಮಾತನಾಡಿದಾಗ, ಈ ನವಾಬರ ಮಾತನ್ನೇ ಸವಾಲಾಗಿ ಸ್ವೀಕರಿಸಿದ ಗೊಲ್ಲರು ತಮ್ಮಲ್ಲಿದ್ದ ಬರಡು ಕುರಿಗಳನ್ನು ಕಡಿದು ಮಾಂಸವನ್ನು ಎತ್ತಿನ ಬಂಡಿಗಳಿಗೆ ತುಂಬಿ ಪ್ರಯಾಣ ನಡೆಸ ತೊಡಗಿದರು. ಆಗ ದೆಹಲಿ ಪಟ್ಟಣದಲ್ಲಿದ್ದ ಹದ್ದು ಕಾಗೆಗಳೆಲ್ಲಾ ಮಾಂಸದ ಬಂಡಿಯನ್ನು ಹಿಂಬಾಲಿಸಿ ಹೊರಟವಂತೆ. ಆದ್ದರಿಂದ ಇಂದಿಗೂ ದೆಹಲಿ ಪಟ್ಟಣದಲ್ಲಿ ಹದ್ದು ಕಾಗೆಗಳು ಕಡಿಮೆಯೇ ಎಂದು ಕಾಡುಗೊಲ್ಲರ ನಂಬಿಕೆಯಾಗಿದೆ.

ದೆಹಲಿಯಿಂದ ಹೊರಟ 'ಗೊಲ್ಲರ ಕಂಪಳ' ಹದಿನೆಂಟು ಜಾತಿ, ನೂರ ಒಂದು ಕುಲ, ಹನ್ನೆರಡು ಮಂದಿ ಆಯಾಗಾರರು ಮತ್ತು ಹನ್ನೆರಡು ಪೆಟ್ಟಿಗೆ ದೇವರುಗಳನ್ನು ಸಾಗಿಸಿಕೊಂಡು ಸಾರ್ವಾಡೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಮಧ್ಯಪ್ರದೇಶದ ಗೊಂಡಾರಣ್ಯದ ಹತ್ತಿರ ಬಂದಾಗ ನರ್ಮದಾ ನದಿ ತುಂಬಿ ಹರಿಯುತ್ತಿದ್ದುದರಿಂದ, ಚೊಪ್ಪರಾಯ ಎಂಬ ಸಾರ್ವಾಡೇಶ್ವರ ಸ್ವಾಮಿಗಳ ಶಿಷ್ಯ ಶಿರಚ್ಛೇದನ ಮಾಡಿ ಗಂಗಾದೇವಿಗೆ ಅರ್ಪಿಸಿ ದಾರಿಬಿಡಲು ಪ್ರಾರ್ಥಿಸಿಕೊಳ್ಳುತ್ತಾನೆ. ಆಗ ಗಂಗಾದೇವಿ ಚೊಪ್ಪರಾಯನ ಭಕ್ತಿಗೆ ಮೆಚ್ಚಿ, ನದಿ ಎರಡು ಭಾಗವಾಗಿ ಮಧ್ಯದಲ್ಲಿ ದಾರಿ ಮಾಡಿಕೊಡುತ್ತಾಳೆ. ನರ್ಮದಾ ನದಿ ದಾಟಿ ಹೋದ ಗೊಲ್ಲರ ಕಂಪಳ ನದಿ ದಡದಲ್ಲಿ ವಿಶ್ರಮಿಸಿ

ಕೊಳ್ಳುತ್ತಿರುವಾಗ, ದೆಹಲಿ ನವಾಬನ ಸೈನ್ಯ ದಂಡೆತ್ತಿ ಬರುತ್ತದೆ. ಆಗ ಗೊಂಡಾರಣ್ಯದಲ್ಲಿ ಬೇಟೆಯಾಡಿ ಜೀವಿಸುತ್ತಿದ್ದ 'ಬೇಡರು' ಬರೀ ಬಿಲ್ಲು, ಬಾಣ, ಕವಣೆ ಕಲ್ಲುಗಳಿಂದ ನವಾಬನ ಸೈನ್ಯವನ್ನು ಹಿಮ್ಮೆಟ್ಟಿಸಿ ಗೊಲ್ಲರ ಕಂಪಳಕ್ಕೆ ರಕ್ಷಣೆ ಕೊಡುತ್ತಾರೆ. ನಂತರ ಬೇಡರ ನಾಯಕ ನದಿದಾಟಿ ಹೋಗಿ ಸಾರ್ವಾಡೇಶ್ವರ ಸ್ವಾಮಿಗಳಿಗೆ ನಮಸ್ಕರಿಸಿ ನಿಜಸಂಗತಿ ತಿಳಿಸುತ್ತಾನೆ. ಅಂದಿನಿಂದ ಬೇಡರು ಮತ್ತು ಗೊಲ್ಲರು ಅಣ್ಣ ತಮ್ಮಗಳಾಗಿ ಸಾರ್ವಾಡೇಶ್ವರ ಸ್ವಾಮಿಗಳನ್ನು ತಮ್ಮ ಗುರುಗಳೆಂದು ಸ್ವೀಕರಿಸುತ್ತಾರೆ.

ಮಧ್ಯಪ್ರದೇಶದಿಂದ ಹೊರಟ ಗೊಲ್ಲರ ಕಂಪಳ ಮಹಾರಾಷ್ಟ್ರದ ಮಾರ್ಗವಾಗಿ ಕರ್ನಾಟಕದ ಹಂಪಿಗೆ ಬಂದು, ಆಂಧ್ರಪ್ರದೇಶ ಮತ್ತು ಕರ್ನಾಟಕದ ಗಡಿ ಭಾಗಗಳಲ್ಲಿ ಪಶುಪಾಲನೆ ವೃತ್ತಿ ಕೈಗೊಂಡರು. ಇದೇ ಗೊಲ್ಲರ ಒಂದು ಕಂಪಳ ಮೈಸೂರು ಸೀಮೆ ತನಕ ವಲಸೆ ಹೋಗಿದ್ದ ಯದುರಾಯ ಮತ್ತು ಕೃಷ್ಣರಾಯ ಎಂಬುವರು ಮೈಸೂರು ಸಾಮ್ರಾಜ್ಯ ಸ್ಥಾಪಿಸಿ ಕ್ರಿ.ಶ. ೧೪೨೩ ರಿಂದ ಕ್ರಿ.ಶ. ೧೪೫೪ ರವರೆಗೆ ಮೈಸೂರಿನ ದೊರೆಗಳೆಂದು ಆಳ್ವಿಕೆ ನಡೆಸಿದರು. ಮ್ಯಾಸಬೇಡರಂತೆ ಕಾಡುಗೊಲ್ಲರು ಕೂಡ ಕೋಟೆ ಕೊತ್ತಲುಗಳನ್ನು ಕಟ್ಟಿ ಸಾಮ್ರಾಜ್ಯ ಸ್ಥಾಪಿಸಿದ ಹೆಗ್ಗುರುತುಗಳು ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಶ್ರೀರಾಮಪುರ ಅಥವಾ ಬೂದಿಹಾಳು ಪಾಳೆಪಟ್ಟು "ಹದಿನೈದನೇಯ ಶತಮಾನದಲ್ಲಿ ಬೂದಿಹಾಳು ಗೊಲ್ಲರ ಸಿರುಮನೃಪಾಲ ಎಂಬುವನ ಆಳ್ವಿಕೆಯಲ್ಲಿತ್ತೆಂದೂ, ಈತ ವಿಜಯನಗರದ ವಿರುದ್ಧ ನಡೆದ ಯುದ್ಧದಲ್ಲಿ ಮಡಿದನೆಂದು ಹೇಳುತ್ತಾರೆ. ಸಿಂಗಿರಾಜನ ಬಸವರಾಜ ಚರಿತ್ರೆಯಲ್ಲಿ (ಕ್ರಿ.ಶ. ೧೪೮೫) ಈತನ ಪ್ರಸ್ತಾಪ ಬಂದಿದೆ. ಸಿರುಮನ ಸಮಕಾಲೀನ ಕವಿ ರಾಮನು ಸಾಂಗತ್ಯ ಶೈಲಿಯಲ್ಲಿ ಸಿರುಮನ ಚರಿತ್ರೆಯನ್ನು ಬರೆದನು. ಕವಿ ಸಿದ್ಧನು ಕ್ರಿ.ಶ ೧೭೦೦ರಲ್ಲಿ ಸಿರುಮನ ಸಾಂಗತ್ಯ ಎಂಬ ಗ್ರಂಥವನ್ನು ರಚಿಸಿದನು."[೬] ಕ್ರಿ.ಶ. ೧೫ ನೇ ಶತಮಾನದಲ್ಲಿ ಬೂದಿಹಾಳು ಪಾಳೆಯಪಟ್ಟು ಉಚ್ಛ್ರಾಯ ಸ್ಥಿತಿಯಲ್ಲಿತ್ತು ಮತ್ತು ಗೊಲ್ಲರ ಸಿರುಮನೃಪಾಲನ ಆಳ್ವಿಕೆಗೆ ಒಳಪಟ್ಟು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿತ್ತು. ಬೆಳಗಾವಿ ಜಿಲ್ಲಾ ಸವದತ್ತಿ ತಾಲ್ಲೂಕು ಮುನವಳ್ಳಿ ಗ್ರಾಮ ದೇವಗಿರಿಯ ಯಾದವರಿಗೆ ಸೇರಿತ್ತು. ಮತ್ತು ಅಲ್ಲಿ ಪ್ರಸಿದ್ಧಿ ಪಡೆದಿದ್ದ ಪಂಚಲಿಂಗಗಳ ಪಂಚಲಿಂಗೇಶ್ವರ ದೇವಾಲಯವು ಹನ್ನೊಂದು ಮತ್ತು ಹನ್ನೆರಡನೇ ಶತಮಾನದಲ್ಲಿ ಯಾದವರೇ ಕಟ್ಟಿಸಿದ್ದು.

ಸಾರ್ವಾಡೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಬಂದಂತಹ ಕಾಡುಗೊಲ್ಲರು ಚಿತ್ರದುರ್ಗ, ತುಮಕೂರು,ಬಳ್ಳಾರಿ, ಮಂಡ್ಯ, ಮೈಸೂರು, ಹಾಸನ ಮೊದಲಾದ ಜಿಲ್ಲೆಗಳಲ್ಲಿ ಹರಡಿಕೊಂಡರು. ಭಕ್ತರ ಅಪೇಕ್ಷೆ ಮೇರೆಗೆ ಚಿತ್ರದುರ್ಗ ತಾಲ್ಲೂಕು ರಾಮನಹಳ್ಳಿಯಲ್ಲಿ 'ರಾಮಲಿಂಗ'ವನ್ನು, ಕೂಡಲಹಳ್ಳಿಯಲ್ಲಿ 'ಪಾರ್ಥಲಿಂಗ'ವನ್ನು, ಗೋಸಿಕೆರೆ ಮತ್ತು ಹರ್ತಿಕೋಟೆಯಲ್ಲಿ ವೀರಭದ್ರಸ್ವಾಮಿಯನ್ನು, ಕರಿಒಬೇನಹಳ್ಳಿಯಲ್ಲಿ ರೇಣುಕಾದೇವಿಯನ್ನು ಸಾರ್ವಾಡೇಶ್ವರ ಸ್ವಾಮಿಗಳು ಸ್ಥಾಪಿಸಿದರು. ಕರಡಿಬುಳ್ಳಾನಾಯ್ಕ ನಿಂತ ಸ್ಥಳ ಕರಿಒಬೇನಹಳ್ಳಿ, ಚಂದಮುತ್ತಿ ನಿಂತ ಸ್ಥಳ ತಾಳವಟ್ಟಿ ಮತ್ತು ರಾಮಲಿಂಗ ಸ್ಥಾಪಿಸಿದ ಸ್ಥಳ ರಾಮನಹಳ್ಳಿ ಎಂದು ಹೆಸರಿಟ್ಟು ಕರಿಒಬೇನಹಳ್ಳಿ, ತಾಳವಟ್ಟಿ ಮತ್ತು ರಾಮನಹಳ್ಳಿ ಎಂಬ ಮೂರು ಹಟ್ಟಿಗಳನ್ನೇ ಕಾಡುಗೊಲ್ಲರ ಕಟ್ಟೆಮನೆಗಳು ಎಂದು ನಿಗದಿಪಡಿಸಲಾಯಿತು.

೩. ಪುರಾಣಗಳು ಮತ್ತು ಐತಿಹ್ಯಗಳುತಿ

ಯಾವುದೇ ಜನಾಂಗದ ಅಧ್ಯಯನಕ್ಕೆ ಆ ಪ್ರದೇಶದ ಪುರಾಣಗಳು ಮತ್ತು ಐತಿಹ್ಯಗಳು ಮಹತ್ವವಾದ ಆಕರಗಳಾಗಿರುತ್ತವೆ. ಜನಾಂಗದ ಹುಟ್ಟು, ಬೆಳವಣಿಗೆ, ನಾಶ, ಮೊದಲಾದವುಗಳನ್ನು ಕುರಿತು ಹೇಳುವ ದಂತ ಕಥೆಗಳನ್ನೇ ಪುರಾಣಗಳೆಂದು ಕರೆಯಲಾಗುತ್ತದೆ. ಜನಾಂಗದ ಸಾಂಸ್ಕೃತಿಕ ವೀರರ ಲೌಕಿಕ ಅಂಶಗಳನ್ನು ಒಳಗೊಂಡ ಕಥೆಗಳನ್ನು ಐತಿಹ್ಯಗಳೆಂದು ಕರೆಯುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಕೆಲವೊಂದು ಪುರಾಣಗಳು ಮತ್ತು ಐತಿಹ್ಯಗಳು ಕಂಡುಬರುತ್ತವೆ. ಆದ್ದರಿಂದ ಪುರಾಣಗಳು ಮತ್ತು ಐತಿಹ್ಯಗಳನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಲಾಗಿದೆ.

೩.೧. ಪುರಾಣಗಳು

ಪುರಾಣವೆಂದರೆ ಅತಿಪ್ರಾಚೀನವಾದುದು ಎಂದರ್ಥ. ವೇದೋಪನಿಷತ್ತು, ಸ್ಮೃತಿ ಹಾಗೂ ಮಹಾಕಾವ್ಯಗಳಲ್ಲಿ ಪ್ರತಿಪಾದಿತವಾದ ವಿಚಾರಗಳನ್ನು, ತತ್ವಗಳನ್ನು ಜನಸಾಮಾನ್ಯರಿಗೆ ಕೂಡ ತಿಳಿಯುವಂತೆ ಹೇಳುವದೇ ಪುರಾಣದ ಉದ್ದೇಶ. ಇಲ್ಲಿ ಕಾಲ್ಪನಿಕ ಕಥೆಗಳು, ದಂತಕಥೆಗಳು, ಇತಿಹಾಸ, ಹುಟ್ಟು, ಸಾವು, ಪವಾಡಗಳು, ವಿಧಿನಿಯಮ, ಪದ್ಧತಿ, ದೇವರು, ಭವಿಷ್ಯ, ದೇವತೆಗಳ ಸಾಹಸ ಕಥೆಗಳು, ಭಗವಂತನ ಲೀಲೆ, ಮೊದಲಾದ ಕಥೆಗಳು ಸಹ ಪುರಾಣಗಳ ವಸ್ತುಗಳಾಗಿರುತ್ತವೆ. ಅಷ್ಟಾದಶ ಪುರಾಣಗಳೆಂದು ಕರೆಯಲ್ಪಡುವ ಹದಿನೆಂಟು ಪುರಾಣಗಳು ಬಹಳ ಪ್ರಸಿದ್ಧಿ ಪಡೆದಿವೆ. ಅವುಗಳಲ್ಲಿ 'ವಿಷ್ಣುಪುರಾಣ' ಮತ್ತು 'ಭಾಗವತಪುರಾಣ'ಗಳು ಹೆಚ್ಚು ಜನಪ್ರಿಯವಾಗಿವೆ. ಮತ್ಸ್ಯಪುರಾಣ, ಮಾರ್ಕಂಡೇಯ ಪುರಾಣ, ಭವಿಷ್ಯ ಪುರಾಣ, ಭಾಗವತ ಪುರಾಣ, ಬ್ರಹ್ಮಪುರಾಣ, ಬ್ರಹ್ಮಾಂಡ ಪುರಾಣ, ಬ್ರಹ್ಮವೈವರ್ತ ಪುರಾಣ, ವಾಮನ ಪುರಾಣ, ವಾಯು ಪುರಾಣ, ವಿಷ್ಣು ಪುರಾಣ, ವರಾಹ ಪುರಾಣ, ಅಗ್ನಿ ಪುರಾಣ, ನಾರದ ಪುರಾಣ, ಪದ್ಮ ಪುರಾಣ, ಲಿಂಗ ಪುರಾಣ, ಗರುಡ ಪುರಾಣ, ಕೂರ್ಮ ಪುರಾಣ, ಮತ್ತು ಸ್ಕಂದ ಪುರಾಣ ಎಂಬ ಅಷ್ಟಾದಶ ಪುರಾಣಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಕಥೆಗಳು, ಮೂಲ, ಪರಂಪರೆ ಮೊದಲಾದ ಅಂಶಗಳು ಕಂಡು ಬರುತ್ತವೆ.

ಮ್ಯಾಸಬೇಡರಿಗೆ ಸಂಬಂಧಿಸಿದ ಶಿವ ಪುರಾಣ, ದೇವಿ ಪುರಾಣ, ನರಸಿಂಹ ಪುರಾಣ, ಚೆಂಚುಲಕ್ಷ್ಮೀಪುರಾಣ, ವಾಲ್ಮೀಕಿ ಪುರಾಣ, ಶಬರಿ ಪುರಾಣ, ಧರ್ಮವ್ಯಾಧನ ಪುರಾಣ, ಏಕಲವ್ಯನ ಪುರಾಣ, ಕಣ್ಣಪ್ಪನ ಪುರಾಣ, ಮೂಗನಾಯಕನ ಪುರಾಣ, ಭೂತಪ್ಪನ ಪುರಾಣ ಮೊದಲಾದ ಪುರಾಣಗಳನ್ನು ಗುರುತಿಸಬಹುದು. ಅದೇ ರೀತಿ ಕಾಡುಗೊಲ್ಲರಿಗೆ ಸಂಬಂಧಿಸಿದ ಜುಂಜಪ್ಪನ ಪುರಾಣ, ಎತ್ತಪ್ಪನ ಪುರಾಣ, ಚಿತ್ರದೇವರ ಪುರಾಣ, ಕಾಟಂದೇವರ ಪುರಾಣ, ಕ್ಯಾತಪ್ಪನ ಪುರಾಣ, ಪಾತಪ್ಪನ ಪುರಾಣ, ವೀರಚಿಕ್ಕಣ್ಣನ ಪುರಾಣ, ವೀರನಾಗಣ್ಣನ ಪುರಾಣ, ಮತ್ತು ವೀರಕರಿಯಣ್ಣನ ಪುರಾಣಗಳನ್ನು ಗುರುತಿಸಬಹುದು.

೩.೨. ಐತಿಹ್ಯಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಕೆಲವೊಂದು ಐತಿಹ್ಯಗಳು ಕಂಡು ಬರುತ್ತವೆ. ಮ್ಯಾಸಬೇಡರಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಈ ಜನಾಂಗದ ಮೂಲ ಮತ್ತು ಪರಂಪರೆಗೆ ಸಂಬಂಧಿಸಿದ, ಒಳಿತು

ಕೆಡುಕುಗಳ ಅರಿವಿಲ್ಲದ ಬೇಡ ವಾಲ್ಮೀಕಿಯಾಗಿ ಮಾರ್ಪಟ್ಟು ರಾಮಾಯಣದಂತಹ ಅವನತಿಯೇ ಇಲ್ಲದಂತ ಮಹಾಕಾವ್ಯ ರಚಿಸಿದ್ದು. ಬೇಡ ಕುಲದಲ್ಲಿ ಹುಟ್ಟಿದ ಶಬರಿ ಮಾತಂಗ ಮುನಿಯ ಶಿಷ್ಯಳಾಗಿ ಜ್ಞಾನೋಪದೇಶ ಪಡೆದು ಗುರುಗಳ ಮಾರ್ಗದರ್ಶನದಂತೆ ಶ್ರೀರಾಮಚಂದ್ರನ ದರ್ಶನಕ್ಕಾಗಿ ಕಾದು ಕುಳಿತು ಕೊನೆಗೆ ರಾಮನ ದರ್ಶನ ಪಡೆದಿದ್ದು, ಬೇಡರವನಾದ ಧರ್ಮವ್ಯಾಧ ತನ್ನ ಕರ್ಮಸಿದ್ಧಾಂತದ ಮೂಲಕ ಬ್ರಾಹ್ಮಣ ವಟುವಿಗೆ ಜೀವಿತ ವೇದಾಂತವನ್ನು ಉಪದೇಶಿಸಿದ್ದು, ಬೇಡರ ಹಿರಣ್ಯಧನುಹನ ಮಗನಾದ ಏಕಲವ್ಯ ಗುರು ದ್ರೋಣಾಚಾರ್ಯರಿಗೆ ತನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಿ ಗುರುದಕ್ಷಿಣೆಯಾಗಿ ಕೊಟ್ಟಿದ್ದು, ಭೀಮ ಭಕ್ತಿಯ ಬೇಡರ ಕಣ್ಣಪ್ಪ ಶಿವನನ್ನು ಸಾಕ್ಷಾತ್ಕರಿಸಿಕೊಂಡಿದ್ದು, ಪಾಪದ ಕೂಸಾಗಿ ಬೆಳೆದ ಜಗಲೂರಜ್ಜನ ಪವಾಡಗಳು, ಪಶುಪಾಲಕನಾಗಿದ್ದ ಗಾದರಿಪಾಲ ನಾಯಕ ಹುಲಿಯೊಂದಿಗೆ ಹೋರಾಡಿದ್ದು, ಶ್ರೀಕೃಷ್ಣನಿಂದ ಗೋವು ಮತ್ತು ಸಾಲಿಗ್ರಾಮಗಳನ್ನು ಪಡೆದಿದ್ದು, ಹನ್ನೆರಡು ಪೆಟ್ಟಿಗೆ ದೇವರುಗಳು ದೊರಕಿದ್ದು, ಕುಲ ಬೆಡಗುಗಳು ಹುಟ್ಟಿಕೊಂಡಿದ್ದು, ಸಾಮ್ರಾಜ್ಯಗಳ ಸ್ಥಾಪನೆ, ಗುರು ಪರಂಪರೆ, ಮ್ಯಾಸಬೇಡ ಮತ್ತು ಊರುಬೇಡರಾಗಿದ್ದು, ನಾಯಕನಹಟ್ಟಿ ತಿಪ್ಪೇಸ್ವಾಮಿ ಐದು ಕೆರೆ ಮತ್ತು ಪುರಗಳನ್ನು ನಿರ್ಮಿಸಿದ್ದು, ಗೌರಸಂದ್ರ ಮಾರಕ್ಕನ ಪವಾಡಗಳು, ಸ್ಥಳನಾಮಗಳು, ಬೇಟೆ ಮತ್ತು ಪಶುಪಾಲನೆಗೆ ಸಂಬಂಧಿಸಿದ ಅನೇಕ ಐತಹ್ಯಗಳು ಮ್ಯಾಸಬೇಡರಲ್ಲಿ ಕಂಡು ಬರುತ್ತವೆ.

ಕಾಡುಗೊಲ್ಲರಿಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಅವರು ಉತ್ತರ ಭಾರತದಿಂದ ವಲಸೆ ಬಂದ ಪ್ರಸಂಗ, ಚಂದಮುತ್ತಿ ಮತ್ತು ಚಿತ್ತಮುತ್ತಿ ವಂಶಾವಳಿಗೆ ಸಂಬಂಧಿಸಿದ, ರಾಮೇಗೌಡನ ಕುಲ ಹುಟ್ಟಿ ಕೊಂಡಿದ್ದು, ಕರಡಿ ಬುಳ್ಳನಾಯ್ಕನ ವಂಶದ ಕುರಿತು, ಮಾರನರಗೊಲ್ಲರ ವಿವಾಹ ಪದ್ಧತಿಗಳು, ಕಾಡುಗೊಲ್ಲರು ಪಶು ಮತ್ತು ಮೇಷ ಪಾಲಕರಾಗಿದ್ದು, ಅರುಣೆ ಗುಡ್ಡುಗಳಿಗೆ ಸಂಬಂಧಿಸಿದ, ಕಾಡುಗೊಲ್ಲ ಮತ್ತು ಮ್ಯಾಸಬೇಡರ ಸಂಬಂಧ ಹಾಗೂ ಬೇರ್ಪಟ್ಟಿದ್ದು, ಸಾರ್ವಾಡೇಶ್ವರಸ್ವಾಮಿಗಳನ್ನು ಗುರುವಾಗಿ ಸ್ವಿಕರಿಸಿದ್ದು, ಪಂಚಲಿಂಗಗಳ ಸ್ಥಾಪನೆಯಾಗಿದ್ದು, ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ನಿರ್ಮಾಣ, ಹುರುಳಿ ನವಣೆಗೆ ಸಂಬಂಧಿಸಿದ, ಹುಟ್ಟು ಸಾವು ಬದುಕಿಗೆ ಸಂಬಂಧಿಸಿದ, ದೇವರು ಧರ್ಮ ಪವಾಡಗಳು ನಡೆದಿದ್ದು, ಗೌರಸಂದ್ರ ಮಾರಕ್ಕ ಮತ್ತು ಪುರ್ಲಳ್ಳಿ ಭೂತಪ್ಪನ ಸಾಹಸಗಳು, ವೀರಚಿಕ್ಕಣ್ಣ, ವೀರಕರಿಯಣ್ಣ ಮತ್ತು ವೀರನಾಗಣ್ಣನ ಸಾಹಸ ಪ್ರವೃತಿಗಳು, ಸಾಮ್ರಾಜ್ಯಗಳ ಸ್ಥಾಪನೆ ಮಾಡಿದ್ದು, ಚಿತ್ತಯ್ಯ ಕಾಟಯ್ಯ ಮತ್ತು ಓಬಳನರಸಿಂಹನ ಸಂಬಂಧಗಳು, ಜುಂಜಪ್ಪ ಮತ್ತು ಎತ್ತಪ್ಪನ ಪವಾಡಗಳು, ಕ್ಯಾತಪ್ಪ ಮತ್ತು ಪಾತೇದೇವರ ಅದ್ಭುತ ಲೀಲೆಗಳು, ಗಾದರಿಪಾಲನಾಯಕ ಮತ್ತು ಕಾಡುಗೊಲ್ಲರ ಸಂಬಂಧಗಳು, ಜೆನ್ನಿಗೆ ಕುರಿ ಮತ್ತು ಹಸುಗಳಿಗೆ ಸಂಬಂಧಿಸಿದ, ಕುಲ ಬೆಡಗು ಸ್ಥಳನಾಮಗಳಿಗೆ ಸಂಬಂಧಿಸಿದ, ಅನೇಕ ಐತಿಹ್ಯಗಳು ಕಾಡುಗೊಲ್ಲರಲ್ಲಿ ಕಂಡು ಬರುತ್ತವೆ.

೪. ಸಾಮ್ಯತೆ ಹಾಗೂ ಭಿನ್ನತೆ

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಹರಿದು ಹಂಚಿ ಹೋದ ಮ್ಯಾಸಬೇಡ ಮತ್ತು ಕಾಡುಗೊಲ್ಲರನ್ನು ಕುರಿತು ತೌಲನಿಕವಾಗಿ ಅಧ್ಯಯನ ಮಾಡಿದರೆ ಈ ಎರಡೂ ಬುಡಕಟ್ಟು ಜನಾಂಗದಲ್ಲಿ ಪರಸ್ಪರ ಸಾಮ್ಯತೆಗಳು ಹಾಗೂ ಭಿನ್ನತೆಗಳನ್ನು ಗುರುತಿಸಲು ಸಾಧ್ಯವಿದೆ. ಗೊಲ್ಲರಲ್ಲಿ ಕಾಡುಗೊಲ್ಲರು ಮತ್ತು ಊರುಗೊಲ್ಲರು, ಬೇಡರಲ್ಲಿ

ಮ್ಯಾಸಬೇಡರು ಮತ್ತು ಊರುಬೇಡರು ಎಂಬ ಉಪ-ಪಂಗಡಗಳು ಕಂಡು ಬರುವುದರಿಂದ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಇವರ ಸಂಸ್ಕೃತಿ ಮತ್ತು ಸಂಪ್ರಾದಯಗಳಲ್ಲಿ ಸಾಕಷ್ಟು ಭಿನ್ನತೆಗಳನ್ನು ಗುರುತಿಸಲು ಸಾಧ್ಯವಿದೆ. ವೇದಗಳಿಗೂ ಪುರಾತನವಾದ ಇತಿಹಾಸವನ್ನು ಹೊಂದಿದ ಈ ಎರಡು ಬುಡಕಟ್ಟು ಜನಾಂಗ ದೇವರು ಧಾರ್ಮಿಕ ವಿಚಾರದಲ್ಲಿ ಭಾರತದ ಯಾವುದೇ ಬುಡಕಟ್ಟುಗಳು ಹೊಂದಿರದಂತಹ ಶ್ರೀಮಂತ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹೊಂದಿವೆ. ಆದ್ದರಿಂದ ಈ ಎರಡು ಬುಡಕಟ್ಟುಗಳ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡಬೇಕಾಗಿದೆ.

೪.೧. ಸಾಮ್ಯತೆಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದು ಪಶುಪಾಲನೆ ವೃತ್ತಿಯನ್ನು ಕೈಗೊಂಡವರು. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯನ್ನೇ ಕೇಂದ್ರವಾಗಿಟ್ಟುಕೊಂಡು ಅನೇಕ ಧಾರ್ಮಿಕ ಕೇಂದ್ರಗಳು, ಗುಡಿಕಟ್ಟೆ ಮತ್ತು ಕಟ್ಟೆಮನೆಗಳನ್ನು ಈ ಪ್ರದೇಶದಲ್ಲಿ ಸ್ಥಾಪಿಸಿದರು. ಆದ್ದರಿಂದ ಪುರಾತನ ಕಾಲದಿಂದಲೂ ಈ ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಪರಸ್ಪರ ಸಾಮ್ಯತೆಗಳು ಬೆಳೆದುಬಂದವು. ಇವರ ವೇಷ-ಭೂಷಣ, ದಿನ ನಿತ್ಯ ಆಹಾರ ಪದ್ಧತಿ, ವಸತಿ ವ್ಯವಸ್ಥೆ, ವೃತ್ತಿಗಳು, ಜನನ ಸಂಸ್ಕಾರ, ಮಕ್ಕಳ ನಾಮಕರಣ, ಋತುಮತಿ ಶಾಸ್ತ್ರ, ಶವ ಸಂಸ್ಕಾರ, ವಿಧಿ ನಿಷೇಧಗಳಲ್ಲಿ ಪರಸ್ಪರ ಸಾಮ್ಯತೆಗಳು ಕಂಡು ಬರುತ್ತವೆ.

ಧಾರ್ಮಿಕತೆ ಮತ್ತು ಆಚರಣೆಗಳಲ್ಲಿ ಇವರಿಬ್ಬರೂ ಪ್ರಕೃತಿ ಆರಾಧಕರು, ಸೂರ್ಯ, ಚಂದ್ರ, ಭೂತಾರಾಧನೆ, ಮತ್ತು ಸರ್ವಚೇತನವಾದಿಗಳು.ಇವರು ಪೂಜಿಸುವ ದೇವರುಗಳಲ್ಲಿ ಪರಸ್ಪರ ಸಾಮ್ಯತೆಗಳಿವೆ. ಮ್ಯಾಸಬೇಡರ ಹನ್ನೆರಡು ಪೆಟ್ಟಿಗೆ ದೇವರುಗಳಲ್ಲಿ ಕಾಡುಗೊಲ್ಲರು ಆರಾಧಿಸುವ ದೈವಗಳನ್ನು ಕಾಣಬಹುದು.ಅದೇ ರೀತಿ ಕಾಡುಗೊಲ್ಲರು ಆರಾಧಿಸುವ ಪಂಚಲಿಂಗಗಳಲ್ಲಿ ಮ್ಯಾಸಬೇಡರ ದೈವಗಳನ್ನು ಕಾಣಬಹುದು. ದೇವರುಗಳಿಗೆ ಕಟ್ಟುವ ಪೌಳಿ, ಗುಬ್ಬ, ಪೂಜೆ, ವ್ರತ, ಹರಕೆ, ಎಡೆ, ಬಲಿ, ಜೆನ್ನಿಗ ಹಸು ಮೊದಲಾದವುಗಳಲ್ಲಿ ಪರಸ್ಪರ ಸಾಮ್ಯತೆಯನ್ನು ಕಾಣಬಹುದು. ಹಬ್ಬ ಮತ್ತು ಜಾತ್ರೆಗಳಲ್ಲಿ ಪರಸ್ಪರ ಹೊಂದಾಣಿಕೆಯಿಂದ ಇಬ್ಬರು ಕೂಡಿಯೇ ಆಚರಿಸುವ, ಅನೇಕ ಹಬ್ಬ ಹಾಗೂ ಜಾತ್ರೆಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಕಾಣಬಹುದು. ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ, ಗೌರ ಸಮುದ್ರ ಮಾರಮ್ಮನ ಜಾತ್ರೆ, ಗಾದರಿಗುಡ್ಡ ಅಥವಾ ಮಿಂಚೇರಿ ಗುಡ್ಡದ ಜಾತ್ರೆ ಮತ್ತು ಹಾರ್ನಕಣಿವೆ ರಂಗಪ್ಪನ ಜಾತ್ರೆಗಳಲ್ಲಿ ಈ ಎರಡೂ ಬುಡಕಟ್ಟು ಜನಾಂಗ ಹೆಚ್ಚು ಕಡಿಮೆ ಸರಿಸಮಾನ ಸಂಖ್ಯೆಯಲ್ಲಿ ಸೇರಿರುತ್ತಾರೆ.

ಮೂಲತಃ ಈ ಎರಡೂ ಬುಡಕಟ್ಟು ಜನಾಂಗ ಒಂದೇ ತಾಯಿಯ ಮೂಲದವರು ಎಂಬುದಕ್ಕೆ ಕೆಲವೊಂದು ಹಬ್ಬ ಜಾತ್ರೆಗಳಲ್ಲಿ, ಒಂದೇ ಬಾಳೆ ಎಲೆಯಲ್ಲಿ ಇಬ್ಬರು ಊಟ ಮಾಡುವುದು, ಸೋಮನ ಎಡೆಯನ್ನು ಜೊತೆಗೆ ತಿನ್ನುವುದು, ಬಲಿಬಾನ ಅಥವಾ ಎಡೆಗಳನ್ನು ಹಂಚಿಕೊಳ್ಳುವುದು, ದೇವತ ಕಾರ್ಯಗಳಿಗೆ ಇಬ್ಬರೂ ಖರ್ಚುವೆಚ್ಚಗಳನ್ನು ಹಾಕುವುದು, ತಿಥಿ-ಕರ್ಮಗಳಲ್ಲಿ ಭೇದವಿಲ್ಲದೆ ಊಟ ಮಾಡುವುದು ಕೆಲವು ಪ್ರದೇಶಗಳಲ್ಲಿ ಕಂಡು ಬರುತ್ತದೆ.

ಇವರ ದೇವರ ಪ್ರತಿನಿಧಿಗಳಾದ ಪೂಜಾರಿ ಮತ್ತು ದಾಸಯ್ಯಗಳ ಸಾಮಾಜಿಕ ಕಟ್ಟುಕಟ್ಟಳೆಗಳು ಒಂದೇ ರೀತಿ ಕಂಡುಬರುತ್ತವೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೈವಗಳ ಪುಣ್ಯಕ್ಷೇತ್ರಗಳು, ಧಾರ್ಮಿಕ ಕೇಂದ್ರಗಳು ಮತ್ತು ದೈವದ ಆಚರಣೆ ಪದ್ಧತಿಗಳಲ್ಲಿ ಪರಸ್ಪರ ಸಾಮ್ಯತೆ ಕಂಡು ಬರುತ್ತದೆ.

ಭಾಷೆ, ಸಾಹಿತ್ಯ ಮತ್ತು ಕಲೆಗಳಲ್ಲಿ ಪರಸ್ಪರ ಏಕತೆಗಳು ಕಂಡು ಬರುತ್ತವೆ. ಇವರು ವಾಸಿಸುವ ಪ್ರದೇಶಗಳ ಜನಸಂಖ್ಯೆ, ಸಾಂಸ್ಕೃತಿಕ ಪರಪಂರೆ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಆರೋಗ್ಯ, ಧಾರ್ಮಿಕತೆ, ರಾಜಕೀಯ ಪ್ರಜ್ಞೆ ಮೊದಲಾದವುಗಳಲ್ಲಿಯೂ ಕೂಡ ಪರಸ್ಪರ ಸಾಮ್ಯತೆಗಳು ಕಂಡು ಬರುತ್ತವೆ. ಪ್ರದೇಶ ಮತ್ತು ಜನಸಂಖ್ಯೆ ದೃಷ್ಟಿಯಿಂದ ಅವಲೋಕಿಸಿದರೆ ಈ ಎರಡು ಬುಡಕಟ್ಟು ಜನಾಂಗ ಚಿತ್ರದುರ್ಗ ಜಿಲ್ಲೆಯಲ್ಲಿ ಸಮಾನಾಂತರ ಸ್ಥಾನಮಾನಗಳನ್ನು ಉಳಿಸಿಕೊಂಡಿದ್ದಾರೆ.

೪.೨. ಭಿನ್ನತೆಗಳು

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪರಸ್ಪರ ಸಾಮ್ಯತೆಗಳ ಜೊತೆಗೆ ಕೆಲವೊಂದು ಭಿನ್ನತೆಗಳನ್ನು ಗುರುತಿಸಲು ಸಾಧ್ಯವಿದೆ. ಮೊಟ್ಟ ಮೊದಲು ಬಾರಿಗೆ ಈ ಎರಡೂ ಜನಾಂಗದ "ರೂಪ" ಅಥವಾ "ಪದ" ನಿಷ್ಪತ್ತಿಗಳಲ್ಲಿ ಭಿನ್ನತೆಗಳು ಕಂಡು ಬರುತ್ತವೆ. ಮೂಲ ಮತ್ತು ಪರಂಪರೆ ಹುಡುಕಿದರೆ ಮ್ಯಾಸಬೇಡರ ಮೂಲ ನೇಪಾಳದ ಗಂಡಕಿ ನದಿ ಬಯಲು ಪ್ರದೇಶ, ಕಾಡುಗೊಲ್ಲರ ಮೂಲ ವಿಂಧ್ಯಪರ್ವತ ಮತ್ತು ದೇಹಲಿ ಸುತ್ತಮುತ್ತಲಿನ ಗ್ರಾಮ ಪಟ್ಟಣಗಳಲ್ಲಿದ್ದವರು. ಪುರಾಣ ಮತ್ತು ಐತಿಹ್ಯಗಳಲ್ಲಿ ಸಾಕಷ್ಟು ಭಿನ್ನತೆಗಳು ಕಂಡು ಬರುತ್ತವೆ. ಈ ಜನಾಂಗದ ಬೆಡಗುಗಳಲ್ಲಿ ಪರಸ್ಪರ ಹೊಂದಾಣಿಕೆಗಳು ಕಂಡು ಬರುವುದಿಲ್ಲ. ಏಕೆಂದರೆ ಮ್ಯಾಸಬೇಡರ ಕುಲಗಳು 'ಚಂದ್ರಕೇತು' ಮತ್ತು 'ಕಾಮಗೇತು' ಎಂಬುವರಿಂದ ಹುಟ್ಟಿಕೊಂಡಿದ್ದರೆ; ಕಾಡುಗೊಲ್ಲರ ಕುಲಗಳು ಚಿತ್ತಮುತ್ತಿ ಚಂದಮುತ್ತಿ, ಮತ್ತು ರಾಮೇಗೌಡ ಎಂಬುವರಿಂದ ಹುಟ್ಟಿಕೊಂಡಿವೆ.

ವಿವಾಹ ಪದ್ಧತಿಗಳಲ್ಲಿ ಈ ಎರಡು ಜನಾಂಗಕ್ಕೆ ಬಹಳ ಅಂತರವಿದೆ. ಕಾಡುಗೊಲ್ಲರು ತಮ್ಮ ಮದುವೆಗಳಲ್ಲಿ ಅರುಣೆ ತರುವುದು, ಹಾಲುಗಂಭ ತರುವುದು, ಬಾಸಿಂಗ ಕಟ್ಟುವುದು, ಹಸೆಬರೆಯುವುದು, ಬೂವ್ವ, ಸುರುಗೆ ಸುತ್ತುವುದು ಮೊದಲಾದ ಶಾಸ್ತ್ರಗಳನ್ನು ಮಾಡುತ್ತಾರೆ. ಆದರೆ ಮ್ಯಾಸಬೇಡರಲ್ಲಿ ಈ ಯಾವ ಪದ್ಧತಿಗಳು ಕಂಡು ಬರುವುದಿಲ್ಲ. ವೃತ್ತಿಯಲ್ಲಿ ಮ್ಯಾಸಬೇಡರು ಪಶುಪಾಲಕರಾದರೆ, ಕಾಡುಗೊಲ್ಲರು ಮೇಷ ಪಾಲಕರಾಗಿದ್ದರೆ. ನ್ಯಾಯ ಪದ್ಧತಿಯ ವಿಚಾರವಾಗಿ ಬೇರೆ ಬೇರೆ ಗುಡಿಕಟ್ಟೆ, ಕಟ್ಟೆಮನೆಗಳು ಕಂಡು ಬರುತ್ತವೆ. ಜನನ ಸಂಸ್ಕಾರದಲ್ಲಿ, ಹೆರಿಗೆ ಗುಡ್ಲು ಕಟ್ಟುವುದು, ಚೆನ್ನಿಗೆ ಕುಡಿಸುವುದು, ನಾಮಕರಣ, ಋತುಮತಿ ಮೊದಲಾದ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಪರಸ್ಪರ ಭಿನ್ನತೆಗಳಿವೆ.

ಭಾಷೆ, ಸಾಹಿತ್ಯ ಮತ್ತು ಕಲೆಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳನ್ನು ಗುರುತಿಸಬಹುದು. ಮ್ಯಾಸಬೇಡರ ಭಾಷೆ ತೆಲುಗು. ಆದರೆ ಕಾಡುಗೊಲ್ಲರ ಭಾಷೆ ಕನ್ನಡವಾಗಿದೆ. ಸಾಹಿತ್ಯ ಸಂಸ್ಕೃತಿ ವಿಚಾರವಾಗಿ ಕಾಡುಗೊಲ್ಲರಲ್ಲಿ ಜನಪದ ಸಾಹಿತ್ಯ ಚಿತ್ರದುರ್ಗ ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುತ್ತದೆ. ಆದರೆ ಮ್ಯಾಸಬೇಡರಲ್ಲಿ ಇಂಥಹ 'ಜನಪದ ಸಾಹಿತ್ಯ' ಕಾಡುಗೊಲ್ಲರಿಗೆ ಹೋಲಿಸಿದರೆ ಕಡಿಮೆ ಎಂದೇ ಹೇಳಬಹುದು.

ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಕಾಡುಗೊಲ್ಲರಿಗಿಂತ ಮ್ಯಾಸಬೇಡರು ಅಲ್ಪ ಸ್ವಲ್ಪ ಮುಂದೆ ಹೋಗಿದ್ದಾರೆ. ಈ ಎರಡೂ ಬುಡಕಟ್ಟು ಜನಾಂಗದಲ್ಲಿ ನಾವು ಎಷ್ಟೇ ಪರಸ್ಪರ ಸಾಮ್ಯತೆಗಳನ್ನು ಹುಡಿಕಿದರು, ಭಿನ್ನತೆಗಳೇ ಹೆಚ್ಚು ಕಂಡು ಬರುತ್ತವೆ. ಆದರೆ ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಸಂಸ್ಕಾರಗಳು, ಸಂಪ್ರದಾಯಗಳು, ನಂಬಿಕೆಗಳು ಮತ್ತು ಆಚರಣೆಗಳಲ್ಲಿ ಭಿನ್ನತೆಗಳಿಗಿಂತ ಹೆಚ್ಚಾಗಿ ಪರಸ್ಪರ ಸಾಮ್ಯತೆಗಳೇ ಹೆಚ್ಚು ಕಂಡು ಬರುತ್ತವೆ.

೫. ಪ್ರದೇಶ ಮತ್ತು ಜನಸಂಖ್ಯೆ

ಕರ್ನಾಟಕದ ಪ್ರಮುಖ ಬುಡಕಟ್ಟುಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ರಾಜ್ಯದ ತುಂಬೆಲ್ಲ ಹರಡಿ ಕೊಂಡಿದ್ದರೂ, ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಿನ ಜನಸಂಖ್ಯೆ ಕಂಡು ಬರುತ್ತದೆ. 'ಬೇಡರು' ಮತ್ತು 'ಗೊಲ್ಲರು' ಕುರಿತಂತೆ ಜನಗಣತಿ ವರದಿಯಲ್ಲಿಅಂಕಿ-ಅಂಶಗಳ ಮಾಹಿತಿ ದೊರೆಯುತ್ತದೆ. ಆದರೆ ಈ ಎರಡೂ ಜನಾಂಗದ ಉಪ ಪಂಗಡಗಳಾದ 'ಮ್ಯಾಸಬೇಡರು' ಮತ್ತು 'ಊರುಬೇಡರು'; 'ಕಾಡುಗೊಲ್ಲರು' ಮತ್ತು 'ಊರುಗೊಲ್ಲರು' ಗಳ ಕುರಿತಂತೆ ಮಾಹಿತಿಗಳು ದೊರಯುವುದಿಲ್ಲ. ಸರ್ಕಾರ, ಖಾಸಗಿ ಸಂಘ ಸಂಸ್ಥೆಗಳಾಗಲಿ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿಲ್ಲ.ಆದರೂ ಕ್ಷೇತ್ರಕಾರ್ಯದಲ್ಲಿ ಸಿಕ್ಕಂತ ಅಂಕಿ-ಅಂಶಗಳನ್ನು ಬಳಸಿಕೊಂಡು ಮ್ಯಾಸಬೇಡರ ಮತ್ತು ಕಾಡುಗೊಲ್ಲರ ಕುರಿತು ವಿವರಣೆ ಕೊಡಲಾಗಿದೆ.

೫.೧. ಮ್ಯಾಸಬೇಡರ ಪ್ರದೇಶ ಮತ್ತು ಜನಸಂಖ್ಯೆ

ಬೇಡನಾಯಕ ಜನಾಂಗವು ಕರ್ನಾಟಕ ರಾಜ್ಯದ ನಾಲ್ಕನೆ ಅತಿದೊಡ್ಡ ಜನಾಂಗವಾಗಿ ಸುಮಾರು ೬೫ ಲಕ್ಷ ಜನ ಸಂಖ್ಯೆಯನ್ನು ಹೊಂದಿದೆ. ರಾಜ್ಯದ ತುಂಬೆಲ್ಲ ಬೇಡರು ನೆಲಸಿದ್ದರು ಚಿತ್ರದುರ್ಗ, ಬಳ್ಳಾರಿ, ರಾಯಚೂರು, ತುಮಕೂರು ಜಿಲ್ಲೆಗಳಲ್ಲಿ ಮತ್ತು ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಲ್ಲಿ ಬೇಡರು ಹೆಚ್ಚಿನ ಸಂಖ್ಯೆಯಲ್ಲ ಕಂಡು ಬರುತ್ತಾರೆ. ಚಿತ್ರದುರ್ಗ ಜಿಲ್ಲೆ ಒಂದರಲ್ಲೆ ಸುಮಾರು ಮೂರು ಲಕ್ಷ ಬೇಡನಾಯಕರು ನೆಲೆಸಿದ್ದಾರೆ. ಆದರೆ ಬೇಡರ ಉಪ ಪಂಗಡಗಳಾದ 'ಮ್ಯಾಸಬೇಡರು' ಮತ್ತು 'ಊರುಬೇಡರು' ಕುರಿತಂತೆ ಯಾವುದೇ ವರದಿಗಳಲ್ಲಿ ಸ್ಪಷ್ಟವಾದ ಮಾಹಿತಿ ದೊರೆಯುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಮ್ಯಾಸಬೇಡರೆ ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಮ್ಯಾಸಬೇಡರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬಂದರೆ; ಹೊಳಲ್ಕೆರೆ, ಹಿರಿಯೂರು ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಕಡಿಮೆ ಸಂಖ್ಯೆಯ ಮ್ಯಾಸಬೇಡರು ಕಂಡು ಬರುತ್ತಾರೆ. ಸಾಮಾನ್ಯವಾಗಿ ಚಿತ್ರದುರ್ಗ ಜಿಲ್ಲೆಯ ಬೇಡರ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಮ್ಯಾಸಬೇಡರೆ ಕಂಡು ಬರುತ್ತಾರೆ. ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಹೇಳಿಕೊಳ್ಳುವ ಮ್ಯಾಸಬೇಡರ ಮೂರು ಕಟ್ಟೆಮನೆಗಳು ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ, ನನ್ನಿವಾಳ ಮತ್ತು ಚಿತ್ರದುರ್ಗ ತಾಲ್ಲೂಕು ಗೋನೂರು ಪ್ರದೇಶಗಳು ಚಿತ್ರದುರ್ಗ ಜಿಲ್ಲೆಯಲ್ಲಿಯೇ ಬರುತ್ತವೆ. ಇವರ ಪ್ರಮುಖ ಧಾರ್ಮಿಕ ಕೇಂದ್ರಗಳಾದ

ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಗುರುಸಂಸ್ಥಾನ ಮಠ, ಚಳ್ಳಕೆರೆ ತಾಲ್ಲೂಕು ಗೋಸಿಕೆರೆ ಸಾರ್ವಾಡೇಶ್ವರ ಸ್ವಾಮಿಗಳ ಮಠ, ನಾಯಕನಹಟ್ಟಿ ಪಾಳೆಯಗಾರರಿಗೆ ರಾಜಗುರುವಾಗಿದ್ದ ತಿಪ್ಪೇರುದ್ರಸ್ವಾಮಿ ಮಠ ಮತ್ತು ಗೌರಸಮುದ್ರದ 'ಐವೋದಿ ಮಠ' ಎಂದೇ ಹೆಸರಾಗಿದ್ದ ಗೌರಸಂದ್ರ ಮಾರಮ್ಮನ ದೇವಸ್ಥಾನ ಚಿತ್ರದುರ್ಗ ಜಿಲ್ಲೆಯಲ್ಲೇ ಬರುತ್ತವೆ.

ದಾವಣಗೆರೆ, ಬಳ್ಳಾರಿ, ಮತ್ತು ಅನಂತಪುರ ಜಿಲ್ಲೆಗಳು ಕೂಡ ಚಿತ್ರದುರ್ಗದ ನೆರೆಹೊರೆ ಜಿಲ್ಲೆಗಳಾಗಿರುವುದರಿಂದ ಮ್ಯಾಸಬೇಡರ ಹನ್ನೆರಡು ಪಟ್ಟಿಗೆ ದೇವರುಗಳು ಕೂಡ ಈ ನಾಲ್ಕು ಜಲ್ಲೆಗಳಲ್ಲಿ ಹರಡಿಕೊಂಡಿವೆ. ಈ ಹನ್ನೆರಡು ಪಟ್ಟಿಗೆ ದೇವರುಗಳು ನೆಲಸಿದ ಚಳ್ಳಕೆರೆ, ಮೊಳಕಾಲ್ಮೂರು, ಚಿತ್ರದುರ್ಗ, ಜಗಳೂರು, ಕೂಡ್ಲಿಗಿ, ಮತ್ತು ರಾಯದುರ್ಗ ತಾಲ್ಲೂಕುಗಳ ಸುತ್ತಮುತ್ತ ಪ್ರದೇಶಗಳಲ್ಲಿ ಮ್ಯಾಸಬೇಡರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಚಿತ್ರದುರ್ಗ ಜಿಲ್ಲೆಯ ಪೂರ್ವ ದಿಕ್ಕಿನಲ್ಲಿ ಆಂಧ್ರಪ್ರದೇಶದ ಗಡಿಭಾಗಗಳಿರುವುದರಿಂದ ಈ ಹೊತ್ತಿಗೂ ಮ್ಯಾಸಬೇಡರ ಮಾತೃ ಭಾಷೆ ತೆಲುಗು. ಪ್ರಸ್ತುತ ಕನ್ನಡ ಭಾಷೆಯನ್ನು ಅವರು ಬಳಸುತ್ತಿದ್ದರೂ, ತೆಲುಗು ಭಾಷೆ ಮತ್ತು ಸಂಸ್ಕೃತಿಯನ್ನು ಅವರ ಬದುಕಿನಲ್ಲಿ ಕಾಣಬಹುದು.

೫.೨. ಕಾಡುಗೊಲ್ಲರ ಪ್ರದೇಶ ಮತ್ತು ಜನಸಂಖ್ಯೆ

ಕರ್ನಾಟಕ ರಾಜ್ಯದಲ್ಲಿ ಸುಮಾರು ಹತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಗೊಲ್ಲ ಜನಾಂಗದವರಿದ್ದಾರೆ. ಕರ್ನಾಟಕದ ತುಂಬೆಲ್ಲ ಗೊಲ್ಲರು ಹರಡಿಕೊಂಡಿದ್ದರೂ ಚಿತ್ರದುರ್ಗ, ತುಮಕೂರು, ಬೆಂಗಳೂರು, ಕೋಲಾರ, ಬಳ್ಳಾರಿ ಜಿಲ್ಲೆಗಳಲ್ಲಿ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳಲ್ಲಿ ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ರಾಜ್ಯದ ಇತರ ಜಿಲ್ಲೆಗಳಿಗಿಂತ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಡುಗೊಲ್ಲರ ಜನಸಂಖ್ಯೆ ಹೆಚ್ಚು ಕಂಡು ಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಕಡಿಮೆ ಸಂಖ್ಯೆಯ ಕಾಡುಗೊಲ್ಲರಿದ್ದಾರೆ. ಚಿತ್ರದುರ್ಗ ಜಿಲ್ಲೆ ಒಂದರಲ್ಲೇ ಸುಮಾರು ಎರಡು ಲಕ್ಷ ಜನಸಂಖ್ಯೆ ಕಾಡುಗೊಲ್ಲರಿದ್ದಾರೆ. ೧೯೮೪ ರಲ್ಲಿ ಕರ್ನಾಟಕ ಸರ್ಕಾರ ನೇಮಕ ಮಾಡಿದ ಹಿಂದುಳಿದ ವರ್ಗದ ಎರಡನೇ ಆಯೋಗದ ವರದಿಯ ಪ್ರಕಾರ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ ೧.೪೭ ರಷ್ಟು ಗೊಲ್ಲರಿದ್ದಾರೆ. ಆದರೆ ಕಾಡುಗೊಲ್ಲರು ಮತ್ತು ಊರುಗೊಲ್ಲರು ಎಂದು ಪ್ರತ್ಯೇಕವಾಗಿ ವರದಿಯಲ್ಲಿ ಗುರುತಿಸಿಲ್ಲ. ಕರ್ನಾಟಕದ ಒಟ್ಟು ಗೊಲ್ಲರ ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಕಾಡುಗೊಲ್ಲರೆ ಕಂಡು ಬರುತ್ತಾರೆ.

ಕರ್ನಾಟಕದ ಕಾಡುಗೊಲ್ಲರಿಗೆ ಚಿತ್ರದುರ್ಗ ಜಿಲ್ಲೆ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಏಕೆಂದರೆ ಹಿರಿಯೂರು ತಾಲ್ಲೂಕು ಕರಿಓಬೇನಹಳ್ಳಿ, ತಾಳವಟ್ಟಿ ಮತ್ತು ಚಿತ್ರದುರ್ಗ ತಾಲ್ಲೂಕು ರಾಮನಹಳ್ಳಿ ಎಂಬ ಮೂರು ಕಟ್ಟೆಮನೆಗಳು ಚಿತ್ರದುರ್ಗ ಜಿಲ್ಲೆಯಲ್ಲಿಯೆ ಬರುತ್ತವೆ. ಇವರ ಧಾರ್ಮಿಕ ಕೇಂದ್ರಗಳು ಹಾಗೂ

ಪಂಚಲಿಂಗಗಳಿರುವ ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ, ಚಳ್ಳಕೆರೆ ತಾಲ್ಲೂಕು ಚನ್ನಮ್ಮನಾಗ್ತಿಹಳ್ಳಿ, ಚಿತ್ರದುರ್ಗ ತಾಲ್ಲೂಕು ರಾಮನಹಳ್ಳಿ, ಹಿರಿಯೂರು ತಾಲ್ಲೂಕು ಇಕ್ಕನೂರು ಮತ್ತು ಕೂಡಲಹಳ್ಳಿಗಳು ಸಹ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವುದರಿಂದ, ಈ ಪಂಚಲಿಂಗಗಳು ಮತ್ತು ಕಟ್ಟೆಮನೆಗಳು ಇರುವ ಸುತ್ತ ಮುತ್ತಲ ಪ್ರದೇಶಗಳಲ್ಲಿ ಕಾಡುಗೊಲ್ಲರು ದಟ್ಟವಾಗಿ ವಾಸಿಸುತ್ತಿದ್ದಾರೆ.

ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬರುವಾಗ, ಕಾಡುಗೊಲ್ಲರಿಗೆ ಮಾರ್ಗದರ್ಶನ ಮಾಡಿದ ಸಾರ್ವಾಡೇಶ್ವರ ಸ್ವಾಮಿಗಳ ಮಠ, ಜುಂಜಪ್ಪನ ಕಥೆಯಲ್ಲಿ ಬರುವ ಗೌರಸಂದ್ರ ಮಾರಕ್ಕ ಮತ್ತು ಪುರ್ಲಳ್ಳಿ ಭೂತಪ್ಪನ ಧಾರ್ಮಿಕ ಕೇಂದ್ರಗಳು ಚಳ್ಳಕೆರೆ ತಾಲ್ಲೂಕು ಚಿತ್ರದುರ್ಗ ಜಿಲ್ಲೆಯಲ್ಲೇ ಬರುತ್ತವೆ.

ಪ್ರದೇಶ ಹಾಗೂ ಜನಸಂಖ್ಯೆಯ ದೃಷ್ಟಿಯಿಂದ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹೆಚ್ಚು ಸಮಾನಾಂತರ ಸ್ಥಾನ ಮಾನಗಳನ್ನು ಉಳಿಸಿಕೊಂಡಿದ್ದಾರೆ. ಆದರೆ ಮ್ಯಾಸಬೇಡ ಹಾಗೂ ಕಾಡುಗೊಲ್ಲರನ್ನು ಕುರಿತು ಪ್ರತ್ಯೇಕವಾದ ಅಂಕಿ ಅಂಶಗಳು ದೊರೆಯದೆ ಇರುವುದರಿಂದ ಈ ಎರಡು ಬುಡಕಟ್ಟು ಸಮುದಾಯಗಳು ವಾಸಿಸುವ ಪ್ರದೇಶ ಮತ್ತು ಜನಸಂಖ್ಯೆ ಕುರಿತು ಸ್ಪಷ್ಟವಾದ ಮಾಹಿತಿ ಕೊಡುವುದು ಕಷ್ಟಸಾಧ್ಯ.

ಅಡಿಟಿಪ್ಪಣಿಗಳು

೧. ಎಂ. ಜಿ.ಈಶ್ವರಪ್ಪ, 'ಮ್ಯಾಸಬೇಡರು', ೧೯೮೨, ಪುಟ: ೧೬

೨. ಬಿ.ಎಸ್.ಶ್ರೀನಿವಾಸನಾಯಕ,'ಚಿತ್ರದುರ್ಗದ ಕಾಮಗೇತಿ ಅರಸರು', ೧೯೮೪, ಪುಟ: ೧೮

೩. ಡಾ.ಕೆ.ಎಂ.ಮೈತ್ರಿ (ಸಂ), 'ಕೃಷ್ಣಗೊಲ್ಲರ ಕಥನ ಕಾವ್ಯಗಳು', ೨೦೦೦, ಪ್ರಸ್ತಾವನೆ, ಪುಟ: ೧

೪. ಬಿ.ವಿ.ನಾಗರಾಜು, 'ಗೊಲ್ಲರ ಹಟ್ಟಿ', ೧೯೮೮, ಪುಟ: ೩

೫. ಪ್ರಹ್ಲಾದ ಬೆಟಗೇರಿ, 'ಅಡವಿಚೆಂಚರ ಸಂಸ್ಕೃತಿ', ೧೯೯೩, ಪುಟ: ೪

೬. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೩, ೧೯೮೬,ಪುಟ: ೬೦೬

ಅಧ್ಯಾಯ - ೩

ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ

೧. ವೇಷ ಭೂಷಣ

೨. ಆಹಾರ ಪದ್ಧತಿ

೩. ವಸತಿ ವ್ಯವಸ್ಥೆ

೪. ವೃತ್ತಿಗಳು

೫. ಬೆಡಗುಗಳು

೬. ರಕ್ತ ಸಂಬಂಧ

೭. ಕುಟುಂಬ ಪದ್ಧತಿ

೮. ನ್ಯಾಯ ಪದ್ಧತಿ

೯. ವಿಧಿ ನಿಷೇಧ

೩. ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ

ಮಾನವ ಸಮಾಜವು ಸಾಮಾಜಿಕ ಸಂಬಂಧಗಳ ಬಲೆ. ವ್ಯಕ್ತಿಗಳ ನಡುವೆ ಪರಸ್ಪರ ಸಂಬಂಧವೇರ್ಪಡುವ ಪ್ರಕ್ರಿಯೆಯು ವ್ಯವಸ್ಥೆಯೊಂದನ್ನು ಹೋಲುತ್ತಿದ್ದು ಅಂತಹ ವ್ಯವಸ್ಥೆಯನ್ನು 'ಸಾಮಾಜಿಕ ವ್ಯವಸ್ಥೆ' ಎಂದು ಕರೆಯಬಹುದಾಗಿದೆ.ಇದೊಂದು ಸಮಾಜದ ಘಟಕಗಳಾದ ಅಥವಾ ಭಾಗಗಳಾದ ಸಾಮಾಜಿಕ ಸಂಬಂಧಗಳ ಕ್ರಮಬದ್ಧ ವ್ಯವಸ್ಥೆಯಾಗಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯು ಲೋಕರೂಢಿಗಳು, ಸಂಪ್ರದಾಯಗಳು, ಪರಸ್ಪರ ಸಹಕಾರ, ವಿವಿಧ ನಿಯಮಗಳು, ವರ್ಗಗಳು, ಉಡಿಗೆ-ತೊಡಿಗೆ ಆಹಾರ, ವಸತಿ, ವೃತ್ತಿ, ಬೆಡಗುಗಳು, ವಿವಾಹ, ಕುಟುಂಬ, ನ್ಯಾಯ ಪದ್ಧತಿ ಹಾಗೂ ಸಾಮಾಜಿಕ ನಿಯಂತ್ರಣವನ್ನೊಳ ಗೊಂಡ ಕ್ರಮಬದ್ಧವಾದ ವ್ಯವಸ್ಥೆಯಾಗಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಇತರ ಹಲವಾರು ಉಪ ವ್ಯವಸ್ಥೆಗಳಿದ್ದು, ಇವೆಲ್ಲವೂ ತನ್ನದೇ ಆದ ವಿಶಿಷ್ಟ ಕಾರ್ಯಗಳನ್ನು ನಿರ್ವಹಿಸುತ್ತವೆ. ಈ ಕಾರ್ಯ ನಿರ್ವಹಣೆಯಲ್ಲಿ ಕ್ರಮಬದ್ಧತೆ ಇರುತ್ತದೆ.

ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯ ಕುರಿತು ಟಾಲ್ಕಾಟ್ ಪಾರ್ಸನ್ಸ್ ರವರು "ಸಾಮಾಜಿಕ ವ್ಯವಸ್ಥೆಯು ಸದಸ್ಯರ ಅಂತರ ಕ್ರಿಯೆಗಳನ್ನೊಳಗೊಂಡಿದೆ. ಈ ಅಂತರ ಕ್ರಿಯೆಯಲ್ಲಿ ಭಾಗವಹಿಸುವ ಸದಸ್ಯರು ಪರಸ್ಪರ ಹಂಚಿಕೊಳ್ಳಲ್ಪಡುವ ರಚನಾತ್ಮಕವಾದ ಚಿಹ್ನೆ ಹಾಗೂ ಪರಸ್ಪರ ಅಪೇಕ್ಷಣೀಯ ಮಾಧ್ಯಮಗಳ ಮೂಲಕ ಸಂಧಿಸುತ್ತಾರೆ. ಸಾಮಾಜಿಕ ವ್ಯವಸ್ಥೆಯು ಒಂದು ನಿರ್ಧಿಷ್ಟ ಭೌತಿಕ ಪರಿಸರದಲ್ಲಿ ಪರಸ್ಪರ ಅಂತರ ಕ್ರಿಯೆ ನಡೆಸುವ ಹಾಗೂ ಸಾಂಸ್ಕೃತಿಕ ಮಾಧ್ಯಮಗಳ ಮೂಲಕ ಸಂಪರ್ಕಿಸುವ ವ್ಯಕ್ತಿಗಳ ಸಮೂಹವನ್ನು ಹೊಂದಿರುತ್ತದೆ". ಎಂದು ಹೇಳಿದ ಮಾತುಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಸಮಗ್ರ ಚಿತ್ರಣ ಕಂಡು ಬರುತ್ತದೆ. ಸಾಮಾಜಿಕ ವ್ಯವಸ್ಥೆಯು ಪರಿಸರ, ಕಾಲ ಮತ್ತು ಸ್ಥಳಗಳನ್ನಾಧರಿಸಿರುವುದು. ಆದ್ದರಿಂದ ಅದು ಕಾಲದಿಂದ ಕಾಲಕ್ಕೆ, ಸಮೂಹದಿಂದ ಸಮೂಹಕ್ಕೆ ಭಿನ್ನವಾಗಿರುತ್ತದೆ. ಸಮಾಜದಲ್ಲಿನ ಸದಸ್ಯರುಗಳ ಅಂತರ ಸಂಬಂಧಗಳು ಮತ್ತು ಅಂತರ ಕ್ರಿಯೆಗಳು, ಸ್ವರೂಪ ಹಾಗೂ ವ್ಯಾಪ್ತಿಗಳು ಪ್ರಚಲಿತ ಸಂಸ್ಕೃತಿಯಿಂದ ನಿರ್ಧರಿಸಲ್ಪಡುತ್ತವೆ. ಮಾನವನ ಸಾಮಾಜಿಕ ಜೀವನದಲ್ಲಿ ಸಾಮಾಜೀಕರಣ ಮತ್ತು ಸಾಮಾಜಿಕ ನಿಯಂತ್ರಣ ಸಾಮಾಜಿಕ ವ್ಯವಸ್ಥೆಗೆ ಸಹಾಯಕವಾಗಿರುವ ಪ್ರಮುಖ ಅಂಶಗಳು. ಒಟ್ಟಿನಲ್ಲಿ 'ವ್ಯವಸ್ಥೆ' ಎಂದರೆ ಕ್ರಮಬದ್ಧತೆ ಎಂದರ್ಥ. ವ್ಯವಸ್ಥೆಯಲ್ಲಿರುವ ವಿವಿಧ ಭಾಗಗಳು ಒಂದಕ್ಕೊಂದು ಸಂಬಂಧಿಸಿರುತ್ತವೆ.

ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗುಗಳು, ರಕ್ತಸಂಬಂಧ, ಕುಟುಂಬ, ನ್ಯಾಯ ಪದ್ಧತಿ ಮತ್ತು ವಿಧಿ-ನಿಷೇಧಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಅಧ್ಯಯನ ಮಾಡಲಾಗಿದೆ. ಭೌಗೋಳಿಕ ಮತ್ತು ಆರ್ಥಿಕ ವ್ಯವಸ್ಥೆಯ ಮೇಲೆ ಈ ಬುಡಕಟ್ಟು ಜನರ ಸಂಸ್ಕೃತಿ ನಿಂತಿದೆ. ಆದರೂ ಚಡ್ಡಿ ಚಲ್ಲಣ ತೊಟ್ಟು, ಹೆಗಲ ಮೇಲೆ ಕಂಬಳಿ ಹಾಕುವ, ಮಾತೃಭಾಷೆಯನ್ನೇ ಅಪಭ್ರಂಶವಾಗಿ ಮಾತನಾಡುವ, ನೂರಾರು ಬೆಡಗುಗಳನ್ನು ಹೊಂದಿದ, ರಕ್ತ ಸಂಬಂಧಕ್ಕೆ ಮಹತ್ವ ಕೊಟ್ಟು ಹತ್ತಿರದ ರಕ್ತ ಸಂಬಂಧದಲ್ಲಿ ವಿವಾಹ ಮಾಡಿಕೊಳ್ಳುವ, ಗುಡಿಸಲು ಗುಬ್ಬಗಳಲ್ಲಿ ವಾಸಿಸುವ, ಪಶು ಮತ್ತು ಮೇಷ ಪಾಲಕರಾಗಿ ಬದುಕುವ,ಹಾಲು ತುಪ್ಪದಲ್ಲಿ ಸಮೃದ್ಧಿ ಊಟ ಮಾಡುವ, ಗುಡಿಕಟ್ಟೆ ಮತ್ತು ಕಟ್ಟೆಮನೆಗಳಲ್ಲಿ ನ್ಯಾಯ ತೀರ್ಮಾನ ಮಾಡಿಕೊಳ್ಳುವ, ಬಡತನದ ಬೇಗೆಯಲ್ಲಿ ಬಳಲುತ್ತಿರುವ, ಪ್ರಾಚೀನ ಕಾಲದ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡಿರುವ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಮತ್ತು ನಗರೀಕರಣಕ್ಕೆ ಒಳಗಾಗದಂಥ, ಸಾಮಾಜಿಕ ವ್ಯವಸ್ಥೆ ಮತ್ತು ಜೀವನ ವಿಧಾನ ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ. ಆದ್ದರಿಂದ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹರಿದು ಹಂಚಿ ಹೋಗಿರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

೧. ವೇಷ-ಭೂಷಣ

ಸರಳ ಮತ್ತು ಸೌಂದರ್ಯ ಜೀವನಕ್ಕೆ ಹೆಸರಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ದ್ರಾವಿಡ ಜನಾಂಗದ ಗುಣಲಕ್ಷಣಗಳನ್ನು ಹೊಂದಿದ್ದಾರೆ. ಇವರ ಸರಾಸರಿ ಎತ್ತರ ೫.೬ ಅಡಿ ಇದ್ದು, ಎಣ್ಣೆಗೆಂಪು ಬಣ್ಣದವರಾಗಿದ್ದಾರೆ. ಬೇಟೆ, ಪಶುಪಾಲನೆ ಮತ್ತು ಕೃಷಿ ಈ ಮೂರು ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ತೊಡಗಿದ್ದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೈಹಿಕ ಗುಣಲಕ್ಷಣಗಳಲ್ಲಿ, ಉಡಿಗೆ ತೊಡಿಗೆಗಳಲ್ಲಿ, ಆಚಾರ-ವಿಚಾರಗಳಲ್ಲಿ, ನಂಬಿಕೆ ನಡವಳಿಕೆಗಳಲ್ಲಿ ಪರಸ್ಪರ ಸಾಮ್ಯತೆ ಕಂಡು ಬರುತ್ತದೆ. ಆದರೆ ಕೆಲವೊಂದು ಪ್ರದೇಶಗಳಲ್ಲಿ, ಹಬ್ಬ ಮತ್ತು ಜಾತ್ರೆಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರನ್ನು ಪ್ರತ್ಯೇಕವಾಗಿ ಗುರುತಿಸುವುದು ಕಷ್ಟವಾಗುತ್ತದೆ. ಕ್ಷೇತ್ರಕಾರ್ಯಕ್ಕೆ ಹೋದಾಗ ಚಿತ್ರದುರ್ಗ ತಾಲ್ಲೂಕು ತುರುವನೂರು, ಹೊಳಲ್ಕೆರೆ ತಾಲ್ಲೂಕು ರಾಮಗಿರಿ, ಹೊಸದುರ್ಗ ತಾಲ್ಲೂಕು ಕ್ಯಾದಿಗೆರೆ, ಚಳ್ಳಕೆರೆ ತಾಲ್ಲೂಕು ಹೊಸಹಳ್ಳಿ ಮತ್ತು ದೇವರಮರಿಕುಂಟೆ, ಹಿರಿಯೂರು ತಾಲ್ಲೂಕು ಜವನಗೊಂಡನಹಳ್ಳಿ, ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಮೊದಲಾದ ಪ್ರದೇಶಗಳಲ್ಲಿ ಕಾಡುಗೊಲ್ಲ ಮತ್ತು ಮ್ಯಾಸಬೇಡರ ವೇಷ-ಭೂಷಣಗಳಲ್ಲಿ ಪರಸ್ಪರ ಸಾಮ್ಯತೆ ಮತ್ತು ಹೋಲಿಕೆಗಳು ಕಂಡು ಬಂದವು.

ಒಂದು ಸಮುದಾಯದ ವೇಷ ಭೂಷಣಗಳು ಆ ಜನಾಂಗದ ಸಂಸ್ಕೃತಿಯನ್ನು ತಿಳಿಸುವಂತೆ, ಮ್ಯಾಸಬೇಡ ಮತ್ತು ಕಾಡುಗೊಲ್ಲರ ವೇಷ ಭೂಷಣಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡುವುದರಿಂದ ಈ ಎರಡು ಜನಾಂಗದ ವಿಶಿಷ್ಟ ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳಬಹುದು.

೧.೧. ಮ್ಯಾಸಬೇಡರು

ಆಂಧ್ರಪ್ರದೇಶಕ್ಕೆ ಸೇರಿದ ಅಹೋಬಲ, ಶ್ರೀಶೈಲ, ವೆಂಕಟಗಿರಿ, ಹಸ್ತಗಿರಿ ಮೊದಲಾದ ಪ್ರದೇಶದ ಕಾಡಾಡಿ ಬೇಡರ ಸಂತತಿಗೆ ಸೇರಿದ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಉಡುಪು ಮತ್ತು ಆಭರಣಗಳ ವಿಷಯವಾಗಿ ತಮ್ಮದೇ ಆದಂತಹ ಮೂಲ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಅವರು ತೊಡುತ್ತಿದ್ದ ಚಡ್ಡಿ-ಚಲ್ಲಣ, ಬದ್ದು, ಕಡಗ, ತಲೆಯ ಜುಟ್ಟು, ಹುರಿಮೀಸೆ, ಗಲ್ಲಿಮೀಸೆ, ತುರುಬು ಕಟ್ಟುವುದು, ಕಾಸಿದಟ್ಟಿ, ರವಿಕೆ ತೊಡದೆ ಇರುವುದು, ಮೊದಲಾದ ಉಡುಪು ಮತ್ತು ಆಭರಣಗಳು ಪ್ರಸ್ತುತ ಈ ಸಮಾಜದಲ್ಲಿ ಕಂಡು ಬರದಿದ್ದರೂ ಬಹುಹಿಂದೆ ಈ ಎಲ್ಲ ಪದ್ಧತಿಗಳು ಮ್ಯಾಸಬೇಡರಲ್ಲಿ ಇದ್ದವಂತೆ.

೧.೧.೧. **ಉಡುಪುಗಳು :** ಕಾಡಲ್ಲಿ ಲಂಗೋಟಿ ಹಾಕಿಕೊಂಡು ಬರಿ ಮೈಯಲ್ಲಿ ಬೇಟೆಯಾಡುತ್ತಿದ್ದ ಮ್ಯಾಸಬೇಡರು, ತೇಗದ ಎಲೆ, ತಾಳೆಯಗರಿ, ಜಿಂಕೆ ಚರ್ಮ, ಮೊಲದ ಚರ್ಮ, ನವಿಲುಗರಿ, ಹಂಸಪಕ್ಷಿ ಹಾಗೂ ಹುಲ್ಲಿನಿಂದ ಕಲಾತ್ಮಕವಾಗಿ ತಯಾರಿಸಿದ ವಸ್ತ್ರಗಳನ್ನು ಧರಿಸುತ್ತಿದ್ದರು. ಬಟ್ಟೆ ಹಾಗೂ ಹೊಲಿದ ಉಡುಪುಗಳ ಉಪಯೋಗ ಇವರಿಗೆ ತಿಳಿದಿರಲಿಲ್ಲ. ಕಾಲಕ್ರಮೇಣ ಉಣ್ಣೆ, ರೇಷ್ಮೆ, ನಾರು, ಕೃಷ್ಣಾಜಿನ ಮೊದಲಾದ ವಸ್ತ್ರಗಳ ಉಪಯೋಗ ಕಂಡು ಕೊಂಡ ನಂತರ ಚಡ್ಡಿ, ಚಲ್ಲಣ, ಕಸೆಅಂಗಿ, ಸೊಂಟಕ್ಕೆ ಕಾಸಿದಟ್ಟಿ, ಹೆಗಲಿಗೆ ಕರಿಕಂಬಳಿ, ಏಳು ಮೊಳ ಉದ್ದದ ಬಿಳಿಯ ಪಾಗಿನ, ತಲೆಗೊಂದು ಆದಿವೇಷ ಪೇಟ, ಕಾಲಿಗೆ ಚರ್ಮದ ಗುಂಜಿ ಮೆಟ್ಟು, ಹಸುಬೆ ಚೀಲ, ಅಡಿಕೆ ಎಲೆ ಚೀಲ ಮತ್ತು ಕೈಯಲ್ಲೊಂದು ಕೋಲು ಹಿಡಿದಿರುತ್ತಿದ್ದರು.

ಜುಟ್ಟು ಬಿಡುವುದು, ತುರುಬು ಕಟ್ಟುವುದು, ಗಲ್ಲಿಮೀಸೆ ಬಿಡುವುದು, ಕಚ್ಚೆಹಾಕಿ ತುಂಡು ಪಂಚೆ ಮೇಲಕ್ಕೆ ಕಟ್ಟಿಕೊಳ್ಳುವುದು ಪುರುಷರಿಗೆ ಗೌರವ ಸೂಚಕವಾದ ಉಡುಪಾಗಿತ್ತು. ಶೈವ ಮತ್ತು ವೈಷ್ಣವ ಎರಡು ಸಂಪ್ರದಾಯ ಗಳಲ್ಲಿ ನಂಬಿಕೆಯಿಟ್ಟಿರುವ ಮ್ಯಾಸಬೇಡರು ಹಣೆಗೆ ವಿಭೂತಿ ಮತ್ತು ಕುಂಕುಮವನ್ನು ಇಡುತ್ತಾರೆ. ಸಾಮಾನ್ಯವಾಗಿ ಮ್ಯಾಸಬೇಡರು ಅಂಗಿಯನ್ನು ತೊಡುವುದಿಲ್ಲ. ಚಲ್ಲಣ ಹಾಕಿಕೊಂಡು ಹೆಗಲ ಮೇಲೆ ಕಂಬಳಿ ಹಾಕಿರುತ್ತಾರೆ. ಬಹುಹಿಂದೆ ಸಂಪ್ರದಾಯಸ್ಥ ಮ್ಯಾಸಬೇಡರ ಹೆಂಗಸರು ಕುಪ್ಪಸ ತೊಡುತ್ತಿರಲಿಲ್ಲ. ಹದಿನಾರು ಮೊಳ ಉದ್ದದ ದಟ್ಟಿ ಸೀರೆ ಉಡುತ್ತಿದ್ದರು. ಸಾಮಾನ್ಯವಾಗಿ ಮ್ಯಾಸಬೇಡರ ಹೆಂಗಸರು ಚಪ್ಪಲಿ ಹಾಕುವುದಿಲ್ಲ. ಗಂಡ ಸತ್ತ ಹೆಣ್ಣು ರಂಡೆ ಅಥವಾ ಅಮಂಗಳಕಾರಿಣಿಯೆಂದು ಭಾವಿಸಿ ಯಾವುದೇ ಶುಭಕಾರ್ಯಗಳಲ್ಲಿ ಅವಳನ್ನು ಹತ್ತಿರ ಸೇರಿಸುವುದಿಲ್ಲ. ಗಂಡ ಮರಣ ಹೊಂದಿದ ನಂತರ ತಾಳಿ, ಬಳೆ ತೆಗೆಯುವ ಪದ್ಧತಿ ಇದೆ. ಹೂವು, ಅರಿಶಿಣ, ಕುಂಕುಮ, ಆಭರಣ ಧರಿಸುವುದು ವಿಧವೆಗೆ ನಿಷಿದ್ಧವಾಗಿದೆ.

೧.೧.೨. **ಆಭರಣಗಳು :** ತಲೆಗೆ ಎಣ್ಣೆಕಾಣದ ಮ್ಯಾಸಬೇಡರು ಕೆದರಿದ ಕೂದಲನ್ನು ಗಂಟು ಹಾಕಿ ತುರುಬು ಕಟ್ಟಿಕೊಳ್ಳುತ್ತಾರೆ. ಆದಿವೇಶ ಪೇಟ ಸುತ್ತಿ ಅದರ ಮುಂಭಾಗ ನವಿಲು ಅಥವಾ ಹಂಸ ಪಕ್ಷಿಯ ಗರಿಗಳನ್ನು ಪೇಟದಲ್ಲಿ ಸಿಕ್ಕಿಸಿಕೊಂಡು ಜಿಂಕೆ, ಹುಲಿ, ಕರಡಿ ಮೊದಲಾದ ಪ್ರಾಣಿಗಳ ಚರ್ಮ, ಹುಲ್ಲು, ಉಗುರು ಮತ್ತು ಕೂದಲುಗಳನ್ನು ಆಭರಣವಾಗಿ ಬಳಸುತ್ತಿದ್ದರಂತೆ ಸರಳ ಮತ್ತು ಸೌಂದರ್ಯಕ್ಕೆ ಹೆಸರಾದ ಈ ಬುಡಕಟ್ಟು ಜನಾಂಗ ಆಭರಣಗಳಿಗೆ ಹೆಚ್ಚು ಮಹತ್ವ ಕೊಟ್ಟಿಲ್ಲ. ಆದರೂ ಬಹುಹಿಂದೆ ಮ್ಯಾಸಬೇಡರು ಆಭರಣಗಳನ್ನು

ಧರಿಸುತ್ತಿದ್ದರು. ಗಂಡಸರು ಕೈಯಲ್ಲಿ ಬೆಳ್ಳಿ ಬದ್ದು, ಕಿವಿಗೆ ಬಂಗಾರದ ಹತ್ತಕಡಕು, ಮುರ, ಬೆರಳಿಗೆ ಉಂಗುರ ಹಾಕುತ್ತಾರೆ. ನೂಲಿನ ಉಡದಾರ ಕಟ್ಟುವುದು, ಸೌಂದರ್ಯದ ಸಂಕೇತ ಮತ್ತು ಆರೋಗ್ಯ ವೃದ್ಧಿಯಾಗುತ್ತದೆಂದು ಹಚ್ಚೆ ಹಾಕಿಸಿಕೊಳ್ಳುವುದು; ಹಣೆಯ ಮೇಲೆ ವಿಭೂತಿ ಕುಂಕುಮ ಇಡುವುದು ಗಂಡಸರಲ್ಲಿ ಕಂಡು ಬರುತ್ತದೆ.

ಮ್ಯಾಸಬೇಡರ ಹೆಂಗಸರು ಕೂಡ, ಕಾಡುಗೊಲ್ಲರ ಮಹಿಳೆಯರಂತೆ ಹಿತ್ತಾಳೆಯ ಬದ್ದು ಕೈಯಲ್ಲಿ ಧರಿಸುತ್ತಿದ್ದರಂತೆ, ಆದರೆ ಈಗ ಈ ಪದ್ಧತಿ ಕಡಿಮೆಯಾಗಿದೆ. ಸೌಂದರ್ಯದ ಸಂಕೇತವಾಗಿ ವಿಧ ವಿಧವಾದ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಬ್ಬ ಹರಿದಿನಗಳಲ್ಲಿ ತಲೆಗೆ ಎಣ್ಣೆ ಹಚ್ಚಿಕೊಂಡು ಕೇಶಾಲಂಕಾರ ಮಾಡಿಕೊಳ್ಳುತ್ತಾರೆ. ಹಣೆಯ ಮೇಲೆ ಅರಿಶಿಣ, ಕುಂಕುಮ ಇಟ್ಟುಕೊಂಡು ಹೂವು ಮುಡಿಯುತ್ತಾರೆ. ಬಂಗಾರದ ಓಲೆ, ಬುಗಡಿಕಡ್ಡಿ, ತೋಳಬಂದಿ, ಗೆಜ್ಜೆಪಟ್ಟಿ, ಮೂಗುಬಟ್ಟು, ಚಿಂತಾಕ, ಅಡ್ಡಿಕೆ, ಕಾಸಿನಸರ, ಪದಕ, ಮಾಟಿ, ಬೆಳ್ಳಿ ಕಡಗ, ಜುಮುಕಿ, ಬೆರಳಿನ ಉಂಗುರ, ಚೈನು, ಕೊರಳಿಗೆ ಹವಳ ಕರಿಮಣಿ ಸೇರಿಸಿದ ಮಾಂಗಲ್ಯ ಸರ, ಹಸಿರು ಗಾಜಿನ ಬಳೆ ಮೊದಲಾದ ಆರಣಗಳನ್ನು ಮ್ಯಾಸಬೇಡರ ಹೆಂಗಸರು ಧರಿಸುತ್ತಾರೆ. ಅವಿವಾಹಿತೆ ಮತ್ತು ವಿವಾಹಿತೆ ಹೆಣ್ಣು ಕುಂಕುಮ ಧರಿಸಿ ಹೂವು ಮುಡಿಯುತ್ತಾಳೆ. ಆದರೆ ವಿಧವೆಯಾದ ಹೆಣ್ಣಿಗೆ ಇವೆಲ್ಲ ನಿಷಿದ್ಧವಾಗಿರುತ್ತವೆ.

೧.೨. ಕಾಡುಗೊಲ್ಲರು

ಕಾಡಿನಿಂದ ನಾಡಿಗೆ ಬಂದು ಪ್ರತ್ಯೇಕ ಹಟ್ಟಿಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದರೂ, ಬುಡಕಟ್ಟು ಜನಾಂಗದ ಗುಣಲಕ್ಷಣಗಳನ್ನು ಈ ಕಾಡುಗೊಲ್ಲರು ಮೈಗೂಡಿಸಿಕೊಂಡಿದ್ದಾರೆ. ಕಷ್ಟ ಸಹಿಷ್ಣುಗಳು ಮುಗ್ಧರು, ಪ್ರಾಮಾಣಿಕರು ಮತ್ತು ಧಾರ್ಮಿಕ ಶ್ರದ್ಧೆಯುಳ್ಳವರಾದ ಇವರ ಉಡುಪು ಮತ್ತು ಆಭರಣಗಳಲ್ಲಿ ವೈವಿಧ್ಯತೆಯಿದೆ. ಬದುಕಿನ ಜಂಜಾಟದಲ್ಲಿ ಪ್ರತಿನಿತ್ಯ ಸ್ನಾನಮಾಡದೆ, ಹಬ್ಬ, ಜಾತ್ರೆಗಳಲ್ಲಿ ಜಳಕ ಮಾಡಿ ಬಟ್ಟೆ ಬದಲಾಯಿಸುತ್ತಾರೆ. ತಲೆಗೆ ಎಣ್ಣೆ ಬದಲು ತುಪ್ಪ ಹಚ್ಚಿಕೊಳ್ಳುತ್ತಾರೆ, ಕೂದಲನ್ನು ಗಂಟು ಹಾಕಿ ಸ್ತ್ರೀ ಮತ್ತು ಪುರುಷರು ತುರುಬು ಕಟ್ಟುತ್ತಾರೆ. ಅತ್ಯಂತ ಸರಳ ಉಡುಪು ಮತ್ತು ಆಭರಣಗಳನ್ನು ಧರಿಸುತ್ತಾರೆ. ಈ ಉಡುಪು ಮತ್ತು ಆಭರಣಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಪರಸ್ಪರ ಸಾಮ್ಯತೆ ಕಂಡು ಬರುತ್ತದೆ.

೧.೨.೧. ಉಡುಪುಗಳು : ಸರಾಸರಿ ಎತ್ತರ, ಎಣ್ಣೆಗೆಂಪು ಬಣ್ಣ, ಧಾರ್ಮಿಕ ಶ್ರದ್ಧೆಯುಳ್ಳವರಾದ ಕಾಡುಗೊಲ್ಲರು ತಮ್ಮ ಉಡುಪುಗಳಿಗೆ ಅಷ್ಟಾಗಿ ಮಹತ್ವ ಕೊಟ್ಟಂತಿಲ್ಲ. ಗಂಡಸರು ಲಂಗೋಟಿ ಅಥವಾ ಚಡ್ಡಿ, ಚಲ್ಲಣ, ಹೆಗಲ ಮೇಲೊಂದು ಕರಿಕಂಬಳಿ, ಚಿಪ್ಪುಕೊಡಲಿ ಅಥವಾ ಕೈಯಲೊಂದು ಕೋಲು, ತಲೆಗೆ ಪೇಟ, ಸೊಂಟಕ್ಕೆ ಕಂಚಿದಟ್ಟಿ, ಕಸೆ ಅಂಗಿ, ಮೂರುಗುಂಡಿ ಅಂಗಿ, ಕಾಲಿಗೆ ಒರಟಾದ ಚರ್ಮದ ಮೂತಿ ಮೆಟ್ಟು ಧರಿಸುತ್ತಾರೆ. ಕೆಲವು ಪ್ರದೇಶದ ಗೊಲ್ಲರ ಹಟ್ಟಿಗಳಲ್ಲಿ ಬರಿ ಲಂಗೋಟಿ, ಹೆಗಲ ಮೇಲೊಂದು ಕಂಬಳಿ, ಕೈಯಲ್ಲಿ ಕವಗಟ್ಟಿಗೆ ಮಾತ್ರ ಹಿಡಿದಿರುತ್ತಾರೆ. ಕೆಲವರು ಜುಟ್ಟು ಬಿಟ್ಟು ತುರುಬು ಕಟ್ಟಿದರೆ ಮತ್ತೆ ಕೆಲವರು ತಲೆಯ ಮುಂಭಾಗದಲ್ಲಿ ಅರ್ಧಚಂದ್ರಾಕೃತಿ ತರ ಕೂದಲು ಕತ್ತರಿಸಿಕೊಂಡು ಹಿಂಭಾಗ ತುರುಬು ಕಟ್ಟಿಕೊಳ್ಳುತ್ತಾರೆ.

ಸಂಪ್ರದಾಯಸ್ಥ ಕಾಡುಗೊಲ್ಲರ ಹೆಂಗಸರು ರವಿಕೆ ತೊಡುವುದಿಲ್ಲ. ಹದಿನಾರು ಮೊಳ ಉದ್ದದ ದಡಿ ಸೀರೆ

ಉಡುತ್ತಾರೆ. ಆದರೆ ಇತ್ತೀಚಿನ ಎಲ್ಲಾ ಹೆಣ್ಣುಮಕ್ಕಳು ರವಿಕೆ ತೊಡುತ್ತಾರೆ. ಸಾಮಾನ್ಯವಾಗಿ ಹೆಂಗಸರು ಚಪ್ಪಲಿ ತೊಡುವುದು ಕಡಿಮೆ. ಕುರಿ, ಮೇಕೆ, ದನಗಳ ಹಿಂದೆ ತಿರುಗುವ ಹೆಂಗಸರು ಗಂಡಸರಂತೆ ಚರ್ಮದ ಚಪ್ಪಲಿ ತೊಡುತ್ತಾರೆ. ಹೆಂಗಸರು ಮತ್ತು ಗಂಡಸರು ಎಲೆ, ಅಡಿಕೆ ಹಾಕುವುದು ಹೆಚ್ಚು. ಬಹುಮಂದಿ ಸ್ತ್ರೀ ಮತ್ತು ಪುರುಷರು 'ಅಡಿಕೆಲೆ ಚೀಲ' ಕಟ್ಟಿಕೊಂಡಿರುತ್ತಾರೆ. ಈ ಅಡಿಕೆಲೆ ಚೀಲದಲ್ಲಿ ಎಲೆ, ಅಡಿಕೆ, ಸುಣ್ಣದ ಡಬ್ಬಿ, ಹೊಗೆ ಪುಡಿ ಮತ್ತು ಹೊಗೆಸೊಪ್ಪುಗಳನ್ನು ತುಂಬಿ ಕೊಂಡಿರುತ್ತಾರೆ. ಉಡುದಾರಕ್ಕೆ ಬೀಗದ ಕೈ, ಮುಳ್ಳುಗಡ್ಡಿಗಳನ್ನು ಕಟ್ಟಿಕೊಂಡಿರುತ್ತಾರೆ. ಕೆಲವರು ತಾಮ್ರುಬಟ್ಟು ಅಥವಾ ನಾಣ್ಯಗಳನ್ನು ತೂತು ಮಾಡಿ ಉಡುದಾರದಲ್ಲಿ ಸೇರಿಸಿ ಕಟ್ಟಿಕೊಳ್ಳುತ್ತಾರೆ. ಎಲೆ, ಅಡಿಕೆ ಮತ್ತು ಸುಣ್ಣಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ಚಿತ್ರದುರ್ಗ ತಾಲ್ಲೂಕು ಭರಮಸಾಗರದ ಅಡಿಕೆ, ಚಳ್ಳಕೆರೆ ತಾಲ್ಲೂಕು ನಗರಂಗೆರೆಯ ಎಲೆ, ದೊಡ್ಡೇರಿ ಸುಣ್ಣ ಪ್ರಾಚೀನ ಕಾಲದಿಂದ ಬಹಳ ಹೆಸರುಗಳಿಸಿವೆ.

೧.೨.೨. **ಆಭರಣಗಳು :** ಕಾಡುಗೊಲ್ಲರ ಗಂಡಸರು ಆಭರಣ ಪ್ರಿಯರಲ್ಲ. ಅತ್ಯಂತ ಸರಳ ಜೀವಿಗಳು, ಆದರೂ ಕೂಡ ಮುಂಗೈಗೆ ಬದ್ದು, ಹತ್ತಕಡಕು, ಮುರ, ಪಾಟಲಾಕ, ಬಟ್ಟಿನ ಸಲಿಗೆ, ಉಂಗುರ, ಹಸುಬೆ ಚೀಲ, ಮೇಣಗಪ್ಪದ ಅಡಿಕೆ ಎಲೆ ಚೀಲ ಧರಿಸುತ್ತಾರೆ. ಹೆಂಗಸರು ಮದುವೆಯಾಗಿ ವರ್ಷ ತುಂಬುವದರೊಳಗೆ ಬಲಗೈಗೆ ಗೊಲ್ಲಕಡಗ ಧರಿಸುತ್ತಾರೆ. ಇದನ್ನು 'ಕೃಷ್ಣಕಡಗ' ಎಂದು ಸಹ ಕರೆಯುತ್ತಾರೆ. ಇದರ ಜೊತೆಗೆ ಕುಪ್ಪೆ ಕಡಗ, ಒಂಟಿ ಕಡಗ, ಕೀಲ ಕಡಗ, ರಟ್ಟೆಬಂದಿ, ಚಿಂತಾಕ, ಗುಂಡಿನ ಸರ, ಕಾಸಿನ ಸರ, ಜೋಡಿ ಗುಂಡಿನ ಅಡ್ಡಿಕೆ, ಜಾತಿ ಮುತ್ತಿನ ಬುಗಡಿ, ಓಲೆ, ಬುಲಾಕು, ಅರ್ಧಚಂದ್ರನತ್ತು, ಎರಡು ಸುತ್ತಿನ ಸೆಲಿಗೆ, ಕೆನ್ನೆಸರ, ಚೈನು, ಗಟ್ಟಿಕಾಲುತೋಡ, ಗೆಜ್ಜೆಪಟ್ಟಿ, ಬೇಸರಿ, ಬೆರಳಿಗೆ ಉಂಗುರ, ಹಸಿರು ಗಾಜಿನ ಬಳೆಗಳು,ಕೊರಳಿಗೆ ಹವಳ ಕರಿಮಣಿ ಸೇರಿಸಿದ ತಾಳಿಸರ ಅಥವಾ ತಾಳಿ ರಹಿತ ಕರಿಮಣಿಸರ, ಹಣೆಗೆ ಕುಂಕುಮ, ಹೂ ಮುಡಿಯುವುದು ಮೊದಲಾದ ಆಭರಣಗಳನ್ನು ಧರಿಸುತ್ತಾರೆ. ಆದರೆ ಕಾಡುಗೊಲ್ಲರಲ್ಲಿ ಗಂಡ ಸತ್ತರೆ ಕೆಲವರು ತಾಳಿ ಬಳೆ ತೆಗೆಯುತ್ತಾರೆ, ಕೆಲವರು ತೆಗೆಯುವುದಿಲ್ಲ. ಶ್ರೀ ಕೃಷ್ಣನೇ ನಮ್ಮ ನಿಜವಾದ ಗಂಡ ಎಂದು ಭಾವಿಸಿ ಸದಾ ಮುತ್ತೈದೆಯಾಗಿ ಬಾಳುತ್ತಾರೆ.

ಈ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಲೆಯ ಮೇಲಿನ ಪೇಟಕ್ಕೆ ಬಹಳ ಮಹತ್ವ ಕೊಡುತ್ತಾರೆ. ಹೆಂಗಸರು ಕೂಡ ತಲೆಯ ಮೇಲೆ ಸೆರಗು ಹಾಕಿಕೊಳ್ಳುವುದು ಗೌರವದ ಸಂಕೇತವಾಗಿದೆ.ಯಾವುದೇ ಧಾರ್ಮಿಕ ಕಾರ್ಯ ಅಥವಾ ಶುಭಕಾರ್ಯಗಳಲ್ಲಿ ಪೇಟ ಸುತ್ತುವುದು, ತಲೆಯ ಮೇಲೆ ಸೆರಗು ಹಾಕಿಕೊಳ್ಳುವುದು ಈ ಜನಾಂಗದಲ್ಲಿ ಕಡ್ಡಾಯವಾಗಿದೆ. ಮುತ್ತೈದೆಯರಿಗೆ ಮತ್ತು ಗರತಿ ಹೆಣ್ಣುಮಕ್ಕಳಿಗೆ ಈ ಎರಡು ಬುಡಕಟ್ಟು ಜನಾಂಗ ಬಹಳ ಗೌರವ ಕೊಡುತ್ತಾರೆ.ಅದೇ ರೀತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹತ್ತಿರದ ಸಂಬಂಧ ಮತ್ತು ಗುಣಲಕ್ಷಣಗಳನ್ನು ಹೋಲುತ್ತಿರುವ ಕುರುಬರು, ಒಕ್ಕಲಿಗರು, ವಡ್ಡರು, ಅಡವಿ ಚೆಂಚರು, ಹಾಲಕ್ಕಿಗಳು ಮತ್ತು ಸೋಲಿಗರಲ್ಲಿ ಕೂಡ ಈ ಎಲ್ಲಾ ವೇಷ ಭೂಷಣಗಳು, ಸಂಪ್ರದಾಯ ಮತ್ತು ನಂಬಿಕೆಗಳನ್ನು ಗುರುತಿಸಬಹುದು.

೨. ಆಹಾರ ಪದ್ಧತಿ

'ಮುದ್ದೆಯಂತ ಊಟವಿಲ್ಲ, ಸಿದ್ದಪ್ಪನಂತ ದೇವರಿಲ್ಲ'. ಎಂಬ ಗಾದೆ ಮಾತು, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಜನರಲ್ಲಿ ಬಹಳ ಪ್ರಚಲಿತವಿದೆ. ಈ ಪ್ರದೇಶದಲ್ಲಿ ರಾಗಿಯನ್ನು ಹೆಚ್ಚು ಬೆಳೆಯುತ್ತಿರುವುದರಿಂದ 'ರಾಗಿಮುದ್ದೆ ಹುರುಳಿಸಾರು' ದಿನ ನಿತ್ಯದ ಪ್ರಮುಖ ಆಹಾರವಾಗಿದೆ. ಸ್ಥಿತ ಪ್ರಜ್ಞನು ಶುದ್ಧವಾದ ಆಹಾರ ಸೇವನೆ ಮಾಡಬೇಕೆಂದು ಸ್ಮೃತಿಗಳಲ್ಲಿಆಹಾರ ಪದ್ಧತಿಯ ನಿಯಮಗಳ ಉಲ್ಲೇಖವಿದೆ. ಗುಡ್ಡಗಾಡು ಜನಾಂಗವಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ಮಾಂಸಹಾರಿಗಳಾದರೂ ಸಸ್ಯಾಹಾರಕ್ಕೂ ಅಷ್ಟೇ ಮಹತ್ವ ಕೊಟ್ಟಿದ್ದಾರೆ. ಪಶುಪಾಲಕರಾದ ಮ್ಯಾಸಬೇಡರು ಬಹು ಹಿಂದೆ ಸೀಮೆ ಅಕ್ಕಿ, ಬಿದಿರಕ್ಕಿ, ಕಾಡಮ್ಮೆಹಾಲು, ಜೇನುತುಪ್ಪ, ಗೆಡ್ಡೆಗೆಣಸುಗಳನ್ನು ಆಹಾರವಾಗಿ ಬಳಸುತ್ತಿದ್ದರಂತೆ. ಹಂದಿ, ಕೋಳಿ ಮತ್ತು ದನದ ಮಾಂಸವನ್ನು ತಿನ್ನದೇ ಇರುವ ಈ ಜನಾಂಗಗಳು ಕೋಳಿ ಮತ್ತು ಹಂದಿಯನ್ನು ತಮ್ಮ 'ಹಟ್ಟಿ'ಯ ಪ್ರದೇಶದ ಸುತ್ತ ಮುತ್ತ ಬರದಂತೆ ನೋಡಿಕೊಳ್ಳುತ್ತಾರೆ. ಮತ್ತೆ ಕೆಲವರು 'ಹಟ್ಟಿ'ಯ ಪ್ರದೇಶದ ಸುತ್ತಮುತ್ತ ಬರದಂತೆ ನೋಡಿಕೊಳ್ಳುತ್ತಾರೆ. ಮತ್ತೇ ಕೆಲವರು ಹಟ್ಟಿಯ ಸುತ್ತ ಮುತ್ತ ಪ್ರದೇಶಕ್ಕೆ ಮುಳ್ಳು ಬೇಲಿಯನ್ನು ಹಾಕಿಕೊಳ್ಳುತ್ತಾರೆ. ಆಕಸ್ಮಿಕವಾಗಿ ಹಂದಿ, ಕೋಳಿ ಮನೆಯೊಳಗೆ ಬಂದರೆ ಅನಿಷ್ಟವೆಂದು ಭಾವಿಸಿ, ಮನೆ ಬಳಿದು ಕೊಂಡು ಅಗಸರಿಂದ ಗೋಗಂಬು ಹಾಕಿಸಿ ಸೂತಕ ಕಳೆದುಕೊಳ್ಳುತ್ತಾರೆ. ಹಂದಿ, ಕೋಳಿ, ದನದ ಮಾಂಸ, ಈಚಲಚಾಪೆ, ಈಚಲಹಣ್ಣು, ಮತ್ತು ಸೇಂದಿ ಈ ಸಮುದಾಯಗಳಲ್ಲಿ ನಿಷಿದ್ಧವಾಗಿದೆ.

ಕೋಳಿ ತಿನ್ನುವ ಬೇಡರನ್ನು 'ಊರುಬೇಡರು' ಎಂದು; ಕೋಳಿ ತಿನ್ನದೇ ಇರುವ ಬೇಡರನ್ನು 'ಮ್ಯಾಸಬೇಡರು' ಎಂದು. ಅದೇ ರೀತಿ ಕೋಳಿ ತಿನ್ನುವ, ಊರಲ್ಲಿ ವಾಸಿಸುವ ಗೊಲ್ಲರನ್ನು 'ಊರುಗೊಲ್ಲರು' ಎಂದು; ಕೋಳಿತಿನ್ನದೇ ಪ್ರತ್ಯೇಕ 'ಹಟ್ಟಿ' ಗಳನ್ನು ಕಟ್ಟಿಕೊಂಡು ವಾಸಿಸುವ ಗೊಲ್ಲರನ್ನು 'ಕಾಡುಗೊಲ್ಲರು' ಎಂದು ಕರೆಯುತ್ತಾರೆ. ಈ 'ಕೋಳಿ'ಯನ್ನೇ ಆಧಾರವಾಗಿಟ್ಟುಕೊಂಡು ಬೇಡರು ಮತ್ತು ಗೊಲ್ಲರು ತಮ್ಮ ಉಪ-ಪಂಗಡಗಳನ್ನು ಗುರುತಿಸಿಕೊಳ್ಳುತ್ತಾರೆ. ಆದ್ದರಿಂದ ಈ ಪ್ರದೇಶದ 'ಊರುಬೇಡರು' ಮತ್ತು 'ಊರುಗೊಲ್ಲರು' ಕೋಳಿತಿನ್ನುತ್ತಿದ್ದಾರೆ. ಆದರೆ 'ಮ್ಯಾಸಬೇಡರು' ಮತ್ತು 'ಕಾಡುಗೊಲ್ಲರು' ಮಾತ್ರ ಕೋಳಿ ತಿನ್ನದೇ ಗ್ರಾಮೀಣ ಸಂಸ್ಕೃತಿಯಿಂದ ಪ್ರತ್ಯೇಕವಾಗಿ 'ಹಟ್ಟಿ'ಕಟ್ಟಿಕೊಂಡು ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಆಹಾರ ಪದಾರ್ಥಗಳನ್ನು ಮತ್ತು ಹೊಲಕ್ಕೆ ಬಿತ್ತುವ ಬೀಜಗಳನ್ನು ಮಣ್ಣಿನ ಮಡಿಕೆ ಅಥವಾ ಸೋರೆಗಳಲ್ಲಿ ಸಂಗ್ರಹಿಸಿ ಇಡುತ್ತಾರೆ. ಕೆಲವೊಂದು ರೈತರು ಬಿತ್ತನೆ ಬೀಜಗಳಿಗೆ ಕೆಮ್ಮಣ್ಣು, ಬೂದಿ, ಹಸುವಿನಗಂಜಲ ಸೇರಿಸಿ ನೆರಳಲ್ಲಿ ಒಣಗಿಸಿ ಬಟ್ಟೆಯಲ್ಲಿ ಕಟ್ಟಿಡುತ್ತಾರೆ. ಅಡಿಗೆಗೆ ಕೂಡ ಮಣ್ಣಿನ ಮಡಿಕೆ, ಕುಡಿಕೆ, ಮುಚ್ಚಳ, ಗಡಿಗೆ ಮತ್ತು ಸೋರೆಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇವರು ತಯಾರಿಸುವ ಆಹಾರದಲ್ಲಿ ಅಡವಿ ಸೊಪ್ಪು, ದ್ವಿದಳ ಧಾನ್ಯಗಳು, ತರಕಾರಿ, ಹಾಲು, ಮೊಸರು, ತುಪ್ಪ ಮತ್ತು ಮಾಂಸವನ್ನು ಉಪಯೋಗಿಸುತ್ತಾರೆ. ಕುಂಬಾರರು ತಯಾರಿಸಿದ ಮಣ್ಣಿನ ಒಲೆಗಳನ್ನು ತಂದು, ಕಟ್ಟಿಗೆಗಳಿಂದ ಬೆಂಕಿ ಹಚ್ಚಿ ಆಹಾರ ಬೇಯಿಸುತ್ತಾರೆ. ನಿಜ ಭಕ್ತ ಬೇಡರ ಕಣ್ಣಪ್ಪನ ಕಥೆಯಲ್ಲಿ ಶಿವನು ಕಣ್ಣಪ್ಪನಿಗೆ ಪ್ರತ್ಯಕ್ಷವಾಗಿ "ಎಲೈ

ಭಕ್ತ ಶ್ರೇಷ್ಠನಾದ ಕಣ್ಣಪ್ಪನೇ ನಿನಗೇನು ಬೇಕು ಕೇಳಿಕೋ ಇಷ್ಟಾರ್ಥವನ್ನು ಕೊಡುತ್ತೇನೆಂದು" ಹೇಳಲು, ಕಣ್ಣಪ್ಪನು ಸದಾ ಶಿವನನ್ನು, "ಎಲೈ ಸ್ವಾಮಿಯೇ ನನಗೆ (ಕಲ್ಲಕೂರ, ಪುಲ್ಲನುಗು, ತಲ್ಲಿಸುತ್ತಾ ಪಿಲ್ಲಲೂ) ಪೊದೆಯೊಳಗಿನ ಸೊಪ್ಪು, ಗಡ್ಡೆ, ಗೆಣಸುಗಳಿಂದ ಆಹಾರವೂ, ಕಟ್ಟಿಗೆ ಕೊಳ್ಳಿಗಳಿಂದ ಬೆಳಕೂ ಮತ್ತು ಮನೆ ತುಂಬಾ ಮಕ್ಕಳೂ ಉಂಟಾಗಲಿ" ಎಂದು ಕೇಳಿಕೊಂಡನು. ಅದಕ್ಕೆ ಪರಮೇಶ್ವರನು 'ತಥಾಸ್ತು' ಎಂದು ಹೇಳಿ ಅಂಥರ್ಧಾನನಾದನು".[೧] ಎಂದು ಕಥೆ ಮುಂದುವರೆಯುತ್ತದೆ. ಈ ಕಥೆಗೆ ಪೂರಕವಾಗಿರುವಂತೆ ಕೂಡ್ಲಿಗಿ ತಾಲ್ಲೂಕು ಮಾಕನಡಕು, ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಮತ್ತು ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಗ್ರಾಮದ ಮ್ಯಾಸಬೇಡರು "ಕೊಳ್ಳಿ ಬೆಳಕಿನಲ್ಲಿ" ದೇವರ ಗುಗ್ಗರಿ ಹಬ್ಬವನ್ನು ಮಾಡುತ್ತಾರೆ. ವಿದ್ಯುತ್ ದೀಪಗಳಿದ್ದರೂ ಸಹ ಆ ದಿನಗಳಲ್ಲಿ ಅವರು ಉಪಯೋಗಿಸುವುದಿಲ್ಲ. ಪ್ರಸ್ತುತ ಈ ಎರಡು ಬುಡಕಟ್ಟುಗಳ 'ಆಹಾರ ಪದ್ಧತಿ'ಯನ್ನು 'ಸಸ್ಯ ಆಹಾರ' ಮತ್ತು 'ಮಾಂಸ ಆಹಾರ' ಎಂದು ಎರಡು ರೀತಿ ವರ್ಗೀಕರಿಸಬಹುದು

೨.೧. ಸಸ್ಯ ಆಹಾರ

ಜಾತ್ರೆ, ಉತ್ಸವ, ಹಬ್ಬ-ಹರಿದಿನ, ವಿವಾಹ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಸಸ್ಯ ಆಹಾರಕ್ಕೆ ಬಹಳ ಮಹತ್ವ ಕೊಡುತ್ತಾರೆ. ರಾಗಿ, ಜೋಳ, ಸಜ್ಜೆ, ನವಣೆ, ಅಕ್ಕಿ, ಸಾವೆ, ಹಾರಕ, ಎಳ್ಳು, ತೊಗರಿ,ಅಲಸಂದೆ, ಹೆಸರು,ಹುರುಳಿ, ಅವರೆ ಮೊದಲಾದ ಆಹಾರ ಧಾನ್ಯಗಳನ್ನು, ಮೆಣಸಿನಕಾಯಿ, ಬದನೆಕಾಯಿ, ಹೀರೇಕಾಯಿ, ಬೆಂಡೆಕಾಯಿ, ಕುಂಬಳ ಕಾಯಿ, ಈರುಳ್ಳಿ ಮೊದಲಾದ ತರಕಾರಿಗಳನ್ನು ಬಳಸುತ್ತಾರೆ. ಅಡವಿ ಸೊಪ್ಪುಗಳಾದ ಬೇಲಿ ಮೇಲಿನ ಆಲೆಸೊಪ್ಪು,ಮುಂಗಾರಿ ಬಳ್ಳಿ, ಹರಿವೆ ಸೊಪ್ಪು, ಗೊರಜಿಗನ ಸೊಪ್ಪು, ಮಳದಾಸಲೆ, ಕಿರುಕ್ಷಾಲಿ, ಪಟ್ನಗೊರಜಿ, ಬಸಲೆ,ಕೋಲನ್ನೇ, ಹುಣಸೆ ಚಿಗುರು, ನುಗ್ಗೆ ಸೊಪ್ಪು ಮೊದಲಾದ ಸೊಪ್ಪುಗಳನ್ನು ಬಳಸುತ್ತಾರೆ. ರಾಗಿಮುದ್ದೆ ಮತ್ತು ಹುರುಳಿಕಾಳಿನ ಸಾರು ಅಥವಾ ಚಟ್ನಿ ನಿತ್ಯದ ಆಹಾರ ಪದ್ಧತಿಯಾಗಿದೆ. ಹಾಲು, ಮೊಸರು, ತುಪ್ಪ ಮತ್ತು ಮಜ್ಜಿಗೆಯನ್ನು ಊಟದಲ್ಲಿ ಹೆಚ್ಚು ಉಪಯೋಗಿಸುತ್ತಾರೆ. ಇವರ ದೈವಗಳಾದ ಓಬಳದೇವರು, ಕಾಟಂಲಿಂಗೇಶ್ವರ, ಚಿತ್ರಲಿಂಗೇಶ್ವರ, ಕಂಪಳರಂಗಸ್ವಾಮಿ ಮೊದಲಾದ ದೇವರುಗಳು ಕೂಡ ಸಸ್ಯಾಹಾರಿಗಳೇ ಆಗಿದ್ದವು ಎಂಬುದಕ್ಕೆ ಅವರು ಆಚರಿಸುವ ಹಬ್ಬ, ಜಾತ್ರೆ ಮತ್ತು ಉತ್ಸವಗಳಲ್ಲಿ ದೇವರಿಗೆ "ಎಡೆ" ಹಾಕುವ ಅನ್ನ, ಮೊಸರು, ಬೆಲ್ಲ, ಬಾಳೆಹಣ್ಣು, ಹುರುಳಿ ಗುಗ್ಗರಿ, ಹಾಲು, ತುಪ್ಪ, ಬೆಲ್ಲದ ಹುಗ್ಗಿ, ಉಪ್ಪಿಲ್ಲದ ಸಾರು ಮೊದಲಾದ ಆಹಾರ ಪದಾರ್ಥಗಳ ಮೂಲಕ ಗುರುತಿಸಬಹುದಾಗಿದೆ. ಈ ಸಮುದಾಯಗಳ ಪೂಜಾರಿ ಮತ್ತು ದಾಸಯ್ಯಗಳು ಸಂಪೂರ್ಣವಾಗಿ ಸಸ್ಯಾಹಾರಿ ಗಳಾಗಿರುತ್ತಾರೆ. ಪ್ರಾರಂಭದಲ್ಲಿ ಮಾಂಸಾಹಾರಿಗಳಾಗಿದ್ದರೂ, 'ಮುದ್ರೆ' ಹಾಕಿಸಿಕೊಂಡ ನಂತರ ಅಥವಾ ಪಟ್ಟ ಕಟ್ಟಿದ ನಂತರ ಸಸ್ಯಹಾರಿಗಳಾಗಿ ಪರಿವರ್ತನೆ ಹೊಂದುತ್ತಾರೆ.

೨.೨. ಮಾಂಸ ಆಹಾರ

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ಮಾಂಸಹಾರಿಗಳು. ಗುಡ್ಡಗಾಡುಗಳಲ್ಲಿ ಪಶು ಮತ್ತು ಪೋಷ ಪಾಲಕರಾಗಿ ತಿರಗುವ ಈ ಜನಾಂಗ ಬೇಟೆಯಾಡಿದ ಪ್ರಾಣಿಗಳ ಮಾಂಸವನ್ನು ಸುಟ್ಟು ತಿನ್ನುತ್ತಿದ್ದರಂತೆ,

ನಂತರ ಬೇಯಿಸಿ ತಿನ್ನುವುದು ಕಲಿತರಂತೆ. ಈ ಹೊತ್ತಿಗೂ ಸತ್ತ ವ್ಯಕ್ತಿಯ ದಿನಕರ್ಮ ಮಾಡುವಾಗ ಸುಟ್ಟ ಮಾಂಸದ ತುಂಡುಗಳನ್ನು ತಂಗಟೆ ಕಡ್ಡಿಗೆ ಏರಿಸಿ ಸಮಾಧಿ ಬಳಿ ಇಟ್ಟು ಬರುತ್ತಾರೆ. ಈ ಎರಡು ಬುಡಕಟ್ಟುಗಳ ವೃತ್ತಿ ಪಶುಪಾಲನೆ ಮತ್ತು ವ್ಯವಸಾಯವಾದರೂ ಉಪಜೀವನಕ್ಕಾಗಿ ಬೇಟೆಯಾಡುವ ಪದ್ಧತಿ ಅವರಲ್ಲಿದೆ. ಕುರಿ, ಮೇಕೆ, ಮೊಲ, ಜಿಂಕೆ, ಉಡ, ಕೌಜುಗ, ಮೀನು, ಏಡಿ, ಬೆಳ್ಳಿ ಇಲಿ ಮೊದಲಾದ ಪ್ರಾಣಿಗಳ ಮಾಂಸವನ್ನು ತಿನ್ನುತ್ತಾರೆ. ಆದರೆ ಕೋಳಿ, ಹಂದಿ ಮತ್ತು ದನದ ಮಾಂಸವನ್ನು ಅವರು ಮುಟ್ಟುವುದಿಲ್ಲ. ಮನೆಯಿಂದ ಹೊರಗೆ ಪ್ರತ್ಯೇಕವಾದ ಸ್ಥಳಗಳಲ್ಲಿ ಮಾತ್ರ ಮಾಂಸದ ಅಡಿಗೆ ತಯಾರಿಸುತ್ತಾರೆ. ಅದರೆ ಮನೆಯ ಒಳಗಡೆ ಮಾಂಸದ ಅಡಿಗೆ ಮಾಡುವುದಿಲ್ಲ. ಮಾಂಸದ ಅಡುಗೆ ಮಾಡಲು ಪ್ರತ್ಯೇಕವಾದ ಮಡಿಕೆ, ಕುಡಿಕೆ, ಮುಚ್ಚಳ ಇಟ್ಟಿರುತ್ತಾರೆ. ಊಟಕ್ಕೆ ಅಡಿಕೆ ಪಟ್ಟೆಗಳನ್ನು ಬಳಸಿ ಊಟದ ನಂತರ ದೂರ ಎಸೆಯುತ್ತಾರೆ. ಸಿಹಿ ಊಟಕ್ಕಾದರೆ ಮುತ್ತುಗದ ಬಾಳೆ, ಔಡಲ ಮತ್ತು ಎಕ್ಕೆ ಎಲೆಗಳನ್ನು ಬಳಸುತ್ತಾರೆ.

ಕೆಲವೊಂದು ಹಬ್ಬ ಮತ್ತು ಜಾತ್ರೆಗಳಲ್ಲಿ, ಸತ್ತ ವ್ಯಕ್ತಿಯ ದಿನಕರ್ಮಗಳಲ್ಲಿ, ಮಾರಮ್ಮನ ಹಬ್ಬಗಳಲ್ಲಿ 'ಬೇಟೆ' ಕಡಿದು ಮಾಂಸದ ಅಡಿಗೆ ಮಾಡುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೆಲವೊಂದು ದೇವರುಗಳಿಗೆ ಹರಕೆ ಮಾಡಿಕೊಂಡು ಬೇಟೆ ಕಡಿಯುತ್ತಾರೆ. ಗೌರಸಂದ್ರ ಮಾರಕ್ಕ, ಯರಬಳ್ಳಿ ಮಾರಕ್ಕ, ಕರಿಓಬೇನಹಳ್ಳಿ ಮಾರಕ್ಕ, ಗುಂಟನೂರು ದ್ಯಾಮಕ್ಕ, ಮಾಯಸಂದ್ರ ಕರಿಯಮ್ಮ, ನಗರಕಟ್ಟೆ ಕರಿಯಮ್ಮ, ಅನುಕಟ್ಟೆ ಕೆಂಚಮ್ಮ, ಅಮ್ಮನಗುಡ್ಡದ ಕುಕ್ಕವಾರದಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಅಡ್ಲಟ್ಟಿ ಭೂತಪ್ಪ, ಸಾಣೇಕೆರೆ ಗಂಜಿಗುಂಟಮ್ಮ, ಪುರ್ಲಳ್ಳಿ ಭೂತಪ್ಪ, ಜಗಲೂರು ಪಾಪನಾಯಕ, ಕಣಿವೆ ಮಾರಕ್ಕ, ಚಳ್ಳಕೇರಮ್ಮ, ಬೇವಿನಹಳ್ಳಿ ಕರಿಯಮ್ಮ, ಬೊಂಬೇರಹಳ್ಳಿ ಕಟ್ಟೆಮಾರಕ್ಕ, ಜಾಜೂರು ಕರಿಯಮ್ಮ ಮೊದಲಾದ ದೇವರುಗಳಿಗೆ ಬೇಟೆ ಕಡಿದು ಮಾಂಸದ ಅಡಿಗೆ ಮಾಡಿ 'ಎಡೆ' ಹಾಕುತ್ತಾರೆ. ಬೇಟೆ ಕಡಿಯುವಾಗ ಬೇಟೆ ಅರಚಬಾರದು, ಆಕಸ್ಮಿವಾಗಿ ಅರಚಿದರೆ ನಮಗೆ ಒಳ್ಳೆಯದಾಗುವುದಿಲ್ಲ ಎಂದು ಹೇಳುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ವಿಶೇಷವಾಗಿ ಕುರಿ, ಮೇಕೆ, ಮೊಲ ಮತ್ತು ಜಿಂಕೆ ಮಾಂಸವನ್ನು ತಿನ್ನುತ್ತಾರೆ. ಕುರಿ ಮತ್ತು ಮೇಕೆಗಳನ್ನು ಕಡಿದು ಮಾರಮ್ಮನ ಹಬ್ಬ ಮಾಡುತ್ತಾರೆ. ಆದರೆ ಎಂ.ಜಿ.ಈಶ್ವರಪ್ಪನವರು "ಮ್ಯಾಸಬೇಡರು" ಎಂಬ ಪುಸ್ತಕದಲ್ಲಿ (೧೯೮೨-ಪು.ಸಂ:೨೦) "ಚಳ್ಳಕೆರೆ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಸ್ಥಿತಿವಂತರ ಮನೆಯಲ್ಲಿ ಸತ್ತ ದನ ಕರುಗಳನ್ನು ಮ್ಯಾಸಬೇಡರು ಹೊತ್ತುಕೊಂಡು ಹೋಗಿ ಅದರ ಮಾಂಸ ಬಳಸುವ ರೂಢಿಯಿದೆ" ಎಂದು ಹೇಳಿದ್ದಾರೆ. ಆದರೆ ಚಳ್ಳಕೆರೆ ತಾಲ್ಲೂಕಿನ ಮ್ಯಾಸಬೇಡರಿಗೆ ಹಂದಿ, ಕೋಳಿ, ಹೆಂಡ, ದನದ ಮಾಂಸ, ಈಚಲ ಹಣ್ಣುಗಳನ್ನು ತಿನ್ನುವುದು ನಿಷಿದ್ಧವಾಗಿರುವಾಗ ಇದೇ ಮ್ಯಾಸಬೇಡರು "ದನದ ಮಾಂಸ ತಿನ್ನುವುದಾದರೂ ಹೇಗೆ ಸಾಧ್ಯ? ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಗೊಂಡರೂ ಮ್ಯಾಸಬೇಡರಲ್ಲಿ ದನದ ಮಾಂಸ ತಿನ್ನುವ ಪದ್ಧತಿ ಎಲ್ಲಿಯೂ ಕಂಡುಬರುವುದಿಲ್ಲ.

೩. ವಸತಿ ವ್ಯವಸ್ಥೆ

ಮೂಲತಃ ಅಲೆಮಾರಿ ಬುಡಕಟ್ಟುಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೃಷಿ ವೃತ್ತಿಯ ಮೂಲಕ ಸ್ಥಿರವಾದ ನೆಲೆ ಕಂಡುಕೊಂಡ ಮೇಲೆ, ಸಣ್ಣ 'ಹಟ್ಟಿ' ಗಳನ್ನು ಕಟ್ಟಿಕೊಂಡು ಶಾಶ್ವತವಾಗಿ ನೆಲೆ ನಿಂತರು. ಈ ನೆಲೆ ನಿಂತ ಪ್ರದೇಶಗಳನ್ನು 'ಹಟ್ಟಿ' ಎಂದು ಕರೆಯುತ್ತಾರೆ. ಕೇವಲ ಐದಾರು ಮನೆಗಳ ಪುಟ್ಟ ಸಮೂಹಗಳಿಂದ ಪ್ರಾರಂಭವಾದ ಈ ಹಟ್ಟಿ ಪ್ರಸ್ತುತ ೨೫ ರಿಂದ ೪೦೦ ಮನೆಗಳ ಹಟ್ಟಿ ಅಥವಾ ಚಿಕ್ಕ ಗ್ರಾಮಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ಪ್ರತ್ಯೇಕವಾಗಿ ಹಟ್ಟಿ ಕಟ್ಟಿಕೊಂಡು ವಾಸಿಸುತ್ತಾರೆ. ಈ ಹಟ್ಟಿಗಳನ್ನು 'ಮ್ಯಾಸಬೇಡರಹಟ್ಟಿ' ಮತ್ತು 'ಗೊಲ್ಲರಹಟ್ಟಿ' ಎಂದು ಕರೆಯುತ್ತಾರೆ. ಕಾಡಾಡಿಗಳಾದ ಈ ಹಟ್ಟಿ ವಾಸಿಗಳು ತಮ್ಮ ಪಾವಿತ್ರತೆ ಕಾಪಾಡಿಕೊಳ್ಳಲು, ಬುಡಕಟ್ಟು ಸಂಸ್ಕೃತಿ ಉಳಿಸಿಕೊಳ್ಳಲು ಹಾಗೂ ರಕ್ಷಣೆಯ ಉದ್ದೇಶದಿಂದ, ಹಟ್ಟಿಗಳ ಸುತ್ತ ಬಲವಾದ ಮುಳ್ಳಿನ ಬೇಲಿಯನ್ನು ಹಾಕಿಕೊಂಡು ಒಂದು ಕಡೆ ಮಾತ್ರ ಬಾಗಿಲು ಬಿಟ್ಟಿರುತ್ತಾರೆ. ಈ ಬಾಗಿಲಿಗೆ "ಹಟ್ಟಿಹುದಿ" ಎಂದು ಕರೆಯುತ್ತಾರೆ. ಹಟ್ಟಿಯ ಮಧ್ಯೆ ಒಂದು ಪೌಳಿ ದೇವಸ್ಥಾನ, ಅದರ ಸುತ್ತ ಕಾರೆ, ಬಾರೆ, ಜಾಲಿ ಮತ್ತು ತರೆದ ಕಳ್ಳಿಯಿಂದ ಕಳ್ಳಿಪೌಳಿ ಕಟ್ಟಿ, ಅದರ ಮಧ್ಯೆ ಒಂದು ಚಿಕ್ಕ ಜಗಲಿ ಕಟ್ಟಿ, ಆ ಜಗಲಿ ಮೇಲೆ ಹಂಚಿಹುಲ್ಲು ಅಥವಾ ಬಾದೆಹುಲ್ಲು, ಕಾಂಸಿ ಹುಲ್ಲು, ಮುತ್ತುಗದಎಲೆ ಅಥವಾ ಬಾಳೆಪಟ್ಟೆಯಿಂದ ಚಿಕ್ಕದೇವರ 'ಗುಬ್ಬ' ಕಟ್ಟಿ, ಚಿಕ್ಕ ಬಾಗಿಲು ಇಟ್ಟಿರುತ್ತಾರೆ. ಈ ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲೂ ಮನೆ ಅಥವಾ ಗುಡಿಸಲುಗಳನ್ನು ಕಟ್ಟಿರುತ್ತಾರೆ. ಹಟ್ಟಿ ಮತ್ತು ದೇವಸ್ಥಾನದ ಒಳಗೆ ಹರಿಜನರು, ಮುಸಲ್ಮಾನರು ಹಂದಿ ಮತ್ತು ಕೋಳಿಗಳನ್ನು ಬಿಟ್ಟುಕೊಳ್ಳುವುದಿಲ್ಲ.

ಭೌಗೋಳಿಕ ಅಂಶಗಳ ಪ್ರಭಾವಕ್ಕನುಗುಣವಾಗಿ ಈ ಎರಡು ಬುಡಕಟ್ಟು ಸಮೂಹಗಳು ತಮ್ಮ ವಸತಿ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ಇವರ ವಾಸದ ಮನೆ ಅಥವಾ ಗುಡಿಸಲುಗಳ ರಚನೆ ತುಂಬ ಸರಳ ವಾಗಿರುತ್ತದೆ. ಸ್ಥಳೀಯವಾಗಿ ಸಿಗುವ ಕಲ್ಲು, ಮಣ್ಣು, ಗರಿ, ಗಳ, ಹುಲ್ಲು, ಆಪು, ಕಾಂಸಿ, ಹಂಚು, ಹಸಿಹೆಂಡೆ,ಇಟ್ಟಿಗೆ, ಮರ, ಮುಟ್ಟು ಮೊದಲಾದ ಸಾಮಗ್ರಿಗಳನ್ನು ಬಳಸಿಕೊಂಡು ವಸತಿ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಪ್ರತಿಯೊಂದು ಮನೆಯಲ್ಲಿ ಒಳಕಲ್ಲು, ಒಲೆ, ಬೀಸುವ ಕಲ್ಲು, ದನದ ಕೊಟ್ಟಿಗೆ, ಹಗೇವು ಮತ್ತು ಓಡೇವುಗಳಿಗೆ ಮಹತ್ವ ಕೊಟ್ಟು ಮನೆ ಕಟ್ಟುತ್ತಾರೆ. ಈ ಎರಡು ಬುಡಕಟ್ಟು ಜನಾಂಗ ಮನೆ ಕಟ್ಟುವ ವಿನ್ಯಾಸದಲ್ಲಿ ಹಲವಾರು ವೈಜ್ಞಾನಿಕ ಅಂಶಗಳನ್ನು ಕಂಡುಕೊಂಡಿದ್ದಾರೆ. ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ಹಲವು ಉತ್ತಮ ನಂಬಿಕೆಗಳನ್ನು ಗುಡಿಸಲು ಕಟ್ಟುವಾಗ ಪಾಲಿಸುತ್ತಾರೆ. ದೇವಸ್ಥಾನದ ಎದುರಿಗೆ ಅಡ್ಡಲಾಗಿ ಮನೆ ಕಟ್ಟಬಾರದು, ಪಶ್ಚಿಮ ದಿಕ್ಕಿಗೆ ಬಾಗಿಲು ಇಡಬಾರದು, ಆಗ್ನೇಯ ಮೂಲೆಯಲ್ಲಿ ಒಲೆ ಇರಬೇಕು, ಮನೆಯ ಸುತ್ತಳತೆಯಲ್ಲಿ ಈಶಾನ್ಯ ಮೂಲೆ ಸ್ವಲ್ಪ ಹೆಚ್ಚಿರಬೇಕು, ತಲೆಬಾಗಿಲು ಬಹಳ ಎತ್ತರ ಇರಬಾರದು, ದೇವ ಮೂಲೆಯಲ್ಲಿ ಚಪ್ಪಲಿ ಬಿಡಬಾರದು, ಮನೆಯ ಮೇಗಳ ಅಲ್ಲಣಿಗೆ ನೀರು ಉತ್ತರ ಅಥವಾ ಪೂರ್ವಕ್ಕೆ ಬೀಳಬೇಕು, ಮನೆಯ ಮುಂಭಾಗ ದನದ ಗ್ವಾನ್‌ದ್ಲೆ ಇರಬೇಕು, ತಲೆಬಾಗಿಲು ಕೆಳಗೆ ಪಂಚಲೋಹದ ಚೂರುಗಳನ್ನು ಇಡಬೇಕು, ಪಶ್ಚಿಮದ ನೈರುತ್ಯಕ್ಕೆ ಮಣ್ಣಿನ ಮಡಿಕೆ, ಸೋರೆ ಹೇರಿಸುವುದು, ದವಸ ಧಾನ್ಯದ ಓಡೇವು ಮತ್ತು ಹಗೇವುಗಳನ್ನಿಡುವುದು,

[illegible]

ಗೆರೆಸೆಯಲ್ಲಿ ಕಾಳು ತುಂಬುವುದು ಮೊದಲಾದ ವಿಧಿ-ವಿಧಾನಗಳು ಪ್ರಸ್ತುತ ಆಧುನಿಕ ವಾಸ್ತು ಸಿದ್ಧಾಂತವನ್ನು ಪಾಲಿಸಿದಂತೆ, ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಗುಡಿಸಲು ಅಥವಾ ಮನೆಗಳನ್ನು ಕಟ್ಟಿಕೊಂಡಿದ್ದಾರೆ.

ಚಳ್ಳಕೆರೆ ತಾಲ್ಲೂಕು ಸಾಣೀಕೆರೆಯಿಂದ ಒಂದು ಕಿ.ಮೀ. ದೂರದ ಉತ್ತರಕ್ಕೆ ಗಂಜಿಗುಂಟಮ್ಮನ ಹೊರಗಳ ಗುಡಿಯ ಎಡಭಾಗಕ್ಕೆ ಕಾಡುಗೊಲ್ಲರ 'ಹಳೇಗೊಲ್ಲರಹಟ್ಟಿ' ಮತ್ತು ದೇವಸ್ಥಾನದ ಹಿಂಭಾಗದ ಕುಗಟೆ ಮರದ ಹತ್ತಿರ 'ಮ್ಯಾಸಬೇಡರ (ಅಡ್ಲಟ್ಟಿ) ಹಟ್ಟಿ' ಅಕ್ಕ ಪಕ್ಕ ಇದ್ದ ಹೆಗ್ಗುರುತುಗಳು ಅಲ್ಲಿ ಕಂಡು ಬರುತ್ತವೆ. ಈ ಪ್ರದೇಶದಲ್ಲಿ ವಾಸಿಸುವ ಕಾಡುಗೊಲ್ಲರ ಸಂಸ್ಕೃತಿಗೂ, ಸಾಣೀಕೆರೆಯಲ್ಲಿ ನೆಲೆಸಿರುವ ಮ್ಯಾಸಬೇಡರಾದ ಅಡ್ಲರ ಸಂಸ್ಕೃತಿಗೂ ಪರಸ್ಪರ ಏಕ ಸಾಮ್ಯತೆ ಕಂಡುಬರುತ್ತದೆ. ಚಿತ್ರದುರ್ಗದಿಂದ ೨೧ ಕಿ.ಮೀ. ದೂರದ ತುರುವನೂರು ಗೊಲ್ಲರ ಹಟ್ಟಿಯಲ್ಲಿ ಕಾಡುಗೊಲ್ಲರ ೪೨ ಮನೆಗಳು, ಮ್ಯಾಸಬೇಡರ ೧೨ ಮನೆಗಳು ಈ ಗೊಲ್ಲರ ಹಟ್ಟಿಯಲ್ಲಿ ಕಂಡುಬರುತ್ತವೆ. ಈ ಎರಡೂ ಜನಾಂಗ ಒಂದೇ ಹಟ್ಟಿಯಲ್ಲಿ ವಾಸಿಸುವುದು ಒಂದು ವಿಶೇಷವಾಗಿದೆ. ಅದೇ ರೀತಿ ಹೊಳಲ್ಕೆರೆ ತಾಲ್ಲೂಕು ಅವಳಿಹಟ್ಟಿ, ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ ಮತ್ತು ಹೊಸಹಳ್ಳಿ ಮೊದಲಾದ ಪ್ರದೇಶಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಒಂದೇ ಪ್ರದೇಶದಲ್ಲಿ ಒಟ್ಟಾಗಿ ವಾಸಿಸುವ 'ಹಟ್ಟಿಗಳು' ಕಂಡು ಬರುತ್ತವೆ. ಈ ಎರಡು ಬುಡಕಟ್ಟು ಸಮುದಾಯಗಳು ಸಮಾನ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹೊಂದಿರುವುದರಿಂದ ಇವರ ವಸತಿ ವ್ಯವಸ್ಥೆಯೂ ಕೂಡ ಪರಸ್ಪರ ಸಾಮ್ಯತೆ ಕಂಡು ಬರುತ್ತದೆ. ಆದರೆ ಮರ ಮುಟ್ಟುಗಳನ್ನು ಮನೆಗೆ ಬಳಸುವಾಗ ಬನ್ನಿಮರ, ಬಿಲ್ವಪತ್ರೆ ಮರ, ತುಗ್ಗಲಿಮರ, ಬೇಟೆಗಿಡ, ಮುತ್ತುಗದಗಿಡ, ಆಲದಮರ, ಧೂಪದಮರ ಮತ್ತು ಲಕ್ಕಿ ಗಿಡದ ರೆಂಬೆ ಕೊಂಬೆಗಳನ್ನು ಮನೆಗೆ ಹಾಕುವುದಿಲ್ಲ. ಕೆಲವೊಂದು ಪ್ರದೇಶಗಳಲ್ಲಿ ಈಚಲ ಗಿಡದ ಕಟ್ಟಿಗೆ, ಚಾಪೆ ಮತ್ತು ಗರಿಗಳನ್ನು ಕೂಡ ಬಳಸುವುದಿಲ್ಲ. ಅದರೆ ಪ್ರಸ್ತುತ ಈ ಎರಡು ಬುಡಕಟ್ಟು ವಸತಿ ವ್ಯವಸ್ಥೆಯ ಮೇಲೆ ಆಧುನೀಕರಣ, ನಗರೀಕರಣ ಮತ್ತು ಸಂಪರ್ಕ ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ಅವರ ಮನೆಯ ವಿನ್ಯಾಸದಲ್ಲಿ ಪರಿವರ್ತನೆಯ ಅಂಶಗಳು ಕಂಡುಬರುತ್ತವೆ. ಪ್ರಸ್ತುತ ಈ ಎರಡು ಜನಾಂಗದ ಅಧ್ಯಯನದ ಉದ್ದೇಶಕ್ಕಾಗಿ ಈ ವಸತಿ ವ್ಯವಸ್ಥೆಯನ್ನು ಗುಡಿಸಲು ಮನೆ, ಮಾಳಿಗೆ ಮನೆ, ಹಂಚಿನ ಮನೆ ಮತ್ತು ದೇವರ ಮನೆ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಿ ಅಧ್ಯಯನ ಮಾಡಲಾಗಿದೆ.

೩.೧. ಗುಡಿಸಲು ಮನೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ "ಗೊಲ್ಲರಹಟ್ಟಿ" ಹಾಗೂ "ಮ್ಯಾಸಬೇಡರಹಟ್ಟಿ" ಗಳಲ್ಲಿ ಹುಲ್ಲಿನ ಗುಡಿಸಲುಗಳೇ ಹೆಚ್ಚು. ಈ ಗುಡಿಸಲುಗಳ ರಚನೆಯು ಕೂಡ ಸರಳವಾಗಿರುತ್ತದೆ. ಸ್ಥಳೀಯವಾಗಿ ಸಿಗುವ ಮರ ಮುಟ್ಟುಗಳನ್ನು ಬಳಸಿ ಮನೆ ಕಟ್ಟಿಕೊಳ್ಳುತ್ತಾರೆ. ಚಿತ್ರದುರ್ಗದ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಗೊಂಡಾಗ ಕಾಡುಗೊಲ್ಲರ ಶೇಕಡಾ ೭೫ ರಷ್ಟು ಮನೆಗಳು ಗುಡಿಸಲುಗಳಾಗಿವೆ. ಶೇಕಡಾ ೧೫ ರಷ್ಟು ಹಂಚಿನ ಮನೆಗಳು, ಶೇಕಡಾ ೧೦ ರಷ್ಟು ಮಾಳಿಗೆ ಮನೆಗಳು ಕಂಡುಬರುತ್ತವೆ. ಅದೇ ರೀತಿ ಮ್ಯಾಸಬೇಡರ ಶೇಕಡಾ ೫೦ ರಷ್ಟು ಮಾಳಿಗೆ ಮನೆಗಳು, ಶೇಕಡಾ ೪೦ ರಷ್ಟು ಗುಡಿಸಲುಗಳು, ಶೇಕಡಾ ೧೦ ರಷ್ಟು ಹಂಚಿನ ಮನೆಗಳು ಕಂಡು ಬರುತ್ತವೆ.

[illegible]

ಸಮೂಹ ಜೀವಿಗಳಾದ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ವಾಸಕ್ಕೆ ಗುಡಿಸಲು ಕಟ್ಟಿಕೊಳ್ಳುವಾಗ ಯಾವುದೇ ಶಾಸ್ತ್ರ, ಪಂಚಾಂಗ ಕೇಳದೆ, ಪೂರ್ವ, ಉತ್ತರ ಇಲ್ಲವೇ ದಕ್ಷಿಣಕ್ಕೆ ತಲೆಬಾಗಿಲು ಬರುವಂತೆ ಒಂದಾಳುದ್ದ ಗೋಡೆ ಕಟ್ಟಿ, ಮಧ್ಯ ಎರಡು ಕಂಭಗಳನ್ನು ನೆಟ್ಟು ಕಂಭ ಮತ್ತು ಗೋಡೆಯ ಮೇಲೆ ಬರುವಂತೆ ಉದ್ದನೆಯ ಒಂದು ಅಡ್ಡ ಬೆಲಗು ಹಾಕಿ ಅದರ ವಿರುದ್ಧ ದಿಕ್ಕಿನಲ್ಲಿ ತೀರುಗಳು ಅಥವಾ ಗಳಗಳನ್ನು ಹಾಕಿ, ಹುಲಿಕಡ್ಡಿ, ಲಕ್ಕಿ ಸೊಪ್ಪಿನ ಬರಲು, ಅಡಿಕೆ ದೆಬ್ಬೆಗಳಿಂದ ಬಿಗಿಯಾಗಿ ತೀರುಗಳಮೇಲೆ ಹಿಂಡಿಕೆ ಬಿಗಿಯತ್ತಾರೆ. ಕತ್ತಾಳೆ ಅಥವಾ ಕಮರದ ನಾರನ್ನು ಹಿಂಡಿಕೆ ಬಿಗಿಯಲು ಬಳಸುತ್ತಾರೆ. ನಂತರ ತೆಂಗಿನ ಗರಿ, ತಾಳೆಗರಿ, ಅಡಿಕೆಗರಿ, ಹಂಚಿ ಹುಲ್ಲು, ಬಾದೆ ಹುಲ್ಲು ಮತ್ತು ಆಪುಗಳನ್ನು ಬಳಸಿ ಕಲಾತ್ಮಕವಾಗಿ ಗುಡಿಸಲು ನಿರ್ಮಿಸುತ್ತಾರೆ. ಒಂದೆರಡು ಮಣ್ಣಿನ ಮಡಿಕೆ ಕಂಠಗಳನ್ನು ಗವಾಕ್ಷಿ ಅಥವಾ ಬೆಳಕಿನ ಕಿಂಡಿ ಅಂತ ಇಟ್ಟು ಅದರ ಬಾಯಿಗೆ ಅಡಿಕೆ ಪಟ್ಟೆಯಿಂದ ತಯಾರಿಸಿದ ಮುಚ್ಚಳ ಮುಚ್ಚುತ್ತಾರೆ. ಬೇಸಿಗೆ ಕಾಲದಲ್ಲಿ ತೆಗೆಯುತ್ತಾರೆ, ಮಳೆಗಾಲದಲ್ಲಿ ಮುಚ್ಚುತ್ತಾರೆ. ಮನೆ ಬಾಗಿಲು ಮುಚ್ಚಲು ಮತ್ತು ತೆಗೆಯಲು ಕಟ್ಟಿಗೆಯಿಂದ 'ಕದ' ಮಾಡಿಸಿರುತ್ತಾರೆ.ಕೆಲವೊಂದು ಗುಡಿಸಲುಗಳಲ್ಲಿ ತೆಂಗಿನ ಗರಿಯಿಂದ 'ತಡಿಕೆ' ಕಟ್ಟಿಕೊಂಡು ಬಾಗಿಲು ಮುಚ್ಚಲು ಮತ್ತು ತೆಗೆಯಲು ಸರಳ ವ್ಯವಸ್ಥೆ ಮಾಡಿಕೊಂಡಿರುತ್ತಾರೆ.

ಮನೆಯ ಒಳಗೆ ಪ್ರವೇಶಿಸಿದರೆ ಆಗ್ನೇಯ ಮೂಲೆಯಲ್ಲಿ ಕುಂಬಾರರ ಮನೆಯಿಂದ ತಂದ ಮಣ್ಣಿನ ಒಲೆ ಹಾಕಿ, ಸೌದೆ ಹಾಕಿಕೊಳ್ಳಲು ಜಾಗ ಬಿಟ್ಟರುತ್ತಾರೆ. ಪ್ರತಿ ದಿನ ಮುಂಜಾನೆ ಒಲೆಗಳನ್ನು ತೊಳೆದು ಒಲೆಯ ಬೂದಿಯಿಂದಲೇ ವಿಭೂತಿ ಹಚ್ಚಿ ಅಡಿಗೆ ಮಾಡಲು ಸಿದ್ಧತೆ ಮಾಡಿಕೊಳ್ಳುತ್ತಾರೆ. ಅಡಿಗೆಗೆ ಮಣ್ಣಿನ ಮಡಿಕೆಗಳನ್ನು ಬಳಸುತ್ತಾರೆ. ಪಶ್ಚಿಮ ಮತ್ತು ದಕ್ಷಿಣಕ್ಕೆ ಮಣ್ಣಿನ ಮಡಿಕೆ ಅಥವಾ ಸೋರೆಗಳನ್ನು ಒಂದರ ಮೇಲೊಂದರಂತೆ ಎತ್ತರವಾಗಿ ಏರಿಸಿರುತ್ತಾರೆ, ಇವುಗಳಿಗೆ 'ಬಾನ' ಎಂದು ಕರೆಯುತ್ತಾರೆ. ವಾರದ ದಿನ ಅಥವಾ ಶುಭಕಾರ್ಯಗಳಲ್ಲಿ ಬಾನ ತೊಳೆದು ವಿಭೂತಿ, ಕುಂಕುಮ ಹಚ್ಚುತ್ತಾರೆ. ಮನೆಯಲ್ಲಿ ಬಾನ ಅಥವಾ ಸೋಲು ಒಡೆಯಬಾರದು ಎಂಬ ನಂಬಿಕೆ ಇರುವುದರಿಂದ ಇವುಗಳನ್ನು ಬಹಳ ಜಾಗ್ರತೆಯಿಂದ ಬಳಸಿಕೊಳ್ಳುತ್ತಾರೆ. ಈ ಸೋರೆಗಳಲ್ಲಿ ಆಹಾರ ಧಾನ್ಯ, ಬಿತ್ತನೆ ಬೀಜ, ಬೆಲೆ ಬಾಳುವ ತಟ್ಟೆ, ಚೆಂಬು, ಕಳಸ, ಪಂಚಾರತಿ, ಸಣ್ಣ ಪುಟ್ಟ ಒಡವೆ, ಬೆಳ್ಳಿ, ಬಂಗಾರ, ಹಣ ಮೊದಲಾದವುಗಳನ್ನು ಹಳೆ ಬಟ್ಟೆಯಲ್ಲಿ ಕಟ್ಟಿ ಬಾನದಲ್ಲಿ ಅಡಗಿಸಿಟ್ಟಿರುತ್ತಾರೆ.

ಹಾಲು, ಮೊಸರುಗಳ ಮಡಿಕೆಯನ್ನು ಇಡುವುದಕ್ಕೆ ಒಂದೆರಡು ಹಗ್ಗದ ನೆಲವುಗಳನ್ನು ಗುಡಿಸಲಿನ ಅಡ್ಡ ಬೆಲುಗಿಗೆ ಕಟ್ಟಿ ಇಳಿಬಿಟ್ಟಿರುತ್ತಾರೆ. ಚಿಮಣಿ ಎಣ್ಣೆ ದೀಪ ಹಚ್ಚಿಡಲು 'ದೀಪಾಲೆ ಕಂಭ' ಮೂಲೆಯಲ್ಲಿ ನಿಲ್ಲಿಸಿರುತ್ತಾರೆ. ಬಿಟ್ಟ ಬಟ್ಟೆಗಳನ್ನು ಚಿಕ್ಕ ಕೋಲು ಅಥವಾ ದಾರ ಕಟ್ಟಿ ಅದರ ಮೇಲೆ ನೇತಾಕಿರುತ್ತಾರೆ. ಕಾರ ಅರೆಯುವ ಗುಂಡು ಬಂಡೆ, ಒಳಕಲ್ಲು, ಅಡಿಗೆ ಮಾಡಲಿಕ್ಕೆ ಮಡಿಕೆ, ಹಿತ್ತಾಳೆ, ಕಂಚು, ಸ್ಟೀಲ್ ತಟ್ಟೆ, ಲೋಟ, ಪಾತ್ರೆಗಳು ಅಡಿಗೆ ಮನೆಯಲ್ಲಿ ಕಂಡುಬರುತ್ತವೆ. ಹೊರಗಿನ ಭಾಗದಲ್ಲಿ ವ್ಯವಸಾಯದ ಉಪಕರಣಗಳು, ಬೇಟೆಗೆ ಬಳಸುವ ಆಯುಧಗಳು, ಬಲೆಗಳು, ಮೀನಿನ ಕೊಡಮೆ ಮೊದಲಾದ ಸಾಮಾಗ್ರಿಗಳನ್ನು ಗೂಟಕ್ಕೆ ನೇತಾಕಿರುತ್ತಾರೆ. ತಲೆಬಾಗಿಲ ಎದುರಿಗೆ ದೇವರ ಅಥವಾ ಯಜಮಾನರ ಫೋಟೋಗಳನ್ನು ಹಾಕಿ ಕೊಂಡಿರುತ್ತಾರೆ. ಒಂದು ಚಿಕ್ಕ ಗೂಡಿನಲ್ಲಿ ವಿಭೂತಿ, ಅರಿಶಿಣ, ಕುಂಕುಮದ ಬಟ್ಟು, ಒಂದೆರಡು ಊದಬತ್ತಿ, ದೇವರ ಫೋಟೋ ಮತ್ತು

ಪರಿಕರಗಳು ಮಣ್ಣಿನ ದೀಪ, ಹರಕೆ ಹೊತ್ತು ಮುಡುಪು ಕಟ್ಟಿಕೊಂಡ ದುಡ್ಡಿನ ಗಂಟು ಈ ದೇವರ ಗೂಡಿನಲ್ಲಿ ಇಟ್ಟಿರುತ್ತಾರೆ. ಒಂದು ಮೂಲೆಯಲ್ಲಿ ಚಾಪೆ, ರಗ್ಗು, ಕಂಬಳಿ ಮತ್ತು ತಲೆದಿಂಬುಗಳು ಬಿದ್ದಿರುತ್ತವೆ. ಮನೆಯ ಮುಂದೆ ಒಂದೆರಡು ದನಕರುಗಳು, ಮನೆಯ ಹಿಂಭಾಗ ಅಥವಾ ಮುಂಭಾಗ ಸ್ನಾನಕ್ಕೆ ನೆರಕೆ ಕಟ್ಟಿಕೊಂಡಿರುತ್ತಾರೆ. ಕಕ್ಕಸು ಮಾಡಲು ಬಯಲು ಪ್ರದೇಶಕ್ಕೆ ಹೋಗಿಬರುತ್ತಾರೆ. ಮನೆಯ ಮುಂದೆ ಅಥವಾ ಹಿಂಭಾಗ ಕಾಳು-ಕಡಿ ಒಣಗಿಸಲು ಸ್ಥಳಾವಕಾಶಗಳನ್ನು ಬಿಟ್ಟುಕೊಂಡಿರುತ್ತಾರೆ. ಪ್ರತಿ ವರ್ಷಕ್ಕೊಮ್ಮೆ ಯುಗಾದಿ ಹಬ್ಬದ ಸಂದರ್ಭದಲ್ಲಿ ಈ ಗುಡಿಸಲುಗಳನ್ನು ದುರಸ್ತಿ ಮಾಡಿ, ಹೊಸ ಹುಲ್ಲು ಅಥವಾ ಅವುಗಳನ್ನು ಹೊದಿಸುತ್ತಾರೆ. ಪ್ರಸ್ತುತ ಇಂತಹ ಗುಡಿಸಲು ನಿರ್ಮಾಣಕ್ಕೆ ಕನಿಷ್ಟ ಹತ್ತು ಸಾವಿರದಿಂದ ಇಪ್ಪತ್ತು ಸಾವಿರದ ವರೆಗೂ ಖರ್ಚು ಬರುತ್ತದೆ.

೩.೨. ಮಾಳಿಗೆ ಮನೆ

ಒಂದು ಹಟ್ಟಿಯಲ್ಲಿ ಇಂತಿಷ್ಟೇ ಮನೆಗಳಿರಬೇಕೆಂಬ ಯಾವ ನಿಯಮಗಳಿಲ್ಲ. ಶೇಕಡ ೫೦ ರಷ್ಟಾದರೂ ಮಾಳಿಗೆ ಮನೆಗಳು ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಹಟ್ಟಿ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡು ಬರುತ್ತವೆ. ಸಾಮಾನ್ಯವಾಗಿ ಸುತ್ತ ಮುತ್ತಲ ಪ್ರದೇಶದಲ್ಲಿ ಸಿಗುವಂಥ ವಸ್ತುಗಳನ್ನು ಮಾಳಿಗೆ ಮನೆಯ ಕಟ್ಟಡಕ್ಕೆ ಬಳಸಿಕೊಳ್ಳುತ್ತಾರೆ. ಸಾಂಪ್ರದಾಯಿಕ ಮಾದರಿ ಮನೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಅಲಂಕಾರಕ್ಕಾಗಿ ಇಲ್ಲಿ ಅವಕಾಶವೇ ಇಲ್ಲ. ಜೀವನಾವಶ್ಯಕ ವಸ್ತುಗಳು ಈ ಮನೆಗಳಲ್ಲಿ ಎದ್ದು ಕಾಣುತ್ತವೆ. ಮನೆ ಕಟ್ಟುವ ಪ್ರಾರಂಭದಲ್ಲಿ ಜಾಗ ಅಳತೆ ಮಾಡಿ, ಉದ್ದ ಮತ್ತು ಅಗಲ ಎಷ್ಟಿರಬೇಕೆಂಬುದನ್ನು ನಿರ್ಧರಿಸಿ ಭೂಮಿ ಗಟ್ಟಿತನವನ್ನು ಆಧರಿಸಿ ಬುನಾದಿ ತೆಗೆಯುತ್ತಾರೆ. ನಂತರ ಕಾಡುಗಲ್ಲು, ಕೆಸರು, ಮಣ್ಣು ಬಳಸಿ ಬುನಾದಿ ಮುಚ್ಚುತ್ತಾರೆ. ಸ್ಥಳೀಯವಾಗಿ ದೊರೆಯುವಂಥ ಕಾಡುಗಲ್ಲು, ಸುಟ್ಟಕಲ್ಲು, ಕರೆಕಲ್ಲು, ಹಸಿ ಹೆಂಡೆ, ಇಟ್ಟಿಗೆಗಳಿಂದ ಸುಮಾರು ಒಂಬತ್ತು ಅಡಿ ಎತ್ತರ ಗೋಡೆ ಕಟ್ಟುತ್ತಾರೆ. ಬೇವಿನ ಮರದ ತೊಲೆ, ಜಂತೆಗಳನ್ನಿಟ್ಟು ಅದರ ಮೇಲೆ ರೀಪಿಸು ಬಡಿದು ಕಡಪ ಬಂಡೆಗಳನ್ನು ಹಾಕುತ್ತಾರೆ. ಕೆಲವು ಪ್ರದೇಶಗಳಲ್ಲಿ ಬಿದಿರಿನ ಚಾಪೆ, ತಾಳೆಗರಿ, ಈಚಲ ಗರಿ, ಬಂದ್ರೆ ಸೊಪ್ಪು ಹೊದಿಸಿ ಹಾಳು ಮಣ್ಣಿನಿಂದ 'ಮೇಲ್ ಮುದ್ದೆ' ಹಾಕಿ ಅದರ ಮೇಲೆ ಕರಲು ಹಾಕುತ್ತಾರೆ. ಮನೆಯ ಮೇಲೆ ಸುತ್ತ ಒಂದು ಅಡಿ ಬಲ್ಪ ಕಟ್ಟಿ, ಗವಾಕ್ಷಿ, ಬಾದಾಳ ಇಟ್ಟು ಹೊಗೆ ಗೂಡು ಕಟ್ಟುತ್ತಾರೆ. ಆಧುನಿಕ ಮನೆ ಕಟ್ಟುವ ಸಾಮಗ್ರಿಗಳಾದ ಕಬ್ಬಿಣ, ಸಿಮೆಂಟು, ಮರ, ಮುಟ್ಟು, ಕಡಪ ಕಲ್ಲು, ಸುಣ್ಣ, ಬಣ್ಣ ಮೊದಲಾದ ವಸ್ತುಗಳನ್ನು ಬಳಸಿಕೊಂಡು ಎರಡು ಅಥವಾ ಮೂರು ಕೋಣೆಗಳಿರುವಂತೆ ಮನೆ ಕಟ್ಟಿರುತ್ತಾರೆ. ನೆಲವನ್ನು ಸಮತಟ್ಟು ಮಾಡಿ ಸಗಣಿ ಬಳಿದಿರುತ್ತಾರೆ. ಕೆಲವು ಕಡೆ ಸಿಮೆಂಟು, ಕಡಪ ಕಲ್ಲು, ಬಂಡೆ ಹಾಕಿಸಿಕೊಂಡಿರುತ್ತಾರೆ.

ಶುಭದಿನದಂದು ಗೋಗಂಜು ಹಾಕಿ, ಗೋಪೂಜೆ ಮಾಡಿ ಹೊಸ ಮಣ್ಣಿನ ಮಡಿಕೆಯಲ್ಲಿ 'ಹಾಲುಕ್ಕಿಸಿ ಗೃಹ ಪ್ರವೇಶ' ಮಾಡುತ್ತಾರೆ. ಈ ಮಾಳಿಗೆ ಮನೆಯನ್ನು ಅಡಿಗೆ ಮನೆ, ಪಡಸಾಲೆ ಮತ್ತು ಹೊರಾಂಡ ಎಂದು ಮೂರು ರೀತಿ ವರ್ಗೀಕರಿಸಬಹುದು. ಮನೆಯ ಹೊರಾಂಡದ ಬಾಗಿಲಿನ ಪಕ್ಕ ಎರಡು ಕಟ್ಟಿಗೆ ಬಸವ ಅಥವಾ ಎರಡು ಜಿಂಕೆ ಕೊಂಬುಗಳಿರುವ ಕಟ್ಟಿಗೆ ಬೊಂಬೆಗಳನ್ನು ತೂಗು ಹಾಕಿರುತ್ತಾರೆ. ಅಲಂಕಾರಕ್ಕಾಗಿ ಹಲವು ದೇವರ ಮತ್ತು ಮನೆಯ ಯಜಮಾನರ ಫೋಟೋಗಳನ್ನು ತೂಗು ಹಾಕಿರುತ್ತಾರೆ. ಈ ಎಲ್ಲಾ ಸಂಪ್ರದಾಯಗಳು ಮತ್ತು ನಂಬಿಕೆಗಳು ಈ

ಬುಡಕಟ್ಟು ಜನರಿಗಿದ್ದ ಭಯ ಭಕ್ತಿಗಳನ್ನು ತೋರಿಸುತ್ತದೆ. ಹಾಗೂ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಸರ್ವಚೇತನವಾದಿಗಳು ಎಂಬುದನ್ನು ಹೇಳುತ್ತವೆ.

ಸುಣ್ಣ ಹುರಮಂಜುಗಳಿಂದ, ಬಾಗಿಲು, ಗೋಡೆ, ಮೇಜಕಟ್ಟು, ಕಂಭ, ತೊಲೆ, ತೀರು ಮತ್ತು ದೇವರ ಗೂಡುಗಳಿಗೆ ರಂಗೋಲಿ ಹಾಕಿರುತ್ತಾರೆ. ಮನೆಯ ಮುಂದೆ ಅಥವಾ ಹೊರಾಂಡದಲ್ಲಿ ದನಕರುಗಳ 'ಹಕ್ಕೆ' ಅಥವಾ 'ಗ್ಯಾನ್‌ದ್ಲೆ' ಇರುತ್ತದೆ. ಪಡಸಾಲೆಯಲ್ಲಿ ಬಿಟ್ಟ ಬಟ್ಟೆಗಳನ್ನು ಉದ್ದನೆಯ ಕಟ್ಟಿಗೆ ಕಟ್ಟಿ ಅದರ ಮೇಲೆ ನೇತಾಕಿರುತ್ತಾರೆ. ಆಗ್ನೇಯ ಮೂಲೆಯಲ್ಲಿ ಒಲೆ, ಸೌದೆ ಹಾಕುವುದಕ್ಕೆ ಒಲೆ ಹಿತ್ತಲು, ಕಾರ ಅರೆಯುವ ಗುಂಡು ಬಂಡೆ, ಒಳಕಲ್ಲು, ಬೀಸುವ ಕಲ್ಲು, ಬೇಟೆ ಆಯುಧಗಳು ಮತ್ತು ಬಲೆಗಳನ್ನು ಜಂತೆಗೆ ಕಟ್ಟಿರುತ್ತಾರೆ. ಈ ಬುಡಕಟ್ಟು ಜನಾಂಗ ಮನೆಯ ಒಳಭಾಗದ ಪಶ್ಚಿಮ ಮತ್ತು ದಕ್ಷಿಣಕ್ಕೆ ಮಣ್ಣಿನ ಮಡಿಕೆ, ಸೋರೆ, ಅಡಿಗೆ ಮಾಡುವ ಪಾತ್ರೆ, ತಟ್ಟೆ, ಲೋಟ, ಚೆಂಬುಗಳಿರುತ್ತವೆ. ಕೆಲವು ಪ್ರದೇಶಗಳಲ್ಲಿ ಕಾಳಿನ ಗೆರಸೆ ಹೊರಾಂಡದಲ್ಲಿಟ್ಟಿರುತ್ತಾರೆ. ಹಗೇವುಗಳನ್ನು ನೆಲದಲ್ಲಿ ಮುಚ್ಚಿರುತ್ತಾರೆ. ಒಡೇವುಗಳನ್ನು ಕಲಾತ್ಮಕವಾಗಿ ಗೋಡೆಯಲ್ಲಿ ಜೋಡಿಸಿ ಕೆಳಗಡೆ ಮಾತ್ರ ಸಣ್ಣ ಕಿಂಡಿ ಬಿಟ್ಟು ತೆಂಗಿನ ಚಿಪ್ಪು ಇಟ್ಟು ಸಗಣಿ ಮೆತ್ತಿರುತ್ತಾರೆ. ಅಡಿಗೆ ಮನೆಯ ಒಂದು ಕಲ್ಲಿನ ಜಗಲಿಯ ಮೇಲೆ ಕಬ್ಬಿಣದ ಪೆಟ್ಟಿಗೆ, ಒಂದೆರಡು ಟ್ರಂಕು, ಜಾಕಾಯಿ ಮತ್ತು ಸಂದೂಕದ ಪೆಟ್ಟಿಗೆಳನ್ನಿಟ್ಟಿರುತ್ತಾರೆ. ಈ ಕಬ್ಬಿಣ ಪೆಟ್ಟಿಗೆಗಳಲ್ಲಿ ಪ್ರಾಚೀನ ಕಾಲದ ಆಯುಧಗಳು, ದಾಖಲಾತಿಗಳು, ಹಸ್ತಪ್ರತಿಗಳು ಮತ್ತು ಕಂಚು ಹಿತ್ತಾಳೆಯ ಸಾಮಾನುಗಳನ್ನು ಇಟ್ಟಿರುತ್ತಾರೆ. ಪ್ರಸ್ತುತ ನಾಗರಿಕತೆಯ ಪ್ರಭಾವದಿಂದಾಗಿ ಮಾಳಿಗೆ ಮನೆಗಳ ವಿನ್ಯಾಸದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಆದರೂ ಇಂತಹ ಮಾಳಿಗೆ ಮನೆಗಳ ನಿರ್ಮಾಣಕ್ಕೆ ಸುಮಾರು ೨೫ ಸಾವಿರದಿಂದ ೬೦ ಸಾವಿರದವರೆಗೂ ಖರ್ಚು ಬರುತ್ತದೆ.

೩.೩. ಹಂಚಿನ ಮನೆ

ಗುಡ್ಡಗಾಡುಗಳಲ್ಲಿ ಅಲೆದು ಪಶುಪಾಲನೆ ಮತ್ತು ಕೃಷಿ ಪ್ರಧಾನ ವೃತ್ತಿಯಾಗಿ ಸ್ವೀಕರಿಸಿದ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಗುಂಪು ಜೀವನಕ್ಕೆ ಮಹತ್ವ ಕೊಟ್ಟಿದ್ದಾರೆ. ಇವರ ವಾಸದ ಮನೆಗಳೇ ಇವರ ಸಂಸ್ಕೃತಿಯನ್ನು ತಿಳಿಸುತ್ತದೆ. ಸಿಕ್ಕ ಸಿಕ್ಕವರೆಲ್ಲ ಹಟ್ಟಿ ಪ್ರವೇಶಿಸದಂತೆ ಹಲವು ನಿರ್ಬಂಧಗಳಿವೆ. ಪ್ರತಿಯೊಂದು ಹಟ್ಟಿಗಳಲ್ಲಿ ಶೇಕಡಾ ೧೦ ರಷ್ಟಾದರೂ ಹಂಚಿನ ಮನೆಗಳಿವೆ. ಚಳ್ಳಕೆರೆ, ಹಿರಿಯೂರು ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಮಾಳಿಗೆ ಮನೆ ಮತ್ತು ಗುಡಿಸಲುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಹಂಚಿನ ಮನೆಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ನಾಗರಿಕತೆಯ ಪ್ರಭಾವದಿಂದಾಗಿ ಇವರ ಕಟ್ಟಡ ವಿನ್ಯಾಸದಲ್ಲಿ ಪರಿವರ್ತನೆಗಳಾಗುತ್ತಿವೆ. ಈ ಹಂಚಿನ ಮನೆಗಳಲ್ಲೇ ಕರಿಹಂಚು ಮತ್ತು ಕೆಂಪುಹಂಚು ಮನೆ ಎಂದು ಎರಡು ರೀತಿ ವರ್ಗೀಕರಿಸುತ್ತಾರೆ. ಆದರೂ ಮನೆ ಕಟ್ಟುವ ವಿಧಾನ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ.

ಹಂಚಿನ ಮನೆ ಕಟ್ಟುವ ಪೂರ್ವದಲ್ಲಿ ಸ್ಥಳ ನಿರ್ಧರಿಸಿ ಉದ್ದ ಮತ್ತು ಅಗಲ ಗುರುತಿಸಿ, ಬುನಾದಿ ತೋಡಿ ಕಾಡುಗಲ್ಲು, ಕೆಸರು ಮಣ್ಣುಗಳಿಂದ ಬುನಾದಿ ಮುಚ್ಚುತ್ತಾರೆ. ಸ್ಥಳೀಯವಾಗಿ ಸಿಗುವ ಸಾಮಗ್ರಿಗಳಿಂದ ಗೋಡೆ

ಕಟ್ಟುತ್ತಾರೆ. ಹೊರಗಿನ ಗೋಡೆಯು ಎಂಟು ಅಡಿ, ಪಕ್ಕದ ಗೋಡೆ ಹದಿನಾಲ್ಕು ಅಡಿ ಎತ್ತರಿಸಿ, ಅದರ ಮೇಲೆ ಅಡ್ಡ ಬೆಲಗು ಹಾಕಿ ತೀರು ಅಥವಾ ಗಳಗಳನ್ನಿಟ್ಟು ರೀಪೀಸು ಬಡಿದು ಹಂಚು ಹೊದಿಸುತ್ತಾರೆ. ಸಾಮಾನ್ಯವಾಗಿ ಬುಡಕಟ್ಟು ಜನರ ವಾಸದ ಮನೆಗಳು ಆಯಾಯಾ ಪರಿಸರವನ್ನು ಅವಲಂಬಿಸಿರುತ್ತವೆ. ಬಾಗಿಲು, ಕಿಟಕಿಗಳನ್ನಿಟ್ಟು ಸಿಮೆಂಟ್ ಗಿಲಾವ್ ಅಥವಾ ಮಳಗಾಜು ಮಾಡಿಸುತ್ತಾರೆ. ಮತ್ತೆ ಕೆಲವರು ಗಾರೆ ಹಾಕುತ್ತಾರೆ. ಸುಣ್ಣ, ಬಣ್ಣ, ಹುರಮಂಜುಗಳಿಂದ ಬಾಗಿಲು, ಕಿಟಕಿ ಮೇಜಕಟ್ಟುಗಳನ್ನು ಸಿಂಗರಿಸುತ್ತಾರೆ. ಹಬ್ಬ, ವಿವಾಹ ಸಂದರ್ಭಗಳಲ್ಲಿ ಕಂಬ, ಜಂತೆ, ತೊಲೆ, ತೀರು, ಬಾಗಿಲು ಮತ್ತು ಕಿಟಕಿಗಳಿಗೆ ರಂಗೋಲಿ ಒತ್ತಿರುತ್ತಾರೆ. ಒಳಕಲ್ಲು, ಬೀಸುವ ಕಲ್ಲು, ಒಲೆ ಇವು ಮನೆಯೊಳಗೆ ಕಡ್ಡಾಯವಾಗಿ ಇರತಕ್ಕ ವಸ್ತುಗಳು. ತಲೆಬಾಗಿಲು ಮತ್ತು ಕದಗಳ ಮೇಲೆ ಚಂದ್ರ, ಸೂರ್ಯ, ನಂದಿ, ಲಿಂಗ, ನಾಮ, ವಿಭೂತಿ ಎಳೆ ಮೊದಲಾದ ಚಿತ್ರಗಳನ್ನು ಕೆತ್ತಿಸಿರುತ್ತಾರೆ. ಗೋಪೂಜೆ, ಗೋಗಂಜು ಹಾಕಿದ ನಂತರ ಸರಳ ರೀತಿ ಗೃಹ ಪ್ರವೇಶ ಕಾರ್ಯ ಮಾಡುತ್ತಾರೆ.

ಮನೆಯ ಹತ್ತಿರವೇ 'ಕುರಿಹಟ್ಟಿ' ಮತ್ತು 'ದನದ ಕೊಟ್ಟಿಗೆ'ಗಳು ಇರುತ್ತವೆ. ಹೊಲಗದ್ದೆಗಳನ್ನು ಅವಲಂಬಿಸಿ ಈ ಬುಡಕಟ್ಟು ಸಮೂಹಗಳು ಮನೆ ಕಟ್ಟಿಕೊಳ್ಳುತ್ತಾರೆ. ಮನೆಯ ಮುಂದೆ ಅಥವಾ ಹಿಂಭಾಗ ಸ್ಥಳಾವಕಾಶಗಳಿರುತ್ತವೆ. ನೆರಕೆ ಅಥವಾ ಮೋಟು ಗೋಡೆ ಕಟ್ಟಿ 'ಬಚ್ಚಲು' ಮಾಡಿಕೊಂಡಿರುತ್ತಾರೆ. ಈ ಹಂಚಿನ ಮನೆಯನ್ನು ಅಡಿಗೆ ಮನೆ, ಪಡಸಾಲೆ, ಹೊರಾಂಡ ಮತ್ತು ಮೇಲಿನ ಅಟ್ಟ ಎಂದು ವರ್ಗೀಕರಿಸುತ್ತಾರೆ. ಮನೆಯ ಹೊರಾಂಡದಲ್ಲಿ ಚಪ್ಪಲಿ ಬಿಡುತ್ತಾರೆ. ದನದ ಕೊಟ್ಟಿಗೆ ಅಥವಾ ಕುರಿಹಟ್ಟಿ ಹತ್ತಿರ ಮುಂಜಾನೆ ಬೆಂಕಿ ಹಾಕಿಕೊಂಡು ಚಳಿ ಕಾಯಿಸುತ್ತಾರೆ. ಮಲಗುವಾಗ ಹೊದಿಕೆಯಾಗಿ ಕರಿ ಕಂಬಳಿಯನ್ನು ಹೆಚ್ಚುಬಳಸುತ್ತಾರೆ.

ಶುಭ ಕಾರ್ಯಗಳಲ್ಲಿ ವಿಭೂತಿ, ಅರಿಷಿಣ, ಕುಂಕುಮ ಹೆಚ್ಚು ಬಳಸುತ್ತಾರೆ. ಹೂವಿಗಿಂತ ಊದಬತ್ತಿ ಮತ್ತು ತೆಂಗಿನಕಾಯಿಗೆ ಬಹಳ ಮಹತ್ವ ಕೊಟ್ಟು ಸರಳ ಪೂಜಾ ವಿಧಾನ ಅನುಸರಿಸುತ್ತಾರೆ. ಬಹು ಹಿಂದೆ ಈ ಬುಡಕಟ್ಟು ಜನಾಂಗ ದೇವರಿಗೆ ಜೇನುತುಪ್ಪ ಮತ್ತು ಕಾಡು ಹಣ್ಣುಗಳಿಂದ ನೈವೇದ್ಯ ಮಾಡುತ್ತಿದ್ದರಂತೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಪ್ರಕೃತಿ ಶಕ್ತಿ ಬಗ್ಗೆ ಅಪಾರ ನಂಬಿಕೆಯಿದ್ದರೂ, ಆಡಂಬರ ಮತ್ತು ಬೂಟಾಟಿಕೆಯ ಪೂಜಾ ಪದ್ಧತಿಗಳು ಎಲ್ಲಿಯೂ ಕಂಡು ಬರುವುದಿಲ್ಲ. ಮೂಲತಃ ದ್ರಾವಿಡ ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ಸರ್ವಚೇತನವಾದಿಗಳು. ಆದರೆ ಇತ್ತೀಚೆಗೆ ಮ್ಯಾಸಬೇಡರಲ್ಲಿ ದೇವರ ವಿಗ್ರಹಗಳನ್ನು ಮನೆಯಲ್ಲಿಟ್ಟು ಪೂಜಿಸುವುದು, ಸತ್ಯನಾರಾಯಣ ಪೂಜೆ ಮತ್ತು ವ್ರತ ಮಾಡುವುದು, ಜನಿವಾರ ಹಾಕುವುದು, ಲಿಂಗ ಮತ್ತು ರುದ್ರಾಕ್ಷಿ ಕಟ್ಟುವುದು, ಲಿಂಗದೀಕ್ಷೆ ಪಡೆಯುವುದು, ಪಾದೋದಕ, ಲಿಂಗಧಾರಣೆ ಮೊದಲಾದ ಆಡಂಬರದ ಪೂಜಾ ಪದ್ಧತಿಗಳು ಮ್ಯಾಸಬೇಡರಲ್ಲಿ ಕಂಡು ಬರುತ್ತವೆ. ಆದರೆ ಕಾಡುಗೊಲ್ಲರಲ್ಲಿ ಇಂತಹ ಯಾವುದೇ ಆರ್ಯ ಸಂಸ್ಕೃತಿ ಪದ್ಧತಿಗಳು ಕಂಡುಬರುವುದಿಲ್ಲ.

೩.೪. ದೇವರ ಮನೆ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳ ಪ್ರಮುಖ ಧಾರ್ಮಿಕ ಕೇಂದ್ರ ಹಾಗೂ ಗುಡಿಕಟ್ಟೆಗಳು ಇರುವ ಪ್ರದೇಶಗಳಲ್ಲಿ ಈ ದೇವರ ಮನೆಗಳನ್ನು ಕಾಣಬಹುದು. ಬುಡಕಟ್ಟು ಜನರು ವಾಸಿಸುವ

ವೃತ್ತಾಕಾರದ ಗುಡಿಸಲಿನಂತೆ ಇರುವ ಈ ಪುಟ್ಟ 'ದೇವರ ಮನೆ'ಯನ್ನು ಹಂಚಿ ಹುಲ್ಲು, ಬಾದೆ ಹುಲ್ಲು ಮತ್ತು ಕಮರದ ನಾರುಗಳಿಂದ ದೇವಸ್ಥಾನದ ಸಮೀಪವೇ ಕಟ್ಟಿರುತ್ತಾರೆ. ಇದು ದೇವರ 'ಗುಬ್ಬ' ದಂತೆ ಕಂಡು ಬರುವ ಪಟ್ಟದ ಪೂಜಾರಿಯ 'ವಾಸದ ಮನೆ' ದೇವರ ಪ್ರತಿನಿಧಿಯಾದ ಪೂಜಾರಿಗೆ ದೇವರಷ್ಟೇ ಮಹತ್ವ ಈ ಜನಾಂಗದಲ್ಲಿ ಕೊಡುವುದರಿಂದ ದೇವರಿಗೆ 'ಗುಬ್ಬ' ಕಟ್ಟಿದರೆ, ದೇವರ ಪ್ರತಿನಿಧಿಗೆ 'ಮನೆ' ಕಟ್ಟಿಕೊಟ್ಟಿದ್ದಾರೆ. ಪೂಜಾರಿಯಾದವನು ದೇವರಿಗೆ ಸಮಾನ. ಆತ ಸಾಮಾನ್ಯ ಜನರೊಂದಿಗೆ ವಾಸಿಸಬಾರದೆಂಬ ಉದ್ದೇಶದಿಂದ ಇಂತಹ ದೇವರ ಮನೆ ಕಟ್ಟುವ ಪದ್ಧತಿ ಈ ಬುಡಕಟ್ಟು ಸಮುದಾಯಗಳಲ್ಲಿ ಬೆಳೆದುಬಂದಿರಬೇಕು. ಪ್ರಾದೇಶಿಕವಾಗಿ ಈ 'ದೇವರಮನೆ'ಗೆ ಪೂಜಾರಿ ಮನೆ, ಪೂಜಾರಿ ಗುಬ್ಬ, ಭವಂತಿ ಮನೆ, ಭಗವಂತನ ಮನೆ ಮತ್ತು ದೇವರಮನೆ ಎಂದು ಕರೆಯುತ್ತಾರೆ. ಪೂಜಾರಿಗಳಿಗೂ ಕೂಡ ಇಂತಹ 'ದೇವರಮನೆ'ಯಲ್ಲಿ ವಾಸಿಸುವುದು ಅವರಿಗೆ ಅಭಿಮಾನದ ಸಂಗತಿಯಾಗಿರುತ್ತದೆ. ದೇವಸ್ಥಾನದ ಪವಿತ್ರತೆಯಂತೆ ದೇವರ ಮನೆಯಲ್ಲಿಯೂ ಉಳಿಸಿ ಕೊಂಡಿರುವುದರಿಂದ, ಅನ್ಯರಿಗೆ ಪ್ರವೇಶ ನಿರ್ಬಂಧಿಸಿರುತ್ತದೆ. ಈ ಮನೆಯಲ್ಲಿ ಪೂಜಾರಿಗೆ ಬೇಕಾಗುವ ಸಾಮಗ್ರಿ ಅಥವಾ ಪರಿಕರಗಳು ಮಾತ್ರ ಇರುತ್ತವೆ.

ಪ್ರಸ್ತುತ ಕಾಡುಗೊಲ್ಲರ 'ಹಟ್ಟಿ' ಗಳಲ್ಲಿ ಮಾತ್ರ ದೇವರ ಮನೆಗಳು ಕಂಡು ಬರುತ್ತವೆ. ಮ್ಯಾಸಬೇಡರ 'ಹಟ್ಟಿ'ಗಳಲ್ಲಿ ಇಂತಹ ದೇವರ ಮನೆಗಳು ಅಸ್ತಿತ್ವವೇ ಇಲ್ಲದಂತಾಗಿದೆ. ಆದರೆ ಬಹುಹಿಂದೆ ಮ್ಯಾಸಬೇಡರ ಪೂಜಾರಿಗಳು ಸಾಮಾನ್ಯ ಜನರೊಂದಿಗೆ ಬೆರೆಯುವಂತಿರಲಿಲ್ಲ. ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂದು ಹೇಳುವ ಈ ಜನಾಂಗ,ಇದಕ್ಕೆ ಪೂರಕವೆಂಬಂತೆ ಈ ಹೊತ್ತಿಗೂ ಮ್ಯಾಸಬೇಡರು ಮದುವೆ, ಮಂಗಳ ಕಾರ್ಯ ಮಾಡುವಾಗ ಸಾಂಕೇತಿಕವಾಗಿ 'ದೇವರಮನೆ'ಗೆ ಹೋಗಿ ಬರುತ್ತೇವೆ ಎಂದು ಹೇಳಿ ಮನೆದೇವರ ದೇವಸ್ಥಾನಕ್ಕೆ ಹೋಗಿ ಬರುವ ಪದ್ಧತಿಯುಂಟು. ಆದ್ದರಿಂದ ಬಹುಹಿಂದೆ ಮ್ಯಾಸಬೇಡರಲ್ಲಿಯೂ ಕೂಡ 'ದೇವರ ಮನೆ'ಗಳು ಇದ್ದಿರಲೇಬೇಕು. ಪ್ರಸ್ತುತ ದೇವಸ್ಥಾನ ಪಕ್ಕ ವಾಸಿಸುವ ಪೂಜಾರಿಗಳ ವಾಸದ ಮನೆಯೇ ಮೂಲತಃ 'ದೇವರ ಮನೆ'ಯಾಗಿರಬೇಕು. 'ಗುಬ್ಬ'ಗಳು ಕಣ್ಮರೆಯಾಗಿ ಗುಡಿಗಳು ನಿರ್ಮಾಣವಾದಂತೆ ಕಾಲಕ್ರಮೇಣ 'ದೇವರ ಮನೆ'ಗಳು ನಾಶವಾಗಿರುವುದರಿಂದ ಈಗಿರುವ ದೇವಸ್ಥಾನಗಳನ್ನೇ ದೇವರ ಮನೆ ಎಂದು ಭಾವಿಸಿಕೊಂಡಿದ್ದಾರೆ.

ದೇವಸ್ಥಾನದ ಪವಿತ್ರತೆಯಂತೆ, ದೇವರ ಮನೆಗಳಿಗೂ ಈ ಬುಡಕಟ್ಟು ಸಮುದಾಯಗಳು ಕೊಟ್ಟಿರುವುದರಿಂದ ಈ ಹೊತ್ತಿಗೂ ಪೂಜಾರಿಗಳ ಬಗ್ಗೆ ಮತ್ತು ಅವರು ವಾಸಿಸುವ ದೇವರ ಮನೆಗಳ ಬಗ್ಗೆ ಬಹಳ ಭಕ್ತಿ ಮತ್ತು ಗೌರವಗಳನ್ನು ಇಟ್ಟು ಕೊಂಡಿದ್ದಾರೆ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡಗೊಲ್ಲರ ಹಟ್ಟಿಯ ಹಾಲುಕುಡಿದ ಸ್ವಾಮಿಯ ಪಟ್ಟದ ಪೂಜಾರಿ ನಿಂಗಣ್ಣನವರು ಇಂತಹ ದೇವರ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಾರೆ. ಅದೇ ರೀತಿ ಕಾಡುಗೊಲ್ಲರ ಪೂಜಾರಿಗಳಾದ ನಂದಿಹಳ್ಳಿ ರಂಗನಾಥ ಸ್ವಾಮಿ ಪೂಜಾರಿ, ಚಿತ್ರಹಳ್ಳಿ ಚಿತ್ರಲಿಂಗೇಶ್ವರ ಪೂಜಾರಿ, ಅವಳಿ ಹಟ್ಟಿ ಈರಾವಳೇಶ್ವರ ಪೂಜಾರಿ, ಸಾಣೀಕೆರೆ ಚಿತ್ರದೇವರ ಪೂಜಾರಿ ಹಾಗೂ ಮ್ಯಾಸಬೇಡರ ಪೂಜಾರಿಗಳಾದ ಚಿಕ್ಕುಂತಿ ಕಂಪಳರಂಗಸ್ವಾಮಿ ಪೂಜಾರಿ, ಹಿರೇಹಳ್ಳಿ ದಡ್ಡಿಸೂರನಾಯಕ ಪೂಜಾರಿ, ಮಾಕನಡುಕು ಓಬಳದೇವರ ಪೂಜಾರಿ, ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ ಪೂಜಾರಿ, ದೇವರಗಂಜಿಗಟ್ಟೆ ಕಂಪಳನರಸಿಂಹಸ್ವಾಮಿ ಪೂಜಾರಿ ಮೊದಲಾದ ದೇವರ ಪೂಜಾರಿಗಳ ಮೂಲ ಸಂತತಿಯವರು ಇಂತಹ 'ದೇವರಮನೆ'ಗಳಲ್ಲಿ ವಾಸಿಸಿರಬೇಕು ಎಂಬುದಕ್ಕೆ ಸಾಕಷ್ಟು ಆಧಾರಗಳಿವೆ.

[illegible]

ಕೆಲವೊಂದು ಪ್ರದೇಶಗಳಲ್ಲಿ 'ದೇವಸ್ಥಾನ' ಮತ್ತು 'ಗುಡಿಕಟ್ಟೆ'ಗಳನ್ನು 'ದೇವರ ಮನೆ' ಎಂದು ಕರೆಯುವುದುಂಟು. ಆದರೆ ದೇವಸ್ಥಾನ, ದೇವರ ಮನೆ ಮತ್ತು ಗುಡಿಕಟ್ಟೆಗಳ ಸ್ಥಾನಮಾನಗಳೇ ಬೇರೆ ಬೇರೆಯಾಗಿರುತ್ತವೆ. ದೇವರು ಇಟ್ಟಿರುವ 'ಗುಬ್ಬ'ಕ್ಕೆ ದೇವಸ್ಥಾನವೆಂತಲೂ, ದೇವರ ಪೂಜಾರಿ ಪ್ರತ್ಯೇಕವಾಗಿ ವಾಸಿಸುವ 'ಗುಡಿಸಲಿಗೆ' ದೇವರ ಮನೆ ಅಥವಾ ಭವಂತಿ ಮನೆ ಎಂತಲೂ, ಒಂದು ದೇವರಿಗೆ ಸಂಬಂಧಿಸಿದ ಅಣ್ಣ ತಮ್ಮಗಳ ನ್ಯಾಯ ನಿರ್ಣಯ ಮಾಡುವ ದೈವಸ್ಥಾನಕ್ಕೆ 'ಗುಡಿಕಟ್ಟೆ' ಎಂತಲೂ ಕರೆಯುತ್ತಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಪೂಜಾರಿಗಾಗಿ ಕಟ್ಟುವ 'ದೇವರಮನೆ' ಅತ್ಯಂತ ಚಿಕ್ಕದಾಗಿರುತ್ತದೆ. ಪೂರ್ವ ಅಥವಾ ಉತ್ತರಕ್ಕೆ ಒಂದು ಪುಟ್ಟ ಬಾಗಿಲಿಟ್ಟಿರುತ್ತಾರೆ. ಸಾಮಾನ್ಯವಾಗಿ ಈ ಬಾಗಿಲು ಎರಡು ಇಲ್ಲವೆ ಮೂರು ಅಡಿ ಎತ್ತರವಿರುತ್ತದೆ. ಸ್ಥಳೀಯವಾಗಿ ಸಿಗುವಂಥ ಹಂಚಿಹುಲ್ಲು, ಬಾದೆ ಹುಲ್ಲು, ಬಿದಿರುಗಳ, ನಾರು ಮೊದಲಾದ ಸಾಮಗ್ರಿಗಳಿಂದ ಗುಡಿಸಲು ಕಟ್ಟುತ್ತಾರೆ. ಈ ದೇವರ ಮನೆಗೆ ಪೂಜಾರಿ ವಿನಃ ಬೇರೆ ಯಾರಿಗೂ ಪ್ರವೇಶ ಇರುವುದಿಲ್ಲ. ಕೆಲವೊಂದು ಸಂದರ್ಭದಲ್ಲಿ ಪೂಜಾರಿಯ ಹೆತ್ತತಾಯಿ ಮಾತ್ರ ಒಳಗೆ ಹೋಗಿ ಸಗಣಿಯಿಂದ ನೆಲ ಸಾರಿಸಿ, ರಂಗೋಲಿ ಹಾಕಿಬರುತ್ತಾಳಂತೆ. ಪ್ರಸ್ತುತ ಇಂತಹ 'ದೇವರಮನೆ'ಗಳ ನಿರ್ಮಾಣಕ್ಕೆ ಕನಿಷ್ಟ ಎರಡು ಸಾವಿರದಿಂದ ಮೂರ ಸಾವಿರದವರೆಗೂ ಖರ್ಚು ಬರುತ್ತದೆ.

೪. ವೃತ್ತಿಗಳು

ಪಶುಪಾಲನೆಯ ಮೂಲದ ಭಾರತದ ಅತ್ಯಂತ ಆದಿಮ ಬುಡಕಟ್ಟುಗಳಲ್ಲಿ ಬೇಡ ಮತ್ತು ಗೊಲ್ಲ ಸಮುದಾಯಗಳು ತನ್ನದೇ ಆದ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬರುತ್ತಿವೆ. ಬೇಡರಲ್ಲಿಯ ಮ್ಯಾಸಬೇಡರು ಮೂಲತಃ ಬೇಟೆಗಾರರಾಗಿದ್ದು ಕಾಲಾಂತರದಲ್ಲಿ ಮೇಷಪಾಲನೆಗೆ ಒಗ್ಗಿಕೊಂಡು (ಮೇಷ) ಮ್ಯಾಸ ನಾಯಕರಾದರು. ಆದರೆ ಗೊಲ್ಲರಲ್ಲಿಯ ಕಾಡಾಡಿಗಳು ಕೂಡ ಮೂಲತಃ ಬೇಟೆಗಾರರಾಗಿದ್ದು, ಕಾಲಾಂತರದಲ್ಲಿ ಪಶುಗಳ ಪಾಲಕರಗಿರುವುದರಿಂದ, ಅದರಲ್ಲೂ ಮುಖ್ಯವಾಗಿ ಗೋವುಗಳ ಪಾಲಕರಾಗಿರುವುದರಿಂದ ಗೊಲ್ಲರೆನಿಸಿಕೊಂಡರು. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬೇಟೆ, ಪಶುಪಾಲನೆ ಮತ್ತು ವ್ಯವಸಾಯ ಮಾಡುತ್ತಿರುವ ಹೆಗ್ಗುರುತುಗಳು ಅಲ್ಲಲ್ಲಿ ಕಂಡು ಬರುತ್ತವೆ. ಬೇಡರು ಬೇಟೆಗೆ ಮಹತ್ವ ಕೊಟ್ಟರೆ, ಗೊಲ್ಲರು ಪಶುಪಾಲನೆಗೆ ಮಹತ್ವ ಕೊಡುತ್ತಾರೆ. ಬಡತನ ರೇಖೆಗಿಂತ ಕೆಳಗೆ ಜೀವಿಸುವ ಈ ಬುಡಕಟ್ಟು ಜನಾಂಗ ಬೇಟೆ, ಪಶುಪಾಲನೆ, ವ್ಯವಸಾಯ ಮತ್ತು ಜನಪದ ವೈದ್ಯ ವೃತ್ತಿಗಳನ್ನು ಹಂತ ಹಂತವಾಗಿ ಮುಂದುವರೆಸಿಕೊಂಡು ಬಂದಿದ್ದಾರೆ.

ಮೂಲತಃ ದ್ರಾವಿಡ ಜನಾಂಗದ ಗುಣಲಕ್ಷಣಗಳನ್ನು ಹೊಂದಿದ ಈ ಎರಡೂ ಬುಡಕಟ್ಟು ಜನರು ದೃಢ ಕಾಯರಾಗಿ, ದೀರ್ಘದೇಹಿಗಳಾಗಿ, ಆಜಾನುಬಾಹುಗಳಾಗಿ, ಕೃಷ್ಣ ವರ್ಣದವರಾಗಿದ್ದು, ಬರಿಮೈಯಿಂದ ಲಂಗೋಟಿ ಚಲ್ಲಣ ತೊಟ್ಟು, ಬರಿಗಾಲುಗಳಿಂದಲೇ ಕಾಡು-ಮೇಡುಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ, ನದಿ ದಂಡೆಗಳಲ್ಲಿ, ಸಂಚರಿಸುತ್ತ, ಬೇಟೆಯಾಡುತ್ತ, ಮಾಂಸವನ್ನು ಆಹಾರಕ್ಕೂ, ಚರ್ಮವನ್ನು ಉಡುಪಿಗೂ ಉಪಯೋಗಿಸುತ್ತಿದ್ದರು. ಆದ್ದರಿಂದ ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಈ ಸಮುದಾಯಗಳು ತಮ್ಮ ಆಹಾರಕ್ಕಾಗಿ,

ದನಕರುಗಳ ಹುಲ್ಲು, ನೀರಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಇವರಿಗೆ ಅನಿವಾರ್ಯವಾಗಿತ್ತು. ಕಾಡು-ಮೇಡುಗಳಲ್ಲಿ ಅಲೆಯುವ ಈ ಬುಡಕಟ್ಟು ಸಮೂಹಗಳು ತಮ್ಮ ರಕ್ಷಣೆಗಾಗಿ ಅನೇಕ ಆಯುಧಗಳು, ಬಲೆಗಳು ಮತ್ತು ಸಾಕು ನಾಯಿಗಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಹೀಗೆ ಬೇಟೆ ಮತ್ತು ಪಶುಪಾಲನೆಯಿಂದ ಆರಂಭವಾದ ಇವರ ವೃತ್ತಿಗಳು ವ್ಯವಸಾಯ, ನಾಟಿ ವೈದ್ಯಪದ್ಧತಿ, ಕೂಲಿ, ವ್ಯಾಪಾರ ಮೊದಲಾದ ವೃತ್ತಿಗಳಲ್ಲಿ ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತೊಡಗಿದ್ದಾರೆ. ಆದರೂ ಇವರಲ್ಲಿ ಪ್ರಮುಖವಾಗಿ ಬೇಟೆ, ಪಶುಪಾಲನೆ, ವ್ಯವಸಾಯ, ಮತ್ತು ನಾಟಿ ವೈದ್ಯ ವೃತ್ತಿಗಳು ಬಹಳ ಮಹತ್ವ ಪಡೆದುಕೊಂಡಿವೆ.

೪.೧. ಬೇಟೆ

ಶಿಲಾಯುಗದ ಮಾನವ ಅಪ್ಪಟ ಬೇಟೆಗಾರನಾಗಿದ್ದ. ಬೇಟೆಯಾಡಿಯೇ ಅವನು ಹೊಟ್ಟೆ ತುಂಬಿಸಿಕೊಳ್ಳಬೇಕಾಗಿತ್ತು. ಬೇಟೆ ಮತ್ತು ಅಲೆಮಾರಿತನ ಎರಡೂ ಜೊತೆಯಾಗಿರುತ್ತಿದ್ದವು. ಆದ್ದರಿಂದ ಬೇಟೆಗಾರರ ಬದುಕು ಬಲು ಕಷ್ಟದಾಯಕವಾಗಿತ್ತು. ಬೇಸಾಯ ಮತ್ತು ಪಶುಪಾಲನೆಗಿಂತ ಬೇಟೆಯ ವೃತ್ತಿ ಬೇಡ ಮತ್ತು ಗೊಲ್ಲರಿಗೆ ಬಹಳ ಶ್ರಮದಾಯಕವಾದ ಬದುಕಾಗಿತ್ತು. ಈ ಬೇಡ ಎಂಬ ಪದವು 'ವ್ಯಾಧ' ಎಂಬ ಸಂಸ್ಕೃತ ಪದದ ಸಮಾನಾರ್ಥವಾಗಿದೆ. ಬೇಡ ಅಥವಾ ವ್ಯಾಧ ಎಂದರೆ ಬೇಟೆಗಾರ ಎಂದು ಅರ್ಥ ಬರುತ್ತದೆ. ಮೂಲತಃ ಬೇಟಗಾರರಾಗಿದ್ದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹೊಟ್ಟೆಪಾಡಿಗಾಗಿ ಅನೇಕ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಮಾಂಸವನ್ನು ತಿನ್ನುತ್ತಿದ್ದರಂತೆ. ಈ ಬೇಟೆ ವೃತ್ತಿಗೆ ಸಂಬಂಧಿಸಿದ ಆಯುಧಗಳು ಮತ್ತು ಬಲೆಗಳನ್ನು ಇಂದಿಗೂ ಬೇಡರ ಮತ್ತು ಗೊಲ್ಲರ ಮನೆಗಳಲ್ಲಿ ಕಾಣಬಹುದು.

ಪ್ರಾಚೀನ ಕಾಲದಲ್ಲಿ ಬೇಟೆ ಮತ್ತು ಬಿಲ್ಲು ವಿದ್ಯೆಯಲ್ಲಿ ಪ್ರಖ್ಯಾತಿ ಹೊಂದಿದ್ದ ಬೇಡರ ಕಣ್ಣಪ್ಪ, ವಾಲ್ಮೀಕಿ, ಧರ್ಮವ್ಯಾಧ, ಏಕಲವ್ಯ, ಮೂಗನಾಯಕ ಮೊದಲಾದ ಧಾರ್ಮಿಕ ಪುರಷರ ವೃತ್ತಿ ಬೇಟೆ ಎಂಬುದು ಇತಿಹಾಸ ಮತ್ತು ಪುರಾಣಗಳು ಹೇಳುತ್ತವೆ. ಬಹು ಹಿಂದೆ ಮ್ಯಾಸಬೇಡರು ಬೇಟೆಯಾಡುವಾಗ ಬಿಲ್ಲು-ಬಾಣಗಳನ್ನು ಬಳಸುತ್ತಿದ್ದರು. ಈ ಬಾಣಗಳಿಗೆ ವಿಷಯುಕ್ತ ಮದ್ದುಗಳನ್ನು ಹಚ್ಚಿ ಬಾಣ ಪ್ರಯೋಗ ಮಾಡಿ ಪ್ರಾಣಿಗಳನ್ನು ಕೊಲ್ಲುತ್ತಿದ್ದರಂತೆ. ತಮ್ಮ ಸಾಕು ನಾಯಿಗಳಿಗೆ ಬೇಟೆಯಾಡಲು ತರಬೇತಿ ಕೊಟ್ಟು ಬೇಟೆಯಾಡುವಾಗ ಅವುಗಳನ್ನು ಬಳಸಿಕೊಳ್ಳುತ್ತಿದ್ದರಂತೆ. ಮೊಲ, ಜಿಂಕೆ, ಉಡ, ಕವುಜ, ಮೀನು, ಬೆಳ್ಳಿ ಇಲಿ ಮೊದಲಾದ ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಾಡಿದರೆ, ಹುಲಿ, ಚಿರತೆ, ಕಾಡುಹಂದಿ, ಆನೆ, ಮುಂತಾದ ಕಾಡು ಮೃಗಗಳನ್ನು ಹವ್ಯಾಸಕ್ಕಾಗಿ ಅಥವಾ ಶೌರ್ಯ ಪ್ರದರ್ಶನಕ್ಕಾಗಿ ಬೇಟೆಯಾಡುತ್ತಿದ್ದರು. ಪ್ರಸ್ತುತ ಬೇಡರು ಮತ್ತು ಕೆಲವೊಂದು ಪ್ರದೇಶದ ಗೊಲ್ಲರು ಯುಗಾದಿ ಹಬ್ಬದ ಎರಡನೆಯ ದಿನ ಸಾಂಕೇತಿಕವಾಗಿ ಬೇಟೆಗೆ ಹೋಗಿ ಕಾಡು ಪ್ರಾಣಿಗಳನ್ನು ಹಿಡಿದು ತಂದು ಊರಲ್ಲಿ ಮೆರವಣಿಗೆ ಮಾಡಿ, ಮುತ್ತೈದೆಯರಿಂದ ಆರತಿ ಎತ್ತಿಸಿಕೊಳ್ಳುವ ಸಂಪ್ರದಾಯಗಳು, ಈ ಬುಡಕಟ್ಟು ಜನಾಂಗದ ಪ್ರಾಚೀನ ಕಾಲದ ಬೇಟೆ ವೃತ್ತಿಯ ಪರಂಪರೆಯನ್ನು ತೋರಿಸುತ್ತದೆ. ಆದರೆ ಈ ಬೇಟೆ ಸಾಮೂಹಿಕ ವೃತ್ತಿಯಾಗಿತ್ತೇ ವಿನಃ ವೈಯಕ್ತಿಕ ವೃತ್ತಿಯಾಗಿರಲಿಲ್ಲ. ಬೇಟೆಯಲ್ಲಿ ಸಿಕ್ಕ ಪ್ರಾಣಿ, ಪಕ್ಷಿಗಳನ್ನು ಸಾಮೂಹಿಕವಾಗಿ "ಪಾಲು" ಹಾಕಿಕೊಳ್ಳುತ್ತಿದ್ದರು.

ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಬೇಟೆಯಾಡುವಾಗ ಬಿಲ್ಲು ಬಾಣಗಳ ಜೊತೆಗೆ ಭರ್ಚಿ, ಕತ್ತಿ, ಕೊಡಲಿ, ಗಂಡುಗೊಡಲಿ, ಚಿಪ್ಪುಕೊಡಲಿ, ಕುಡಗೋಲು, ಈಟಿ, ಮಚ್ಚು, ಕವಣೆ, ಕೋವಿ ಬಲೆ, ಕೊಡಮೆ, ಗಾಳ, ಉರುಲು, ಬುಟ್ಟಿ, ಸೋಪ, ಪಾತಿ, ಮುಸುರೆ ಮೊದಲಾದವುಗಳನ್ನು ಬಳಸಿ, ಮೊಲ, ಜಿಂಕೆ, ಉಡ, ಕವುಜ, ಮೀನು, ಏಡಿ ಮೊದಲಾದ ಪ್ರಾಣಿ, ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಬೇಡ ಮತ್ತು ಗೊಲ್ಲರ ಈ ಬೇಟೆ ವೃತ್ತಿಗೆ ಪ್ರೋತ್ಸಾಹಿಸುವ ಅನೇಕ ಬೆಟ್ಟ, ಗುಡ್ಡಗಳು, ಹುಲ್ಲುಗಾವಲುಗಳು, ನದಿ, ಸರೋವರಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಕಾವಲು, ಮಿಂಚೇರಿ-ಗಾದ್ರಿಗುಡ್ಡ ಕಾವಲು; ಹಿರಿಯೂರು ತಾಲ್ಲೂಕು ಹೊಸಯಳನಾಡು ಭೀಮನಬಂಡೆ ಮತ್ತು ವೇದಾವತಿ ನದಿ ದಂಡೆಗಳು; ಚಳ್ಳಕೆರೆ ತಾಲ್ಲೂಕು ಕುದಾಪುರ ಕಾವಲು, ಚೌಳೂರು ಕಾವಲು, ಗೌರಸಮುದ್ರದ ಕಾವಲು, ಜಾಜೂರು ಕಾವಲು ಮತ್ತು ಸಾಣೀಕೆರೆ ಕಾವಲು; ಮೊಳಕಾಲ್ಮೂರು ತಾಲ್ಲೂಕು ಬಿ.ಜಿ.ಕೆರೆ ಕಾವಲು, ಚಿಕ್ಕುಂತಿ ಕಾವಾಲು ಮತ್ತು ಮುತ್ತಿಗಾರಹಳ್ಳಿ ಕಾವಲು; ಚಿತ್ರದುರ್ಗ ತಾಲ್ಲೂಕು ಬೆಟ್ಟ ಸಾಲುಗಳು ಮತ್ತು ಜೋಗಿ ಮಟ್ಟಿ ಪ್ರದೇಶಗಳು; ಹೊಸದುರ್ಗ ತಾಲ್ಲೂಕು ದೇವಪುರದ ಸುತ್ತ ಮುತ್ತ ಪ್ರದೇಶಗಳು ಬೇಟೆಗಾರರಿಗೆ ಬೇಟೆಯಾಡಲು ಸೂಕ್ತವಾದ ಸ್ಥಳಗಳಾಗಿದ್ದವು.

ಈ ಬೇಟೆ ವೃತ್ತಿಯಲ್ಲಿ ಕಾಡುಗೊಲ್ಲರಿಗಿಂತ ಮ್ಯಾಸಬೇಡರು ವಿಶೇಷ ಆಸಕ್ತಿ ತೋರಿಸುತ್ತಾರೆ. ಆದರೆ ಕೆಲವೊಂದು ಪ್ರದೇಶಗಳಲ್ಲಿ ಮಾತ್ರ ಕಾಡುಗೊಲ್ಲರು ಮೊಲ, ಜಿಂಕೆ, ಮೀನು, ಕವುಜ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಮಾಂಸ ತಿನ್ನುತ್ತಾರೆ. ಆದರೆ ಹಂದಿ ಮತ್ತು ಕೋಳಿ ಮಾಂಸವನ್ನು ಈ ಎರಡು ಬುಡಕಟ್ಟು ಜನರು ತಿನ್ನುವುದಿಲ್ಲ. ಹಬ್ಬ ಹರಿದಿನ, ಜಾತ್ರೆ, ದಿನಕರ್ಮ ಇತ್ಯಾದಿ ಸಂದರ್ಭಗಳಲ್ಲಿ ಕುರಿ ಮೇಕೆಗಳನ್ನು ಕೊಯ್ದು ತಿನ್ನುತ್ತಾರೆ.

೪.೨. ಪಶುಪಾಲನೆ

ಬೇಟೆಗಾರಿಕೆಯಿಂದ ಪಶುಪಾಲನೆ ಹುಟ್ಟಿಕೊಂಡಿತು. ಪಶುಗಳೇ ಬುಡಕಟ್ಟು ಜನರ ಆರ್ಥಿಕ ಸಂಪತ್ತು. ಈ ಪಶುಗಳನ್ನು 'ರಾಸು' ಎಂದು ಕರೆಯುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮುಖ್ಯ ವೃತ್ತಿಗಳಲ್ಲಿ ಪಶುಪಾಲನೆಯು ಒಂದಾಗಿತ್ತು. ಕಾಡುಗೊಲ್ಲರು ಸಾಂಪ್ರದಾಯಿಕವಾಗಿ ಪಶುಪಾಲಕರು, ಹೈನುಗಾರಿಕೆಯಲ್ಲಿ ಶ್ರದ್ಧೆಯುಳ್ಳವರು. ಆದರೆ ಇಂದು ಕುರಿ ಸಾಕಾಣಿಕೆ ಕಾಡುಗೊಲ್ಲರ ಪ್ರಧಾನ ವೃತ್ತಿಯಾಗಿದೆ. ಮ್ಯಾಸಬೇಡರು ಪಶುಪಾಲನೆ ವೃತ್ತಿಯ ಜೊತೆಗೆ ಬೇಟೆ, ಸೈನಿಕ ವೃತ್ತಿಯನ್ನು ಕೈಗೊಂಡಿದ್ದರು. ಕಾಡುಗೊಲ್ಲರು ಮಾತ್ರ ಕುರಿ, ಹಸು, ದನ-ಕರುಗಳ ಮಂದೆಯ ಹಿಂದೆ ಬದುಕಿ ಬಾಳಿದವರು. ಒಂದು ನೂರರಿಂದ ಹಿಡಿದು ಐದು ಸಾವಿರದವರೆಗೆ ಕುರಿ-ಮೇಕೆಗಳನ್ನು ಹೊಂದಿದ, ಹತ್ತರಿಂದ ನೂರರವರೆಗೆ ದನಕರುಗಳನ್ನು ಹೊಂದಿದ ಸ್ಥಿತಿವಂತ ಕಾಡುಗೊಲ್ಲ ಮತ್ತು ಮ್ಯಾಸಬೇಡರು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುತ್ತಾರೆ. ದನಕರು, ಕುರಿಮೇಕೆ ಮಂದೆಗಳ ಜೊತೆಗೆ ಕತ್ತೆ, ಕುದುರೆ ಮತ್ತು ನಾಯಿಗಳನ್ನು ಸಹಾಯಕ ಪ್ರಾಣಿಗಳಾಗಿ ಸಾಕುತ್ತಾರೆ. ಪ್ರಸ್ತುತ ಪಶುಪಾಲನೆ ವೃತ್ತಿಯಲ್ಲಿ ಈ ಎರಡು ಜನಾಂಗದವರು ಸಮಾನಾಂತರ ಸ್ಥಾನಗಳನ್ನು ಉಳಿಸಿಕೊಂಡಿದ್ದಾರೆ.

ಮ್ಯಾಸಬೇಡರ ಸಾಂಸ್ಕೃತಿಕ ವೀರರಾದ ಜಗಲೂರು ಪಾಪನಾಯಕ ನನ್ನಿವಾಳ ಗುಡ್ಡದಲ್ಲಿ ಗಾದರಿ ಪಾಲನಾಯಕ ಮಿಂಚೇರಿ ಗುಡ್ಡದಲ್ಲಿ, ದನಗಾಹಿಗಳಾಗಿದ್ದರು. ಅದೇ ರೀತಿ ಕಾಡುಗೊಲ್ಲರ ಎತ್ತಪ್ಪ ಮತ್ತು ಜುಂಜಪ್ಪ ಗೋಪಾಲಕರಾಗಿದ್ದರು ಎಂಬುದು ಜನಪದ ಸಾಹಿತ್ಯದಲ್ಲಿ ಕಂಡುಬರುತ್ತದೆ. ಎಂ.ಜಿ.ಈಶ್ವರಪ್ಪನವರು "ಮ್ಯಾಸಬೇಡರು" ಎಂಬ (೧೯೮೨ ಪು:೬,೭) ಪುಸ್ತಕದಲ್ಲಿ "ಕೆಲವು ಐತಿಹ್ಯಗಳ ಪ್ರಕಾರ ಇವರು ಪಶುಪಾಲನೆ ಮಾಡುತ್ತಿದ್ದರೆಂದೂ ಇವರು ಶ್ರೀಶೈಲದ ಕಡೆಯಿಂದ ಪಶುಗಳನ್ನು ಮೇಯಿಸುಕೊಳ್ಳುತ್ತ ಕರ್ನಾಟಕದ ಕಡೆಗೆ ಬಂದರೆಂದೂ ತಿಳಿಯುತ್ತದೆ. ಹಿಂದೆ ಒಬ್ಬ ಮುಂದೆ ಒಬ್ಬ ಇದ್ದರು. ಹಿಂದಿನವನು ಆಕಳ ಕರುವಿನ ಕಾಲು ಮುರಿದು ತಿನ್ನಲು ಶುರುಮಾಡಿದನಂತೆ, ಅದಕ್ಕೆ ಮುಂದಿದ್ದವನು 'ನೀನು ಗೋಮಾಂಸ ತಿಂದೆ ನೀನು ಬ್ಯಾಡ' ಅಂತ ಅವನನ್ನು ಬಿಟ್ಟು ಮುಂದೆ ಬಂದನಂತೆ. ಮುಂದೆ ಬಂದವನು ಕಾಡುಗೊಲ್ಲ ಆದ, ಹಿಂದೆ ಉಳಿದವನು 'ಮ್ಯಾಸಬ್ಯಾಡ' ಆದನಂತೆ." ಎಂದು ಹೇಳಿದ ಕಥೆ ಸೂಕ್ತವಾಗಿದೆ. ಏಕೆಂದರೆ, ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಲವು ವಕ್ತೃಗಳು ಈ ಕಥೆಯನ್ನೇ ಹೇಳಿದ್ದಾರೆ. ಪಶುಪಾಲಕರಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದನಕರು, ಕುರಿ-ಮೇಕೆಗಳಿಗೆ ಕೊಟ್ಟಷ್ಟೇ ಮಹತ್ವವನ್ನು 'ಕುರಿಹಟ್ಟಿ' ಮತ್ತು "ದನದಕೊಟ್ಟಿಗೆ"ಗೂ ಕೊಡುತ್ತಾರೆ. ಯಾವುದೇ ಧಾರ್ಮಿಕ ಕಾರ್ಯಗಳನ್ನು ಮಾಡುವಾಗ 'ಕುರಿಹಟ್ಟಿ'ಯಲ್ಲಿ ಮಾಡುತ್ತಾರೆ. ಮದುವೆಯಲ್ಲಿ ತಲೆಗೆ ಹಾಲು ಒತ್ತುವುದು, ಮಕ್ಕಳ ಹುಟ್ಟು ಕೂದಲು ತೆಗೆಸುವುದು, ದಾಟು ತೆಗೆಯುವುದು ಮೊದಲಾದ ಶುಭ ಕಾರ್ಯಗಳನ್ನು ಈ ಎರಡು ಬುಡಕಟ್ಟು ಜನಾಂಗ 'ಕುರಿಹಟ್ಟಿ'ಯಲ್ಲಿ ಮಾಡುತ್ತಾರೆ ಸಾಂಪ್ರದಾಯಿಕ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಮಾಂಸಾಹಾರಿ ಗಳಾಗಿದ್ದರೂ ಸಹ ತಾವು ಸಾಕಿ ಸಲುಹಿದ ಕುರಿ ಮೇಕೆಗಳ ಮಾಂಸ ತಿನ್ನುವುದಿಲ್ಲ. ಕೋಳಿ ಮತ್ತು ಹಂದಿ ಈ ಜನಾಂಗಕ್ಕೆ ನಿಷಿದ್ಧ.

ಮ್ಯಾಸಬೇಡರಿಗಿಂತ, ಕಾಡುಗೊಲ್ಲರ ಪ್ರಧಾನ ವೃತ್ತಿ ಕುರಿ ಸಾಕಾಣಿಕೆಯಾಗಿದೆ. ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹಾಲ್ಲು ತುಪ್ಪ ಮತ್ತು ಮೊಸರು ಮಾರಾಟ ಮಾಡಿ ಹಣ ಗಳಿಸುವ ಪ್ರವೃತ್ತಿಗೆ ತೊಡಗಿದ್ದಾರೆ. ಚಳ್ಳಕೆರೆ ತಾಲ್ಲೂಕು ನನ್ನಿವಾಳ ಗ್ರಾಮದ ಸುತ್ತ-ಮುತ್ತ ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕಾಯಿಸಿ ತಯಾರಿಸಿದ "ತುಪ್ಪ" ಚಳ್ಳಕೆರೆ ಮಾರುಕಟ್ಟೆಯಲ್ಲಿ ಬಹಳ ಪ್ರಸಿದ್ಧಿ ಪಡೆದಿತ್ತಂತೆ. ಗಾದರಿ ಪಾಲನಾಯಕನ ಹೆಂಡತಿಯರಾದ ಕಂಚವ್ವ ಮತ್ತು ಕಾಮವ್ವರು ಹೊಳಲ್ಕೆರೆ ತಾಲ್ಲೂಕು ಗಂಜಿಗಟ್ಟೆ, ಮುತ್ತಗದೂರು, ಕಾಗಲಗೆರೆ ಮೊದಲಾದ ಹಳ್ಳಿಗಳಲ್ಲಿ ಹಾಲು ಮೊಸರು ಮಾರುತ್ತಿದ್ದರು ಎಂದು ಗಾದರಿಪಾಲನಾಯಕನ ಕಥೆಯಲ್ಲಿ ಬರುತ್ತದೆ.

೪.೩. ವ್ಯವಸಾಯ

ಮನುಕುಲದ ಪ್ರಮುಖವಾದ ಕಸುಬು ವ್ಯವಸಾಯ. ಧಾನ್ಯ ಸಂಗ್ರಹಣೆಯಿಂದ ವ್ಯವಸಾಯ ವೃತ್ತಿ ಆರಂಭವಾಗಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬಹು ಹಿಂದಿನಿಂದಲೂ ಬೇಟೆ, ಪಶುಪಾಲನೆ ಹಂತಗಳನ್ನು ದಾಟಿ ಕೃಷಿಕರಾಗಿದ್ದಾರೆ. ಬೇಟೆಯಾಡುತ್ತ ಪ್ರಾಣಿಗಳ ಹುಡುಕಾಟದಲ್ಲಿ ತೊಡಗಿದ್ದ ಈ ಜನಾಂಗ ವ್ಯವಸಾಯದಿಂದಾಗಿ ಒಂದೆಡೆ ನಿಲ್ಲಲು ಸಾಧ್ಯವಾಯಿತು. ಜೊತೆಗೆ ತಮ್ಮದೇ ಆದ ಸಂಸ್ಕೃತಿ ಮತ್ತು ನಾಗರಿಕತೆಯನ್ನು ರೂಪಿಸಿಕೊಳ್ಳಲು ಅವಕಾಶವಾಯಿತು. ಆದ್ದರಿಂದ ಕೃಷಿಯು ಆರ್ಥಿಕ ಸ್ಥಿರತೆಯ ಮೂಲ ಸ್ತಂಭವಾಯಿತು.

ಭಾರತದ ದೇಶವಂತೂ ಹಳ್ಳಿಗಳ ನಾಡು. ವ್ಯವಸಾಯವನ್ನೇ ಪ್ರಧಾನ ವೃತ್ತಿಯುಳ್ಳ ದೇಶವಾಗಿರುವುದರಿಂದ, ಈ ದೇಶದ ಪ್ರಗತಿಗೆ ವ್ಯವಸಾಯಗಾರನೇ ಬೆನ್ನೆಲುಬಾಗಿದ್ದಾನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೃಷಿ ಕ್ಷೇತ್ರದಲ್ಲಿ ಸಮಾನಾಂತರವಾಗಿ ಮುಂದುವರೆಯುತ್ತಿದ್ದಾರೆ. ಆದರೆ ಕೆಲವು ಪ್ರದೇಶಗಳಲ್ಲಿ ಭೂರಹಿತ ಕಾರ್ಮಿಕರಾಗಿ, ಶ್ರೀಮಂತರ ಹಾಗೂ ಭೂಮಾಲಿಕರ ಹೊಲ ಗದ್ದೆಗಳಲ್ಲಿ ದುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಬಾಲಕಾರ್ಮಿಕ ಪದ್ಧತಿ, ಜೀತಪದ್ಧತಿ, ಬಡತನ, ಅನಕ್ಷರತೆ ಮತ್ತು ಸೋಮಾರಿತನ ಪ್ರಸ್ತುತ ಈ ಜನಾಂಗಗಳ ಸಾಮಾಜಿಕ ಸಮಸ್ಯೆಗಳು.

ಕರ್ನಾಟಕ ರಾಜ್ಯದ ೨೭ ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶವೆಂದರೆ ಚಿತ್ರದುರ್ಗ ಜಿಲ್ಲಾ ಚಳ್ಳಕೆರೆ ತಾಲ್ಲೂಕು. ಈ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹಿಂಗಾರು ಮತ್ತು ಮುಂಗಾರು ಮಳೆಗಳ ವೈಫಲ್ಯತೆಯಿಂದಾಗಿ ಚಿತ್ರದುರ್ಗ ಜಿಲ್ಲೆಯ ರೈತರು ವ್ಯವಸಾಯದಲ್ಲಿ ಹಿಂದುಳಿಯುತ್ತಿದ್ದಾರೆ. ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯಗಳು ಬಹಳ ಕಡಿಮೆ ಇರುವುದರಿಂದ, ಒಣ ಭೂಮಿ ವ್ಯವಸಾಯಕ್ಕೆ ರೈತರು ಮಾರುಹೋಗಿ ಶೇಂಗಾ, ರಾಗಿ, ಜೋಳ, ಸಜ್ಜೆ, ನವಣೆ, ಹುರುಳಿ, ತೊಗರಿ, ಅಲಸಂದಿ, ಹೆಸರು ಮೊದಲಾದ ದವಸ-ಧಾನ್ಯಗಳನ್ನು ಬೆಳೆಯುತ್ತಾರೆ.

ಈ ಪ್ರದೇಶದ ರೈತರು ಆಹಾರ ಧಾನ್ಯಗಳಿಗಿಂತ, ವಾಣಿಜ್ಯ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ದನ ಕರುಗಳಿಗೆ ಹುಲ್ಲು ಮತ್ತು ನೀರಿನ ಸಮಸ್ಯೆಗಳು ಅಧಿಕವಾಗಿವೆ. ಕ್ರಿಮಿ ಕೀಟಗಳ ಹಾವಳಿಯಿಂದ ಬೆಳೆಗಳು ನಾಶವಾಗುತ್ತಿವೆ. ಸರ್ಕಾರದ ಯೋಜನೆಗಳು ಮತ್ತು ಕೃಷಿ ಇಲಾಖೆಯ ಪ್ರಗತಿ ಈ ಎರಡು ಬುಡಕಟ್ಟು ಸಮುದಾಯಗಳಿಗೆ ಅನುಕೂಲತೆ ದೊರಕಿಸಿಕೊಡುವಲ್ಲಿ ವಿಫಲವಾಗಿವೆ, ಜೊತೆಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಮರ್ಪಕವಾಗಿ ಸಿಗುತ್ತಿಲ್ಲ.

೪.೪. ನಾಟಿ ವೈದ್ಯ

ದೇಸಿ ವನಸ್ಪತಿಗಳಿಂದ ಔಷಧಗಳನ್ನು ತಯಾರಿಸಿ ರೋಗಿಗಳನ್ನು ಉಪಚರಿಸುತ್ತ ಬಂದಿರುವುದು ನಮ್ಮ ನಾಟಿ ವೈದ್ಯರಿಗೆ ದೊರೆತ ಅಪೂರ್ವ ವಿದ್ಯೆ. ಕಾಡಾಡಿಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಸುತ್ತ ಮುತ್ತಲ ಜನರಿಗೆ, ತಮ್ಮೊಂದಿಗೆ ಬಾಳುತ್ತಿದ್ದ ದನ, ಕರು, ಕುರಿ, ಮೇಕೆ, ಎಮ್ಮೆಗಳಿಗೆ ನಾಟಿ ವೈದ್ಯ ಪದ್ಧತಿಯ ಮೂಲಕ ಕಾಯಿಲೆಗಳನ್ನು ಗುಣಪಡಿಸುತ್ತಾರೆ. ಜಾನುವಾರುಗಳಿಗೆ ಚಿಕಿತ್ಸೆ ನೀಡುವಾಗ ಅನುಭವದ ಮೂಲಕ ರೋಗಗಳನ್ನು ಪತ್ತೆ ಹಚ್ಚುತ್ತಾರೆ. ಜಾನುವಾರುಗಳಿಗೆ ತಗಲುವ ರೋಗಗಳಾದ ಕಳ್ಳಬಾವು, ರಕ್ತಕುಂದು, ಹೊಟ್ಟೆನೋವು, ಗಂಟಲು ಹುಣ್ಣು, ಕೆಚ್ಚಲ ಬಾವು, ಕಾಲು ಮುರಿತ, ಚಪ್ಪೆ ಜಾರುವುದು, ಬಾಯಿ ಜ್ವರ ಮೊದಲಾದ ಸಮಸ್ಯೆಗಳಿಗೆ ಚಿಕಿತ್ಸೆ ಮಾಡುತ್ತಾರೆ. ಅದೇ ರೀತಿ ಮನುಷ್ಯರಿಗೆ ಅರತಲೆ ಸೋವು, ಹೊಟ್ಟೆನೋವು, ಬಿಳಿಕರೆ, ಕೆಂಪುಕರೆ, ಕೈಮಸುಗು, ಸಂತಾನ ಇಲ್ಲದಿದ್ದಾಗ, ಬಾಲಗ್ರಹ, ಮಕ್ಕಳು ಬದುಕದಿದ್ದರೆ, ಪಿತ್ತ, ಬೇದಿ, ಜ್ವರ, ತಲೆಸುತ್ತುವಿಕೆ, ತೊನ್ನು ಮೊದಲಾದ ರೋಗಗಳಿಗೆ ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸಿ ಕೊಡುತ್ತಾರೆ. ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ ಮಾರಾಟ ಮಾಡುವ ಕಾಡುಗೊಲ್ಲರ ಒಂದು ಪಂಗಡಕ್ಕೆ ಮದ್ದಿನ ಗೊಲ್ಲರು ಅಥವಾ "ಮದ್ದಿನ ಗೊಲ್ಲರು" ಎಂದು ಕರೆಯುತ್ತಾರೆ.

ಔಷಧೋಪಚಾರಕ್ಕೆ ಬೇಕಾಗುವ ಹಸಿರೆಲೆ, ಬಳ್ಳಿ, ಬೇರು, ಕಾಯಿ, ಸೊಪ್ಪು, ಗಿಡ, ಹೂವು, ಬೀಜಗಳನ್ನು ತಂದು ಅವುಗಳಿಂದ ಔಷಧಿ ತಯಾರಿಸುವುದು ಅಷ್ಟೇ ಮುಖ್ಯವಾಗಿರುತ್ತದೆ. ಕೆಲವನ್ನು ಹಸಿ ರಸವಾಗಿ, ಕೆಲವನ್ನು ಕುದಿಸಿ, ಕೆಲವನ್ನು ಅರೆದು ಲೇಪವಾಗಿ ಮತ್ತೆ ಕೆಲವನ್ನು ಹಳೆತುಪ್ಪ, ಉಡವಿನ ತುಪ್ಪ, ಹಂದಿ ತುಪ್ಪ, ಬೆಲ್ಲ, ಮಜ್ಜಿಗೆ, ಎದೆಹಾಲು, ಮೇಕೆಹಾಲು ಮೊದಲಾದ ವಸ್ತುಗಳಲ್ಲಿ ಸೇರಿಸಿ ಕುಡಿಸುತ್ತಾರೆ ಮತ್ತು ಹಚ್ಚುತ್ತಾರೆ. ಕೆಲವು ಪಂಡಿತರು ದೇವರ ಹೆಸರಿನ ಮೇಲೆ ಗುರುವಾರ ಮತ್ತು ಭಾನುವಾರ ಮಾತ್ರ ನಾಟಿ ಔಷಧಿ ಕೊಡುತ್ತಾರೆ. ಆದರೆ ನಾಟಿ ವೈದ್ಯ ಪಂಡಿತರು ತಾವು ಬಳಸುವ ಗಿಡಮೂಲಿಕೆಗಳ ಹೆಸರನ್ನು ಹೇಳುವುದಿಲ್ಲ. ಅವರೂ ಸಹ ಗಿಡಮೂಲಿಕೆಗಳ ಹೆಸರನ್ನು ಉಚ್ಚಾರಣೆ ಮಾಡುವುದಿಲ್ಲ. ಆಕಸ್ಮಿಕವಾಗಿ ಹೆಸರೇಳಿದರೆ ನಾವು ಕೊಟ್ಟ ಔಷಧಿ ನಾಟುವುದಿಲ್ಲ ಎಂದು ಹೇಳುತ್ತಾರೆ. ಉದಾಹರಣೆಗೆ : ಕತ್ತೆಹಾಲನ್ನು ಪಂಡಿತರು ಶೆಟ್ಟಿಹಾಲು ಅಥವಾ ನಡೆಹಾಲು ಎಂದು ಉಚ್ಚಾರಣೆ ಮಾಡುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಹೆಸರಾಂತ ನಾಟಿ ವೈದ್ಯರು ಕಂಡಬರುತ್ತಾರೆ. ಚಿತ್ರದುರ್ಗದಿಂದ ೧೪ ಕಿ.ಮೀ. ದೂರದ ಇತಿಹಾಸ ಪ್ರಸಿದ್ಧ ಜೋಗಿಮಟ್ಟಿ ಅರಣ್ಯ ಪ್ರದೇಶವು ನಾಟಿ ವೈದ್ಯ ಪದ್ಧತಿಯ ಗಿಡಮೂಲಿಕೆಯ ಕೇಂದ್ರವಾಗಿತ್ತು ಎಂಬುದು "ಈ ಪ್ರದೇಶದಲ್ಲಿ ದೊರೆತ ಸುಮಾರು ೩೦೦ ವರ್ಷಗಳ ಹಿಂದಿನ ಶಾಸನಗಳಲ್ಲಿ ಇಲ್ಲಿನ ಜನ, ಜಾನುವಾರುಗಳಿಗೆ ಗಿಡಮೂಲಿಕೆ ಚಿಕಿತ್ಸೆ ನೀಡುತ್ತಿದ್ದ ಉಪಕಾರಿ ಜೋಗಿ (ಯೋಗಿ) ಯೊಬ್ಬನಿದ್ದನೆಂದೂ ಆತನು ಇಲ್ಲಿನ ಶಿಖರವೊಂದರ ಮೇಲೆ ಗುಡಿಯೊಂದನ್ನು ನಿರ್ಮಿಸಿದನೆಂದೂ ಆತನ ಸ್ಮರಣಾರ್ಥ ಈ ಪ್ರದೇಶಕ್ಕೆ ಜೋಗಯ್ಯನಮಠ, ಜೋಗಿಮಟ್ಟಿ ಜೋಗಿಮರಡಿ ಎಂಬ ಹೆಸರು ಬಂದವೆಂದೂ ಹೇಳಲಾಗಿದೆ.[೨] ಆದ್ದರಿಂದ ಈ ಪ್ರದೇಶ ಗಿಡಿಮೂಲಿಕೆಗಳ ಕೇಂದ್ರವಾಗಿತ್ತೆಂದು ಹೇಳಬಹುದು. ಪ್ರಸ್ತುತ ಬುಡಕಟ್ಟು ಜನಾಂಗವಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ನಾಟಿ ವೈದ್ಯ ಪದ್ಧತಿಯ ಕೆಲವು ಔಷಧಿಗಳನ್ನು ಇಲ್ಲಿ ಗುರುತಿಸಲಾಗಿದೆ.

೪.೪.೧. ಅರೆತಲೆ ನೋವು : ಹೊಂಗೆ ಚಕ್ಕೆ, ಉಡುವಿನ ಚಕ್ಕೆ, ನೆಲತಂಗಡಿ ಸೊಪ್ಪು, ಹೊಗೆಸೊಪ್ಪು ಮತ್ತು ಮೇಕೆಯ ಹಸಿ ಹಾಲನ್ನು ಮಿಶ್ರಣ ಮಾಡಿ ಬಲಗಡೆ ತಲೆನೋವು ಕಾಣಿಸಿಕೊಂಡರೆ ಎಡಭಾಗಕ್ಕೆ, ಎಡಗಡೆ ತಲೆ ನೋವು ಕಾಣಿಸಿಕೊಂಡರೆ ಬಲಭಾಗದ ಕಿವಿಯಲ್ಲಿ ಮುಂಜಾನೆ ಮೂರು ಹನಿ, ಮೂರು ದಿನ ಹಾಕಿದರೆ ತಲೆನೋವು ಹೋಗುತ್ತದೆ.

೪.೪.೨. ಕೈಮಸುಗು : ಐದು ಏಲಕ್ಕಿ, ಐದು ಲವಂಗ, ಬಿಳಿಬೆಲ್ಲ, ಬೇಟೆ ಚಕ್ಕೆ, ಚೂರ್ಣ ಮಾಡಿ, ಗಂಧ ತೇದು ಮೂರು ಚಿಕ್ಕ ಉಂಡೆ ಮಾಡಿ, ಮೂರು ದಿವಸ ಬೆಳಿಗ್ಗೆ ಒಂದೊಂದರಂತೆ ತೆಗೆದುಕೊಳ್ಳಬೇಕು. ಊಟದಲ್ಲಿ ರಾಗಿಮುದ್ದೆ ಒಣ ಮೆಣಸಿನಕಾಯಿ ಗೊಜ್ಜು, ಮೂರು ದಿನ ಪಥ್ಯ ಮಾಡಬೇಕು.

೪.೪.೩. ಸೂತಕವಾದಾಗ ಹೊಟ್ಟೆನೋವು

ಕುಂಕುಮ ಕೇಸರಿ, ಕಸ್ತೂರಿ ಮಾತ್ರೆ, ಗೋರೋಜನ, ನಾರ ಕಸ್ತೂರಿ, ಇಂಗಳಾರದ ಸೊಪ್ಪು, ಮೆಣಸು, ಬೆಳ್ಳುಳ್ಳಿ ಇವುಗಳನ್ನು ಪುಡಿಮಾಡಿ ಒಂಬತ್ತು ಮಾತ್ರೆಗಳನ್ನು ಕಟ್ಟಿ ಪ್ರತಿ ದಿನ ಮೂರು ಮಾತ್ರೆಗಳಂತೆ ಮೂರು ದಿನ ತೆಗೆದುಕೊಳ್ಳಬೇಕು. ಮೂರು ದಿನ ಪಥ್ಯ ಮಾಡಿ ಅಚ್ಚರಾಗಿ ಮುದ್ದೆ, ಮೆಣಸಿನಕಾಯಿ, ಉಪ್ಪು, ಬೆಳ್ಳುಳ್ಳಿ ಮಾತ್ರ

ಊಟಕ್ಕೆ ಉಪಯೋಗಿಸಬೇಕು. ಆಗ ಹೊಟ್ಟೆ ನೋವು ಮೂರು ದಿನಗಳ ಒಳಗೆ ಕಡಿಮೆಯಾಗುತ್ತದೆ.

೪.೪.೪. ಬಿಳಿ ಕರೆಗೆ : ರಾಯಪುಡಿ ಸಕ್ಕರೆ, ರಸಬಾಳೆಹಣ್ಣು, ಬನ್ನಿಸೊಪ್ಪು ಮಿಶ್ರಣ ಮಾಡಿ ಕುಟ್ಟಿ ಒಂಬತ್ತು ಮಾತ್ರೆಗಳನ್ನು ಮಾಡಿ, ಪ್ರತಿದಿನ ಮೂರು ಮಾತ್ರೆಗಳಂತೆ, ಮೂರು ದಿನ ತಗೆದುಕೊಳ್ಳಬೇಕು, ಊಟದಲ್ಲಿ ಪಥ್ಯ ಇಲ್ಲಾ, ಅದರೆ ಮೂರು ದಿವಸ ಹಾಸಿಗೆ ಪಥ್ಯ ಇರುವುದು.

೪.೪.೫. ಕೆಂಪು ಕರೆಗೆ : ಉತ್ತತ್ತಿ ಹಣ್ಣು, ದ್ರಾಕ್ಷಿ, ಗೋಡಂಬಿ, ಬಾದಮಿ, ಕೆಂಪು ಸಕ್ಕರೆ, ಜಂಬುನೇರಲ ಚಕ್ಕೆ, ಚೂರ್ಣ ಮಾಡಿ ಕುಟ್ಟಿ ರಸ ತೆಗೆದು ಮೂರು ಹೊತ್ತು ರಸ ಕುಡಿದರೆ ಕೆಂಪು ಸೆರಗು ನಿಲ್ಲುತ್ತದೆ.

೪.೪.೬. ಗಂಡಸ್ತನ ಇಲ್ಲದಿದ್ದರೆ : ಬಿಳಿ ಗುಳುಗದ ಗಿಡ, ಕಾಳು ಮೆಣಸಿನ ಕೊನೆ, ಮುಳ್ಳುತೊಂಡೆ ಬೇರು, ಹಚ್ಚ ಕಡಲೆ, ಜೇನು ತುಪ್ಪದಲ್ಲಿ ಮಿಶ್ರಣ ಮಾಡಿ, ಆರು ಮಾತ್ರೆಗಳನ್ನು ಮೂರು ದಿನ ಬೆಳಿಗ್ಗೆ ಮತ್ತು ಸಾಯಂಕಾಲ ತಿಂದರೆ ಉತ್ತಮ. ಪಥ್ಯ ಇರುವುದಿಲ್ಲ.

೪.೪.೭. ಉಷ್ಣಕ್ಕೆ ಮದ್ದು : ರತ್ನ ಚೋಡಿಗಿಡ, ಗಾಂಧಾರಿಗಿಡ, ಶ್ರೀ ತುಳಸಿ ಗಿಡ, ನೆಲತಂಗಟೆ ಗಿಡ, ಲಂಗಸೋಡಿ ಗಿಡ, ಕೆಂಪು ಸಕ್ಕರೆ, ಉತ್ತತ್ತಿ, ದ್ರಾಕ್ಷಿ, ಗೋಡಂಬಿ, ಕಲ್ಲುನಾರು ಮಿಶ್ರಣ ಮಾಡಿ ಹಸುವಿನ ತುಪ್ಪದಲ್ಲಿ ಒಂಬತ್ತು ದಿನ ತಿನ್ನಬೇಕು. ಪಥ್ಯ ಇರುವುದಿಲ್ಲ.

೪.೪.೮. ಪಿತ್ತಕ್ಕೆ ಮದ್ದು : ರಾತ್ರಿಮಲಗುವಾಗ ಹುಣಸೆಹಣ್ಣನ್ನು ನೀರಿನಲ್ಲಿ ನೆನೆಹಾಕಿ ಬೆಳಿಗ್ಗೆ ಎದ್ದತಕ್ಷಣ ಹುಣಸೇ ಹಣ್ಣಿನ ರಸ ತೆಗೆದು ಜೀರಿಗೆ ಬೆಲ್ಲ ಕುಟ್ಟಿ ಮಿಶ್ರಣ ಮಾಡಿ ಬೆಳಿಗ್ಗೆ ಎದ್ದತಕ್ಷಣ ಹಾಳುಹೊಟ್ಟೆಗೆ ಮೂರುದಿನ ಕುಡಿದರೆ ಪಿತ್ತ ಕಡಿಮೆ ಯಾಗುತ್ತದೆ.

೪.೪.೯. ಮಕ್ಕಳಿಗೆ ಕಾರ ಹಾಕುವುದು : ಜಾಪತ್ರೆ, ಜಾಜಿಕಾಯಿ, ಅಳಲೆ ಕಾಯಿ, ಬಜೆ, ಶುಂಠಿ, ಅರಿಷಿಣಬೇರು, ಹಿಪ್ಪಲಿ ಕಡ್ಡಿ, ಮೋಡಿ ಕಡ್ಡಿ, ಮೆಣಸು, ಬೆಳ್ಳುಳ್ಳಿ, ಲವಂಗ, ಕರ್ಜೂರ ಬೀಜ, ಹುಣಸೆ ಬೀಜ, ಗೋಟು ಅಡಿಕೆ, ಎಲೆ ಮೂಗು, ಉತ್ತತ್ತಿ ಬೀಜ ಎಲ್ಲವನ್ನು ಸಾಣೆಕಲ್ಲಿನ ಮೇಲೆ ಒಂದು ಸುತ್ತು ತೇದು, ಒಂದು ತಿಂಗಳ ಮಗುವಿಗೆ ತಾಯಿಯ ಎದೆ ಹಾಲಿನಲ್ಲಿ ಹಾಕಬೇಕು. ಮಗು ಬೆಳೆದಂತೆ ಕಾರ ಹಾಕುವುದು ಸ್ವಲ್ಪ ಸ್ವಲ್ಪ ಜಾಸ್ತಿ ಮಾಡುತ್ತ ಹೋಗಬೇಕು. ಆದರೆ ಮಗು ಹುಟ್ಟಿ ಹನ್ನೊಂದು ದಿನದಿಂದ ಒಂದು ವರ್ಷದವರೆಗೂ ಪ್ರತಿ ಭಾನುವಾರ ಕಾರ ಹಾಕುವುದರಿಂದ ಮಗುವಿಗೆ ಯಾವುದೇ ರೋಗಗಳು ಬರುವುದಿಲ್ಲ.

೪.೪.೧೦. ಕುರುಡಿ ಕುಕ್ಕಾರ : ಮಗು ಹುಟ್ಟಿದ ದಿನ ಕಾಡುಗೊಲ್ಲರು ಕುರುಡಿ ಕುಕ್ಕಾರ (ಸಂಜೀವಿನ ಗೂಡು) ಹಾಕುತ್ತಾರೆ. ಒಂದು ಮೆಣಸು, ಒಂದು ಬೆಳ್ಳುಳ್ಳಿ, ಒಂದು ಎಲೆ ಮೂಗು, ಸಾಣೆಕಲ್ಲಿನ ಮೇಲೆ ತೇದು, ಕುರುಡಿ ಕುಕ್ಕಾರ ಕುಟ್ಟಿ, ವೀಳೆದೆಲೆಯಲ್ಲಿ ರಂಗುಳಿಸಿ, ಒಂದೇ ಬೆರಳಲ್ಲಿ ಮಗುವಿಗೆ ನೆಕ್ಕಿಸಿದರೆ, ಮಗು ಆರೋಗ್ಯವಾಗಿ ಬೆಳೆಯುತ್ತದೆ.

೪.೪.೧೧. ಮಕ್ಕಳಿಗೆ ಹಸಿರು ಮದ್ದು : ಕಾಕೆ ಸೊಪ್ಪು, ಬುಡ್ಡೆಸೊಪ್ಪು, ಆಲವಾಣದ ಸೊಪ್ಪು, ಹಾಗಲ ಸೊಪ್ಪು ಮಿಶ್ರಣ ಮಾಡಿ ಕುಟ್ಟಿ, ಒಂದು ಮೆಣಸು, ಒಂದು ಬೆಳ್ಳುಳ್ಳಿ, ಒಂದು ಹರಳು ಉಪ್ಪು ತೇದು ತಾಯಿಯ

ಎದೆ ಹಾಲಿನಲ್ಲಿ ಕುಡಿಸಬೇಕು. ನಂತರ ಮೈ, ಕೈಗೆ ಅದೇ ಸೊಪ್ಪನ್ನು ಹಚ್ಚಿ ಸ್ನಾನ ಮಾಡಿಸಬೇಕು. ಮಗು ಹುಟ್ಟಿ ಮೂರು ದಿನ, ಐದು ದಿನ, ಒಂಬತ್ತು ದಿನ, ಹನ್ನೊಂದು ದಿನ ಮತ್ತು ಹದಿನಾರು ದಿನದಲ್ಲಿ ಹಸಿರು ಮದ್ದು ಕುಡಿಸಿದರೆ ಮುಂದೆ ಯಾವ ರೋಗಗಳೂ ಮಕ್ಕಳಿಗೆ ಬರುವುದಿಲ್ಲ.

೪.೪.೧೨. ಶೆಟ್ಟಿ ಹಾಲು ಹಾಕುವುದು : ಮಗು ಹುಟ್ಟಿ ಮೂರು ದಿನದ ಒಳಗೆ ಶೆಟ್ಟಿ ಹಾಲು (ಕತ್ತೆಹಾಲು) ಕುಡಿಸಿದರೆ ಮುಂದೆ ಮಗು ದಷ್ಟ ಪುಷ್ಟವಾಗಿ ಬೆಳೆಯುತ್ತದೆ ಮತ್ತು ಚೆನ್ನಾಗಿ ಊಟಮಾಡುತ್ತದೆ ಎಂಬ ನಂಬಿಕೆ ಇದೆ. ಕೆಲವರಿಗೆ ಹುಟ್ಟಿದ ಮಕ್ಕಳು ಬದುಕದಿದ್ದರೆ ಶೆಟ್ಟಿಹಾಲು ತಂದು ಹರಳೆಯಲ್ಲಿ ಮೂರು ಹನಿ ಮಗುವಿನ ಬಾಯಲ್ಲಿ ಹಾಕಿದರೆ ಮಗು ಬದುಕುತ್ತದೆ ಎಂಬ ನಂಬಿಕೆಯಿದೆ.

೪.೪.೧೩. ಮಕ್ಕಳಿಗೆ ಬಾಲಗ್ರಹ : ಬಾಗೆ ಮರದ ಚಕ್ಕೆ, ಅರಳಿ ಮರದ ಚಕ್ಕೆ, ಬಿಳಿ ಎಕ್ಕೆ, ಭೂತಾಳಿ, ಕವಡೆ ಸಾಂಬ್ರಾಣಿ, ಮಿಶ್ರಣ ಮಾಡಿ ಮಕ್ಕಳಿಗೆ ಹೊಗೆ ಹಾಕಿದರೆ, ಬಾಲಗ್ರಹದ ದೋಷ ಕಡಿಮೆಯಾಗುತ್ತದೆ.

೪.೪.೧೪. ದನಗಳಿಗೆ ರಕ್ತ ಕುಂದುವಾದರೆ : ಅರಳಿ ಮರದ ಚಕ್ಕೆ, ಕೊತ್ತುಂಬರಿ ಬೀಜ, ಗಸಗಸೆ, ಚಕ್ಕೆ, ಮೆಣಸು, ಬೆಳ್ಳುಳ್ಳಿ ಮಿಶ್ರಣ ಮಾಡಿ, ಕುಟ್ಟಿ ರಸ ತೆಗೆದು ಬೇಯಿಸಿ ಮೂರು ದಿನ ದನಗಳಿಗೆ ಕುಡಿಸಬೇಕು, ಒಣಗಿದ ಕಡ್ಡಿ ಮೇವು ಮೂರು ದಿನ ಹಾಕಬೇಕು.

೪.೪.೧೫. ದನಗಳಿಗೆ ಕಳ್ಳ ಬಾವು ಬಂದರೆ : ಚಂದ್ರಮುಖಿ ಗಿಡ, ರಾಜಮುಖಿ ಗಿಡ, ಮುಳ್ಳುತೊಂಡೆ ಗಿಡ, ಕಾಳು ಮೆಣಸು ಬೇರು, ಮೆಣಸು, ಬೆಳ್ಳುಳ್ಳಿ ಮಿಶ್ರಣ ಮಾಡಿ ಮಜ್ಜಿಗೆಯಲ್ಲಿ ಮೂರು ದಿನ ದನಗಳಿಗೆ ಎತ್ತಿದರೆ ಬಾವು ಕಡಿಮೆ ಯಾಗುತ್ತದೆ. ಆದರೆ ಮೂರು ದಿನ ಒಣ ಕಡ್ಡಿ ಮೇವು ಹಾಕಬೇಕು.

೪.೪.೧೬. ನರವಾಯು ಮತ್ತು ಕೀಲುವಾಯು : ಕೆಂಪು ಮತ್ತಿ ಮತ್ತು ಬಿಳಿ ಮತ್ತಿ ಒಣಗಿದ ಚಕ್ಕೆ, ವಾಯುವಡಂಗ ಭಸ್ಮ ಮಿಶ್ರಣ ಮಾಡಿ ಕುಟ್ಟಿ ರಸ ತೆಗೆದು, ಯಾಲಕ್ಕಿ, ಲವಂಗ, ಗಸಗಸೆ, ಬೆಳ್ಳುಳ್ಳಿ, ಕಲ್ಲುಸಕ್ಕರೆ ಕುಟ್ಟಿ ಮಿಶ್ರಣ ಮಾಡಿ ಮೇಕೆ ಹಾಲಿನಲ್ಲಿ ಮೂರು ದಿನ ಕುಡಿದರೆ ವಾಯು ಕಡಿಮೆಯಾಗುತ್ತದೆ.

೪.೪.೧೭. ಚೇಳು ಕಡಿದರೆ : ನಾಗಚಕ್ರದ ಬೇರು, ನಿಂಬೆರಸ, ಉಳ್ಳಾಗಡ್ಡಿ ಅರೆದು ರಸ ತೆಗೆದು ಚೇಳು ಕಡಿದ ಹತ್ತಿರ ಹಚ್ಚಿ, ಬೆಂಕಿ ಬಿಸಿಮಾಡಿ, ಮೂರು ಸಲ ಕೈ ಅಥವಾ ಕಾಲು ಜಾಡಿಸಿದರೆ ನೋವು ಕಡಿಮೆ ಯಾಗುತ್ತದೆ.

೪.೪.೧೮.ಕೆಮ್ಮು ಮತ್ತು ಕಫ : ಸೋನಮುಖಿ ತಪ್ಪಲ, ಮೆಣಸಿನಕಾಳು, ಯಾಲಕ್ಕಿ, ಲವಂಗ, ಬೆಳ್ಳುಳ್ಳಿ ಚೆನ್ನಾಗಿ ಆರೆದು ಗುಳಿಗೆ ಮಾಡಿ, ಪ್ರತಿದಿನ ಬೆಳಿಗ್ಗೆ ಒಂದು ಗುಂಜಿ ತೂಕ ಚೂರ್ಣವನ್ನು ಒಂದು ಚಮಚ ಜೇನುತುಪ್ಪ ಸೇರಿಸಿ ಒಂದು ತಿಂಗಳು ತೆಗೆದುಕೊಂಡರೆ ಕಫ ಮತ್ತು ಕೆಮ್ಮು ಕಡಿಮೆಯಾತ್ತದೆ. ಅದರೆ ಮದ್ಯಪಾನ, ಬೀಡಿ ಸಿಗರೇಟು ಮಾಂಸ ಮುಟ್ಟಬಾರದು, ಪಥ್ಯ ಪಾಲಿಸಬೇಕು.

೫. ಬೆಡಗುಗಳು

ಬೆಡಗುಗಳಿಗೆ ಕುಲ, ಬಳಿ, ಮತ ಮತ್ತು ಪಂಗಡ ಎಂದು ಕರೆಯುವುದುಂಟು. ಮ್ಯಾಸಬೇಡರ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ವಿವಿಧ ಒಳಪಂಗಡಗಳಿವೆ. ಒಂದೊಂದು ಬೆಡಗಿನ ಹುಟ್ಟು ಬೆಳವಣಿಗೆಗೆ

ಒಂದೊಂದು ಕಥೆ, ಇತಿಹಾಸ, ಪುರಾಣಗಳೇ ಬೆಳೆದಿರುತ್ತವೆ. ಆದರೂ ಈ ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಕುಲ, ಗೋತ್ರಗಳಿಗೆ ಒಂದೊಂದು ಪ್ರಾಣಿ, ಪಕ್ಷಿ, ಗಿಡ, ಮರ, ಹೂವು, ಬಳ್ಳಿ, ವ್ಯಕ್ತಿ, ಸೂರ್ಯ, ಚಂದ್ರ ದೇವರು ಮತ್ತು ಪ್ರಾಕೃತಿಕ ಶಕ್ತಿಯ ಹೆಸರುಗಳನ್ನೇ ಹೊಂದಿರುತ್ತವೆ. ಬೆಡಗು ಮತ್ತು ಗೋತ್ರಗಳ ಆಧಾರದ ಮೇಲಿಂದ ತಮ್ಮ ರಕ್ತ ಸಂಬಂಧವನ್ನು ಏರ್ಪಡಿಸಿಕೊಳ್ಳುತ್ತಾರೆ. ಕೆಲವೊಂದು ಬೆಡಗುಗಳ ಆಧಾರದ ಮೇಲೆ ಆ ಮನೆತನದ ವೃತ್ತಿ, ದೇವರು, ಸಂಸ್ಕೃತಿ, ಮೂಲ ಪುರುಷ, ಇತಿಹಾಸ, ಆಚಾರ-ವಿಚಾರ, ವಿಧಿ ನಿಷೇಧಗಳನ್ನು ತಿಳಿದುಕೊಳ್ಳಬಹುದು. ಮ್ಯಾಸಬೇಡರಾಗಲಿ ಅಥವಾ ಕಾಡುಗೊಲ್ಲರಾಗಲಿ ಸಗೋತ್ರ ಅಥವಾ ಸಪಿಂಡ ವಿವಾಹ ಪದ್ಧತಿಗಳನ್ನು ಮಾಡುವುದಿಲ್ಲ. ವಿವಾಹ ಸಂದರ್ಭದಲ್ಲಿ ಈ ಎರಡು ಬುಡಕಟ್ಟು ಸಮುದಾಯಗಳು 'ದೇವರು' ಮತ್ತು 'ಬೆಡಗು' ವಿಚಾರವಾಗಿ ಕಟ್ಟು-ನಿಟ್ಟಿನ ಸಂಪ್ರದಾಯಪಾಲಿಸುತ್ತಾರೆ. ಇತರ ಜಾತಿ ಮತ್ತು ಜನಾಂಗದಲ್ಲಿಯೂ ಕೂಡ ಸಗೋತ್ರ ಅಥವಾ ಸಪಿಂಡ ವಿವಾಹ ಪದ್ಧತಿಯನ್ನು ಬಹಿಷ್ಕರಿಸುವಂತೆ, ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿಯೂ ಕೂಡ 'ಹೊರಪಿಂಡ' ಅಥವಾ 'ಹೊರಬೆಡಗಿನ' ವಿವಾಹ ಸಂಬಂಧಗಳನ್ನು ಬೆಳೆಸುತ್ತಾರೆ. ಉದಾ: ಮ್ಯಾಸಬೇಡರ ಮಂದಲ ಬೆಡಗಿನವರು 'ಚಿನ್ನ ಮೊಗಲ' ಬೆಡಗಿನಲ್ಲಿ, ಕಾಡುಗೊಲ್ಲರ 'ಕರಡೇರ' ಬೆಡಗಿನವರು 'ಸನ್ನರ' ಬೆಡಗಿನಲ್ಲಿ ವಿವಾಹ ಸಂಬಂಧ ಬೆಳೆಸಬಹುದಾಗಿದೆ.

ಹಬ್ಬ, ಜಾತ್ರೆ, ಮದುವೆ, ಮಂಗಳ ಕಾರ್ಯಗಳಲ್ಲಿ ತಮ್ಮ ಕುಲಸ್ಥರು ಪರಸ್ಪರ ಭೇಟಿಯಾದಾಗ ಮೊದಲು ಆತನ ಕುಲ ಮತ್ತು ದೇವರುಗಳನ್ನು ಕೇಳಿ ತಿಳಿದುಕೊಳ್ಳುವ ಪದ್ಧತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡುಬರುತ್ತದೆ. ಪ್ರತಿಯೊಂದು ಕುಲಕ್ಕೆ ಒಂದೊಂದು 'ಗುಡಿಕಟ್ಟೆ' ಮತ್ತು 'ದೇವರು' ಇರುತ್ತವೆ. ಈ ಗುಡಿಕಟ್ಟೆಯ ಆಧಾರದ ಮೇಲೆಯೇ ಇವರು ಅಣ್ಣ ತಮ್ಮಗಳೋ ಅಥವಾ ನೆಂಟರೋ ಎಂದು ಗುರುತಿಸಬಹುದು. ಶುಕ್ಲಮಲ್ಲಿನಾಯಕ ಮತ್ತು ದಾನಸಾಲಮ್ಮನ ಮಕ್ಕಳಾದ ಸೂರ್ಯರಾಜ, ಗ್ಯಾರೆ ಬೈಯಪ್ಪರಾಜ, ಕನಕಧರ್ಮರಾಜ, ತಿಪ್ಪಂಡೆರಾಜ, ಭಾನುಕೋಟೆ ರಾಜ, ಗೊರ್ಲುಬೈಯಪ್ಪರಾಜ ಮತ್ತು ಪೆದ್ದಕ್ಕರಾಯಮ್ಮ ಎಂಬ ಏಳು ಮಂದಿ ಹಿರಿಯರಿಂದಲೇ ಮ್ಯಾಸ ಮಂಡಲದ ಕುಲ ಬೆಡಗುಗಳು ಬೆಳೆದು ಬಂದಿವೆಯೆಂದೂ; ಬೊಮ್ಮಮುನಿಯ ಮಾನಸ ಪುತ್ರರಾದ ಚಂದ್ರಕೇತು ಮತ್ತು ಕಾಮಗೇತು ಎಂಬ ಇಬ್ಬರು ಪೂಜಾರಿಗಳಿಂದ, ನೆಲಗೇತಿ ಮತ್ತು ಕಾಮಗೇತಿ ಎಂಬೆರಡು ಬೆಡಗುಗಳಿಂದ ಈ ಹೊತ್ತು ನೂರಾರು ಬೆಡಗುಗಳು ಹುಟ್ಟಿಕೊಂಡಿವೆ. ಆದರೂ ಬೆಡಗುಗಳ ವಿಷಯವಾಗಿ ಒಂದು ನಿರ್ಧಿಷ್ಟ ವ್ಯಾಪ್ತಿಯಾಗಲಿ ಅಥವಾ ಅಂಕಿ-ಸಂಖ್ಯೆಗಳ ಸ್ಪಷ್ಟತೆಯಾಗಲಿ ಎರಡೂ ಬುಡಕಟ್ಟುಗಳಲ್ಲಿ ಕಂಡು ಬರುತ್ತಿಲ್ಲ. ಮ್ಯಾಸಬೇಡರಲ್ಲಿ ಏಳು ಅಜ್ಜನ ಸಂತತಿಯವರೆಂದು, ಹನ್ನೆರಡು ಕುಲಗಳೆಂದು, ೪೯ ಕುಲಗಳೆಂದೂ, ನೂರೊಂದು ಕುಲವೆಂದು, ನೂರ ಎಂಟು ಬೆಡಗುಗಳೆಂದು, ಮೂವತ್ತು ಸಾವಿರ ಕುಲಗಳೆಂದು ಹೇಳುತ್ತಾರೆ. ಮಲ್ಲಿನಾಯಕನ ಸೂತ್ರದಲ್ಲಿ ೧೦೧ ಕುಲಗಳೆಂದು, ಮಂದ್ಲು ಸೂತ್ರದಲ್ಲಿ ೧೦೦೧ ಕುಲಗಳೆಂದು ಹೇಳುತ್ತಾರೆ. ಕಾಡುಗೊಲ್ಲರಲ್ಲಿ ಮೂರು ಅಜ್ಜನ ಸಂತತಿಯವರೆಂದು, ೨೮ ಕುಲಗಳೆಂದು, ೩೫೦ ಕುಲಗಳೆಂದು, ಮೂರು ಸಾವಿರ ಬೆಡಗುಗಳೆಂದು ಈ ಜನಾಂಗದ ವ್ಯಕ್ತಿಗಳೇ ಹೇಳುವುದರಿಂದ ಬೆಡಗು ಅಥವಾ ಕುಲಗಳ ವಿಚಾರವಾಗಿ ಒಂದು ನಿರ್ಧಿಷ್ಟತೆ ಕಂಡು ಬರುತ್ತಿಲ್ಲ. ಹಲವಾರು ಹಸ್ತಪ್ರತಿ, ಜಯರೇಖೆ,

ದಿನಚರಿ ಮತ್ತು ಜನಾಂಗದ ಪ್ರಮುಖ ವ್ಯಕ್ತಿಗಳನ್ನು ಸಂದರ್ಶನ ಮಾಡಿದರೂ ಪ್ರಾದೇಶಿಕವಾಗಿ ಭಿನ್ನಭಿಪ್ರಾಯಗಳನ್ನು ಸೂಚಿಸುತ್ತಾರೆ.

ಕೆಲವೊಂದು ಹಟ್ಟಿಗಳಲ್ಲಿ ಗ್ರಾಮ ಭಾಷೆ ಮತ್ತು ಉಚ್ಚಾರಣೆ ಸಮಸ್ಯೆಗಳಿಂದ ಒಂದೇ ಬೆಡಗನ್ನು ಹಲವು ರೀತಿ ಉಚ್ಚಾರಣೆ ಮಾಡುತ್ತಾರೆ. ಉದಾ: ಮ್ಯಾಸಬೇಡರಲ್ಲಿ ಚಿನ್ನಮೊಗಲವರು ಎಂಬುದು ಒಂದು ಬೆಡಗು, ಇದನ್ನೇ ಸಿನಮೊಗಲವರು, ಸಿನಮದಿಲವರು, ಸಿನಮಂಗಲವರು ಎಂದು ಉಚ್ಚಾರಣೆ ಮಾಡುವುದರಿಂದ ಒಂದೇ ಬೆಡಗನ್ನು ನಾಲ್ಕು ರೀತಿ ಉಚ್ಚಾರಣೆ ಮಾಡುತ್ತಾರೆ. ಅದೇ ರೀತಿ ಕಾಡುಗೊಲ್ಲರಲ್ಲಿಯೂ ಕೂಡ ಸನ್ನರಗೊಲ್ಲರು ಎಂಬ ಬೆಡಗನ್ನು ಸಣ್ಣೀರಗೊಲ್ಲರು ಎಂದು ಉಚ್ಚಾರಣೆ ಮಾಡುವುದರಿಂದ ಒಂದೇ ಬೆಡಗು ಎರಡು ಬೆಡಗಾಗಿ ಕಂಡು ಬರುವುದರಿಂದ, ಅನವಶ್ಯಕವಾಗಿ ಬೆಡಗುಗಳ ಸಂಖ್ಯೆ ಬೆಳೆಯುತ್ತ ಹೋಗುತ್ತವೆ. ಪ್ರಸ್ತುತ ಭಾರತೀಯ ಸಮಾಜದಲ್ಲಿ ಸುಮಾರು ೨,೯೩೪ ಜಾತಿ ಹಾಗೂ ಉಪ-ಜಾತಿಗಳಿರುವಾಗ, ಕೇವಲ ಒಂದು ಪಂಗಡದಲ್ಲಿ ಸಾವಿರಾರು ಬೆಡಗು ಅಥವಾ ಕುಲಗಳು ಇರುವುದಾದರೂ ಹೇಗೆ ಸಾಧ್ಯ? ಕುಟುಂಬ ಮತ್ತು ಜನಸಂಖ್ಯೆ ಸಮಾಜದಲ್ಲಿ ಹೆಚ್ಚಾಗಬಹುದು. ಅದರೆ 'ಜಾತಿ' ಮತ್ತು 'ಬೆಡಗು'ಗಳು ಮಾತ್ರ ಎಂದಿಗೂ ಹೆಚ್ಚಾಗುವುದಿಲ್ಲ. ಒಂದೇ ಬೆಡಗನ್ನು ಅಪಭ್ರಂಶವಾಗಿ ಉಚ್ಚಾರಣೆ ಮಾಡುವುದರಿಂದ ಈ ಸಮಸ್ಯೆಗಳು ಉದ್ಭವಿಸುತ್ತವೆ. ಕಾಲ ಮತ್ತು ಪರಿಸರಕ್ಕೆ ತಕ್ಕಂತೆ ಸಮಾಜ ಮತ್ತು ಸಂಸ್ಕೃತಿ ಪರಿವರ್ತನೆಯಾದರೂ 'ಬೆಡಗುಗಳು' ಮಾತ್ರ ಸಾಮಾಜಿಕ ಸ್ಥಿರತೆಯನ್ನು ಪಡೆದುಕೊಂಡಿವೆ. ಆದರೆ ಬೇಡರಲ್ಲಿ ಊರುಬೇಡರು ಮತ್ತು ಮ್ಯಾಸಬೇಡರು, ಗೊಲ್ಲರಲ್ಲಿ ಊರುಗೊಲ್ಲರು ಮತ್ತು ಕಾಡುಗೊಲ್ಲರು ಎಂಬ ಉಪ ಪಂಗಡಗಳ ವ್ಯತ್ಯಾಸಗಳಿಂದ ಈ ಬೆಡಗುಗಳು ಸಂಖ್ಯೆ ಹೆಚ್ಚಾಗಿರಬಹುದು.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಿಗೆ ಬಹಳ ಹತ್ತಿರದ ಸಂಬಂಧ ಮತ್ತು ಹೋಲಿಕೆಯನ್ನು ಹೊಂದಿರುವ ಕುರುಬರು, ಕುಂಚಿಟಿಗರು, ಮಾದಿಗರು ಮತ್ತು ಹೊಲೆಯರು ಮೂಲತಃ ಒಂದೇ ವಂಶದವರಿರಬೇಕು. ಇವರ ಬೆಡಗುಗಳು, ದೇವರು, ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಪರಸ್ಪರ ಸಾಮ್ಯತೆ ಕಂಡುಬರುತ್ತದೆ. ಮ್ಯಾಸಬೇಡರು, ಮಾದಿಗರು ಮತ್ತು ಹೊಲೆಯರು ಮೂಲತಃ ನಾವೆಲ್ಲ ಒಂದೇ ಎಂದು ಹೇಳಿಕೊಳ್ಳುತ್ತಾರೆ. ಅದಕ್ಕೆ ಪೂರಕವೆಂಬಂತೆ ಈ ಮೂರು ಪಂಗಡದ ಬೆಡಗುಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸ ಕಂಡುಬರುವುದಿಲ್ಲ. ಮದುವೆ, ಮಂಗಳ ಕಾರ್ಯದಲ್ಲಿ ಮಾದಿಗರು ಮತ್ತು ಹೊಲೆಯರ ಸೇವೆ ಮ್ಯಾಸಬೇಡರಿಗೆ ಅಗತ್ಯವಾಗಿದೆ. ಇವರು ಅಣ್ಣ-ತಮ್ಮಗಳಂತೆಯೂ, ನೆಂಟರಂತೆಯೂ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡಿದ್ದಾರೆ. ಚಳ್ಳಕೆರೆ ಪಟ್ಟಣದ ಮ್ಯಾಸಬೇಡರಾದ "ತಳವಾರ ಕುಟುಂಬ"ಗಳಲ್ಲಿ ಯಾರದರೂ ವ್ಯಕ್ತಿ ಮರಣ ಹೊಂದಿದಾಗ ಸತ್ತ ವ್ಯಕ್ತಿಯ ಸಮಾಧಿ ಅಥವಾ ಗುಡ್ಡೆಯ ಮೇಲೆ ಇಟ್ಟ ಮೂರು ದಿನದ "ಹಿಂಡೆ ಕೂಳನ್ನು" ಈ ಪ್ರದೇಶದ ಮಾದಿಗರು ತಿನ್ನುತ್ತಾರೆ. ಕಾರಣ ಈ ಊರಿನ ಮಾದಿಗರ ಬೆಡಗು 'ಮಳೆಲರು'ಈ ತಳವಾರ ಕುಟುಂಬದ ಬೆಡಗುಗಳು ಕೂಡ ಮಳೆಲರು ಆಗಿರುವುದರಿಂದ ಬಹು ಹಿಂದಿನಿಂದಲೂ ಈ ಎರಡು ಪಂಗಡದ ಬೆಡಗಿನವರು ಅಣ್ಣ ತಮ್ಮಗಳಂತೆ ನಡೆದುಕೊಳ್ಳುತ್ತಾರೆ. ಆದ್ದರಿಂದ ಮ್ಯಾಸಬೇಡರ, ಮಾದಿಗರ ಮತ್ತು ಹೊಲೆಯರ ಸಂಸ್ಕೃತಿ, ಸಂಪ್ರದಾಯ,

ಬೆಡಗು, ವ್ಯಕ್ತಿಯ ಹೆಸರು ದೇವರು ಧರ್ಮ ಒಂದೇ ಯಾಗಿರಬಹುದೇ? ಅಥವಾ ಯಾವುದೋ ಕಾರಣಕ್ಕಾಗಿ ಇವರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿ ದೂರವಾಗಿರಬಹುದೇ? ಎಂಬುದನ್ನು ಪತ್ತೆ ಹಚ್ಚಲು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕಾಗಿದೆ. ಆದರೆ ಈ ಮೂರು ಪಂಗಡಗಳ ಬೆಡಗುಗಳಲ್ಲಿ ಪರಸ್ಪರ ಹೊಂದಾಣಿಕೆ, ಇದೆಯೇ ವಿನಃ ಹೆಣ್ಣು ಗಂಡುಗಳನ್ನು ಕೊಟ್ಟು ತರುವ ವಿವಾಹ ಸಂಬಂಧಗಳು ಇವರಲ್ಲಿ ಕಂಡುಬರುವುದಿಲ್ಲ.

ಕೆಲವೊಂದು ಹಬ್ಬ, ಜಾತ್ರೆ, ಉತ್ಸವ ಮತ್ತು ಮಂಗಳ ಕಾರ್ಯಗಳಲ್ಲಿ ಒಂದೊಂದು ಬೆಡಗಿನವರಿಗೆ ಒಂದೊಂದು ಕೆಲಸ ಕಾರ್ಯಗಳನ್ನು ಹಂಚಿಕೊಟ್ಟಿರುತ್ತಾರೆ. ಹಟ್ಟಿಗೌಡ, ಪೂಜಾರಿಕೆ, ದಾಸಯ್ಯ, ಯಜಮಾನ ಮೊದಲಾದ ಹುದ್ದೆಗಳು ಬೆಡಗು ಅಥವಾ ಕುಲಗಳ ಆಧಾರದ ಮೇಲೆಯೇ ನಿರ್ಧರಿಸಲಾಗುತ್ತದೆ. ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಕಂಪಳರಂಗಸ್ವಾಮಿ ಜಾತ್ರೆಯಲ್ಲಿ ಒಂದೊಂದು ಬೆಡಗಿನ ಮ್ಯಾಸಬೇಡರು ತಾತ್ಕಾಲಿಕವಾಗಿ "ಉಗಾಡ" ನಿರ್ಮಿಸಿ ಕೊಳ್ಳುತ್ತಾರೆ. 'ಉಗಾಡ'ವೆಂದರೆ ತಾತ್ಕಾಲಿಕ ವಸತಿ ವ್ಯವಸ್ಥೆ ಎಂದರ್ಥ.

ಕೆಲವೊಂದು ಪ್ರದೇಶಗಳಲ್ಲಿ ಬೆಡಗು ಮತ್ತು ಗೋತ್ರ ಒಂದೇ ಎಂಬ ಅರ್ಥ ಬರುವಂತೆ ಬಳಸುವುದುಂಟು. ಆದರೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಗೋತ್ರ ಮತ್ತು ಬೆಡಗು ಬೇರೆ ಬೇರೆ ಅರ್ಥ ಕೊಡುತ್ತವೆ. ವಿವಾಹ ಮಂಗಳ ಕಾರ್ಯಗಳಲ್ಲಿ 'ಬೆಡಗು' ಅಥವಾ 'ಕುಲ' ಗಳನ್ನು ಕೇಳುತ್ತಾರೆಯೇ ವಿನಃ 'ಗೋತ್ರ' ವನ್ನಲ್ಲಾ. ಒಂದು ಗೋತ್ರಕ್ಕೆ ನೂರಾರು ಬೆಡಗುಗಳು ಸೇರಿರುತ್ತವೆ. ಏಕೆಂದರೆ ವಾಲ್ಮೀಕಿ, ಅಗಸ್ತ್ಯ, ಪಾಲುಮುನಿ, ವಿಷ್ಣು, ಕಾಶಿ, ಕೇತು, ಕೃಷ್ಣ, ಯಾದವ, ಅಂಬೆರಾಯ, ತುಂಬೆರಾಯ, ಚಿತ್ತಮುತ್ತಿ, ಚಂದಮುತ್ತಿ, ರಾಮೇಗೌಡ, ಪುಟ್ಟಲ, ಪಾರ್ವತ ಮೊದಲಾದವು ಗೋತ್ರಗಳಾದರೆ; ಮಂದಲವರು, ಮಳೆಲವರು, ಚಿನ್ನಮೊಗಲವರು, ಕಾಮಗೇತ್ಲರು, ಕರಡೇರ, ಶೀಲುವಾಡಿ, ಕೋಣನವರು ಮೊದಲಾದವು ಈ ಎರಡು ಬುಡಕಟ್ಟುಗಳ ಬೆಡಗುಗಳಾಗಿವೆ.

ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಹಂಚಿಹೋಗಿರುವ ಮ್ಯಾಸಬೇಡರ ಮತ್ತು ಕಾಡಗೊಲ್ಲರ ಬೆಡಗುಗಳನ್ನು ಒಂದೆಡೆ ಸೇರಿಸಿ ಅಧ್ಯಯನ ಮಾಡುವುದು ಕಷ್ಟಸಾಧ್ಯದ ಕೆಲಸ. ಪ್ರಸ್ತುತ ಈ ಎರಡು ಸಮುದಾಯದ ಯಜಮಾನರಲ್ಲೇ ಬೆಡಗುಗಳ ಬಗ್ಗೆ ಗೊಂದಲವಿರುವುದರಿಂದ ಇಲ್ಲಿ ಹೆಸರಿಸಿರುವ ಬೆಡಗುಗಳು ಅಪೂರ್ಣವೆಂದೇ ನಾನು ಭಾವಿಸಿದ್ದೇನೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ಬೆಡಗುಗಳು ಎಂಬ ವಿಷಯ ಕುರಿತು ಪ್ರತ್ಯೇಕ ಅಧ್ಯಯನ ಮಾಡಿದರೆ, ಈ ಎರಡು ಬುಡಕಟ್ಟು ಬೆಡಗುಗಳ ಬಗ್ಗೆ ಸ್ಪಷ್ಟತೆಯನ್ನು ಕಂಡುಕೊಳ್ಳಬಹುದು. ಆದರೂ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಗೊಂಡು ಸುಮಾರು ೨೯೩೪ ಪ್ರಶ್ನಾವಳಿಗಳನ್ನು ತುಂಬಿ, ಮ್ಯಾಸಬೇಡ ಮತ್ತು ಕಾಡುಗೊಲ್ಲರ ಬೆಡಗುಗಳನ್ನು ಗುರುತಿಸಲಾಗಿದೆ. ಅಂಥ ಪ್ರಮುಖವಾದ ಬೆಡಗುಗಳನ್ನು ಮಾತ್ರ 'ಪಟ್ಟಿ'ಯಲ್ಲಿ ಕೊಡಲಾಗಿದೆ.

೫.೧ ಮ್ಯಾಸಬೇಡರ ಬೆಡಗುಗಳ ಅಥವಾ ಕುಲಗಳು

೧. ಅಚ್ಚಡಲವರು
೨. ಅಜ್ಜಡ್ಲೋರು
೩. ಅಜ್ಜಪಲ್ಲೋರು
೪. ಅಜ್ಜಮುತ್ತಿಯವರು
೫ ಅರಕೋರರು
೬. ಅಲಿಕೇರು
೭. ಅನಂದಲವರು
೮. ಈಗ್ಲಾರು
೯. ಈಟಿಯವರು
೧೦. ಈರಗಾರವರು
೧೧. ಉದ್ದಲೋರು
೧೨. ಉರವಲರು
೧೩. ಉರಶಿಂಗರು
೧೪. ಎಕ್ಕಿಲೋರು
೧೫. ಎತ್ತಿನವರು
೧೬. ಎದ್ದಲೋರು
೧೭. ಎನುಮಲವರು
೧೮. ಎಮ್ಮೇಲವರು
೧೯. ಏಳುಮನೆರು
೨೦. ಏಳುಬೆಟ್ಟದವರು
೨೧. ಓತಲವರು
೨೧. ಓತಲವರು
೨೨. ಓಬನಾಯಕರು
೨೩. ಓಬಳೆಯವರು
೨೪. ಕಂಕರು
೨೫. ಕಗ್ಗಲ್ಲರು
೨೬. ಕತ್ತಿಯವರು
೨೭. ಕನ್ನೆಲ್ಲರು
೨೮. ಕರಿಬೇವಿನವರು
೨೯. ಕಲಶದವರು
೩೦. ಕಶ್ಯಪನವರು
೩೧. ಕಾಡುಚೆಂಚರು
೩೨. ಕಾಮಗೇತರು
೩೩. ಕಾವರಿಕರು
೩೪. ಕಿನ್ನರವರು
೩೫. ಕಿರಾತಕರು
೩೬. ಕುಂಡರಲರು
೩೭. ಕುಂತಲದವರು
೩೮. ಕುಂಬಳದವರು
೩೯. ಕುರಿಯವರು
೪೦. ಕುಳಿಂದರು
೪೧. ಗಂಪ್ಲರು
೪೨. ಗಜ್ಜಡ್ಲುರು
೪೩. ಗಟ್ಟಿನಾಯ್ಕರು
೪೪. ಗಡ್ಡದವರು
೪೫. ಗಾಡಿಗಿರಿಯವರು
೪೬. ಗುಂಡೆತ್ಲರು
೪೭. ಗುಜಗುಡ್ಲುರು
೪೮. ಗುಜ್ಜಲವರು
೪೯. ಗುರುಪಾಮುಡ್ಲರು
೫೦. ಗೆಜ್ಜಲವರು
೫೧. ಗೊಡಗುದಾಸರು
೫೨. ಗೊಬ್ಬರಪ್ಪನವರು
೫೩. ಗೊಲ್ಲಾಳರು
೫೪. ಗೋನೂರರು
೫೫. ಗೋಪಾಲರು
೫೬. ಗೋಪಾಲಪಾತಕರು
೫೭. ಗೋವಿನವರು
೫೮. ಗೋಸಲವರು
೫೯. ಚನ್ನೆನಾರು
೬೦. ಚಿನಗಾಟನಾಯ್ಕರು
೬೧. ಚಿನ್ನಮೊಗಲವರು
೬೨. ಜಂಬಿಗೆರು
೬೩. ಜಗ್ಗೇಲವರು
೬೪. ಜಿಂಕೇಲವರು
೬೫. ಜೋಗಯ್ಯನವರು
೬೬. ತಮಲುಮತ್ತೇರು
೬೭. ತೊಡಲವರು
೬೮. ದಡ್ಡಿಮುತ್ತಿನಾರು
೬೯. ದಡ್ಡಿಸೂರನಾಯಕರು
೭೦. ದೇವಲರು
೭೧. ದೊಡ್ಡೆತ್ತಿನವರು
೭೨. ದೊರೆಲವರು
೭೩. ನಗರಿಮನೆರು
೭೪. ನಲ್ಲಕ್ಕರಿಯವರು
೭೫. ನಲ್ಲಕೇತ್ಲವರು
೭೬. ನಲ್ಲಬೋದ್ಲವರು
೭೭. ನಾಗರತಕರು
೭೮. ನಾರಪೋರರು
೭೯. ನೀರಗಂಟಿಯವರು
೮೦. ಪಟ್ಟಪಲ್ಲಾರು

೮೧. ಪರಮೇಶಿಗಲವರು
೮೨. ಪಾಪನವರು
೮೩. ಪಾಮುಡ್ಲವರು
೮೪. ಪಾಲೋರು
೮೫. ಪುಟಗೋಸಿಯವರು
೮೬. ಪುಲೋರು
೮೭. ಪೆನ್ನಯ್ಯಲೋರು
೮೮. ಪೆದ್ದನ್ನರು
೮೯. ಪೆದ್ದಳ್ಳನಾಯ್ಕರು
೯೦. ಪೊಟ್ಟಪೊಲ್ಲಲೋರು
೯೧. ಪೋತರಾಜಲರು
೯೨. ಬಂಗೇರಹಟ್ಟಿಯವರು
೯೩. ಬಂಜಗೆರೆಯವರು
೯೪. ಬಲ್ಲಾಳವರು
೯೫. ಬಲ್ಲೆದವರು
೯೬. ಬಸವನವರು
೯೭. ಬಿಜ್ಜಡ್ಲವರು
೯೮. ಬಿಲ್ಲಿನವರು
೯೯. ಬಿಲ್ಲಿನಸೂರರು
೧೦೦. ಬುಟಕಲವರು
೧೦೧. ಬುಡ್ಡಬೋರನರು
೧೦೨. ಬುಲ್ಲಡ್ಲವರು
೧೦೩. ಬೊಗ್ಗಲೋರು
೧೦೪. ಬೊಮ್ಮದೇವರರು
೧೦೫. ಬೋಸೇನಾಯ್ಕರು
೧೦೬. ಮಂದಲವರು
೧೦೭. ಮದಗಟ್ಟಿದವರು
೧೦೮. ಮಲ್ಲಿನಾಯಕನೋರು
೧೦೯. ಮಲ್ಲೋರು
೧೧೦. ಮಸಿಗೇಲವರು
೧೧೧. ಮಳೆಲವರು
೧೧೨. ಮಾಗೇಲವರು
೧೧೩. ಮಾಚಿಕಲ್ಲು ಬುಟಕಲರು
೧೧೪. ಮಾದೇಲಿಂಗನವರು
೧೧೫. ಮಾನಗಲವರು
೧೧೬. ಮಾರಮ್ಮ ಬುಟಕಲರು
೧೧೭. ಮಾಸಲೋರು
೧೧೮. ಮೀನುಗಲವರು
೧೧೯. ಮುಚ್ಚಲವರು
೧೨೦. ಮುದಿಗೊಡ್ಲರು
೧೨೧. ಮೂಡೆಲರು
೧೨೨. ಮೇಕೆಲರು
೧೨೩. ಯಮಡಲವರು
೧೨೪. ಯಮ್ಮೇಲರು
೧೨೫. ಯರಗಾಟನಾಯಕರು
೧೨೬. ಯರಗಾಟರು
೧೨೭. ಯರಗೊತ್ಲಾರು
೧೨೮. ಯರಪಾಮುಡ್ಲವರು
೧೨೯. ಯರಬಾಲನಾಯಕರು
೧೩೦. ಯರಬೊಮ್ಮನವರು
೧೩೧. ಯರ್ರಬೋತ್ಲರು
೧೩೨. ಯರಮಂಚಲವರು
೧೩೩. ಯರಮಂಚನಾಯಕರು
೧೩೪. ಯಾಕಲೋರು
೧೩೫. ರಂಗನಾಥರು
೧೩೬. ರಂಗಯಿಬ್ಬೆಯರು
೧೩೭. ರಾಜಪುತ್ರರು
೧೩೮. ರಾಜಧಾನಿಯವರು
೧೩೯. ರಾಜಬುಟಕಲವರು
೧೪೦. ರಾಜ್ಯಂಗದವರು
೧೪೧. ರಾಣಿಗಳವರು
೧೪೨. ರಾಮಂಕಣದವರು
೧೪೩. ರಾರಪೋರವರು
೧೪೪. ಲಸ್ಮೇಲರು
೧೪೫. ಲಿಂಗದವರು
೧೪೬. ಶೆಟ್ಟಿಲವರು
೧೪೭. ಸನ್ನಲವರು
೧೪೮. ಸಮುದ್ರವರು
೧೪೯. ಸಾಕೇಲವರು
೧೫೦. ಸಾತ್ವಿಕರು
೧೫೧. ಸಾಮಂತರು
೧೫೨. ಸಿನಮಂಗಲವರು
೧೫೩. ಸಿದ್ಧಿಪಲ್ಲಿಬುಟಕಲು
೧೫೪. ಸೂರ್ಯವಂಶದವರು
೧೫೫. ಸೆಟ್ಟೆಲವರು
೧೫೬. ಹಬ್ಬಲವರು
೧೫೭. ಹೊರಹೊರಗಿನವರು

೫.೨. ಕಾಡುಗೊಲ್ಲರ ಬೆಡಗುಗಳು ಅಥವಾ ಕುಲಗಳು

೦೧. ಅಜ್ಜಿಯವರಗೊಲ್ಲರು
೦೨. ಅರಸಿನಕಲ್ಲಿಗೊಲ್ಲರು
೦೩. ಅರೇನವರಗೊಲ್ಲರು
೦೪. ಉಪ್ಪಳರಗೊಲ್ಲರು
೦೫. ಎಗಡಿನವರಗೊಲಲ್ಲರು
೦೬. ಎಗಡಿಮುತ್ತಿನಗೊಲ್ಲರು
೦೭. ಎರಿಯರಗೊಲ್ಲರು
೦೮. ಒಡೆಯವರಗೊಲ್ಲರು
೦೯. ಒನಕೆಯವರಗೊಲ್ಲರು
೧೦. ಓಬೇರಗೊಲ್ಲರು
೧೧. ಕಂಬೇರಗೊಲ್ಲರು
೧೨. ಕಟ್ಟೆಗೇರಗೊಲ್ಲರು
೧೩. ಕರಡಿಗೊಲ್ಲರು
೧೪. ಕರಡಿ ಬುಳ್ಳನಾಯ್ಕಗೊಲ್ಲರು
೧೫. ಕರಿಮುತ್ತಿಗೊಲ್ಲರು
೧೬. ಕಲ್ಲಿಗೊಲ್ಲರು
೧೭. ಕವುಕನಗೊಲ್ಲರು
೧೮. ಕಹಳೆಯರಗೊಲ್ಲರು
೧೯. ಕಳ್ಳಿಗೊಲ್ಲರು
೨೦. ಕಾಳಿನಗೊಲ್ಲರು
೨೧. ಕ್ಯಾತನಾರುಗೊಲ್ಲರು
೨೨. ಕುರಿಯವರಗೊಲ್ಲರು
೨೩. ಕೆಂಗುರಿಗೊಲ್ಲರು
೨೪. ಕೆಂಜೆಡೆಯವರಗೊಲ್ಲರು
೨೫. ಕೆಂಡಗನಗೊಲ್ಲರು
೨೬. ಕೋಣನವರಗೊಲ್ಲರು
೨೭. ಚಂದಮುತ್ತಿಗೊಲ್ಲರು
೨೮. ಚನ್ನೇರಗೊಲ್ಲರು
೨೯. ಚಿತ್ತಮುತ್ತಿಗೊಲ್ಲರು
೩೦. ಚಿತ್ತರಗೊಲ್ಲರು
೩೧. ಚೀರವರಗೊಲ್ಲರು
೩೨. ಜಂಪಾಳರಗೊಲ್ಲರು
೩೩. ಜವಾದಿಗೊಲ್ಲರು
೩೪. ಜಿವಾಜಿಗೊಲ್ಲರು
೩೫. ತೋಳಯಾನೆನಗೊಲ್ಲರು
೩೬. ದೇವರೋರಗೊಲ್ಲರು
೩೭. ನಂದಿಹಳ್ಳಿಗೊಲ್ಲರು
೩೮. ನೆರನರಗೊಲ್ಲರು
೩೯. ಪಜುಗಾವಲರಗೊಲ್ಲರು
೪೦. ಪದಗೊಲ್ಲರು
೪೧. ಪನ್ನೇರಗೊಲ್ಲರು
೪೨. ಪಲ್ಲೇರಗೊಲ್ಲರು
೪೩. ಪೊಲ್ಲೊರಗೊಲ್ಲರು
೪೪. ಬಸಗೊಳಲರಗೊಲ್ಲರು
೪೫. ಬಾಲೇನವರಗೊಲ್ಲರು
೪೬. ಬುಗುಡಿನವರಗೊಲ್ಲರು
೪೭. ಬೆಳ್ಳೋರಗೊಲ್ಲರು
೪೮. ಬೊಮಮ್ಮವರಗೊಲ್ಲರು
೪೯. ಮಳಿನಾರಗೊಲ್ಲರು
೫೦. ಮಾಜುಲವರಗೊಲ್ಲರು
೫೧. ಮಾನೋನುಗೊಲ್ಲರು
೫೨. ಮಾರನವರಗೊಲ್ಲರು
೫೩. ಮಾಸಿನವರಗೊಲ್ಲರು
೫೪. ಮುದ್ದಾರುಗೊಲ್ಲರು
೫೫. ಮೇರೆನವರಗೊಲ್ಲರು
೫೬. ಮೆರಿಯೋರಗೊಲ್ಲರು
೫೭. ಮೇಶಿಯೋರಗೊಲ್ಲರು
೫೮. ರಾಮೇಗೌಡನರಗೊಲ್ಲರು
೫೯. ರಾಶಿನವರಗೊಲ್ಲರು
೬೦. ಸನ್ನಮುತ್ತಿಗೊಲ್ಲರು
೬೧. ಸನ್ನರಗೊಲ್ಲರು
೬೨. ಸಣ್ಣೇರಗೊಲ್ಲರು
೬೩. ಸೀಲುವಾಡಿಗೊಲ್ಲರು
೬೪. ಸೋಮನರಗೊಲ್ಲರ
೬೫. ಸೋಮುತ್ತಿಗೊಲ್ಲರು
೬೬. ಹಟ್ಟಿಗೊಲ್ಲರು
೬೭. ಹಬ್ಬುಗೊಲ್ಲರು
೬೮. ಹಬ್ಲೊಳರಗೊಲ್ಲರ
೬೯. ಹರೆನೋರಗೊಲ್ಲರ
೭೦. ಹುರುಳಿಯವರಗೊಲ್ಲರ
೭೧. ಹೂವಿನಾರುಗೊಲ್ಲರು
೭೨. ಹೆಗ್ಗಣವರಗೊಲ್ಲರ
೭೩. ಹೊನ್ನೇರಗೊಲ್ಲರ

೬. ರಕ್ತ ಸಂಬಂಧ

'ಕಣ್ಣರಿಯದಿದ್ದರೂ ಕಳ್ಳರಿಯುತ್ತದೆ' ಎಂಬ ಜನಪದರ ಮಾತಿನಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲ

ಸಮುದಾಯದಲ್ಲಿ ಕರುಳುಬಳ್ಳಿ ಅಥವಾ ರಕ್ತ ಸಂಬಂಧಿಗಳಿಗೆ ಬಹಳ ಪ್ರಾಮುಖ್ಯತೆಯಿದೆ. ಈ ಎರಡು ಬುಡಕಟ್ಟುಗಳಲ್ಲಿ ಪಿತೃ ಪ್ರಧಾನ ಕುಟುಂಬಗಳು ಕಂಡು ಬರುವುದರಿಂದ ತಂದೆಯ ಮೂಲಕವೇ ರಕ್ತ ಸಂಬಂಧವನ್ನು ಗುರುತಿಸಿ ಕೊಳ್ಳುತ್ತಾರೆ. ತಂದೆಯ ನಂತರ ಗಂಡು ಸಂತತಿಯ ಮೂಲಕ ಕುಟುಂಬ, ವಂಶ, ಕುಲ, ಗೋತ್ರ, ಮನೆದೇವರು, ವಂಶಾವಳಿ, ಏಕರಕ್ತ ಸಂಬಂಧ, ವಿವಾಹ ಮೊದಲಾದ ಸಾಮಾಜಿಕ ಅಂಶಗಳು ರಕ್ತ ಸಂಬಂಧದ ಆಧಾರದ ಮೇಲೆಯೆ ರಚಿತವಾಗಿರುತ್ತವೆ. ತಂದೆ-ತಾಯಿ, ಅಕ್ಕ-ತಂಗಿ, ಅಣ್ಣ-ತಮ್ಮ, ಚಿಕ್ಕಪ್ಪ-ದೊಡ್ಡಪ್ಪ, ಅತ್ತೆ-ಮಾವ ಮುಂತಾದವರ ಸುತ್ತ ಕುಟುಂಬ ಮತ್ತು ರಕ್ತ ಸಂಬಂಧ ಕೇಂದ್ರೀಕೃತವಾಗಿರುತ್ತದೆ. ನಾವೆಲ್ಲರೂ ಒಂದೇ ರಕ್ತ ಸಂಬಂಧಿಗಳು, ಒಡನಾಡಿಗಳು, ಕುಟುಂಬದವರು, ವಂಶದವರು, ನೆಂಟರು, ಅಣ್ಣ ತಮ್ಮ ಗಳು ಎಂಬ ಅಭಿಮಾನ ಈ ಬುಡಕಟ್ಟು ಸಮೂಹಗಳಲ್ಲಿ ಪ್ರಧಾನವಾಗಿರುತ್ತದೆ.

ಒಂದು ಸಮೂಹ ಅಥವಾ ಹಟ್ಟಿಯ ಸದಸ್ಯರೆಲ್ಲರೂ ರಕ್ತ ಸಂಬಂಧಿಗಳೇ ಆಗಿರುವುದರಿಂದ ಅವರಲ್ಲಿ ಪ್ರೀತಿ, ವಿಶ್ವಾಸಗಳಿಂದ ಕೂಡಿದ ಸಹಕಾರ ಮತ್ತು ಸಂಬಂಧಗಳು ಬೆಳೆದಿರುತ್ತವೆ. ಬಹು ಹಿಂದೆ ಗ್ರಾಮಾಂತರ ಪ್ರದೇಶದ ಅವಿಭಕ್ತ ಕುಟುಂಬಗಳಲ್ಲಿ ಒಗ್ಗಟ್ಟು ಮತ್ತು ಐಕ್ಯತೆ ಮೂಡಲು ರಕ್ತ ಸಂಬಂಧವೇ ಮುಖ್ಯ ಕಾರಣವಾಗಿತ್ತು. ವೈವಾಹಿಕ ಸಂಬಂಧಗಳನ್ನು ಬೆಳೆಸುವಾಗ ಒಳಪಂಗಡ ವಿವಾಹ ಅಥವಾ ಒಳಬಾಂಧವ್ಯ ವಿವಾಹ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಅಂತರ್ಜಾತೀಯ ವಿವಾಹಕ್ಕೆ ಇವರಲ್ಲಿ ಅವಕಾಶವಿಲ್ಲ. ಹತ್ತಿರದ ರಕ್ತ ಸಂಬಂಧದಲ್ಲಿ 'ತೆರ' ಕೊಟ್ಟು ಹೆಣ್ಣು ತರುತ್ತಾರೆ. ಆದರೂ ಬಾಲ್ಯ ವಿವಾಹ ಪದ್ಧತಿ ಇವರಲ್ಲಿ ಕಂಡು ಬರುವುದಿಲ್ಲ. ಏಕ ಪತ್ನಿತ್ವ ಮತ್ತು ಬಹುಪತ್ನಿತ್ವ ವಿವಾಹ ಪದ್ಧತಿ ಆಚರಣೆಯಲ್ಲಿದ್ದರೂ ಏಕ ಪತ್ನಿತ್ವಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ತಂದೆಯಷ್ಟೇ ಗೌರವ ಸೋದರತ್ತೆಗೆ ಕೊಡುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ. ತಾಯಿ ಸತ್ತ ತಬ್ಬಲಿ ಮಕ್ಕಳಿಗೆ 'ಸೋದರತ್ತೆಯೆ ತಾಯಿ' ಎಂಬ ಮಾತು ರಕ್ತ ಸಂಬಂಧದ ಪ್ರಧಾನತೆಯನ್ನು ತೋರಿಸುತ್ತದೆ. 'ಕರುಳು ಚುರುಕ್' ಎಂದಾಗ ಮಾತ್ರ ಕಣ್ಣಲ್ಲಿ ನೀರು ಬರುತ್ತವೆ; ಎಂಬ ವೈಜ್ಞಾನಿಕ ಸತ್ಯ ರಕ್ತ ಸಂಬಂಧದ ಮಹತ್ವವನ್ನು ತಿಳಿಸುತ್ತದೆ. ಕುಲ ಗೋತ್ರಗಳು ಬೇರೆಯಾದರೂ ಮೂಲತಃ ಒಂದೇ ಕುಟುಂಬದ ರಕ್ತ ಸಂಬಂಧಿಗಳಂತೆ ಬಾಳಿ ಬದುಕುವ ಸಂಸ್ಕೃತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಾಣಬಹುದು.

ಬುಡಕಟ್ಟು ಸಮುದಾಯಗಳ ಜೀವನ ಸಂಘಟನೆಯಲ್ಲಿ ರಕ್ತ ಸಂಬಂಧವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಗೊಲ್ಲರಹಟ್ಟಿಯ ಕಾಟಮ್ಮಲಿಂಗೇಶ್ವರ ಮತ್ತು ಜುಂಜಪ್ಪನ ದೊಡ್ಡ ಜಾತ್ರೆ ಮಾಡುವಾಗ ಅಣ್ಣ-ತಮ್ಮಗಳು ಮೀಸಲು ಹಾಲು ತಂದು ದೇವರ ಗುಡಿಯಲ್ಲಿ ಕಾಯಿಸಿ ಹಾಲಿಗೆ ಹೆಪ್ಪು ಹಾಕುವುದಕ್ಕೆ, ನೆಂಟರ ಮನೆಯಿಂದ ಮಜ್ಜಿಗೆ ಅಥವಾ ಮೊಸರು ತಂದು ಹೆಪ್ಪು ಹಾಕುತ್ತಾರೆ. ಅಂದರೆ ಅಣ್ಣ-ತಮ್ಮಂದಿರು ಹಬ್ಬ-ಜಾತ್ರೆ ಮಾಡುವಾಗ 'ನೆಂಟರು' ಸಹ ಬಂದು ಸೇರಲಿ ಎಂಬುದೇ 'ಹೆಪ್ಪಾಕುವುದರ' ಪ್ರಮುಖ ಉದ್ದೇಶ. ಜೊತೆಗೆ ಸಪಿಂಡ ಅಥವಾ ಒಂದೇ ಕುಲದಲ್ಲಿ ವಿವಾಹ ಪದ್ಧತಿ ಆಚರಿಸಬಾರದೆಂಬ ಎಚ್ಚರಿಕೆಯ ಗಂಟೆಯೂ ಇದಾಗಿದೆ. ಕೆಲವೊಂದು ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ಹಟ್ಟಿಯಿಂದ ಹೊರಗೆ ಹೆಣ್ಣು ಕೊಡುವುದಾಗಲಿ ಅಥವಾ ತರುವುದಾಗಲಿ ನಿಷಿದ್ಧವಾಗಿತ್ತು. ಆದರೆ ಈಗ ಬದಲಾಗಿದೆ. ಪ್ರಾಚೀನ

ಭಾರತೀಯ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ ಅಸ್ಥಿತ್ವಕ್ಕೆ ಬಂದಿದ್ದು ಈ ರಕ್ತ ಸಂಬಂಧವು ಒಂದು ಕಾರಣವಾಗಿದೆ. ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳುವಂತೆ, ಹಿರಿಯ ಯಜಮಾನರು ಸಾಯುವುದರೊಳಗೆ ಮಕ್ಕಳ ಮದುವೆ ಮಾಡಬೇಕೆಂಬ ತತ್ವವೂ ಕೂಡ ರಕ್ತ ಸಂಬಂಧದ ಮಹತ್ವವನ್ನು ತೋರಿಸುತ್ತದೆ.

ಮಾನವನ ಹಕ್ಕುಗಳು ಸ್ಥಾನಮಾನಗಳು ಮತ್ತು ಕರ್ತವ್ಯಗಳು ರಕ್ತ ಸಂಬಂಧದಿಂದ ನಿರ್ಧರಿಸಲ್ಪಡುತ್ತವೆ. ಹುಟ್ಟು, ಸಾವು ಮತ್ತು ಬದುಕು ಈ ಮೂರರಲ್ಲಿಯೂ ರಕ್ತ ಸಂಬಂಧದ ಭಾವನೆಗಳು ಪ್ರಧಾನವಾಗಿರುತ್ತವೆ. ಮಕ್ಕಳ ನಾಮಕರಣದಲ್ಲಿ ಸೋದರತ್ತೆ ತೊಟ್ಟಿಲು ಪೂಜೆ ಮಾಡುವುದು, ಸೋದರಮಾವ ಹೇಲ ಗುಗ್ಗರಿ ಕಟ್ಟಿ ಮಗುವಿಗೆ ಹೆಸರಿಡುವುದು, ಹೆಣ್ಣು ಮೈನೆರೆತಾಗ ಸೋದರಮಾವ ಹಸಿರು ಗುಡ್ಲು ಕಟ್ಟುವುದು, ಜವಳ ತೆಗೆಸುವಾಗ ತವರು ಮನೆಯವರು ಉಡುಗೊರೆ ತರುವುದು, ವಿವಾಹದಲ್ಲಿ ಸೋದರಮಾವನಿಗೆ ಪ್ರಥಮ ಅದ್ಯತೆ ಕೊಡುವುದು. ಕುಟುಂಬದಲ್ಲಿ ಯಾರಾದರೂ ಮರಣ ಹೊಂದಿದಾಗ ನೆಂಟರು ಹೊಸಬಟ್ಟೆ ತಂದು ಹಾಕುವುದು, ಶುಭಕಾರ್ಯದಲ್ಲಿ ಕುಲದ ಮುಖ್ಯಸ್ಥರಿಗೆ ಮಹತ್ವ ಕೊಡುವುದು, ಹಬ್ಬ ಮತ್ತು ಜಾತ್ರೆಗಳಲ್ಲಿ ಎಲ್ಲರೂ ಒಟ್ಟಿಗೆ ಸೇರುವುದು, ಕಷ್ಟ ಸುಖಗಳಲ್ಲಿ ಭಾಗಿಯಾಗುವುದು ಮೊದಲಾದ ಅಂಶಗಳು ಕೂಡ ಈ ಜನಾಂಗದ ರಕ್ತ ಸಂಬಂಧದ ಮಹತ್ವವನ್ನು ತೋರಿಸುತ್ತವೆ.

ವೈಯುಕ್ತಿಕವಾಗಿ ಎಷ್ಟೇ ದ್ವೇಷ ಅಸೂಯೆಗಳಿದ್ದರು ಸಾವು ನೋವಿನಲ್ಲಿ ಹತ್ತಿರ ಬರುವ ವ್ಯಕ್ತಿಗಳೆಂದರೆ ರಕ್ತ ಸಂಬಂಧಿಗಳು. ಈ ರಕ್ತ ಸಂಬಂಧದ ಆಧಾರದ ಮೇಲೆಯೆ ಕುಟುಂಬದ ಆಂತರಿಕ ಮತ್ತು ಬಾಹ್ಯ ಸಂಬಂಧಗಳು ಬೆಳೆಯಲು ಸಾಧ್ಯ. ಮಾನವನ ಅಭಿಲಾಷೆಗಳಾದ ಕುಟುಂಬದ ಸ್ಥಾಪನೆಗೆ ಮತ್ತು ವಂಶಾವಳಿಯನ್ನು ಮುಂದುವರೆಸಿಕೊಂಡು ಹೋಗಲು ರಕ್ತ ಸಂಬಂಧವು ಸಹಕಾರಿಯಾಗಿದೆ. ಇತರ ಸಾಮಾಜಿಕ ಸಂಬಂಧಗಳಂತೆ ರಕ್ತ ಸಂಬಂಧವು ಕೂಡ ಸಮುದಾಯದಲ್ಲಿಯೇ ಏರ್ಪಡುತ್ತವೆ. ಆದ್ದರಿಂದಲೇ ಈ ಎರಡು ಬುಡಕಟ್ಟು ಸಮುದಾಯಗಳಲ್ಲಿ ರಕ್ತ ಸಂಬಂಧದ ಪಾತ್ರ ಅಪಾರವಾಗಿದೆ.

ಮೂಲತಃ ಒಂದೇ ಬುಡಕಟ್ಟುಗಳಾಗಿದ್ದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕಾಲಾಂತರದಲ್ಲಿ ಕಾರಣಾಂತರಗಳಿಂದಾಗಿ ವಿಭಜನೆ ಹೊಂದಿವೆ. "ಶ್ರೀ ಕೃಷ್ಣ ಪರಮಾತ್ಮನು ಯಾದವ ವಂಶದವನು, ಯಾದವರಿಗೂ ಬೇಡರಿಗೂ ಯಾವ ಭೇದವಿಲ್ಲ, ಯಾದವರೂ ಬೇಡರು ಒಂದೇ ತಂದೆಯ ಮಕ್ಕಳಾಗಿದ್ದು ಕಾರಣಾಂತರಗಳಿಂದ ಬೇರೆ ಬೇರೆಯಾಗಿ, ಗೊಲ್ಲರು ಬೇಡರು ಎಂಬುದಾಗಿ ಕರೆಸಿಕೊಂಡರು. ಪಾಂಡವರು ಶ್ರೀ ಕೃಷ್ಣಪರಮಾತ್ಮನ ಸೋದರತ್ತೆಯ ಮಕ್ಕಳು. ಈಗಲೂ ಯಾದವರ ಕುಲಪದ್ಧತಿಗಳಲ್ಲಿ ಬೇಡರ ಕುಲಪದ್ಧತಿಗಳಲ್ಲಿ ಯಾವ ವ್ಯತ್ಯಾಸವು ಇರುವುದಿಲ್ಲ".[೩] ಎಂದು ಹೇಳುವುದರಿಂದ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪರಸ್ಪರ ಅಣ್ಣ ತಮ್ಮಗಳಾಗಿ, ನೆಂಟರಾಗಿ ಬಾಳುತ್ತಿರುವ ಸನ್ನಿವೇಶ ಈ ಹೊತ್ತಿಗೂ ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ಕಾಣಬಹುದಾಗಿದೆ.

೭. ಕುಟುಂಬ ಪದ್ಧತಿ

ಕುಟುಂಬವು ಒಂದು ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಅದು ಅತ್ಯಂತ ಸರಳವಾದ ಹಾಗೂ ಸೂಕ್ಷ್ಮವಾದ ಸಮಾಜವಿದ್ದಂತೆ. ಕುಟುಂಬವಿಲ್ಲದೆ ಸಮಾಜವಿಲ್ಲ. ಅದು ಮಾನವನ ಸಾಮಾಜಿಕ ಜೀವನದ ತಳದಿಹಯಾಗಿದೆ. ಕುಟುಂಬವು ರಾಜ್ಯಕ್ಕಿಂತಲೂ ಪವಿತ್ರವಾದದು ಎಂದು ಪೋಪ್ ಪೈಯಸನ್ ಹೇಳಿದ್ದಾನೆ. ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಕುಟುಂಬವೇ, ಉಳಿದೆಲ್ಲ ಸಂಸ್ಥೆಗಳಿಗಿಂತ ಇದು ಹೆಚ್ಚು ಶಾಶ್ವತವೂ, ಪ್ರಭಾವಿಯೂ ಆಗಿರುತ್ತದೆ. ಮಾನವನ ವ್ಯಕ್ತಿತ್ವ ಬೆಳೆಸುವ ಮೊದಲ ಸಂಸ್ಥೆ ಎಂದರೆ ಕುಟುಂಬವೆನ್ನಬಹುದು. ಮಾನವ ಶಿಶುವಿನಷ್ಟು ಅಸಹಾಯಕ ಜೀವಿ ಬೇರೊಂದಿಲ್ಲ. ಅದನ್ನು ರಕ್ಷಿಸಿ, ಪೋಷಿಸಿ, ಅಭಿವೃದ್ಧಿ ಪಡಿಸುವ ಹಿರಿಯ ಜವಾಬ್ದಾರಿ ಕುಟುಂಬದ ಮೇಲೆ ಬಿದ್ದಿದೆ. ತಾಯಿ ಮಕ್ಕಳ ನಡುವಣ ಜೈವಿಕ ಸಂಬಂಧ, ಕುಟುಂಬ ರಚನೆಗೆ ಪ್ರೇರಣೆ ಎನ್ನಲಾಗಿದೆ. ಮಗುವಿನ ಸಾಮಾಜೀಕರಣ ಕ್ರಿಯೆಯಲ್ಲಿ ತಾಯಿ ಪ್ರಧಾನ ಪಾತ್ರವಹಿಸುತ್ತಾಳೆ. ಅಲ್ಲದೆ ತಂದೆ ತಾಯಿಯರು ತಮ್ಮ ಮಕ್ಕಳಿಗೆ ಅಧಿಕಾರಯುತವಾಗಿಯೂ, ಪ್ರೀತಿ ವಿಶ್ವಾಸ ಗಳಿಂದಲೂ ಸಾಮಾಜೀಕರಣಕ್ಕೆ ಒಳಪಡಿಸುತ್ತಾರೆ. ಸಾಮಾಜೀಕರಣವು ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುವ ಕ್ರಿಯೆಯಾಗಿದೆ. ಹಿರಿಯರನ್ನು ಗೌರವಿಸುವುದು, ರೂಢಿ-ಸಂಪ್ರದಾಯಬದ್ಧತೆ, ಆಚಾರ ವಿಚಾರಗಳನ್ನು ಪಾಲಿಸುವುದು, ನೈತಿಕ ನಿಯಮಗಳನ್ನು ಪರಿಚಯ ಮಾಡಿಕೊಳ್ಳುವುದು ಮುಂತಾದ ಕ್ರಿಯೆಗಳನ್ನು ಕುಟುಂಬ ಅತ್ಯಂತ ಸರಳವಾಗಿ, ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತದೆ.

ಮಾನವನ ಬಹುಮುಖ್ಯ ಮೂರು ಅವಶ್ಯಕತೆಗಳಾದ 'ಲೈಂಗಿಕ ತೃಪ್ತಿ' 'ಸಂತಾನಾಭಿಲಾಷೆ' ಮತ್ತು 'ಆರ್ಥಿಕ ಬಯಕೆ'ಗಳನ್ನು ನಿರ್ಧಿಷ್ಟ ರೀತಿಯಲ್ಲಿ ಪೂರೈಸಿಕೊಳ್ಳಲು ಮತ್ತು ನಿಯಂತ್ರಿಸಿಕೊಳ್ಳಲು ಕುಟುಂಬ ಸಹಾಯ ಮಾಡುತ್ತದೆ. ಕುಟುಂಬ ಚಿಕ್ಕದಾದ ಸಮಾಜಿಕ ಘಟಕವಾಗಿದ್ದು, ತಂದೆ, ತಾಯಿ ಮತ್ತು ಮಕ್ಕಳಿಂದ ಕೇಂದ್ರಿಕೃತ ವಾಗಿರುತ್ತದೆ. ಮಗುವಿನ ಜನನಕ್ಕೆ ಇದು ಪ್ರಥಮ ಸಾಮಾಜಿಕ ಪರಿಸರವಾಗುತ್ತದೆ. ಅನೇಕ ಸಮಾಜಶಾಸ್ತ್ರಜ್ಞರು 'ಕುಟುಂಬ'ವನ್ನು ಕುರಿತು ವಿವಿಧ ವ್ಯಾಖ್ಯೆಗಳನ್ನು ಕೊಟ್ಟಿದ್ದಾರೆ. ಸಮ್ನರ್ ಮತ್ತು ಕಲ್ಲರ್ ಪ್ರಕಾರ 'ರಕ್ತ ಸಂಬಂಧಿಗಳಿಂದ ಕೂಡಿದ ಮತ್ತು ಕನಿಷ್ಟ ಎರಡು ತಲೆಮಾರುಗಳನ್ನು ಒಳಗೊಂಡಿರುವ ಅತಿ ಸೂಕ್ಷ್ಮ ಸಾಮಾಜಿಕ ಸಂಘಟನೆಯೇ ಕುಟುಂಬ' ಎಂದಿದ್ದಾರೆ. ಇಲಿಯಟ್ ಮತ್ತು ಮೆರಿಲ್‌ರವರು ಕುಟುಂಬವು ಜೈವಿಕ ಘಟಕವಾಗಿದ್ದು ಗಂಡ, ಹೆಂಡತಿ ಮತ್ತು ಮಕ್ಕಳನ್ನು ಒಳಗೊಂಡಿರುತ್ತದೆ. ಎಂದಿದ್ದಾರೆ. ಎಂ.ಎಫ್. ನಿಮ್‌ಕಾಫ್ ರವರು 'ಮಕ್ಕಳಿರುವ ಅಥವಾ ಇಲ್ಲದ ಗಂಡ ಹೆಂಡತಿಯರ ಶಾಶ್ವತ ಸಂಘುವೆಂದೂ ಅಥವಾ ಪುರುಷ ಅಥವಾ ಸ್ತ್ರೀಯು ಮಾತ್ರ ಮಕ್ಕಳೊಂದಿಗೆ ಇರುವ ಘಟಕವೆಂದು' ಹೇಳಿದ್ದಾರೆ. ಅದೇ ರೀತಿ ಬರ್ಗೆಸ್‌ಮತ್ತು ಲಾಕರವರು 'ಕುಟುಂಬದಲ್ಲಿ ಒಂದು ಸಮೂಹದ ಜನರು ವಿವಾಹ, ರಕ್ತ ಸಂಬಂಧ ದತ್ತು ಸ್ವೀಕಾರದಿಂದ ಒಂದೆಡೆ ವಾಸವಾಗಿದ್ದು, ಅಂತರಿಕ ಕ್ರಿಯೆ ಮತ್ತು ಸಂಪರ್ಕ ವಿಧಾನಗಳಲ್ಲಿ ಗಂಡ-ಹೆಂಡತಿ, ತಂದೆ-ತಾಯಿ, ಮಗ-ಮಗಳು, ಸೋದರ-ಸೋದರಿ ಸಂಬಂಧದಿಂದ ಏಕರೂಪದ ಸಂಸ್ಕೃತಿಯನ್ನು ಪಡೆದಿರುತ್ತಾರೆ' ಎಂದು ಹೇಳಿದ್ದಾರೆ. ಆದ್ದರಿಂದ ಕುಟುಂಬವು ಸಮಾಜದ ಮೂಲಭೂತ ಘಟಕವಾಗಿರುತ್ತದೆ. ಮಾನವರೆಲ್ಲರೂ ಕುಟುಂಬ ವರ್ಗಕ್ಕೆ

ಸೇರಿದವರಾಗಿರುತ್ತಾರೆ. ಇದು ಜೈವಿಕ ಘಟಕವಾಗಿದ್ದು, ಸಂಸ್ಥಾರೂಪದಲ್ಲಿ ಗಂಡ ಹೆಂಡತಿಯರಲ್ಲಿ ಲೈಂಗಿಕ ಬಾಂಧವ್ಯವನ್ನು ರೂಪಿಸುತ್ತದೆ. ಇದು ವಿಶ್ವವ್ಯಾಪಕತ್ವದ ಗುಣಲಕ್ಷಣಗಳನ್ನು ಹೊಂದಿ ಸಮಾಜದ ಎಲ್ಲಾ ಪ್ರಕಾರಗಳಲ್ಲೂ 'ಸಂಸ್ಥೆ'ಯಾಗಿ ಕಾರ್ಯನಿರ್ವಹಿಸುತ್ತದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಪಿತೃಪ್ರಧಾನ ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ಕಂಡು ಬರುತ್ತವೆ. ಕುಟುಂಬದ ಪ್ರತಿಯೊಂದು ಆಗು-ಹೋಗುಗಳನ್ನು ಹೆಚ್ಚಾಗಿ ಪುರುಷರೇ ನೋಡಿಕೊಳ್ಳುತ್ತಾರೆ. ತಂದೆಯ ನಂತರ ಕುಟುಂಬದ ಹಿರಿಯ ಮಗ ಮನೆಯ ಯಜಮಾನನಾಗುತ್ತಾನೆ. ಉಳಿದ ಕುಟುಂಬದ ಸದಸ್ಯರೆಲ್ಲರೂ ಈತನಿಗೆ ಅಧೀನರಾಗಿರುತ್ತಾರೆ. ಕುಟುಂಬದ ಸಂಪೂರ್ಣ ಆಡಳಿತವು ಈತನ ಮಾರ್ಗದರ್ಶನದಲ್ಲಿಯೇ ಮುಂದುವರೆಯುತ್ತದೆ. ಕುಟುಂಬದ ಮುಖ್ಯಸ್ಥನಿಗೆ 'ಯಜಮಾನ' ಎಂದು ಕರೆಯಲ್ಪಡುವ ಅವನು ಕುಟುಂಬದ ಸಮಸ್ತ ಸದಸ್ಯರ ಯೋಗಕ್ಷೇಮಕ್ಕೆ ಜವಾಬ್ದಾರನಾಗಿರುತ್ತಾನೆ. ಕುಟುಂಬದ ಆಸ್ತಿ ಸಾಮೂಹಿಕವಾಗಿರುತ್ತದೆ. ತಂದೆ-ತಾಯಿ ಮರಣ ಹೊಂದಿದ ನಂತರ ಅಣ್ಣ ತಮ್ಮಗಳಲ್ಲಿ ಹೊಂದಾಣಿಕೆ ಇಲ್ಲದಿದ್ದಾಗ ಆಸ್ತಿಯನ್ನು ಪಾಲು ಮಾಡಿಕೊಳ್ಳುತ್ತಾರೆ. ಆದರೆ ಒಡಹುಟ್ಟಿದ ಅಣ್ಣ, ತಮ್ಮಗಳಲ್ಲಿ ಪರಸ್ಪರ ಹೊಂದಾಣಿಕೆಗಳು ಕಂಡುಬರುತ್ತವೆ. ಆದ್ದರಿಂದಲೇ ಮಾರ್ಕ್‌ಜೆಫರ್ ಸನ್ ಎಂಬಾತನು 'ನನ್ನ ಜೀವನ ಅತ್ಯಂತ ಆನಂದದಾಯಕ ಕ್ಷಣಗಳನ್ನು ನಾನು ನನ್ನ ಕುಟುಂಬದ ಮಡಿಲಿನಲ್ಲಿ ಮಾತ್ರ ಕಳೆದಿದ್ದೇನೆ' ಎಂದು ಅತ್ಯಂತ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಹತ್ತಿರದ ರಕ್ತ ಸಂಬಂಧಗಳಲ್ಲಿ ವಿವಾಹ ಏರ್ಪಡಿಸುತ್ತಾರೆ. ಏಕಪತ್ನಿತ್ವ ಮತ್ತು ಬಹುಪತ್ನಿತ್ವ ವಿವಾಹ ಪದ್ಧತಿಗಳು ಕಂಡು ಬಂದರೂ ಏಕಪತ್ನಿತ್ವ ವಿವಾಹ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಕನ್ಯಾ ಶುಲ್ಕ ಅಥವಾ 'ತೆರ' ಕೊಟ್ಟು ಹೆಣ್ಣು ತರುವ ಸಂಪ್ರದಾಯವಿದೆ. ವರದಕ್ಷಿಣೆ ಪದ್ಧತಿ ಆಚರಣೆಯಲ್ಲಿಲ್ಲ. ಆದರೂ ಕೆಲವು ಪ್ರದೇಶಗಳಲ್ಲಿಕಂಡುಬರುತ್ತದೆ. ವಿವಾಹದ ನಂತರ ಹೆಣ್ಣು ತನ್ನ ಗಂಡನ ಮನೆಯಲ್ಲಿ ವಾಸಿಸುತ್ತಾಳೆ. ಅಂತರ್ಜಾತಿ ವಿವಾಹಕ್ಕೆ ಇವರ ಕುಟುಂಬಗಳಲ್ಲಿ ಅವಕಾಶವಿಲ್ಲ. ವಿಧವಾ ವಿವಾಹ ಅಥವಾ ಕೂಡಿಕೆ ವಿವಾಹ ಪದ್ಧತಿಗಳು ಈ ಎರಡೂ ಜನಾಂಗದಲ್ಲಿ ಕಂಡು ಬರುವುದಿಲ್ಲ. ಬೇರೆ ಬೇರೆ ಕುಲದಿಂದ ಬಂದಿದ್ದ ಅಣ್ಣ ತಮ್ಮಂದಿರ ಹೆಂಡತಿಯರು ಅಕ್ಕ ತಂಗಿಯರಂತೆ ಇವರ ಕುಟುಂಬಗಳಲ್ಲಿ ಬಾಳುತ್ತಾರೆ. ಯಾವುದೇ ಕಾರಣಕ್ಕೂ ಮೂರು 'ಕುಲ'ಗಳಿಂದ ಹೆಣ್ಣು ತರುವುದಾಗಲಿ ಅಥವಾ ಕೊಡುವುದಾಗಲಿ ಮಾಡುವುದಿಲ್ಲ. ಹಿರಿಯ ಸೊಸೆಗೆ ಕುಟುಂಬದಲ್ಲಿ ಬಹಳ ಗೌರವವಿದೆ. ಯಾವುದೇ ಶುಭ ಕಾರ್ಯಗಳಲ್ಲಿ ಹಿರಿಯ ಮಗ ಮತ್ತು ಸೊಸೆಗೆ ಮೊದಲ ಆದ್ಯತೆ ಕೊಡುತ್ತಾರೆ. ಬಹು ಹಿಂದೆ 'ಬಾಲ್ಯವಿವಾಹ' ಹಾಗೂ 'ಸತಿಸಹಗಮನ' ಪದ್ಧತಿ ಅಸ್ತಿತ್ವದಲ್ಲಿದ್ದವಂತೆ. ಆದರೆ ಪ್ರಸ್ತುತ ಈ ಅನಿಷ್ಟ ಪದ್ಧತಿಗಳು ಇವರ ಕುಟುಂಬದಲ್ಲಿ ಕಂಡು ಬರುವುದಿಲ್ಲ.

ಕೃಷಿ ಪ್ರಧಾನ ಹಟ್ಟಿಗಳಲ್ಲಿ ಅವಿಭಕ್ತ ಕುಟುಂಬಗಳು, ಕೂಲಿ ಕಾರ್ಮಿಕರಾಗಿ ದುಡಿಯುವ ಹಟ್ಟಿಗಳಲ್ಲಿ ವಿಭಕ್ತ ಕುಟುಂಬಗಳು ಕಂಡು ಬರುತ್ತವೆ. ಪಶುಪಾಲನೆ ಮತ್ತು ವ್ಯವಸಾಯ ವೃತ್ತಿಗಳಲ್ಲಿ ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಕೂಡಿ ದುಡಿಯುತ್ತಾರೆ. ಮನೆ ಕೆಲಸ ಹೊಲ ಗದ್ದೆಗಳಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚು ಶ್ರಮ ಪಡುತ್ತಾಳೆ. ಕಷ್ಟ-ಸುಖಗಳಲ್ಲಿ ಕುಟುಂಬದ ಎಲ್ಲ ಸದಸ್ಯರು ಭಾಗಿಯಾಗುತ್ತಾರೆ. ಪರಸ್ಪರ ಒಗ್ಗಟ್ಟು, ರಕ್ಷಣೆ

ಐಕ್ಯತೆ, ನಾವು, ನಮ್ಮವರು ಎಂಬ ಭಾವನೆಗಳು ಪ್ರಧಾನವಾಗಿ ಕಂಡುಬರುತ್ತವೆ. ರಕ್ತಸಂಬಂಧಕ್ಕೆ ವಿಶೇಷ ಮಹತ್ವ ಕೊಡುತ್ತಾರೆ. ಕೆಲವೊಂದು ಪ್ರದೇಶದ ಮ್ಯಾಸಬೇಡರ ಮತ್ತು ಕಾಡುಗೊಲ್ಲರ ಕುಟುಂಬಗಳಲ್ಲಿ ೨೫ ರಿಂದ ೫೦ ಜನಸಂಖ್ಯೆ ಇರುವ ಅವಿಭಕ್ತ ಕುಟುಂಬಗಳು, ಹಾಗೆಯೇ ಒಬ್ಬೊಬ್ಬರೇ ವಾಸಿಸುವ 'ಏಕಾತ್ಮಕ ಕುಟುಂಬ' ಮತ್ತು ವಿಭಕ್ತ ಕುಟುಂಬಗಳು ಕಂಡು ಬಂದಿವೆ. ಈ ಎರಡೂ ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗಿದೆ. ಕೆಲವೊಂದು ಕುಟುಂಬಗಳಲ್ಲಿ ಹದಿನಾಲ್ಕು ಮಕ್ಕಳನ್ನು ಹೆತ್ತ ತಾಯಂದಿರು ಕಂಡು ಬರುತ್ತಾರೆ. ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ.

ಈ ಎರಡೂ ಬುಡಕಟ್ಟು ಸಮುದಾಯಗಳ ಕುಟುಂಬದ ಸದಸ್ಯರಲ್ಲಿ ಶ್ರಮ ವಿಭಜನೆಯು ಲಿಂಗ, ವಯಸ್ಸು, ಮತ್ತು ಸದಸ್ಯರ ಅತಂಸ್ತಿಗೆ ತಕ್ಕಂತೆ ಹಂಚಿಕೊಡುತ್ತಾರೆ. ಕಿರಿಯ ಸದಸ್ಯರು ಹಿರಿಯರ ಮಾರ್ಗದರ್ಶನದಂತೆ ನಡೆದುಕೊಳ್ಳುತ್ತಾರೆ. ಪ್ರತಿಯೊಂದು ಕುಟುಂಬಗಳಲ್ಲಿ ಅವರದೇ ಆದಂಥ ರೂಢಿ ಸಂಪ್ರದಾಯಗಳು, ನಂಬಿಕೆ ಆಚರಣೆಗಳು, ವಿಧಿ ವಿಧಾನಗಳು ಕಂಡು ಬರುತ್ತವೆ. ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ಪೂಜಾರಿ ಮತ್ತು ದಾಸಯ್ಯಗಳಿಗೆ ವಿಶೇಷ ಮಹತ್ವ ಕೊಡುತ್ತಾರೆ. ಅತ್ಯಂತ ಸರಳ ಜೀವಿಗಳಾದ ಈ ಎರಡು ಬುಡಕಟ್ಟು ಜನಾಂಗಕ್ಕೆ ದೇವರೆಂದರೆ ಪಂಚಪ್ರಾಣ. ದೇವರು ಮತ್ತು ಧರ್ಮದ ವಿಚಾರವಾಗಿ ಕಟ್ಟುನಿಟ್ಟಾದ ಸಂಪ್ರದಾಯ ಮತ್ತು ನಂಬಿಕೆಗಳು ಕಂಡು ಬರುತ್ತವೆ. ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾರೆ. 'ಕರಿಕಂಬಳಿಗೆ' ಬಹಳ ಮಹತ್ವ ಕೊಟ್ಟು ಶುಭ ಕಾರ್ಯದಲ್ಲಿ ಅದನ್ನು ವಿಶೇಷವಾಗಿ ಬಳಸುತ್ತಾರೆ. ಪ್ರತಿಯೊಂದು ಮನೆಯಲ್ಲಿ ಒಂದಾದರೂ 'ಕರಿಕಂಬಳಿ' ಇದ್ದೇ ಇರುತ್ತದೆ. ಮೂಲತಃ ಮಾಂಸಹಾರಿ ಬುಡಕಟ್ಟುಗಳಾದರೂ ಹಂದಿ, ಕೋಳಿ, ದನದ ಮಾಂಸ ಮತ್ತು ಈಚಲ ಹಣ್ಣನ್ನು ತಿನ್ನುವುದಿಲ್ಲ. ಮನೆಯ ಒಳಗೆ ಈಚಲ ಕಸಬರಿಕೆಯಿಂದ ಕಸ ಗುಡಿಸುವುದಿಲ್ಲ. ಈಚಲ ಚಾಪೆ ಮೇಲೆ ಕುಳಿತುಕೊಳ್ಳುವುದಿಲ್ಲ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳು ಇತ್ತೀಚೆಗೆ ಆರ್ಥಿಕ ಕಾರಣಗಳಿಂದ ಮತ್ತು ಪಾಶ್ಚಾತ್ಯ ನಡೆ ನುಡಿಗಳ ಅನುಕರಣೆಯಿಂದ ಅವಿಭಕ್ತ ಕುಟುಂಬಗಳು ಒಡೆದು ಹೋಗಿ ವಿಭಕ್ತ ಕುಟುಂಬಗಳಾಗಿ ಪರಿವರ್ತನೆಯಾಗುತ್ತಿವೆ. ಕೈಗಾರಿಕೀಕರಣ ಮತ್ತು ನಗರೀಕರಣಗಳ ಪ್ರಭಾವದಿಂದಾಗಿ 'ಹಟ್ಟಿ'ಯ ಕುಟುಂಬಗಳ ಜನಸಂಖ್ಯೆ ಕಡಿಮೆಯಾಗುತ್ತಿದೆ. ಬೇಟೆ, ಪಶುಪಾಲನೆ, ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ನಗರ ಪ್ರದೇಶದ ಮಾರುಕಟ್ಟೆಯಿಂದ ಹಾಲು, ತರಕಾರಿ, ಮಾಂಸ, ದವಸ ಧಾನ್ಯ ಮೊದಲಾದ ಸಾಮಾನುಗಳನ್ನು ತಂದು ಹಟ್ಟಿಗಳಲ್ಲಿ ತಿನ್ನುತ್ತಿದ್ದಾರೆ. ಸಂಪರ್ಕ ಸಮೂಹ ಮಾಧ್ಯಮಗಳ ಪ್ರಭಾವದಿಂದ ಕರಿಕಂಬಳಿ, ಕೈಕಡಗ, ಬದ್ದು, ಚಡ್ಡಿ, ಚಲ್ಲಣ ಕಣ್ಮರೆಯಾಗಿ, ಉಲ್ಲನ್ ರಗ್ಗು, ಪಂಚೆ, ಶ್ಯಾಲು, ಗಡಿಯಾರ, ಪ್ಯಾಂಟು, ಷರಟು, ಚೂಡಿದಾರ ಮತ್ತು ನೈಟಿಗಳು 'ಹಟ್ಟಿ'ಯನ್ನು ಪ್ರವೇಶಿಸುತ್ತಿವೆ. ಕೋಳಿಯ ಶಬ್ದವೇ ಕೇಳದ, ಹಂದಿಯ ಜಾಡು ತುಳಿಯದ, ಈಚಲ ಮರದ ನೆರಳು ಬೀಳದಂಥ ಸುಸಂಸ್ಕೃತ ಜೀವಿಗಳ ಪರಿಸರದಲ್ಲಿ ಅಥವಾ ಹಟ್ಟಿಗಳಲ್ಲಿ 'ಕೋಳಿ ಕೂಗುತ್ತಿವೆ', 'ಹೆಂಡದಂಗಡಿ'ಗಳು ತಲೆ ಎತ್ತಿವೆ. ಹಳೆಯ ಕಾಲದ ನಗ-ನಾಣ್ಯಗಳು ಪಟ್ಟಣ ಸೇರುತ್ತಿವೆ. ನಾಗರಿಕ ಜನರ ಸಂಪರ್ಕದಿಂದ ಬುಡಕಟ್ಟು ಜನಾಂಗದ ಸಂಸ್ಕೃತಿ ಮತ್ತು ಸಂಪ್ರದಾಯಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಕಣ್ಮರೆಯಾಗುತ್ತಿವೆ.

೮. ನ್ಯಾಯ ಪದ್ಧತಿ

'ಪ್ರಾಣಕ್ಕಿಂತ ಮಾನವೇ ಹೆಚ್ಚು'- ಎಂಬ ಸಿದ್ಧಾಂತಕ್ಕೆ ಅಂಟಿಕೊಂಡ ಮ್ಯಾಸಬೇಡರ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ 'ನ್ಯಾಯ ಪದ್ಧತಿ' ಅತ್ಯಂತ ಮಹತ್ವ ಸ್ಥಾನ ಪಡೆದುಕೊಂಡಿದೆ. ಒಂದೊಂದು ಕುಲ ಅಥವಾ ಬೆಡಗುಗಳಿಗೆ ಇರುವ ಹಟ್ಟಿಯ ದೇವಸ್ಥಾನ "ಗುಡಿಕಟ್ಟೆ" ಎನಿಸಿಕೊಂಡರೆ, ಇಂತಹ ಹಲವಾರು 'ಗುಡಿಕಟ್ಟೆ'ಗಳು ಸೇರಿ ಪ್ರಾದೇಶಿಕವಾಗಿ ಒಂದು "ಕಟ್ಟೆಮನೆ" ನಿರ್ಮಾಣವಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಿಗೆ ಮೂರು ಕಟ್ಟೆಮನೆಗಳು, ಹನ್ನೆರಡು ಗುಡಿಕಟ್ಟೆಗಳು; ಅದೇ ರೀತಿ ಕಾಡುಗೊಲ್ಲರಿಗೆ ಮೂರು ಕಟ್ಟೆಮನೆಗಳು, ಐದು ಗುಡಿಕಟ್ಟೆಗಳು ಬಹಳ ಮುಖ್ಯವಾದವುಗಳು. ಎಂಥದ್ದೇ ಮಹಾಪರಾಧಗಳಿದ್ದರೂ ಈ ಎರಡೂ ಬುಡಕಟ್ಟು ಜನಾಂಗ ಕೋರ್ಟು, ಕಛೇರಿಗೆ ಹೋಗುತ್ತಿರಲಿಲ್ಲ. ತಮ್ಮ ನ್ಯಾಯ ನಿರ್ಣಯಗಳನ್ನು 'ಗುಡಿಕಟ್ಟೆ' ಅಥವಾ 'ಕಟ್ಟೆಮನೆ' ಇಲ್ಲವೇ ಗುರುಸ್ಥಾನ ಗಳಲ್ಲಿ ಬಗೆಹರಿಸಿಕೊಳ್ಳಬೇಕಾಗಿತ್ತು. ಸಣ್ಣ ಪುಟ್ಟ ವ್ಯಾಜ್ಯಗಳಿದ್ದರೆ 'ಗುಡಿಕಟ್ಟೆ'ಯಲ್ಲಿ, ಗಂಭೀರ ಅಪರಾಧಗಳಿದ್ದರೆ 'ಕಟ್ಟೆಮನೆ'ಗಳಲ್ಲಿ ಹಾಗೂ 'ಗುರುಸ್ಥಾನ'ಗಳಲ್ಲಿಯೂ ಕೂಡ ನ್ಯಾಯ ತೀರ್ಮಾನ ಮಾಡುತ್ತಿದ್ದರು.

ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನಗಳಲ್ಲಿ ಬಗೆಹರಿಯದಿದ್ದ ವ್ಯಾಜ್ಯಗಳಾಗಿದ್ದರೆ, ಮ್ಯಾಸಬೇಡರ ಮೂರು ಕಟ್ಟೆಮನೆಯ ಯಜಮಾನರು ಒಂದು ಕಡೆ ಸೇರಿ 'ಕಟ್ಟೆ'ಯಲ್ಲಿ ನ್ಯಾಯ ತೀರ್ಮಾನ ಮಾಡುತ್ತಿದ್ದರಂತೆ. ಅತ್ಯಂತ ಪ್ರಾಚೀನ ಕಾಲದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಕೇರಳ ಮತ್ತು ತಮಿಳುನಾಡಿನಲ್ಲಿ ವಾಸಿಸುವ 'ಬೇಡ-ನಾಯಕ'ರಿಗೆ ರಾಯಚೂರು ಕಟ್ಟೆ, ಶಿರಾಕಟ್ಟೆ, ಚಾಪುರಿಕಟ್ಟೆ ಮತ್ತು ಅರೇಸಮುದ್ರ ಕಟ್ಟೆ ಎಂಬ ನಾಲ್ಕು ಕಟ್ಟೆಗಳು ಆಧುನಿಕ ಕಾಲದ 'ಸುಪ್ರೀಮ ಕೋರ್ಟಿನ' ಮಹತ್ವವನ್ನು ಪಡೆದುಕೊಂಡಿದ್ದವಂತೆ. ಮ್ಯಾಸಬೇಡರು ಮೂಲತಃ ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರು ಎಂದು ಹೇಳುವುದರ ಜೊತೆಗೆ "ಪೆನ್ನೋಬಳ ಕಟ್ಟೆಮನೆ, ಅಹೋಬಲ ದೇವರ ಕಟ್ಟೆಮನೆ ಮತ್ತು ಬುಗ್ಗೋಬಳ ದೇವರ ಕಟ್ಟೆಮನೆ. ಇವುಗಳಿಗೆ ಸುರಪತ, ನರಪತಿ, ಗಜಪತಿ, ಎಂಬುದಾಗಿ ದೊರೆಗಳನ್ನು ನೇಮಿಸಿದ್ದರು".[೪] ಅದೇ ರೀತಿ ಹೊರಗಿನ ಕಟ್ಟೆಮನೆಗಳು ಎಂದು ಕರೆಯುವ ರತ್ನಗಿರಿ, ಮಿಡಿಗೇಶಿ, ಶಂಕರಗಲ್ಲು ಎಂಬ ಮೂರು ಕಟ್ಟೆಮನೆಗಳಿಗೆ ಕಸ್ತೂರಿ ಮಲ್ಲಪ್ಪನಾಯಕ, ಮತ್ತಿ ತಿಮ್ಮಣ್ಣನಾಯಕ, ಪದ್ದಮ್ಮಳ್ಳ ನಾಯಕ ಎಂಬ 'ಯಜಮಾನರು'ಗಳು ಇದ್ದರಂತೆ. ಪ್ರತಿಯೊಂದು ನ್ಯಾಯಸ್ಥಾನದ ಹಿರಿಯರನ್ನು 'ಕಟ್ಟೆ ಯಜಮಾನ' ಎಂದು ಕರೆಯುತ್ತಾರೆ. ಪ್ರಸ್ತುತ ಈ ಎಲ್ಲಾ ಕಟ್ಟೆಮನೆಗಳು ಇತಿಹಾಸದ ಕಾಲಗರ್ಭದಲ್ಲಿ ಅಡಗಿ ಹೋಗಿ ಚಿತ್ರದುರ್ಗ ಜಲ್ಲೆಯ ಮ್ಯಾಸಬೇಡರಿಗೆ ಮೂರು ಕಟ್ಟೆಮನೆಗಳು, ಹನ್ನೆರಡು ಗುಡಿಕಟ್ಟೆಗಳು ಮತ್ತು ಒಂದು 'ಗುರುಸ್ಥಾನ' ಮಾತ್ರ ಉಳಿದುಕೊಂಡಿವೆ. ಕಾಡುಗೊಲ್ಲರಿಗೆ ಮೂರು ಕಟ್ಟೆಮನೆಗಳು, ಐದು ಗುಡಿಕಟ್ಟೆಗಳು ಮತ್ತು ಒಂದು 'ಗುರುಸ್ಥಾನ' ಮಾತ್ರ ಉಳಿದು ಕೊಂಡಿವೆ. ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರಸ್ಥಾನದ ಗುರುಗಳು, ಯಜಮಾನ, ದೊರೆ, ಪೂಜಾರಿ, ಗೌಡ ಮೊದಲಾದ ಹುದ್ದೆ ಅಥವಾ ಅಧಿಕಾರ ಅನುವಂಶಿಕವಾಗಿ ಬರುತ್ತಿದ್ದವು.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳು ಒಗ್ಗಟ್ಟು ಮತ್ತು ಐಕ್ಯತೆಯ ದೃಷ್ಟಿಯಿಂದ ತಮ್ಮದೇ

ಆದ ವಿಶಿಷ್ಟ ನ್ಯಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿವೆ. ಯಾವುದೇ ಸಂಘರ್ಷವಾದರೂ ಕೂಡ ಅದು 'ಹಟ್ಟಿ' ಯಿಂದ ಹೊರಗೆ ಹೋಗುವಂತಿರಲಿಲ್ಲ. ಹಟ್ಟಿಯ ಯಜಮಾನರುಗಳಿಂದ ಅದು ತೀರ್ಮಾನವಾಗುತ್ತಿತ್ತು. ಜೊತೆಗೆ ಅವರು ಕೊಟ್ಟ ತೀರ್ಪುಗಳಿಗೆ ಎಲ್ಲಾ ಸದಸ್ಯರು ಕೂಡ ತಲೆಬಾಗುತ್ತಿದ್ದರು. ಈ ಎರಡು ಸಮುದಾಯ ಗಳಲ್ಲಿ ಕಟ್ಟುನಿಟ್ಟಾದ ಒಳಾಡಳಿತ ಪದ್ಧತಿ ಇದ್ದಿದ್ದರಿಂದ ಇವರಲ್ಲಿ ಸಂಘರ್ಷಕ್ಕೆ ಅವಕಾಶವೇ ಇರಲಿಲ್ಲ. ಕೆಲವೊಂದು ಸಂದರ್ಭದಲ್ಲಿ ಯಾವುದಾದರೂ ಮನೆತನದಲ್ಲಿ ಸಂಘರ್ಷ, ಗಂಡ ಹೆಂಡತಿಯರ ಮನಸ್ತಾಪ, ಅಂತರ್ಜಾತಿ ವಿವಾಹ, ಜೈಲಿಗೆ ಹೋಗಿಬಂದರೆ, ಮೆಟ್ಟಿನಿಂದ ಹೊಡೆಸಿಕೊಂಡರೆ, ಕೋಳಿ ತಿಂದರೆ, ಹೆಂಡ ಕುಡಿದರೆ, ಈಚಲ ಹಣ್ಣು ತಿಂದರೆ, ವಿಧವೆ ಅನೈತಿಕ ಸಂಬಂಧ ಮಾಡಿದರೆ, ಶುಭ ಕಾರ್ಯದಲ್ಲಿ ಕುಲಸ್ಥರಿಗೆ ಊಟ ಹಾಕದಿದ್ದರೆ, ಹಟ್ಟಿಯೊಳಗೆ ಬೇಸಾಯದ ಹಸೆ ಹಾಕಿದರೆ, ಸೋಮವಾರ ಎತ್ತಿನ ಹೆಗಲ ಮೇಲೆ ನೊಗ ಇಟ್ಟರೆ, ದೇವರಿಗೆ ಕಾಸು ಮೀಸಲು ಕೊಡದಿದ್ದರೆ, ಒಂದೇ ಕುಲ ಅಥವಾ ಸಪಿಂಡದಲ್ಲಿ ವಿವಾಹವಾದರೆ, ಹರಿಜನರ ಮನೆಯಲ್ಲಿ ಊಟ ಮಾಡಿದರೆ, ಹಟ್ಟಿಯ ಯಜಮಾನ ಅಥವಾ ಪೂಜಾರಿಗೆ ಅಪಮಾನ ಮಾಡಿದರೆ ಮೊದಲಾದ ಸಾಮಾಜಿಕ ನಿಯಮಗಳನ್ನು ಉಲ್ಲಂಘಿಸಿದ ವ್ಯಕ್ತಿಗೆ ದಂಡ ಅಥವಾ ಶಿಕ್ಷೆ ವಿಧಿಸುವ ಹಕ್ಕು 'ಗುಡಿಕಟ್ಟೆ' ಮತ್ತು 'ಕಟ್ಟೆಮನೆ'ಗಳ ಯಜಮಾನರಿಗೆ ಕೊಡಲಾಗಿತ್ತು. ಆದ್ದರಿಂದ ಇಲ್ಲಿಯ ಜನರು ದಂಡ, ಶಿಕ್ಷೆ ಮತ್ತು ಬಹಿಷ್ಕಾರಕ್ಕೆ ಹೆದರಿ ತಮ್ಮ ಸಮುದಾಯದ ಸಾಮಾಜಿಕ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರು. ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನಗಳನ್ನು ನ್ಯಾಯ ದೇವತೆಯ ಪವಿತ್ರ ಸ್ಥಾನಗಳೆಂದು, ಅಲ್ಲಿಯ ಯಜಮಾನ, ಗೌಡ ಮತ್ತು ದೊರೆಗಳನ್ನು ಕಣ್ಣಿಗೆ ಕಾಣುವ ದೇವರೆಂದು ಆಗಿನ ಕಾಲದ ಜನರು ನಂಬಿದ್ದರು. ಜೊತೆಗೆ ಯಜಮಾನ ಮತ್ತು ದೊರೆಗಳು ಕೂಡ ಪ್ರಾಮಾಣಿಕರು, ನೀತಿವಂತರು, ಅನುಭವಿಕರು ಹಾಗೂ ಗಂಭೀರ ಸ್ವಭಾವದವರಾಗಿದ್ದು ನಿಷ್ಪಕ್ಷಪಾತವಾಗಿ ನ್ಯಾಯ ತೀರ್ಮಾನ ಮಾಡುತ್ತಿದ್ದರು.

೮.೧. ಗುಡಿಕಟ್ಟೆ

ಮ್ಯಾಸಬೇಡ ಮತ್ತುಕಾಡುಗೊಲ್ಲ ಬುಡಕಟ್ಟುಗಳಲ್ಲಿ ಪ್ರತಿಯೊಂದು ಕುಲ ಅಥವಾ ಬೆಡಗಿಗೆ ಒಂದು "ಗುಡಿಕಟ್ಟೆ" ಇದ್ದೇ ಇರುತ್ತದೆ. ಇಲ್ಲಿ ಗುಡಿ ಮತ್ತು ಕಟ್ಟೆ ಎಂಬೆರಡು ಶಬ್ದಗಳಿಂದ ಈ ಗುಡಿಕಟ್ಟೆಯಾಗಿದೆ.ಈ ಎರಡು ಸಮುದಾಯಗಳ ದೇವರ ಸನ್ನಿಧಿ ಅಥವಾ ದೇವಸ್ಥಾನಗಳನ್ನೇ ಗುಡಿಕಟ್ಟೆ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಹತ್ತಾರು ಹಟ್ಟಿಗಳಿಗೆ ಒಂದರಂತೆ ಗುಡಿಕಟ್ಟೆಗಳು ಇರುತ್ತಿದ್ದವು. ಈ ಗುಡಿಕಟ್ಟೆಯ ಹಿರಿಯರನನ್ನು 'ಗುಡಿಕಟ್ಟೆ ಯಜಮಾನ' ಎಂದು ಕರೆಯುತ್ತಾರೆ.

ದೇವರುಗಳ ಗುಬ್ಬ ಅಥವಾ ಗುಡಿಸಲಿನ ಮುಂಭಾಗದ ಒಂದು ಜಗುಲಿ ಅಥವಾ ದೇವಸ್ಥಾನವೇ ಗುಡಿಕಟ್ಟೆ ಯಾಗಿರುತ್ತಿತ್ತು. ಹಬ್ಬ, ಜಾತ್ರೆ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಹತ್ತಾರು ಹಟ್ಟಿಯ ಜನರು ಬಂದು, ದೇವರ ಸನ್ನಿಧಿಯಲ್ಲಿ ಸೇರುತ್ತಾರೆ. ಹಬ್ಬ, ಜಾತ್ರೆಗಳು ಮುಗಿದ ನಂತರ 'ದೇವರ ವೆಚ್ಚದ ಹಣ'ವನ್ನು ಗುಡಿಕಟ್ಟೆಯ ಯಜಮಾನರಿಗೆ ಒಪ್ಪಿಸಿ ಪ್ರಸಾದ ಪಡೆಯುತ್ತಿದ್ದರು. ಈ ಎಲ್ಲಾ ಧಾರ್ಮಿಕ ಕಾರ್ಯಗಳು ಮುಗಿದ ನಂತರ ಕುಲಸ್ಥರು ತಮ್ಮ ಸಮಸ್ಯೆ, ಜಗಳ, ಕೌಟುಂಬಿಕ ಕಲಹ, ಧಾರ್ಮಿಕ ಸಮಸ್ಯೆ, ಸಾಮಾಜಿಕ ಸಮಸ್ಯೆ,

ವೈವಾಹಿಕ ವಿಚಾರಗಳು, ವ್ಯಭಿಚಾರ ಮೊದಲಾದ ವಿಷಯಗಳು ಗುಡಿಕಟ್ಟೆಯ ಯಜಮಾನರ ಮುಂದೆ ಚರ್ಚಿತವಾಗುತ್ತಿದ್ದವು. ಆಗ ಗುಡಿಕಟ್ಟೆ ಯಜಮಾನ, ಪೂಜಾರಿ, ಹಟ್ಟಿಗೌಡ ಮತ್ತು ದೈವದವರು ವಿಚಾರ ಮಾಡಿ ವ್ಯಕ್ತಿಯ ಸಮಸ್ಯೆಗಳನ್ನು ಪರಿಗಣಿಸಿ ತೀರ್ಪು ಕೊಡುತ್ತಿದ್ದರು. ಈ ತೀರ್ಪು ಕೇವಲ ಎಲೆ, ಅಡಿಕೆ ಅಥವಾ ದಂಡ ಕಟ್ಟಿಸಿಕೊಂಡು ಮುಗಿಸಬಹುದು, ದೇವರ ಗುಡಿಯ ದೀಪಕ್ಕೆ ಎಣ್ಣೆ ಹಾಕಿಸಬಹುದು, ಬೇವಿನ ಕಡ್ಡಿಯಿಂದ ನಾಲಿಗೆ ಸುಡಿಸಬಹುದು, ದೇವರ ಎತ್ತಿನ ಕಿಲಾರಿಗಳ ರೂಪದಲ್ಲಿ ತೀರ್ಥ ಹಾಕಿ ಶುದ್ಧಿಗೊಳಿಸಬಹುದು, ದೇವರ ಪೌಳಿಯಲ್ಲಿ ತೀರ್ಥ ಹಾಕಿಸಬಹುದು, ಬೆಂಕಿ, ನೀರು ಕೊಡದೇ ಸಮುದಾಯ ಬಹಿಷ್ಕಾರ ಹಾಕಬಹುದು. ಕುಲದಿಂದಲೇ ಹೊರ ಹಾಕಬಹುದು ಇವೇ ಮೊದಲಾದ ಶಿಕ್ಷೆ, ದಂಡ, ಬಹಿಷ್ಕಾರಗಳು ವ್ಯಕ್ತಿಯ ಅಪರಾಧ ಮತ್ತು ಫಿರ್ಯಾದಿಗೆ ಸಂಬಂಧಿಸಿರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಗುಡಿಕಟ್ಟೆಯಲ್ಲಿ ಬಗೆಹರಿಯದಿದ್ದ ಗಹನವಾದ ವಿಚಾರಗಳನ್ನು ಕಟ್ಟೆಮನೆಗೆ ವರ್ಗಾಯಿಸಿ "ಕಟ್ಟೆಮನೆ ದೊರೆ"ಗಳಿಗೆ ಪತ್ರ ಬರೆದು ವಿಷಯ ಮುಟ್ಟಿಸುತ್ತಿದ್ದರು. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಿಗೆ ಹನ್ನೆರಡು ಗುಡಿಕಟ್ಟೆಗಳು ಮತ್ತು ಕಾಡುಗೊಲ್ಲರಿಗೆ ಐದು ಗುಡಿಕಟ್ಟೆಗಳು ಬಹುಮುಖ್ಯವಾಗಿವೆ. ಗುಡಿಕಟ್ಟೆಗಳೆಂದರೆ ಬರೀ ನ್ಯಾಯ ತೀರ್ಮಾನ ಮಾಡುವುದೇ ಇದರ ಮುಖ್ಯ ಕಾರ್ಯವಲ್ಲ. ಹಬ್ಬ, ವಿವಾಹ, ಜಾತ್ರೆ ಮೊದಲಾದ ಧಾರ್ಮಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ಗುಡಿಕಟ್ಟೆ ಯಜಮಾನರಿಗೆ ಕೊಡಲಾಗಿತ್ತು.

೮.೧.೧. ಮ್ಯಾಸಬೇಡರ ಹನ್ನೆರಡು ಗುಡಿಕಟ್ಟೆಗಳು

೧. ನಲ್ಲಜರುಗು ಓಬಳದೇವರು - ರುದ್ರಮ್ಮನ ಹಳ್ಳಿ, ಚಳ್ಳಕೆರೆ ತಾಲ್ಲೂಕು

೨. ಚಿತ್ರಲಿಂಗೇಶ್ವರ - ಉಡೇಗೋಳು, ರಾಯದುರ್ಗ ತಾಲ್ಲೂಕು

೩. ಕಾಟಮ್ಮಲಿಂಗೇಶ್ವರ - ಕಾಟಪ್ಪನಹಟ್ಟಿ, ಚಳ್ಳಕೆರೆ ತಾಲ್ಲೂಕು

೪. ಸೂರಲಿಂಗೇಶ್ವರ - ಕಾಮಗೇತನಹಳ್ಳಿ, ಜಗಳೂರು ತಾಲ್ಲೂಕು

೫. ಬೊಮ್ಮಲಿಂಗೇಶ್ವರ - ಗೌರಸಮುದ್ರ, ಚಳ್ಳಕೆರೆ ತಾಲ್ಲೂಕು

೬. ಪಾತೇಲಿಂಗೇಶ್ವರ - ಆಕನೂರು, ಜಗಳೂರು ತಾಲ್ಲೂಕು

೭. ದಡ್ಲು ಮಾರಮ್ಮ - ಎರ್. ದೇವರಹಳ್ಳಿ, ಚಳ್ಳಕೆರೆ ತಾಲ್ಲೂಕು

೮. ಬಂಗಾರು ದೇವರು - ಬಂಗಾರದೇವರಹಟ್ಟಿ, ಚಳ್ಳಕೆರೆ ತಾಲ್ಲೂಕು

೯. ಕಂಚೋಬಳದೇವರು - ಮಾಕನಡುಕು, ಕೂಡ್ಲಿಗಿ ತಾಲ್ಲೂಕು

೧೦. ಅಲಕೋಬಳದೇವರು - ಹುಣಸೆಕಟ್ಟೆ, ಚಿತ್ರದುರ್ಗ ತಾಲ್ಲೂಕು

೧೧. ಪೆದ್ದತಿರುಮಲದೇವರು - ಬೇಡರಡ್ಡಿಹಳ್ಳಿ, ಚಳ್ಳಕೆರೆ ತಾಲ್ಲೂಕು

೧೨.ರಾಜಲದೇವರು - ಮಲ್ಲೂರಹಳ್ಳಿ, ಚಳ್ಳಕೆರೆ ತಾಲ್ಲೂಕು

೮.೧.೨ ಕಾಡುಗೊಲ್ಲರ ಐದು ಗುಡಿಕಟ್ಟೆಗಳು

೧. ಕ್ಯಾತರುಲಿಂಗೇಶ್ವರ	-	ಚನ್ನಮ್ಮನಾಗತಿಹಳ್ಳಿ, ಚಳ್ಳಕೆರೆ ತಾಲ್ಲೂಕು
೨. ಕಾಟಮ್ಮಲಿಂಗೇಶ್ವರ	-	ಇಕ್ಕನೂರು, ಹಿರಿಯೂರು ತಾಲ್ಲೂಕು
೩. ಚಿತ್ರಲಿಂಗೇಶ್ವರ	-	ಚಿತ್ರಹಳ್ಳಿ, ಹೊಳಲ್ಕೆರೆ ತಾಲ್ಲೂಕು
೪. ರಾಮಲಿಂಗೇಶ್ವರ	-	ರಾಮನಹಳ್ಳಿ, ಚಿತ್ರದುರ್ಗ ತಾಲ್ಲೂಕು
೫. ಪಾತೇಲಿಂಗೇಶ್ವರ	-	ಕೂಡಲಹಳ್ಳಿ, ಹಿರಿಯೂರು ತಾಲ್ಲೂಕು

೮.೨. ಕಟ್ಟೆಮನೆ

ಬುಡಕಟ್ಟು ಸಮುದಾಯಗಳಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು ಹಲವಾರು 'ಗುಡಿಕಟ್ಟೆ'ಗಳು ಸೇರಿ ಒಂದು 'ಕಟ್ಟೆಮನೆ' ನಿರ್ಮಾಣವಾಗಿರುತ್ತದೆ. ಈ ಕಟ್ಟೆಮನೆಯ ಮುಖ್ಯಸ್ಥನನ್ನು 'ದೊರೆ' ಅಥವಾ 'ಯಜಮಾನ' ಎಂದು ಕರೆಯುತ್ತಾರೆ. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಿಗೆ ನಾಯಕನಹಟ್ಟಿ ನನ್ನಿವಾಳ, ಗೋನೂರು ಎಂಬ ಮೂರು ಕಟ್ಟೆಮನೆಗಳು; ಕಾಡುಗೊಲ್ಲರಿಗೆ ಕರಿಓಬೇನಹಳ್ಳಿ, ತಾಳವಟ್ಟಿ, ರಾಮನಹಳ್ಳಿ ಎಂಬ ಮೂರು ಕಟ್ಟೆಮನೆಗಳು ಬಹಳ ಮುಖ್ಯವಾಗಿವೆ. ಬಹು ಹಿಂದೆ ಹೊರಗಿನ ಕಟ್ಟೆಮನೆಗಳಾಗಿ ರತ್ನಗಿರಿ, ಮಿಡಿಗೇಶಿ, ಮತ್ತು ಶಂಕರಗಲ್ಲು ಎಂಬ ಮೂರು ಕಟ್ಟೆಮನೆಗಳು ಮ್ಯಾಸಬೇಡರಿಗಿದ್ದವಂತೆ. ಆದರೆ ಈಗ ಅವು ಅಸ್ತಿತ್ವ ದಲ್ಲಿಲ್ಲ.

ಹಿರಿಯೂರು ಪಟ್ಟಣದ ಸಿದ್ದನಾಯ್ಕನ ಸರ್ಕಲ್ಲಿನ ಹತ್ತಿರ, ಕರಡಿಬುಳ್ಳನಾಯ್ಕ ಸ್ಥಾಪನೆ ಮಾಡಿದ, ದೊಡ್ಡ ಆಲದ ಮರದ ಬುಡದಲ್ಲಿರುವ 'ಭೂತಪ್ಪನಗುಡಿ'ಯಿಂದ 'ನೂರು ಸರಪಳಿ' ಅಂತರದಲ್ಲಿ ಕಾಡುಗೊಲ್ಲರ ಮೂರು ಕಟ್ಟೆಮನೆಗಳನ್ನು ಸ್ಥಾಪನೆಮಾಡಲಾಗಿದೆ. ಮ್ಯಾಸಬೇಡರ ಮತ್ತು ಕಾಡುಗೊಲ್ಲರ ಪ್ರತಿಯೊಂದು ಕಟ್ಟೆಮನೆಯು ದೇವಸ್ಥಾನದ ಮುಂಭಾಗದ ಕಟ್ಟೆ ಅಥವಾ ದೇವಸ್ಥಾನದ ಜಗಲಿಯಲ್ಲಿಯೇ 'ದೊರೆ' ನ್ಯಾಯ ತೀರ್ಮಾನ ಮಾಡುತ್ತಿದ್ದರು. ನ್ಯಾಯ ದಾನದಲ್ಲಿ ದೊರೆಯ ತೀರ್ಪು ಅಂತಿಮವಾಗಿರುತ್ತದೆ. ಹಟ್ಟಿಯ ಗುಡಿಕಟ್ಟೆ ಯಜಮಾನರಿಂದ ಬಗೆ ಹರಿಯದಿದ್ದ ಗಂಭೀರ ವಿಚಾರಗಳನ್ನು ಕಟ್ಟೆಮನೆಗೆ ಕಳುಹಿಸಿ ಕೊಡುತ್ತಾರೆ. ಆಗ ಕಟ್ಟೆಮನೆಯ ದೊರೆ, ಯಜಮಾನ, ಪೂಜಾರಿ ಮತ್ತು ದೈವದವರು ಸಭೆಸೇರಿ ಅಪರಾಧಿ ಮತ್ತು ಫಿರ್ಯಾದಿ ಇಬ್ಬರನ್ನು ಕರೆಯಿಸಿ ಕೂಲಂಕುಷವಾಗಿ ವಿಷಯದ ಬಗ್ಗೆ ಚರ್ಚೆ ನಡೆಸುತ್ತಾರೆ.

ಅಪರಾಧಿ ಸ್ಥಾನದಲ್ಲಿ ನಿಂತವರು ತಮ್ಮ ಕುಲಕ್ಕೆ ದ್ರೋಹ ಮಾಡಿದ್ದರೆ. ಅಣ್ಣ ತಮ್ಮಗಳಿಗೆ ಮೋಸ ಮಾಡಿದ್ದರೆ, ವಿಧವೆ ಅನೈತಿಕ ವ್ಯವಹಾರ ಮಾಡಿದ್ದರೆ, ಕೀಳು ಜಾತಿಯಲ್ಲಿ ವಿವಾಹವಾಗಿದ್ದರೆ, ಜೈಲಿಗೆ ಹೋಗಿ ಬಂದಿದ್ದರೆ, ಕೊಲೆ ಮಾಡಿದ್ದರೆ, ಹೆಂಡ ಕುಡಿಯುತ್ತಿದ್ದರೆ, ಮೆಟ್ಟಿನಲ್ಲಿ ಬಡಿದರೆ ಅಥವಾ ಬಡಿಸಿಕೊಂಡರೆ, ಮಾದಿಗರ ಮನೆಯಲ್ಲಿ ಊಟಮಾಡಿದರೆ ಮೊದಲಾದ ತಪ್ಪುಒಪ್ಪುಗಳನ್ನು ಕೂಲಂಕುಷವಾಗಿ ವಿಚಾರಿಸಿ ಚರ್ಚಿಸಿ ದೈವದವರ ಸಲಹೆ ಸೂಚನೆಗಳನ್ನು ಪರಿಗಣಿಸಿ "ದೊರೆ ತೀರ್ಪು ಕೊಡುತ್ತಿದ್ದರು". ಈ ತೀರ್ಪು ದಂಡ, ಶಿಕ್ಷೆ,

ಬಹಿಷ್ಕಾರ, ಎಂಬ ಮೂರು ರೀತಿಯಿಂದ ಕೂಡಿರುತ್ತಿತ್ತು. ಆಪಾದಿತ ವ್ಯಕ್ತಿ ಮಾಡಿದ ಅಪರಾದಕ್ಕನುಗುಣವಾಗಿ ತೀರ್ಪು ನಿರ್ಧರಿತವಾಗುತ್ತಿತ್ತು.ಹಟ್ಟಿಯ ಹೆಣ್ಣು ಅಥವಾ ವಿಧವೆ ಕೀಳುಜಾತಿಯ ಪುರುಷನೊಂದಿಗೆ ಲೈಂಗಿಕ ಸಂಪರ್ಕವಿಟ್ಟುಕೊಂಡಿದ್ದರೆ ಅಥವಾ ಅವನ ಜೊತೆ ಓಡಿಹೋಗಿದ್ದರೆ, ಅಂಥವಳನ್ನು "ಕುಲಗೆಟ್ಟ ಹೆಣ್ಣು" ಎಂದು ತೀರ್ಪುಕೊಟ್ಟು, ಹಟ್ಟಿಯಿಂದ ಹೊರ ಹಾಕಬಹುದು, ಚಪ್ಪಲಿಯಿಂದ ಹೊಡೆಸಿಕೊಂಡವನಿಗೆ ಮತ್ತು ಹೊಡೆದವನಿಗೆ ದಂಡಹಾಕಿ ದೇವರ ಪೌಳಿಯಲ್ಲಿ ತೀರ್ಥ ಹಾಕಿಸಬಹುದು. ಸಣ್ಣ ಪುಟ್ಟ ಜಗಳವಾದರೆ, ಎಲೆ, ಅಡಿಕೆ ಕೊಟ್ಟು ತಪ್ಪು ಒಪ್ಪಿಕೊಳ್ಳಬಹುದು. ದೇವರ ದೀಪಕ್ಕೆ ಎಣ್ಣೆ ಹಾಕಿಸಬಹುದು-ಮೊದಲಾದ ತೀರ್ಪುಗಳನ್ನು ಕಟ್ಟೆಮನೆಯವರು ಕೊಡುತ್ತಿದ್ದರು. ಜೊತೆಗೆ ಅವರೇ ಪರಿಹಾರ ಕ್ರಮಗಳನ್ನು ಕೂಡ ಸೂಚಿಸುತ್ತಿದ್ದರು.

ಉದಾಹರಣೆಗೆ : ಕಾಡುಗೊಲ್ಲರಲ್ಲಿ ಯಾರಾದರೂ ಮೆಟ್ಟಿನಲ್ಲಿ ಹೊಡೆಸಿಕೊಂಡರೆ ಅಥವಾ ಹೊಡೆದರೆ ಗುಡಿಕಟ್ಟೆ ಅಥವಾ ಕಟ್ಟೆಮನೆಗಳಲ್ಲಿ ಅವರಿಬ್ಬರಿಗೂ ದಂಡ ವಿಧಿಸುತ್ತಿದ್ದರು. ಮೆಟ್ಟಿನಲ್ಲಿ ಹೊಡೆದವನಿಗೆ ಎರಡು ಬೇಟೆ ಮತ್ತು ಭತ್ಯೆವೂ ಮತ್ತು ಮೆಟ್ಟಿನಲ್ಲಿ ಹೊಡೆಸಿಕೊಂಡವನಿಗೆ ಒಂದು ಬೇಟೆ ಮತ್ತು ಭತ್ಯೆವು ಕುಲಸ್ಥರಿಗೆ ಕೊಟ್ಟು, ದೇವರಿಗೆ ತಪ್ಪು ಕಾಣಿಕೆಯನ್ನು ಎಲೆ ಅಡಿಕೆಯಲ್ಲಿ ಇಟ್ಟು ಕೊಡಬೇಕು. ಯವುದಾದರೂ ಹಳ್ಳದಲ್ಲಿ ಗಂಗೆಸ್ನಾನ ಮಾಡಿಕೊಂಡು ಬಂದನಂತರ ಹಟ್ಟಿ ಹೊರಗೆ ನಿಲ್ಲಿಸಿ ದೇವರ ತೀರ್ಥ, ಧೂಳತ ಹಾಕಿ ಹಟ್ಟಿಯೊಳಗೆ ಕರೆದುಕೊಳ್ಳುತ್ತಾರೆ. ಆಕಸ್ಮಿಕವಾಗಿ ಗೊಲ್ಲರಹಟ್ಟಿಯ ವಿಧವೆ ಅನೈತಿಕ ಸಂಬಂಧದಿಂದ ಗರ್ಭಿಣಿಯಾದರೆ ಅಥವಾ ಬೇರೊಬ್ಬ ಪುರುಷನೊಂದಿಗೆ ಲೈಂಗಿಕ ಸಂಪರ್ಕವಿಟ್ಟುಕೊಂಡಿದ್ದು ಹಟ್ಟಿಯ ಯಜಮಾನರಿಗೆ ಗೊತ್ತಾದರೆ, ಅವಳನ್ನು ಹಟ್ಟಿಯಿಂದ ಹೊರಗಿಡುತ್ತಿದ್ದರು. ನಂತರ ಅವಳನ್ನು ಹಟ್ಟಿಯೊಳಗೆ ಕರೆದು ಕೊಳ್ಳುವಾಗ ಹಟ್ಟಿಯ ಹೊರಗೆ ಹುದಿ ಹತ್ತಿರ ನೆಲದಲ್ಲಿ ಮೂರು ಚಿಕ್ಕ ಗುಂಡಿಗಳನ್ನು ತೆಗೆದು ಅವುಗಳಲ್ಲಿ ಹಾಲನ್ನು ಹಾಕಿ, ಆ ಹೆಣ್ಣನ್ನು ಕುರೇ ಕುರೇ ಎಂದು ಕರೆಯುತ್ತಾರೆ. ಆಗ ಅವಳು ಬಂದು ಗುಂಡಿಯಲ್ಲಿರುವ ಹಾಲನ್ನು ನೆಕ್ಕುತ್ತಿರುವಾಗ ಅಚ್ಚಾ ಅಚ್ಚಾ ಎಂದು ಹೊಡೆಯುತ್ತಾರೆ. ಹೀಗೆ ಮೂರು ಸಲ ಮಾಡಿದ ನಂತರ ತಲೆ ಬೋಳಿಸಿ, ಬೇವಿನ ಕಡ್ಡಿಯಿಂದ ನಾಲಿಗೆ ಸುಟ್ಟು ದೇವರ ತೀರ್ಥ ಧೂಳತ ಹಾಕಿ ಹಟ್ಟಿಯ ಒಳಗೆ ಕರೆದುಕೊಳ್ಳುತ್ತಾರೆ. ಇಲ್ಲವೆ ಅವಳು ಮಾಡಿದ ಅಪರಾಧ ಗಂಭೀರವಾಗಿದ್ದರೆ, ಶಾಶ್ವತವಾಗಿ ಹಟ್ಟಿಯಿಂದ ಹೊರಗೆ ಇರಬೇಕಾಗುತ್ತದೆ.

ಚಿತ್ರದುರ್ಗ ತಾಲ್ಲೂಕು ಗೋನೂರು ಮ್ಯಾಸಬೇಡರಿಗೆ ಪವಿತ್ರವಾದ ನ್ಯಾಯಸ್ಥಾನ ಮತ್ತು ಕಟ್ಟೆಮನೆ. ಈ ಕಟ್ಟೆಮನೆಗೆ ಎನುಮಲೋರು ಬೆಡಗಿನ ಬೋಸೆನಾಯಕನ ಸಂತತಿಯ ಶ್ರೀಪಟೇಲ್ ಬೋಸಯ್ಯ ಪ್ರಸ್ತುತ ದೊರೆಗಳಾಗಿದ್ದಾರೆ. ಈ ಗೋನುರು ಕಟ್ಟೆಮನೆಯನ್ನು 'ಸತ್ಯದ ಸನ್ನಿಧಿ' ಎಂದು ಕರೆಯುತ್ತಾರೆ. ಬೈಯ್ಯಪ್ಪರಾಜ ಈ ಸಂಸ್ಥಾನವನ್ನು ಆಳುತ್ತಿದ್ದಾಗ, ನಾಯ್ಕನಹಟ್ಟಿ ಶ್ರೀ ಗುರುತಿಪ್ಪೇರುದ್ರ ಸ್ವಾಮಿಗಳು ಅಲ್ಲಿಗೆ ಹೋಗಿದ್ದರಂತೆ. ಆದ್ದರಿಂದ ರುದ್ರಾಕ್ಷಿ ಕೊಡೆಯ ಕೆಳಗೆ ತಿಪ್ಪೇಸ್ವಾಮಿಯ ಗದ್ದುಗೆ ದೇವಸ್ಥಾನವನ್ನು ಗೋನೂರಿನಲ್ಲಿ ಕಾಣಬಹುದು. ಈ ಗ್ರಾಮದಿಂದ ಪೂರ್ವಕ್ಕೆ ಹನುಮಂತನ ದೇವಸ್ಥಾನದ ಮುಂದೆ 'ಸತ್ಯದ ಕಟ್ಟೆ'ಯಿದೆ. ಗುಡಿಕಟ್ಟೆಯಲ್ಲಿ ತೀರ್ಮಾನವಾಗದಿದ್ದ ಮ್ಯಾಸಬೇಡರ ವ್ಯಾಜ್ಯಗಳನ್ನು ಇಲ್ಲಿ ತೀರ್ಮಾನ ಮಾಡುತ್ತಿದ್ದರಂತೆ. ಇಲ್ಲಿ "ಆಚಾರದ ಕಟ್ಟೆ" ಮತ್ತು "ಅನಾಚಾರದ ಕಟ್ಟೆ"ಎಂಬ ಎರಡು ಕಟ್ಟೆಗಳಿವೆ. ಆಚಾರದ ಕಟ್ಟೆಯ ಮೇಲೆ ಒಳ್ಳೆಯ ವಿಚಾರಗಳನ್ನು

ತೀರ್ಮಾನ ಮಾಡಿದರೆ, ಅನಾಚಾರದ ಕಟ್ಟೆಯ ಮೇಲೆ ವಿಧವೆ, ಅವಿವಾಹಿತಳು ಮೊದಲಾದ ವ್ಯಕ್ತಿಗಳು ತಪ್ಪು ಮಾಡಿದರೆ ಅನಾಚಾರದ ಕಟ್ಟೆಯಲ್ಲಿ ತೀರ್ಮಾನ ಮಾಡಿ ದಂಡ ವಿಧಿಸಲಾಗುತ್ತಿತ್ತು. ಆ ದಂಡವನ್ನು ರಾಜ ಬೊಕ್ಕಸಕ್ಕೆ ಕಟ್ಟಬೇಕಾಗಿತ್ತು. ಪ್ರಸ್ತುತ ಈ ಸತ್ಯದ ಕಟ್ಟೆಯ ಮೇಲಿರುವ ಬೇವಿನಮರಕ್ಕೆ ಒಂದು ದಂತ ಕಥೆಯಿದೆ. “ಕಲಿಯುಗದ ಅಂತ್ಯದಲ್ಲಿ ಅಧರ್ಮ ಪಾಪಗಳು ಹೆಚ್ಚಾದಾಗ ಈ ಬೇವಿನ ಮರ ಒಣಗುತ್ತದೆ. ಮತ್ತೆ ಸತ್ಯವಂತರ ಕಾಲ ಬಂದಾಗ ದೇವರು ಧರ್ಮದ ಪ್ರಭಾವ ಅಧಿಕವಾದಾಗ ಮತ್ತೆ ಇದೇ ಸ್ಥಳದಲ್ಲಿ ಬೇವಿನಮರ ಹುಟ್ಟುತ್ತದೆ” ಎಂದು ಸ್ಥಳೀಯರ ನಂಬಿಕೆಯಾಗಿದೆ. ಅದಕ್ಕೆ ಪೂರಕವೆಂಬಂತೆ ನಾವು ಕ್ಷೇತ್ರಕಾರ್ಯಕ್ಕೆ ಹೋದಾಗ “ಸತ್ಯದಕಟ್ಟೆ”ಯ ಮೇಲಿನ ಬೇವಿನಮರ ಸಂಪೂರ್ಣವಾಗಿ ಒಣಗಿಹೋಗಿದ್ದು, ಆ ಮರದಿಂದ ಸುಮಾರು ಐದು ಅಡಿ ಅಂತರದ ಪಶ್ಚಿಮಕ್ಕೆ ಒಂದು ಬೇವಿನ ಗಿಡ ಹುಟ್ಟಿ ಸುಮಾರು ಹತ್ತು ಅಡಿ ಎತ್ತರ ಬೆಳೆದಿರುವುದನ್ನು ಅಲ್ಲಿಯ ಜನ ತೋರಿಸಿ, ಈಗ ಪುಣ್ಯವಂತರ ಕಾಲ ಬರುತ್ತಿದೆ ‘ಸತ್ಯಕ್ಕೆ ಜಯವಿದೆ’ ಎಂಬುದೇ ಈ ಬೇವಿನ ಗಿಡದ ಐತಿಹಾಸಿಕ ಮಹತ್ವ ಎಂಬುದು ಅಲ್ಲಿಯ ಜನರ ನಂಬಿಕೆಯ ಕಥೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ, ನನ್ನಿವಾಳ ಮತ್ತುಗೋನೂರು ಮ್ಯಾಸಬೇಡರ ಮೂರು ಕಟ್ಟೆಮನೆಗಳು ಅದೇ ರೀತಿ ಕಾಡುಗೊಲ್ಲರಿಗೆ ಕರಿಓಬೇನಹಳ್ಳಿ, ತಾಳವಟ್ಟಿ ಮತ್ತು ರಾಮನಹಳ್ಳಿ ಎಂಬ ಮೂರು ಕಟ್ಟೆಮನೆಗಳು ಬಹಳ ಪ್ರಸಿದ್ಧಿಪಡೆದಿವೆ. ಕೆಲವೊಂದು ಸಂಶೋಧಕರು ಮ್ಯಾಸಬೇಡರ ಹನ್ನೆರಡು ಕಟ್ಟೆಮನೆಗಳು ಎಂದು ಬರೆಯುತ್ತಾರೆ. ಅದರೆ ಮ್ಯಾಸಬೇಡರಿಗೆ ಮೂರು ಕಟ್ಟೆಮನೆಗಳು ಮಾತ್ರವಿದ್ದು, ಹನ್ನೆರಡು ಗುಡಿಕಟ್ಟೆಗಳು ಮತ್ತು ಹನ್ನೆರಡು ಪೆಟ್ಟಿಗೆ ದೇವರುಗಳು ಅಸ್ತಿತ್ವದಲ್ಲಿವೆ.

೮.೨.೧. ಮ್ಯಾಸಬೇಡರ ಮೂರು ಕಟ್ಟೆಮನೆಗಳು

೧. ನಾಯಕನಹಟ್ಟಿ - ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

೨. ನನ್ನಿವಾಳ - ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

೩. ಗೋನೂರು - ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಚಳ್ಳಕೆರೆ ತಾಲ್ಲೂಕು ‘ನಾಯಕನಹಟ್ಟಿ’ ಕಟ್ಟೆಮನೆಗೆ ಮೀಸೆನಾಯಕ, ಚಳ್ಳಕೆರೆ ತಾಲ್ಲೂಕು ‘ನನ್ನಿವಾಳ’ ಕಟ್ಟೆಮನೆಗೆ ಗಟ್ಟಿಮುತ್ತನಾಯಕ, ಚಿತ್ರದುರ್ಗ ತಾಲ್ಲೂಕು ‘ಗೋನೂರು’ ಕಟ್ಟೆಮನೆಗೆ ಬೋಸೆನಾಯಕ ಯಜಮಾನರಾಗಿದ್ದಾರೆ.

೮.೨.೨. ಮ್ಯಾಸಬೇಡರ ನಾಲ್ಕು ಕಟ್ಟೆಗಳು

೧. ರಾಯಚೂರಕಟ್ಟೆ

೨. ಶಿರಾಕಟ್ಟೆ

೩. ಚಾಪೂರಿಕಟ್ಟೆ

೪. ಅರೇಸಮುದ್ರಕಟ್ಟೆ

೮.೨.೩. ಮ್ಯಾಸಬೇಡರ ನಾಲ್ಕು ತಟ್ಟುಗಳು

೧. ಹಿರೇಹಳ್ಳಿತಟ್ಟು

೨. ಅಚ್ಚುವಳ್ಳಿ ತಟ್ಟು

೩. ರಾಚಲ್ ತಟ್ಟು

೪. ಜಾಜೂರು ತಟ್ಟು

೮.೨.೪. ಮ್ಯಾಸಬೇಡರ ನಾಲ್ಕು ಗಡಿಗಳು

೧. ಹರ್ತಿಸಾರ ಗಡಿ

೨. ರಾಜಬಂಡೆ ಗಡಿ

೩. ಕಡೆವುಡ ಗಡಿ

೪. ಶಿವರಾ ಗಡಿ

೮.೨.೫. ಮ್ಯಾಸಬೇಡರ ಹೊರಗಿನ ಕಟ್ಟೆಮನೆಗಳು

೧. ರತ್ನಗಿರಿ

೨. ಮಿಡಿಗೇಶಿ

೩. ಶಂಕರಗಲ್ಲು

೮.೨.೬. ಮ್ಯಾಸಬೇಡರ ಹನ್ನೆರಡು ಸಂಸ್ಥಾನಗಳು

೧.ಆನೆಗೊಂದಿ	೪. ಹರ್ತಿಕೋಟೆ	೭. ರಾಯದುರ್ಗ	೧೦. ಹಾಗಲವಾಡಿ
೨. ನಿಡಗಲ್ಲು	೫. ತರಿಕೆರೆ	೮. ಮಿಡಿಗೇಶಿ	೧೧. ಪಾವಗಡ
೩. ಚಿತ್ರದುರ್ಗ	೬. ರತ್ನಗಿರಿ	೯. ಐಮಂಗಲ	೧೨. ಪೆನಗೊಂಡ

೮.೨.೭. ಕಾಡುಗೊಲ್ಲರ ಮೂರು ಕಟ್ಟೆಮನೆಗಳು

೧. ಕರಿಓಬೇನಹಳ್ಳಿ - ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

೨. ತಾಳವಟ್ಟಿ - ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

೩. ರಾಮನಹಳ್ಳಿ - ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಮೂರು ಕಟ್ಟೆಮನೆಗಳ ಯಜಮಾನರು ಮತ್ತು ಕಾಡುಗೊಲ್ಲರ ಮೂರು ಕಟ್ಟೆಮನೆಗಳ ಯಜಮಾನರ ಹತ್ತಿರ ಜನಾಂಗಕ್ಕೆ ಸಂಬಂಧಿಸಿದ ಕಂಚು, ಹಿತ್ತಾಳೆ, ತಾಮ್ರದ ಜಯರೇಖೆ, ಹಸ್ತಪ್ರತಿ, ಓಲೆಗರಿಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ. ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲ

ಬುಡಕಟ್ಟುಗಳು ನಾಗರಿಕತೆಯ ಪ್ರಭಾವದಿಂದಾಗಿ ಯಾವುದೇ ವ್ಯಾಜ್ಯಗಳು ಗುಡಿಕಟ್ಟೆ ಮತ್ತು ಕಟ್ಟೆಮನೆಗಳಿಗೆ ಬರುವುದಿಲ್ಲ. ಪೋಲೀಸ್ ಠಾಣೆ, ಕೋರ್ಟು, ಕಛೇರಿಗೆ ಹೋಗುವವರ ಸಂಖ್ಯೆಯು ಅಧಿಕವಾಗುತ್ತಿದೆ. 'ಹಳ್ಳಿಯಿಂದ ದಿಲ್ಲಿಗೆ' ಎಂಬ ತತ್ವದಂತೆ ದಿಲ್ಲಿಯಲ್ಲಿ ನಡೆಯುವ ಯಾವುದೇ ಕಾರ್ಯಕ್ರಮಗಳನ್ನು ದೂರದರ್ಶನಗಳ ಮೂಲಕ 'ಹಟ್ಟಿ'ಯಲ್ಲಿ ನೋಡುತ್ತಿರುವುದರಿಂದ ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ಮಹತ್ವ ಕಡಿಮೆಯಾಗುತ್ತಿದೆ.

೮.೩. ಗುರುಸ್ಥಾನಗಳು

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಕೆಲವು ಪವಿತ್ರವಾದ ದೈವ ಸನ್ನಿಧಿಗಳನ್ನು ಗುರುಸ್ಥಾನಗಳೆಂದು ಕರೆಯುತ್ತಾರೆ. ಕೆಲವೊಂದು ಸಂದರ್ಭಗಳಲ್ಲಿ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಲ್ಲಿ ತೀರ್ಮಾನವಾಗದ ಹಲವು ವ್ಯಾಜ್ಯಗಳು 'ಗುರುಸ್ಥಾನ'ಗಳಲ್ಲಿ ತೀರ್ಮಾನ ಮಾಡುತ್ತಿದ್ದರಂತೆ. ಆದರೆ ಈ ಪದ್ಧತಿ ಈಗ ಬಹಳ ಕಡಿಮೆಯಾಗಿದೆ. ಈ ಎರಡು ಬುಡಕಟ್ಟುಗಳ 'ಗುಡಿಕಟ್ಟೆ' ಮತ್ತು 'ಕಟ್ಟೆಮನೆ'ಗಳ ಯಜಮಾನ ಅಥವಾ ದೊರೆಗಳು ನ್ಯಾಯ ತೀರ್ಮಾನ ಮಾಡುವಾಗ ಕೆಲವು ಕಟ್ಟು ಕಟ್ಟಳೆಗಳನ್ನು ವಿಧಿಸುತ್ತಿದ್ದರು. ಆಗ ತಪ್ಪಿತಸ್ಥರಾದವರು ಈ ಗುರಸ್ಥಾನಗಳಿಗೆ ಹೋಗಿ, ಅಲ್ಲಿಯ ಪೂಜಾರಿ, ದಾಸಯ್ಯ, ಎತ್ತಿನ ಕಿಲಾರಿ ಅಥವಾ ಗುರುಗಳಿಂದ ತೀರ್ಥ ಹಾಕಿಸಿಕೊಂಡು ದೇವರಿಗೆ ಹಣ್ಣು, ಕಾಯಿ, ದೀಪಕ್ಕೆ ಎಣ್ಣೆ, ದಂಡದ ಹಣ ಕೊಟ್ಟು ಶುದ್ಧರಾಗಿ ಬರುವುದು. ಈ ಎರಡು ಸಮೂಹಗಳ ಸಂಪ್ರದಾಯವಾಗಿತ್ತು.

ಮೂಲತಃ ಮ್ಯಾಸ ಮಂಡಲದಲ್ಲಿ ಎಪ್ಪತೇಳು ಹಟ್ಟಿಗಳಿದ್ದವಂತೆ. ಅವುಗಳಲ್ಲಿ ಮೊಳಕಾಲ್ಮೂರು ತಾಲ್ಲೂಕು ಕಂಪಳದೇವರ ಹಟ್ಟಿ ಮೊದಲನೆಯದು. ಅಲ್ಲಿರುವ ಕಂಪಳರಂಗಸ್ವಾಮಿಯ ದೇವಸ್ಥಾನವನ್ನು 'ಗುರುಮಠ' ಎಂದೇ ಕರೆಯುತ್ತಾರೆ. ಕಾಡುಗೊಲ್ಲರಿಗೆ ಚಳ್ಳಕೆರೆ ತಾಲ್ಲೂಕು ಗೋಸಿಕೆರೆ ಶ್ರೀಗುರು ಸಾರ್ವಾಡೇಶ್ವರಸ್ವಾಮಿಗಳ ಮಠ 'ಗುರುಮಠ'ವಾಗಿದೆ. ಈ ಸಾರ್ವಾಡೇಶ್ವರ ಸ್ವಾಮಿಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೂ ಗುರುಗಳಾಗಿದ್ದರು, ಎಂಬುದನ್ನು 'ಗಾದರಿಪಾಲನಾಯಕ'ನ ಕಥೆನಗೀತೆಯಲ್ಲಿ "ಗಾದರಿಪಾಲನಾಯಕ ಗೋಸಿಕೆರೆ ಗುರಮಠಕ್ಕೆ ಹೋಗಿದ್ದ" ಎಂದು ಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಕೊಂಡಾಗ ಶ್ರೀಗುರು ಸಾರ್ವಾಡೇಶ್ವರ ಸ್ವಾಮಿಗಳನ್ನು ನಮ್ಮ ಗುರುಗಳೆಂದು ಕಾಡುಗೊಲ್ಲರು ಒಪ್ಪಿಕೊಂಡಿದ್ದಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರ 'ಗುರುಮಠ'ಗಳಿಗೆ ಅನೇಕ ಗುಡಿಕಟ್ಟೆಗಳು ಮತ್ತು ಕಟ್ಟೆಮನೆಗಳು ಸೇರಿವೆ. ಪ್ರಸ್ತುತ ಚಿಕ್ಕುಂತಿ, ಕಂಪಳರಂಗಸ್ವಾಮಿ, 'ಗುರುಸಂಸ್ಥಾನ' ಮಠಕ್ಕೆ ಬಿ.ರೇವಣ್ಣ ಪಟ್ಟದ ಪೂಜಾರಿಯಾಗಿದ್ದಾರೆ. ಅದೇ ರೀತಿ ಗೋಸಿಕೆರೆ 'ಶ್ರೀಗುರು ಸಾರ್ವಾಡೇಶ್ವರಸ್ವಾಮಿ ಮಠ'ಕ್ಕೆ ಜಿ.ಎಂ.ಶ್ರೀಶೈಲ ಮೂರ್ತಿಸ್ವಾಮಿ ಗುರುಗಳಾಗಿದ್ದಾರೆ. ಈ ಗುರುಸ್ಥಾನ ಮತ್ತು ಕಟ್ಟೆಮನೆಗಳಲ್ಲಿ ನ್ಯಾಯ ನಿರ್ಣಯಗಳು ಮಾತ್ರ ನಡೆಯುತ್ತವೆ. ಉಳಿದ ಎಲ್ಲ ವಿಷಯಗಳನ್ನು ಜಾರಿಗೆ ತರುವುದು ಗುಡಿಕಟ್ಟೆಗಳ ಕಾರ್ಯವಾಗಿದೆ.

ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನಗಳ ನ್ಯಾಯ ತೀರ್ಮಾನಕ್ಕೆ ಮೊದಲು ಕೊಡುತ್ತಿದ್ದ ಗೌರವವನ್ನು ಇಂದು ಮ್ಯಾಸಬೇಡರಾಗಲಿ ಅಥವಾ ಕಾಡುಗೊಲ್ಲರಾಗಲಿ ಕೊಡುತ್ತಿಲ್ಲ. ಸಣ್ಣ ಪುಟ್ಟ ವಿಚಾರಗಳಿಗೆ ರಾಜಕೀಯ ಬಣ್ಣ ಹಚ್ಚಿ, ಪೋಲಿಸ್‌ಠಾಣೆ, ಕೋರ್ಟು, ಕಛೇರಿಗಳಿಗೆ ಹೋಗುತ್ತಿದ್ದಾರೆ. ಗ್ರಾಮಪಂಚಾಯ್ತಿ ಚುನಾವಣೆಗಳಿಂದ

ಮ್ಯಾಸಬೇಡ ಮತ್ತು ಕಾಡುಗೊಲ್ಲರ 'ನ್ಯಾಯ ಪದ್ಧತಿ'ಗಳಲ್ಲಿ ಮೊದಲಿನ ಪಾವಿತ್ರ್ಯತೆ ಎಲ್ಲಿಯೂ ಉಳಿದುಕೊಂಡಿಲ್ಲ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯ ಕೈಕೊಂಡಾಗ ಅವಳಿಹಟ್ಟಿ ಮತ್ತು ರಾಮಗಿರಿ ಗ್ರಾಮಗಳಲ್ಲಿ ತಂದೆ ಮಕ್ಕಳಿಬ್ಬರು ಗ್ರಾಮ ಪಂಚಾಯ್ತಿ ಚುನಾವಣೆಗೆ ನಿಂತು, ಮಗ ವಿಜಯಶಾಲಿಯಾದರೆ, ತಂದೆ ಸೋತಿದ್ದ ಪ್ರಕರಣ ಕಂಡು ಬಂದಿದೆ. ಅದೇ ರೀತಿ ಮುಗ್ಧರು ಮತ್ತು ಪ್ರಾಮಾಣಿಕರು ಎಂದು ಹೆಸರುಗಳಿಸಿದ್ದ ಈ ಎರಡು ಬುಡಕಟ್ಟು ಜನಾಂಗ, ಸಾಮಾಜಿಕ ಮೌಲ್ಯಗಳನ್ನು ಧಿಕ್ಕರಿಸಿ, ಅಪವರ್ತಿತ ಸಮೂಹಗಳಾಗಿ ಪರಿವರ್ತನೆಯಾಗುತ್ತಿವೆ. ಆದರೂ ಕೆಲವೊಂದು ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ಹಳೆಯ ಕಾಲದ ನ್ಯಾಯ ಪದ್ಧತಿಗಳಂತೆ ತಮ್ಮ ಹಟ್ಟಿಯ ಗುಡಿಕಟ್ಟೆ ಹಾಗೂ ಕಟ್ಟೆಮನೆಗಳಲ್ಲೆಯೇ ತಮ್ಮ ಜಗಳ ಅಥವಾ ವ್ಯಾಜ್ಯಗಳಿಗೆ ನ್ಯಾಯ ದೊರಕಿಸಿ ಕೊಳ್ಳುವವರು ಸಾಕಷ್ಟು ಜನ ಕಂಡು ಬರುತ್ತಾರೆ.

೯. ವಿಧಿ-ನಿಷೇಧ

ಮಾನವನ ನಡತೆಯನ್ನು ರೂಪಿಸಲು, ನಿಯಂತ್ರಿಸಲು ಸಮಾಜವು ಸ್ಥಾಪಿಸಿರುವ ಕಟ್ಟು ಪಾಡುಗಳೇ ವಿಧಿ-ನಿಷೇಧಗಳು. ಇವು ಯಾವ ಸಂದರ್ಭದಲ್ಲಿ ಮನುಷ್ಯ ಏನು ಮಾಡುಬೇಕು ಮತ್ತು ಏನು ಮಾಡಬಾರದು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಈ ವಿಧಿ ನಿಷೇಧ ಎನ್ನುವ ಕಲ್ಪನೆಯನ್ನು ಇಂದು ಬಹಳ ವಿಶಾಲವಾದ ಅರ್ಥದಲ್ಲಿ ಬಳಸಲಾಗುತ್ತಿದೆ. ಅದನ್ನೇ ಇಂದು ಲೋಕರೂಢಿಗಳು, ಸಂಪ್ರದಾಯಗಳು, ಸಂಸ್ಕಾರಗಳು, ನಂಬಿಕೆಗಳು, ಆಚರಣೆಗಳು, ಕಾನೂನು, ನಿರ್ಬಂಧಗಳು, ಸಮಾರಂಭಗಳು, ಪದ್ಧತಿಗಳು, ಶೋಭಾಚಾರಗಳು ಮತ್ತು ಲಿಖಿತ ಶಾಸನಗಳು ಮೊದಲಾದ ಎಲ್ಲಾ ಬಗೆಯ ಸಾಮಾಜಿಕ ನಿಯಮಗಳನ್ನು ಒಳಗೊಂಡಿರುವಂತೆ ವಿಧಿ-ನಿಷೇಧಗಳಲ್ಲಿ ಬಳಸಲಾಗುತ್ತಿದೆ. ಇವು ಸಾಮಾಜಿಕ ನಡತೆಯ 'ನೀಲಿ ನಕಾಶೆ'ಗಳಾಗಿ ಸಮಾಜದ ಸದಸ್ಯರುಗಳ ನಿರೀಕ್ಷಿತ ನಡತೆ ಹೇಗಿರಬೇಕು? ಎಂಬುದರ ಜೊತೆಗೆ ಆದರ್ಶ ನಡತೆಯ ಬಗ್ಗೆಯೂ ಅವು ತಿಳಿಯಪಡಿಸುತ್ತವೆ. ಮಾನವ ನಿರ್ಮಿತ ಸಂಘ ಸಂಸ್ಥೆಗಳಿಗೆ, ಪಕ್ಷ ಪಂಗಡಗಳಿಗೆ, ರಾಜ್ಯ ಸರ್ಕಾರಗಳಿಗೆ, ಸಮಾಜ ಸಮುದಾಯಗಳಿಗೆ ಆಧಾರ ಸ್ತಂಭಗಳಾಗಿ ವಿಧಿ-ನಿಷೇಧಗಳು ಕೆಲಸ ಮಾಡುತ್ತವೆ. ಸಾಮಾಜಿಕ ಅಂಶಗಳಾದ ಲೈಂಗಿಕತೆ, ವಿವಾಹ, ಜನನ, ಋತುಮತಿ, ಹೆರಿಗೆ, ಆಹಾರ, ಮರಣ, ವೇಷ-ಭೂಷಣ, ದೇವರು, ಜಾತ್ರೆ, ಹಬ್ಬ, ನಾಮಕರಣ, ವೃತ್ತಿ, ವಸತಿ, ನ್ಯಾಯ, ಕುಟುಂಬ ಮೊದಲಾದ ಸಂಪ್ರದಾಯ ಮತ್ತು ನಂಬಿಕೆಗಳನ್ನು ಆಚರಣೆಗೆ ತರುವ ಮಾನವನ ಸ್ವೇಚ್ಛಾಚಾರದ ಮೇಲೆ ಕಡಿವಾಣ ಹಾಕುವುದರ ಮೂಲಕ, ಸಮೂಹದ ಆಸ್ತಿತ್ವಕ್ಕೆ ವಿಧಿ-ನಿಷೇಧಗಳು ಸಹಕಾರಿಯಾಗಿವೆ.

ಈ ವಿಧಿ-ನಿಷೇಧಗಳು ಮಾನವನ ಸಾಮಾಜಿಕ ವ್ಯವಸ್ಥೆಗೆ ಭದ್ರತೆಯನ್ನು ಮತ್ತು ಸ್ಥಿರತೆಯನ್ನು ನೀಡುವುದರಿಂದ ಬುಡಕಟ್ಟು ಸಮೂಹಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಾಮಾಜಿಕ ಜೀವನ ಮತ್ತು ಧಾರ್ಮಿಕ ಆಚರಣೆಗಳಲ್ಲಿ ವಿಧಿ-ನಿಷೇಧಗಳಿಗೆ ಹೆಚ್ಚು ಮಹತ್ವಕೊಟ್ಟು ಅವುಗಳಿಗೆ ಬದ್ಧರಾಗಿ ನಡೆದುಕೊಳ್ಳುತ್ತಾರೆ. ಹುಟ್ಟಿನಿಂದ ಸಾವಿನವರೆಗೂ ಹಲವು ಬಗೆಯ ಕಟ್ಟು ನಿಟ್ಟಾದ ವಿಧಿ-ನಿಷೇಧಗಳು ಈ ಎರಡು ಬುಡಕಟ್ಟುಗಳಲ್ಲಿ ಕಂಡು ಬರುವುದರಿಂದ 'ವಿಧಿಗಳು' ಮತ್ತು 'ನಿಷೇಧಗಳು' ಎಂದು ಎರಡು ರೀತಿ ವಿಭಾಗ ಮಾಡಿ, ಮ್ಯಾಸಬೇಡ

ಮತ್ತು ಕಾಡುಗೊಲ್ಲ ಬುಡಕಟ್ಟುಗಳನ್ನು ಸಮಾಜ ಶಾಸ್ತ್ರೀಯ ಸಿದ್ಧಾಂತದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

೯.೧. ವಿಧಿಗಳು

'ವಿಧಿ' ಎಂದರೆ ಮಾಡಲೇಬೇಕಾದ ಆಜ್ಞೆ ಅಥವಾ ಅನುಸರಿಸಲೇ ಬೇಕಾದ ಮಾರ್ಗ ಈ 'ವಿಧಿ' ಎಂಬ ಶಬ್ಧಕ್ಕೆ ನಿಯಮ, ಆಜ್ಞೆ , ಅದೃಷ್ಟ, ಲಿಖಿತ, ಹಣೆಬರಹ ಎಂಬ ಅರ್ಥವಿದ್ದರೂ ಇಲ್ಲಿ 'ನಿಯಮಗಳು' ಎಂಬ ಅರ್ಥದಲ್ಲಿ ಅಧ್ಯಯಿಸಬೇಕಾಗಿದೆ. ಈ ವಿಧಿ ನಿಯಮಗಳನ್ನು ನಿಶ್ಚಯಾತ್ಮಕ ನೈತಿಕ ನಿಯಮಗಳು ಎಂಬುದಾಗಿಯೂ ಕರೆಯಬಹುದು. ಇವು ನಮ್ಮ ನಡತೆ ಹೀಗೆಯೇ ಇರಬೇಕೆಂದೂ, ನಾವು ಹೀಗೆಯೇ ಮಾಡಬೇಕೆಂದೂ ನಿಗದಿ ಪಡಿಸುತ್ತವೆ. ಈ ವಿಧಿಗಳು ಮಾನವನ ಸಾಮಾಜಿಕ ಬದುಕಿಗೆ ದಾರಿ ದೀಪಗಳಾಗಿರುವುದರಿಂದ; ಸಮಾಜ ಮತ್ತು ಸಮೂಹ ಒಪ್ಪಿತ ನಿರೀಕ್ಷೆಗಳೇ ಅಗಿವೆ. ಒಂದು ಸಮುದಾಯದ ಕಡ್ಡಾಯ ಆಚರಣೆಗಳು ವಿಧಿಗಳಾಗಿ ಪರಿವರ್ತನೆ ಯಾಗುವುದರಿಂದ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮೂಹಗಳಲ್ಲಿ ಆ ಜನಾಂಗಕ್ಕೆ ಸಂಬಂಧಪಟ್ಟ, ಕಟ್ಟು ನಿಟ್ಟಾದ ವಿಧಿ ನಿಯಮಗಳನ್ನು ಪಾಲಿಸುವುದು ಕಂಡು ಬರುತ್ತದೆ.

ಮದುವೆಯಾಗಿ ಒಂದು ವರ್ಷದೊಳಗೆ ಹೆಂಗಸರ ಬಲಗೈಯಲ್ಲಿ 'ಗೊಲ್ಲಕಡಗ' ಇರಬೇಕು. ಹಟ್ಟಿಯಿಂದ ಹೊರಗೆ ಹೆರಿಗೆ ಮಾಡಿಸಬೇಕು. ಮುಟ್ಟಾದ ಹೆಣ್ಣು ಮನೆಯಿಂದ ಹೊರಗೆ ಇರಬೇಕು. ತೆರ ಕೊಟ್ಟು ಹೆಣ್ಣು ತರಬೇಕು. ದೇವರ ಪೌಳಿ ಮತ್ತು ಹಟ್ಟಿ ಸುತ್ತ ಕಳ್ಳಿ ಹಾಕಬೇಕು. ದೇವರಿಗೆ ಹುಟ್ಟು ಕೂದಲು ಬಿಡಬೇಕು. ಕುರಿ ಹಟ್ಟಿ ಅಥವಾ ದೇವರ ಪೌಳಿಯಲ್ಲಿ ಮಕ್ಕಳ ಜವಳ ತೆಗೆಸಬೇಕು. ಸತ್ತ ಮಾತಾ-ಪಿತೃಗಳ ದಿನ ಕರ್ಮಗಳನ್ನು ಮಾಡಬೇಕು. ಮನೆ ದೇವರ ವಾರದ ದಿನ ನೆಲ-ಕಾರಣೆ ಮಾಡಬೇಕು. ಮೈನೆರೆತ ಹೆಣ್ಣಿಗೆ ಸೋದರಮಾವನೇ ಹಸಿರು ಗುಡ್ಲು ಕಟ್ಟಬೇಕು. ಧಾರೆ ಮಹೂರ್ತಕ್ಕೆ ವಧುವನ್ನು ಸೋದರಮಾವ ಕರೆದು ತರಬೇಕು. ನಾಮಕರಣದಲ್ಲಿ ಮಗುವಿನ ಸೋದರತ್ತೆ ತೊಟ್ಟಿಲು ಪೂಜೆ ಮಾಡಬೇಕು. ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ನ್ಯಾಯ ತೀರ್ಮಾನಕ್ಕೆ ಬದ್ಧರಾಗಬೇಕು. ಬೆರಗು ಹಾಕಿದ ಹಂಚಿ ಗುಡಿಸಲಿನಲ್ಲಿ ದೇವರಿಡಬೇಕು. ಗುಗ್ಗರಿ ಹಬ್ಬದಲ್ಲಿ ದೇವರಿಗೆ ಕಾಸು ಮೀಸಲು ಕೊಡಬೇಕು. ಹನ್ನೆರಡು ವರ್ಷಕ್ಕೆ ಒಮ್ಮೆಯಾದರೂ ಪುಣ್ಯ ಕ್ಷೇತ್ರಗಳಿಗೆ ದೇವರನ್ನು ಜಲ್ದಿಗೆ ತೆಗೆದುಕೊಂಡು ಹೋಗಬೇಕು. ಶುಭಕಾರ್ಯಗಳಲ್ಲಿ ಗಂಡಸು ಪೇಟ ಸುತ್ತಿರಬೇಕು. ತಳಿ ನೊಡಿ ಹೆಣ್ಣು ತರಬೇಕು. ಹಿರಿಯರಿಗೆ ಗೌರವ ಕೊಡಬೇಕು ಇವೇ ಮೊದಲಾ ಅಸಂಖ್ಯಾತ 'ವಿಧಿಗಳು' ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಕಂಡು ಬರುವುದರ ಜೊತೆಗೆ ಅವರ ಸಾಮಾಜಿಕ ಜೀವನದಲ್ಲಿ ಅನೌಪಚಾರಿಕ ನಿಯಮಗಳಾಗಿ ಕಾರ್ಯನಿರ್ವಹಿಸುತ್ತವೆ.

೯.೨. ನಿಷೇಧಗಳು

'ನಿಷೇಧ' ಎಂದರೆ ಇಂಥದನ್ನು ಮಾಡಕೂಡದು ಅಥವಾ ಇದನ್ನು ಬಹಿಷ್ಕರಿಸು ಎಂದು ಅರ್ಥ. ಈ 'ನಿಷೇಧ'ಎಂಬ ಶಬ್ದಕ್ಕೆ ವಿರೋಧ, ನಿರಾಕರಣೆ, ಬಿಡುಗಡೆ, ಬಹಿಷ್ಕಾರ, ಪ್ರತಿಭಟನೆ, ಅಡ್ಡಿ, ಸಲ್ಲದು ಎಂಬ ಅರ್ಥಗಳಿದ್ದರೂ ಇಲ್ಲಿ "ಬಹಿಷ್ಕಾರಾಜ್ಞೆ "ಎಂಬ ಅರ್ಥದಲ್ಲಿ ಅಧ್ಯಯನ ಮಾಡಬೇಕಾಗಿದೆ. ಈ ನಿಷೇಧಗಳನ್ನು

ನಿಷೇಧಾತ್ಮಕ ನೈತಿಕ ನಿಯಮಗಳು ಎಂಬುದಾಗಿಯೂ ಕರೆಯುವರು. ಇವು ನಾವು ಹೇಗೆ ನಡೆದುಕೊಳ್ಳಬಾರದೆಂಬುದನ್ನು ತಿಳಿಸುತ್ತವೆ. ನಮ್ಮ ಕೆಲವೊಂದು ನಡತೆಯ ರೀತಿಯನ್ನು ಇವು ಬಹಿಷ್ಕರಿಸುತ್ತವೆ. ಆದ್ದರಿಂದ ಇವುಗಳನ್ನು 'ಬಹಿಷ್ಕಾರಾಜ್ಞೆ' ಎಂಬುದಾಗಿಯೂ ಕರೆಯಬಹುದು. ಸಮಾಜ ಮತ್ತು ಸಮುದಾಯಗಳು ತಿರಸ್ಕರಿಸಲ್ಪಟ್ಟ ಸಾಮಾಜಿಕ ನಿಯಮಗಳೇ ನಿಷೇಧಗಳಾಗಿರುತ್ತವೆ. ಹಟ್ಟಿ, ಗ್ರಾಮ, ದೇವರು, ಧರ್ಮ, ಕುಲ ಮತ್ತು ಬೆಡಗುಗಳಿಗೆ ವಿರೋಧವಾಗಿರುವ ಯಾವುದೇ ಆಚರಣೆಗಳಿದ್ದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮೂಹಗಳು ಬಹಿಷ್ಕರಿಸುವುದರಿಂದ ಈ ಎರಡು ಬುಡಕಟ್ಟುಗಳಿಗೆ ಸಂಬಂಧಿಸಿದ ಹಲವಾರು ನಿಷೇಧಗಳನ್ನು ಈ ಜನಾಂಗಗಳಲ್ಲಿ ಕಾಣಬಹುದು.

ಗಂಡ ಸತ್ತರೂ ಕಾಡುಗೊಲ್ಲರ ಹೆಣ್ಣು ಮಕ್ಕಳು ಗೊಲ್ಲಕಡಗ ತೆಗಯಬಾರದು. ಹಂದಿ, ಕೋಳಿ ಹಟ್ಟಿ ಪ್ರವೇಶಿಸಬಾರದು. ಸೋಮವಾರ ಎತ್ತಿನ ಹೆಗಲ ಮೇಲೆ ನೊಗ ಇಡಬಾರದು. ಶುಭ ಕಾರ್ಯಕ್ಕೆ ಮೂರು ಜನ ಹೋಗಬಾರದು. ಒಂದೇ ಪಿಂಡಕ್ಕೆ ಸೇರಿದವರು ಪರಸ್ಪರ ವಿವಾಹವಾಗಬಾರದು. ಹರಿಜನರು ಗೊಲ್ಲರ ಹಟ್ಟಿಯೊಳಗೆ ಬರಬಾರದು. ಈಚಲ ಚಾಪೆ ಕಸಬರಿಕೆ ಮತ್ತು ಈಚಲ ಹಣ್ಣುಗಳನ್ನು ಉಪಯೋಗಿಸಬಾರದು. ದಾಸಯ್ಯ ಮತ್ತು ಪೂಜಾರಿಗಳು ಬಸ್ಸು ರೈಲು ಹತ್ತ ಬಾರದು. ಊಟದ ತಟ್ಟೆ ದಾಟಬಾರದು. ಕೈಯಿಂದ ದೀಪ ಆರಿಸಬಾರದು. ಅಂತರ್ಜಾತಿ ವಿವಾಹ ಮಾಡಿಕೊಳ್ಳಬಾರದು. ನಾಗಪ್ಪನ ಹಬ್ಬದಲ್ಲಿ ಗೌಲಿ ಪಾಯಸ ಮಾಡಬಾರದು. ದೈವದವರ ಮುಂದೆ ಸುಳ್ಳು ಹೇಳಬಾರದು, ಬಿಲ್ವಪತ್ರೆ, ಬನ್ನಿ, ಆಲದ ಮರದ ಕಟ್ಟಿಗೆಗಳನ್ನು ಒಲೆಯಲ್ಲಿ ಇಟ್ಟು ಉರಿಸಬಾರದು. ಮಂಗಳ ಕಾರ್ಯಗಳಲ್ಲಿ ಹೆಂಗಸರು ತಲೆಯ ಮೇಲಿನ ಸೆರಗು ತೆಗೆಯ ಬಾರದು. ಸಂಜೆ ಹೊತ್ತಿನಲ್ಲಿ ಕಸ ಹೊರಗೆ ಹಾಕಬಾರದು. ಒಲೆಯನ್ನು ಕಾಲಿನಿಂದ ಒದೆಯಬಾರದು. ಸೂತಕದ ಮನೆಯಲ್ಲಿ ಊಟ ಮಾಡಬಾರದು. ರಾಶಿ ಕಣದಲ್ಲಿ ಚಪ್ಪಲಿ ಹಾಕಬಾರದು. ದೂಳು ಸಂಜೆ ಹೊತ್ತಿನಲ್ಲಿ ಮಲಗಬಾರದು. ಜಾತ್ರೆಯಲ್ಲಿ ಸಾರು ಹಾಕಿದಾಗ ಒಲೆ ಮೇಲೆ ಹಂಚು ಇಡಬಾರದು, ಸೂತಕದ ಹೆಣ್ಣು ಶುಭ ಕಾರ್ಯ ಮಾಡಬಾರದು, ಹುಟ್ಟು ಸಾವು, ಮೈನೆರೆತಾಗ ಮಂಗಳ ಕಾರ್ಯ ಮಾಡಬಾರದು. ಖಾಲಿ ಚಂಬುವಿನಲ್ಲಿ ಹಾಲು ಕರೆಯಬಾರದು. ಜಾಡಿ ಕಂಬಳಿಯ ಮೇಲೆ ಕುಳತುಕೊಳ್ಳಬಾರದು. ದೇವರಿಗೆ ಅಂಟು ಮುಟ್ಟು ಮಾಡಬಾರದು ಮೊದಲಾದ ಹಲವು ಬಗೆಯ "ನಿಷೇಧಗಳು" ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಕಂಡು ಬರುತ್ತವೆ. ಆದರೆ ಈ ವಿಧಿ-ನಿಷೇಧಗಳು ಸಂಸ್ಕೃತೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಪ್ರಸ್ತುತ ಸಮಾಜದಲ್ಲಿ ಕಣ್ಮರೆಯಾಗುತ್ತಿದ್ದರೂ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಇಂತಹ ಹಲವಾರು ನಂಬಿಕೆ, ಆಚರಣೆಗಳು, ವಿಧಿ-ನಿಷೇಧಗಳನ್ನು ಇಂದಿಗೂ ಉಳಿಸಿಕೊಂಡು ಬರುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ಆರ್. ರಾಜಣ್ಣ, 'ನಾಯಕ ಜನಾಂಗದ ಇತಿಹಾಸ', ೧೯೮೨, ಪುಟ: ೫೪

೨. ಎಲ್.ಪಿ.ವಾಸುದೇವಮೂರ್ತಿ, 'ಸಂಯುಕ್ತ ಕರ್ನಾಟಕ', ದಿನಾಂಕ: ೧೮.೦೩.೨೦೦೧, ಸಾಪ್ತಾಹಿಕ ಸೌರಭ, ಪುಟ:೬

೩. ಲೇಖಕ ಎಸ್.ಬಿ. ತಿಪ್ಪನಾಯಕ, 'ವಾಲ್ಮೀಕಿ ಬಂಧು', ಮಾಸಪತ್ರಿಕೆ, ಮಾರ್ಚ್-೧೯೯೯, ಪು:೬

೪. ವಿರೂಪಾಕ್ಷಿ ಪೂಜಾರಹಳ್ಳಿ 'ಗಾದರಿ ಪಾಲನಾಯಕ', ೧೯೯೯, ಪುಟ:೧೦೦

ಅಧ್ಯಾಯ - ೪

ಸಂಸ್ಕಾರಗಳು ಮತ್ತು ಸಂಪ್ರದಾಯಗಳು

೧. ಜನನ

೨. ನಾಮಕರಣ

೩. ಜವಳ ತೆಗೆಸುವುದು

೪. ಋತುಮತಿ ಶಾಸ್ತ್ರ

೫. ವಿವಾಹ ಪದ್ಧತಿ

೬. ಶವ ಸಂಸ್ಕಾರ

೪. ಸಂಸ್ಕಾರಗಳು ಮತ್ತು ಸಂಪ್ರದಾಯಗಳು

ಬಹುಕಾಲದಿಂದಲೂ ಪುನರಾವರ್ತನೆಗೊಳ್ಳುತ್ತಾ ಆಚರಣೆಯಲ್ಲಿ ಬಂದಿರುವ ವಿಧಾನಗಳೇ ಸಂಸ್ಕಾರಗಳು ಮತ್ತು ಸಂಪ್ರದಾಯಗಳು. ಇವು ಮಾನವನ ಸಾಮಾಜಿಕ ಜೀವನವನ್ನು ನಿಯಂತ್ರಿಸಿ ಸಾಮಾಜಿಕ ಸಾಮರಸ್ಯವು ನೆಲೆಸುವಲ್ಲಿ ಸಹಾಯಮಾಡುತ್ತವೆ. ಆದ್ದರಿಂದಲೇ ಸಂಸ್ಕಾರಗಳು ಮತ್ತು ಸಂಪ್ರದಾಯಗಳನ್ನು 'ಸಾಮಾಜಿಕ ಜಗತ್ತಿನ ದೊರೆ'ಗಳೆನ್ನುವುದುಂಟು. ಪ್ರತಿ ಸಮಾಜವೂ ತನ್ನದೇ ಆದ ಹಲವು ಸಂಸ್ಕಾರಗಳು ಮತ್ತು ಸಂಪ್ರದಾಯ ಗಳನ್ನು ಹೊಂದಿರುತ್ತವೆ. ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ, ವಿವಾಹ, ಶವಸಂಸ್ಕಾರ ಮೊದಲಾದವುಗಳಲ್ಲಿ ಪ್ರತಿ ಸಮಾಜವೂ ತನ್ನದೇ ಆದ ವಿಧಿ-ವಿಧಾನಗಳನ್ನು ಸಾಂಪ್ರದಾಯಿಕವಾಗಿ ನಿರೂಪಿಸುತ್ತದೆ. ಅವು ಸಾಮಾಜಿಕ ನಿಯಂತ್ರಣಕ್ಕೆ ಉತ್ತಮ ಮತ್ತು ಶಕ್ತಿದಾಯಕ ಅಂಶವಾಗಿ ಸಂಸ್ಕೃತಿಯ ಪರಂಪರೆಯನ್ನು ಮುಂದುವರೆಯುವಂತೆ ಮಾಡುತ್ತವೆ. ಆದರೆ ಸಂಸ್ಕಾರಗಳು ಮತ್ತು ಸಂಪ್ರದಾಯಗಳು ಹೇಗೆ ಹುಟ್ಟಿಕೊಳ್ಳುತ್ತವೆ, ಬೆಳೆಯುತ್ತವೆ ಎಂದು ಸ್ಪಷ್ಟವಾಗಿ ಹೇಳುವುದು ಕಷ್ಟಸಾಧ್ಯ.

ಮ್ಯಾಕ್ ಡೂಗಲ್ ಹೇಳುವಂತೆ 'ಎಷ್ಟೋ ಸಂಪ್ರದಾಯಗಳ ಮೂಲ ಧ್ಯೇಯೋದ್ದೇಶಗಳು ಇತಿಹಾಸದ ಗರ್ಭದಲ್ಲಿ ಹುದುಗಿಹೋಗಿವೆ' ಎಂದಿದ್ದಾರೆ. ಷೇಕ್ಸ್‌ಪಿಯರ್ ಈ ಸಂಪ್ರದಾಯಗಳನ್ನು 'ದಬ್ಬಾಳಿಕೆ'ಯೆಂದು, ಬೇಕನನು 'ಮಾನವ ಜೀವನದ ನ್ಯಾಯಮೂರ್ತಿ'ಯೆಂದು ಹೇಳಿದ್ದಾರೆ. ಅದೇ ರೀತಿ ಲುಂಡ್‌ಬರ್ಗ್‌ರವರು ಒಂದು 'ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾಯಿಸಲ್ಪಡುವಷ್ಟರ ಮಟ್ಟಿಗೆ ಸ್ಥಿರತೆಯನ್ನು ಹೊಂದಿದ್ದು, ಸಮಾಜದ ಔಪಚಾರಿಕ ಮಾನ್ಯತೆಯನ್ನು ಪಡೆದಿರುವ ಲೋಕ ರೂಢಿಗಳನ್ನೇ ಸಂಪ್ರದಾಯಗಳೆಂದು' ಕರೆಯಬಹುದು ಎಂದಿದ್ದಾರೆ.

ಸಾಮಾನ್ಯವಾಗಿ ಸಂಸ್ಕಾರಗಳು ಮತ್ತು ಸಂಪ್ರದಾಯಗಳ ಮೂಲ ಸ್ವರೂಪವು ಅಸ್ಪಷ್ಟವೂ, ಅಗೋಚರವೂ, ಅಜ್ಞಾತವೂ ಆಗಿದ್ದು ಅವು ಅಪ್ರತ್ಯಕ್ಷವಾಗಿ ಬೆಳೆದು ಬಂದಿರುತ್ತವೆ. ಅದರೆ ಯೋಜನಾಬದ್ಧವಾಗಿ ಸಾಮಾಜಿಕ ಜೀವನದಲ್ಲಿ ಒಡಮೂಡುವುದಿಲ್ಲ. ಜನಸಮೂಹದ ಬೇಡಿಕೆಗಳನ್ನು ಆಧರಿಸಿ ಇವು ಬೆಳೆಯುತ್ತವೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಸಂಸ್ಕಾರ ಮತ್ತು ಸಂಪ್ರಾದಯಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಅವರು ತಮ್ಮ ಸಾಮಾಜಿಕ ಬದುಕಿನಲ್ಲಿ ಜನನ, ನಾಮಕರಣ, ಜವಳ ತೆಗೆಸುವುದು, ಋತುಮತಿ ಶಾಸ್ತ್ರ, ವಿವಾಹ ಮತ್ತು ಮರಣ ಮೊದಲಾದ ಸಂಸ್ಕಾರಗಳು ಮತ್ತು ಸಂಪ್ರದಾಯಗಳನ್ನು ಈ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

೧. ಜನನ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ವಿವಾಹಿತ ಹೆಣ್ಣು ಗರ್ಭಧರಿಸುವುದರೊಂದಿಗೆ ಜನನ ಸಂಸ್ಕಾರ ಆರಂಭವಾಗುತ್ತದೆ. ಚೊಚ್ಚಲ ಹೆರಿಗೆಯಾದರೆ ಐದು ಅಥವಾ ಏಳು ತಿಂಗಳಲ್ಲಿ ತವರು ಮನೆಯವರು ಬಂದು ಮಗಳನ್ನು ಕರೆದುಕೊಂಡು ಹೋಗುವ ಪದ್ಧತಿಯಿದೆ. ನಂತರ ಐದು, ಏಳು ಮತ್ತು ಒಂಬತ್ತು ತಿಂಗಳಲ್ಲಿ ಹೆಣ್ಣಿನ ತವರು ಮನೆಯಲ್ಲಿ "ಸೀಮಂತ ಕಾರ್ಯ ಅಥವಾ ಬಸುರೂಟ" ಇಟ್ಟುಕೊಳ್ಳುತ್ತಾರೆ. ಸಂಪತ್ತು ಹಾಗೂ ಸೌಭಾಗ್ಯದ ಸಂಕೇತವಾದ ಹಸಿರು ಪತ್ತಲ, ಕುಪ್ಪಸ, ಅರಿಶಿಣ, ಕುಂಕುಮ ಮತ್ತು ಹೂವುಗಳನ್ನುಮುಡಿಸಿ ಬಸುರಿ ಹೆಣ್ಣಿಗೆ ಉಡಿ ತುಂಬುವ ಶಾಸ್ತ್ರ ಗಂಡನ ಮನೆಯವರು ಮಾಡುತ್ತಾರೆ. ಬಂಧು ಬಳಗಕ್ಕೆ ಆ ದಿನ ಸಿಹಿ ಊಟ ಹಾಕುತ್ತಾರೆ. ಗರ್ಭಿಣಿ ಹೆಣ್ಣಿಗೆ ನವಮಾಸ ತುಂಬಿದಾಗ ಈ ಎರಡೂ ಬುಡಕಟ್ಟು ಸಮೂಹಗಳು ತಮ್ಮದೇ ಆದ ಸಂಪ್ರದಾಯ ಮತ್ತು ನಂಬಿಕೆಗಳ ಮುಖಾಂತರ ಹೆರಿಗೆಗೆ ಸಿದ್ಧತೆ ಮಾಡಿಕೊಳ್ಳುವ ಪದ್ಧತಿಗಳು ವಿಚಿತ್ರವಾಗಿದ್ದರೂ ಸತ್ಯವಾಗಿವೆ.

೧.೧. ಮ್ಯಾಸಬೇಡರು

ಮ್ಯಾಸಬೇಡರು ತಮ್ಮ ಜನಾಂಗದ ಸೂಲಗಿತ್ತಿಯನ್ನು ಕರೆಯಿಸಿ ಮನೆಯೊಳಗೆ ಹೆರಿಗೆ ಮಾಡಿಸುವುದರಿಂದ ಪ್ರತ್ಯೇಕವಾಗಿ "ಹೆರಿಗೆ ಗುಡ್ಲು" ಕಟ್ಟುವ ಪದ್ಧತಿ ಪ್ರಸ್ತುತ ಸಮಾಜದಲ್ಲಿ ಎಲ್ಲಿಯೂ ಕಂಡುಬರುತ್ತಿಲ್ಲ. ಬಹುಕಾಲದ ಹಿಂದೆ ಮ್ಯಾಸಬೇಡರಲ್ಲಿ ಹೆರಿಗೆ ನೋವು ಕಾಣಿಸಿ ಕೊಂಡ ಕೊಡಲೇ ಮನೆಯ ಹೊರಗೆ ಅಥವಾ ಮ್ಯಾಸರಹಟ್ಟಿ ಯಿಂದ ಹೊರಗೆ ಪ್ರತ್ಯೇಕವಾದ 'ಹೆರಿಗೆ ಗುಡ್ಲು' ಕಟ್ಟಿ ಅದರಲ್ಲಿ ಹೆರಿಗೆ ಮಾಡಿಸುತ್ತಿದ್ದರಂತೆ. ಮ್ಯಾಸಬೇಡ ಸಮುದಾಯದಲ್ಲಿ ಹೆರಿಗೆ ಕಷ್ಟವಾದರೆ ಮನೆದೇವರಿಗೆ ನಾಲ್ಕಾಣೆ ಮುಡುಪು ಕಟ್ಟಿಕೊಂಡು ಮನೆಯಲ್ಲಿ ನೆಲವುಗೆ ಕಟ್ಟುತ್ತಾರೆ. ಪೂಜಾರಿ ಮತ್ತು ದಾಸಯ್ಯಗಳ ಮನೆತನದವರಾದರೆ ಮನೆಯಲ್ಲಿರುವ ದೇವರ ಪರಿಕರಗಳನ್ನು ಬೇರೊಬ್ಬರ ಅಣ್ಣ ತಮ್ಮಗಳ ಮನೆಯಲ್ಲಿ ಇಟ್ಟು ಬರುತ್ತಾರೆ. ಹೆರಿಗೆಯಾದ ಕೊಡಲೇ ಮಗುವಿನ ಹೊಕ್ಕುಳ ಬಳ್ಳಿಯನ್ನು ತಲೆಬಾಗಿಲಿನಿಂದ ಹೊರಗೆ ಕುಡುಗೋಲಿನಿಂದ ಕೊಯ್ದು ಗಂಟು ಹಾಕುತ್ತಾರೆ. ಎಣ್ಣೆ ನೀರಿನ ಸ್ನಾನ ಮಾಡಿಸಿ ಮಗುವನ್ನು ಒಳಗೆ ತರುತ್ತಾರೆ. ಹೊಟ್ಟೆಯಲ್ಲಿನ ಹೊಲಸು ಹೊರಗೆ ಬರಲೆಂದು ಹರಳೆಣ್ಣೆ, ಹುಣಸೆ ರಸ ಅಥವಾ ಜೇನು ತುಪ್ಪವನ್ನು ಮಗುವಿಗೆ ಚೀಪಿಸುತ್ತಾರೆ. ಕಾಯಿಸಿದ ಸೂಜಿ ಅಥವಾ ಕರಿಬಳೆಯಿಂದ ಮಗುವಿಗೆ ಚುಟಿಕೆ ಹಾಕುತ್ತಾರೆ. ಹೆರಿಗೆಯಾಗಿ ಮೂರನೆಯ ದಿವಸಕ್ಕೆ ಮನೆಯನ್ನೆಲ್ಲ ಸಾರಿಸಿ, ಮಡಿಮಾಡಿ ಅಗಸರಿಂದ ಗೋಗಂಜು ಹಾಕಿಸಿ ಸೂತಕ ಕಳೆದುಕೊಳ್ಳುತ್ತಾರೆ. ಅದೇ ದಿನ ಬಾಣಂತಿ ಮತ್ತು ಮಗುವಿಗೆ ಹೊರಗೆ ಜಳಕ ಮಾಡಿಸಿ ಬೆಲ್ಲದ ನೀರು, ಕುಡುಗೋಲು ಮತ್ತು ಬೇವಿನ ಸೊಪ್ಪು ಈಮೂರು ಸಾಮಾನುಗಳನ್ನು ಮೊರದಲ್ಲಿಟ್ಟು ಬಾಣಂತಿ ಕೈಗೆ ಕೊಟ್ಟು ಸೂರ್ಯನಮಸ್ಕಾರ ಮಾಡಿಸುತ್ತಾರೆ. ನಂತರ ಅಗಸರಿಂದ ಗೋಗುಂಜು ಪ್ರೋಕ್ಷಣೆ ಮಾಡಿಸಿ ಮನೆಯ ಒಳಗೆ ಕರೆದು ಕೊಳ್ಳುತ್ತಾರೆ.

ಬಾಣಂತಿ ಮಗುವಿಗೆ ಶೀತ ಆಗದಿರಲೆಂದು ಮಲಗುವ ಸ್ಥಳದಲ್ಲಿ ಭತ್ತದ ಹುಲ್ಲನ್ನು ಹಾಸಿ ಅದರ ಮೇಲೆ ಚಾಪೆ ಅಥವಾ ಗೋಣಿಚೀಲ ಹಾಕಿರುತ್ತಾರೆ. ಮಗುವಿಗೆ ನಾಮಕರಣ ಮಾಡುವವರೆಗೆ ಮೊರದೊಳಗೆ ಹಳೆ ಬಟ್ಟೆ

ಹಾಸಿ ಮಗುವನ್ನು ಮಲಗಿಸುತ್ತಾರೆ. ನಾಮಕರಣದ ನಂತರ ಬಿದಿರು ತೊಟ್ಟಿಲು ಅಥವಾ ಎರಡು ಕಂಭಗಳಿಗೆ ಜೋಲಿ ಕಟ್ಟಿ ಮಗುವನ್ನು ಹಾಕುತ್ತಾರೆ. ಪ್ರತಿ ದಿನ ಎಣ್ಣೆಹಚ್ಚಿ ಜಳಕ ಮಾಡಿಸಿ ಸಾಂಬ್ರಾಣಿ ಹೊಗೆ ಹಾಕಿ ಮಗುವನ್ನು ಮಲಗಿಸುತ್ತಾರೆ. ಮಗು ಹುಟ್ಟಿ ಹದಿನಾರು ದಿನದೊಳಗೆ 'ಹಸಿರು ಮದ್ದು' 'ಕಾರ' ಮತ್ತು 'ಶೆಟ್ಟಿಹಾಲು' ಕುಡಿಸುತ್ತಾರೆ. ದುಷ್ಟ ಶಕ್ತಿಗಳ ಬಗ್ಗೆ ನಂಬಿಕೆಯಿಟ್ಟಿರುವ ಮ್ಯಾಸಬೇಡರು ಬಾಣಂತಿ ಮಲಗುವ ತಲೆದಿಂಬಿನ ಕಡೆ ಹಳೆ ಕಸಬರಿಕೆ, ಚಪ್ಪಲಿ, ಚೂರಿ ಇಟ್ಟಿರುತ್ತಾರೆ. ಮನೆಯ ಪ್ರವೇಶದ ತಲೆ ಬಾಗಿಲ ಹತ್ತಿರ ಒದ್ದೆಯಾಗಿರುವ 'ಗೋಣಿಚೀಲ' ಹಾಕಿರುತ್ತಾರೆ. ಸೂತಕ ಕಳೆಯುವ ತನಕ ಯಾರಿಗೂ ಭಿಕ್ಷೆ ನೀಡುವುದಿಲ್ಲ. ಹುಟ್ಟಿದೇಳು ದಿನಕ್ಕೆ 'ಶೆಟವಿ ತಾಯಿ' ಮಗುವಿಗೆ ಹಣೆಬರಹ ಬರೆಯುತ್ತಾಳೆ ಎಂಬ ನಂಬಿಕೆಯಿದೆ. ಹುಟ್ಟಿದ ಮಗುವಿಗೆ ಜಾತಕ, ಭವಿಷ್ಯ, ಪಂಚಾಗ ಕೇಳುವ ಪದ್ಧತಿ ಮ್ಯಾಸಬೇಡರಲ್ಲಿಲ್ಲ. ಆದರೂ ಈಗ ಕೆಲವರು ಕೇಳುತ್ತಿದ್ದಾರೆ. ಮಗುವಿಗೆ ಜನನದ ಕಾಲ, ಹಗಲು, ರಾತ್ರಿ, ಹುಣ್ಣಿಮೆ, ಅಮವಾಸ್ಯೆ, ದೇವರವಾರ ಮತ್ತು ಹಬ್ಬಗಳನ್ನು ನೋಡಿ ಮಗುವಿನ ಭವಿಷ್ಯ ನಿರ್ಧರಿಸುತ್ತಾರೆ. ಮೂರು ಹೆಣ್ಣಿನ ನಂತರ ಒಂದು ಗಂಡು ಮಗುವಾದರೆ ಅದೃಷ್ಟವೆಂತಲೂ ಮೂರು ಗಂಡಿನ ನಂತರ ಒಂದು ಹೆಣ್ಣು ಮಗು ಹುಟ್ಟಿದರೆ ಅನಿಷ್ಟ ಎಂಬ ನಂಬಿಕೆಯಿದೆ. ಮಗುವಿಗೆ ಕಣ್ಣೆಸರು ಅಥವಾ ಕೆಟ್ಟ ದೃಷ್ಟಿ ಬೀಳದಿರಲೆಂದು ಹಂಚಿಕಡ್ಡಿ,ವೀಳ್ಯೆದೆಲೆ, ತೆಂಗಿನ ಚಿಪ್ಪು ಸುಡುತ್ತಾರೆ. ಉಪ್ಪು ಮೆಣಸಿನಕಾಯಿ ನೀವಳಿಸಿ ಬೆಂಕಿಯ ಕೆಂಡದ ಮೇಲೆ ಹಾಕುತ್ತಾರೆ. ಅನ್ನ ನೀವಳಿಸಿ ದೂರ ಎಸೆಯುತ್ತಾರೆ. ಪಂಡಿತರಿಂದ ಸಗಣಿ ಅಥವಾ ಮಣ್ಣಿನ ಗೊಂಬೆ ಮಾಡಿಸಿ ಆ ಗೊಂಬೆಗೆ ಪೂಜೆ ಮಾಡಿ ಮಗು ಮತ್ತು ತಾಯಿಯಿಂದ ಮುಟ್ಟಿಸಿ ಹಟ್ಟಿಯಿಂದ ಹೊರಗೆ ತಂಗಟೆ ಗಿಡ, ಬಿಲ್ವಪತ್ರೆ ಮರ ಅಥವಾ ಅಲದ ಮರದ ಕೆಳಗೆ ಇಟ್ಟು ಹಿಂದಕ್ಕೆ ತಿರುಗಿ ನೋಡದೆ ಮನೆಗೆ ಬರುತ್ತಾರೆ. ಮಗು ಹುಟ್ಟಿ ಐದು ತಿಂಗಳೊಳಗೆ ಮನೆದೇವರಿಗೆ ಕರೆದುಕೊಂಡು ಹೋಗಿ ಬರುತ್ತಾರೆ.

೧.೨. ಕಾಡುಗೊಲ್ಲರು

ಪುರಷ ಪ್ರಧಾನ ಕಾಡುಗೊಲ್ಲ ಸಮಾಜದಲ್ಲಿ ಹೆತ್ತರೂ, ಸತ್ತರೂ ಮತ್ತು ಮುಟ್ಟಾದರೂ ಸೂತಕವೆಂದು ಭಾವಿಸುವ ಈ ಜನಾಂಗ ಹಟ್ಟಿಯಿಂದ ಹೊರಗೆ ಪ್ರತ್ಯೇಕವಾದ "ಹೆರಿಗೆ ಗುಡ್ಲು" ಕಟ್ಟುತ್ತಾರೆ. ಈ ಹೆರಿಗೆ ಗುಡ್ಲನ್ನು ತೆಂಗಿನ ಗರಿ, ಅಡಿಕೆ ಪಟ್ಟೆ, ಬಾಳೆ ಪಟ್ಟೆ, ಆಪು ಅಥವಾ ಅಡವಿ ಹುಲ್ಲನ್ನು ಬಳಸಿ ೧೬ ಅಡಿ ಸುತ್ತಳತೆ ೫.೧೦ ಅಡಿ ಎತ್ತರ ಗೋಳಾಕಾರ ಹೊಂದಿರುವ 'ಗುಡ್ಲು' ಗೆ ಕಮರದ ನಾರು ಅಥವಾ ಕತ್ತಾಳೆ ನಾರಿನಿಂದ ಸುತ್ತ ಹಿಂಡಿಕೆ ಬಿಗಿದಿರುತ್ತಾರೆ. ನೆಲಕ್ಕೆ ಭತ್ತದ ಹುಲ್ಲು ಹಾಸಿ ಅದರ ಮೇಲೆ ಗೋಣಿ ತಟ್ಟುಗಳನ್ನು ಹಾಕಿರುತ್ತಾರೆ. ಗರ್ಭಿಣಿ ಹೆಂಗಸಿಗೆ ಹೆರಿಗೆಯ ನೋವು ಕಾಣಿಸಕೊಂಡ ಕೂಡಲೇ ಹಟ್ಟಿಯಿಂದ ಹೊರಗೆ ಕಟ್ಟಿದ 'ಹೆರಿಗೆ ಗುಡ್ಲು'ಗೆ ತಂದು ಬಿಡುತ್ತಾರೆ. ಹೆರಿಗೆ ಗುಡ್ಲು ಇರುವ ಸ್ಥಳದಲ್ಲಿ ಗಂಡಸರಿಗೆ ಪ್ರವೇಶವಿಲ್ಲ. ಬೇಡ ಜನಾಂಗದ ಅಥವಾ ತಮ್ಮ ಜನಾಂಗದ ಸೂಲಗಿತ್ತಿ ಯೊಬ್ಬಳು ಹೆರಿಗೆ ಮಾಡಿಸಿ ಹೊಕ್ಕಳ ಬಳ್ಳಿ ಕತ್ತರಿಸಿ 'ಬರೆ ಬಂಗಾರ' ಅಂತ ಕಾಯಿಸಿದ ಸೂಜಿ ಅಥವಾ ಗಾಜಿನಬಳೆಯಿಂದ ಮಗುವಿಗೆ ಮೂರು ಚುಟಿಕೆ ಹಾಕುತ್ತಾಳೆ. ಬೇವಿನ ಸೊಪ್ಪು ಬೆರೆಸಿದ ಬಿಸಿನೀರಿನಿಂದ ಬಾಣಂತಿ ಮತ್ತು ಮಗುವಿಗೆ ಜಳಕ ಮಾಡಿಸಿ ಸೂರ್ಯ ನಮಸ್ಕಾರ ಮಾಡಿಸುತ್ತಾಳೆ.

ಹೆರಿಗೆಯಾಗಿ ಸೂತಕ ಕಳೆಯುವವರೆಗೂ ಕೆಲವು ಗೊಲ್ಲರಹಟ್ಟಿಗಳಲ್ಲಿ ದೇವಸ್ಥಾನದ ಬಾಗಿಲು ಮುಚ್ಚುತ್ತಾರೆ. ಮಡಿ, ಮೈಲಿಗೆ, ಸೂತಕದ ವಿಚಾರದಲ್ಲಿ ಹೆಚ್ಚು ಕಡಿಮೆ ಬ್ರಾಹ್ಮಣರನ್ನೇ ಈ ಕಾಡುಗೊಲ್ಲರು ಹೋಲುತ್ತಾರೆ.

ಹೆರಿಗೆಯಾಗಿ ಮೂರು ದಿವಸ, ಐದು ದಿವಸ, ಏಳು ದಿವಸ, ಹನ್ನೊಂದು ದಿವಸ, ಒಂದು ತಿಂಗಳು, ಎರಡು ತಿಂಗಳು ಇಲ್ಲವೇ ಮೂರು ತಿಂಗಳ ಕಾಲ ಮಡಿವಾಳರು ಬಂದು ನೀರು ಹಾಕಿ ಮಡಿಬಟ್ಟೆಗಳನ್ನು ಕೊಟ್ಟು ಸೂತಕ ಕಳೆಯುತ್ತಾರೆ. ಹೆರಿಗೆಯಾಗಿ ಸೂತಕ ಕಳೆಯುವವರೆಗೂ ಬಾಣಂತಿ ಮಗುವಿನೊಡನೆ ಅದೇ ಗುಡಿಸಲಿನಲ್ಲಿ ವಾಸಿಸಬೇಕು. ಆಹಾರ ಪದಾರ್ಥಗಳಾದ ಕೆಂಪು ಮೆಣಸಿನಕಾಯಿ ಚಟ್ನಿ, ರಾಗಿ ಮುದ್ದೆ ಇಲ್ಲವೆ ರವೆ ಗಂಜಿಯನ್ನು ಹಟ್ಟಿಯಿಂದ ತಂದು ಬಾಣಂತಿ ಕೈಯಲ್ಲಿ ಎತ್ತಿ ಹಾಕುತ್ತಾರೆ. ಸೂತಕವಾದ ಹೆಣ್ಣಿಗೆ 'ಎತ್ತ ಮುದ್ದೆ ಎತ್ತ ನೀರು' ಎಂಬುದು ಮನೆ ಮಾತಾಗಿದೆ. ಬಹಳ ಹಿಂದೆ ಹೆರಿಗೆಯಾಗಿ ಸೂತಕ ಕಳೆಯುವವರೆಗೂ ಬೇಕಾಗುವ ಆಹಾರ ಪದಾರ್ಥಗಳನ್ನು ಮುಂಚಿತವಾಗಿಯೇ ಹೆರಿಗೆ ಗುಡ್ಲು ನಲ್ಲಿ ಇಟ್ಟು, ಬಾಣಂತಿಯೇ ಅಡಿಗೆ ಮಾಡಿಕೊಂಡು ಊಟ ಮಾಡುವ ಪದ್ಧತಿ ಇತ್ತಂತೆ. ಅದರೆ ಈಗ ಈ ಸಂಪ್ರದಾಯ ಇಲ್ಲ.ಮಗು ಹುಟ್ಟಿ ಮೂರು ಅಥವಾ ಹದಿನಾರು ದಿನದಲ್ಲಿ 'ಹಸಿರು ಮದ್ದು,' 'ಕುರುಡಿ ಕುಕ್ಕಾರ,' 'ಕಾರ' ಮತ್ತು 'ನೆಡೆಹಾಲು' ಹಾಕುತ್ತಾರೆ.

ಮ್ಯಾಸಬೆಡರಂತೆ ಕಾಡುಗೊಲ್ಲರು ಕೂಡ ಹುಟ್ಟಿದ ಮಗುವಿಗೆ ಜಾತಕ, ಭವಿಷ್ಯ, ಪಂಚಾಗ ಕೇಳುವ ಪದ್ಧತಿ ಇಲ್ಲ. ಹುಟ್ಟಿದೇಳು ದಿನಕ್ಕೆ ಮಗುವಿಗೆ 'ಶೆಟವಿ ತಾಯಿ' ಅಥವಾ 'ವಿಧಿಯಮ್ಮ' ಹಣೆಬರಹ ಬರೆಯುತ್ತಾಳೆ ಎಂಬ ನಂಬಿಕೆಯಿದೆ. 'ಶೆಟವಿ ತಾಯಿ'ಯನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರು 'ವಿಧಿಯಮ್ಮ' ಅಥವಾ 'ವಿಧಿಮುಂಡೆ' ಎಂದು ಕರೆಯುತ್ತಾರೆ.

ಹೊಳಲ್ಕೆರೆ, ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳ ಕೆಲವು ಪ್ರದೇಶದ ಕಾಡುಗೊಲ್ಲರು ಮನೆಯಲ್ಲಿ ಹೆರಿಗೆ ಮಾಡಿಸಿ, ಹೊಕ್ಕಳು ಬಳ್ಳಿ ಕತ್ತರಿಸಿ ಕಾಯಿಸಿದ ಸೂಜಿಯಿಂದ ಮೂರು ಚುಟಿಕಿ ಹಾಕಿದ ನಂತರ ಮೊರದಲ್ಲಿ ಮಗುವನ್ನು ಹಾಕಿ, ಬಟ್ಟೆ ಮುಚ್ಚಿಕೊಂಡು, ಬಾಣಂತಿಗೆ ಕಂಬಳಿ ಹೊದ್ದಿಸಿಕೊಂಡು ಹಟ್ಟಿಯ ಹೊರಗೆ ಕಟ್ಟಿದ 'ಹೆರಿಗೆ ಗುಡ್ಲು'ಗೆ ತಂದು ಬಿಡುತ್ತಾರೆ.

ಹೆರಿಗೆಯಾಗಿ ಸೂತಕದ ದಿನಗಳನ್ನು ಕಳೆದು ಹಟ್ಟಿ ಪ್ರವೇಶಿಸುವ ದಿನ ಮಡಿವಾಳರು ಬಂದು ಬಾಣಂತಿ ಮತ್ತು ಮಗುವಿಗೆ ಜಳಕ ಮಾಡಿಸಿ ಮಡಿ ಬಟ್ಟೆಗಳನ್ನು ಕೊಟ್ಟು ಗೋಗಂಜು ಹಾಕುತ್ತಾರೆ. ಬಾಣಂತಿ ಹೆರಿಗೆ ಗುಡಿಸಲಿನಲ್ಲಿ ಬಳಸುತ್ತಿದ್ದ ಮಡಿಕೆ, ಕುಡಿಕೆ, ತಟ್ಟೆ. ಹಳೆ ಬಟ್ಟೆ ಮತ್ತು ಹೆರಿಗೆ ಗುಡ್ಲನ್ನು ಹಟ್ಟಿಯಿಂದ ದೂರ ಎಸೆಯುತ್ತಾರೆ. ಕೆಲವು ಪ್ರದೇಶಗಳಲ್ಲಿ ಹೆರಿಗೆ ಗುಡ್ಲನ್ನು ಸುಟ್ಟು ಬರುತ್ತಾರೆ. ಅಂದು ಸಾಯಂಕಾಲ ಬಾಣಂತಿ ಚಪ್ಪಲಿ ಹಾಕದೆ ಕರಿಕಂಬಳಿ ಹೊದ್ದುಕೊಂಡು ಮಗುವಿನೊಡನೆ ಹಟ್ಟಿ ಪ್ರವೇಶಿಸುವ ಮತ್ತು ದೇವಸ್ಥಾನದ ಹತ್ತಿರ 'ಚೆನ್ನಿಗೆ' ಕುಡಿಯುವ ಸಂಪ್ರದಾಯ ಆಚರಿಸುತ್ತಾರೆ. ಕೆಲವು ಪ್ರದೇಶದ ಕಾಡುಗೊಲ್ಲರು ಅದೇ ದಿನ ದೇವಸ್ಥಾನದ ಹತ್ತಿರವೇ ಪೂಜಾರಿಯಿಂದ ಮಗುವಿಗೆ ನಾಮಕರಣ ಮಾಡಿಸುತ್ತಾರೆ.

೨. ನಾಮಕರಣ

ಜನನದ ನಂತರ ನಡೆಯುವ ಮುಖ್ಯವಾದ ಆಚರಣೆಗಳೆಂದರೆ ನಾಮಕರಣ. ಮ್ಯಾಸಬೇಡ ಮತ್ತು

ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಮಕ್ಕಳಿಗೆ ನಾಮಕರಣ ಅಥವಾ ಹೆಸರಿಡುವ ಪದ್ಧತಿಯಲ್ಲಿ ಅಲ್ಪ ಸಲ್ಪ ವ್ಯತ್ಯಾಸ ಕಂಡು ಬರುತ್ತದೆ.

"ಬಂಧು ಬಳಗವ ಕೂಡಿ, ಹೊಂದಿ ಜೋಗಳ ಪಾಡಿ
ಹಿಂದೆ ಸತ್ತವರ ಹೆಸರಿಟ್ಟು, ಗುಗ್ಗರಿಯ
ತಿಂದು ತೂಗುವವರು, ಸರ್ವಜ್ಞ".[೧]

ಎಂದು ಮಕ್ಕಳ ನಾಮಕರಣ ಮಾಡುವ ಹಿಂದೂ ಸಂಪ್ರದಾಯದಲ್ಲಿ ಇರುವ ಮೂಢ ನಂಬಿಕೆಯಂತೆ ಮನೆಯಲ್ಲಿ ಮಗು ಹುಟ್ಟಿದರೆ, ಹಬ್ಬಮಾಡಿ ಬಂಧು ಬಳಗದವರೆಲ್ಲರೂ ಒಟ್ಟಿಗೆ ಸೇರಿ, ಮಗುವನ್ನು ಮುದ್ದಾಡಿ, ತೊಟ್ಟಿಲಲ್ಲಿ ಮಲಗಿಸಿ, ಜೋಗುಳವನ್ನು ಹಾಡಿ, ಮೃತ ಪಟ್ಟಿರುವ ಹಿರಿಯರಲ್ಲಿ ಯಾರಾದರೊಬ್ಬರ ಹೆಸರಿಟ್ಟು, ಗುಗ್ಗರಿಯನ್ನು ತಿಂದು, ಮಗುವನ್ನು ತೂಗಿ ನಲಿದಾಡುವುದು, ಲೋಕರೂಢಿಯೆಂದು ಸರ್ವಜ್ಞ ಕವಿ ತನ್ನ ವಚನದಲ್ಲಿ ನಾಮಕರಣ ವಿಷಯ ಪ್ರಸ್ತಾಪಿಸಿದ್ದಾನೆ. ಈ ನಾಮಕರಣ ಮಾಡುವ ಪದ್ಧತಿ ಎಲ್ಲಾ ಜಾತಿ ಜನಾಂಗದವರಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬಂದರೂ ಸಹ ಅವರು ಮಕ್ಕಳಿಗೆ ನಾಮಕರಣ ಶಾಸ್ತ್ರ ಮಾಡುವಾಗ ಪ್ರಾಚೀನ ಬುಡಕಟ್ಟು ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಆಚರಿಸುತ್ತಾರೆ.

೨.೧. ಮ್ಯಾಸಬೇಡರು

ಹೆರಿಗೆಯಾಗಿ ಮೂರು ದಿನದಲ್ಲಿ ಮನೆ ಬಳಿದು, ನೆಲ ಕಾರಣೆ ಮಾಡಿ, ಮಡಿಗೊಳಿಸಿ, ಮಡಿವಾಳರಿಂದ ಗೋಗಂಜು ಹಾಕಿಸಿ, ಮನೆಯ ಹೊರಗೆ ಬಾಣಂತಿ ಮತ್ತು ಮಗುವಿಗೆ ಜಳಕ ಮಾಡಿಸಿ ಮನೆಯ ಒಳಗೆ ಕರೆದುಕೊಳ್ಳುತ್ತಾರೆ. ಮಗು ಹುಟ್ಟಿ ಮೂರು ದಿನ, ಒಂಬತ್ತು ದಿನ, ಹನ್ನೊಂದು ದಿನ, ಹದಿನಾರು ದಿನಗಳಲ್ಲಿ ಮತ್ತೆ ಕೆಲವರು ಮೂರು ತಿಂಗಳು ಅಥವಾ ಐದು ತಿಂಗಳಲ್ಲಿ ಮಕ್ಕಳಿಗೆ ನಾಮಕರಣ ಮಾಡುವ ಪದ್ಧತಿ ಮ್ಯಾಸಬೇಡರಲ್ಲಿದೆ. ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಗ್ರಾಮದ ಅಡ್ಲಟ್ಟಿ ಮ್ಯಾಸಬೇಡರು ಹೆರಿಗೆಯಾಗಿ ಮೂರು ದಿನದಲ್ಲಿ ಸೂತಕ ಕಳೆದುಕೊಂಡು ಅದೇ ದಿನ ಹುರುಳಿ ಗುಗ್ಗರಿ ಬೇಯಿಸಿ ಮಕ್ಕಳಿಗೆ ನಾಮಕರಣ ಮಾಡುತ್ತಾರೆ. ಮೊದಲನೆಯ ಹೆರಿಗೆಯಾದರೆ ಮಗುವಿನ ತಾಯಿಯ ಮನೆಯಲ್ಲಿ ಎರಡು, ಮೂರು, ನಾಲ್ಕು, ಐದು... ಹೆರಿಗೆ ಯಾದರೆ ಮಗುವಿನ ತಂದೆ ಮನೆಯಲ್ಲಿ ಮಕ್ಕಳಿಗೆ ಹೆಸರಿಡುತ್ತಾರೆ. ದಿನವಹಿ, ತಿಥಿ, ನಕ್ಷತ್ರ, ಪಂಚಾಗಗಳಿಗೆ ಹೆಚ್ಚು ಮಹತ್ವ ಕೊಡದೆ, ತಮ್ಮ ಮನೆದೇವರ ಪೂಜಾ ವಾರಗಳಾದ ಸೋಮವಾರ, ಶುಕ್ರವಾರ ಮತ್ತು ಶನಿವಾರ ಮಕ್ಕಳ ನಾಮಕರಣಕ್ಕೆ ವಾರವನ್ನು ನಿಗದಿಪಡಿಸಿ, ಹತ್ತಿರದ ಬಂಧು-ಬಾಂಧವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಾರೆ.

ತಾಯಿಯ ತವರ ಮನೆಯವರು ತಂದಿದ್ದ ಬಿದಿರಿನ ತೊಟ್ಟಿಲಿಗೆ ನಾಲ್ಕು ಹಗ್ಗವನ್ನು ಸಮಾನವಾಗಿ ಜೋಡಿಸಿ ಕಟ್ಟಿ ಮನೆಯ ಮಧ್ಯದಲ್ಲಿ ತೊಟ್ಟಿಲನ್ನು ತೂಗುಬಿಟ್ಟು, ಸಂಜೆ ಸುಮಾರು ಆರು ಗಂಟೆಯಿಂದ ನಾಮಕರಣಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಮನೆ ದೇವರಿಗೆ ಮೊದಲು ಪೂಜೆ ಮಾಡಿ ನಂತರ ತೊಟ್ಟಿಲಿಗೆ ಬಣ್ಣ ಬಣ್ಣದ ವಸ್ತ್ರಗಳಿಂದ ಸಿಂಗರಿಸಿ ಸೋದರತ್ತೆಯಿಂದ, ತೊಟ್ಟಿಲು ಪೂಜೆ ಮಾಡಿಸಿ ಮಗುವನ್ನು ತೊಟ್ಟಿಲಿಗೆ ಮಲಗಿಸುತ್ತಾರೆ. ಬೇಯಿಸಿದ ಹುರುಳಿ ಗುಗ್ಗರಿಯನ್ನು ಬಿಳಿ ಬಟ್ಟೆಯಲ್ಲಿ ಗಂಟು ಕಟ್ಟಿ ತೊಟ್ಟಿಲಲ್ಲಿ ಇಟ್ಟಿರುತ್ತಾರೆ. ಹೆಣ್ಣುಮಗುವಾದರೆ

ಮೂರು ಗಂಟು ಕಟ್ಟಿ, ಮಗುವಿನ ತಲೆ ಕಡೆಗೆ ಎರಡು, ಕಾಲು ಕಡೆಗೆ ಒಂದು ಗಂಟನ್ನು; ಗಂಡು ಮಗುವಾದರೆ ಐದು ಗಂಟು ಕಟ್ಟಿ, ಮಗುವಿನ ತಲೆ ಕಡೆಗೆ ಮೂರು, ಕಾಲು ಕಡೆಗೆ ಎರಡು ಗಂಟನ್ನುಸೋದರತ್ತೆ ಇಡುತ್ತಾಳೆ. ಆಗ ಮುತ್ತೈದೆಯರು ತೊಟ್ಟಿಲು ತೂಗುತ್ತ

ಕೋಣೆ ಕೋಣೆಗೆ ನಾಕು ತ್ರಾಣ ದೀವಿಗೆ ಜೋ ಜೋ
ಕೋಣೆ ಕೋಣೆಗೆ ನಾಕು ತ್ರಾಣ ದೀವಿಗೆ ಜೋ ಜೋ
ಕೋಣೆ ಕೋಣೆಗೆ ನಾಕು ತ್ರಾಣ ದೀವಿಗೆ ಹಚ್ಚಿ |

ಮುತ್ತಿನಂತ ಕೂಸು ಮುಂದಾಕೆ ಬಿದ್ದೇ ಜೋ ಜೋ
ಮುತ್ತಿನಂತ ಕೂಸು ಮುಂದಾಕೆ ಬಿದ್ದೇ ಜೋ ಜೋ
ಮುತ್ತಿನಂತ ಕೂಸು ಮುಂದಾಕೆ ಬಿದ್ದಾರೆ |

ಉಕ್ಕಿನ ಕುಡಗೋಲಲಿ ಹುರಿಗಳ ಕೊಯ್ದು ಜೋ ಜೋ
ಉಕ್ಕಿನ ಕುಡಗೋಲಲಿ ಹುರಿಗಳ ಕೊಯ್ದು ಜೋ ಜೋ
ಉಕ್ಕಿನ ಕುಡಗೋಲಲಿ ಹುರಿಗಳ ಕೊಯ್ದು |

ಬಣ್ಣದ ಸೀರೆಯ ತೆರೆಗಳಾನಾಕಿ ಜೋ ಜೋ
ಬಣ್ಣದ ಸೀರೆಯ ತೆರೆಗಳಾನಾಕಿ ಜೋ ಜೋ
ಬಣ್ಣದ ಸೀರೆಯ ತೆರೆಗಳಾನಾಕಿ |

ಚಿನ್ನದ ಸೂಜೀಲಿ ಸುಟಗಿಗಳಾಕಿ ಜೋ ಜೋ
ಚಿನ್ನದ ಸೂಜೀಲಿ ಸುಟಗಿಗಳಾಕಿ ಜೋ ಜೋ
ಚಿನ್ನದ ಸೂಜೀಲಿ ಸುಟಗಿಗಳಾಕಿ |

ನಾಕು ಕಾಲಿನ ಮಂಚ ನಡುಮನೀಗಾಕಿ ಜೋ ಜೋ
ನಾಕು ಕಾಲಿನ ಮಂಚ ನಡುಮನೀಗಾಕಿ ಜೋ ಜೋ
ನಾಕು ಕಾಲಿನ ಮಂಚ ನಡುಮನೀಗಾಕಿ |

ಏಳುವರಯ್ಯ ನಿಮ್ಮ ಪಿರಿಯಾರೆಸರ ಜೋ ಜೋ
ಏಳುವರಯ್ಯ ನಿಮ್ಮ ಪಿರಿಯಾರೆಸರ ಜೋ ಜೋ
ಏಳುವರಯ್ಯ ನಮ್ಮ ಪಿರಿಯಾರೆಸರ |

ಜೋ ಜೋ ...... ಜೋ ಜೋ........... .

ಎಂದು ಮ್ಯಾಸಬೇಡರ ಹೆಂಗಸರು ಮಕ್ಕಳಿಗೆ ನಾಮಕರಣ ಮಾಡುವಾಗ ಸಮಯ ಸಂದರ್ಭಕ್ಕೆ ತಕ್ಕಂತೆ ಜೋಗುಳ ಪದ ಹಾಡುತ್ತಾರೆ. ಅದೇ ಸಂದರ್ಭದಲ್ಲಿ ಮಗುವಿನ ಸೋದರಮಾವ ತೊಟ್ಟಿಲಲ್ಲಿಟ್ಟ ಬೇಯಿಸಿದ ಹುರುಳಿ ಗುಗ್ಗರಿ ಗಂಟನ್ನು ಕೈಯಲ್ಲಿ ಮುಟ್ಟದೇ ಬಾಯಲ್ಲೇ ಕಚ್ಚಿಕೊಂಡು ಮಗುವಿನ ಹೆಸರನ್ನು ಹೇಳುತ್ತ ಮೂರು ಸಾರಿ ಹೊರಗೆ ಹೋಗಿ ಒಳಗೆ ಬರುವನು. ಹೀಗೆ ಹೊರಗೆ ಹೋಗಿ ಒಳಗೆ ಬಂದು ಮಾಡುವಾಗ ಮಗುವಿಗೆ ಇಟ್ಟ ಹೆಸರೇ ಮುಂದೆ ಶಾಶ್ವತವಾಗಿ ಉಳಿಯುತ್ತದೆ. ಬಹುಹಿಂದೆ ಮಗುವಿಗೆ ನಾಮಕರಣ ಮಾಡುವಾಗ

ಸೋದರತ್ತೆ ಗಂಗಳ ಬಾರಿಸುತ್ತಿದ್ದಳಂತೆ. ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಪ್ರದೇಶದ ಮ್ಯಾಸಬೇಡರು ಮಗುವಿನ ನಾಮಕರಣದ ದಿನ ಹೆರಿಗೆಯಾದ ಸ್ಥಳದಲ್ಲಿ ಎಲೆ, ಅಡಿಕೆ ಇಟ್ಟು ಪೂಜೆ ಮಾಡುತ್ತಾರೆ. ಆಸ್ಪತ್ರೆಯಲ್ಲಿ ಹೆರಿಗೆ ಯಾದರೆ ಈ ಪದ್ಧತಿ ಇಲ್ಲಾ.

ಮಗುವಿನ ಹೆಸರನ್ನು ತಂದೆಯ ಮನೆಯ ಯಜಮಾನರ ಅಪೇಕ್ಷೆಯಂತೆ, ತಮ್ಮ ಜನಾಂಗದ ಪುರಾಣ ಪುರುಷರು, ಸಾಂಸ್ಕೃತಿಕ ವೀರರು, ಪಾಳೆಯಗಾರರು, ಮನೆದೇವರು ಮತ್ತು ಸತ್ತುಹೋದ ಮನೆಯ ಯಜಮಾನರ ಹೆಸರನ್ನು ಮಗುವಿಗೆ ಆಯ್ಕೆ ಮಾಡುತ್ತಾರೆ. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವು ಕುಟುಂಬಗಳಲ್ಲಿ ನಾಲ್ಕರಿಂದ ಐದು ಜನರ ಹೆಸರುಗಳು ಒಂದೇ ರೀತಿ ಇದ್ದಿದ್ದು ಕಂಡು ಬಂದಿದೆ. ಈ ನಾಮಕರಣ ಶಾಸ್ತ್ರದಲ್ಲಿ ಪಾಲ್ಗೊಂಡವರಿಗೆ ಎಲೆ, ಅಡಿಕೆ, ಬಾಳೆ ಹಣ್ಣು, ಕಡ್ಲೆ ಸಕ್ಕರೆ, ಹೇಲ ಗುಗ್ಗರಿ ಕೊಟ್ಟು ಕಳುಹಿಸುತ್ತಾರೆ. ಅದೇ ದಿನ ಹೆರಿಗೆ ಮಾಡಿಸಿದ ಸೂಲಗಿತ್ತಿಗೆ ದವಸ ಧಾನ್ಯ ಕೊಟ್ಟು ಕಳುಹಿಸುತ್ತಾರೆ. ಗಂಡು ಮಗುವಾದರೆ ಐದು ಗಂಗಳ; ಹೆಣ್ಣು ಮಗುವಾದರೆ ಮೂರು ಗಂಗಳ ಜೋಳ ಕೊಡುತ್ತಾರೆ. ಈ ಜೋಳವನ್ನು ಸೂಲಗಿತ್ತಿ ತನ್ನ ಮಡ್ಲಲಲ್ಲಿ ಕಟ್ಟಿಕೊಂಡು ಹೋಗುತ್ತಾಳೆ. ಬಂಧು ಬಳಗಕ್ಕೆ ಆ ದಿನ ಸಿಹಿ ಊಟ ಹಾಕಿ ರಾತ್ರಿ ಒಂಬತ್ತರಿಂದ ಹತ್ತು ಗಂಟೆಯ ಒಳಗೆ ಮ್ಯಾಸಬೇಡರು ನಾಮಕರಣ ಶಾಸ್ತ್ರವನ್ನು ಮುಗಿಸುತ್ತಾರೆ.

೨.೨. ಕಾಡುಗೊಲ್ಲರು

ಮ್ಯಾಸಬೇಡರಂತೆ ಕಾಡುಗೊಲ್ಲರಲ್ಲಿ ತೊಟ್ಟಿಲು ಕಟ್ಟಿ ಮಗುವಿನ ನಾಮಕರಣ ಮಾಡುವ ಪದ್ಧತಿ ಕಂಡು ಬರುವುದಿಲ್ಲ. ಗೊಲ್ಲರಹಟ್ಟಿಯಿಂದ ಹೊರಗೆ ಕಟ್ಟಿದ "ಹೆರಿಗೆ ಗುಡಿಸಲಿನಲ್ಲಿ" ಹನ್ನೊಂದು ದಿನ, ಇಪ್ಪತ್ತೊಂದು ದಿನ, ಒಂದು ತಿಂಗಳು, ಎರಡು ತಿಂಗಳು, ಎರಡು ದಿನ ಮತ್ತೇ ಕೆಲವು ಗೊಲ್ಲರಹಟ್ಟಿಗಳಲ್ಲಿ ಹೆರಿಗೆಯಾಗಿ ಮೂರು ತಿಂಗಳಕಾಲ "ಹೆರಿಗೆ ಗುಡ್ಲು"ನಲ್ಲಿ ವಾಸಿಸಿ, ನಂತರ ನಾಮಕರಣ ಮಾಡುವ ದಿನ ಸೂತಕ ಕಳೆದುಕೊಂಡು ಬಾಣಂತಿ ತನ್ನ ಮಗುವಿನೊಡನೆ ದೇವರ ವಾರದ ದಿನ ಹಟ್ಟಿಯ ಮೂಡಲ ಹುದಿಗೆ ಬಂದಾಗ "ಮಗುವಿನ ತಂದೆ ಜೆನ್ನಿಗೆ ಕುರಿಯ ಹಾಲನ್ನು ತಂದಿರುತ್ತಾನೆ. ಬಾಣಂತಿ ಮತ್ತು ಮಗು ಮೂಡಲ ಹುದಿಯ ಬಳಿಗೆ ಬಂದಾಗ ಪೂಜಾರಿ ಅವರಿಬ್ಬರಿಗೂ ಜೆನ್ನಿಗೆಯ ಹಾಲನ್ನು ಕುಡಿಸುತ್ತಾನೆ. ಇಲ್ಲಿ ಜೆನ್ನಿಗೆ ಹಾಲು ಕುಡಿಸವುದನ್ನು 'ಹೊರ ಜೆನ್ನಿಗೆ' ಎಂದು ಕರೆಯುತ್ತಾರೆ. ಅನಂತರ ಮಗುವನ್ನು ಕರೆದುಕೊಂಡು ಬಾಣಂತಿ ಹಟ್ಟಿಯೊಳಗಿನ ದೇವಸ್ಥಾನದ ಸುತ್ತ ಹಾಕಿದ ಬೇಲಿಯ ಬಾಗಿಲಿನ ಬಳಿಗೆ ಬಂದಾಗ ಪೂಜಾರಿ ಅವಳಿಗೆ ಮತ್ತು ಮಗುವಿಗೆ ಜೆನ್ನಿಗೆ ಹಾಲನ್ನು ಕುಡಿಸುತ್ತಾನೆ. ಇದನ್ನು 'ಕಿರು ಜೆನ್ನಿಗೆ' ಎಂದು ಕರೆಯುತ್ತಾರೆ. ದೇವಸ್ಥಾನದ ಒಳಗೆ ಬಂದಾಗ ಮಗುವಿಗೆ ಮತ್ತು ಬಾಣಂತಿಗೆ ಪೂಜಾರಿ, ಜೆನ್ನಿಗೆ ಹಾಲನ್ನು ಕುಡಿಸುತ್ತಾನೆ. ಇದನ್ನು 'ಒಳ ಜೆನ್ನಿಗೆ' ಎಂದು ಕರೆಯುತ್ತಾರೆ. ಬಾಣಂತಿ ಮತ್ತು ಮಗು ಒಳ ಜೆನ್ನಿಗೆಯನ್ನು ಕುಡಿದ ನಂತರ ಮಗುವಿನ ತಂದೆ ಏಳುಕಟ್ಟು ವೀಳೆಯದೆಲೆ, ಏಳು ಸೇರು ಅಡಿಕೆ-ಎರಡನ್ನೂ ಪೂಜಾರಿಗೆ ಕೊಡುತ್ತಾನೆ. ಈ ಸಂದರ್ಭದಲ್ಲಿ ಪೂಜಾರಿ ಮಗುವಿಗೆ ಹೆಸರಿಡುತ್ತಾನೆ. ಬಾಣಂತಿ ಏಳು ಹಣವನ್ನು ದೇವರಿಗೆ ಕಟ್ಟುತ್ತಾಳೆ. ಪೂಜಾರಿ ದೇವರಿಗೆ ಪೂಜೆಮಾಡಿ ಎಲ್ಲರಿಗೂ ವೀಳೆಯದೆಲೆ

ಅಡಿಕೆಯನ್ನು ಹಂಚುತ್ತಾನೆ. ಅನಂತರ ಮಗು ಬಾಣಂತಿಯನ್ನು ಕರೆದು ಕೊಂಡು ಮಗುವಿನ ತಂದೆ ತನ್ನ ಮನೆಗೆ ಹೋಗುತ್ತಾನೆ".[3] ದೇವಸ್ಥಾನಗಳಿಲ್ಲದ ಹಟ್ಟಿಗಳಲ್ಲಿ 'ಕುರಿಹಟ್ಟಿ' ಹತ್ತಿರ 'ಕುಂಭಕಳಸ' ಅಥವಾ 'ದೇವರಗಣೆ' ಇಟ್ಟು ಪೂಜೆ ಮಾಡಿಸಿ ಅವರವರ ಕುಲ ಪದ್ಧತಿಗೆ ತಕ್ಕಂತೆ ಪಟ್ಟದ ಪೂಜಾರಿಯಿಂದ 'ಜೆನ್ನಿಗೆ' ಕುಡಿಸಿ ಮಗುವಿಗೆ ನಾಮಕರಣ ಮಾಡುತ್ತಾರೆ. ಸಾಮಾನ್ಯವಾಗಿ ಕಾಡುಗೊಲ್ಲರ ಪಟ್ಟದ ಪೂಜಾರಿಯೇ ಮಡಿಯಿಂದ ಕಂಬಳಿ ಕೊಪ್ಪೆ ಇಟ್ಟು ಕೊಂಡು, ಬಾಯಿಗೆ ಬಟ್ಟೆ ಕಟ್ಟಿಕೊಂಡು 'ಜೆನ್ನಿಗೆ ಹಾಲು' ಕರೆದು ತರುತ್ತಾನೆ. ಈ ಹಾಲನ್ನು ಹೆತ್ತ ಸೂತಕ ಕಳೆಯಲು ಉಪಯೋಗಿಸುತ್ತಾರೆ. ಮತ್ತು ಪವಿತ್ರ ತೀರ್ಥ ಎಂದು ಕಾಡುಗೊಲ್ಲರು ಭಾವಿಸುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಪ್ರದೇಶದ ಕಾಡುಗೊಲ್ಲರು ಬಾಣಂತಿ ಮತ್ತು ಮಗು ಸೂತಕ ಕಳೆದುಕೊಂಡು ಹಟ್ಟಿಯ ದೇವಸ್ಥಾನದ ಹತ್ತಿರ ಬಂದಾಗ ಪಟ್ಟದ ಪೂಜಾರಿ ಹುಟ್ಟು ರೂಪಿಲಿ ಕರಿಕಂಬಳಿ ಕೊಪ್ಪೆ ಇಟ್ಟು ಕೊಂಡು, ಬಾಣಂತಿ ಕೈಯಲ್ಲಿ ಮೂರು ಸಲ ಬೆಂಕಿಯ ಕೆಂಡ ಹಾಕಿ ಪಕ್ಕದ ಜೆನ್ನಿಗೆ ಗುಂಡಿಯಲ್ಲಿ ಹಾಕಿಸುತ್ತಾನೆ.ಅಲ್ಲಿಗೆ ಬಾಣಂತಿ ಪರಿಶುದ್ಧಳಾದಳೆಂದು ಭಾವಿಸಿ 'ಜೆನ್ನಿಗೆ ಹಾಲು' ಕುಡಿಸುತ್ತಾನೆ. ಜೆನ್ನಿಗೆಯಲ್ಲಿ ಎರಡು ವಿಧ ಒಂದು 'ಹಾಲು ಜೆನ್ನಿಗೆ' ಇನ್ನೊಂದು 'ತುಳಸಿ ಜೆನ್ನಿಗೆ' ತುಳಸಿ ಪತ್ರೆಯಲ್ಲಿ ತೀರ್ಥ ಹಾಕುವುದಕ್ಕೆ 'ತುಳಸಿ ಜೆನ್ನಿಗೆ' ಎಂತಲೂ ವಾರದ ಹಸು ಅಥವಾ ಜೆನ್ನಿಗೆ ಕುರಿ ಹಾಲಿನಲ್ಲಿ ತೀರ್ಥ ಹಾಕುವುದಕ್ಕೆ 'ಹಾಲು ಜೆನ್ನಿಗೆ' ಎಂತಲೂ ಕರೆಯುತ್ತಾರೆ. ಅವರವರ ಕುಲಪದ್ಧತಿಗೆ ತಕ್ಕಂತೆ 'ಜೆನ್ನಿಗೆ' ಹಾಕಿಸುತ್ತಾರೆ.

ಜೆನ್ನಿಗೆ ಹಾಲನ್ನು ಕುಡಿಸುವಾಗ ಬಾಣಂತಿ ಅಥವಾ ತಾಯಿ ಯಾರ ಹತ್ತಿರುವೂ ಮಾತಾಡುವಂತಿಲ್ಲ. ಹೊರಜೆನ್ನಿಗೆ, ಕಿರುಜೆನ್ನಿಗೆ ಎಂಬ ಜೆನ್ನಿಗೆ ಹಾಲನ್ನು ಮೂರು ಸಲ ಕುಡಿದ ನಂತರ ಪೂಜಾರಿ ದೇವರಿಗೆ ಪೂಜೆ ಮಾಡಿ ತಾಯಿ ಮತ್ತು ಮಗುವಿಗೆ ತೀರ್ಥಹಾಕಿ, ಧೂಳತ ಹಚ್ಚಿದ ನಂತರ ಬಾಣಂತಿ ಮತ್ತು ಮಗುವನ್ನು ಮನೆಗೆ ಕರೆದುಕೊಂಡು ಹೋಗಿ ತೊಟ್ಟಿಲು ಕಟ್ಟಿ ನಾಮಕರಣಶಾಸ್ತ್ರ ಮಾಡುತ್ತಾರೆ. ಮನೆಯಲ್ಲಿ ದಾಸೋಹ ಮಾಡಿಸಿ, ದಾಸಯ್ಯನಿಂದ ಗೋವಿಂದ ಎನ್ನಿಸಿ ಲೋಕರೂಢಿಯಂತೆ ಹೆಸರು ಕರೆದು ಕುಲಸ್ಥರಿಗೆ ಸಿಹಿ ಊಟ ಹಾಕುತ್ತಾರೆ.

ಹೊಸದುರ್ಗ, ಹೊಳಲ್ಕೆರೆ ತಾಲ್ಲೂಕಿನ ಕಾಡುಗೊಲ್ಲರು ಮಕ್ಕಳಿಗೆ ನಾಮಕರಣ ಮಾಡುವಾಗ ಕುಂಬಾರರ ಮನೆಯಿಂದ ಎರಡು ಮಣ್ಣಿನ ಮಗಿ, ಎರಡು ಮಣ್ಣಿನ ದೀಪ ಮತ್ತು ಎರಡು ಮಣ್ಣಿನ ಚಿಪ್ಪುಗಳನ್ನು ತಂದು, ಗೋವಿನ ಸಗಣಿಯ ಮೇಲೆ ಎರಡು ಮಣ್ಣಿನ ದೀಪಗಳನ್ನು ಹಚ್ಚಿಟ್ಟು, ನೀರು ತುಂಬಿದ ಎರಡು ಮಣ್ಣಿನ ಮಗಿ(ಕುಂಭ)ಗಳನ್ನು ನಿಧಿ ಹಾಕಿ ಅದರ ಮೇಲಿಟ್ಟು, ಹೊಸ ಮಣ್ಣಿನ ಮಡಿಕೆಯಲ್ಲಿ ಮೀಸಲು ಅಡಿಗೆ ಮಾಡಿ, ಒಂಬತ್ತು ಮಿದಿಕೆ ಅನ್ನ, ಒಂಬತ್ತು ಎಲೆ, ಅಡಿಕೆ, ಬಾಳೆಹಣ್ಣು, ತಂಬಿಟ್ಟು, ಚಿಗಳಿ, ನೆನೆಯಕ್ಕಿ, ನೆನೆಕಡಲೆಗಳನ್ನು ನೀರು ತುಂಬಿಟ್ಟ ಎರಡು ಕರಗದ ಅಥವಾ ಮಗಿಗಳ ಮುಂದೆ ಎಡೆ ಹಾಕಿ, ದಾಸಯ್ಯ ಮತ್ತು ಪೂಜಾರಿಯನ್ನು ಆಹ್ವಾನಿಸಿ, ಕರಗದ ಮುಂದೆ ಕರಿಕಂಬಳಿ ಗದ್ದುಗೆ ಹಾಸಿ ಅದರ ಮೇಲೆ ಸುಳಿ ಬಾಳೆ ಎಲೆಯನ್ನು ಹಾಸಿ, ಮಗುವಿಗೆ ಲಂಗನೂಲಿನ ಉಡದಾರ ಕಟ್ಟಿ, ಕರಿಕಂಬಳಿ ಗದ್ದುಗೆಗೆ ಪೂಜೆ ಮಾಡಿ ದಾಸಯ್ಯ ಅಥವಾ ಪೂಜಾರಿ ಹತ್ತಿರ ಮಗುವನ್ನು ಬಾಳೆ ಎಲೆಯ ಮೇಲೆ ಮಲಗಿಸಿ ಮೊದಲು ಮನೆ ದೇವರ ಹೆಸರನ್ನು ದಾಸಯ್ಯ ಅಥವಾ ಪೂಜಾರಿ ಕರೆಯುತ್ತಾನೆ. ಹೀಗೆ ಇಟ್ಟ ಹೆಸರೇ ಮುಂದೆ ಶಾಶ್ವತವಾಗಿ ನಿಲ್ಲುವುದು.

ಮಗುವಿಗೆ ಹೆಸರಿಟ್ಟ ದಾಸಯ್ಯ ಮತ್ತು ಪೂಜಾರಿಗೆ ಮೀಸಲು ಅಡಿಗೆಯನ್ನು ಊಟಕ್ಕೆ ಬಡಿಸಿ, ದಕ್ಷಿಣೆ ಕೊಟ್ಟು ನಂತರ ಎಲ್ಲರೂ ಊಟ ಮಾಡುತ್ತಾರೆ. ಆದರೆ ಇತ್ತೀಚೆಗೆ ಕಾಡುಗೊಲ್ಲರು ಕೂಡ ಇತರ ಜಾತಿಯವರಂತೆ ತೊಟ್ಟಿಲು ಕಟ್ಟುವ ಪದ್ಧತಿ, ಆಮಂತ್ರಣ ಪತ್ರಿಕೆ ಹಂಚುವುದು, ಹಟ್ಟಿಯ ಬಂಧು ಬಾಂಧವರಿಗೆ ಹಾಗೂ ಗ್ರಾಮಸ್ಥರಿಗೆ ತಮ್ಮ ಶಕ್ತ್ಯಾನುಸಾರವಾಗಿ 'ಸಿಹಿ ಊಟ' ಹಾಕುವುದನ್ನು ಮಾಡುತ್ತಾರೆ. ನಗರೀಕರಣ ಮತ್ತು ಆಧುನೀಕತೆಯ ಪ್ರಭಾವದಿಂದಾಗಿ ಇತ್ತೀಚಿನ ದಿನಗಳಲ್ಲಿ 'ಜೆನ್ನಿಗೆ' ಮತ್ತು 'ಹೆರಿಗೆ ಗುಡ್ಲು'ಗಳ ಮಹತ್ವ ಕಡಿಮೆಯಾಗುತ್ತಿದೆ.

೨.೩. ನಾಮಕರಣಕ್ಕೆ ಆಯ್ಕೆ ಮಾಡುವ ಹೆಸರುಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ತಮ್ಮ ಮಕ್ಕಳಿಗೆ ನಾಮಕರಣ ಮಾಡುವಾಗ ತಮ್ಮ ಮನೆದೇವರುಗಳ ಹೆಸರುಗಳನ್ನು ಅಥವಾ ಪರಂಪರೆಯಿಂದ ಬಂದಿರುವ ಹಿರಿಯರ ಹೆಸರುಗಳನ್ನೇ ನಾಮಕರಣಕ್ಕೆ ಆಯ್ಕೆ ಮಾಡುತ್ತಾರೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ , ಹಿರಿಯೂರು , ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ಎಂಬ ಆರು ತಾಲ್ಲೂಕುಗಳ ಕ್ಷೇತ್ರಕಾರ್ಯ ಕೈಗೊಂಡಾಗ ಈ ಎರಡು ಬುಡಕಟ್ಟು ಸಮೂಹಗಳಲ್ಲಿ ಕಂಡು ಬಂದ ಪ್ರಧಾನ ಹೆಸರುಗಳೆಂದರೆ

ಹೆಸರುಗಳ ಪಟ್ಟಿ

	ಮ್ಯಾಸಬೇಡರು		ಕಾಡುಗೊಲ್ಲರು	
ಕ್ರ. ಸಂ.	ಗಂಡು	ಹೆಣ್ಣು	ಗಂಡು	ಹೆಣ್ಣು
೧.	ಅಹೋಬಲಪ್ಪ	ಅಂಜನಮ್ಮ	ಅಜ್ಜಪ್ಪ	ಈರಮ್ಮ
೨.	ಓಬಯ್ಯ	ಓಬಳಮ್ಮ	ಕರಿಯಣ್ಣ	ಓಬಳಮ್ಮ
೩.	ಕಂಪಳಪ್ಪ	ಕಂಚವ್ವ	ಕಾಟಯ್ಯ	ಕದರಮ್ಮ
೪.	ಕರಿಯಪ್ಪ	ಕರಿಯಮ್ಮ	ಕ್ಯಾತಪ್ಪ	ಕರಿಯಮ್ಮ
೫.	ಕಾವಲಪ್ಪ	ಕಾಡಮ್ಮ	ಕೆಂಚೆಡಿಯಪ್ಪ	ಕಾಣೆಮ್ಮ
೬.	ಕುರಿಯೋಬಜ್ಜ	ಗಾದಿರಮ್ಮ	ಕೃಷ್ಣಪ್ಪ	ಕೆಂಪಮ್ಮ
೭.	ಕೆಂಗೋಬಯ್ಯ	ಗುಜ್ಜಜ್ಜಿ	ಗಟ್ಟಯ್ಯ	ಗಂಗಮ್ಮ
೮.	ಗಾದಿರಪ್ಪ	ಚಿತ್ತಮ್ಮ	ಗೌಡಪ್ಪ	ಗಿರಿಯಮ್ಮ
೯.	ಗೋವಿಂದಪ್ಪ	ಜಕಣಮ್ಮ	ಚಿಕ್ಕಣ್ಣ	ಗೌರಮ್ಮ
೧೦.	ಜಗಲೂರಯ್ಯ	ತಿಮ್ಮಕ್ಕ	ಚಿತ್ತಯ್ಯ	ಚಿತ್ತಮ್ಮ

೧೧	ತಿಪ್ಪೇಸ್ವಾಮಿ	ದೊಡ್ಡೀರಜ್ಜಿ	ಜಡಿಯಪ್ಪ	ಜಂಪಕ್ಕ
೧೨.	ತಿಮ್ಮಪ್ಪ	ನರಸಮ್ಮ	ತಿಮ್ಮಪ್ಪ	ಜುಂಜಪ್ಪ
೧೩.	ದಾಸಪ್ಪ	ಪಾಪಮ್ಮ	ದೊರೆಸ್ವಾಮಿ	ತಿಪ್ಪಕ್ಕ
೧೪.	ನರಸಿಂಹಪ್ಪ	ಪಾಲಕ್ಕ	ನಿಂಗಪ್ಪ	ತುಳಸಮ್ಮ
೧೫.	ಪಾಲಯ್ಯ	ಬಡರಂಗಜ್ಜಿ	ಪಾಂಡುರಂಗಪ್ಪ	ನರಸಮ್ಮ
೧೬.	ಬಡರಂಗಪ್ಪ	ಬೊಮ್ಮಕ್ಕ	ಪಾತಲಿಂಗಪ್ಪ	ನಾಗರತ್ನ
೧೭.	ಬೊಮ್ಮಣ್ಣ	ಬೋರಮ್ಮ	ಪಿಳ್ಳಪ್ಪ	ಮಲ್ಲಮ್ಮ
೧೮.	ಬೋರಯ್ಯ	ಮಲ್ಲಮ್ಮ	ಬಡಪ್ಪ	ಮಾರಕ್ಕ
೧೯.	ಬೋಸಯ್ಯ	ಯಶೋಧ	ಭೂತಲಿಂಗಪ್ಪ	ಮುದ್ದಕ್ಕ
೨೦.	ರಾಮಪ್ಪ	ರಂಗಮ್ಮ	ಮೂಡಲಪ್ಪ	ಮುದಿಯಮ್ಮ
೨೧.	ಸಣ್ಣೋಬಯ್ಯ	ಲಕ್ಷ್ಮೀದೇವಿ	ರಾಮಕೃಷ್ಣಪ್ಪ	ರಂಗಮ್ಮ
೨೨.	ಸಿರವಲ್ಲಪ್ಪ	ಶಿವಲಿಂಗಮ್ಮ	ವೀರಕರಿಯಣ್ಣ	ಲಕ್ಷ್ಮೀದೇವಿ
೨೩.	ಸೂರಪ್ಪ	ಸತ್ಯಜ್ಜಿ	ಸಿರಿಯಣ್ಣ	ಶಿವಲಿಂಗಮ್ಮ
೨೪.	ಹನುಮಂತಪ್ಪ	ಸಿದ್ದಮ್ಮ	ಹಳ್ಳಪ್ಪ	ಸಿರಿಯಕ್ಕ
೨೫.	ಹಾಲೇಶಪ್ಪ	ಸೂರಕ್ಕ	ಹಾಲೇಶಪ್ಪ	ಹನುಮಕ್ಕ

ಈ ಮೇಲ್ಕಂಡ ಹೆಸರುಗಳ ಜೊತೆಗೆ ರೂಪ, ಮಾಲಾ, ಜಯ, ವಿಜಯ, ರಾಜ,, ರಾಣಿ, ರೇಷ್ಮಾ, ಕಾವ್ಯ, ವಿನೂತ, ಶ್ರೀದೇವಿ, ಸುಧರಾಣಿ, ಆರತಿ, ಭಾರತಿ, ಪ್ರೇಮಾ, ನಹುಷ್, ಶಶಾಂಕ್, ಕಾರ್ತಿಕ, ಹರ್ಷ, ಚಕ್ರವರ್ತಿ ಮೊದಲಾದ ಆಧುನಿಕ ಹೆಸರುಗಳು ಕೂಡ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡುಬರುತ್ತವೆ.

೩. ಜವಳ ತೆಗೆಸುವುದು

ಮ್ಯಾಸಬೇಡ ಮತ್ತಾ ಕಾಡುಗೊಲ್ಲ ಬುಡಕಟ್ಟಗಳಲ್ಲಿ ಮಗು ಹುಟ್ಟಿ ಮೂರು ವರ್ಷದ ಒಳಗೆ ಹುಟ್ಟು ಕೂದಲು ತೆಗೆಸುವುದು ಒಂದು ಧಾರ್ಮಿಕ ಪದ್ಧತಿಯಾಗಿದೆ. ವಿವಾಹಿತ ದಂಪತಿಗಳಿಗೆ ಮಕ್ಕಳಿಲ್ಲದಿದ್ದಾಗ, ಹುಟ್ಟಿದ ಮಗು ಅನಾರೋಗ್ಯದಿಂದ ಬಳಲುತ್ತಿದ್ದಾಗ, ಪುತ್ರ ಸಂತಾನಲವಿಲ್ಲದಿದ್ದಾಗ, ಕಷ್ಟ ನಷ್ಟಗಳಿಗೆ ಗುರಿಯಾದಾಗ ಮತ್ತು ಕೌಟುಂಬಿಕ ಸಮಸ್ಯೆಗಳು ಉದ್ಭವಿಸಿದಾಗ ಮುಂದೆ ಹುಟ್ಟುವ ಅಥವಾ ಹುಟ್ಟಿರುವ ಮಗುವಿಗೆ ಕೂದಲು ಅಥವಾ ಜಡೆಯನ್ನು ತಮ್ಮ ಮನೆ ದೇವರುಗಳಿಗೆ ಮೀಸಲು ಬಿಟ್ಟು ಹರಕೆ ಹೊತ್ತಿರುತ್ತಾರೆ. ಮಗು ಹುಟ್ಟಿ ಐದು

ತಿಂಗಳು, ಒಂಬತ್ತು ತಿಂಗಳು, ಒಂದು ವರ್ಷ ಮತ್ತು ಮೂರು ವರ್ಷ ತುಂಬುವದರೊಳಗಾಗಿ ಅವರವರ ಅನುಕೂಲತೆಗೆ ತಕ್ಕಂತೆ ದೇವಸ್ಥಾನ, ದೇವರ ಪೌಳಿ, ದೇವರ ನಿಧಿ, ಪುಣ್ಯ ಕ್ಷೇತ್ರ, ಕುರಿಹಟ್ಟಿ, ಗಂಗೆಸ್ಥಾನ, ವಜ್ರ, ಇಲ್ಲವೇ ದೇವರ ತೀರ್ಥ-ಪ್ರಸಾದ ತಂದು ತಮ್ಮ ಹಟ್ಟಿಗಳಲ್ಲೇ ಮಕ್ಕಳನ್ನು ಜವಳ ತೆಗೆಸುತ್ತಾರೆ. ಈ ಎಲ್ಲಾ ಧಾರ್ಮಿಕ ವಿಧಿ-ವಿಧಾನಗಳು ಹಾಗೂ ಸಂಪ್ರದಾಯಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಒಂದೇ ರೀತಿ ಕಂಡು ಬರುತ್ತವೆ.

ದೇವರ ಸನ್ನಿಧಿಯಲ್ಲಿ ಪೂರ್ವಾಭಿಮುಖವಾಗಿ ಕರಿಕಂಬಳಿ ಗದ್ದುಗೆ ಹಾಸಿ, ಅಕ್ಕಿ ಕಾಳಿನ ಅಕ್ಷತೆ ಹಾಕಿ, ಕಳಸ ಹೂಡಿ, ದಾಸಯ್ಯ ಮತ್ತು ಪೂಜಾರಿಗಳನ್ನು ಕರೆಸಿ ಕರಿಕಂಬಳಿ ಗದ್ದುಗೆಗೆ ಪೂಜೆ ಮಾಡಿಸಿ ಅದರ ಮೇಲೆ ಲಿಂಗವಸ್ತ್ರ ಬಟ್ಟೆ ಹಾಸಿ, ತಾಯಿ ಮತ್ತು ಮಗುವನ್ನು ಗದ್ದುಗೆಯ ಮೇಲೆ ಕೂಡ್ರಿಸುತ್ತಾರೆ. ಆಗ ಹಜಾಮ ಜಾತಿಗೆ ಸೇರಿದ ವ್ಯಕ್ತಿ ಬಂದು ಆಯುಧಗಳು ಮತ್ತು ಗದ್ದುಗೆಗೆ ಪೂಜೆ ಮಾಡಿ, ಪೂರ್ವಕ್ಕೆ ಮುಖ ಮಾಡಿ ಕೈಮುಗಿದುಕೊಂಡು "ಗೌಡ್ರು ಶ್ಯಾನುಭೋಗರು, ದೈವದವರು ಮಂಡೆ ತೆಗೆಯೋಕೆ ಅಪ್ಪಣೆ ಕೊಟ್ರೇನಪ್ಪಾ" ಎಂದು ಮೂರು ಸಾರಿ ಹಜಾಮರವನು ಕೇಳುತ್ತಾನೆ. ಆಗ ಅಲ್ಲಿ ನೆರದಿದ್ದ ಹಿರಿಯ ವ್ಯಕ್ತಿಗಳು "ದೇವರ ಅಪ್ಪಣೆ" ಎಂದಾಗ ಸೋದರ ಮಾವನಿಂದ ಮಗುವಿನ ತಲೆಯ ಮೇಲೆ ವೀಳ್ಯದೆಲೆ ಅಥವಾ ಎಲೆ ಕತ್ತರಿ ಮುಟ್ಟಿಸುತ್ತಾರೆ. ನಂತರ ಹಜಾಮನು ಕಬ್ಬಿಣದ ಕತ್ತರಿಯಿಂದ ಮಗುವಿನ ತಲೆ ಕೂದಲನ್ನು ಸಂಪೂರ್ಣ ಕತ್ತರಿಸುತ್ತಾನೆ. ಈ ತಲೆ ಕೂದಲನ್ನು ಎಲೆ, ಅಡಿಕೆಯಲ್ಲಿಟ್ಟು ನಂತರ ಗಂಗೆ ಕಾಣಿಸುತ್ತಾರೆ.

ಮಗುವಿನ ಕೂದಲು ತೆಗೆಸಿದ ನಂತರ ತಾಯಿ ಮತ್ತು ಮಗುವಿಗೆ ಜಳಕ ಮಾಡಿಸಿ ತವರು ಮನೆಯವರು ಮಗು ಮತ್ತು ತಾಯಿಗೆ ತಂದಿದ್ದ ಹೊಸಬಟ್ಟೆ ಉಡಿಸಿ, ಕರಿಕಂಬಳಿ ಗದ್ದುಗೆಯ ಮೇಲೆ ಕೂಡ್ರಿಸಿ ಉಡಿ ತುಂಬುವ ಶಾಸ್ತ್ರ ಮಾಡಿ, ಸೋದರಮಾವನಿಂದ ಮಗುವಿನ ಕಿವಿಗೆ ಬಂಗಾರದ ಮುರ ಮುಟ್ಟಿಸುತ್ತಾರೆ. ಆಗ ಸೋದರ ಮಾವನಿಗೆ ಹೊಸಬಟ್ಟೆ ಕೊಡುವ ಪದ್ಧತಿ ಇದೆ. ಆರ್ಥಿಕವಾಗಿ ಮುಂದುವರೆದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ತವರು ಮನೆಯಿಂದ ಬೆಳ್ಳಿ ಉಡುದಾರ, ಬೆಳ್ಳಿ ಕಡಗ, ಬೆಳ್ಳಿ ಲಿಂಗದಕಾಯಿ, ಬಂಗಾರದ ಮುರ, ಸಂಜೀವಿನಿ ತಾಳಿ ಮತ್ತು ಹೊಸಬಟ್ಟೆಗಳನ್ನು ಮಗು ಹಾಗೂ ಅದರ ತಂದೆ ತಾಯಿಗಳಿಗೆ ಉಡುಗೊರೆಯಾಗಿ ಕೊಡುವ ಸಂಪ್ರದಾಯವಿದೆ. ನಂತರ ಬಂಧು ಬಾಂಧವರು ಮಗುವಿಗೆ 'ಮುಯ್ಯಿ' ಮಾಡುವ ಪದ್ಧತಿಯುಂಟು.

ಈ ಎರಡು ಬುಡಕಟ್ಟುಗಳಲ್ಲಿ ಮಕ್ಕಳ ಜವಳ ತೆಗೆಸುವ ಕಾರ್ಯಕ್ರಮಕ್ಕೆ ಬಂಧು ಬಳಗ ಹಾಗೂ ಗ್ರಾಮಸ್ಥರನ್ನು ಆಹ್ವಾನಿಸಿ ಕೆಲವರು 'ಸಿಹಿ ಊಟ' ಮತ್ತೆ ಕೆಲವರು 'ಮಾಂಸದ ಊಟ' ಹಾಕುತ್ತಾರೆ. ಸಸ್ಯಾಹಾರ ಮತ್ತು ಮಾಂಸಾಹಾರದ ಊಟ ಆಯಾ ದೈವಗಳಿಗೆ ಸಂಬಂಧಪಟ್ಟಿರುತ್ತದೆ. ನಂದಿಹಳ್ಳಿ ರಂಗಪ್ಪ, ಅಹೋಬಲ ನರಸಿಂಹಸ್ವಾಮಿ, ಚಿತ್ರಲಿಂಗೇಶ್ವರ, ಹಾಲುರಾಮೇಶ್ವರ, ಹಾಲುಗುಡ್ಡದಪ್ಪ, ಕಂಪಳರಂಗಸ್ವಾಮಿ, ಕ್ಯಾತಪ್ಪ, ಕಾಟಲಿಂಗೇಶ್ವರ ಮುಂತಾದ ಶೈವ ಮತ್ತು ವೈಷ್ಣವ ದೇವರುಗಳಿಗೆ ಜವಳ ತೆಗೆಸಿದರೆ ಸಿಹಿ ಅಡಿಗೆ ಮಾಡಿ, ದೇವರಿಗೆ ಎಡೆ ಹಾಕಿ ನಂತರ ಊಟ ಮಾಡುವ ಪದ್ಧತಿಯುಂಟು. ಆದರೆ ಅಡ್ನಟ್ಟಿ ಭೂತಪ್ಪ, ಪುರ್ಲಳ್ಳಿ ಭೂತಪ್ಪ, ಗೌರಸಂದ್ರದ ಮಾರಮ್ಮ, ಬೇವಿನಹಳ್ಳಿ ಕರಿಯಮ್ಮ, ಯರಬಳ್ಳಿ ಮಾರಕ್ಕ, ನಾಯಕನಹಟ್ಟಿ ತಿಪ್ಪೇಸ್ವಾಮಿ,

ಸಾಣೇಕೆರೆ ಗಂಜಿಗುಂಟಮ್ಮ, ಜಗಲೂರಜ್ಜ, ಬೊಂಬೇರಹಳ್ಳಿ ಕಟ್ಟೆಮಾರಕ್ಕ, ಮಾಯಸಂದ್ರದ ಕರಿಯಮ್ಮ, ಗುಂಟನೂರು ದ್ಯಾಮವ್ವ, ಅನುಕಟ್ಟೆ ಕೆಂಚಮ್ಮ, ಅಮ್ಮನಗುಡ್ಡದ ಕುಕ್ಕವಾಡದಮ್ಮ ಮೊದಲಾದ ದೇವರುಗಳಿಗೆ, ಜವಳ ತೆಗೆಸಿದರೆ ಬೇಟೆ ಕೊಯ್ದು ಮಾಂಸದ ಅಡಿಗೆ ಮಾಡಿ ದೇವರಿಗೆ ಎಡೆ ಹಾಕಿ ನಂತರ ಊಟ ಮಾಡುವ ಪದ್ಧತಿ ಈ ಜನಾಂಗಗಳಲ್ಲಿ ಕಂಡು ಬರುತ್ತದೆ. ಆದರೆ ಬ್ಯಾಟೆ ಕೊಯ್ಯುವಾಗ ಬ್ಯಾಟೆ ಅರಚಬಾರದು. ಆಕಸ್ಮಿಕವಾಗಿ ಅದು ಅರಚಿದರೆ ನಮಗೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆ ಈ ಎರಡೂ ಬುಡಕಟ್ಟು ಜನಾಂಗಲ್ಲಿದೆ.

ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಪ್ರದೇಶಗಳಲ್ಲಿ ಮ್ಯಾಸಬೇಡರ ದೇವರುಗಳಿಗೆ ಕಾಡುಗೊಲ್ಲರು; ಕಾಡುಗೊಲ್ಲರ ದೇವರುಗಳಿಗೆ ಮ್ಯಾಸಬೇಡರು, ಜವಳ ತೆಗೆಸುವುದು, ಆರತಿ ಬೆಳಗುವುದು, ಜೊತೆಯಲ್ಲಿ ಊಟ ಮಾಡುವುದು, ದೇವರ ಜಾತ್ರೆಗಳನ್ನು ಇಬ್ಬರೂ ಕೂಡಿ ಆಚರಿಸುವ ಪದ್ಧತಿಗಳು ಕಂಡು ಬರುತ್ತವೆ. ಅದೇ ರೀತಿ ಜವಳ ತೆಗೆಸುವ ಧಾರ್ಮಿಕ ವಿಧಿ-ವಿಧಾನಗಳು ಮತ್ತು ಸಂಪ್ರದಾಗಳಲ್ಲಿ ಏಕತೆಯನ್ನು ಹೊಂದಿವೆ. ಆದರೆ ಇತ್ತಿಚೆಗೆ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೂಡ ಧರ್ಮಸ್ಥಳ, ತಿರುಪತಿ, ಮಂತ್ರಾಲಯ ಮೊದಲಾದ ಪುಣ್ಯಸ್ಥಳಗಳಿಗೆ ಹೋಗಿ, ಜವಳ ತೆಗೆಸಿಕೊಂಡು ಬರುವ ಪದ್ಧತಿ ಕೆಲವರಲ್ಲಿ ಕಂಡು ಬರುತ್ತದೆ.

೪. ಋತುಮತಿ ಶಾಸ್ತ್ರ

ಹೆಣ್ಣು ಯೌವನಾವಸ್ಥೆಗೆ ಕಾಲಿಡುವ ಪೂರ್ವದಲ್ಲಿ ಋತುಮತಿಯಾಗುವುದು ನಿಸರ್ಗದ ನಿಯಮ. ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಹೆಣ್ಣು ಋತುಮತಿಯಾಗುವುದನ್ನು ದೊಡ್ಡವಳಾಗುವುದು, ಮೈನೆರೆಯುವುದು, ವಯಸ್ಸಿಗೆ ಬರುವುದು ಮತ್ತು ಗೊಪ್ಪದ್ಯೆಯದೆ ಎಂದು ಕರೆಯುತ್ತಾರೆ. ಇತರ ಜಾತಿ ಜನಾಂಗದವರಂತೆ ಈ ಎರಡು ಬುಡಕಟ್ಟು ಗಳಲ್ಲೂ ಸಾಮಾನ್ಯವಾಗಿ ಹೆಣ್ಣು ಮಕ್ಕಳು ೧೨ ರಿಂದ ೧೪ ವಯಸ್ಸಿನಲ್ಲಿ ಋತುಮತಿಯಾಗುತ್ತಾರೆ. ಮುಟ್ಟಾದ ಮತ್ತು ಮೈನೆರೆತ ಹೆಣ್ಣನ್ನು ಅಪವಿತ್ರಳು ಎಂದು ಈ ಬುಡಕಟ್ಟು ಜನಾಂಗ ಭಾವಿಸುವುಂಟು. ಅಪವಿತ್ರಳಾದ ಮೈನೆರೆತ ಹೆಣ್ಣನ್ನು ಪವಿತ್ರಳಾಗಿ ಮಾಡುವ ಹಲವು ಧಾರ್ಮಿಕ ವಿಧಿ-ವಿಧಾನಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತವೆ. ಪ್ರಸ್ತುತ ಈ ಎರಡು ಸಮೂಹಗಳಲ್ಲಿ ಬಾಲ್ಯವಿವಾಹ ಪದ್ಧತಿ ಕಂಡು ಬರುವುದಿಲ್ಲ. ಮದುವೆಯ ವಯಸ್ಸು ಕನಿಷ್ಟ ೧೬ ರಿಂದ ೧೮ ವರ್ಷ ಮೇಲ್ಪಟ್ಟಿರುತ್ತದೆ. ಈ ಎರಡು ಸಮುದಾಯ ಗಳಲ್ಲಿ 'ಮುಟ್ಟು' ಸೂತಕವೆಂದು ಪರಿಗಣಿಸಲ್ಪಡುವದರಿಂದ ಋತುಮತಿಯಾದ ಹೆಣ್ಣಿಗೆ ಅವರದೇ ಆದಂತಹ ಸಂಸ್ಕಾರ ಮತ್ತು ಸಂಪ್ರದಾಯಗಳನ್ನು ಆಚರಿಸುತ್ತಾರೆ.

೪.೧. ಮ್ಯಾಸಬೇಡರು

ಮ್ಯಾಸಬೇಡರಲ್ಲಿ ಹೆಣ್ಣು ಋತುಮತಿಯಾದ ದಿನವೇ ಅವಳ ಸೋದರಮಾವ ಹೊಂಗೆ ಮತ್ತು ಬೇವಿನ ಸೊಪ್ಪಿನಿಂದ ಮನೆಯ ಹೊರಗೆ 'ಹಸಿರು ಗುಡ್ಲು' ಕಟ್ಟಿ ಪೂಜೆ ಮಾಡುತ್ತಾನೆ. ನಂತರ ಹುಡುಗಿ ಗುಡಿಸಲ ಒಳಗೆ ಹೋಗಿ ಕುಳಿತುಕೊಂಡಾಗ ಸೋದರಮಾವ ಒಂದು ತೆಂಗಿನಕಾಯಿಯನ್ನು ಗುಡಿಸಲ ಒಳಗೆ ಉರುಳಿ ಬಿಡುತ್ತಾನೆ. ಆಗ ಹುಡುಗಿ ತೆಂಗಿನಕಾಯಿಯನ್ನು ಹೊರಗೆ ದೂಡುತ್ತಾಳೆ. ಈ ರೀತಿ ಮೂರು ಸಲ ಮಾಡಿಸುತ್ತಾರೆ. ಮೈನೆರೆತ

ಹೆಣ್ಣು ಐದು, ಒಂಬತ್ತು, ಹನ್ನೊಂದು ಕೆಲವು ಪ್ರದೇಶಗಳಲ್ಲಿ ಹದಿನಾರು ದಿನಗಳ ವರೆಗೆ ಸೂತಕದ ಹೆಣ್ಣಾಗಿ ಹಸಿರು ಗುಡ್ಸುನಲ್ಲಿ ವಾಸಿಸಬೇಕು. ಪ್ರತಿ ದಿನ ಜಳಕ ಮಾಡಿಸಿ ಮಡಿವಾಳರು ಕೊಟ್ಟ ಮಡಿ ಬಟ್ಟೆಗಳನ್ನು ಧರಿಸಲು ಕೊಡುತ್ತಾರೆ.ಈ ದಿನಗಳಲ್ಲಿ ಕುಲಸ್ಥರು ಹಸಿರು ಗುಡಿಸಲಲ್ಲಿ ಇರುವ ಹುಡುಗಿಗೆ ಹಬ್ಬದೂಟವೆಂದು ಸಿಹಿ ಅಡಿಗೆ ಮಾಡಿ ತಂದು ಕೊಡುತ್ತಾರೆ. ತಾಯಿ ತವರಿನವರು ಬಂದು ಉಡಿ ತುಂಬುತ್ತಾರೆ. ಮೈನೆರೆತ ಹೆಣ್ಣಿಗೆ ಮದುವೆಯಾಗಿದ್ದರೆ. ಅಥವಾ ನಿಶ್ಚಿತಾರ್ಥವಾಗಿದ್ದರೆ ಗಂಡನ ಮನೆಯವರು 'ಒಸುಗೆ ಬುಟ್ಟಿ' ಎಂದು ಹುರಕ್ಕಿ ಉಂಡೆ ಮತ್ತು ಉಡುಗೊರೆಗಳನ್ನು ತರುತ್ತಾರೆ. ಋತುಮತಿಯಾದ ಹುಡುಗಿ ಐದು ದಿನಗಳ ಕಾಲ ಸೂತಕ ಕಳೆಯುವವರೆಗೆ ತಟ್ಟೆಯಲ್ಲಿ ಊಟ ಮಾಡುವಂತಿಲ್ಲ. ಸೋದರಮಾವ ತಂದು ಕೊಟ್ಟ "ಕಲ್ಲುಮರಗೆ"ಯ ಮೇಲೆ ಆಕೆ ಐದು ದಿನಗಳ ವರೆಗೆ ಊಟಮಾಡಬೇಕು. ಅಂದರೆ ಮೊದಲನೆ ದಿನ ಒಂದು ಬೆರಳಲ್ಲಿ, ಎರಡನೆ ದಿನ ಎರಡು ಬೆರಳಲ್ಲಿ, ಮೂರನೆ ದಿನ ಮೂರು ಬೆರಳಲ್ಲಿ, ನಾಲ್ಕನೆ ದಿನ ನಾಲ್ಕು ಬೆರಳಲ್ಲಿ ಮತ್ತು ಐದನೆ ದಿನ ಐದು ಬೆರಳನ್ನು ಸೇರಿಸಿ ಊಟ ಮಾಡಬೇಕು.

ಮುಟ್ಟನ್ನು ಸೂತಕವೆಂದು ಪರಿಗಣಿಸುವ ಮ್ಯಾಸಬೇಡರು ಒಂಬತ್ತು, ಹನ್ನೊಂದು ಅಥವಾ ಹದಿನಾರನೇ ದಿನದಲ್ಲಿ, ಅಂದರೆ ಅವರವರ ಅನುಕೂಲಕ್ಕೆ ತಕ್ಕಂತ ದಿನಗಳಲ್ಲಿ ಮನೆಯನ್ನೆಲ್ಲ ಸಾರಿಸಿ, ನೆಲ ಕಾರಣೆ ಮಾಡಿ, ಮಡಿವಾಳರಿಂದ ಮನೆಗೆಲ್ಲ ಗೋಗಂಜು ಪ್ರೋಕ್ಷಣೆ ಮಾಡಿಸುತ್ತಾರೆ. ಮೈನೆರೆತ ಹೆಣ್ಣಿಗೆ ಜಳಕ ಮಾಡಿಸಿ, ಸೋದರಮಾವಗಳು ತಂದಿದ್ದ ಹೊಸಬಟ್ಟೆ ಉಡಿಸಿ, ಕರಿಕಂಬಳಿ ಹೊದ್ದಿಸಿ ಕೊಂಡು ಊರ ಹೊರಗೆ ಕರೆದುಕೊಂಡು ಹೋಗಿ 'ತಂಗಟೆ ಗಿಡ' ಕ್ಕೆ ಪೂಜೆ ಮಾಡಿಸಿ, ತಂಗಟೆ ಗಿಡ ಮುಟ್ಟಿಸುತ್ತಾರೆ. ಅದೇ ತಂಗಟೆ ಗಿಡವನ್ನು ಮೊದಲು ಚಿಕ್ಕ ಹುಡುಗಿಯರನ್ನು ದಾಟಿಸಿ, ನಂತರ ಮೈನೆರೆತ ಹುಡುಗಿಯನ್ನು ಮೂರು ಬಾರಿ ತಂಗಟೆ ಗಿಡವನ್ನು ದಾಟಿಸುತ್ತಾರೆ. ಈ ಶಾಸ್ತ್ರವನ್ನು "ಗಿಡ ದಾಟಿಸುವುದು" ಎಂದು ಕರೆಯುತ್ತಾರೆ. ತಂಗಟೆ ಗಿಡ ದಾಟಿಸಿದ ನಂತರ ಕರಿಕಂಬಳಿ ಹೊದ್ದಿಸಿ ಕೊಂಡು ಹಿಂದಕ್ಕೆ ತಿರುಗಿ ನೋಡದೆ ಸೋದರತ್ತೆ ಮನೆಗೆ ಕರೆದುಕೊಂಡು ಬರುತ್ತಾಳೆ. ಮನೆಯ ಬಾಗಿಲ ಹತ್ತಿರ ಬಂದಾಗ, ಕುರಿ ಗೊಬ್ಬರ ತಂದು ಬಾಗಿಲ ಮುಂದೆ ಕುಪ್ಪೆ ಹಾಕಿ ಅದರ ಮೇಲೆ ಬೆಂಕಿಯ ಕೆಂಡವಿಟ್ಟಿರುತ್ತಾರೆ. ಸೋದರತ್ತೆ ಹುಡುಗಿಯ ಕೈ ಕಾಲಲ್ಲಿರುವ ಉಗುರುಗಳನ್ನು ಚೂರಿಯಿಂದ ಕತ್ತರಿಸುತ್ತಾಳೆ. ನಂತರ ಗೋಗಂಜಿನಿಂದ ಹುಡುಗಿ ಮೂರು ಸಲ ಬಾಯಿ ಮುಕ್ಕಳಿಸಿ ಕುರಿ ಗೊಬ್ಬರದ ಕೆಂಡದ ಮೇಲೆ ಉಗುಳುತ್ತಾಳೆ; ಮತ್ತೆ ಇದ್ದಿಲಿಂದ ಹಲ್ಲುಜ್ಜಿ ಕೆಂಡದ ಮೇಲೆ ಉಗುಳುತ್ತಾಳೆ. ಆಗ ಸೋದರತ್ತೆ ಅಥವಾ ಸೋದರಮಾವ ಬೇವಿನ ಕಡ್ಡಿಯಿಂದ ನಾಲಿಗೆ ಸುಟ್ಟು, ಅನ್ನ ನೀವಳಿಸಿ ಹುಡುಗಿಯನ್ನು ಒಳಗೆ ಕರೆದುಕೊಳ್ಳುತ್ತಾರೆ. ಅದೇ ದಿನ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರಿಗೆ ಪೂಜೆ ಮಾಡಿಸಿ ಪೂಜಾರಿಯಿಂದ ತೀರ್ಥ ಹಾಕಿಸಿಕೊಂಡು ಶುದ್ಧಳಾಗಿ, ನಂತರ ಗಂಗೆ ಪೂಜೆ ಮಾಡಿಸಿ ಎಲೆ, ಅಡಿಕೆ, ತಂಬಿಟ್ಟು, ಬಾಳೆಹಣ್ಣನ್ನು ಹರಿಯುವ ನೀರಿನಲ್ಲಿ ತೇಲಿಬಿಟ್ಟು, ಮಣ್ಣಿನ ಗಡಿಗೆಯಲ್ಲಿ ನೀರು ತುಂಬಿಕೊಂಡು ಮುತ್ತೈದೆಯರೊಂದಿಗೆ ಮೈನೆರೆತ ಹೆಣ್ಣು ಮನೆಗೆ ಬರುತ್ತಾಳೆ. ಅಲ್ಲಿಗೆ ಸೂತಕ ಕಳೆದುಕೊಂಡಂತೆ ಎಂದು ಹುಡುಗಿಯನ್ನು ಮನೆಯ ಒಳಗೆ ಕರೆದುಕೊಳ್ಳುತ್ತಾರೆ.

ಮೈನೆರೆತ ಹೆಣ್ಣಿನ ಸೂತಕ ಕಳೆದ ದಿನವೇ ಅವಳ ಸೋದರಮಾವ 'ಹಸಿರು ಗುಡ್ಲ'ನ್ನು ಊರ ಹೊರಗೆ

ತೆಗೆದುಕೊಂಡು ಹೋಗಿ ಸುಡುತ್ತಾನೆ. ಅವಳು ಊಟಕ್ಕೆ ಬಳಸುತ್ತಿದ್ದ 'ಕಲ್ಲುಮರಗೆ'ಯನ್ನು ಒಡೆದು ಹಾಕಿ ಬರುತ್ತಾನೆ. ಮೈನೆರೆತ ಒಂಬತ್ತು ಅಥವಾ ಹದಿನಾರನೇ ದಿನದಲ್ಲಿ ಬಂಧು ಬಳಗದವರೆಲ್ಲ ಸೇರಿಕೊಂಡು "ಒಸುಗೆ ಬುಟ್ಟಿ" ತಂದು ಕೂಡ್ರಿಸುವ ಶಾಸ್ತ್ರ ಮಾಡುತ್ತಾರೆ.

ಮ್ಯಾಸಬೇಡರಲ್ಲಿ ತಿಂಗಳ ಮುಟ್ಟನ್ನು ಮೈಲಿಗೆ ಅಥವಾ ಸೂತಕ ಎಂದು ಪರಿಗಣಿಸಿ, ಮುಟ್ಟಾದ ಹೆಂಗಸಿಗೆ ಮೂರು ದಿನಗಳ ಕಾಲ ಮನೆಯಲ್ಲಿ ಪ್ರವೇಶವಿರುವುದಿಲ್ಲ. ಮನೆಯಿಂದ ಹೊರಗೆ ಪ್ರತ್ಯೇಕವಾಗಿಯೇ ವಾಸಿಸುತ್ತಾರೆ. ಅವರ ಊಟದ ತಟ್ಟೆ, ಲೋಟ, ಚಾಪೆ ಪ್ರತ್ಯೇಕವಾಗಿಯೇ ಇಟ್ಟಿರುತ್ತಾರೆ. ಮುಟ್ಟಾದ ಮೂರು ದಿನಗಳ ವರೆಗೆ ಕುಟುಂಬದ ಇತರ ಸದಸ್ಯರೊಂದಿಗೆ ಅವಳ ಸಂಪರ್ಕ ನಿಷೇಧಿಸಲ್ಪಟ್ಟಿರುತ್ತದೆ. ಯಾವುದೇ ಪೂಜೆ, ಜಾತ್ರೆ, ಹಬ್ಬ ಮಂಗಳ ಕಾರ್ಯಗಳಲ್ಲಿ ಮುಟ್ಟಾದ ಮ್ಯಾಸಬೇಡರ ಹೆಣ್ಣು ಮಕ್ಕಳು ಭಾಗವಹಿಸುವಂತಿಲ್ಲ.

೪.೨. ಕಾಡುಗೊಲ್ಲರು

ಹೆಣ್ಣು ಮಗಳು ಮೈನೆರೆದಿದ್ದು ಗೊತ್ತಾದ ತಕ್ಷಣ ಕಾಡುಗೊಲ್ಲರು ಹಟ್ಟಿಯಿಂದ ಹೊರಗೆ ಕಳುಹಿಸುತ್ತಾರೆ. ಆ ದಿನವೇ ಮೈನೆರೆತ ಹುಡುಗಿಗೆ ಹಟ್ಟಿಯ ಹೊರಗೆ ಜಳಕ ಮಾಡಿಸಿ ಮಡಿವಾಳರು ತಂದು ಕೊಟ್ಟ ಮಡಿ ಬಟ್ಟೆಗಳನ್ನು ಉಡಲು ಕೊಡುತ್ತಾರೆ. ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕಿನ ಕೆಲವೊಂದು ಪ್ರದೇಶದ ಕಾಡುಗೊಲ್ಲರು ಮೈನೆರೆದಿದ್ದು ಗೊತ್ತಾದ ತಕ್ಷಣ ಮನೆಯಿಂದ ಹೊರಗೆ ಇಡುತ್ತಾರೆ. ಸಂಜೆ ಹೊತ್ತಿಗೆ ಜಳಕ ಮಾಡಿಸಿ ಬಿಳಿಸೀರೆ ಉಡಿಸಿ ಹಟ್ಟಿಯ ಹೆಣ್ಣು ಮಕ್ಕಳು ಪದ ಹೇಳಿಕೊಂಡು ಹಟ್ಟಿಯಿಂದ ಹೊರಗೆ ಕರೆದುಕೊಂಡು ಬರುತ್ತಾರೆ. ಅಷ್ಟೊತ್ತಿಗಾಗಲೇ ಹುಡುಗಿಯ ಸೋದರಮಾವ ಅಥವಾ ಅವನ ಮಕ್ಕಳು ಹತ್ತಿ, ಆಲ ಮತ್ತು ಹೊಂಗೆ ಸೊಪ್ಪುಗಳಿಂದ ಹಟ್ಟಿಯ ಹೊರಗೆ ಕಟ್ಟಿದ 'ಸೊಪ್ಪಿನ ಹಸಿರು ಗುಡ್ಲು' ಅಥವಾ 'ಸಾಟು' ನಲ್ಲಿ ಮೈನೆರೆತ ಹೆಣ್ಣನ್ನು ಅದರಲ್ಲಿ ಬಿಡುತ್ತಾರೆ. ಹಟ್ಟಿಯ ಮುತ್ತೈದೆಯರು ಅಕ್ಷತೆ, ಅಂಗನೂಲ, ಚಿಗಳಿ, ತಂಬಿಟ್ಟು, ಕಡಲೆ, ಕೊಬರಿ, ಉತ್ತುತ್ತಿ ಇವುಗಳಿಂದ 'ಉಡಿ ತುಂಬಿ' ನಂತರ ಸೋದರಮಾವ ತಂದು ಕೊಟ್ಟ 'ಕಲ್ಲು ಮರಗೆ' ಮೇಲೆ ಒಂದು ದೊಡ್ಡ ತಂಬಿಟ್ಟು ಉಂಡೆಯನ್ನಿಟ್ಟು ಅದರ ಮೇಲೆ ಹಾಲು ತುಪ್ಪ ಹಾಕಿ ಒಂದೇ ಬೆರಳಲ್ಲಿ ತಂಬಿಟ್ಟನ್ನು ತಿನ್ನುವಂತೆ ಮೈನೆರೆದ ಹುಡುಗಿಗೆ ಹೇಳುತ್ತಾರೆ. ಆಗ ಅವಳು ಒಂದೇ ಬೆರಳಲ್ಲಿ ತಂಬಿಟ್ಟನ್ನು ತಿಂದ ಮೇಲೆ ಸೂತಕವೆಂದು ಭಾವಿಸಿ ಅವಳನ್ನು ಯಾರು ಮುಟ್ಟದೆ ಹಟ್ಟಿಯ ಹೆಂಗಸರು ದೂರ ನಿಲ್ಲುತ್ತಾರೆ.

ಮೈನೆರೆತ ಹುಡುಗಿ ಮೂರು, ಐದು, ಒಂಬತ್ತು, ಹನ್ನೊಂದು ದಿನ ಕೆಲವು ಪ್ರದೇಶಗಳಲ್ಲಿ ಇಪ್ಪತ್ತೊಂದು ದಿನಗಳ ಕಾಲ ಸೊಪ್ಪಿನ ಹಸಿರು ಗುಡಿಸಲಿನಲ್ಲಿ ವಾಸಿಸಬೇಕು. ಪ್ರತಿದಿನ ಗೊಲ್ಲರ ಹೆಣ್ಣುಮಕ್ಕಳೇ ನೀರು ಹಾಕುತ್ತಾರೆ. ಮಡಿವಾಳರು ಮಡಿ ಬಟ್ಟೆ ತಂದು ಕೊಟ್ಟು, ಮೈಲಿಗೆ ಬಟ್ಟೆಯನ್ನು ತೆಗೆದುಕೊಂಡು ಹೋಗಿ ಶುಭ್ರಮಾಡಿ ತಂದು ಕೊಡುತ್ತಾರೆ. ಬಂಧು ಬಳಗ ಮತ್ತು ಕುಲಸ್ಥರು ಪ್ರತಿ ದಿನ ಸಿಹಿ ಅಡಿಗೆ ಮಾಡಿ ತಂದು ಗುಡಿಸಲಿನಲ್ಲಿ ಊಟಕ್ಕೆ ಹಾಕುತ್ತಾರೆ. ಮೈನೆರೆತ ಹೆಣ್ಣಿನ ಹತ್ತಿರ ಅವಳ ತಾಯಿ ಇಲ್ಲವೇ ವಯಸ್ಸಾದ ಹೆಂಗಸರು ಹಗಲಿರುಳು ಕಾಯುತ್ತಿರುತ್ತಾರೆ. ಒಂಬತ್ತು, ಹನ್ನೊಂದು ಅಥವಾ ಇಪ್ಪತ್ತೊಂದನೆ ದಿನದಲ್ಲಿ ಸೂತಕ ಕಳೆಯುವಾಗ, ಮಡಿವಾಳರು ಬಂದು ನೀರು ಹಾಕಿ ಮಡಿಬಟ್ಟೆ ಕೊಡುತ್ತಾರೆ. ಅದೇ ದಿನ ಸಂಜೆ ಹಟ್ಟಿಯ ಮುಂದೆ 'ಉಡದೆಡೆ

ತೂರಿಕೊಂಡು' ಹಣ್ಣು ಕಾಯಿ ಮಡ್ಲಿಗೆ ಹಾಕಿ, ಅಗಸರಿಂದ ಗೋಗಂಜು ಹಾಕಿಸಿ ಮನೆಗೆ ಕರೆದು ಕೊಂಡು ಹೋಗಿ ಕೂಡ್ರಿಸುವ ಶಾಸ್ತ್ರ ಮಾಡುತ್ತಾರೆ. ಸೋದರಮಾವಂದಿರು ಆ ದಿನ ಹೊಸ ಬಟ್ಟೆ ತರುತ್ತಾರೆ. ಅದೇ ದಿನ ಅವಳು ವಾಸಿಸುತ್ತಿದ್ದ ಹಸಿರು ಸೊಪ್ಪಿನ ಗುಡಿಸಲನ್ನು ಹಟ್ಟಿಯಿಂದ ದೂರ ತೆಗೆದುಕೊಂಡು ಹೋಗಿ ಸುಟ್ಟು ಬರುತ್ತಾರೆ.

ಹೊಸದುರ್ಗ, ಹಿರಿಯೂರು, ಪಾವಗಡ ಮತ್ತು ಸಿರಾ ತಾಲ್ಲೂಕುಗಳ ಕೆಲವು ಕಾಡುಗೊಲ್ಲರು ಹುಡುಗಿ ಋತುಮತಿಯಾದಾಗ ಹಸಿರು ಚಪ್ಪರ ಹಾಕಿ, ಉಡಿತುಂಬಿ, ಮೈನೆರೆತು ಐದು ದಿನಗಳ ಕಾಲ ಎಲ್ಲಾ ಶಾಸ್ತ್ರಗಳನ್ನು ಮುಗಿಸಿ ಇಪ್ಪತ್ತೊಂದು ದಿನಗಳ ಸೂತಕ ಕಳೆಯಲು "ಹಟ್ಟಿಯ ಹೊರಗೆ, ಮುಟ್ಟಾದ ಹೆಂಗಸರು ಇರುವುದಕ್ಕೋಸ್ಕರ, ಪ್ರತ್ಯೇಕವಾದ ಜಾಗವನ್ನು ನಿಗದಿಗೊಳಿಸುತ್ತಾರೆ. ಈ ಜಾಗವನ್ನು 'ಮಂದೆ' ಎಂದು ಕರೆಯುತ್ತಾರೆ. ಮೈನೆರೆದ ಹುಡುಗಿಗೆ ಆರನೆಯ ದಿನ ನೀರು ಹಾಕಿ ಮಡಿ ಬಟ್ಟೆಗಳನ್ನು ಕೊಟ್ಟು, ಅವಳನ್ನು 'ಮಂದೆ'ಯಲ್ಲಿ ಬಿಡುತ್ತಾರೆ. ಈ 'ಮಂದೆ'ಯಲ್ಲಿ ಅವಳು ಉಳಿದ ಮುಟ್ಟಾದ ಹೆಂಗಸರೊಡನೆ ಏಳು ದಿನಗಳ ಕಾಲ ವಾಸ ಮಾಡಬೇಕು. ಹದಿಮೂರನೆಯ ದಿನ ಅವಳು 'ಮಂದೆ'ಯನ್ನು ಬಿಟ್ಟು ಹೊರಕ್ಕೆ ಬರುತ್ತಾಳೆ. ಅಂದು ಅವಳನ್ನು ಹಟ್ಟಿಯ ಮೂಡಲ ಹುದಿಯ ಸಮೀಪದಲ್ಲಿ ಕೂರಿಸಿ, ಅವಳಿಗೆ ನೀರು ಹಾಕಿ, ಅಗಸರವಳು ಮಡಿಮಾಡಿ ತಂದುಕೊಟ್ಟ ಬಟ್ಟೆಗಳನ್ನು ಕೊಡುತ್ತಾರೆ. ಇಲ್ಲಿ ಅವಳಿಗೆ ಹಸಿರು ಚಪ್ಪರವನ್ನು ಹಾಕಿ ಕೊಡುತ್ತಾರೆ. ಈ ಹಸಿರು ಚಪ್ಪರದಲ್ಲಿ ಅವಳು ಒಂಬತ್ತು ದಿನಗಳ ಕಾಲ ಇರುತ್ತಾಳೆ. ಇಪ್ಪತ್ತೊಂದು ದಿನಗಳ ಅವಧಿಯಲ್ಲಿ ಅವಳು 'ಮಂದೆ'ಯಲ್ಲಿ ಏಳು ದಿನಗಳು, 'ಮಂದೆ'ಗೆ ಬರುವ ಮೊದಲು ಹಸಿರು ಚಪ್ಪರದಲ್ಲಿ ಐದು ದಿನಗಳು, 'ಮಂದೆ'ಯನ್ನು ಬಿಟ್ಟ ನಂತರ ಹಸಿರು ಚಪ್ಪರದಲ್ಲಿ ಒಂಬತ್ತು ದಿನಗಳು ಇದ್ದಂತಾಯಿತು. ಇಪ್ಪತ್ತೆರಡನೆಯ ದಿನ ಅವಳಿಗೆ ನೀರು ಹಾಕಿ, ಮಡಿ ಬಟ್ಟೆಯನ್ನು ಕೊಟ್ಟು ಹಟ್ಟಿಯ ಒಳಕ್ಕೆ ಕರೆದುಕೊಳ್ಳುತ್ತಾರೆ. ಅಂದು ಅವಳ ಮನೆಯಲ್ಲಿ ಪಾಯಸ ಮಾಡಿ ಊಟ ಮಾಡುತ್ತಾರೆ".[೨] ಬಂಧು ಬಳಗದವರು ಕೂಡಿ ಅದೇ ದಿನ ಕೂಡ್ರಿಸುವ ಶಾಸ್ತ್ರ ಮಾಡುತ್ತಾರೆ. ಕೆಲವೊಂದು ಸಲ ಸಂಬಂಧ ಬೆಳಸುವವರು 'ನಿಶ್ಚಿತಾರ್ಥ' ಕೂಡ ಮಾಡುತ್ತಾರೆ.

೫. ವಿವಾಹ ಪದ್ಧತಿ

ಪವಿತ್ರವಾದ ಧಾರ್ಮಿಕ ಸಂಸ್ಕಾರವೆಂದು ಪರಿಗಣಿಸಿರುವ ಭಾರತೀಯ ಹಿಂದೂ ವಿವಾಹವು ಧರ್ಮ, ಪ್ರಜಾ, ರತಿ, ಇವು ಇದರ ಮುಖ್ಯ ಉದ್ದೇಶಗಳಾಗಿವೆ. "ಯಾವುದೇ ಸಮಾಜವಾದರು ತನ್ನ ಸದಸ್ಯರುಗಳಿಗೆ ತಮಗಿಷ್ಟ ಬಂದವರನ್ನು ಯಾವ ಅಡಚಣೆಯೂ ಇಲ್ಲದಂತೆ ವಿವಾಹವಾಗಲು ಅವಕಾಶ ನೀಡುವುದಿಲ್ಲ. ಯಾರು ಯಾರನ್ನು ವಿವಾಹವಾಗಬೇಕು, ವಿವಾಹವಾಗಬಹುದು" ಎನ್ನುವುದರ ಬಗ್ಗೆ ಎಲ್ಲೆಡೆಯಲ್ಲಿಯೂ ನಿಯಮ ಅಥವಾ ನಿರ್ಬಂಧ ಗಳಿವೆ. 'ಒಳಪಂಗಡ ವಿವಾಹ' ಹಾಗೂ 'ಹೊರಪಂಗಡ ವಿವಾಹ' ಇವು ಅಂತಹ ಎರಡು ಪ್ರಮುಖ ನಿಯಮಗಳು. ಇವುಗಳ ಜೊತೆಗೆ 'ಆಗಮ್ಯಗಮನ ನಿಷೇಧ' ಎಂಬ ಮೂರನೇ ನಿಯಮವೂ ಅಷ್ಟೇ ಸಾರ್ವತ್ರಿಕ ಸ್ವರೂಪದ್ದಾಗಿದೆ".[೩] ಆದ್ದರಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಮುದಾಯಗಳಲ್ಲಿ ವೈವಾಹಿಕ ಸಂಬಂಧಗಳ ಬಗ್ಗೆ ಕಟ್ಟು ನಿಟ್ಟಾದ ನಿರ್ಬಂಧಗಳಿರುವುದರಿಂದ ಈ ವಿವಾಹ ಪದ್ಧತಿಯಲ್ಲಿ ವೈಯಕ್ತಿಕ ಅಗತ್ಯವೆಂದು ಭಾವಿಸಲ್ಪಡುವುದಕ್ಕಿಂತ ಹೆಚ್ಚಾಗಿ ಅದನ್ನು ಒಂದು ಪವಿತ್ರವಾದ ಧಾರ್ಮಿಕ ಸಂಸ್ಕಾರವೆಂದು ಪರಿಗಣಿಸಲ್ಪಡುತ್ತದೆ. ವಿವಾಹ ಸಂದರ್ಭದಲ್ಲಿ

ಆಚರಿಸಲಾಗುವ ವಿವಿಧ ಧಾರ್ಮಿಕ ವಿಧಿಗಳು ವಿವಾಹಕ್ಕೆ ಪಾವಿತ್ರ್ಯತೆಯನ್ನು ತಂದುಕೊಡುವುದರಿಂದ ಮಾನವ ತನ್ನ ಜೀವಿತಾವಧಿಯಲ್ಲಿ ಪಡೆಯಬೇಕಾದ ಹದಿನಾರು ಸಂಸ್ಕಾರಗಳಲ್ಲಿ ವಿವಾಹವೂ ಒಂದಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಧಾರ್ಮಿಕ ಆಚರಣೆಗಳನ್ನು ಬಿಟ್ಟರೆ ವಿವಾಹ ಸಮಾರಂಭಕ್ಕೆ ಹೆಚ್ಚಿನ ಮಹತ್ವ ಕೊಡುತ್ತಾರೆ. ಅವರ ಸಾಮಾಜಿಕ ಜೀವನದಲ್ಲಿ ಹಲವು ವೈವಾಹಿಕ ಸಂಬಂಧಗಳು ಮತ್ತು ನಿರ್ಬಂಧಗಳು ಹಂತ ಹಂತವಾಗಿ ಬೆಳೆದು ಬಂದಿರುತ್ತವೆ. "ವಿವಾಹವೆಂಬುದು ಕೇವಲ ಸ್ತ್ರೀ ಪುರುಷರ ಸಮಾಗಮವಲ್ಲ, ಲೈಂಗಿಕ ಜೀವನಕ್ಕಾಗಿ ಅವರಿಗೆ ನೀಡಿದ ಪರವಾನಿಗೆಯೂ ಅಲ್ಲ, ಅದು ಮಾನವ ಸಮೂಹ ಜೀವನದ ಅನಿವಾರ್ಯತೆ. ಪುರುಷತ್ವದ ಪರಿಪೂರ್ಣತೆಗಾಗಿ ಹಾಗೂ ಸ್ತ್ರೀತ್ವದ ಸಾರ್ಥಕತೆಗಾಗಿ ಅದು ಅಗತ್ಯ. ವಿವಾಹವು ಗಂಡು ಹೆಣ್ಣುಗಳ ನಡುವಿನ ದೈಹಿಕ, ಮಾನಸಿಕ, ನೈತಿಕ ಹಾಗೂ ಧಾರ್ಮಿಕ ಸ್ವರೂಪದ ನಂಟು".[೪] ಎಂಬ ಮನೋಭಾವನೆ ಈ ಜನಾಂಗದಲ್ಲಿ ಕಂಡುಬರುವುದರಿಂದ ವೈವಾಹಿಕ ಸಂಬಂಧಗಳನ್ನು ಬೆಳಸುವಾಗ ಒಳ ಪಂಗಡ ವಿವಾಹ ಅಥವಾ ಒಳಬಾಂಧವ್ಯ ವಿವಾಹ ಪದ್ಧತಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಅಂದರೆ ಮ್ಯಾಸಬೇಡರ 'ಚಿನ್ನಮೊಗಲರ' ಬೆಡಗಿನ ಗಂಡು; ಅದೇ ಜನಾಂಗದ 'ಮಂದಲರ'ಬೆಡಗಿನ ಹೆಣ್ಣನ್ನು ವಿವಾಹವಾಗಬಹುದು. ಕಾಡುಗೊಲ್ಲರ 'ಕರಡೇರ' ಬೆಡಗಿನ ಗಂಡು; ಅದೇ ಪಂಗಡದ 'ಸನ್ನರ' ಬೆಡಗಿನ ಹೆಣ್ಣನ್ನು ವಿವಾಹವಾಗಬಹುದು. ಈ ಎರಡೂ ಸಮುದಾಯಗಳಲ್ಲಿ ವಿವಾಹವಾಗುವ ವಧು-ವರರು ತಮ್ಮ ಪಂಗಡಗಳಿಗೆ ಸೇರಿದವರನ್ನು ಮಾತ್ರ ವಿವಾಹವಾಗುತ್ತಾರೆ. ಇದನ್ನೇ ಒಳಬಾಂಧವ್ಯ ವಿವಾಹ ಪದ್ಧತಿ ಎಂದು ಕರೆಯುತ್ತಾರೆ. ಇಂದಿಗೂ ಕೂಡ ಈ ಎರಡು ಬುಡಕಟ್ಟುಗಳಲ್ಲಿ ಅಂತರ್ಜಾತೀಯ ವಿವಾಹಕ್ಕೆ ಅವಕಾಶವಿಲ್ಲ. ನಾಗರಿಕ ಪ್ರಪಂಚದಿಂದ ಬಹುದೂರ ಪ್ರತ್ಯೇಕ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುವ ಈ ಸಮೂಹ ತಮ್ಮದೇ ಆದ ರೂಢಿ-ಸಂಪ್ರದಾಯಗಳು, ಆಚಾರ-ವಿಚಾರಗಳು, ನಂಬಿಕೆ- ನಡವಳಿಕೆಗಳು, ವಿಧಿ-ನಿಷೇಧಗಳು ಮೊದಲಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಬಹುಕಾಲದಿಂದ ಪ್ರತ್ಯೇಕವಾಗಿಯೇ ಉಳಿಸಿಕೊಂಡು ಬಂದಿದ್ದಾರೆ. ವಿವಾಹ ಪದ್ಧತಿಯಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ತಮ್ಮದೇ ಆದಂಥ ವಿಧಿ-ವಿಧಾನಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಮುಖ್ಯವಾದ ಅಂಶಗಳನ್ನು ಇಲ್ಲಿ ಚರ್ಚಿಲಾಗಿದೆ.

೫.೧. ಮ್ಯಾಸಬೇಡರ ವಿವಾಹ ಪದ್ಧತಿ

ಹತ್ತಿರದ ಸಂಬಂಧದಲ್ಲಿ "ತೆರ" ಕೊಟ್ಟು ಹೆಣ್ಣು ತರುವ ಪದ್ಧತಿ ಮ್ಯಾಸಬೇಡರಲ್ಲಿದೆ. ಬಾಲ್ಯ ವಿವಾಹ, ಬಹುಪತಿತ್ವ, ವಿಧವೆ ವಿವಾಹ, ಬಸವಿ ಪದ್ಧತಿ, ಕೂಡಿಕೆ ವಿವಾಹ ಪದ್ಧತಿಗಳು ಪ್ರಸ್ತುತ ಈ ಜನಾಂಗದಲ್ಲಿ ಕಂಡುಬರುತ್ತಿಲ್ಲ. ಏಕಪತ್ನಿತ್ವ ಮತ್ತು ಬಹುಪತ್ನಿತ್ವಕ್ಕೆ ಬಹಳ ಮಹತ್ವ ಕೊಡುತ್ತಾರೆ. ಸೋದರಮಾವ ಮತ್ತು ಸೋದರತ್ತೆಗೆ ವಿವಾಹ ಸಂದರ್ಭದಲ್ಲಿ ವಿಶೇಷ ಗೌರವ ಕೊಡುತ್ತಾರೆ. ಸರಳ ವಿವಾಹ ಪದ್ಧತಿ ರೂಢಿಯಲ್ಲಿದೆ. ಕನಿಷ್ಠ ಮೂರು ದಿನಗಳ ಕಾಲ ನಡೆಯುವ ಈ ವಿವಾಹ ಸಮಾರಂಭ ನಿಶ್ಚಿತಾರ್ಥ, ಹೀರೇರ ಶಾಸ್ತ್ರ, ಮದ್ದಿಂಗನ ಶಾಸ್ತ್ರ, ಧಾರೆ ಮುಹೂರ್ತ, ಮನೆ ತುಂಬಿಸುವುದು, ಗಂಗೆ ಪೂಜೆ, ನಾಗವಲೆ ಇವು ಅತ್ಯಂತ ಮುಖ್ಯವಾದ ಆಚರಣೆಗಳಾಗಿವೆ. ಹಸೆಬರೆಯುವುದು, ಹಸಿರು ಚಪ್ಪರ ಹಾಕುವುದು, ಹಾಲಗಂಭ, ಅರುಣೆ ತರುವುದು, ಸುರುಗೆ

ಸುತ್ತುವುದು, ಸುತ್ತು ಮಿಂಚು ಇಡುವುದು ಮ್ಯಾಸಬೇಡರಲ್ಲಿಲ್ಲ. ದೇವರು ಮತ್ತು ಧರ್ಮಕ್ಕೆ ಬಹಳ ಮಹತ್ವ ಕೊಟ್ಟು ವಿವಾಹ ಪದ್ಧತಿಯನ್ನು ಆಚರಿಸುತ್ತಾರೆ.

೫.೧.೧. ನಿಶ್ಚಿತಾರ್ಥ-ವೀಳ್ಯಶಾಸ್ತ್ರ : ಮ್ಯಾಸಬೇಡರ ವಿವಾಹ ಪದ್ಧತಿ ನಿಶ್ಚಿತಾರ್ಥ ಅಥವಾ ವೀಳ್ಯಶಾಸ್ತ್ರದ ಮೂಲಕ ಆರಂಭವಾಗುತ್ತದೆ. ಹೆಣ್ಣನ್ನು ನೋಡಿ ಸಂಬಂಧ ಬೆಳೆಸಲು ಖಚಿತಪಡಿಸಿಕೊಂಡು ನಂತರ ಗಂಡಿನ ಕಡೆಯವರು ಒಂದು ಶುಭ ದಿನದಂದು ಬಂಧು ಬಳಗದವರು ಕೂಡಿ ಹೆಣ್ಣಿನ ಮನೆಗೆ ಹೋಗುತ್ತಾರೆ. ಅಂದು ಸಂಜೆ ಎಲ್ಲಾ ಕುಲ ಬಾಂಧವರನ್ನು ಕರೆಯಿಸಿ ಕರಿಕಂಬಳಿ ಗದ್ದುಗೆ ಹಾಸಿ ಕಳಸ ಹೂಡುತ್ತಾರೆ. ಮಳೆಲೋರು ಬೆಡಗಿನವರು ಮಾತ್ರ ಕರಿಕಂಬಳಿ ಗದ್ದುಗೆ ಹಾಸುವ ಮತ್ತು ಎತ್ತುವ ಹಕ್ಕು ಪಡೆದಿರುತ್ತಾರೆ. ವೀಳ್ಯಶಾಸ್ತ್ರ ಮಾಡುವಾಗ ಮೊದಲು ಮೂರು ಕಟ್ಟೆಮನೆಗಳ ದೊರೆಗಳಿಗೆ; ಹನ್ನೆರಡು ಗುಡಿಕಟ್ಟೆಯ ಯಜಮಾನರಿಗೆ ವೀಳ್ಯ ತೆಗೆದಿಡುತ್ತಾರೆ. ಆ ವೀಳ್ಯ ಅಥವಾ ಎಲೆ ಅಡಿಕೆಯನ್ನು ಆಯಾಯ ಗುಡಿಕಟ್ಟೆ, ಕಟ್ಟೆಮನೆ ಮತ್ತು ಬೆಡಗುಗಳಿಗೆ ಸಂಬಂಧಿಸಿದ ಯಾರಾದರೊಬ್ಬರು ಬಂದು ವೀಳ್ಯೆಯನ್ನು ಪಡೆಯುವುದರ ಮೂಲಕ ನಿಶ್ಚಿತಾರ್ಥಕ್ಕೆ ಒಪ್ಪಿಗೆ ಸೂಚಿಸುತ್ತಾರೆ. ಬಹು ಹಿಂದೆ ಕಟ್ಟೆಮನೆಯ ದೊರೆ, ಗುಡಿಕಟ್ಟೆ ಯಜಮಾನ, ಪೂಜಾರಿ ಮತ್ತು ದೈವದವರ ಸಮ್ಮುಖದಲ್ಲಿ ನಿಶ್ಚಿತಾರ್ಥ ಮಾಡುತ್ತಿದ್ದರಂತೆ. ಆಕಸ್ಮಿಕವಾಗಿ ದೊರೆ ಯಜಮಾನ ಮತ್ತು ಪೂಜಾರಿಗಳು ನಿಶ್ಚಿತಾರ್ಥ ಕಾರ್ಯಕ್ಕೆ ಬಾರದಿದ್ದರೆ,ತೆಗೆದಿಟ್ಟ ವೀಳ್ಯವನ್ನು ಅವರಿಗೆ ಮುಟ್ಟಿಸುತ್ತಿದ್ದರಂತೆ. ಪ್ರಸ್ತುತ ಸಾಂಕೇತಿಕವಾಗಿ ಆಯಾಯ ಬೆಡಗಿಗೆ ಸಂಬಂಧಿಸಿದ ವ್ಯಕ್ತಿಗಳೇ ವೀಳ್ಯೆಯನ್ನು ತೆಗೆದುಕೊಳ್ಳುತ್ತಾರೆ.

ಕರಿಕಂಬಳಿಯ ಗದ್ದಿಗೆ ಮೇಲೆ ವಧುವನ್ನು ಕುಳ್ಳಿರಿಸಿ, ಗಂಡಿನ ಕಡೆಯವರು ತಂದಿದ್ದ ಸೀರೆ, ಕುಪ್ಪಸ, ಹಣ್ಣು, ಕಾಯಿ ಇತ್ಯಾದಿ ಸಾಮಾನುಗಳನ್ನು ವಧುವಿಗೆ ಉಡಿತುಂಬುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಹೆಣ್ಣಿನ ತಾಯಿಯನ್ನು ಗದ್ದಿಗೆಯ ಮೇಲೆ ಕುಳ್ಳಿರಿಸಿ ಆಕೆಗೂ ಉಡಿತುಂಬುತ್ತಾರೆ. ನಂತರ ಹೆಣ್ಣಿನ ಕಡೆ ಒಬ್ಬ ಹಿರಿಯ ವ್ಯಕ್ತಿ ಮತ್ತು ಗಂಡಿನ ಕಡೆ ಒಬ್ಬ ಹಿರಿಯ ವ್ಯಕ್ತಿ ಎದುರು ಬದರು ಕುಳಿತುಕೊಂಡು ಕುಲಸ್ಥರ ಸಮ್ಮುಖದಲ್ಲಿ ಎಲೆ ಅಡಿಕೆಯನ್ನು ಬದಲಾಯಿಸಿಕೊಳ್ಳುತ್ತ ಇಂಥವರ ಹೆಣ್ಣು ಇಂಥವರಿಗೆ ಕೊಟ್ಟೆ; ಇಂಥವರ ಹೆಣ್ಣು ಇಂಥವರು ಮಾಡಿಕೊಂಡ್ರಿ ಎಂದು ಮೂರು ಸಲ ಹೇಳಿ ಹೆಣ್ಣನ್ನು ಖಾಯಂ ಮಾಡಿಕೊಳ್ಳುತ್ತಾರೆ. ನಿಶ್ಚಿತಾರ್ಥ ಅಥವಾ ವೀಳ್ಯಶಾಸ್ತ್ರ ಮುಗಿದ ನಂತರ ಯಾವುದೇ ಕಾರಣಕ್ಕೂ ಹೆಣ್ಣಿನ ಕಡೆಯವರಾಗಲಿ ಅಥವಾ ಗಂಡಿನ ಕಡೆಯವರಾಗಲಿ ಮಾತು ಬದಲಾಯಿಸುವಂತಿಲ್ಲ. ಅಂದೇ ಕೆಲವರು ಮದುವೆಯ ದಿನವನ್ನು ನಿಗದಿ ಪಡಿಸುತ್ತಾರೆ. ಆ ದಿನ ಬಂದಂಥ ಕುಲಸ್ಥರಿಗೆ ಸಿಹಿ ಊಟದ ವ್ಯವಸ್ಥೆ ಮಾಡುತ್ತಾರೆ.

೫.೧.೨. ಹಿರಿಯರಹಬ್ಬ-ದೇವರೂಟ : ಮ್ಯಾಸಬೇಡರ ಗಂಡು ಮಕ್ಕಳ ಮದುವೆಗಳಲ್ಲಿ ಹಿರಿಯರ ಹಬ್ಬ ಮಾಡಿ ಕುಲಸ್ಥರಿಗೆ ಊಟ ಹಾಕುವ ಪದ್ಧತಿಗೆ ದೇವರೂಟ ಎಂದು ಕರೆಯುತ್ತಾರೆ. ಮೊದಲು ದೇವರ ಮನೆಗೆ ಹೋಗಿ ದೇವರಿಗೆ ಹಣ್ಣುಕಾಯಿ ಕೊಟ್ಟು, ತಲೆಗೆ ಹಾಲು ಹಾಕಿಸಿಕೊಂಡು ಬಂದ ನಂತರ ಆ ದಿನವೇ ಸಂಜೆ ಒಂದು ಹೊಸ ಮಣ್ಣಿನ ಕುಂಭ ಮತ್ತು ಒಂದು ಚೊಂಬಿನಲ್ಲಿ ನೀರು ತುಂಬಿಟ್ಟು ಅರಿಶಿಣ ಕುಂಕುಮದ ಅಂಗುನೂಲನ್ನು ಎರಡಕ್ಕೂ ಕಟ್ಟುತ್ತಾರೆ. ಎರಡು ಕುಂಭದ ಮೇಲೆ ತೆಂಗಿನಕಾಯಿಯನ್ನು ಇಟ್ಟು ವಧು-ವರರಿಗೆ ತಂದಿದ್ದ ಹೊಸ

ಬಟ್ಟೆಗಳನ್ನು ಏರಿಸಿ ಕಳಸ ಹೂಡಿ, ಕಳಸದ ಚೊಂಬಿಗೆ ತಾಳಿಯನ್ನು ಕಟ್ಟಿರುತ್ತಾರೆ. ಸಿಹಿ ಅಡುಗೆಯನ್ನು ಹಿರೇರಿಗೆ ಎಡೆ ಹಾಕಿ ದಾಸಯ್ಯ ಮತ್ತು ಪೂಜಾರಿ ಗಳನ್ನು ಕರೆಸಿ ಗೋವಿಂದಾ, ಗೋವಿಂದಾ.... ಎನ್ನಿಸಿದ ಮೇಲೆ ದಾಸಯ್ಯ ಮತ್ತು ಪೂಜಾರಿಗಳಿಗೆ ಮೊದಲು ಊಟಕ್ಕೆ ಬಡಿಸಿ ನಂತರ ಕುಲಸ್ಥರಿಗೆ ಊಟಕ್ಕೆ ಹಾಕುತ್ತಾರೆ.

ಈ ಹಿರಿಯರ ಹಬ್ಬವನ್ನು ಗಂಡಿನ ಮನೆಯಲ್ಲಿ ಮಾತ್ರ ಮಾಡುತ್ತಾರೆ. ಹೆಣ್ಣಿನ ಮನೆಯಲ್ಲಿ ಹಿರಿಯರ ಹಬ್ಬ ಮಾಡುವುದಿಲ್ಲ. ಆದರೂ ದೇವರ ಪೂಜೆ ಮತ್ತುಊಟದ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಗಂಡಿನ ಕಡೆಯವರು ಸೂರ್ಯ ಮುಳುಗುವುದರೊಳಗಾಗಿ ಎತ್ತಿನ ಗಾಡಿ ಇಲ್ಲವೇ ಕಾಲ್ನಡಿಗೆಯಲ್ಲಿ ಹೆಣ್ಣಿನ ಮನೆಗೆ "ಮದುವೆ ದಿಬ್ಬಣ" ಹೋಗುತ್ತದೆ. ಅದೇ ದಿನ ರಾತ್ರಿ ಮೊದಲು ಹುತ್ತದ ಪೂಜೆ ನಂತರ ಊಟದ ವ್ಯವಸ್ಥೆ, ಹಸೆಹಚ್ಚುವುದು, ಅರಿಶಿಷಿಣ ಹಚ್ಚುವುದು ಮೊದಲಾದ ಕಾರ್ಯಗಳನ್ನು ಇಡೀ ರಾತ್ರಿಯೆಲ್ಲಾ ಹೆಣ್ಣಿನ ಮನೆಯಲ್ಲಿ ಮಾಡುತ್ತಾರೆ.

೫.೧.೩. **ಮದ್ಲಿಂಗನ ಶಾಸ್ತ್ರ :** ಮದುವೆಯ ಗಂಡನ್ನು ದೇವಸ್ಥಾನ, ಎತ್ತೈದೆಗಳ ಹಟ್ಟಿ ಅಥವಾ ಕುರಿ ಹಟ್ಟಿಯಲ್ಲಿ ಮದ್ಲಿಂಗನನ್ನು ಮಾಡುತ್ತಾರೆ. ಅಲ್ಲಿ ಕರಿಕಂಬಳಿ ಗದ್ದಿಗೆ ಹಾಸಿ, ಅರಿಷಿಣ ಎಣ್ಣೆ ಹಚ್ಚಿ ಕೈಗೆ ಕಂಕಣ ಕಟ್ಟಿ, ಕಳಸಕ್ಕೂ ಒಂದು ಕಂಕಣವನ್ನು ಕಟ್ಟುತ್ತಾರೆ. ವರನಿಗೆ ಹಸೆ ಇಡುತ್ತಾರೆ. ತಂದೆ ತಾಯಿ ಅತ್ತೆ ಮಾವರು ಜೀವಂತವಿರುವ ಮುತ್ತೈದೆ ಯರನ್ನು, ದಾಸಯ್ಯ ಮತ್ತು ಪೂಜಾರಿಗಳನ್ನು ಕರೆಸಿ, ತಲೆಗೆ ಹಾಲು ಒತ್ತಿಸುತ್ತಾರೆ. ದೇವರ ಪೂಜಾರಿ ಮೊದಲು ನಂತರ ಉಳಿದವರು ಎರಡು ಕೈಗಳನ್ನು ಹಾಲಿನಲ್ಲಿ ಅದ್ದಿ, ಮದ್ಲಿಂಗನ ತಲೆಗೆ ಒತ್ತುತ್ತಾರೆ. ಸಾಮಾನ್ಯವಾಗಿ ಐದು ಜನರು ತಲೆಗೆ ಹಾಲು ಹಾಕುತ್ತಾರೆ. ತಲೆಗೆ ಹಾಲು ಒತ್ತುವಾಗ ಮೂರು ಸುತ್ತು ಒತ್ತುತ್ತಾರೆ. ಒಬ್ಬರು ಕೈ ತೆಗೆಯುವುದರಲ್ಲಿ ಇನ್ನೊಬ್ಬರು ಹಾಲು ಒತ್ತಲು ಸಿದ್ಧರಿರುತ್ತಾರೆ.ತೆರೆಪಿಲ್ಲದೆ ಈ ಕಾರ್ಯ ನಡೆಯಬೇಕು. ಕೆಲವು ಕಡೆಗಳಲ್ಲಿ ಮನೆಯಲ್ಲಿಯೇ ಮುತ್ತೈದೆಯರು ವರನಿಗೆ ಮೈತುಂಬ ಅರಿಷಿಣ ಹಚ್ಚಿ, ಕಂಕಣ ಕಟ್ಟಿ, ಆರತಿ ಬೆಳಗಿ, ಮದ್ಲಿಂಗನನ್ನು ಮಾಡುತ್ತಾರೆ. ಮನೆಯಲ್ಲಿಯೇ ಮದ್ಲಿಂಗನನ್ನು ಮಾಡುವ ಸಂದರ್ಭ ಒದಗಿದಲ್ಲಿ ದೇವರ ಮನೆಯಿಂದ ತಂದ ತೀರ್ಥವನ್ನು ಹಾಕಿ ಮದ್ಲಿಂಗನನ್ನು ಮಾಡುತ್ತಾರೆ.

ಮದ್ಲಿಂಗನ ವೇಷ ಚಡ್ಡಿ ಚಲ್ಲಣ, ತಲೆಗೆ ಪೇಟ, ಹೆಗಲಮೇಲೊಂದು ಕರಿಕಂಬಳಿ, ಕೊರಳಲ್ಲಿ 'ಕಾಯಿ ಸರಪಳಿ' ಕೈಯಲ್ಲಿ ಒಂದು 'ಬಾಕು' ಹಿಡಿದಿರಬೇಕು. ಈ ಬಾಕುಗೆ ಕೆಂಪು ವಸ್ತ್ರ ಸುತ್ತಿ ಅದರ ತುದಿಗೆ ನಿಂಬೆಹಣ್ಣನ್ನು ಸಿಕ್ಕಿಸಿರುತ್ತಾರೆ. ಕಿವಿಯಲ್ಲಿ ಹತ್ಕಡಕ, ಬೆರಳಿಗೆ ಉಂಗುರ, ಕೈಯಲ್ಲಿ ಬದ್ದು, ಸೊಂಟಕ್ಕೆ ಕಾಶಿದಟ್ಟಿ, ಹಣೆಗೆ ವಿಭೂತಿ ಕುಂಕುಮವಿಟ್ಟುಕೊಂಡು,ಪೇಟದಲ್ಲಿ ಹೊಂಬಾಳೆ, ಕೊರಳಲ್ಲಿ ಒಂದು ಹೂವಿನ ಹಾರ ಹಾಕಿದರೆ ಮದ್ಲಿಂಗನ ಸಿದ್ಧತೆ ಮುಗಿದಂತೆ. ಇತ್ತ ಹೆಣ್ಣಿಗೆ ಬೆಂಡೋಲೆ, ಬುಗಡಿಕಡ್ಡಿ, ಬೆಳ್ಳಿಕಡಗ, ಪಟ್ಟಿ, ಬೇಸರಿ, ಅಂಚು ಮುಸುಗು ಇರುವ ಒಂದು ಬಿಳಿಸೀರೆ ಉಡಿಸುತ್ತಾರೆ. ಆದರೆ ಕುಪ್ಪಸ ಇಡುವಂತಿಲ್ಲ. ಅದೇ ಸೀರೆಯ ಸೆರಗನ್ನು ಹೆಗಲು ಎದೆ ಮುಚ್ಚುವಂತೆ ಮರೆ ಮಾಡಿಕೊಂಡಿರುತ್ತಾರೆ. ಇವತ್ತಿಗೂ ಮ್ಯಾಸಬೇಡರ ಹಟ್ಟಿಗಳಲ್ಲಿ ಸಂಪ್ರದಾಯಸ್ಥ ಹೆಣ್ಣು ಕುಪ್ಪಸ ತೊಡುವುದಿಲ್ಲ. ಮೊಳಕಾಲ್ಮೂರು ತಾಲ್ಲೂಕು ಕಂಪಳದೇವರ ಹಟ್ಟಿ ಮತ್ತು ಕೋನಸಾಗರ, ಚಳ್ಳಕೆರೆ ತಾಲ್ಲೂಕು ನನ್ನಿವಾಳ ಸುತ್ತಮುತ್ತ, ಹೊಳಲ್ಕೆರೆ ತಾಲ್ಲೂಕು ದೇವರಗಂಜಿಗಟ್ಟೆ ಮತ್ತು ಚಿತ್ರದುರ್ಗ ತಾಲ್ಲೂಕು ತುರುವನೂರು ಗ್ರಾಮಗಳ ವಯಸ್ಸಾದ ಸ್ತ್ರೀಯರು ಕುಪ್ಪಸ ತೊಡದೇ ಇರುವುದನ್ನು ಇಂದಿಗೂ ಕಾಣಬಹುದು.

೫.೧.೪. **ಧಾರೆ ಮುಹೂರ್ತ :** ಮ್ಯಾಸಬೇಡರಲ್ಲಿ ಹೆಣ್ಣಿನ ಮನೆಯ ಮುಂದೆ ಅಥವಾ ಹಟ್ಟಿಯ ದೇವಸ್ಥಾನದ ಮುಂಭಾಗ ಧಾರೆ ಮುಹೂರ್ತ ಇಟ್ಟುಕೊಳ್ಳುತ್ತಾರೆ. ಮುಹೂರ್ತಕ್ಕೆ ಯಾವುದೇ ಪಂಚಾಂಗವನ್ನು ಇವರು ನೋಡುವುದಿಲ್ಲ. ಬ್ರಾಹ್ಮಣ ಪುರೋಹಿತರನ್ನಾಗಲೀ ಅಥವಾ ಜಂಗಮರನ್ನಾಗಲೀ ಕರೆಸುವುದಿಲ್ಲ. ಸಾಮಾನ್ಯವಾಗಿ ಸೂರ್ಯೋದಯದ ನಂತರ ಅಥವಾ ಮಧ್ಯಾಹ್ನದ ಒಳಗೆ ಮುಹೂರ್ತವನ್ನು ಮಾಡಿಮುಗಿಸುತ್ತಾರೆ. ಮಂಜಾನೆ ವಧು ವರರಿಗೆ ಜಳಕ ಮಾಡಿಸಿ, ಹೊಸಬಟ್ಟೆ ತೊಡಿಸಿ, ವರನನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ದೇವರಿಗೆ ಪೂಜೆ ಮಾಡಿಸಿಕೊಂಡು, ಕಳಸ ಕನ್ನಡಿಯೊಂದಿಗೆ ಧಾರೆ ಮುಹೂರ್ತಕ್ಕೆ ಸರಿಯಾಗಿ ಹೆಣ್ಣಿನ ಮನೆ ಅಥವಾ ದೇವರ ಗುಬ್ಬದ ಹತ್ತಿರ ಬರುತ್ತಾರೆ. ದೇವಸ್ಥಾನದ ಮುಂಭಾಗ ಅಥವಾ ಹೆಣ್ಣಿನ ಮನೆಯ ಮುಂದೆ ಕರಿಕಂಬಳಿ ಹಾಸಿ, ಅದರ ಮೇಲೆ ಹೆಣ್ಣು ಗಂಡುಗಳನ್ನು ನಿಲ್ಲಿಸುತ್ತಾರೆ. ಧಾರೆ ಮುಹೂರ್ತಕ್ಕೆ ಸೋದರಮಾವನೇ ಹೆಣ್ಣನ್ನು ಕರೆದು ತರುತ್ತಾನೆ. ಹಟ್ಟಿಯ ಯಜಮಾನ ಗುಡಿಕಟ್ಟೆ ಮತ್ತು ಕಟ್ಟೆ ಮನೆಗಳ ಯಜಮಾನರು ಮುಹೂರ್ತಕ್ಕೆ ಬಂದಿರುತ್ತಾರೆ. ಹಿರಿಯರ ಹಬ್ಬ ಮಾಡುವಾಗ ಕಳಸಕ್ಕೆ ಕಟ್ಟಿದ ಮಾಂಗಲ್ಯವನ್ನು ಗುರು ಹಿರಿಯರಿಗೆ ಮುಟ್ಟಿಸಿ, ಸೂರ್ಯ, ಚಂದ್ರ, ಮನೆದೇವರು, ಗುರು ಹಿರಿಯರ ಹೆಸರನ್ನು ವಧು ವರರ ಹತ್ತಿರ ಹೇಳಿಸಿ, ಪೂಜಾರಿ ಅಥವಾ ದಾಸಯ್ಯ ತಾಳಿ ಕಟ್ಟಿಸುತ್ತಾನೆ. ನಂತರ ವಧು ವರರ ಕೈಗೆ ಎರಡು ಎಲೆ ಸುರುಳಿಯನ್ನು ಕೊಟ್ಟು, ಕೆಳಗಡೆ ಕಂಚಿನ ಗಂಗಾಳವನ್ನಿಟ್ಟು ಮೊದಲು ತಾಯಿ, ತಂದೆ, ಸೋದರಮಾವ ಮತ್ತು ಬಂಧು ಬಳಗದವರಿಂದ ಕೈಮೇಲೆ ಹಾಲು ಹಾಕಿಸಿ ನಂತರ ಸೂರ್ಯನಮಸ್ಕಾರ ಮಾಡಿಸುತ್ತಾರೆ.

ಬಹು ಹಿಂದೆ ತಾಳಿಗೆ ಬದಲಾಗಿ ಅರಿಶಿಣ ಕೊಂಬನ್ನೇ ತಾಳಿಯಾಗಿ ಕಟ್ಟಿಕೊಳ್ಳುತ್ತಿದ್ದರಂತೆ. ಮುಹೂರ್ತದಲ್ಲಿ ಬಿದಿರಕ್ಕಿಯನ್ನು ಬೀರುತ್ತಿದ್ದರಂತೆ. ವರನು ಮುಹೂರ್ತಕ್ಕೆ ಬರಲಾಗದ ಸಂದರ್ಭದಲ್ಲಿ ಆತನ ಆಯುಧಗಳಾದ "ಬಾಕು" ಅಥವಾ "ಕೋಲು"ಗಳಿಗೆ ವಧುವಿನ ಕೈಯಿಂದ ಕಂಕಣ ಕಟ್ಟಿಸಿ ಮುಹೂರ್ತ ಮಾಡುತ್ತಿದ್ದರಂತೆ. ನಂತರ ಬಿದಿರಕ್ಕಿ ಅನ್ನ, ಕಾಡೆಮ್ಮೆ ಹಾಲು, ಅಕ್ಕಿಹುಗ್ಗಿ, ಮೊಸರು, ಮಜ್ಜಿಗೆಯನ್ನು ವಿಶೇಷವಾಗಿ ಬಳಸುತ್ತಿದ್ದರಂತೆ. ಆದರೆ ಪ್ರಸ್ತುತ ದಾಸಯ್ಯ ಅಥವಾ ಪೂಜಾರಿಗಳಿಂದ ಮುಹೂರ್ತ ಮಾಡಿಸಿ, ಅಕ್ಕಿಕಾಳಿನ ಅಕ್ಷತೆ ಹಾಕಿಸಿ ತಾಳಿ ಕಟ್ಟಿಸುತ್ತಾರೆ. ಅನ್ನ, ಸಾರು, ಪಾಯಸ, ಅಕ್ಕಿಹುಗ್ಗಿ ಇತ್ಯಾದಿ ಸಿಹಿ ಊಟದ ವ್ಯವಸ್ಥೆ ಮಾಡುತ್ತಾರೆ. ಮುಹೂರ್ತ ಮುಗಿದ ದಿನವೇ ಹೆಣ್ಣನ್ನು ಕರೆದುಕೊಂಡು ಗಂಡಿನ ಮನೆಗೆ ದಿಬ್ಬಣ ಹೊರಡುತ್ತಾರೆ.

೫.೧.೫. **ಮನೆದುಂಬಿಕೆ ಶಾಸ್ತ್ರ :** ಧಾರೆ ಮುಹೂರ್ತ ಮುಗಿದ ನಂತರ ಹೆಣ್ಣನ್ನು ಕರೆದುಕೊಂಡು ಗಂಡನ ಮನೆಗೆ ಹೋಗುತ್ತಾರೆ. ಮನೆಯ ಬಾಗಿಲ ಹತ್ತಿರ ಹೋದಾಗ ಬಾರಿಕೋಲು, ಕೂರಿಗೆ ಬಟ್ಟಲು, ಬೇಸಾಯದ ಮುಟ್ಟುಗಳನ್ನು ಗಂಡಿನ ಹೆಗಲ ಮೇಲೆ ಇಟ್ಟು, ವಧುವಿನ ಕೈಗೆ ಕಡಗೋಲು, ಬುತ್ತಿಯ ಗಂಟು ಮತ್ತು ಬಿತ್ತನೆಯ ಬೀಜಗಳನ್ನು ಕೊಟ್ಟಿರುತ್ತಾರೆ. ಸಾಂಕೇತಿಕವಾಗಿ ಭೂಮಿಯನ್ನು ಉಳುವುದು, ಬೀಜ ಬಿತ್ತುವುದು, ಅಡವಿಯಲ್ಲಿ ಊಟಮಾಡುವುದು ಮೊದಲಾದ ಶಾಸ್ತ್ರವನ್ನು ಮಾಡಿಸುತ್ತಾರೆ. ಬಹುಶಃ ಈ ಶಾಸ್ತ್ರ ವ್ಯವಸಾಯ ಪದ್ಧತಿಯ ಕುಲಕಸುಬನ್ನೇ ನೆನಪಿಗೆ ತರುತ್ತದೆ. ಮೂಲತಃ ಮ್ಯಾಸಬೇಡರ ವೃತ್ತಿ ವ್ಯವಸಾಯ ಮತ್ತು ಕಾಡಾಡಿ ಬದುಕಿನ ಸಂಸ್ಕೃತಿಯನ್ನು ಈ ಶಾಸ್ತ್ರ ವೈಭವೀ ಕರಿಸುತ್ತದೆ. ವಧು-ವರರು ಮನೆಯ ಹತ್ತಿರ ಬಂದು ಒಳಗೆ ಹೋಗುವಾಗ

ವರನ ತಂಗಿ ಕಾಲ್ತೊಳೆದು ಹೆಣ್ಣು ಕೇಳುವ ಶಾಸ್ತ್ರ ಮಾಡಿಸುತ್ತಾರೆ. ನಂತರ ತಲೆಬಾಗಿಲಿಗೆ ಮೊಳೆ ಬಡಿದು ಹೆಣ್ಣನ್ನು ಒಳಗೆ ಕರೆದುಕೊಳ್ಳುತ್ತಾರೆ.

೫.೧.೬. ಗಂಗೆಪೂಜೆ : ಮನೆದುಂಬಿಕೆ ಶಾಸ್ತ್ರ ಮುಗಿದ ನಂತರ ಮರುದಿನ, ಮುಂಜಾನೆ ಹಟ್ಟಿ ಹತ್ತಿರವಿರುವ ಕೆರೆ, ಬಾವಿ, ತೊರೆ, ಅಥವಾ ನದಿಗೆ ವಧುವನ್ನು ಕರೆದುಕೊಂಡು ಹೋಗಿ ಗಂಗೆಪೂಜೆಯನ್ನು ಮಾಡಿಸಿಕೊಂಡು ಬರುತ್ತಾರೆ. ಪೂಜೆಯ ನಂತರ ಐದು ಜನ ಮುತ್ತೈದೆಯರೊಂದಿಗೆ ವಧು ನೀರು ತುಂಬಿದ ಗಡಿಗೆಯನ್ನು ತಲೆಯ ಮೇಲಿಟ್ಟುಕೊಂಡು ಮನೆಗೆ ಬರುತ್ತಾಳೆ. ಆಗ ವರನು ಮನೆಯ ಬಾಗಿಲ ಹತ್ತಿರ ನಿಂತು, ಮುತ್ತೈದೆಯರು ಹೊತ್ತು ನಿಂತ ಗಡಿಗೆಗಳಿಗೆ ಪೂಜೆ ಮಾಡಿ, ನೀರು ತಂದ ಹೆಂಡತಿಯನ್ನು ಯಾರ್‍ಯಾರು ಬಂದಿರಿ ಎಂದು ಕೇಳುತ್ತಾನೆ. ಆಗ ಹೆಂಡತಿ ನಾನು ಮತ್ತು ಗಂಗಮ್ಮ ಇಬ್ಬರೂ ಕೂಡಿ ಬಂದೆವು ಎಂದು ಹೇಳುತ್ತಾಳೆ. ನಂತರ ವರ ತುಂಬಿದ ಕೊಡವನ್ನು ಇಳಿಸಿಕೊಂಡು ವಧುವನ್ನು ಒಳಗೆ ಕರೆದು ಕೊಂಡು ಹೋಗುತ್ತಾನೆ. ಮಾರನೆಯ ದಿನ ಹೆಣ್ಣಿನೊಡನೆ ಬಂದಿದ್ದ ನೆಂಟರಿಷ್ಟರು ಹೆಣ್ಣನ್ನು ಕರೆದುಕೊಂಡು ತಮ್ಮ ಹಟ್ಟಿಗೆ ವಾಪಾಸಾಗುತ್ತಾರೆ. ಮದುವೆಯಾದ ಐದು ಅಥವಾ ಹದಿನಾರನೆ ದಿನದಲ್ಲಿ ಅಥವಾ ಅನುಕೂಲವಾದ ದಿನದಲ್ಲಿ ಗಂಡಿನ ಕಡೆಯವರನ್ನು ಬರಮಾಡಿಕೊಂಡು ಪ್ರಸ್ತದ ಕಾರ್ಯವನ್ನು ನೆರವೇರಿಸುತ್ತಾರೆ.

೫.೨. ಕಾಡುಗೊಲ್ಲರ ವಿವಾಹ ಪದ್ಧತಿ

ಬುಡಕಟ್ಟು ಜನಾಂಗವಾದ ಕಾಡುಗೊಲ್ಲರ ವಿವಾಹ ಪದ್ಧತಿ ಅತ್ಯಂತ ಸರಳವಾಗಿ ಕನಿಷ್ಟ ಐದು ದಿನಗಳ ಕಾಲ ತಮ್ಮ ಹಟ್ಟಿಯಲ್ಲೇ ನಡೆಸುತ್ತಾರೆ. ಇತರ ಬುಡಕಟ್ಟು ಜನಾಂಗದವರಾದ ಮ್ಯಾಸಬೇಡ, ಕುರುಬ, ಕುಂಚಿಟಿಗ, ಲಿಂಗಾಯತ ಮೊದಲಾದ ಜಾತಿ-ಜನಾಂಗದವರ ವಿವಾಹ ಪದ್ಧತಿಗಳ ಪ್ರಭಾವ ಕಾಡುಗೊಲ್ಲರಲ್ಲಿ ಕಂಡು ಬರುತ್ತವೆ. ಬಹು ಪತ್ನಿತ್ವ ವಿವಾಹ ಪದ್ಧತಿ ಆಚರಣೆಯಲ್ಲಿದ್ದರೂ ಏಕಪತ್ನಿತ್ವಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ. ವಿಧವಾ ವಿವಾಹ, ಬಾಲ್ಯವಿವಾಹ ಮತ್ತು ಕೂಡಿಕೆವಿವಾಹ ಪದ್ಧತಿಗಳು ಕಾಡುಗೊಲ್ಲರಲ್ಲಿ ಕಂಡು ಬರುವುದಿಲ್ಲ.

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲಿಯೂ ಕೂಡ ರಜಸ್ವಲೆಯಾದ ಹಾಗೂ ಹೆಣ್ಣಿಗೆ ಹದಿನಾರು ವರ್ಷಗಳು ತುಂಬಿದ ಬಳಿಕವೇ ವಿವಾಹ ಮಾಡಿಕೊಡಬೇಕೆಂಬ ನಿಯಮವಿತ್ತು. ಕಾಮಸೂತ್ರದ ಕರ್ತೃವಾದ ಮಹರ್ಷಿ ವಾತ್ಸಾಯನರೂ ಕೂಡ ಬಾಲ್ಯ ವಿವಾಹ ಪದ್ಧತಿಗಿಂತ ಪ್ರೌಢವಿವಾಹ ಪದ್ಧತಿಯೇ ಉತ್ತಮವೆಂದು ಸಮರ್ಥಿಸಿದ್ದಾರೆ. ಋಗ್ವೇದ, ಯಜುರ್ವೇದಗಳ ಕಾಲದಲ್ಲಿಯೂ ತಾರಾಣ್ಯಾವಸ್ಥೆಯನ್ನು ತಲುಪಿದ ಬಳಿಕವೇ ವಿವಾಹ ಮಾಡುವ ಸಂಪ್ರದಾಯವಿತ್ತು. ಅದರಂತೆ ಕಾಡುಗೊಲ್ಲರಲ್ಲಿಯೂ ಕೂಡ ಬಾಲ್ಯ ವಿವಾಹ ಪದ್ಧತಿ ಅಷ್ಟಾಗಿ ಕಂಡು ಬರುವುದಿಲ್ಲ. ಬಹುಹಿಂದೆ ಅಪಹರಣ ವಿವಾಹ ಪದ್ಧತಿಗಳು ಈ ಬುಡಕಟ್ಟುಗಳಲ್ಲಿ ಅಸ್ತಿತ್ವದಲ್ಲಿದ್ದವಂತೆ. ಆದರೆ ಪ್ರಸ್ತುತ ಇಂತಹ ವಿವಾಹ ಪದ್ಧತಿಗಳು ಎಲ್ಲಿಯೂ ಕಂಡುಬರುತ್ತಿಲ್ಲ. ಹೆಣ್ಣಿಗೆ ಕನಿಷ್ಟ ಹದಿನಾರು, ಗಂಡಿಗೆ ಕನಿಷ್ಟ ಇಪ್ಪತ್ತು ವರ್ಷ ತುಂಬಿರಬೇಕು. ಇಲ್ಲವೇ ಹೆಣ್ಣು ಋತುಮತಿಯಾದ ಬಳಿಕವೇ ವಿವಾಹದ ಪ್ರಸ್ತಾಪ, ಹುಡುಕಾಟ ಪ್ರಾರಂಭಿಸುತ್ತಾರೆ.

ಧಾರ್ಮಿಕ ಕೆಲಸ ಕಾಯಗಳಲ್ಲಿ, ಹೆಣ್ಣು ನೋಡಲಿಕ್ಕೆ ಹೋಗುವಾಗ ಹೆಣ್ಣಿನ ಮನೆಯಿಂದ ಓಂದಿರುಗಿ

ಬರುವಾಗ ಅನೇಕ ಶಕುನಗಳನ್ನು ಕಾಡುಗೊಲ್ಲರು ನೋಡುತ್ತಾರೆ. ಶುಭ ಕಾರ್ಯಕ್ಕೆ ಹೊರಟಾಗ ಸೌದೆಹೊರೆ, ವಿಧವೆ, ಒಂಟಿ ಬ್ರಾಹ್ಮಣ, ಹಜಾಮ, ಮುಟ್ಟಾದ ಹೆಂಗಸು, ಬರೀ ಮಡಿಕೆಗಳು, ಬೆಕ್ಕು ಅಡ್ಡಬಂದರೆ, ಕಾಗೆ ಕೂಗಿದರೆ, ಹಾವು ಅಡ್ಡ ಬಂದರೆ ತಮ್ಮ ಪ್ರಯಾಣವನ್ನೇ ನಿಲ್ಲಿಸುತ್ತಾರೆ. ಆದರೆ ಮದುವೆ ದಿನವನ್ನು ನಿಗದಿ ಪಡಿಸುವಾಗ ವಾರ, ತಿಥಿ, ನಕ್ಷತ್ರ ಮತ್ತು ಪಂಚಾಂಗವನ್ನು ನೋಡುವುದಿಲ್ಲ. ಹೆಣ್ಣಿನ ತಂದೆ ತಾಯಿ, ಬಂಧು ಬಳಗ ಅವರ ಕೌಟುಂಬಿಕ ಹಿನ್ನಲೆ, ಕುಲ, ದೇವರು, ಗುಡಿಕಟ್ಟೆ, ಕಟ್ಟೆಮನೆ ಮತ್ತು ಹೆಣ್ಣಿನ ಗುಣಲಕ್ಷಣಗಳನ್ನು ನೋಡಿದ ಬಳಿಕವೇ ಹೆಣ್ಣನ್ನು ನಿಶ್ಚಿತಾರ್ಥ ಮಾಡಿಕೊಳ್ಳುತ್ತಾರೆ.

೫.೨.೧. ನಿಶ್ಚಿತಾರ್ಥ-ವೀಳ್ಯೆಶಾಸ್ತ್ರ : ಕಾಡುಗೊಲ್ಲರ ವಿವಾಹ ಪದ್ಧತಿ ನಿಶ್ಚಿತಾರ್ಥ ಅಥವಾ ವೀಳ್ಯೆಶಾಸ್ತ್ರದ ಮೂಲಕ ಪ್ರಾರಂಭವಾಗುತ್ತದೆ. ಪ್ರಾರಂಭದಲ್ಲಿ ಹೆಣ್ಣನ್ನು ನೋಡಲು ಐದು ಅಥವಾ ಒಂಬತ್ತು ಜನ ಹೆಣ್ಣಿನ ಮನೆಗೆ ಹೋಗಿಬರುತ್ತಾರೆ. ಎಲ್ಲಾ ಶಕುನಗಳು ಸರಿಯಾಗಿ ಕಂಡುಬಂದರೆ, ಹೆಣ್ಣನ್ನು ಹತ್ತಾರು ಸಲ ವಿಧ-ವಿಧವಾಗಿ ಪರೀಕ್ಷಿಸಿ, ಅವರಿಗೆ ಶುಭಲಕ್ಷಣಗಳು ಕಂಡುಬಂದರೆ, ತಮ್ಮ ಮನೆ ದೇವರನ್ನು ಪ್ರಸಾದ ಕೇಳಿದ ಬಳಿಕವೇ ತಮ್ಮ ಒಪ್ಪಿಗೆಯನ್ನು ಹೆಣ್ಣಿನ ಮನೆಗೆ ತಿಳಿಸುತ್ತಾರೆ. ಹೆಣ್ಣಿನ ಕಡೆಯವರು ಗಂಡಿನ ಕುಲ-ಗೋತ್ರಗಳ ಬಗ್ಗೆ ಚರ್ಚಿಸಿ, ಅವರಿಗು ಕೂಡ ಎಲ್ಲಾ ಶಕುನಗಳು ಸರಿಯಾಗಿ ಕಂಡುಬಂದರೆ ತಮ್ಮ ಒಪ್ಪಿಗೆಯನ್ನು ಗಂಡಿನ ಕಡೆಯವರಿಗೆ ತಿಳಿಸುತ್ತಾರೆ. ಎರಡೂ ಕಡೆಯವರು ಸಂಬಂಧ ಬೆಳೆಸಲು ಖಚಿತ ನಿರ್ಧಾರ ತೆಗೆದುಕೊಂಡ ನಂತರ ಒಂದು ಶುಭದಿನದಂದು ನಿಶ್ಚಿತಾರ್ಥ ಕಾರ್ಯ ಹೆಣ್ಣಿನ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ.

ಗಂಡಿನ ಮನೆಯವರು ನಿಶ್ಚಿತಾರ್ಥಕ್ಕೆ ಬಂಧು ಬಳಗದವರೊಂದಿಗೆ ಹೋಗುವಾಗ ನಾಲ್ಕು ಗಿದ್ನ ಅಕ್ಕಿ, ಒಂದು ಸೇರು ತುಪ್ಪ, ಎರಡು ಕಟ್ಟು ಎಲೆ, ಅಚ್ಚೇರು ಅಡಿಕೆ, ಹಸಿಟ್ಟು, ಎರಡು ತೆಂಗಿನಕಾಯಿ, ಒಂದು ಸೀರೆ ಕುಪ್ಪಸ, ಹೂವುಹಣ್ಣು ಮೊದಲಾದ ಸಾಮಾನುಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಅಂದು ಸಂಜೆ ಹಟ್ಟಿಯ ಕುಲಸ್ಥರನ್ನು ಕರೆದು ಕರಿಕಂಬಳಿ ಗದ್ದುಗೆ ಹಾಸಿ, ತಾವು ತೆಗೆದುಕೊಂಡು ಹೋಗಿದ್ದ ಎಲ್ಲಾ ಸಾಮಾನುಗಳನ್ನು ಗದ್ದುಗೆಯ ಮೇಲಿಟ್ಟು "ಜಾಡಿ ಪೂಜೆ" ಮಾಡುತ್ತಾರೆ. ನಿಶ್ಚಿತಾರ್ಥ ಮಾಡುವ ಹೆಣ್ಣನ್ನು ಒಳಗಿನಿಂದ ಕರೆದುಕೊಂಡು ಬಂದು ಕರಿಕಂಬಳಿ ಗದ್ದುಗೆಗೆ ಕೈಮುಗಿಸಿ, ಗಂಡಿನ ಕಡೆಯವರು ತಂದಿದ್ದ ಸೀರೆ ಕುಪ್ಪಸ, ಹಣ್ಣು ಕಾಯಿ, ಕೊಬರಿ, ಉತ್ತತ್ತಿ, ಕಡ್ಲೆ ಮೊದಲಾದ ಸಾಮಾನುಗಳನ್ನು ಹೆಣ್ಣಿಗೆ ಮಡ್ಲು ಅಥವಾ ಉಡಿ ತುಂಬುತ್ತಾರೆ. ಐದು ಜನ ಮುತ್ತೈದೆಯರು ಹುಡುಗಿಯ ಸೆರಗಿಡಿದು ಉಡಿಯನ್ನು ತುಂಬಿಸಿಕೊಳ್ಳುತ್ತಾರೆ. ನಂತರ ಹೆಣ್ಣಿನ ಕಡೆಯ ಒಬ್ಬ ಯಜಮಾನ ಮತ್ತು ಗಂಡಿನ ಕಡೆಯ ಒಬ್ಬ ಯಜಮಾನ ತಲೆಗೆ ರುಮಾಲು ಸುತ್ತಿಕೊಂಡು ಕರಿಕಂಬಳಿ ಗದ್ದುಗೆಯ ಮುಂದೆ ಎದುರು ಬದುರು ಕುಳಿತುಕೊಂಡು, ಅಡಿಕೆ ಎಲೆ ಇಟ್ಟ ತಟ್ಟೆಗಳನ್ನು ಬದಲಾಯಿಸಿಕೊಳ್ಳುತ್ತಾ ಒಬ್ಬ 'ನಮ್ಮ ಹೆಣ್ಣನ್ನು ನಿಮಗೆ ಕೊಟ್ಟೆ' ಎಂತಲೂ; ಇನ್ನೊಬ್ಬ 'ನಿಮ್ಮ ಹೆಣ್ಣನ್ನು ನಾವು ಕೊಂಡ್ವಿ' ಎಂತಲೂ ನಿಶ್ಚಿತಾರ್ಥ ಕಾರ್ಯಮಾಡುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ 'ಕುಲ'ದ ಹೆಸರನ್ನು ಹೇಳಿ 'ಹೆಣ್ಣು ಕೊಟ್ವಿ' ಮತ್ತು 'ಹೆಣ್ಣು ಕೊಂಡ್ವಿ' ಎಂದು ಹೇಳಿ ನಿಶ್ಚಿತಾರ್ಥ ಕಾರ್ಯಮುಗಿಸುತ್ತಾರೆ.

ನಿಶ್ಚಿತಾರ್ಥ ಕಾರ್ಯ ಮಾಡುವುದರೊಂದಿಗೆ ಹೆಣ್ಣನ್ನು ಖಾಯಂ ಮಾಡಿಕೊಳ್ಳುತ್ತಾರೆ. ವೀಳ್ಯೆಶಾಸ್ತ್ರ ಮುಗಿದ

ನಂತರೆ ಯಾವುದೇ ಕಾರಣಕ್ಕೂ ಹೆಣ್ಣು ಮತ್ತು ಗಂಡಿನ ಕಡೆಯವರು ಮಾತು ಬದಲಾಯಿಸುವಂತಿಲ್ಲ, ಮದುವೆ ಕಾರ್ಯ ನಿಲ್ಲಿಸುವಂತಿಲ್ಲ. ಅಂದೇ ಕೆಲವರು ಮದುವೆ ದಿನಾಂಕವನ್ನು ಕೂಡ ನಿಗದಿಪಡಿಸುತ್ತಾರೆ. "ಅಕ್ಕಿ ಇದ್ದಾಗಲೇ ಗೊಲ್ಲರ ಮದುವೆ" ಎಂಬ ಗಾದೆಮಾತಿನಂತೆ ಆಷಾಡ ಮಾಸದಲ್ಲಿಯೂ ಕೂಡ ಕಾಡುಗೊಲ್ಲರು ಮದುವೆ ಮಾಡುತ್ತಾರೆ. ತೆರ ಕೊಟ್ಟು ಹೆಣ್ಣು ತರುವ ಪದ್ಧತಿ ಕಾಡುಗೊಲ್ಲರಲ್ಲಿರುವುದರಿಂದ ಹದಿನಾರು, ಇಪ್ಪತ್ನಾಲ್ಕು, ಮೂವತ್ತು ಅಥವಾ ನೂರು ರೂಪಾಯಿಗಳ 'ತೆರ' ಕೊಟ್ಟು, ಒಂದು ಚೀಲ ಅಕ್ಕಿ,ಒಂದು ಚೀಲ ರಾಗಿ, ಎರಡು ಮಣ ಬೆಲ್ಲ ಹೆಣ್ಣಿನ ಮನೆಗೆ ಕೊಟ್ಟು ಮದುವೆ ಮಾಡಿಕೊಳ್ಳುತ್ತಾರೆ. ಮದುವೆ, ಒಡವೆ ವಸ್ತ್ರಗಳನ್ನು ನಿಶ್ಚಿತಾರ್ಥ ದಿನವೇ ನಿಗದಿಪಡಿಸುತ್ತಾರೆ. ಧಾರೆಸೀರೆ, ಮದುವೆ ಸೀರೆ, ಮೂಗುತಿ, ಬೆಂಡೋಲೆ, ಗೆಜ್ಜೆಪಟ್ಟಿ,ಕಾಲಂದಿಗೆ, ಮಾಟೀಲು ಇತ್ಯಾದಿ ಒಡವೆಗಳನ್ನು ಹೆಣ್ಣಿಗೆ; ಅಂಗಿ, ಪಂಚೆ, ಚಲ್ಲಣ, ಬದ್ದು, ಹತ್ಕಕಡಗ, ಹೆಗಲ ಮೇಲಿನ ಕರಿಕಂಬಳಿ, ಗುಂಜಿಮೆಟ್ಟು ಗಂಡಿಗೆ ತರುತ್ತಾರೆ. ಹೆಣ್ಣು ಮತ್ತು ಗಂಡಿಗೆ ತರುವ ಹಾಗೂ ಕೊಡುವ ಉಡುಗೊರೆ ಗಳನ್ನು ನಿಶ್ಚಿತಾರ್ಥ ದಿನವೇ ಖಚಿತಪಡಿಸಿಕೊಂಡು ಮದುವೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ.

೫.೨.೨. ಮದ್ದಿಂಗನ ಶಾಸ್ತ್ರ-ದೇವರೂಟ : ಮದ್ದಿಂಗನಾಗುವ ಗಂಡು ಮೊದಲು ದೇವರ ಮನೆಗೆ ಹೋಗಬೇಕು. ದೇವರ ಮನೆಗೆ ಹೋಗುವಾಗ ಗಂಡಿನ ಜೊತೆ ಒಬ್ಬರು ಇಲ್ಲವೆ ಮೂರುಜನ ಹೋಗುತ್ತಾರೆ. ಹೋಗುವಾಗ ನಾಲ್ಕು ಸೇರು ಅಕ್ಕಿ, ಎರಡು ತೆಂಗಿನಕಾಯಿ, ಎಲೆ, ಅಡಿಕೆ, ವಿಭೂತಿ, ಇತ್ಯಾದಿ ವಸ್ತುಗಳನ್ನು ತೆಗೆದುಕೊಂಡು ಸಾಮಾನ್ಯವಾಗಿ ದೇವರ ವಾರದ ದಿನವೇ ಹೋಗುತ್ತಾರೆ. ದೇವರ ಮನೆಯಲ್ಲಿ ಕರಿಕಂಬಳಿ ಗದ್ದುಗೆ ಹಾಸಿ, ಪೂಜೆಮಾಡಿ, ಪೂಜಾರಿ ಮತ್ತು ದಾಸಯ್ಯಗಳು ಹಾಲಸ್ತ ಮಾಡಿ ಕಳುಹಿಸುತ್ತಾರೆ. ಮುಹೂರ್ತಕ್ಕೆ ಮೂರು ದಿನದ ಲೆಕ್ಕ ಬರುವಂತೆ ದೇವರ ಮನೆಗೆ ಹೋಗಿ ಮದ್ದಿಂಗನಾಗಿ ಬರುತ್ತಾರೆ. ಹೆಣ್ಣಿನ ಮನೆಗೆ ದಿಬ್ಬಣ ಹೊರಡುವ ದಿನ ಹಟ್ಟಿಯ ಕುಲಸ್ಥರಿಗೆಲ್ಲಾ ದೇವರೂಟ ಕೊಟ್ಟು ಮನೆಯಲ್ಲಿಯೇ ಮದ್ದಿಂಗನ ಸಿದ್ಧತೆ ಮಾಡುತ್ತಾರೆ. ಕರಿಕಂಬಳಿ ಗದ್ದುಗೆ ಹಾಸಿ, ದೇವರೂಟದ ಹಸೆ ಹಚ್ಚಿ ಗಂಡಿನಿಂದ ಸೂರ್ಯನಮಸ್ಕಾರ, ಗೋವಿನ ಪೂಜೆ ಮಾಡಿಸಿ, ಬಸವನ ಕಾಲಿನ ಮೇಲೆ ಬಂಗಾರವಿಟ್ಟು ಹಣೆಗೆ ಮುಟ್ಟುವಂತೆ ನಮಸ್ಕಾರ ಮಾಡಿಸುತ್ತಾರೆ. ನಂತರ ಗುರುಹಿರಿಯರಿಗೆ, ತಂದೆ ತಾಯಿಗಳ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾನೆ. ಹೆಗಲಿಗೆ ಕರಿಕಂಬಳಿ ಹಾಕಿಕೊಂಡು ಕೈಯಲ್ಲಿ ಬಾಕು ಹಿಡಿದು ಕೊರಳಲ್ಲಿ ಕಾಯಿ ಸರಪಳಿ ಹಾಕಿ ಮದ್ದಿಂಗ ಸಿದ್ಧನಾದಾಗ ಮುಂದಿಬ್ಬರು "ತಳಿ" ಹಿಡಿದುಕೊಂಡು ಹೊರಟರೆ, ಹೆಣ್ಣು ಮಕ್ಕಳು ಪದ ಹಾಡುತ್ತ ದೇವರ ಗುಡಿಗೆ ಮದ್ದಿಂಗನನ್ನು ಕರೆದುಕೊಂಡು ಹೋಗುತ್ತಾರೆ. ದೇವಸ್ಥಾನದಲ್ಲಿ ಕರಿಕಂಬಳಿ ಗದ್ದುಗೆ ಹಾಸಿ, ಹಸೆ, ಬರೆದಿರುತ್ತಾರೆ. ಆಗ ಮದ್ದಿಂಗ ಗದ್ದುಗೆಗೆ ನಮಸ್ಕರಿಸಿ ಬಲಗಾಲಿಟ್ಟು ಪೂರ್ವಾಭಿಮುಖವಾಗಿ ಗದ್ದುಗೆಯ ಮೇಲೆ ಕುಳಿತುಕೊಳ್ಳುತ್ತಾನೆ. ನಂತರ ಪೂಜಾರಿ, ದಾಸಯ್ಯ, ಹಟ್ಟಿಗೌಡ, ಯಜಮಾನ ಮತ್ತು ಬಂಧು ಬಳಗದವರನ್ನು ಕರೆಯಿಸಿ ಕರಿಕಂಬಳಿ ಗದ್ದುಗೆಗೆ ಪೂಜೆ ಮಾಡಿ ಹಾಲಸ್ತಕ್ಕೆ ಸಿದ್ಧ ಮಾಡಿಕೊಳ್ಳುತ್ತಾರೆ. ಕಂಚಿನ ಗಂಗಳದಲ್ಲಿ ಹಾಲು ಹಾಕಿಕೊಂಡು ಮೊದಲು ಪೂಜಾರಿ, ದಾಸಯ್ಯ ನಂತರ ಬಂಧು ಬಳಗದವರೆಲ್ಲಾ ವೀಳ್ಯದೆಲೆಯಿಂದ ಗಂಡಿನ ತಲೆಗೆ ಹಾಲೊತ್ತುತ್ತಾರೆ. ಗಂಡಿನ ಮನೆಯಲ್ಲಿಯೇ ಈ ಎಲ್ಲಾ ಶಾಸ್ತ್ರ ಮುಗಿಸಿಕೊಂಡು ಹೆಣ್ಣಿನ ಮನೆಗೆ ಹೋಗುತ್ತಾರೆ. ಅಲ್ಲಿ ಬೀಗರು ಪೂಜೆ

ಮಾಡಿಕೊಂಡು ಮದ್ದಿಂಗನನ್ನು ಒಳಗೆ ಕರೆದುಕೊಳ್ಳುತ್ತಾರೆ. ಹೆಣ್ಣಿನ ಮನೆಯಲ್ಲು ಕೂಡ ವಧುವಿನ ತಲೆಗೆ ಹಾಲನ್ನು ಒತ್ತಿ, ಅರಿಷಿಣ ಎಣ್ಣೆ ಹಚ್ಚಿ ಜಳಕ ಮಾಡಿಸುತ್ತಾರೆ. ಹೆಣ್ಣಿನ ಕಡೆಯವರು ಐದು ಹಸೆ ಮತ್ತು ಗಂಡಿನ ಕಡೆಯವರು ಐದು ಹಸೆ ಹಚ್ಚಿ ಸೇಸೆಯಿಡುತ್ತಾರೆ.

೫.೨.೩. ಅರುಣೆತರುವ-ಚಪ್ಪರಶಾಸ್ತ್ರ : ಗಂಡು ಹೆಣ್ಣಿನ ಮನೆಗೆ ಹೋದ ನಂತರ ಅಲ್ಲಿ ಆರು ಅಥವಾ ಎಂಟು ಕಂಭದ ಚಪ್ಪರ ಹಾಕುತ್ತಾರೆ. ಚಪ್ಪರದ ಮುಂದೆ ಮೂರು ಸಣ್ಣ ಗುಂಡಿ ತೆಗೆದಿರುತ್ತಾರೆ. ಆ ಗುಂಡಿಗಳಿಗೆ ಕೆಮ್ಮಣ್ಣು, ಸುಣ್ಣ ಬಳಿದು ಜೊತೆಗೆ ಒನಕೆ ಮತ್ತು ಗಂಡುಗೊಡ್ಲಿಗೆ ಕೆಮ್ಮಣ್ಣು ಮತ್ತು ಸುಣ್ಣ ಹಚ್ಚಿ ಈ ಮೂರು ಗುಂಡಿಗಳ ಮೇಲಿಟ್ಟು ಪೂಜೆ ಮಾಡುತ್ತಾರೆ. ಚಪ್ಪರದ ಕಂಭಗಳಿಗೂ ಕೂಡ ಸುಣ್ಣ ಕೆಮ್ಮಣ್ಣು ಹಚ್ಚಿರುತ್ತಾರೆ. ನಂತರ ಕೊಡ್ಲಿಯನ್ನು ಹೆಗಲ ಮೇಲಿಟ್ಟುಕೊಂಡು ಕುಂಬಾರರ ಮನೆಗೆ ಅರುಣೆ ತರಲು ಒಂದು ತಂಡ ಹೊರಟರೆ, ಚಪ್ಪರಕ್ಕೆ ಬೇಕಾಗುವ ಗಳ, ಗೂಟ ಮೊದಲಾದವುಗಳನ್ನು ತರುವುದಕ್ಕೆ ಮತ್ತೊಂದು ತಂಡ ಹೋಗುತ್ತದೆ.

ಅರುಣೆ ಎಂದರೆ ಕುಂಬಾರರು ವಿಶೇಷವಾಗಿ ತಯಾರಿಸಿದ ಮಣ್ಣಿನ ಮಡಿಕೆ ಎಂದರ್ಥ. ಈ ಅರುಣೆ ತರುವ ಶಾಸ್ತ್ರ ಕಾಡುಗೊಲ್ಲರ ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಅರುಣೆ ತರುವುದಕ್ಕಾಗಿ ಕುಂಬಾರರ ಮನೆಗೆ ಹೋಗಿ ತಾವು ತೆಗೆದುಕೊಂಡ ಹೋಗಿದ್ದ ಅಕ್ಕಿ, ಬೆಲ್ಲ, ಬೇಳೆ, ಎಲೆ, ಅಡಿಕೆ ಮೊದಲಾದ ಸಾಮಾನುಗಳನ್ನು ಕುಂಬಾರರಿಗೆ ಕೊಟ್ಟು ಅಲ್ಲಿ ಒಂದು ಗುಂಡುಕಲ್ಲನ್ನು ಪೂಜಿಸಿ ಕುಂಬಾರರು ಕೊಟ್ಟ ಐದು ಮಡಿಕೆಗಳನ್ನು ಹೆಡಿಗೆಯಲ್ಲಿಟ್ಟುಕೊಂಡು ಮನೆಗೆ ಬರುತ್ತಾರೆ. "ಬಹು ಹಿಂದೆ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಅರುಣೆ ತರುವುದಕ್ಕಾಗಿ ಕುಂಬಾರರ ಮನೆಗೆ ಜೊತೆಗೆ ಹೋಗಿದ್ದರಂತೆ. ಅಲ್ಲಿ ಎಲ್ಲಾ ಶಾಸ್ತ್ರಗಳನ್ನು ಮುಗಿಸಿಕೊಂಡು ಕುಂಬಾರರ ಮನೆಯಿಂದ ಅರುಣೆ ತೆಗೆದುಕೊಂಡು ಹಿಂತಿರುಗಿ ಬರುವಾಗ ದಾರಿ ಮಧ್ಯೆ ಮೊಲ ಕಾಣಿಸಿಕೊಂಡಿತಂತೆ; ಆಗ ಮ್ಯಾಸಬೇಡರು ಹತ್ತಿರದಲ್ಲೇ ಇದ್ದ ಗೊಲ್ಲರ ಕುರಿಹಟ್ಟಿಯಲ್ಲಿ ಅರುಣೆ ಇಟ್ಟು, ಮೊಲವನ್ನು ಅಟ್ಟಿಸಿಕೊಂಡು ಹೋದವರು ಮರಳಿ ಬರಲಿಲ್ಲವಂತೆ. ಆಗ ಕಾಡುಗೊಲ್ಲರೇ ಈ ಅರುಣೆಗಳನ್ನು ತೆಗೆದುಕೊಂಡು ಹೋಗಿ ಎರಡು ಗುಡಿಸಲುಗಳನ್ನು ಕಟ್ಟಿ, ಒಂದು ಗುಡಿಸಲಿನಲ್ಲಿ ಮ್ಯಾಸಬೇಡರ ಅರುಣೆಗಳು, ಮತ್ತೊಂದು ಗುಡಿಸಲಿನಲ್ಲಿ ತಮ್ಮ ಅರುಣೆಗಳನ್ನಿಟ್ಟು ಪೂಜಿಸಿ ಮದುವೆ ಕಾರ್ಯ ಪ್ರಾರಂಭಿಸಿದರಂತೆ" ಅಂದಿನಿಂದ ಕುಂಬಾರರ ಮನೆಯಿಂದ ಅರುಣೆ ತರುವ ಪದ್ಧತಿ ಕಾಡುಗೊಲ್ಲರಲ್ಲಿ ಮಾತ್ರ ಉಳಿಯಿತಂತೆ. ಆದರೆ ಮ್ಯಾಸಬೇಡರು ಈ ಪದ್ಧತಿಯನ್ನು ಕೈಬಿಟ್ಟರಂತೆ. ಆದ್ದರಿಂದ ಈ ಹೊತ್ತಿಗೂ ಸಹ ಕಾಡುಗೊಲ್ಲರು ತಮ್ಮ ಮದುವೆಗಳಲ್ಲಿ ಎರಡು ಅರುಣೆಗಳನ್ನು ತಂದು ಎರಡು ಚಿಕ್ಕ 'ಅರುಣೆ ಗುಡ್ಲು'ಗಳನ್ನು ಕಟ್ಟಿ ಪೂಜೆ ಮಾಡುವ ಪದ್ಧತಿ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲರಲ್ಲಿ ಕಾಣಬಹುದು. ಅರುಣೆ ಇಡುವ ಹತ್ತಿರ ಹಾಲಗಂಭ ನಿಲ್ಲಿಸಿ, ಗರಿಹಾಕಿ ಚಿಕ್ಕದಾಗಿ ಚಪ್ಪರ ಹಾಕಿರುತ್ತಾರೆ. ಆ ಚಪ್ಪರದ ಗುಡಿಸಲಲ್ಲಿ ಕುಂಬಾರರ ಮನೆಯಿಂದ ತಂದ ಐದು ಅರುಣೆಗಳನ್ನು ಸುಣ್ಣ ಕೆಮ್ಮಣ್ಣು ಗಳನ್ನು ಬಳಿದು ಐದೈದು ಅರಿಷಿಣ ಕೊನೆ, ಬೆಳ್ಳುಳ್ಳಿ, ಬೆಲ್ಲ, ಕೊಬರಿ, ಉತ್ತುತ್ತಿ ಹಾಕಿ ಕುರಿ ಗೊಬ್ಬರದ ಮೇಲೆ ಅರುಣೆಗಳನ್ನಿಡುತ್ತಾರೆ. ಕಾಡುಗೊಲ್ಲರ ವಿವಾಹ ಪದ್ಧತಿಯಲ್ಲಿ ಅರುಣೆಗೆ ಬಹಳ ಮಹತ್ವ ಕೊಡುತ್ತಾರೆ ಮತ್ತು ಪವಿತ್ರ ವಸ್ತುಗಳೆಂದು ಭಾವಿಸಿ ಪೂಜಿಸುತ್ತಾರೆ.

೫.೨.೪. ಧಾರೆ ಮುಹೂರ್ತ : ಧಾರೆ ಮುಹೂರ್ತ ಮುಂಜಾನೆ ಹೆಣ್ಣು ಮತ್ತು ಗಂಡಿಗೂ ಹಸೆ ಹಚ್ಚಿ, ಅರಿಷಿಣ ಎಣ್ಣೆ ಹಚ್ಚಿ ಸುರಿಗೆ ನೀರನ್ನು ಹಾಕುತ್ತಾರೆ. ನಾಲ್ಕು ಕಡೆ ಸುಳ್ನೀರಿನ ಮಗಿಯನ್ನು ಇಟ್ಟು ಅದಕ್ಕೆ ಹತ್ತಿ ದಾರವನ್ನು ಚೌಕಾಕಾರ ಬರುವಂತೆ ಸುತ್ತಿ ಮಧ್ಯದಲ್ಲಿ ವಧು-ವರರನ್ನು ಕೂಡ್ರಿಸಿ ಒಂಬತ್ತು ಜನ ಮುತ್ತೈದೆಯರು ತಲೆಯ ಮೇಲೆ ಸುಳ್ನೀರನ್ನು ಹೊಯ್ಯುತ್ತಾರೆ. ಅದೇ ಸಂದರ್ಭದಲ್ಲಿ ಸೋದರಮಾವ ಅಥವಾ ಸೋದರಅತ್ತೆಯರು ಸುಳ್ನೀರಿಗೆ ತಟ್ಟೆ ಹಿಡಿದುಕೊಂಡು ನಿಂತಿರುತ್ತಾರೆ. ವಧು-ವರರಿಗೆ ಹೊಯ್ಯುವ ನೀರು ಇವರಿಗೂ ಬೀಳುತ್ತಿರುತ್ತವೆ. ಕೊನೆಯಲ್ಲಿ ನಾಲ್ಕು ಕಡೆ ಇಟ್ಟ ಮಗಿಗಳ ನೀರನ್ನು ವಧು-ವರರ ಮೇಲೆ ಹಾಕುತ್ತಾರೆ. ನಂತರ ಒಬ್ಬರ ಸೆರಗು ಮತ್ತೊಬ್ಬರು ಹಿಡಿದು ಕೊಂಡು ಸುರಿಗೆಯ ಒಳಗೆ ಮೂರು ಸುತ್ತು ತಿರುಗುತ್ತಾರೆ. ನಂತರ ಮತ್ತೆ ನೀರು ಹಾಕುತ್ತಾರೆ. ಸುರಿಗೆ ನೀರು ಹಾಕಿದ ನಂತರ 'ತುತ್ತು' ಹಿಡಿಸುತ್ತಾರೆ. ತುತ್ತು ಎಂದರೆ ಅನ್ನ, ಮೊಸರು, ಬೆಲ್ಲ ಇವುಗಳನ್ನು ಕಲೆಸಿ ಒಂದು ಮಿದಿಕೆ ಅನ್ನವನ್ನು ಮದ್ಲಿಂಗನ ಕೈಯಲ್ಲಿಡುತ್ತಾರೆ. ಆಗ ಕಲೆತಿರುವವರೆಲ್ಲರೂ ಕೂಡಿ ಉಣ್ಣುತ್ತಾರೆ. ಈ ಎಲ್ಲಾ ಶಾಸ್ತ್ರಗಳು ಮುಗಿದ ನಂತರ ಮುಹೂರ್ತಕ್ಕೆ ಮುಂಚೆ ಒಂದು ಸಣ್ಣಜಾಡಿ ಹಾಸುತ್ತಾರೆ. ಇದಕ್ಕೆ ಚಪ್ಪರಜಾಡಿ ಎಂದು ಸಹ ಕರೆಯುತ್ತಾರೆ. ಈ ಜಾಡಿಯ ಮೇಲೆ ಗಂಡಿನ ಕಡೆಯವರು ತಂದಿದ್ದ ದೊಡ್ಡಸೀರೆ, ಆಭರಣ ಮೊದಲಾದವು ಗಳನ್ನಿಟ್ಟು ಜಾಡಿ ಪೂಜೆ ಮಾಡುತ್ತಾರೆ. ಮತ್ತೊಂದು ಕಡೆ ವಧುವರರನ್ನು ಮುಹೂರ್ತಕ್ಕೆ ಸಿದ್ಧತೆ ಮಾಡಿಕೊಂಡು ದೇವಸ್ಥಾನಕ್ಕೆ ಅಥವಾ ಚಪ್ಪರಕ್ಕೆ ಕರೆದುಕೊಂಡು ಬರುತ್ತಾರೆ. ಗಂಡು ಮುಹೂರ್ತಕ್ಕೆ ಬರುವಾಗ ಜೋಳದ ಕಾಳಿನಿಂದ ಹೊಡೆದಾಡುವುದು, ಬೀರಕ್ಕಿಯನ್ನು ಬೀರುವುದು, ಬಾಳೆದಿಂಡಿನ ಚೆಂಡನ್ನು ಕಟ್ಟಿ ಎಸೆದಾಡುವುದನ್ನು ಗಂಡು ಮತ್ತು ಹೆಣ್ಣಿನ ಕಡೆಯವರು ಮಾಡುತ್ತಾರೆ. ಸಾಮಾನ್ಯವಾಗಿ ಕಾಡುಗೊಲ್ಲರು ತಮ್ಮ ಹಟ್ಟಿಯ ದೇವಸ್ಥಾನದ ಮುಂದೆ ಮುಹೂರ್ತ ಮಾಡುತ್ತಾರೆ. ಅದರೆ ಇತ್ತೀಚೆಗೆ ಕೆಲವರು ಮನೆಯಮುಂದೆ ಚಪ್ಪರ ಹಾಕಿ ಮದುವೆ ಮಾಡುವ ಪದ್ಧತಿಯುಂಟು. ಮುಹೂರ್ತಕ್ಕೆ ಜಂಗಮರನ್ನಾಗಲಿ ಅಥವಾ ಬ್ರಾಹ್ಮಣರನ್ನಾಗಲಿ ಕಾಡುಗೊಲ್ಲರು ಕರೆಸುವುದಿಲ್ಲ. ಹಟ್ಟಿಯ ಪೂಜಾರಿ ಇಲ್ಲವೇ ದಾಸಯ್ಯಗಳಿಂದಲೇ ಮುಹೂರ್ತ ಮಾಡಿಸುತ್ತಾರೆ. ಮುಹೂರ್ತ ಮಾಡುವುದಕ್ಕಿಂತ ಮುಂಚೆ ಗುರು ಹಿರಿಯರ, ಯಜಮಾನರ ಮತ್ತು ಹಟ್ಟಿ ಗೌಡರ ಅಪ್ಪಣೆ ಕೇಳುತ್ತಾರೆ. ಪೂಜಾರಿ ಮುಹೂರ್ತ ಮಾಡಿಸುವಾಗ ಗಂಡು ಹೆಣ್ಣುಗಳನ್ನು ಎದುರು ಬದರು ಕೂಡ್ರಿಸಿ ಮಧ್ಯೆ ಬಿಳಿ ಬಟ್ಟೆ ಇಡಿಸಿ ಒಂದು ತಟ್ಟೆಯಲ್ಲಿ ಎಳ್ಳು ಜೀರಿಗೆ ಬೆರೆಸಿದ ಹಾಲು ಹಾಕಿಕೊಂಡು ಹೆಣ್ಣಿನ ತಲೆಯ ಮೇಲೆ ಗಂಡು, ಗಂಡಿನ ತಲೆಯ ಮೇಲೆ ಹೆಣ್ಣು ವೀಳೆದೆಲೆಯಲ್ಲಿ ಹಾಲನ್ನು ಚಿಮುಕಿಸುತ್ತಾರೆ. ಗಂಡಿನ ಕೈ ಕೆಳಗೆ ಹೆಣ್ಣು ಬೊಗಸೆಯೊಡ್ಡುತ್ತಾಳೆ. ನಂತರ ಹೆಣ್ಣಿನ ಕೈ ಕೆಳಗೆ ಗಂಡು ಬೊಗಸೆಯೊಡ್ಡುತ್ತಾನೆ. ಆಗ ಕೈಮೇಲೆ ಹಾಕಿದ ಹಾಲು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹರಿದು ಹೋಗುತ್ತದೆ. ಹಾಲು ಚೆಲ್ಲದಂತೆ ಕೆಳಗಡೆ ಒಂದು ದೊಡ್ಡ ಹರಿವಾಣವನ್ನು ಇಟ್ಟಿರುತ್ತಾರೆ. ಒಂದು ಚಂಬಿನ ಮೇಲೆ ತೆಂಗಿನಕಾಯಿಯನ್ನಿಟ್ಟು ಅದರ ಮೇಲೆ ತಾಳಿ ಇಟ್ಟುಕೊಂಡು ಅದನ್ನು ಎಲ್ಲರಿಂದಲೂ ಮುಟ್ಟಿಸಿ ಗಂಡಿನ ಕೈಗೆ ತಂದು ಕೊಡುತ್ತಾರೆ. ಅಷ್ಟೊತ್ತಿಗಾಗಲೇ ತಂದೆ ತಾಯಿ ಮೊದಲ್ಗೊಂಡು ಎಲ್ಲರೂ ವಧು-ವರರ ಕೈ ಮೇಲೆ ಹಾಲನ್ನು ಹಾಕುತ್ತಾರೆ. ನಂತರ ಗಂಡು ತಾಳಿಯನ್ನು ಕೈಯಲ್ಲಿ ಹಿಡಿದುಕೊಂಡು "ಸೂರ್ಯ ಚಂದ್ರರ ಸಾಕ್ಷಿಯಾಗಿ, ಗುರು ಹಿರಿಯರ ಪಾದಸಾಕ್ಷಿಯಾಗಿ, ನಮ್ಮ ತಂದೆ ತಾಯಿ ಪಾದಸಾಕ್ಷಿಯಾಗಿ, ನಾನೇ ಗಂಡ ನೀನೇ ಹೆಂಡತಿ" ಎಂದು ಗಂಡು ಹೇಳಿದ ಮೇಲೆ ಹೆಂಡತಿಯೂ ಕೂಡ

"ಸೂರ್ಯ ಚಂದ್ರರ ಸಾಕ್ಷಿಯಾಗಿ, ಗುರು ಹಿರಿಯರ ಸಾನಿಧ್ಯವಾಗಿ, ಇವನೇ ಗಂಡ ಇವಳೇ ಹೆಂಡತಿ" ಎಂದು ಹೇಳಿದ ಮೇಲೆ ಗಂಡು ತಾಳಿ ಕಟ್ಟುತ್ತಾನೆ. ಅದೇ ಸಂದರ್ಭಕ್ಕೆ ಅಕ್ಕಿಕಾಳನ್ನು ಹಾಕುತ್ತಾರೆ.

ಕಾಡುಗೊಲ್ಲರಲ್ಲಿ, ತಾಳಿ ಕಟ್ಟುವ ಗೊಲ್ಲರು ಮತ್ತು ತಾಳಿ ಕಟ್ಟದ ಗೊಲ್ಲರು ಎಂದು ಎರಡು ಪಂಗಡಗಳಿವೆ. ತಾಳಿ ಕಟ್ಟದ ಗೊಲ್ಲರು ಬರಿ ಕರಿಮಣಿಯನ್ನು ಕಟ್ಟುತ್ತಾರೆ. "ತಾಳಿ ಕಟ್ಟುವ ಮತ್ತು ತಾಳಿ ಕಟ್ಟದ ಗೊಲ್ಲರಿಬ್ಬರೂ ಕೂಡ ಒಂದೇ ಕುಟುಂಬದ ಅಣ್ಣ ತಮ್ಮಂದಿರಂತೆ. ಇವರಿಬ್ಬರೂ ಬಹಳ ಸಾಲ ಮಾಡಿದ್ದರಂತೆ, ಆಗ ಸಾಲಗಾರರು ಬಂದು ಸಾಲ ಕೇಳುತ್ತಿದ್ದಾಗ ಒಬ್ಬ ತಪ್ಪಿಸಿಕೊಂಡು ಹೋದನಂತೆ, ಇನ್ನೊಬ್ಬ ಮಾತ್ರ ತನ್ನ ಹೆಂಡತಿಯ ಕೊರಳಲ್ಲಿರುವ ತಾಳಿ ಮಾರಿ ಸಾಲ ತೀರಿಸಿದನಂತೆ. ಅಂದಿನಿಂದ ತಾಳಿ ಮಾರಿ ಸಾಲ ತೀರಿಸಿದವನ ಕುಲದವನ್ಯಾರೂ ತಾಳಿ ಕಟ್ಟುವುದಿಲ್ಲವಂತೆ. ಸಾಲ ತೀರಿಸಲಾರದೆ ತಪ್ಪಿಸಿಕೊಂಡು ಹೋದವನ ಕುಲದವರು ಮಾತ್ರ ತಾಳಿ ಕಟ್ಟುತ್ತಾರಂತೆ." ಉದಾಹರಣೆಗೆ: ಹಿರಿಯೂರು ತಾಲ್ಲೂಕು ಸೀಬಾರದ ಗೊಲ್ಲರು ತಾಳಿ ಕಟ್ಟುವುದಿಲ್ಲ. ಮದುವೆ ಮುಹೂರ್ತದಲ್ಲಿ ಬರಿ ಕರಿಮಣಿಯನ್ನು ಮಾತ್ರ ಕಟ್ಟಿ ಹೂವಿನ ಹಾರ ಹಾಕಿಕೊಂಡು ದೇವಸ್ಥಾನಕ್ಕೆ ಹೋಗಿ ನಮಸ್ಕರಿಸುತ್ತಾರೆ.ಮುಹೂರ್ತ ಮುಗಿದ ನಂತರ ಗಂಡು ಹೆಣ್ಣಿನ ಸೆರಗಿಗೆ ಬ್ರಹ್ಮಗಂಟನ್ನು ಹಾಕಿ ಸೂರ್ಯನಮಸ್ಕಾರ ಮಾಡಿಸುತ್ತಾರೆ. ನಂತರ ಕಂಬಳಿ ಹಾಸಿ ಕೂಡ್ರಿಸುತ್ತಾರೆ. ಮುಹೂರ್ತದ ನಂತರ ಒಂದು ಜಾಡಿ ಹಾಕುತ್ತಾರೆ.ಇದನ್ನೇ 'ದೊಡ್ಡ ಜಾಡಿ' ಅಥವಾ 'ಅಡಿಕೆ ಜಾಡಿ' ಎಂದು ಸಹ ಕರೆಯುತ್ತಾರೆ.ಇಲ್ಲಿ ಎಲ್ಲಾ ಕುಲಸ್ಥರಿಗೆ, ಗುರು ಹಿರಿಯರಿಗೆ, ಕಟ್ಟೆಮನೆಗಳ ಯಜಮಾನರಿಗೆ, ಹನ್ನೆರಡು ಕೈವಾಡದವರಿಗೆ ವೀಳ್ಯ ಕೊಡುತ್ತಾರೆ. ಒಂದು ಮಗೆಯಲ್ಲಿ ಮಾತ್ರ ಎಲೆ ಅಡಿಕೆಯನ್ನು ಹಾಕಿ ಬಾಯಿಗೆ ಬಾಳೆಯ ಎಲೆಯನ್ನು ಕಟ್ಟಿ ಜಾಡಿ ಮುಗಿದ ನಂತರ ಕಟ್ಟೆ ಗೌಡರಿಗೆ ಕಳಿಸುತ್ತಾರೆ. ಅದೇ ರೀತಿ ಕಟ್ಟೆಮನೆಗಳಿಗೆ ಗೌರವ ಕೊಡುವ ದೃಷ್ಟಿಯಿಂದ ಕರಿಯಣ್ಣನಹಳ್ಳಿ, ತಾಳವಟ್ಟಿ ಮತ್ತು ರಾಮನಹಳ್ಳಿ ಎಂಬ ಮೂರು ಕಟ್ಟೆಮನೆಗಳಿಗೆ ವೀಳ್ಯ ತೆಗೆದಿಡುತ್ತಾರೆ. ಬಹು ಹಿಂದೆ ಕಟ್ಟೆಮನೆ ಯಜಮಾನರಿಗೆ ವೀಳ್ಯ ಕೊಟ್ಟು ಬರುವ ಪದ್ಧತಿ ಇತ್ತಂತೆ. ಆದರೆ ಪ್ರಸ್ತುತ ಮೂರು ಕಟ್ಟೆಮನೆಗಳಿಗೆ ಸೇರಿದ ಯಾರಾದರೊಬ್ಬ ಕುಲಸ್ಥರು ಬಂದು ವೀಳ್ಯ ಪಡೆದುಕೊಳ್ಳುತ್ತಾರೆ. ಮುಹೂರ್ತ ಮುಗಿದ ನಂತರ ಸೂತಕವೆಂದು ಪರಿಗಣಿಸಿ, ವಧು ವರರನ್ನು ಮನೆಯ ಒಳಗೆ ಕರೆದುಕೊಳ್ಳುವುದಿಲ್ಲ. ಧಾರೆ ಮುಹೂರ್ತದಲ್ಲಿ ಬಂದ ಬಂಧುಗಳಿಗೆ ಊಟದ ವ್ಯವಸ್ಥೆ ಮಾಡಿರುತ್ತಾರೆ. ಪ್ರಸ್ತುತ ಕಾಡುಗೊಲ್ಲರ ಸಮುದಾಯಗಳ ಮೇಲೆ ಆಧುನೀಕರಣ ಮತ್ತು ನಗರೀಕರಣದ ಪ್ರಭಾವದಿಂದಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅವರ ವೈವಾಹಿಕ ಪದ್ಧತಿಗಳಲ್ಲಿ ಸಾಕಷ್ಟು ಬದಲಾವಣೆಗಳು ಕಂಡುಬರುತ್ತವೆ.

೫.೨.೫. ಬಾನ ಮಾಡುವ ಶಾಸ್ತ್ರ : ಧಾರೆ ಮುಹೂರ್ತ ಮುಗಿದ ನಂತರ ಹಟ್ಟಿಯ ಹೊರಗೆ ಪ್ರತ್ಯೇಕವಾದ ಸ್ಥಳದಲ್ಲಿ ಅಥವಾ ಕುರಿಹಟ್ಟಿಯಲ್ಲಿ ಮೂರು ಒಲೆಗುಂಡುಗಳನ್ನು ಹೂಡಿ ಬಾನ ತಯಾರಿಸುತ್ತಾರೆ. ಇಲ್ಲಿ ಬಾನ ಎಂದರೆ "ಅನ್ನ" ಎಂದರ್ಥ. ಹೆಣ್ಣಿನ ಮನೆಯಲ್ಲಿ ಈ ಶಾಸ್ತ್ರ ಮಾಡುತ್ತಾರೆ. ಬಾನ ತಯಾರಿಸಲು ಗಂಡಿನ ಕಡೆಯವರು ಮೂರು ಸೇರು ಅಕ್ಕಿ, ಒಂದು ಸೇರು ತುಪ್ಪವನ್ನು ಕೊಡಬೇಕು. ಹಾಗೆಯೇ ಹೆಣ್ಣಿನ ಕಡೆಯವರು ಕೂಡ ಎರಡು ಸೇರು ಅಕ್ಕಿ, ಒಂದು ಸೇರು ತುಪ್ಪ ಕೊಡಬೇಕು. ಹೊಸ ಮಣ್ಣಿನ ಮಡಿಕೆಯಲ್ಲಿ ಕಾದು

ಬಾಳೆಹಣ್ಣು ಇಟ್ಟು ಪೂಜೆ ಮಾಡಿದ ನಂತರ ಬಾಯಿಗೆ ಬಟ್ಟೆ ಕಟ್ಟಿಕೊಂಡು ಮಡಿಯಿಂದ ಬೂವ್ವ ತಯಾರಿಸುತ್ತಾರೆ. ಒಲೆಯ ಮೇಲಿಟ್ಟ ಬೂವ್ವದ ಅನ್ನ ಬೆಂದ ನಂತರ ಅಗಸರು ಕೊಟ್ಟ ಬಿಳಿ ಪಂಚೆಯ ಮೇಲೆ ಬೂವ್ವದ ಅನ್ನ ಹಾಕಿ ಅದರಲ್ಲಿ ತೆಂಗಿನಕಾಯಿ ತುರಿ, ಬೆಲ್ಲ, ಬಾಳೆಹಣ್ಣು, ತುಪ್ಪ, ಜೇನುತುಪ್ಪ ಎಲ್ಲವನ್ನೂ ಸೇರಿಸಿ ಚೆನ್ನಾಗಿ ಮಿದ್ದು, ಐದು ದೊಡ್ಡ ಮುದ್ದೆಗಳನ್ನು ಪಿರಮಿಡ್ ಆಕಾರವಾಗಿ ತಯಾರಿಸಿಕೊಂಡು ಐದು ತಟ್ಟೆಯಲ್ಲಿಟ್ಟುಕೊಂಡು ದೇವಸ್ಥಾನದ ಹತ್ತಿರ ಬಂದು ಕರಿಕಂಬಳಿ ಗದ್ದುಗೆ ಹಾಸಿ ಬೂವ್ವದ ಅನ್ನ ಇಡುತ್ತಾರೆ. ಆಗ ಪೂಜಾರಿ ಕರಿಕಂಬಳಿ ಗದ್ದುಗೆಗೆ ಪೂಜೆ ಮಾಡುತ್ತಾನೆ. ಪಕ್ಕದಲ್ಲಿ ವಧು ವರರನ್ನು ಕುಳ್ಳಿರಿಸಿರುತ್ತಾರೆ. ಎರಡು ಮುದ್ದೆ ಹೆಣ್ಣಿನ ಕಡೆಯವರು ಮತ್ತು ಎರಡು ಮುದ್ದೆ ಗಂಡಿನ ಕಡೆಯವರು ಹಂಚಿಕೊಂಡು ಜೋರಾಗಿ ತಿನ್ನುತ್ತಾರೆ. ಯಾರು ಬೇಗ ತಿಂದು ತಟ್ಟೆ ಬಾರಿಸುತ್ತಾರೋ ಅವರು ಗೆದ್ದಂತೆ. ಈ ಬೂವ್ವದಲ್ಲಿ ಮೂರು ವಿಧ 'ತಾಯಿ ಮುದ್ದೆ' ಬೂವ್ವ ಹೆಣ್ಣಿನ ಕಡೆಯವರಿಗೆ; 'ಬಳಗದ ಮುದ್ದೆ' ಬೂವ್ವ ಗಂಡಿನ ಕಡೆಯವರಿಗೆ; ಉಳಿದ ಮತ್ತೊಂದು ಮುದ್ದೆಗೆ 'ಗೌಡನ ಮುದ್ದೆ' ಎಂದು ಕರೆಯುತ್ತಾರೆ. ಈ ಗೌಡನ ಮುದ್ದೆಗೆ ಹಟ್ಟಿ ಗೌಡ ಬಂದು ಮುದ್ರೆ ಒತ್ತಿದ ನಂತರ ಪೂಜೆ ಮಾಡಿ ಅದನ್ನು ಸಹ ಎಲ್ಲರೂ ಸೇರಿ ತಿನ್ನುತ್ತಾರೆ.

೫.೨.೬. ಮನೆದುಂಬಿಕೆ ಶಾಸ್ತ್ರ : ಧಾರೆ ಮುಹೂರ್ತ ಮುಗಿದ ದಿನವೇ ಮನೆದುಂಬಿಕೆ ಶಾಸ್ತ್ರ ಮಾಡುತ್ತಾರೆ. ಹೆಣ್ಣನ್ನು ಗಂಡಿನ ಮನೆಗೆ ಕಳುಹಿಸುವುದಕ್ಕಿಂತ ಮೊದಲು ಹೆಣ್ಣಿನ ಮನೆಯಲ್ಲೂ ಈ ಶಾಸ್ತ್ರ ನಡೆಯುತ್ತದೆ. ಅದೇ ದಿನ ಸಂಜೆಯಾಗುವುದರ ಒಳಗಾಗಿ ಗಂಡಿನ ಮನೆಗೆ ಹೋಗುತ್ತಾರೆ. ಗಂಡಿನ ಮನೆಯ ಹತ್ತಿರ ಹೋದಾಗ ಗಂಡಿನ ತಂಗಿ ಬಾಗಿಲಲ್ಲಿ ದೊಡ್ಡ ಗಂಗಳ ಮತ್ತು ನೀರನ್ನು ಹಿಡಿದು ನಿಂತಿರುತ್ತಾಳೆ. ಗಂಡ ಹೆಂಡತಿಯರ ಕಾಲ್ತೊಳೆದು ಹೆಣ್ಣು ಕೇಳುವಶಾಸ್ತ್ರ ಮಾಡಿಸುತ್ತಾರೆ. ಆಗ ಅಣ್ಣ ಹೆಣ್ಣು ಕೊಡುತ್ತೇನೆ ಎಂದು ತಂಗಿಗೆ ಹೇಳಿದಾಗ ಅವಳು ಕಾಲು ಬಿಡುತ್ತಾಳೆ. ಗಂಡು ಹೆಣ್ಣಿನ ಕೈಗೆ ಅಕ್ಷತೆ ಕೊಟ್ಟಾಗ ಗಂಡು "ನಮ್ಮ ತಂದೆ ತಾಯಿ ಮನೆ ಹಾಲುಕ್ಕಿದಂತೆ ಉಕ್ಕಲಿ" ಎಂದ್ಹೇಳಿ ಅಕ್ಷತೆಯನ್ನು ಗಂಗಳದಲ್ಲಿ ಹಾಕುತ್ತಾನೆ. ನಂತರ ಹೆಣ್ಣು "ನಮ್ಮ ಅತ್ತೆ ಮಾವರ ಮನೆ ಹಾಲುಕ್ಕಿದಂತೆ ಉಕ್ಕಲಿ" ಎಂದು ಹೇಳಿ ಗಂಗಳದಲ್ಲಿ ಅಕ್ಷತೆಯನ್ನು ಹಾಕುತ್ತಾಳೆ.ನಂತರ ತಲೆಬಾಗಿಲಿಗೆ ಮೊಳೆ ಬಡಿದು ಒಳಗೆ ಕರೆದು ಕೊಳ್ಳುತ್ತಾರೆ. ನಂತರ ಮರುದಿನ ಹತ್ತಿರದ ಕೆರೆ, ಹಳ್ಳ, ಬಾವಿಗಳ ಹತ್ತಿರ ಹೋಗಿ ಗಂಗೆಪೂಜೆ ಮಾಡಿಕೊಂಡು ಐದುಜನ ಮುತ್ತೈದೆಯರ ಜೊತೆಗೆ ಗಂಗೆ ಕುಂಭ ಹೊತ್ತುಕೊಂಡು ಮನೆಯ ಹತ್ತಿರ ಬರುತ್ತಾಳೆ. ಆಗ ಗಂಡ ಬಾಗಿಲ ಹತ್ತಿರವೇ ಗಂಗೆ ಕುಂಭಕ್ಕೆ ಪೂಜೆ ಮಾಡಿ, ಕುಂಭ ಇಳಿಸಿಕೊಂಡು ಒಳಗೆ ಕರೆದುಕೊಂಡು ಹೋಗುತ್ತಾನೆ. ಉಳಿದೆಲ್ಲಾ ಶಾಸ್ತ್ರ, ಊಟದ ವ್ಯವಸ್ಥೆ, ತೌರುಮನೆಗೆ ಕಳಿಸುವುದು, ಗಂಡನ ಮನೆಗೆ ಕಳಿಸುವುದು, ಉಡುಗೊರೆಗಳನ್ನು ಕೊಡುವುದು ಎಲ್ಲಾ ಜಾತಿ ಜನಾಂಗದವರಂತೆ ಈ ಕಾಡುಗೊಲ್ಲರಲ್ಲಿಯೂ ಕಂಡು ಬರುತ್ತದೆ.

೬. ಶವ-ಸಂಸ್ಕಾರ

ಶವ ಸಂಸ್ಕಾರ ಪದ್ಧತಿಯ ಬಗ್ಗೆ ಹೆಚ್ಚು ಕಡಿಮೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಪರಸ್ಪರ ಹೋಲಿಕೆಗಳು ಕಂಡು ಬಂದರೂ ಪ್ರದೇಶದಿಂದ ಪ್ರದೇಶಕ್ಕೆ ಅಲ್ಪ ಸ್ವಲ್ಪ ಬದಲಾವಣೆಯನ್ನು ಕಾಣಬಹುದಾಗಿದೆ. ಅದಕ್ಕಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಶವ-ಸಂಸ್ಕಾರ ಪದ್ಧತಿಗಳನ್ನು ಪ್ರತ್ಯೇಕವಾಗಿಯೆ ಅಧ್ಯಯನ ಮಾಡಬೇಕಾಗಿದೆ.

೬.೧. ಮ್ಯಾಸಬೇಡರು

ಸಾವಿನಂಚಿನಲ್ಲಿರುವ ವ್ಯಕ್ತಿಯನ್ನು ಮ್ಯಾಸಬೇಡರು ಗುಡಿಸಲಿನಿಂದ ಹೊರಗೆ ಮಲಗಿಸುತ್ತಾರೆ. ಜೀವ ಹೋದ ತಕ್ಷಣ ಶವ-ಯಾತ್ರೆಗೆ ಸಿದ್ಧತೆ ಮಾಡುತ್ತಾರೆ. ಕುರುಳು ತಂದು ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಶವಕ್ಕೆ ಸ್ನಾನ ಮಾಡಿಸುವ ಪದ್ಧತಿ ಮ್ಯಾಸಬೇಡರಲ್ಲಿಲ್ಲ. ವ್ಯಕ್ತಿ ಸತ್ತ ಸುದ್ದಿ ಹರಿಜನರ ಮೂಲಕ ಬಂಧು-ಬಳಗಕ್ಕೆ ಹೇಳಿ ಕಳುಹಿಸುತ್ತಾರೆ. ಬಂಧು ಬಳಗ ಎಲ್ಲ ಸೇರಿದ ಮೇಲೆ ಹೊಸ ಬಟ್ಟೆ ಹಾಕಿ ಅವರವರ ಕೌಟುಂಬಿಕ ಪದ್ಧತಿಯ ಪ್ರಕಾರ ಪೂಜೆ ಇತ್ಯಾದಿ ಮಾಡಿ ಸಂಜೆ ಆಗುತ್ತಿದ್ದಂತೆ ಶವವನ್ನು ಕರಿ ಕಂಬಳಿ ಇಲ್ಲವೆ ಸಿದಿಗೆಯಲ್ಲಿ ಹೊತ್ತುಕೊಂಡು ಸ್ಮಶಾನಕ್ಕೆ ಹೋಗುತ್ತಾರೆ. ಸತ್ತ ವ್ಯಕ್ತಿಯ ವಾರಸುದಾರನಾದ ಹಿರಿಯ ಮಗ ಅಥವಾ ಮೊಮ್ಮಗ ಒಂದು ಮಣ್ಣಿನ ಮಡಿಕೆಯಲ್ಲಿ 'ಪಿಂಡ' ವನ್ನಿಟ್ಟುಕೊಂಡು ಹೆಣದ ಮುಂದೆ ಸಾಗುತ್ತಾನೆ. ಹೆಣದ ಹಿಂದೆ ಎಲೆ, ಅಡಿಕೆ, ಹಣ, ಮಂಡಕ್ಕಿಯನ್ನು ತೂರುತ್ತ ಹೋಗುತ್ತಾರೆ. ಆದರೆ ಯಾವುದೇ ವಾದ್ಯಗಳನ್ನು ಬಾರಿಸುವುದಿಲ್ಲ. ಇತ್ತೀಚೆಗೆ ಬ್ಯಾಂಡ ಬಾರಿಸುವ ಪದ್ಧತಿ ಕೆಲವರಲ್ಲಿದೆ.

ಸ್ಮಶಾನ ಯಾತ್ರೆ ಮಾರ್ಗ ಮಧ್ಯದಲ್ಲಿ ಅಂದರೆ ಮಸಣದ ಹತ್ತಿರ ಬಂದಾಗ ಹೆಣ ಇಳಿಸಿ, ಅಲ್ಲಿಯೇ ಒಂದು ಹಸಿರು ತಂಗಟೆ ಗಿಡದ ಬುಡದಲ್ಲಿ ಪಿಂಡದ ಮಡಿಕೆಯನ್ನಿಟ್ಟು, ಹೆಣ ಹೊತ್ತವರು ಹಿಂದು ಮುಂದಾಗುತ್ತಾರೆ. ಇದನ್ನು "ಹೆಗಲು ಬದಲಾಯಿಸುವುದು" ಎನ್ನುತ್ತಾರೆ. ಸ್ಮಶಾನ ಯಾತ್ರೆಯಲ್ಲಿ ಪಾಲ್ಗೊಂಡವರು ಅಲ್ಲಲ್ಲಿ ಬಿದ್ದಿರುವ ಸಣ್ಣ ಮೂರು ಕಲ್ಲುಗಳನ್ನು ಎಡಗೈಯಲ್ಲಿ ತೆಗೆದುಕೊಂಡು ಹಸಿರು ಗಿಡದ ಬುಡಕ್ಕೆ ಇಟ್ಟಿದ್ದ "ಹಿಂಡೆ ಕೂಳಿನ" ಮಡಿಕೆಗೆ ಬೀರಿ ಒಡೆದುಹಾಕುತ್ತಾರೆ. ನಂತರ ಸ್ಮಶಾನಕ್ಕೆ ಹೆಣ ಹೊತ್ತು ಕೊಂಡು ಹೋಗುತ್ತಾರೆ.

ಮರಣ ಹೊಂದಿದ ವ್ಯಕ್ತಿಯ ಸಂಬಂಧಿಕರು ಸ್ಮಶಾನಕ್ಕೆ ಹೋಗಿ ಗುಂಡಿ ತೆಗೆದರೆ; ಕೆಲವೊಂದು ಪ್ರದೇಶಗಳಲ್ಲಿ ಹರಿಜನರು ಗುಂಡಿ ತೆಗೆಯುತ್ತಾರೆ. ಆದರೆ ಕಾಡುಗೊಲ್ಲರು, ಪೂಜಾರಿಗಳು ಮತ್ತು ದಾಸಯ್ಯನ ಮನೆತನದವರು ಹರಿಜನರಿಂದ ಗುಂಡಿ ತೆಗೆಸುವುದಿಲ್ಲ. ಹೆಣವನ್ನು ಗುಂಡಿಯಲ್ಲಿ ಇಡುವುದಕ್ಕಿಂತ ಮುಂಚೆ ಹೆಣ್ಣು ಮುತ್ತೈದೆಯಾಗಿ ಸತ್ತರೆ ಗಂಡನಿಂದ ತಾಳಿ, ಮೂಗುತಿ ಇತ್ಯಾದಿ ಒಡವೆಗಳನ್ನು ತೆಗೆಸುತ್ತಾರೆ. ಇದೇ ತಾಳಿಯನ್ನು ಮುಂದೆ ಮನೆಗೆ ಬರುವ ಸೊಸೆಗೆ, ಇದೇ ಬಂಗಾರದಿಂದ ತಾಳಿ ಮಾಡಿಸಿ ಕಟ್ಟುತ್ತಾರೆ. ಸಿದ್ಧವಾದ ಗುಂಡಿಯಲ್ಲಿ ಹೆಣವನ್ನು ಇಟ್ಟು ಸಿದಿಗೆ ಅಥವಾ ಚಟ್ಟವನ್ನು ಎರಡು ತುಂಡು ಮಾಡಿ ಎರಡು ದಿಕ್ಕಿಗೆ ಎಸೆಯುತ್ತಾರೆ. ಸತ್ತವರು ವಿವಾಹಿತರಾದರೆ ಅಂಗಾತ ವಾಗಿಯೂ, ಅವಿವಾಹಿತವಾದರೆ ಬೋರಲಾಗಿಯೂ ಹೆಣ ಮಲಗಿಸಿ, ತಂಗಟೆ ಸೊಪ್ಪು ಮೊದಲು ಹಾಕಿ, ನಂತರ ಹತ್ತಿರದ ಸಂಬಂಧಿಕರಿಂದ ಮಣ್ಣು ಹಾಕಿಸುತ್ತಾರೆ. ಆ ಮೇಲೆ ಮಸಣಕ್ಕೆ ಬಂದವರೆಲ್ಲರೂ ಮಣ್ಣನ್ನು ಹಾಕಿ ಮುಚ್ಚುತ್ತಾರೆ. ಯಾವ ವ್ಯಕ್ತಿ ಪುಣ್ಯವಂತನೋ ಆತನ ಗುಡ್ಡೆಯ ಮಣ್ಣು ಸಹ, ಗುಂಡಿ ಮುಚ್ಚಿದ ಮೇಲೆ ಉಬ್ಬಿರುತ್ತದೆ ಅಥವಾ ಹೆಚ್ಚಾಗಿರುತ್ತದೆ ಎಂಬ ನಂಬಿಕೆ ಈ ಎರಡು ಜನಾಂಗದಲ್ಲಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಸತ್ತ ವ್ಯಕ್ತಿಯನ್ನು ಹೂಳುವುದೇ ಹೆಚ್ಚು; ಆದರೆ ಬಾಣಂತಿ, ತೊನ್ನು, ಕಾಯಿಲೆ ಬಿದ್ದವರು, ಅನುಮಾನಾಸ್ಪದವಾದ ಸಾವುಗಳು ಸಂಭವಿಸಿದಲ್ಲಿ ಮಾತ್ರ ಹೆಣವನ್ನು ಸುಡುತ್ತಾರೆ.

ಮಣ್ಣು ಮುಚ್ಚಿದ ಮೇಲೆ ಗುಡ್ಡೆಯ ಮೇಲೆ ಮುಳ್ಳು ರೆಂಬೆಯನ್ನಿಟ್ಟು, ತಲೆ ಮತ್ತು ಕಾಲು ಭಾಗಕ್ಕೆ

ಭಾರವಾದ ಎರಡು ಕಲ್ಲುಗಳನ್ನಿಟ್ಟು ಮುಚ್ಚುತ್ತಾರೆ. ಹಿಂಡೆ ಕೂಳು ಹೊತ್ತು ತಂದ ಮಗ ಅಥವಾ ಮೊಮ್ಮಗ ಒಂದು ಕುಂಭದಲ್ಲಿ ನೀರು ತುಂಬಿ ಎಡಗಡೆ ಹೆಗಲ ಮೇಲಿಟ್ಟುಕೊಂಡು ಸಮಾಧಿಯ ಸುತ್ತ ಮೂರು ಸುತ್ತು ಬರುವಾಗ ಪ್ರತಿಯೊಂದು ಸುತ್ತಿಗೂ ಒಂದು ಸಲ ಕಲ್ಲಿನಿಂದ ಕುಂಭಕ್ಕೆ ಸಣ್ಣ ತೂತು ಮಾಡುತ್ತಾರೆ. ಹೀಗೆ ಮೂರು ಸುತ್ತು ಬಂದು, ಕಲ್ಲಿನಿಂದ ಕುಂಭಕ್ಕೆ ಮೂರು ತೂತುಗಳನ್ನು ಮಾಡಿದ ನಂತರ ಕುಂಭವನ್ನು ಹೊತ್ತ ಮಗ ಅಥವಾ ಮೊಮ್ಮಗ ಆ ಕುಂಭವನ್ನು ಹಿಂದಕ್ಕೆ ಕೈ ಬಿಟ್ಟು ತಿರುಗಿ ನೋಡದೆ ಕರಿಕಂಬಳಿ ಹೊದ್ದು ಕೊಂಡು, ರಂಡೆಯಾಗಿರುವ ಮುದುಕಿಯ ಜೊತೆಗೆ ಮನೆಗೆ ಬರುತ್ತಾನೆ. ಮಸಣದಲ್ಲಿ ಹೆಣಕ್ಕೆ ಮಣ್ಣು ಕೊಟ್ಟವರು ಹತ್ತಿರದ ಹಳ್ಳ, ನದಿ, ಬಾವಿ, ಕೆರೆಗಳಿಗೆ ಹೋಗಿ ಕೈಕಾಲು ಮುಖ ತೊಳೆದುಕೊಡು ಈಶ್ವರ ಅಥವಾ ಹನುಮಂತನ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಮಾಡಿ ಸತ್ತ ವ್ಯಕ್ತಿಯ ಮನೆಯ ದೀಪ ನೋಡಿ ಯಾರಿಗೂ ಹೇಳದಂತೆ ಅವರವರ ಮನೆಗೆ ಹೋಗುತ್ತಾರೆ.

೬.೧.೧. **ಮೂರು ದಿನದ ಕರ್ಮ** : ಶವ-ಸಂಸ್ಕಾರವಾಗಿ ಮೂರನೆ ದಿನದಲ್ಲಿ ದಿನ ಕರ್ಮ ಅಥವಾ ‘ಕೂಳು’ ಹಾಕುವ ಪದ್ಧತಿ ಮ್ಯಾಸಬೇಡರಲ್ಲಿದೆ. ಮೂರನೆ ದಿನದಲ್ಲಿ ಗುಡ್ಡೆಯ ಹತ್ತಿರ ಹೋಗಿ ಹೊಸ ಮಡಿಕೆಯಲ್ಲಿ ಅನ್ನ ಬೇಯಿಸಿ ಎಕ್ಕೆ ಎಲೆಯಲ್ಲಿ ಗುಡ್ಡೆ ಸುತ್ತ ಅನ್ನ ಇಡುತ್ತಾರೆ. ಆಗ ಕಾಗೆಗಳು ಬಂದು ಎಕ್ಕೆ ಎಲೆಯ ಅನ್ನ ಮುಟ್ಟಿದರೆ ‘ಸತ್ತವರಿಗೆ ಮೋಕ್ಷ’ ಎಂಬ ನಂಬಿಕೆ ಇದೆ. ಈ ಕಾರ್ಯವನ್ನು ‘ಗುಡ್ಡೆ ತಣ್ಣಗೆ’ ಮಾಡುವುದು ಎಂದು ಕರೆಯುತ್ತಾರೆ. ಕಾಗೆ ಅನ್ನ ಮುಟ್ಟಿದ ಬಳಿಕ ಮನೆಗೆ ಬಂದು ಹಿಂಡೆ ಕೂಳು ಹೊತ್ತ ವ್ಯಕ್ತಿಯ ಕೇಶ ಮುಂಡನೆ ಮಾಡಿಸುತ್ತಾರೆ. ಇದಕ್ಕೆ ‘ತಲೆಗೊವಿ ತಿವಿಯುವುದು’ ಎಂದು ಕರೆಯುತ್ತಾರೆ. ಈ ವ್ಯಕ್ತಿಗೆ ಸೋದರಮಾವ ಬಟ್ಟೆ ತರುತ್ತಾನೆ. ಸತ್ತ ವ್ಯಕ್ತಿಯ ‘ಕರಿ’ಯನ್ನು ತೀರಿಸುವ ಸಲುವಾಗಿ “ಯಾವ ಸ್ಥಳದಲ್ಲಿ ವ್ಯಕ್ತಿಯು ನಿಧನವಾದನೋ ಆ ಜಾಗದಲ್ಲಿ ಒಂದು ಟಗರು ಮರಿಯನ್ನು ಬಲಿ ಮಾಡುವ ಕರ್ಮಕ್ಕೆ ‘ಕರಿ’ಯೆಂದು ಹೆಸರು. ಅದೇ ಮಾಂಸದಿಂದ ಮನೆ ಮಂದಿಯೆಲ್ಲಾ ಅಡುಗೆ ಮಾಡಿ ಉಣ್ಣುತ್ತಾರೆ. ತೀರಾ ಬಡವರಾದವರು ಕಟುಕನಿಂದ ಟಗರಿನ ತಲೆ ಬುರುಡೆಯನ್ನು ಕೊಂಡುತಂದಾದರೂ ‘ಕರಿ’ ತೀರಿಸುತ್ತಾರೆ. ಕರಿ ತೀರಿಸುವ ಕರ್ಮ ಮುಗಿಯುವವರೆಗೆ ಅನ್ಯರಿಗೆ ಆ ಮನೆಗೆ ಪ್ರವೇಶವಿರುವುದಿಲ್ಲ”.[೫] ಈ ಮೂರು ದಿನದ ಕರ್ಮದಲ್ಲಿ ಹಿಂಡೆ ಕೂಳು ಕಲೆತವರು ಮಾತ್ರ ಭಾಗವಹಿಸುತ್ತಾರೆ. ಆದರೆ ಚಳ್ಳಕೆರೆ ತಾಲ್ಲೂಕು ವಡೇರಹಳ್ಳಿ ಗ್ರಾಮದ ಮ್ಯಾಸಬೇಡರು ಮತ್ತು ಹಟ್ಟಿಗೊಲ್ಲರು; ಸಾಣೀಕೆರೆ ಗ್ರಾಮದ ಮಂದಲವರು ಬೆಡಗಿನ ಬೇಡರು ಮತ್ತು ‘ಸನ್ನರ’ ಬೆಡಗಿನ ಕಾಡುಗೊಲ್ಲರ ಮನೆಗಳಲ್ಲಿ ಯಾರಾದರೂ ವ್ಯಕ್ತಿ ಸತ್ತಾಗ ತಿಥಿ ಕರ್ಮಗಳಲ್ಲಿ ಯಾವ ಭೇದ-ಭಾವವಿಲ್ಲದೆ ಊಟಮಾಡುತ್ತಾರಂತೆ. ಹಿರಿಯ ತಲೆಮಾರಿನ ಕೊನೆಯ ವ್ಯಕ್ತಿ ಮರಣ ಹೊಂದಿದರೆ ಹಿರಿಯ ತಲೆ ಹೋಯ್ತು “ತಲೆ ಕೊಡಿ” ಎಂದು ಈ ಪ್ರದೇಶದ ಹರಿಜನರು ಭತ್ಯವೂ ಮತ್ತು ಬ್ಯಾಟೆಯನ್ನು ಮ್ಯಾಸಬೇಡರಿಂದ ಪಡೆಯುತ್ತಾರೆ. ಅದೆ ರೀತಿ ಚಳ್ಳಕೆರೆ ಪಟ್ಟಣದ ಮ್ಯಾಸಬೇಡರಲ್ಲಿ ಯಾರಾದರೂ ವ್ಯಕ್ತಿ ಮರಣ ಹೊಂದಿದಾಗ ಸತ್ತ ವ್ಯಕ್ತಿಯ ಸಮಾಧಿ ಅಥವಾ ಗುಡ್ಡೆಯ ಮೇಲೆ ಇಟ್ಟ ಮೂರು ದಿನದ ಹಿಂಡೆ ಕೂಳನ್ನು ಈ ಪ್ರದೇಶದ ಅಣ್ಣ ತಮ್ಮರೆಂದು ಹೇಳಿ ಕೊಳ್ಳುವ ಮಾದಿಗರು ತಿನ್ನುತ್ತಾರೆ.

ಮೂರು ದಿನದ ಕರ್ಮ ಆಚರಿಸುವಾಗ ಬಲಿ ಕೊಟ್ಟ ಟಗರು ಮರಿಯ ಗುಂಡಿಗೆ ಅಥವಾ 'ದೊಮ್ಮೆ' ಯನ್ನು ಸುಟ್ಟು ಮೂರು ತಂಗಟೆ ಕಡ್ಡಿಗೆ ಏರಿಸಿ ಅದೇ ದಿನ ಸಂಜೆ ಸತ್ತ ವ್ಯಕ್ತಿಯ ಸಮಾಧಿಯ ಹತ್ತಿರ ಹೋಗಿ ಸುಟ್ಟ ಮಾಂಸದ ತುಂಡು ಮತ್ತು ಮಾಂಸದ ಅಡಿಗೆಯನ್ನು ಎಡೆ ಹಾಕಿ ಪೂಜೆ ಮಾಡುತ್ತಾರೆ. ಆಗ ಹರಿಜನ ವ್ಯಕ್ತಿಗಳು ಸತ್ತ ಗುಡ್ಡೆಯ ಮೇಲೆ ಒಂದು ಅಡಿಕೆ ಪಟ್ಟೆ ಹಾಕಿಕೊಂಡು ಅದರಲ್ಲಿ ಮುದ್ದೆ, ಅನ್ನ ಹಾಗೂ ಮಾಂಸದ ಸಾರನ್ನು ಹಾಕಿಕೊಂಡು ತಿನ್ನುತ್ತಾರೆ. ನಂತರ ಅಲ್ಲಿ ಸೇರಿದ್ದ ಎಲ್ಲಾ ಮ್ಯಾಸಬೇಡರ ಅಣ್ಣ ತಮ್ಮಗಳು ಉಳಿದ ಅನ್ನ, ಸಾರು, ಮುದ್ದೆಯನ್ನು ಜೊತೆಗೆ ಕಲಸಿಕೊಂಡು ಎಲ್ಲರು ಹಂಚಿ ತಿನ್ನುತ್ತಾರೆ. ಇದನ್ನೇ "ಹಿಂಡೆ ಕೂಳು ಕಲೆತ ಅಣ್ಣ ತಮ್ಮಗಳು" ಎಂದು ಕರೆಯುತ್ತಾರೆ. ಸತ್ತ ವ್ಯಕ್ತಿಯ ಸಂಬಂಧಿಗಳು ಅದರಲ್ಲೂ ಒಂದೇ 'ಬೆಡಗಿನ' ಅಣ್ಣ ತಮ್ಮಗಳು ಮಾತ್ರ ಮೂರು ದಿನದ ಕೂಳನ್ನು ತಿನ್ನುತ್ತಾರೆ.

ಅದೇ ದಿನ ಹೆಣ್ಣು ಕೊಟ್ಟ ಬೀಗರು ಹೆಂಡತಿ ಸತ್ತ ವ್ಯಕ್ತಿಯನ್ನು ಊರ ಹೊರಗಿನ ತಂಗಟೆ ಗಿಡದ ಹತ್ತಿರ ಕುಳ್ಳಿರಿಸಿ ಎಡ ಭುಜದ ಮೇಲೆ ಬಿಳಿ ಹೊಸ ಬಟ್ಟೆ ಹಾಕಿ ಮಾತಾಡಿಸದಂತೆ ಹಾಗೆಯೇ ಹೋಗುತ್ತಾರೆ. ಅಂದೇ ಎಲ್ಲಾ ಅಣ್ಣ ತಮ್ಮಗಳು ಹಾಗೂ ಅವರಿಗೆ ಸಂಬಂಧಿಸಿದ ಬೆಡಗಿನ ಹರಿಜನರು ಮೂರು ದಿನಗಳ ಕರ್ಮ ಆಚರಿಸಿ ಉಳಿದ ಎಲ್ಲಾ ಮಾಂಸದ ಅಡುಗೆಯನ್ನು ಊಟ ಮಾಡಿ, ಹೆಚ್ಚಾದರೆ ನೆಲದಲ್ಲಿ ಗುಂಡಿ ತೋಡಿ ಮುಚ್ಚುತ್ತಾರೆ. ಒಂದೇ ದಿನದಲ್ಲಿ ಮನೆ ಬಳಿದುಕೊಂಡು, ಅಗಸರಿಂದ ಗೋಗಂಜು ಹಾಕಿಸಿ, ಮಡಿ ಬಟ್ಟೆಗಳನ್ನು ತೊಡುತ್ತಾರೆ. ಮರಣ ಹೊಂದಿದ ವ್ಯಕ್ತಿ ಅವಿವಾಹಿತರಾಗಿದ್ದರೆ ಗೋಣಿ ತಟ್ಟನಲ್ಲಿ ಹಿಡಿದುಕೊಂಡು ಹೋಗಿ ಮಣ್ಣು ಮಾಡುತ್ತಾರೆ. ಆದರೆ ದಿನ ಕರ್ಮ ಮಾಡುವುದಿಲ್ಲ. ಕೆಲವರು ಮೂರು ದಿನದಲ್ಲಿ ಗುಡ್ಡೆಯ ಹತ್ತಿರ ಹೋಗಿ ಹೊಸ ಮಣ್ಣಿನ ಕುಡಿಕೆಯಲ್ಲಿ ಹಾಲು ಮಾತ್ರ ಇಟ್ಟು ಬರುತ್ತಾರೆ.

೬.೧.೨. ದೊಡ್ಡ ದಿವಸ-ಸಮಾರಾಧನೆ : ವ್ಯಕ್ತಿ ಸತ್ತು ಒಂಬತ್ತು, ಹದಿನಾರು, ಇಪ್ಪತ್ತೊಂದು, ಇಲ್ಲವೇ ಮೂವತ್ತನೇ ದಿನದಲ್ಲಿ ದೊಡ್ಡ ದಿವಸ ಅಥವಾ ಕೈಲಾಸ ಸಮಾರಾಧನೆ ಕಾರ್ಯಕ್ರಮ ಇಟ್ಟುಕೊಳ್ಳುತ್ತಾರೆ. ಅಂದು ಎಲ್ಲಾ ಬಂಧು ಬಾಂಧವರು ಈ ಸಮಾರಾಧನೆಯಲ್ಲಿ ಭಾಗವಹಿಸುತ್ತಾರೆ. ಅಂದು ಮಾಂಸದ ಅಡುಗೆ ಮಾಡುವುದಿಲ್ಲ. ಸಿಹಿ ಅಡುಗೆ ಮಾಡಿರುತ್ತಾರೆ. ದೊಡ್ಡ ದಿವಸದ ದಿನ ಸತ್ತವರ ಹೆಸರಿನಲ್ಲಿ ಒಂದು ಮಣ್ಣಿನ ಮಗಿ ಅಥವಾ ಹಿತ್ತಾಳೆ ಚಂಬುವಿಗೆ ಹೊಸಬಟ್ಟೆ ಏರಿಸಿ, ಮಾಡಿದ ಅಡಿಗೆಯನ್ನು ಎಡೆ ಹಾಕುತ್ತಾರೆ. ಅದೇ ಸಂದರ್ಭದಲ್ಲಿ ಒಬ್ಬ ವಿಧವೆ ಅಥವಾ ವಯಸ್ಸಾದ 'ರಂಡೆ' ಸತ್ತ ವ್ಯಕ್ತಿಯ ಹೆಂಡತಿಯ 'ತಾಳಿ-ಬಳೆ' ತೆಗೆದು ಅವಳ ಕೈಗೆ ಕೊಟ್ಟು ನೀರು ತುಂಬಿಟ್ಟು ಚಂಬು ಅಥವಾ ಮಗಿಯಲ್ಲಿ ಹಾಕಿಸುತ್ತಾರೆ. ಇದನ್ನೇ "ತಾಳಿ ಬಳೆ ತೆಗೆದು ತಣ್ಣೀರಲ್ಲಿ ಹಾಕುವುದು"- ಎಂದು ದುಃಖದ ಸನ್ನಿವೇಶ ವನ್ನು ವ್ಯಕ್ತಪಡಿಸುತ್ತಾರೆ. ಮರುದಿನ ದಿವಸಕ್ಕೆ ಬಂದವರು ಅವಳಿಗೆ ಬಳೆ ತೊಡಿಸುತ್ತಾರೆ. ಮತ್ತೇ ಅವಳ ಜೀವನದಲ್ಲಿ ಎಂದಿಗೂ ಬಳೆ ತೊಡುವಂತಿಲ್ಲ. ಸತ್ತ ವ್ಯಕ್ತಿಯ ಜ್ಞಾಪಕಾರ್ಥವಾಗಿ ಪ್ರತಿವರ್ಷಕ್ಕೊಮ್ಮೆಯಾದರೂ ಪಿತೃಪಕ್ಷದಲ್ಲಿ 'ಹಿರಿಯರ ಹಬ್ಬ' ವನ್ನು ಆಚರಿಸುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಯುಗಾದಿ ಮತ್ತು ದಸರಾ ಹಬ್ಬದಲ್ಲಿ ವರ್ಷಕ್ಕೆರಡು ಸಲ ಹಿರಿಯರ ಹಬ್ಬವನ್ನು ಆಚರಿಸುತ್ತಾರೆ.

೬.೨. ಕಾಡುಗೊಲ್ಲರು

ಕಾಡುಗೊಲ್ಲರು ವ್ಯಕ್ತಿ ತೀರಿಹೋದ ತಕ್ಷಣ ಮನೆಯಿಂದ ಹೊರಗೆ ಹೆಣ ಇಡುತ್ತಾರೆ. ಮನೆಯ ಒಳಗಿದ್ದಾಗ ಮುಟ್ಟು ಇರುವುದಿಲ್ಲ. ಹೆಣ ಹೊರಗಿಟ್ಟ ತಕ್ಷಣ ಮುಟ್ಟು ಆರಂಭವಾಗುತ್ತದೆ. ನಂತರ ಕವಡಿ ಆಳುಗಳಿಗೆ (ಹರಿಜನರು) ಹಣ ಭತ್ಯೆವೂ ಕೊಟ್ಟು ಅವರ ಬಂಧು ಬಳಗಕ್ಕೆ ಹೇಳಿ ಕಳುಹಿಸುತ್ತಾರೆ. ಸತ್ತ ಸುದ್ದಿ ಮುಟ್ಟಿಸುವ ಕವಡಿ ಆಳುಗಳಿಗೂ ಮತ್ತು ಕಾಡಗೊಲ್ಲರಿಗೂ ಪುರಾತನ ಕಾಲದಿಂದಲೂ ಪರಸ್ಪರ ಸಂಬಂಧವಿದೆಯಂತೆ. ಸೂರ್ಯ ಮುಳುಗುವುದರೊಳಗಾಗಿ ಶವ ಸಂಸ್ಕಾರ ಮಾಡಬೇಕೆಂಬ ನಿಯಮ ಕಾಡುಗೊಲ್ಲರಲ್ಲಿದೆ. ಆಕಸ್ಮಿಕವಾಗಿ ಸೂರ್ಯ ಮುಳುಗುವುದರೊಳಗಾಗಿ ಶವ ಸಂಸ್ಕಾರ ಮಾಡಲಾಗದಿದ್ದರೆ ಅಥವಾ ಬಂಧು ಬಳಗದವರು ಬರುವುದಕ್ಕೆ ತಡವಾದರೆ ಆ ದಿನ ರಾತ್ರಿ ಹಟ್ಟಿಯಿಂದ ಹೊರಗೆ ಹೆಣ ಇಡುತ್ತಾರೆ. ದೇವರ ಪೂಜೆ ಮತ್ತು ಯಾವುದೇ ಶುಭ ಕಾರ್ಯವನ್ನು ಆ ದಿನ ಮಾಡುವಂತಿಲ್ಲ. ಕಾರಣ ಇಡೀ ಹಟ್ಟಿಯ ಎಲ್ಲಾ ಮನೆಗಳಲ್ಲಿ ನೆಲ ಕಾರಣೆ ಮಾಡಿಕೊಂಡು ಮನೆ ತೊಳೆದುಕೊಳ್ಳುತ್ತಾರೆ.

ಮರುದಿನ ಬೆಳಿಗ್ಗೆ ಶವ ಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ಕಾಡುಗೊಲ್ಲರಲ್ಲಿ ಯಾರಾದರೂ ಐದು ಜನ ಮಾತ್ರ ಹೆಣ ಮುಟ್ಟಿಕೊಳ್ಳುತ್ತಾರೆ. ಉಳಿದವರಾರೂ ಹೆಣ ಮುಟ್ಟುವುದಿಲ್ಲ. ಹೆಣಕ್ಕೆ ಸ್ನಾನ ಮಾಡಿಸುವಾಗ ಹಟ್ಟಿಯ ಪ್ರತಿಯೊಂದು ಮನೆಯಿಂದ ನೀರು ಕಾಯಿಸಿ ಹೆಣದ ಸ್ನಾನಕ್ಕೆ ನೀರು ತಂದು ಕೊಡುತ್ತಾರೆ. ಹೆಣ್ಣು ಸತ್ತರೆ ತೌರು ಮನೆಯವರು ಹೆಣಕ್ಕೆ ಬಟ್ಟೆ ತರುತ್ತಾರೆ. ಗಂಡು ಸತ್ತರೆ ಅವರ ಅಣ್ಣ ತಮ್ಮಗಳೇ ಹೆಣಕ್ಕೆ ಬಟ್ಟೆ ತರುತ್ತಾರೆ. ಈ ಬಟ್ಟೆ ಸಾಮಾನ್ಯವಾಗಿ ಬಿಳಿಯ ಬಣ್ಣದಾಗಿರುತ್ತದೆ. ಹೆಣಕ್ಕೆ ಹೊಸ ಬಟ್ಟೆ ಹಾಕಿ ಸಿಂಗರಿಸಿದ ನಂತರ ಗಂಡ ಸತ್ತಿದ್ದರೆ ಹೆಣದ ಜೊತೆಗೆ ಹೆಂಡತಿಯನ್ನು ಕುಳ್ಳಿರಿಸಿ ಹೊಸ ಬಟ್ಟೆ ಉಡಿಸಿ "ಉಡಿ ತುಂಬಿ" ಮುತ್ತೈದೆತನವನ್ನು ವೈಭವೀಕರಿಸುತ್ತಾರೆ. ನಂತರ ಕರಿ ಕಂಬಳಿ ಅಥವಾ ಸಿದಿಗೆ ಕಟ್ಟಿ ನಾಲ್ಕು ಜನ ರಕ್ತ ಸಂಬಂಧಿಗಳು ಮಸಣಕ್ಕೆ ಹೆಣವನ್ನು ಒಯ್ಯುತ್ತಾರೆ. ಹೊಸ ಮಣ್ಣಿನ ಮಡಿಕೆಯಲ್ಲಿ ಅಂಗೈಯಲ್ಲಿ ಮೂರು ಸ್ಯಾರೆ, ಮುಂಗೈಯಲ್ಲಿ ಮೂರು ಸ್ಯಾರೆ ಅಕ್ಕಿ ಹಾಕಿ ಕುರುಳಿನಲ್ಲಿ ಬೇಯಿಸಿದ ಅನ್ನ-ಮೊಸರಿನ, ಹಿಂಡೆ ಕೂಳಿನ ಮಡಿಕೆ ಮತ್ತು ಒಂದು ಕುಂಭ ನೀರನ್ನು ಹಿಡಿದುಕೊಂಡು ಸತ್ತ ವ್ಯಕ್ತಿಯ ಹಿರಿಯ ಮಗ ಅಥವಾ ಮೊಮ್ಮಗ ಹೆಣದ ಮುಂದೆ ಸಾಗುತ್ತಾನೆ. ಶವಯಾತ್ರೆಯಲ್ಲಿ ಎಲೆ ಅಡಿಕೆ ಮಂಡಕ್ಕಿ ಕೆಲವರು ದುಡ್ಡನ್ನು ಹೆಣದ ಹಿಂದೆ ತೂರುತ್ತಾ ಹೋಗುತ್ತಾರೆ.

ಸ್ಮಶಾನವು ಸ್ವಲ್ಪ ಹತ್ತಿರವಿರುವಾಗ ಹಿಂಡೆ ಕೂಳಿನ ಮಡಿಕೆಯನ್ನು ಹಸಿರು ಗಿಡಕಿಟ್ಟು ಹೆಣ ಹೊತ್ತ ವ್ಯಕ್ತಿಗಳು ಹಿಂದು ಮುಂದಾಗುತ್ತಾರೆ. ಆಗ ಹಿಂಡೆ ಕೂಳು ಹಿಡಿದ ವ್ಯಕ್ತಿ ಬರಿ ಕುಂಭದಲ್ಲಿ ನೀರು ಹೊತ್ತು ಮುಂದೆ ಸಾಗುತ್ತಾನೆ. ಸಾಮಾನ್ಯವಾಗಿ ಕಾಡುಗೊಲ್ಲರಲ್ಲಿ ಗುಂಡಿ ತೆಗೆಯುವುದು ರಕ್ತ ಸಂಬಂಧಿಗಳೇ. ಮ್ಯಾಸಬೇಡ ರಂತೆ ಹರಿಜನರಿಂದ ಗುಂಡಿ ತೆಗೆಸುವುದಿಲ್ಲ. ಸಿದ್ಧವಾದ ಗುಂಡಿಯಲ್ಲಿ ದಕ್ಷಿಣೋತ್ತರವಾಗಿ ಹೆಣವನ್ನು ಮಲಗಿಸಿ, ಗಂಡಾದರೆ ಉಡುದಾರವನ್ನು ಕಿತ್ತು ಬೆತ್ತಲೆಯಲ್ಲಿ ಮಲಗಿಸುತ್ತಾರೆ. ಹೆಣ್ಣಾದರೆ ಸೀರೆಯ ಅಂಚು ಹರಿದು ಮಲಗಿ ಸುತ್ತಾರೆ. ಸ್ಮಶಾನದಲ್ಲಿದ್ದ ಜನರೆಲ್ಲರೂ ಶವದ ಮೇಲೆ ಒಂದೊಂದು ಹಿಡಿ ಮಣ್ಣನ್ನು ಹಾಕುತ್ತಾರೆ. ನಂತರ ಸಲಿಕೆಯಿಂದ ಒಂದೇ ಕಡೆ ಮಣ್ಣು ಬರುವಂತೆ ಎಳೆದು ಗುಂಡಿಯನ್ನು ಮುಚ್ಚುತ್ತಾರೆ. ನಂತರ ಹಿಂಡೆ ಕೂಳು

ಹಿಡಿದಿದ್ದ ವ್ಯಕ್ತಿ ನೀರು ತುಂಬಿದ ಕುಂಭವನ್ನು ಹೆಗಲ ಮೇಲಿಟ್ಟು ಕೊಂಡು ಸಮಾಧಿಯ ಸುತ್ತ ಮೂರು ಸುತ್ತು ಬರುವಾಗ ಪ್ರತಿಯೊಂದು ಸುತ್ತಿಗೂ ಒಂದು ಸಲ ಕಲ್ಲಿನಿಂದ ಕುಂಭಕ್ಕೆ ಸಣ್ಣ ತೂತು ಮಾಡುತ್ತಾರೆ. ಹೀಗೆ ಮೂರು ಸುತ್ತು ಬಂದು ಕಲ್ಲಿನಿಂದ ಕುಂಭಕ್ಕೆ ಮೂರು ತೂತುಗಳನ್ನು ಮಾಡಿದ ನಂತರ ಕುಂಭವನ್ನು ಹೊತ್ತ ವ್ಯಕ್ತಿ, ಆ ಕುಂಭವನ್ನು ಹಿಂದಕ್ಕೆ ಕೈಬಿಟ್ಟು ತಿರುಗಿ ನೋಡದಂತೆ ಹಟ್ಟಿಯ ಕಡೆಗೆ ಹೋಗುತ್ತಾನೆ.

ಸ್ಮಶಾನದಲ್ಲಿ ಶವಕ್ಕೆ ಮಣ್ಣು ಮುಚ್ಚಿ ಕಲ್ಲು ಮುಳ್ಳುಗಳಿಂದ ಸಮಾಧಿಯನ್ನುಭದ್ರ ಪಡಿಸುತ್ತಾರೆ. ಗಂಡ ಸತ್ತರೆ ಅವನ ಹೆಂಡತಿಗೆ ಗುಡ್ಡೆಯ ಮೇಲೆ ಬಳೆ ಒಡೆದು ಕುಂಕುಮ ಅಳಿಸಿ ಹೂ ಕಿತ್ತು ಹಾಕುತ್ತಾರೆ. ಗಂಡ ಸತ್ತರೂ ಕಾಡುಗೊಲ್ಲರ ಹೆಂಗಸರು ವಿಧವೆಯರಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಒಮ್ಮೆ ಸುತ್ತಾಡಿ ಬಂದರೆ ಸತ್ಯ ಸಂಗತಿ ಬಯಲಾಗುತ್ತದೆ. ಕಾಡುಗೊಲ್ಲರ ಹೆಂಗಸರು ಕೂಡ ಗಂಡ ಸತ್ತರೆ ಅವನ ಸಮಾಧಿಯ ಮೇಲೆ ಬಳೆ ಒಡೆದು, ಕುಂಕುಮ ಅಳಿಸಿ, ಹೂ ಕಿತ್ತು ಹಾಕುತ್ತಾರೆ. ಅಂದಿನಿಂದ ಆ ಹೆಣ್ಣುಮಗಳು ಯಾವುದೇ ಮದುವೆ ಮಂಗಳ ಕಾರ್ಯಗಳಲ್ಲಿ ಕಳಸ ಕನ್ನಡಿ ಹಿಡಿಯುವಂತಿಲ್ಲ. ಕೆಲವೊಂದು ಪ್ರದೇಶದ ಹೆಣ್ಣು ಮಕ್ಕಳು ಕರಿಮಣಿ ಇಲ್ಲವೆ ದಾರವನ್ನು ಮಾತ್ರ ಕೊರಳಲ್ಲಿ ಕಟ್ಟಿಕೊಳ್ಳುತ್ತಾರೆ. ಆದರೆ ಅದರಲ್ಲಿ ತಾಳಿ ಇರುವುದಿಲ್ಲ. ಸಂಪ್ರದಾಯಸ್ಥ ಕಾಡುಗೊಲ್ಲರ ಹೆಣ್ಣು ಮಕ್ಕಳು ಗಂಡ ಸತ್ತ ನಂತರ ಕುಂಕುಮ ಹಚ್ಚಿಕೊಳ್ಳುವುದಾಗಲಿ, ಆಭರಣ ಧರಿಸುವುದಾಗಲಿ ಮಾಡುವುದಿಲ್ಲ. ಕಾಡುಗೊಲ್ಲರಲ್ಲೂ ಕೂಡ ಮ್ಯಾಸಬೇಡರಂತೆ ಗಂಡ ಸತ್ತ ನಂತರ ಹೆಣ್ಣು ವಿಧವೆಯೇ ಹೊರತು ಮುತ್ತೈದೆಯಲ್ಲ. ಶ್ರೀ ಕೃಷ್ಣ ಪರಮಾತ್ಮನೇ ನಮ್ಮ ನಿಜವಾದ ಗಂಡ ಎಂಬ ನಂಬಿಕೆಯಿರುವುದರಿಂದ "ಗೊಲ್ಲ ಕಡಗ" ಅಥವಾ "ಕೃಷ್ಣ ಕಡಗ"ವನ್ನು ಮಾತ್ರ ಕಾಡುಗೊಲ್ಲರ ಹೆಣ್ಣು ಮಕ್ಕಳು ಜೀವಂತ ಇರುವ ತನಕ ತೆಗೆಯುವುದಿಲ್ಲ. ಈ ಕಟ್ಟು ಕತೆಯನ್ನೇ ಆಧಾರವಾಗಿಟ್ಟುಕೊಂಡು ಕಾಡುಗೊಲ್ಲರಲ್ಲಿ ಗಂಡ ಸತ್ತರೂ ತಾಳಿ ಬಳೆ ತೆಗೆಯುವುದಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾದ ಸಂಗತಿ.

ಶವ ಸಂಸ್ಕಾರ ಮಾಡಿದ ನಂತರ ಯಾವುದಾದರೂ ಕೆರೆ, ಹಳ್ಳ, ಬಾವಿಗಳಲ್ಲಿ ಕೈಕಾಲು ಮುಖ ತೊಳೆದು ಕೊಂಡು ಹಟ್ಟಿಯ ಮೂಡಲ ಹುದಿಯ ಬಳಿಗೆ ಬರುತ್ತಾರೆ. ಅಲ್ಲಿ ಒಂದು ಕುಪ್ಪೆ ಸಗಣಿಯಲ್ಲಿ ಎಕ್ಕೆ ಅಥವಾ ಕಳ್ಳಿ ಕೊನೆಯನ್ನು ಇಟ್ಟು ಸತ್ತ ವ್ಯಕ್ತಿಯ ಮನೆಯ ಹತ್ತಿರ ಹೋಗಿ ದೀಪ ನೋಡಿ, ಹಟ್ಟಿಯ ದೇವರ ಗುಬ್ಬಕ್ಕೆ ಕೈ ಮುಗಿದು ಅವರವರ ಮನೆಗೆ ಹೋಗುತ್ತಾರೆ. ಆದರೆ ಹೆಣ ಹೊತ್ತ ನಾಲ್ಕು ಜನ, ಹಿಂಡೆ ಕೂಳು ಹಿಡಿದಿದ್ದ ಒಬ್ಬ ವ್ಯಕ್ತಿ, ಒಟ್ಟು ಐದು ಜನರು ಮಾತ್ರ ಹಟ್ಟಿಯಿಂದ ಹೊರಗಿರುತ್ತಾರೆ. ಮೂರು ದಿನಗಳ ಕಾಲ ಅನ್ನ ನೀರು ಹಟ್ಟಿಯಿಂದ ತೆಗೆದುಕೊಂಡು ಹೋಗಿ ಕೊಟ್ಟು ಬರುತ್ತಾರೆ. ಮೂರು ದಿನದ ಕರ್ಮ ತೀರಿಸುವಾಗ ಬೆಳಗಿನ ಜಾವ ಹಟ್ಟಿಯ ಹೊರಗೆ ಐದು ಜನರನ್ನು ಒನಕೆಯ ಮೇಲೆ ಕುಳ್ಳಿರಿಸಿ ಜಳಕ ಮಾಡಿಸುತ್ತಾರೆ. ನಂತರ ಒಬ್ಬ ವ್ಯಕ್ತಿಯನ್ನು ಮಾತ್ರ ಒನಕೆಯ ಮೇಲೆ ಕುಳ್ಳಿರಿಸಿ ಅವನ ಹೆಗಲಿಗೆ ಹರಳೆಣ್ಣೆಯನ್ನು ಅಚ್ಚಿ ಹೆಣ ಹೊತ್ತವರಲ್ಲಿ ಇನ್ನೊಬ್ಬ ಕೋಳಿಯ ಗರಿಯನ್ನು ತೆಗೆದುಕೊಂಡು ಹರಳೆಣ್ಣೆಯಲ್ಲಿ ಅದ್ದಿ ಒನಕೆಯ ಮೇಲೆ ಕುಳಿತವನ ಹೆಗಲನ್ನು ಆ ಕೋಳಿ ಗರಿಯಿಂದ ಸವರುತ್ತಾನೆ. ಆಗ ಒನಕೆಯ ಮೇಲೆ ಕುಳಿತಿದ್ದವನು "ಹೆಗಲು ಇಳಿಸಿ ಕೊಂಡೆ" ಎಂದು ಹೇಳಿ

ಒನಕೆಯನ್ನು ಬಿಟ್ಟು ಮೇಲೇಳುತ್ತಾನೆ. ಆಗ ಇನ್ನೊಬ್ಬ ವ್ಯಕ್ತಿ ಒನಕೆಯ ಮೇಲೆ ಕುಳಿತುಕೊಳ್ಳುತ್ತಾನೆ. ಮೊದಲನೆಯವನು ಹರಳೆಣ್ಣೆಯಲ್ಲಿ ಕೋಳಿಗರಿಯನ್ನು ಅದ್ದಿ ಒನಕೆ ಮೇಲೆ ಕುಳಿತವನ ಹೆಗಲ ಮೇಲೆ ಸವರುತ್ತಾನೆ. ಆಗ ಅವನು ಹೆಗಲು ಇಳಿಸಿ ಕೊಂಡೆ ಎಂದು ಹೇಳಿ ಒನಕೆಯನ್ನು ಬಿಟ್ಟು ಮೇಲೆಳುತ್ತಾನೆ. ಹೀಗೆ ಐದೂ ಜನ ವ್ಯಕ್ತಿಗಳು ಒನಕೆಯ ಮೇಲೆ ಕುಳಿತು ಕೊಂಡು ಕೋಳಿಗರಿಯಿಂದ ಹೆಗಲು ಇಳಿಸಿಕೊಂಡು, ಅಗಸರು ಕೊಟ್ಟ ಮಡಿ ಬಟ್ಟೆಗಳನ್ನು ಧರಿಸಿ ಹಟ್ಟಿಯನ್ನು ಪ್ರವೇಶಿಸುತ್ತಾರೆ. ಮೂರು ದಿನದ ಕೂಳು ಹಾಕಿಕೊಂಡು ಬರಲಿಕ್ಕೆ ಮನೆಯ ಮುಂದೆ ಅನ್ನ ಬೇಯಿಸಿ ಮೊಸರನ್ನು ಕಲಿಸಿ ಬಿದಿರಿನ ಹೊಸ ಮೊರದಲ್ಲಿ ಎಲೆ, ಅಡಿಕೆ, ಬಾಳೆಹಣ್ಣು ಇಟ್ಟುಕೊಂಡು ಗುಡ್ಡೆಯ ಹತ್ತಿರ ಹೋಗಿ ಗುಡ್ಡೆಗೆ ಪೂಜೆ ಮಾಡಿ ಸ್ವಲ್ಪ ನೀರನ್ನು ನೆಲಕ್ಕೆ ಚಿಮುಕಿಸಿ ಅದರ ಮೇಲೆ ಅನ್ನ ಮೊಸರುಗಳಿದ್ದ ಮೊರವನ್ನಿಟ್ಟು ಸ್ವಲ್ಪ ದೂರ ಹೋಗಿ ಕುಳಿತುಕೊಳ್ಳುತ್ತಾರೆ. ಆಗ ಕಾಗೆ ಬಂದು ಮುಟ್ಟಿದರೆ ಸತ್ತ ವ್ಯಕ್ತಿಗೆ ಮುಕ್ತಿ ಎಂಬ ನಂಬಿಕೆ ಇವರಲ್ಲಿದೆ. ಆಕಸ್ಮಿಕವಾಗಿ ಕಾಗೆ ಮುಟ್ಟದಿದ್ದರೆ, ಮತ್ತೊಬ್ಬ ವ್ಯಕ್ತಿ ಎದ್ದು ಹೋಗಿ ಒಂದು ಗೇಣಿನಷ್ಟು ದೂರದಲ್ಲಿ ನೆಲಕ್ಕೆ ನೀರು ಚಿಮುಕಿಸಿ ಮೊರವಿಟ್ಟ ಸ್ಥಳವನ್ನು ಬದಲಿಸಿ ಬರುತ್ತಾನೆ. ಆಗಲೂ ಕಾಗೆ ಬಂದು ಮುಟ್ಟದಿದ್ದರೆ ಸತ್ತ ವ್ಯಕ್ತಿಯ ಯಾವನೋ ಒಬ್ಬ ಸಂಬಂಧಿಕ ಬಂದಿಲ್ಲವೆಂದು ತಿಳಿದು ಕಾಗೆಗಳು ಆ ಸಂಬಂಧಿಕನಿರುವ ದಿಕ್ಕಿಗೆ ಹಾರಿಹೋಗುವುದನ್ನು ಕಂಡು ಮತ್ತೆ ಕಾಗೆಗಳು ಮುಟ್ಟಲಾರವೆಂದು ತಿಳಿದು ಯಾವುದಾದರೂ ಎತ್ತಿನ ಬಾಯಿಗೆ ಕೊಡುತ್ತಾರೆ. ಇಲ್ಲವಾದರೆ ಆ ಅನ್ನವನ್ನು ತೆಗೆದುಕೊಂಡು ಹೋಗಿ ಹತ್ತಿರ ದಲ್ಲಿರುವ ಯಾವುದಾದರೂ ಕೆರೆ, ಹಳ್ಳ, ನದಿಗೆ ಬಿಟ್ಟು ಗಂಗೆ ಕಾಣಿಸುತ್ತಾರೆ. ಹೀಗೆ ಕಾಗೆ ಮುಟ್ಟದ ಕೂಳಿಗೆ "ಗಾಳಿಕೂಳಾಯ್ತು" ಅಂದರೆ ಮುಕ್ತಿ ಕಾಣಲಿಲ್ಲವೆಂದು ಕಾಡುಗೊಲ್ಲರು ಬಲವಾಗಿ ನಂಬುತ್ತಾರೆ.

ವ್ಯಕ್ತಿ ಸತ್ತ ಇಪ್ಪತ್ತೊಂದು ದಿನ ಅಥವಾ ಒಂದು ತಿಂಗಳಲ್ಲಿ ದೊಡ್ಡದಿವಸ ಅಥವಾ ಕೈಲಾಸ ಸಮಾರಾಧನೆ ಮಾಡುತ್ತಾರೆ. ಆ ದಿನದಲ್ಲಿ ಯಾರಾದರು ಒಬ್ಬ ವ್ಯಕ್ತಿ ನದಿ, ಹಳ್ಳ, ಕೆರೆ, ಬಾವಿಗಳ ಹತ್ತಿರ ಹೋಗಿ ಕಣ್ಣು ಮುಚ್ಚಿಕೊಂಡು ನೀರಿನಲ್ಲಿ ಮುಳುಗಿ ತಳದಲ್ಲಿರುವ ಒಂದು ಕಲ್ಲನ್ನು ಹಿಡಿದು ಮೇಲೆ ಬರುತ್ತಾನೆ. ಅವನು ತಂದ ಕಲ್ಲನ್ನು ಗುಡ್ಡೆಯ ಮೇಲಿಟ್ಟು, ನೂರೊಂದು ಕಣಗಲ ಹೂ ಮತ್ತು ನೂರೊಂದು ಕುಡಿಕೆ ನೀರಿನಿಂದ ಆ ಕಲ್ಲಿಗೆ ಅಥವಾ ಬೆನವಗೆ ಪೂಜೆ ಮಾಡಿ ಎಡೆ ಹಾಕಿ ಸಮಾಧಿ ಹತ್ತಿರ ಬಂದಿದ್ದ ಎಲ್ಲಾ ಸಂಬಂಧಿಕರು ಆ ಬೆನವಗೆ ಕಾಯಿ ಹೊಡೆಯುತ್ತಾರೆ. ನಂತರ ಇದೇ ಬೆನವ ಮತ್ತು ಸ್ವಲ್ಪ ಮಣ್ಣನ್ನು ತೆಗೆದುಕೊಂಡು ಹೋಗಿ ತಮ್ಮ ಹೊಲ ಗದ್ದೆಯಲ್ಲಿ ಬೆಳದಿದ್ದ ಬೇವಿನಮರ, ಜಂಬಿಮರ ಮೊದಲಾದ ಗಿಡದ ಬುಡದಲ್ಲಿ ಇಟ್ಟು ಪ್ರತಿ ವರ್ಷ ಹಿರಿಯರ ಹಬ್ಬದಲ್ಲಿ ಪೂಜೆ ಮಾಡಿಕೊಂಡು ಬರುತ್ತಾರೆ. ಆದರೆ ಮ್ಯಾಸಬೇಡರಂತೆ ಕುಂಭ ಮತ್ತು ಚೆಂಬುಗಳನ್ನು ಇಟ್ಟು ಹಿರಿಯರ ಹಬ್ಬ ಮಾಡುವ ಪದ್ಧತಿ ಕಾಡುಗೊಲ್ಲರಲ್ಲಿಲ್ಲ. ಈ ಯಜಮಾನರ ಗುಡ್ಡೆಯ ಹತ್ತಿರವಿರುವ ಬೆನವಗಳಿಗೆ ಹೊಸ ಬಟ್ಟೆ ಏರಿಸಿಕೊಂಡು ಪೂಜೆ ಮಾಡಿಕೊಂಡು ಬರುತ್ತಾರೆ. ಕಾಡುಗೊಲ್ಲರ ವ್ಯಕ್ತಿಯನ್ನು ಎಲ್ಲಯೇ ಮಣ್ಣು ಮಾಡಲಿ ಅಥವಾ ಸುಟ್ಟು ಬರಲಿ ಅವರ ಜ್ಞಾಪಕಾರ್ಥವಾಗಿ ತಮ್ಮ ಹೊಲ ಗದ್ದೆಗಳಲ್ಲಿ ಯಾವುದಾದರೂ ಮರದ ಬುಡದಲ್ಲಿ ಬೆನವಗಳನ್ನಿಟ್ಟು ಸಾಮೂಹಿಕವಾಗಿ ಪೂಜಿಸುವ ಪದ್ಧತಿ ಕಾಡುಗೊಲ್ಲರಲ್ಲಿದೆ.

ಹುಟ್ಟು, ಸಾವು, ಮುಟ್ಟು ಇವುಗಳನ್ನು ಸೂತಕವೆಂದು ಭಾವಿಸುವ ಕಾಡುಗೊಲ್ಲರು ಹುಟ್ಟು ಸಾವಿನಲ್ಲಾಗುವ

ಮುಟ್ಟು ಅಥವಾ ಸೂತಕಕ್ಕೆ ಕಾಡುಗೊಲ್ಲರು ಹೆದರುತ್ತಾರೆ. ಹೊಳಲ್ಕೆರೆ ತಾಲ್ಲೂಕು ಕೊಳಹಾಳು ಗ್ರಾಮದ ಗೊಲ್ಲರ ಹಟ್ಟಿಯಲ್ಲಿ ತುಂಬು ಗರ್ಭಿಣಿಯಾದ ಹೆಣ್ಣು ಹಟ್ಟಿಯಿಂದ ಹೊರಗೆ ಕಟ್ಟಿದ ಹೆರಿಗೆ ಗುಡಿಸಲಿನಲ್ಲಿ ಒಬ್ಬಳೆ ಹೆರಿಗೆ ಮಾಡಿಕೊಳ್ಳಬೇಕು. ಆಕಸ್ಮಿಕವಾಗಿ ಆ ಹೆಣ್ಣು ಮಗಳು ಸತ್ತು ಹೋದರೆ, ಕಾಡುಗೊಲ್ಲರು ಮುಟ್ಟುವುದಿಲ್ಲ. ಆ ಪ್ರದೇಶದಲ್ಲಿ ಇರುವ ಬೇಡರನ್ನು ಕರೆದು ಬೇಟೆ ಮತ್ತು ಭತ್ಯೆವನ್ನು ಕೊಟ್ಟು ಅವಳ ಶವ ಸಂಸ್ಕಾರ ಮಾಡಿಸುತ್ತಾರೆ. ಆಗ ಬೇಡರು ಸತ್ತ ಬಾಣಂತಿಯನ್ನು ಈಚಲ ಜಲ್ಲೆಯಲ್ಲಿ ಹಾಕಿಕೊಂಡು ಹಟ್ಟಿಯಿಂದ ದೂರ ಎಳೆದು ಕೊಂಡು ಹೋಗಿ ಸುಟ್ಟು ಬರುತ್ತಾರೆ. ಆ ಸಂದರ್ಭದಲ್ಲಿ ಕಾಡುಗೊಲ್ಲರು ದೂರ ನಿಂತು ನೋಡುತ್ತಿರುತ್ತಾರೆ. ಆದರೆ ಅವರ ನೆರಳು ಸಹ ಬೀಳಿಸಿಕೊಳ್ಳುವುದಿಲ್ಲ. ನಂತರ ಸತ್ತ ಹೆಂಗಸಿನ ಗಂಡ ಅಲ್ಲಿಂದಲೇ ಐದಾರು ಪುಣ್ಯ ಸ್ಥಳಗಳಿಗೆ ಹೋಗಿ ನದಿಯಲ್ಲಿ ಮುಳುಗಿ ಅವನು ಹಟ್ಟಿಗೆ ಬರುವ ದಿನ ಆ ಹೆಣ್ಣಿನ ದಿನಕರ್ಮಗಳನ್ನು ಕಾಡುಗೊಲ್ಲರು ಇಟ್ಟುಕೊಳ್ಳುತ್ತಾರೆ.

ಚಿತ್ರದುರ್ಗ ಜಿಲ್ಲೆ ಆರು ತಾಲ್ಲೂಕುಗಳನ್ನು ಒಳಗೊಂಡಿರುವುದರಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಶವ ಸಂಸ್ಕಾರ ಪದ್ಧತಿಯಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವೈವಿಧ್ಯತೆ ಕಂಡು ಬರುತ್ತದೆ. ಒಟ್ಟಾರೆ ಶವ ಸಂಸ್ಕಾರವೆಂದರೆ "ಸತ್ತ ವ್ಯಕ್ತಿಗೆ ಸದ್ಗತಿ" ಕಾಣಿಸುವುದೆಂದರ್ಥ.

ಅಡಿಟಿಪ್ಪಣಿಗಳು

೧. ಕೃ. ನಾರಯಣರಾವ್., 'ಸರ್ವಜ್ಞನ ವಚನಗಳು', ೧೯೯೯, ಪದ್ಯ-೯೦೭, ಪುಟ:೨೨೬

೨. ಡಾ.ತೀ.ನಂ. ಶಂಕರನಾರಯಣ, 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ೧೯೮೨, ಪುಟ:೧೫೦

೩. ಚ.ನ.ಶಂಕರರಾವ್., "ಸಮಾಜಶಾಸ್ತ್ರದ ಪ್ರಾಥಮಿಕ ತತ್ವಗಳು" ಭಾಗ-೪, ೧೯೯೨: ಪುಟ ೧೨,೧೩

೪. ಅದೇ, ಪುಟ : ೦೧.

೫. ಆರ್.ರಾಜಣ್ಣ 'ನಾಯಕ ಜನಾಂಗದ ಇತಿಹಾಸ', ೧೯೮೨, ಪುಟ:೪

ಅಧ್ಯಾಯ - ೫

ನಂಬಿಕೆಗಳು ಮತ್ತು ಆಚರಣೆಗಳು

೧. ಪ್ರಕೃತಿ ಆರಾಧನೆ

೨. ಧಾರ್ಮಿಕ ಕೇಂದ್ರಗಳು

೩. ಪೌಳಿ ಕಟ್ಟುವುದು

೪. ದೇವರು

೫. ಗಂಗೆ ಪೂಜೆ

೬. ಹಬ್ಬಗಳು

೭. ಜಾತ್ರೆಗಳು

೮. ಪೂಜಾರಿಗಳು

೯. ದಾಸಯ್ಯಗಳು

೧೦. ದೇವರೆತ್ತುಗಳು

೧೧. ಕಿಲಾರಿಗಳು

೫. ನಂಬಿಕೆಗಳು ಮತ್ತು ಆಚರಣೆಗಳು

ವ್ಯಕ್ತಿ ಹಾಗೂ ಸಮಾಜದ ಅಭಿವೃದ್ಧಿಗೆ ಪೂರಕವಾದ ಅಗೋಚರ ಶಕ್ತಿಯೇ ಧರ್ಮವಾಗಿದೆ. ಈ ಧರ್ಮವು ಸಮಾಜವನ್ನು ನಿಯಂತ್ರಿಸಿ ವ್ಯಕ್ತಿ ಹಾಗೂ ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುತ್ತದೆ. 'ಮನುಷ್ಯ ಕೇವಲ ಆಹಾರ ದಿಂದ ಬದುಕಲಾರ' ಎನ್ನುವ ಬೈಬಲ್‌ನ ವಾಕ್ಯದಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಬುಡಕಟ್ಟು ಸಮುದಾಯಗಳಿಗೆ ದೇವರು, ಧರ್ಮ, ಮತ್ತು ಆಧ್ಯಾತ್ಮಿಕ ಪ್ರವೃತ್ತಿಗಳೆಂದರೆ ಪಂಚಪ್ರಾಣ. ಪಶುಪಾಲನೆ ಮತ್ತು ಕೃಷಿ ಎರಡನ್ನೇ ನಂಬಿಕೊಂಡು ಬದುಕುವ ಈ ಜನಾಂಗಗಳು ಸರ್ವಚೇತನವಾದ ಮತ್ತು 'ಕುಲದೇವತಾವಾದ' ಪದ್ಧತಿಗೆ ಅಂಟಿಕೊಂಡವರು. ಪ್ರಕೃತಿ ಆರಾಧಕರಾದ ಇವರು ನಿಸರ್ಗದ ವಿವಿಧ ರೂಪಗಳನ್ನು ಆರಾಧಿಸುವ ಆಚರಣೆ ಪದ್ಧತಿ ಅಂದಿನ ಕಾಡಾಡಿ ಜನರ ಬದುಕಿಗೆ ಅನಿವಾರ್ಯವಾಗಿತ್ತು. ಮಾನವನನ್ನು ಸಾಮಾಜೀಕರಣಗೊಳಿಸಲು, ಆತ್ಮ ವಿಶ್ವಾಸವನ್ನು ಮೂಡಿಸಲು, ತನ್ನದೇ ಆದ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಧಾರ್ಮಿಕ ಸಂಸ್ಥೆಗಳು ಬಹು ಮುಖ್ಯ ಪಾತ್ರವಹಿಸುತ್ತವೆ.

ಮನುಷ್ಯ ತನ್ನೆಲ್ಲ ಪ್ರಯತ್ನಗಳನ್ನು ಮಾಡಿ ಗುರಿ ಮುಟ್ಟಲು ವಿಫಲನಾದಾಗ ಅವನನ್ನು ಸಮಾಧಾನ ಪಡಿಸಲು ಮತ ಧರ್ಮ ಬಹಳ ನೆರವು ನೀಡುತ್ತದೆ. ಡರ್ಖೀಮ್ ಹೇಳುವಂತೆ 'ಪವಿತ್ರ ಮತ್ತು ಅಪವಿತ್ರ ಎನ್ನುವ ಕಲ್ಪನೆಗಳು ಧರ್ಮದ ಕೇಂದ್ರ ಬಿಂದುಗಳೇ ಆಗಿವೆ' ಎಂಬಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಲ್ಲಿ ಅವರದೇ ಆದಂಥ ನಂಬಿಕೆಗಳು ಮತ್ತು ಆಚರಣೆ ಪದ್ಧತಿಗಳು ಬೆಳೆದು ಬಂದಿವೆ. ಪ್ರಕೃತಿ ಆರಾಧನೆ, ಧಾರ್ಮಿಕ ಕೇಂದ್ರಗಳು, ಪೌಳಿಕಟ್ಟುವುದು, ದೇವರು, ಗಂಗೆಪೂಜೆ, ಹಬ್ಬಗಳು, ಜಾತ್ರೆಗಳು, ದಾಸಯ್ಯಗಳು, ದೇವರೆತ್ತುಗಳು, ಕಿಲಾರಿಗಳು ಮೊದಲಾದ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆ ಪದ್ಧತಿಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಪ್ರಕೃತಿ ಆರಾಧನೆ

ಕಾಡಾಡಿಗಳಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ಪ್ರಕೃತಿ ಆರಾಧಕರು. ಗ್ರಾಮೀಣ ಸಂಸ್ಕೃತಿ ಮತ್ತು ಪರಿಸರದಿಂದ ದೂರವಾಗಿ ಪ್ರತ್ಯೇಕವಾದ 'ಹಟ್ಟಿ'ಗಳನ್ನು ಕಟ್ಟಿಕೊಂಡು ಬುಡಕಟ್ಟು ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಸರ್ವಚೇತನವಾದಿಗಳು. ಚಿತ್ರದುರ್ಗ ಜಿಲ್ಲೆಯ ಈ ಎರಡೂ ಬುಡಕಟ್ಟು ಜನಾಂಗ ವಾಸಿಸುವ ಪ್ರದೇಶಗಳು ಕೂಡ ಬೆಟ್ಟ, ಗುಡ್ಡ, ನದಿ, ಅರಣ್ಯ, ಹಳ್ಳ, ಕೊಳ್ಳ ಮೊದಲಾದ ದುರ್ಗಮ ಪ್ರದೇಶಗಳಲ್ಲಿ ಪ್ರಕೃತಿ

ಯೊಂದಿಗೆ ಹೊಂದಿಕೊಂಡು ಬದುಕುತ್ತಿದ್ದಾರೆ. ಪಶುಪಾಲನೆ ಮತ್ತು ವ್ಯವಸಾಯ ಎರಡನ್ನೇ ನಂಬಿಕೊಂಡು, ಪ್ರವೃತ್ತಿಗಾಗಿ ಬೇಟೆಯಾಡುವ ಈ ಜನಾಂಗಗಳು, ನಾಡಿನ ಸಂಸ್ಕೃತಿ ಮತ್ತು ಸಂಪ್ರದಾಯಗಳ ಪ್ರಭಾವ ಉಂಟಾಗಿದ್ದರೂ ಕಾಡಾಡಿ ಬದುಕಿನ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಕೈಬಿಟ್ಟಿಲ್ಲ.

ಹಬ್ಬ, ಜಾತ್ರೆ, ಉತ್ಸವ, ದೇವರು, ಧರ್ಮ, ಬೆಡಗು, ಬಳಿ, ಕುಲ, ಹೆಸರು ಮೊದಲಾದ ಅಂಶಗಳನ್ನು ಗಮನಿಸಿದರೆ ಮೂಲತಃ ಪ್ರಕೃತಿ ಆರಾಧನೆಯ ಜೊತೆಗೆ ಕಾಡಾಡಿ ಬದುಕಿನ ರೀತಿ ನೀತಿಗಳು ಇವರಲ್ಲಿ, ಎದ್ದು ಕಾಣುತ್ತವೆ. ಮ್ಯಾಸಬೇಡರಲ್ಲಿ ಬರುವ ಕಾವಲಪ್ಪ, ಗಿರಿಯಪ್ಪ, ಕಾಡಮ್ಮ, ಕಂಚವ್ವ, ಗಂಗಮ್ಮ, ಮೊದಲಾದ ಹೆಸರುಗಳು; ಮುಚ್ಚಲರು, ಎಮ್ಮೆಲರು, ಕಾವಲರು, ಗೋವಿನವರು, ಕುರಿಯವರು, ಮೇಕೆಲವರು, ಪಾಮುಡಲರು, ಗುಂಡೆತ್ಲರು, ಕರಿಬೇವಿನವರು, ಮಂದಲವರು, ಗೋಸಲರು, ದೊಡ್ಡೆತ್ತಿನವರು ಮೊದಲಾದ ಬೆಡಗುಗಳು. ಅದೇ ರೀತಿ ಕಾಡುಗೊಲ್ಲರಲ್ಲಿ ಬರುವ ಅಡವಪ್ಪ, ಕಲ್ಲಪ್ಪ, ಮುದಿಯಪ್ಪ, ಎಮ್ಮೆಪ್ಪ, ಮೊದಲಾದ ಹೆಸರುಗಳು; ಅಡವಿ, ಒನಕೆ, ಕೋಣ, ಕಲ್ಲಿ, ಚೀರ, ಪಲ್ಲೇರ, ಬಾಲೇನರ, ಮಾಸಿನರು, ಕಟ್ಟೆಗೇರು, ಕಾಳಿನರು, ಹೆಗ್ಗಣರು, ತೋಳನರು, ಮುದ್ದೆರು, ರಾಶಿನರು ಮೊದಲಾದ ಬೆಡಗುಗಳಲ್ಲಿಯೂ ಕೂಡ ಪ್ರಕೃತಿಗೆ ಸಂಬಂಧಿಸಿದ ಹೆಸರುಗಳನ್ನು ಗುರುತಿಸಬಹುದು. ಇವರು ಆರಾಧಿಸುವ ದೈವಗಳಾದ ಗೌರಸಮುದ್ರದ ಮಾರಮ್ಮ, ಜುಂಜಪ್ಪ, ಕ್ಯಾತಪ್ಪ, ನಂದಿಹಳ್ಳಿ ರಂಗಪ್ಪ, ಗಾದ್ರಿಪಾಲನಾಯಕನ ಮಿಂಚೇರಿ, ಮೊದಲಾದ ದೇವರುಗಳ ನೆಲೆ ಪ್ರಕೃತಿಯನ್ನು ಆಧಾರಿಸಿವೆ. ಈ ಎರಡು ಸಮುದಾಯಗಳು ಆಚರಿಸುವ ಗುಗ್ಗರಿಹಬ್ಬ, ನಾಗಪ್ಪನಹಬ್ಬ, ಕಾರಹಬ್ಬ, ದೀಪಾವಳಿ, ಗಿಡದದೇವರು, ಮಾರಮ್ಮನಹಬ್ಬ, ಹೆಡಿಗೆಯಾತ್ರೆ, ಹೊರಬೀಡು, ಚರಗಚೆಲ್ಲುವುದು, ರಾಶಿಪೂಜೆ, ಆಯುಧಪೂಜಾ, ಗಂಗೆಪೂಜೆ, ಕುರಿನೀರಿಗೆ ಹಾಕುವುದು, ಕುರಿತಿರುವುವದು, ಯುಗಾದಿ ಮೊದಲಾದ ಹಬ್ಬಗಳು ಮತ್ತು ಬಿತ್ತನೆ ಪ್ರಾರಂಭದಲ್ಲಿ ಬೀಜಗಳನ್ನು ಮೊದಲು ದೇವರಿಗೆ ಅರ್ಪಿಸಿ ಹೊಲಕ್ಕೆ ಬಿತ್ತುವುದು ಮೊದಲಾದ ಅಂಶಗಳನ್ನು ಗಮನಿಸಿದಾಗ ಈ ಸಮುದಾಯಗಳ ಸಂಸ್ಕೃತಿ ಮತ್ತು ಜೀವನ ವಿಧಾನಗಳಲ್ಲಿ ಪ್ರಾಕೃತಿಕ ಶಕ್ತಿಯ ಪ್ರಭಾವವನ್ನು ಕಾಣಬಹುದಾಗಿದೆ.

ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ವೇಷ-ಭೂಷಣ, ಆಹಾರ, ವಸತಿ, ವೃತ್ತಿ, ಬೆಡಗುಗಳು, ರಕ್ತಸಂಬಂಧ, ಕುಟುಂಬ ಮತ್ತು ನ್ಯಾಯಪದ್ಧತಿಗಳಲ್ಲಿ; ಸಂಸ್ಕಾರ ಮತ್ತು ಸಂಪ್ರದಾಯಗಳಾದ ಜನನ, ನಾಮಕರಣ, ಜವಳ, ಋತುಮತಿ, ವಿವಾಹ, ಶವಸಂಸ್ಕಾರ ಮೊದಲಾದ ಅಂಶಗಳಲ್ಲಿಯೂ ಕೂಡ ಪ್ರಕೃತಿಯ ಆರಾಧನ ಪದ್ಧತಿಗಳು ಕಂಡು ಬರುತ್ತವೆ. ಚಳ್ಳಕೆರೆ ತಾಲ್ಲೂಕು ಮುಮ್ಮಡಿಸಾಗರದ ಅಡ್ಡಟ್ಟಿ ಭೂತಪ್ಪ ಮತ್ತು ದೇವರಮರಿಕುಂಟೆ ಹತ್ತಿರ ನಾಗ್ತಿಹಳ್ಳಿ ಕಟ್ಟೆಯಲ್ಲಿ ಮ್ಯಾಸಬೇಡರು ನೆಲಸಿದಂಥ ಹೆಗ್ಗುರುತುಗಳು ಆ ಪ್ರದೇಶದಲ್ಲಿ ಕಂಡು ಬರುತ್ತವೆ. ಹೊಳಲ್ಕೆರೆ ತಾಲ್ಲೂಕು ಮಿಂಚೇರಿ ಅರಣ್ಯದಲ್ಲಿ ಗಾದರಿಪಾಲನಾಯಕ ದನಗಳ ಗೂಡು ತಿರುವಿಕೊಂಡು ದನಗಾಹಿಯಾಗಿದಿದ್ದು. ವರಗಲ್ಲು ಪಟ್ಟಣದ (ಚಳ್ಳಕೆರೆ), ನನ್ನಿವಾಳ ಗುಡ್ಡದ ಸುತ್ತ ಮುತ್ತ ಜಗಳೂರು ಪಾಪನಾಯಕ ಪಶುಪಾಲಕನಾಗಿದಿದ್ದು ಈ ಪ್ರದೇಶದಲ್ಲಿ ಕಂಡು ಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಬಹುಪಾಲು ಮ್ಯಾಸಬೇಡ ಮತ್ತು ಕಾಡುಗೊಲ್ಲರ 'ಹಟ್ಟಿ'ಗಳು ನಗರ ಮತ್ತು ಗ್ರಾಮೀಣ ಪ್ರದೇಶಗಳಿಂದ ಪ್ರತ್ಯೇಕವಾಗಿವೆ.

ತಮ್ಮ ದೇವರುಗಳನ್ನು ವಿಶೇಷ ಸಂದರ್ಭಗಳಲ್ಲಿ ಗಂಗೆಪೂಜೆಗೆ ತೆಗೆದು ಕೊಂಡು ಹೋಗುವ ರಾಮತೀರ್ಥ, ಹಾಲುರಾಮೇಶ್ವರ, ಕೂಡ್ಲಿ, ಮಿಂಚೇರಿ, ನೊಣಬೆ, ಸುಣ್ಣಗುಡಿಹಳ್ಳ, ವೇದಾವತಿ ನದಿ, ಜನಿಗೆಹಳ್ಳ, ದೊಡ್ಡಹಳ್ಳ, ಕಲ್ಲತ್ತಿಗಿರಿ, ಬುಗ್ಗುಹೊಳೆ, ಗಂಜಿಗುಂಟೆ ಹಳ್ಳ, ಗರ್ನಿಹಳ್ಳ, ಚನ್ನಹಗರಿನದಿ, ತಿರುವಿನಮಡು ಮೊದಲಾದ ಗಂಗಾ ಸ್ಥಳಗಳಿರುವುದು ಕೂಡ ಕಾಡು-ಮೇಡುಗಳಲ್ಲಿ. ಇವರು ತಮ್ಮ ದೇವಸ್ಥಾನ ಅಥವಾ ಗುಬ್ಬಗಳಿಗೆ ಬಳಸುವ ಹಂಚಿಹುಲ್ಲು, ಬಾದೆಹುಲ್ಲು, ಬಾಳೆಪಟ್ಟೆ, ಮುತ್ತುಗ ಮತ್ತು ಬೇಟೆ ಎಲೆಗಳು, ಕಾರೆಕಳ್ಳೆ, ಬಾರೆಕಳ್ಳೆ, ತರೇದಕಳ್ಳೆ, ಜಾಲಿಕಳ್ಳೆ, ಸೀಮೆಜಾಲಿ ಕಳ್ಳೆ, ತುಗ್ಗಲಿಕಟ್ಟಿಗೆ, ಲಕ್ಕಿಸೊಪ್ಪು, ಕಮರದನಾರು ಮೊದಲಾದ ವಸ್ತುಗಳು ಕೂಡ ಪಕೃತಿಯ ಸಂಕೇತಗಳಾಗಿವೆ. ಇವರು 'ಹಟ್ಟಿ'ಯಿಂದ ಹೊರಗೆ 'ಬೆರಗು' ಹಾಕಿಕೊಂಡು ಹಬ್ಬ ಮಾಡುವುದು, ಹೊಸದಾಗಿ ಬೆಳದ ದವಸ-ಧಾನ್ಯಗಳನ್ನು ಮೊದಲು ದೇವರಿಗೆ ಮೀಸಲು ಅರ್ಪಿಸಿ ನಂತರ ಅಡಿಗೆಗೆ ಬಳಸುವುದು. ಇವರ ದೇವರುಗಳಿಗೆ ವಿಶೇಷವಾಗಿ ಹಾಲು, ಮೊಸರು, ಮಜ್ಜಿಗೆ, ತುಪ್ಪ, ಬೆಣ್ಣೆ, ಬೆಲ್ಲ, ಬಾಳೆಹಣ್ಣು, ಅನ್ನ, ಹೊಂಬಾಳೆ, ಬೇಟೆಸೊಪ್ಪು, ಮುತ್ತುಗದ ಎಲೆ, ಕನಗಲ, ಎಕ್ಕೆ, ತಂಗಟೆ ಮೊದಲಾದ ವಸ್ತುಗಳು ಕೂಡ ಪ್ರಕೃತಿಯ ಆರಾಧನೆಯ ಸಂಕೇತಗಳಾಗಿವೆ.

ಮ್ಯಾಸಬೇಡ, ಕಾಡುಗೊಲ್ಲ, ಕುರುಬ, ಮತ್ತು ಒಕ್ಕಲಿಗರ ಸಂಪ್ರದಾಯ ಮತ್ತು ನಂಬಿಕೆಗಳು ಕಾಡಾಡಿ ಬದುಕನ್ನೇ ತೋರಿಸುತ್ತವೆ. ಪ್ರತಿಯೊಂದು ಧಾರ್ಮಿಕ ಕಾರ್ಯದಲ್ಲಿ ಈ ಎಲ್ಲಾ ಜನಾಂಗದವರು ಕರಿಕಂಬಳಿಗೆ ಬಹಳ ಮಹತ್ವ ಕೊಡುತ್ತಾರೆ. ಅಂದಿನ ಈ ಬುಡಕಟ್ಟು ಸಮಾಜಕ್ಕೆ ಕರಿಕಂಬಳಿ ಜೀವನಾಧಾರವಾಗಿತ್ತು. ಪ್ರಾಕೃತಿಕ ಶಕ್ತಿಗಳನ್ನೇ ನಂಬಿಕೊಂಡಿದ್ದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಜನಾಂಗದ ಪೂಜಾರಿ ಮತ್ತು ದಾಸಯ್ಯಗಳನ್ನೇ ಜೀವಂತ ದೇವರೆಂದು ಭಾವಿಸಿಕೊಂಡು ಧಾರ್ಮಿಕ ಕಾರ್ಯಗಳಲ್ಲಿ ಇವರಿಬ್ಬರಿಗೆ ವಿಶೇಷ ಮಹತ್ವ ಕೊಡುತ್ತಾರೆ. ದೇವರು 'ಕುರುಹು' ತೋರಿಸುವುದು 'ಹೂ' ಕೊಡುವುದು ಹಾಗೂ ದೇವರ ಪೂಜಾರಿ "ಗಣೆ ಊದಿ" ಕಣಿ ಹೇಳುವುದನ್ನು ಈ ಜನಾಂಗಗಳು ಬಲವಾಗಿ ನಂಬುತ್ತಾರೆ./ತಾವು, ವಾಸಿಸುವ ಗುಬ್ಬ, ಗುಡಿಸಲುಗಳಲ್ಲಿ, ಅವುಗಳಿಗೆ ಬಳಸಿದ ವಸ್ತುಗಳಲ್ಲಿ, ಹಟ್ಟಿಯ ಸುತ್ತ ಕಟ್ಟಿಕೊಂಡ ಮುಳ್ಳು ಬೇಲಿಗಳಲ್ಲಿ, ಆಹಾರಕ್ಕಾಗಿ ಬಳಸುವ ಪದಾರ್ಥಗಳಲ್ಲಿ ಕಾಡಾಡಿ ಬದುಕಿನ ಪ್ರಾಕೃತಿಕ ಅಂಶಗಳನ್ನು ಕಾಣಬಹುದಾಗಿದೆ. ಸೂರ್ಯ, ಚಂದ್ರ, ಮತ್ತು ಭೂದೇವಿಯರನ್ನು ನಂಬಿ ಬದುಕಿದ್ದ ಈ ಬುಡಕಟ್ಟು ಜನಾಂಗ ತಮ್ಮ ಹೊಲಗದ್ದೆಗಳಲ್ಲಿ ಬೆಳೆಯುವ ಬೆಳೆಗಳಿಗೆ ಯಾವುದೇ ರೀತಿಯ ತೊಂದರೆಗಳಾಗದಿರಲೆಂದು ಅಮವಾಸ್ಯೆ, ಹುಣ್ಣಿಮೆ ಮತ್ತು ಗ್ರಹಣಗಳ ದಿನ ಪರ್ವಕಾಲದಲ್ಲಿ ತಮ್ಮ ಹೊಲ ಗದ್ದೆಗಳಲ್ಲಿ 'ಮುಸರೆ' ಚೆಲ್ಲಿ ಬೆಕ್ಕಿನಸೋರೆ ಅಥವಾ ಬೆದರು ಬೊಂಬೆ ಇಟ್ಟು ಬರುವ ಪದ್ಧತಿಗಳಿವೆ. ತಾವು ವಾಸಿಸುವ ಹಟ್ಟಿಯ ಸುತ್ತ ಚರಗಚೆಲ್ಲುವುದು ಹೊರಬೀಡು ಹೋಗಿ ಬರುವುದು, ಮಾರಮ್ಮಗೆ ಬೇಟೆ ಕಡಿಯುವುದು, ಹಿರಿಯರ ಹಬ್ಬ ಆಚರಿಸುವುದು ಮೊದಲಾದ ಅಂಶಗಳನ್ನು ಗಮನಿಸಿದರೆ ಮೂಲತಃ ಈ ಎರಡು ಬುಡಕಟ್ಟುಗಳು ಪ್ರಾಕೃತಿಕ ಶಕ್ತಿಯ ಆರಾಧಕರಾಗಿದ್ದರು ಎಂದು ಹೇಳಬಹುದು. ಚಿತ್ರದುರ್ಗ ಜಿಲ್ಲೆಯಲ್ಲಿ ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮುಗ್ಧರು, ಪ್ರಾಮಾಣಿಕರು, ಸರಳಜೀವಿಗಳು, ದೈವಭಕ್ತಿಯುಳ್ಳವರು ಮತ್ತು ಪ್ರಕೃತಿ ಆರಾಧಕರು ಎಂಬುದನ್ನು, ಅವರ ಪರಿಸರ, ವಾಸಿಸುವ,

ಉಡುಗೆ ತೊಡಿಗೆ, ಭಾಷೆ, ಹಬ್ಬ, ಜಾತ್ರೆ, ದೇವರು, ಧರ್ಮ, ನಂಬಿಕೆ, ಆಚರಣೆ ಮೊದಲಾದ ಅಂಶಗಳಿಂದ ಸ್ಪಷ್ಟವಾಗುತ್ತದೆ.

೨. ಧಾರ್ಮಿಕ ಕೇಂದ್ರಗಳು

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯದ ಜನರು ಪ್ರಕೃತಿ ಆರಾಧಕರು ಮತ್ತು ಸರ್ವಚೇತನ ವಾದಿಗಳಾಗಿರುವುದರಿಂದ ಈ ಜನಾಂಗದ ನೂರಾರು ಧಾರ್ಮಿಕ ಕೇಂದ್ರಗಳನ್ನು ಈ ಜಿಲ್ಲೆಯಲ್ಲಿ ಗುರುತಿಸಬಹುದು. ಈ ಎರಡು ಬುಡಕಟ್ಟುಗಳ ವ್ಯಕ್ತಿಯ ಹೆಸರು, ಬೆಡಗು, ಮನೆದೇವರು ಮೂಲನೆಲೆ, ವಸತಿ, ಸಂಪ್ರದಾಯ ಮತ್ತು ನಂಬಿಕೆ ಮೊದಲಾದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇವರ ಧಾರ್ಮಿಕ ಕೇಂದ್ರಗಳನ್ನು ನಿರ್ಧರಿಸಬಹುದಾಗಿದೆ. ಮೂಡಲ ಗಿರಿಯ ತಿರುಪತಿ ತಿಮ್ಮಪ್ಪ, ಶ್ರೀಶೈಲದ ಮಲ್ಲಿಕಾರ್ಜುನ, ಅಹೋಬಲದ ನರಸಿಂಹಸ್ವಾಮಿ ಮೂಲತಃ ಬುಡಕಟ್ಟುಗಳ ಪ್ರಧಾನ ದೈವಗಳು ಮತ್ತು ಧಾರ್ಮಿಕ ಕೇಂದ್ರಗಳು. ಕಾಲಕ್ರಮೇಣ ಈ ಎರಡು ಸಮುದಾಯದ ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನಗಳು ಕೂಡ ಧಾರ್ಮಿಕ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಪ್ರಾದೇಶಿಕವಾಗಿ ಕೆಲವು ಗುಡಿಕಟ್ಟೆಗಳು ಮತ್ತು ಕಟ್ಟೆಮನೆಗಳು ಐತಿಹಾಸಿಕ ಮಹತ್ವ ಪಡೆದುಕೊಂಡಿವೆ. ನೀರಿನ ಸೌಲಭ್ಯ ಹೊಂದಿದ ಅನೇಕ ನದಿ, ಬೆಟ್ಟ, ಅರಣ್ಯ, ಹೊಂಡ, ಹಳ್ಳ, ಕೊಳ, ಒಡ್ಡು ಪೂಜಾರಿ, ದಾಸಯ್ಯ ಮತ್ತು ತಮ್ಮ ಜನಾಂಗದ ಸಾಂಸ್ಕೃತಿಕ ವೀರರ ಸಮಾಧಿಗಳು ಕೂಡ ಈ ಸಮುದಾಯಗಳ ಧಾರ್ಮಿಕ ಕೇಂದ್ರಗಳಾಗಿವೆ.

ನೇಪಾಳದ ಗಂಡರೆ ನದಿ, ಉತ್ತರಭಾರತದ ಗಂಗಾನದಿ, ಕರ್ನಾಟಕದ ವೇದಾವತಿ, ಚನ್ನಹಗರಿ ನದಿ, ದೆಹಲಿ, ಅಯೋಧ್ಯ, ದ್ವಾರಕೆ, ದೇವಗಿರಿ, ವಿಂಧ್ಯಪರ್ವತ, ಆನೆಗೊಂದಿ, ಪಂಪಾಕ್ಷೇತ್ರ, ಶ್ರೀಶೈಲ, ಅಹೋಬಲ, ಕದರಿ, ವೆಂಕಟಗಿರಿ, ಹಸ್ತಗಿರಿ, ಕಾಳಾಹಸ್ತಿ ಮೊದಲಾದವು ಕೂಡ ಮೂಲತಃ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಧಾರ್ಮಿಕ ನೆಲೆಗಳಾಗಿವೆ. ಪ್ರಸ್ತುತ ಅಧ್ಯಯನ ಸಲುವಾಗಿ ಚಿತ್ರದುರ್ಗ ಜಿಲ್ಲೆಯ ಧಾರ್ಮಿಕ ಕೇಂದ್ರಗಳನ್ನು, ಮ್ಯಾಸಬೇಡ ಮತ್ತು ಕಾಡುಗೊಲ್ಲರ ಧಾರ್ಮಿಕ ಕೇಂದ್ರಗಳೆಂದು ಎರಡು ರೀತಿ ವರ್ಗೀಕರಿಸಿ ಅಧ್ಯಯನ ಮಾಡಬೇಕಾಗಿದೆ.

೨.೧. ಮ್ಯಾಸಬೇಡರ ಧಾರ್ಮಿಕ ಕೇಂದ್ರಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ನೆಲೆಸಿರುವ ಮ್ಯಾಸಬೇಡರ ಪ್ರಮುಖ ಧಾರ್ಮಿಕ ಕೇಂದ್ರಗಳೆಂದರೆ, ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು, ನಿಡಗಲ್ಲು ಬೆಟ್ಟದ ಬುಡದಲ್ಲಿರುವ ಪವಿತ್ರ ಹೊಂಡ ರಾಮತೀರ್ಥ, ಹೊಸದುರ್ಗ ತಾಲ್ಲೂಕು ದೇವಪುರದ ಹಾಲುರಾಮೇಶ್ವರ, ಹೊಳಲ್ಕೆರೆ ತಾಲ್ಲೂಕು ದೇವರ ಗಂಜಿಗಟ್ಟೆ ಹತ್ತಿರ ಮಿಂಚೇರಿ ಅರಣ್ಯ ಮತ್ತು ಗಾದ್ರಿಗುಡ್ಡ, ಹಿರಿಯೂರು ತಾಲ್ಲೂಕು ಕೂಡಲಹಳ್ಳಿ ಹತ್ತಿರ ಕೂಡ್ಲಿ ಸಂಗಮೇಶ್ವರ ಮತ್ತು ವೇದಾವತಿ ನದಿ. ಖಂಡೇನಹಳ್ಳಿ ಕರಿಯಮ್ಮ, ಗೋರ್ಲತ್ತು ಕರಿಯಮ್ಮ, ಹರ್ತಿಕೋಟೆ ಓಬಳದೇವರು, ಯರಬಳ್ಳಿ ಮಾರಕ್ಕ, ಮಾರಿಕಣಿವೆ ಕಣಿವೆ ಮಾರಕ್ಕ. ಮೊಳಕಾಲ್ಮೂರು ತಾಲ್ಲೂಕು ಕಂಪಳದೇವರಹಟ್ಟಿ (ಚಿಕ್ಕುಂತಿ) ಕಂಪಳರಂಗಸ್ವಾಮಿ. ಕೂಡ್ಲಿಗಿ ತಾಲ್ಲೂಕು ಮಾಕನಡುಕು ಕಂಚೋಬಳ ನರಸಿಂಹಸ್ವಾಮಿ, ಕುರಿಹಟ್ಟಿ ಬೊಮ್ಮದೇವರು, ಗೆದ್ದಲಗಟ್ಟೆ

ಓಬಳದೇವರು. ಚಳ್ಳಕೆರೆ ತಾಲ್ಲೂಕು ರುದ್ರಮ್ಮನಹಳ್ಳಿ ನಲ್ಲಜರುಗು ಓಬಳದೇವರು, ಕಾಟಪ್ಪನಹಟ್ಟಿ ಕಾಟಮ್ಮ ಲಿಂಗೇಶ್ವರ, ಗೌರಸಮುದ್ರದ ಬೊಮ್ಮಲಿಂಗೇಶ್ವರ, ಎರ್.ದೇವರಹಳ್ಳಿ ದಡ್ಲು ಮಾರಮ್ಮ, ಬಂಗಾರ ದೇವರಹಟ್ಟಿ ಬಂಗಾರುದೇವರು, ಬೇಡರಡ್ಡಿಹಳ್ಳಿ ಪೆದ್ದತಿರುಮಲದೇವರು, ಮಲ್ಲೂರಹಳ್ಳಿ ರಾಜಲದೇವರು, ರಾಯದುರ್ಗ ತಾಲ್ಲೂಕು ಉಡೇಗೊಳು ಚಿತ್ರಲಿಂಗೇಶ್ವರ. ಜಗಳೂರು ತಾಲ್ಲೂಕು ಕಾಮಗೇತನಹಳ್ಳಿ ಸೂರಲಿಂಗೇಶ್ವರ, ಆಕನೂರು ಪಾತೇಲಿಂಗೇಶ್ವರ, ಚಿತ್ರದುರ್ಗ ತಾಲ್ಲೂಕು ಹುಣಸೆಕಟ್ಟೆ ಅಲಕೋಬಳದೇವರು, ಬೆಳಗಟ್ಟದ ಸೂರ್ಯಯರಗಾಟ ನಾಯಕ, ಕುಂಚಿಗನಾಹಳು ಕಣಿವೆ ಮಾರಕ್ಕ, ಮುದ್ದಾಪುರದ ಓಬಳದೇವರು, ಸೊಂಡೆಕೊಳದ ನರಸಿಂಹಸ್ವಾಮಿ, ಜಾನಕೊಂಡದ ಓಬಳದೇವರು, ತುರುವನೂರು ಗಾದ್ರಿಪಾಲನಾಯಕ ಮತ್ತು ಬೋರೇದೇವರು. ಚಳ್ಳಕೆರೆ ತಾಲ್ಲೂಕು ಗೋರ್ಲಕಟ್ಟೆಯ ಜಗಳೂರಜ್ಜನ ಗುಡಿ, ಗೌರಸಮುದ್ರದ ಗೌರಸಂದ್ರ ಮಾರಮ್ಮ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮಠ, ಗೋಸಿಕೆರೆ ಸಾರ್ವಾಡೇಶ್ವರಸ್ವಾಮಿ ಮಠ, ಸೆಟ್ಟೂರು ಸಿರಿವಾಳದ ಓಬಳದೇವರ ಕೇಂದ್ರ, ಹೀರೆಹಳ್ಳಿ ದಡ್ಡಿಸೂರನಾಯಕ, ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ, ಮುಮ್ಮಡಿಸಾಗರದ ಅಡ್ಲಟ್ಟಿ ಭೂತಪ್ಪ, ಬೊಂಬೇರಹಳ್ಳಿ ಮತ್ತು ಯಲಗಟ್ಟೆ ಗಾದರಿಪಾಲನಾಯಕ ದೇವರು, ಸೂರನಹಳ್ಳಿ ಹತ್ತಿರ ಕಂಡು ಬರುವ ಗಾದ್ರಿಪಾಲನಾಯಕನ ಹುಲಿಕಲ್ಲು, ಬೋಸೇದೇವರಹಟ್ಟಿ ಬೋಸೇದೇವರು, ಬೋರೇದೇವರಹಟ್ಟಿ ಬೋರೇದೇವರು, ಬಂಜಗೆರೆ ಓಬಳದೇವರು, ಗುಡಿಹಳ್ಳಿ ಓಬಳದೇವರು ಮೊದಲಾದ ಧಾರ್ಮಿಕ ಕೇಂದ್ರಗಳನ್ನು ಇಲ್ಲಿ ಗುರುತಿಸಬಹುದು. ಜೊತೆಗೆ ಪುರಾತನ ಕಾಲದಲ್ಲಿ ಮ್ಯಾಸಬೇಡರು ನೆಲಸಿದ್ದ ಪ್ರಮುಖ ಧಾರ್ಮಿಕ ಕೇಂದ್ರಗಳನ್ನು ಈ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಅವುಗಳೆಂದರೆ ನಾಗ್ತಿಹಳ್ಳಿ ಕಟ್ಟೆ, ಅಡ್ಲಟ್ಟಿ ಭೂತಪ್ಪ ಮತ್ತು ಸೂರನಹಳ್ಳಿ ಹುಲಿಕಲ್ಲು ಪ್ರಮುಖವಾಗಿವೆ.

೨.೧.೧. ನಾಗ್ತಿಹಳ್ಳಿ ಕಟ್ಟೆ : ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆಯಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಮ್ಯಾಸಬೇಡರ ಪ್ರಮುಖ ಧಾರ್ಮಿಕ ಕೇಂದ್ರ ಹಾಗೂ ವಾಸಸ್ಥಾನ ನಾಗ್ತಿಹಳ್ಳಿ ಎಂಬ ಪಾಳು ಬಿದ್ದ ಪುಟ್ಟ ಹಟ್ಟಿ ಕಂಡು ಬರುತ್ತದೆ. ನಾಗ್ತಿಹಳ್ಳಿಯ ಪುರಾತನ ಹೆಸರು 'ನಾಯಕನಹಳ್ಳಿ' ಎಂದಿತ್ತು ನಂತರ ನಾಗ್ತಿಹಳ್ಳಿ-ನಾಗ್ತಿಹಳ್ಳಿಕಟ್ಟೆ ಎಂದೇ ಈಗ ಕರೆಯುತ್ತಾರೆ. ಮೂಲತಃ ನಾಗ್ತಿಹಳ್ಳಿಯಲ್ಲಿ ನೆಲೆಸಿದ್ದ ಮ್ಯಾಸಬೇಡರು ಆಂಧ್ರಪ್ರದೇಶದ ಅಹೋಬಲ, ಶ್ರೀಶೈಲ, ಕದರಿ, ತಿರುಪತಿ ಮತ್ತು ನಿಡಗಲ್ಲು ಪ್ರಾಂತ್ಯದಿಂದ; ಮುಸಲ್ಮಾನರ ಹಾವಳಿಯಿಂದ ಬೇಸತ್ತು; ತಮ್ಮ ಮಾನ ಪ್ರಾಣ ರಕ್ಷಣೆಗಾಗಿ ಕರ್ನಾಟಕದ ಕಡೆಗೆ ವಲಸೆ ಬಂದಿದ್ದಾರೆ. ತಾವು ಬರುವಾಗ ತಮ್ಮ ಮನೆದೇವರನ್ನು ಮತ್ತು ದೇವರ ಪರಿಕರಗಳನ್ನು ಜೊತೆಗೆ ತಂದು, ಗ್ರಾಮ ಸಂಸ್ಕೃತಿಯಿಂದ ಪ್ರತ್ಯೇಕವಾಗಿ 'ನಾಗ್ತಿಹಳ್ಳಿ' ಎಂಬ ದಟ್ಟವಾದ ಕಾಡಿನಲ್ಲಿ ತಮ್ಮ ದೇವರನ್ನು ಸ್ಥಾಪಿಸಿಕೊಂಡು, ಪಶುಪಾಲನೆ ಮತ್ತು ವ್ಯವಸಾಯ ಎರಡು ವೃತ್ತಿಗಳನ್ನು ಆರಂಭಿಸಿದಂತೆ ಕಂಡು ಬರುತ್ತದೆ.

ನಾಗ್ತಿಹಳ್ಳಿಯಲ್ಲಿ ನೆಲಸಿದ್ದ ಮ್ಯಾಸಬೇಡರು ಪಶುಪಾಲಕರಂತೆ ಕಂಡು ಬಂದರು, ಕ್ರಮೇಣ ಪಶುಪಾಲನೆ ಜೊತೆಗೆ ವ್ಯವಸಾಯ ಮಾಡಿದ ಹೆಗ್ಗುರುತುಗಳು ಈ ಪ್ರದೇಶದಲ್ಲಿ ಕಂಡು ಬರುತ್ತವೆ. ಓಬಳದೇವರ ಗುಡಿಯ ಮುಂದೆ ಇರುವ ಮಜ್ಜಬಾವಿಯಿಂದ ಕಪಿಲೆ ಅಥವಾ ಏತನೀರಾವರಿ ಮೂಲಕ ಹೊಲ ಗದ್ದೆಗಳಿಗೆ ನೀರು

ಹಾಯಿಸಿದ, ಕಲ್ಲಿನಿಂದ ಕಟ್ಟಿದ ಕಾಲುವೆಗಳು, ಬಾನಿಗಳು, ಕಪಿಲೆ ಹೊಡೆದ, ನೀರು ಹರಿದು ಹೋದ ಗುರುತುಗಳು, ಕೋಟೆಕೊತ್ತಲುಗಳು, ಚಿಕ್ಕ ಪುಟ್ಟ ದೇವಸ್ಥಾನ, ಊರುಬಾಗಿಲ ಕಲ್ಲು, ಓಬಳದೇವರು ಮತ್ತು ಕರಿಯಮ್ಮನಗುಡಿ, ಮಜ್ಜನಬಾವಿ, ಒಳಕಲ್ಲು, ಕಾರ ಅರೆಯುವ ಗುಂಡು ಬಂಡೆಗಳು, ನಾಗರಕಲ್ಲುಗಳ ಕಟ್ಟಡದ ಅವಶೇಷಗಳು ಇಲ್ಲಿ ಪ್ರಧಾನವಾಗಿ ಕಂಡು ಬರುತ್ತವೆ.

ಸ್ಥಳೀಯ ವಕ್ತೃಗಳ ಪ್ರಕಾರ ಇಲ್ಲಿ ನೆಲೆಸಿದ್ದ ಪ್ರಮುಖ ಮೂಲ ಪುರುಷರಾದ ಓಬಣ್ಣ, ಚನ್ನಿಗ ಮತ್ತು ಗೂಲಮ್ಮ ಎಂಬ ಅಣ್ಣ-ತಂಗಿಯರು; ನಿಡಗಲ್ಲುನಿಂದ ಬಂದು ನಾಗ್ತಿಹಳ್ಳಿಯಲ್ಲಿ ನೆಲೆಸಿದ್ದರು. ಇವರು ವಿಷ್ಣು ಸಾಲಿಗ್ರಾಮಗಳ ಆರಾಧಕರಾಗಿದ್ದರು; ಪಶುಪಾಲಕರಾದ ಈ ಮೂರು ಜನ ನಾಗ್ತಿಹಳ್ಳಿಯಲ್ಲಿ ನೆಲೆ ನಿಂತಾಗ, ತಮ್ಮ ದನ ಕರುಗಳನ್ನು ನೀರಿಗಾಗಿ ನಾಗ್ತಿಹಳ್ಳಿಯಿಂದ ಸುಮಾರು ಐದು ಕಿ.ಮೀ. ದೂರದ ನಲ್ಲೂರಹಳ್ಳಿ ಗೊಲ್ಲರ ಹಟ್ಟಿಯ ಹತ್ತಿರ ವೇದಾವತಿ ನದಿಯಲ್ಲಿ ದನಕರುಗಳಿಗೆ ನೀರು ಕುಡಿಸಿಕೊಂಡು ಹೋಗುತ್ತಿದ್ದರು. ಅದೇ ಸಂದರ್ಭದಲ್ಲಿ ಈ ಮ್ಯಾಸಬೇಡರಿಗೂ ಮತ್ತು ವೇದಾವತಿ ನದಿ ದಂಡೆಯ ಸುತ್ತಮುತ್ತ ವಾಸಿಸುವ ಕಾಡು ಗೊಲ್ಲರಿಗೂ ಪರಿಚಯ ಮತ್ತು ಸ್ನೇಹ ಬೆಳೆಯುವುದರಲ್ಲಿ, ಕಷ್ಟ ಸುಖಗಳಲ್ಲಿ, ಹಬ್ಬ-ಹರಿದಿನಗಳಲ್ಲಿ, ಹುಟ್ಟು, ಸಾವು, ವಿವಾಹ, ಕುಂಟುಬ, ಉಡುಪು, ಆಹಾರ ಮೊದಲಾದ ವಿಷಯಗಳಲ್ಲಿ 'ಸಂಸ್ಕೃತೀಕರಣ ಪ್ರಕ್ರಿಯೆ' ಏರ್ಪಟ್ಟಂತೆ ಕಂಡುಬರುತ್ತದೆ. ಈ ಹೊತ್ತಿಗೂ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಪರಸ್ಪರ ಹೊಂದಾಣಿಕೆಗಳು ಕಂಡು ಬರುತ್ತವೆ.

ನಾಗ್ತಿಹಳ್ಳಿಯಲ್ಲಿ ನೆಲೆಸಿದ್ದ ಮ್ಯಾಸಬೇಡರು ಶೈವ, ವೈಷ್ಣವ ಮತ್ತು ಶಕ್ತಿಪಂಥದ ಆರಾಧಕರಂತೆ ಕಂಡು ಬರುತ್ತಾರೆ. ಊರುಬಾಗಿಲ ಕಲ್ಲಿನಿಂದ ದಕ್ಷಿಣಕ್ಕೆ ಸುಮಾರು ೧೦೦ ಅಡಿ ಅಂತರದ ಬೇವಿನ ಗಿಡದ ಬುಡದಲ್ಲಿ ನಾಗ್ತಿಹಳ್ಳಿ ಕರಿಯಮ್ಮನ ಚಿಕ್ಕ ಕಲ್ಲಿನ ಗುಡಿ ಕಂಡು ಬರುತ್ತದೆ. ಈ ಗುಡಿ ನಾಲ್ಕು ಕಲ್ಲನ್ನು ಮಾತ್ರ ಜೋಡಿಸಿ ಕಟ್ಟಿದ ಪುಟ್ಟ ಗುಡಿ. ನೆಲದಿಂದ ೧೮ ಅಂಗುಲ ಎತ್ತರ ಕರಿಕಲ್ಲಿನ ಸುಂದರವಾದ ದೇವಿಯ ವಿಗ್ರಹವಿದೆ. ಒಂದು ಕೈಯಲ್ಲಿ ಖಡ್ಗ, ಮತ್ತೊಂದು ಕೈಯಲ್ಲಿ ತ್ರಿಶೂಲ, ಬಳೆಗಳು ಕಂಡು ಬರುತ್ತವೆ. ದಿನಾಂಕ : ೦೮.೦೨.೨೦೦೧ ರಂದು ಕ್ಷೇತ್ರಕಾರ್ಯಕ್ಕೆ ಹೋದಾಗ ಆಗ ತಾನೆ ಈ ದೇವಿಯ ವಿಗ್ರಹಕ್ಕೆ ಪೂಜೆ ಮಾಡಿ ಹೋಗಿದ್ದರು. ದೇವಿ ವಿಗ್ರಹದ ಮುಂದೆ ವೀಳ್ಯೆದೆಲೆಯಲ್ಲಿ ಅಕ್ಕಿ ಹುಗ್ಗಿ, ಅನ್ನ, ಎಲೆ, ಅಡಿಕೆ, ತೆಂಗಿನಕಾಯಿ ಚೂರುಗಳು ಇದ್ದ ಗುರುತುಗಳು ಕಂಡುಬಂದವು. ನಾಗ್ತಿಹಳ್ಳಿ ಕಟ್ಟೆಯಲ್ಲಿ ವ್ಯವಸಾಯ ಮಾಡುವ ಮ್ಯಾಸಬೇಡರ ಗುಂಡಪ್ಪನ ಹೇಳಿಕೆಯ ಪ್ರಕಾರ, ಮೂಲ ಈ ಕರಿಯಮ್ಮನ ಗುಡಿ ಬನ್ನಿಮರದ ಕೆಳಗೆ ಇತ್ತು ನಮ್ಮ ಬೇಸಾಯಕ್ಕೆ ತೊಂದರೆ ಯಾಗುತ್ತದೆ ಎಂದು ಅಲ್ಲಿಂದ ಇಲ್ಲಿಗೆ ತಂದು ಇಟ್ಟಿದ್ದೇವೆ ಎಂದು ತಿಳಿಸಿದರು. ಮೂಲ ಬನ್ನಿಮರಕ್ಕೂ ಮತ್ತು ಈಗಿನ ಕರಿಯಮ್ಮ ಗುಡಿಗೂ ಸುಮಾರು ೧೮೦ ಅಡಿ ಅಂತರವಿದೆ. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು 'ಕರಿಯಮ್ಮ' ದೇವಿಯನ್ನು ಆರಾಧಿಸುವ ಪದ್ಧತಿ ಹಲವಾರು ಕಡೆ ಕಾಣಬಹುದಾಗಿದೆ.

ನಾಗ್ತಿಹಳ್ಳಿ ಊರುಬಾಗಿಲ ಕಲ್ಲಿನಿಂದ ಪಶ್ಚಿಮ ನೈಋತ್ಯಕ್ಕೆ ಸುಮಾರು ೧೨೦ ಅಡಿ ಅಂತರದಲ್ಲಿ, ಎತ್ತರವಾದ ಬಾವಿ ದಿಬ್ಬದ ಮೇಲೆ ಓಬಳದೇವರ ಚಿಕ್ಕ ಕಲ್ಲಿನ ಗುಡಿ ಇದೆ. ಈ ದೇವರ ಗುಡಿಯಲ್ಲಿ ಯಾವುದೇ ದೇವರ

ವಿಗ್ರಹಗಳು ಕಂಡು ಬರುವುದಿಲ್ಲ. ನಾಲ್ಕು ಕಲ್ಲನ್ನು ಜೋಡಿಸಿ ಕಟ್ಟಿದ ಚಿಕ್ಕ ಗುಡಿಯಲ್ಲಿ ಕರಿಕಲ್ಲಿನ ಚಿಕ್ಕ ಗುಂಡಿಗೆ, ವಿಭೂತಿ ಕುಂಕುಮ ಹಚ್ಚಿ ಪೂಜೆ ಮಾಡಿದ ಗುರುತುಗಳು ಕಂಡು ಬರುತ್ತವೆ. ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಯ ಗುಗ್ಗರಿಹಬ್ಬ ಮಾಡುವಾಗ ನಾಗ್ತಿಹಳ್ಳಿ ಕಟ್ಟೆಯ ಓಬಳದೇವರು ಮತ್ತು ಕರಿಯಮ್ಮಗೆ ಹುರುಳಿ ಗುಗ್ಗರಿ ಹೊಯ್ದು ಪೂಜೆ ಮಾಡಿದ ನಂತರ ಅಲ್ಲಿಯ "ಬಿಲ್ಲುಗೂಡು" ಪೂಜೆ ಮಾಡುತ್ತಾರೆ. ದೇವರಮರಿಕುಂಟೆ ಓಬಳದೇವರು ಮೊದಲು ನೆಲಸಿದ್ದು ನಾಗ್ತಿಹಳ್ಳಿ ಕಟ್ಟೆಯ ಬುರುಜುವಿನಲ್ಲಿ. ಈ ಬುರುಜುವಿನ ಮೇಲೆ ನಿಂತು ಪೂರ್ವಕ್ಕೆ ನೋಡಿದರೆ ದೇವರಮರಿಕುಂಟೆ ಓಬಳದೇವರ ಕಲ್ಲುಕಂಭದ ತುದಿ ಮತ್ತು ನಿಡಗಲ್ಲು ಬೆಟ್ಟದ ಮೇಲಿರುವ ಕಬ್ಬಿಣದ ದೀಪಸ್ತಂಭ ಈ ಮೂರು ನೇರವಾಗಿ ಕಾಣುತ್ತವೆ. ಅದೇ ರೀತಿ ನಿಡಗಲ್ಲು ಬೆಟ್ಟದ ಮೇಲಿನ ಕಬ್ಬಿಣದ ದೀಪಸ್ತಂಭದ ಮೇಲೆ ಬೆಂಕಿ ಹಾಕಿದರೆ ಅಥವಾ ದೀಪ ಹಚ್ಚಿದರೆ ಚಿತ್ರದುರ್ಗದ ಪಾಳೆಯಗಾರರಿಗೆ ಕಾಣಿಸುತ್ತಿತ್ತಂತೆ.

ನಾಗ್ತಿಹಳ್ಳಿ ಓಬಳದೇವರು ಗುಡಿಯ ಮುಂಭಾಗದಲ್ಲಿ ಒಂದು ಹೊಂಡ ಅಥವಾ ಮಜ್ಜನಬಾವಿಯಿದೆ. ಇದರಲ್ಲಿ ಸುಮಾರು ಐದು ಅಡಿ ನೀರು ತುಂಬಿತ್ತು ಮೂಲತಃ ಇಲ್ಲಿ ನೆಲಸಿದ್ದ ಮ್ಯಾಸಬೇಡರು ವ್ಯವಸಾಯಕ್ಕೆ ಈ ಬಾವಿಯ ನೀರನ್ನು ಉಪಯೋಗಿಸಿದಂತೆ ಕಂಡು ಬರುತ್ತದೆ. ಇಲ್ಲಿಯ ಸ್ಥಳದ ಗುರುತುಗಳ ಪ್ರಕಾರ ಚಿಕ್ಕ ಚಿಕ್ಕ ಕಾಲುವೆ, ಏತನೀರಾವರಿ ವ್ಯವಸ್ಥೆ ಕಲ್ಲಿನ ಬಾನಿಗಳು ಇರುವ ಅವಶೇಷಗಳು ಇಲ್ಲಿ ಕಂಡು ಬರುತ್ತವೆ.

ನಾಗ್ತಿಹಳ್ಳಿ ಓಬಳದೇವರ ಗುಡಿಯಿಂದ ಪೂರ್ವಕ್ಕೆ ಸುಮಾರು ೧೦೦ ಅಡಿ ಅಂತರದಲ್ಲಿ "ಊರು ಬಾಗಿಲ ಕಲ್ಲು" ಇದೆ; ನೆಲ ಮಟ್ಟದಿಂದ ೩೪.೪ ಇಂಚು ಎತ್ತರ, ೨೪ ಇಂಚು ಸುತ್ತಳತೆ ಹೊಂದಿದ ಬಿಳಿಯ ಕಲ್ಲು ಸ್ವಲ್ಪಬಾಗಿದಂತೆ ಕಂಡು ಬರುತ್ತದೆ. ಈ ಕಲ್ಲನ್ನು ನಾಗ್ತಿಹಳ್ಳಿ "ಊರುಬಾಗಿಲ ಕಲ್ಲು" ಎಂದು ಕರೆಯುತ್ತಾರೆ. ಈ ಕಲ್ಲಿನಿಂದ ದಕ್ಷಿಣಕ್ಕೆ ಸುಮಾರು ೨೫೦ ಅಡಿ ದೂರದಲ್ಲಿ ನಾಗರಕಲ್ಲುಗಳು ಕಂಡು ಬರುತ್ತವೆ. ಪೂರ್ವಾಭಿಮುಖವಾಗಿ ಜೋಡಿಸಲ್ಪಟ್ಟ ಸುಂದರವಾದ ನಾಗರಕಲ್ಲುಗಳು ನಾಗರಹಾವಿನ ವಿವಿಧ ಭಂಗಿಯ ಚಿತ್ರಗಳು ಇಲ್ಲಿ ಕಂಡು ಬರುತ್ತವೆ. ಈ ನಾಗರಕಲ್ಲುಗಳಿಂದಲೇ ಈ ಪ್ರದೇಶಕ್ಕೆ ನಾಗ್ತಿಹಳ್ಳಿ ಎಂಬ ಹೆಸರು ಬಂದಿದೆ; ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ನಾಗಾರಾಧಕರು, ಈ ಹೊತ್ತಿಗೂ ಯಾವುದೇ ಗುಗ್ಗರಿಹಬ್ಬಗಳಲ್ಲಿ, ಮದುವೆ ಮಂಗಳ ಕಾರ್ಯಗಳಲ್ಲಿ 'ಹುತ್ತ' ಅಥವಾ ನಾಗರಕಲ್ಲುಗಳನ್ನು ಪೂಜಿಸುತ್ತಾರೆ ಮತ್ತು ಈ ಎರಡೂ ಬುಡಕಟ್ಟು ದೇವರುಗಳಿಗೆ 'ಬೆಳ್ಳಿಯ ನಾಗಾಭರಣ'ಗಳನ್ನೇ ಆಭರಣಗಳಾಗಿ ಬಳಸುತ್ತಾರೆ.

ಈ ನಾಗರಕಲ್ಲುಗಳ ಮೇಲೆ ಹೊಲದ ರೈತರು ಮುಳ್ಳುಬೇಲಿಯನ್ನು ಹಾಕಿ ಮುಚ್ಚಿದ್ದಾರೆ. ರೆಡ್ಡಿಹಳ್ಳಿ ಗುಂಡಪ್ಪನ ಹೇಳಿಕೆಯ ಪ್ರಕಾರ ಬಹಳ ಹಿಂದಿನ ಕಾಲದಲ್ಲಿ ಮರಿಕುಂಟೆ ಸುತ್ತುಮುತ್ತ ಇರುವ ಜನರು ಇಲ್ಲಿಗೆ ಬಂದು, ನಾಗಪ್ಪನ ಹಬ್ಬದಲ್ಲಿ ಪೂಜೆ ಮಾಡುತ್ತಿದ್ದರು ಆದರೆ ಈಗ ಯಾರು ಬರುತ್ತಿಲ್ಲ ಎಂದು ನೆಲದಲ್ಲಿ ಮುಚ್ಚಿಹೋದ ಅಪಾರ ಸಂಖ್ಯೆಯ ನಾಗರಕಲ್ಲುಗಳನ್ನು ತೋರಿಸಿದರು.

ನಾಗ್ತಿಹಳ್ಳಿಯ ಊರು ಬಾಗಿಲು ಕಲ್ಲನ್ನು ದಾಟಿ ಎಡಬಲಕ್ಕೆ ನೋಡಿದರೆ ಕಟ್ಟಡಗಳ ತಳಪಾಯಗಳು, ಒಳಕಲ್ಲ, ಬೀಸುವಕಲ್ಲು, ಕಾರಲರೆಯುವಕಲ್ಲು, ಬಾವಿಯ ದಿಬ್ಬ, ಕಾಲುವೆಗಳು, ಬಾವಿಯ ಕಟ್ಟಡ, ಕಪಿಲೆ

ಹೊಡೆದ ಗುರುತುಗಳು, ಕಾಡಾಡಿ ಜನರು ಗಿಡಮೂಲಿಕೆಗೆ ಬಳಸುತ್ತಿದ್ದ ಮುತ್ತುಗ, ಎಕ್ಕೆ, ತಂಗಟೆ, ಬೇಟೆ, ಲಕ್ಕಿ, ಬಾರೆ, ಸೀಗುಣಸೆ, ಬೇವು, ಬನ್ನಿ, ಜಂಬಿ, ಬಿಳಿಹೂಲಿ, ಕಾರೆ ಮೊದಲಾದ ಗಿಡಮರ, ಬಳ್ಳಿಗಳ ಕಂಟೆ ಬೆಳೆದು ನಿಂತಿವೆ, ಈ ಪಾಳು ಬಿದ್ದ ನಾಗ್ತಿಹಳ್ಳಿಯ ಮಧ್ಯಭಾಗದಲ್ಲಿ ನಿಧಿ ಆಸೆಗಾಗಿ ಭೂಮಿಯನ್ನು ಅಗೆದಿದ್ದಾರೆ, ಕಟ್ಟಡದ ತರಗಳನ್ನ ಸೋಸಿದ್ದಾರೆ, ಸುಮಾರು ೧೦೦೦ ವರ್ಷಗಳ ಹಿಂದೆ ಮ್ಯಾಸಬೇಡರು ನೆಲಸಿದ್ದ ವಸತಿ ದಿಬ್ಬದ ಅಥವಾ ಪ್ರಮುಖ ಧಾರ್ಮಿಕ ಕೇಂದ್ರ ನಾಗ್ತಿಹಳ್ಳಿ ಈಗ ಹೇಳಲು ಹೆಸರಿಲ್ಲದಂತೆ ಅಳಿದು ಹೋಗುತ್ತಿದೆ.

ಪುರಾತನ ಕಾಲದಲ್ಲಿ ನಾಗ್ತಿಹಳ್ಳಿಯ ಎರಡು ಕಟ್ಟೆ ಜಮೀನುಗಳು ಒಬ್ಬ ಬ್ರಾಹ್ಮಣನಿಗೆ ಸೇರಿದ್ದವಂತೆ. ಪಶುಪಾಲಕರಾದ ಓಬಣ್ಣ, ಚನ್ನಿಗ ಮತ್ತು ಗೂಲಮ್ಮ ಜೀವನೋಪಾಯಕ್ಕೆ ಕಷ್ಟವಾದಾಗ ಬ್ರಾಹ್ಮಣರ ಹೊಲದಲ್ಲಿ ಕೂಲಿ ಆಳಾಗಿ ದುಡಿದು; ದಿನವಿಡಿ ಕೂಲಿ ಮಾಡಿದ್ದಕ್ಕೆ ಆ ಬ್ರಾಹ್ಮಣ ಎರಡು ಸೇರು ನೆಲ್ಲು ಕೊಡುತ್ತಿದ್ದ, ಅವುಗಳನ್ನು ತಂದು ಕಲ್ಲು ಮಣ್ಣು ಮಾಡಿ ಭತ್ತ ಕುಟ್ಟಿದರೆ ಒಂದು ಸೇರು ಅಕ್ಕಿ ಬರುತ್ತಿದ್ದವು, ಆಗ ಗೂಲಮ್ಮ ಒಂದು ಸೇರು ಅಕ್ಕಿ ಅನ್ನ ಮಾಡಿ ನಿಡಗಲ್ಲಿನಿಂದ ತಂದಿದ್ದ ಎರಡು ಸಾಲಿಗ್ರಾಮಗಳಿಗೆ ಒಂದು ಸೇರು ಅನ್ನ ಎಡೆ ಹಾಕಿ ನೈವೇದ್ಯ ಮಾಡಿದರೆ ಆ ಎರಡು ಸಾಲಿಗ್ರಾಮಗಳು ಒಂದು ಸೇರು ಅಕ್ಕಿ ಅನ್ನ ತಿಂದು ಹಾಕುತ್ತಿದ್ದವಂತೆ. ಆಗ ಗೂಲಮ್ಮ ಬ್ರಾಹ್ಮಣನ ಹತ್ತಿರ ಹೋಗಿ ಸ್ವಾಮಿ ನೀವು ಕೊಡುವ ಎರಡು ಸೇರು ಭತ್ತ ನಮಗೆ ಸಾಕಾಗು ವುದಿಲ್ಲ, ನಮ್ಮ ಹತ್ತಿರವಿರುವ ಎರಡು ಸಾಲಿಗ್ರಾಮಗಳಿಗೆ ಒಂದು ಸೇರು ಅಕ್ಕಿ ಅನ್ನ ಬೇಕಾಗುತ್ತದೆ. ಅದಕ್ಕಾಗಿ ಸ್ವಲ್ಪ ಜಾಸ್ತಿ ಕೂಲಿ ಕೊಟ್ಟರೆ ಅನುಕೂಲವಾಗುತ್ತದೆ ಎಂದು ಕೇಳಿಕೊಂಡಳಂತೆ. ಆಗ ಚತುರ ಬುದ್ದಿಯವನಾದ ಬ್ರಾಹ್ಮಣ ಅವರ ಹತ್ತಿರವಿದ್ದ ಎರಡು ಸಾಲಿಗ್ರಾಮಗಳನ್ನು ನೋಡಿ; ಈ ಎರಡು ಸಾಲಿಗ್ರಾಮಗಳನ್ನು ನನಗೆ ಕೊಟ್ಟರೆ, ಈ ಎರಡೂ ಕಟ್ಟೆ ಜಮೀನನ್ನು ನಿಮಗೆ ಬಿಟ್ಟುಕೊಡುತ್ತೇನೆ ಎಂದನಂತೆ. ಅದಕ್ಕೆ ಇವರು ಸಹ ಒಪ್ಪಿ ಒಂದು ಸಾಲಿಗ್ರಾಮವನ್ನು ಮಾತ್ರ ಕೊಟ್ಟು, ನಾಗ್ತಿಹಳ್ಳಿಯ ಎರಡು ಕಟ್ಟೆಗಳನ್ನು ತೆಗೆದು ಕೊಂಡರಂತೆ. ಮ್ಯಾಸಬೇಡರಿಂದ ಒಂದು ಸಾಲಿಗ್ರಾಮ ಪಡೆದು ಕೊಂಡು ಆ ಬ್ರಾಹ್ಮಣ ಪ್ರಸ್ತುತ ಚಳ್ಳಕೆರೆ ತಾಲ್ಲೂಕು ದೊಡ್ಡೇರಿ ಗ್ರಾಮಕ್ಕೆ ಹೋಗಿ ನೆಲೆಸಿದ; ಎಂದು ಇಲ್ಲಿಯ ಪೂಜಾರಿಗಳು ಹೇಳುತ್ತಾರೆ. ಎಲ್ಲಾ ಓಬಳದೇವರ ಪೆಟ್ಟಿಗೆಯಲ್ಲಿ ಎರಡು ವಿಷ್ಣು ಸಾಲಿಗ್ರಾಮಗಳಿದ್ದರೆ ದೇವರಮರಿಕುಂಟೆ ಓಬಳದೇವರ ಪೆಟ್ಟಿಗೆಯಲ್ಲಿ ಮಾತ್ರ ಒಂದು ಸಾಲಿಗ್ರಾಮ ಇದೆ.

ಓಬಣ್ಣ, ಚನ್ನಿಗ ಹಾಗೂ ಗೂಲಮ್ಮ ಎಂಬ ಮೂರು ಜನರು ಮತ್ತು ಮಣೆಗಾರರ ಜಾತಿಗೆ ಸೇರಿದ ಒಬ್ಬ ವ್ಯಕ್ತಿ ಇವರ ಜೊತೆಗಿದ್ದನಂತೆ. ನಾಗ್ತಿಹಳ್ಳಿಯ ಎರಡು ಕಟ್ಟೆಗಳಲ್ಲಿ ವ್ಯವಸಾಯ ಮಾಡುತ್ತ; ಬಾವಿಯ ದಿಬ್ಬದ ಮೇಲೆ ಚಿಕ್ಕ ಹಂಚಿ ಹುಲ್ಲಿನ ಗುಡಿಸಲು ಕಟ್ಟಿ ಬೆತ್ತದ ಬುಟ್ಟಿಯಲ್ಲಿ ಒಂದು ವಿಷ್ಣು ಸಾಲಿಗ್ರಾಮವಿಟ್ಟು ಪ್ರತಿನಿತ್ಯ ಪೂಜೆಮಾಡುತ್ತಿದ್ದರು. ಓಬಣ್ಣ ಮತ್ತು ಚನ್ನಿಗ ಎಂಬ ಅಣ್ಣ ತಮ್ಮಗಳ ಹತ್ತಿರ ಬಲವಾದ ಬಿಲ್ಲು ಬಾಣಗಳಿದ್ದವು. ಈ ಬಿಲ್ಲು ಬಾಣಗಳನ್ನು ಕೂಡ ದೇವರೆಂದು ಪೂಜಿಸುವ ಪದ್ಧತಿ ಇವರಲ್ಲಿ ಕಂಡು ಬರುತ್ತದೆ.

ಹಲವಾರು ವರ್ಷಗಳ ನಂತರ ಕಾಡಡಿವಿಯಲ್ಲಿ ಇರುವುದು ಸರಿಯಲ್ಲವೆಂದು ಯೋಚಿಸಿ, ನಾಗ್ತಿಹಳ್ಳಿ ಕಟ್ಟೆಯಿಂದ ಪೂರ್ವಕ್ಕೆ ಸುಮಾರು ಮೂರು ಕಿ.ಮೀ. ದೂರದ ಕುಕ್ಕಲಪಲ್ಲಿಗೆ ಈ ಮೂರು ಜನ ಬರುತ್ತಾರೆ. ಆಗ

ಕುಕ್ಕಲಪಲ್ಲಿ ಎಂಬ ಹಳ್ಳಿಯಲ್ಲಿ ಎರಡೇ ಮನೆಗಳಿದ್ದವಂತೆ ಒಂದು ಗೌಡ್ರದು, ಇನ್ನೊಂದು ಮಣೆಗಾರರದು. ಆಗ ಕುಕ್ಕಲಪಲ್ಲಿ ಗೌಡರಮನೆ ಹತ್ತಿರ ಬಾವಿ ದಿಬ್ಬದ ಮೇಲೆ ಹಂಚಿಹುಲ್ಲಿನ ಗುಡಿಸಲು ಕಟ್ಟಿ ದೇವರಿಟ್ಟು ಅದೇ 'ನೀರುಬಾವಿ' ಯಿಂದ ಪೂಜೆಗೆ ನೀರು ತಂದು ಪ್ರತಿ ನಿತ್ಯ ಸ್ವಾಮಿಗೆ ಪೂಜೆ ಮಾಡುತ್ತಿದ್ದರು. ಆಕಸ್ಮಿಕವಾಗಿ ಆ ಊರಿನ ಗೌಡರಿಗೂ ಮತ್ತು ಓಬಣ್ಣನ ತಮ್ಮ ಚನ್ನಿಗ ಎಂಬುವನಿಗೆ ಜಗಳವಾಗಿ ಕೊಲೆಮಾಡುವ ತನಕ ಇವರ ಮಧ್ಯೆ ವಿರಸ ಉಂಟಾದಾಗ ಓಬಣ್ಣ ಮತ್ತು ಗೂಲಮ್ಮನವರ ತಮ್ಮನಾದ ಚನ್ನಿಗನಿಗೆ ನೀನು ಇಲ್ಲಿ ಇರುವುದು ಸರಿಯಲ್ಲ ನೀನು ಈ ಊರು ಬಿಟ್ಟು ಹೊರಟು ಹೋಗು ಅಂತ ತಿಳಿಸಿದಾಗ, ಇವರನ್ನು ಬಿಟ್ಟು ಹೋಗಲಾರದೆ ದುಃಖಿಸುತ್ತಿರುವಾಗ, ಓಬಣ್ಣನೆಂಬುವನು ಸಮಾಧಾನಪಡಿಸಿ ನೀನು ಪ್ರಾಣ ಉಳಿಸಿಕೊಳ್ಳಬೇಕಾದರೆ ಈ ಊರು ಬಿಟ್ಟು ಹೋಗು ಎಂದನಂತೆ. ಆಗ ಚನ್ನಿಗ ನಿಮ್ಮನ್ನು ಬಿಟ್ಟು ನಾನು ಹೇಗೆ ಜೀವಿಸಲಿ, ನನಗೆ ಯಾರು ದಿಕ್ಕು ಎಂದು ಗೋಳಾಡಿದಾಗ, ಓಬಣ್ಣನೆಂಬುವನು ತನ್ನಲಿರುವ ಧನಸ್ಸನ್ನು ಕೊಟ್ಟು, ಈ ಧನಸ್ಸು ತೆಗೆದು ಕೊಂಡು ಹೋಗಿ ಇದರ ಮೇಲೆ ಜೀವನ ನಡೆಸು ಎಂದು ಆಶೀರ್ವಾದ ಮಾಡಿ ರಾತ್ರೋರಾತ್ರಿ ದೊಡ್ಡೇರಿ ತನಕ ಜೊತೆಗೆ ಹೋಗಿ ಕಳುಹಿಸಿ ಕೊಟ್ಟನಂತೆ.

ಕುಕ್ಕಲಪಲ್ಲಿ ಬಿಟ್ಟ ಚನ್ನಿಗ ಕಾಡು-ಮೇಡುಗಳನ್ನು ಅಲೆದು ಕೊನೆಗೆ ಕೂಡ್ಲಿಗಿ ತಾಲ್ಲೂಕು ಯಕ್ಕೆಗೊಂದಿಗೆ ಹೋಗಿ ಕೆಲಕಾಲ ಅಲ್ಲಿ ನೆಲಸಿ, ನಂತರ ರಾಮಸಾಗರಕ್ಕೆ ಬಂದು ಅಲ್ಲಿಯ ಮಂಟಪದಲ್ಲಿ ಕೆಲಕಾಲ ಇದ್ದಾಗ ದೇವರ ವಿಚಾರವಾಗಿ ರಾಮಸಾಗರದವರಿಗೂ ಮತ್ತು ಈತನಿಗೂ ಭಿನ್ನಾಭಿಪ್ರಾಯಗಳುಂಟಾಗಿ ಕೊನೆಗೆ ಜಗಳೂರು ತಾಲ್ಲೂಕು "ದಿಬ್ಬದಹಳ್ಳಿ"ಯಲ್ಲಿ ಶಾಶ್ವತವಾಗಿ ನೆಲೆ ನಿಂತನು. ದಿಬ್ಬದಹಳ್ಳಿಯಲ್ಲಿ ದೇವರಿಗೆ ಗುಡಿಕಟ್ಟುವುದು ಬೇಡ ಅಂತ ತನ್ನ ಮನೆಯಲ್ಲೇ ಕೆಲಕಾಲ ದೇವರ ಧನಸ್ಸು ಇಟ್ಟು ಕೊಂಡು ನಂತರ ಕಳ್ಳೆಪೌಳಿ ಹಂಚಿ ಗುಡಿಸಲು ಕಟ್ಟಿ ಅದರಲ್ಲಿ ದೇವರಿಟ್ಟು ದಿಬ್ಬದಹಳ್ಳಿಯಲ್ಲೇ ದೇವರು ಮತ್ತು ಈತ ನೆಲೆ ನಿಂತಾಗ ಈ ದೇವರಿಗೆ "ಮರಿಕುಂಟೆ ಚನ್ನಿಗ" ಎಂದು ಕರೆಯತೊಡಗಿದರು. ಆದ್ದರಿಂದ ದಿಬ್ಬದಹಳ್ಳಿಯಲ್ಲಿ ಓಬಳದೇವರ ಧನಸ್ಸು ಇದ್ದರೆ, ದೇವರಮರಿಕುಂಟೆಯಲ್ಲಿ ಅದರ ಬಾಣಗಳು ಮಾತ್ರ ಕಂಡು ಬರುತ್ತವೆ.

ಕುಕ್ಕಲಪಲ್ಲಿಯಲ್ಲಿ ನೆಲೆನಿಂತ ಓಬಣ್ಣ ಮತ್ತು ಗೂಲಮ್ಮ ಎಂಬ ಅಣ್ಣಾ ತಂಗಿಯರು, ಗೌಡರ ಬಾವಿ ದಿಬ್ಬದ ಮೇಲೆ ಹಂಚಿ ಹುಲ್ಲಿನ ಗುಡಿಕಟ್ಟೆ ಪ್ರತಿ ನಿತ್ಯ ಓಬಣ್ಣ ಎಂಬುವನು ಪೂಜೆ ಮಾಡುತ್ತಿರುವಾಗ, ಕೆಲಕಾಲದ ನಂತರ ಶಿವಶರಣೆ ಹಾಗೂ ದೈವಾಂಶ ಸಂಭೂತಳಾದ ಗೂಲೋಬಮ್ಮ ಈಗಿನ ಹೊರಗಳ ಗುಡಿಯ ಹತ್ತಿರ ಅಂದರೆ ತುಗ್ಗಲಿ ಮರದ ಕೆಳಗೆ 'ಅಗ್ನಿಕೊಂಡ' ಮಾಡಿಕೊಂಡು ಅದರಲ್ಲಿ ದುಮುಕಿದಳು ಎಂದು ಹೇಳುತ್ತಾರೆ. ಹಲವಾರು ವರ್ಷಗಳ ನಂತರ ದೇವರ ಪ್ರಭಾವ ಹೆಚ್ಚಾದಾಗ ಅಣ್ಣ ತಮ್ಮಗಳು ಮತ್ತು ಗ್ರಾಮಸ್ಥರು ಸೇರಿ ಕುಕ್ಕಲಪಲ್ಲಿ ಮತ್ತು ಮರಿಕುಂಟೆ ಎರಡೂ ಗ್ರಾಮಗಳ ಮಧ್ಯೆ ಚಿಕ್ಕ ಹಂಚಿ ಹುಲ್ಲಿನ ಗುಡಿ ಕಟ್ಟಿಸುತ್ತಾರೆ. ಈ ಎರಡೂ ಗ್ರಾಮಗಳ ಮಧ್ಯೆ ದೇವರು ಸ್ಥಾಪನೆಯಾಗಿದ್ದರಿಂದ, ಎರಡೂ ಗ್ರಾಮಗಳು ಸೇರಿ ಈಗ ದೇವರಮರಿಕುಂಟೆ ಎಂದು ಕೆರೆಯಲಾಗುತ್ತಿದೆ. ಜೊತೆಗೆ ಈ ಎರಡು ಗ್ರಾಮಗಳ ಮಧ್ಯೆ ಗುರುತಿಗಾಗಿ ಒಂದು 'ಕರಿಕಲ್ಲು' ನೆಟ್ಟಿದ್ದಾರೆ. ಅದನ್ನೇ

"ಕರವಗಲ್ಲು" ಎಂದು ಕರೆಯುತ್ತಾರೆ. ಪ್ರಸ್ತುತ ದೇವರಮರಿಕುಂಟೆಯಲ್ಲಿ ಮಕ್ಕಳಿಗೆ ಕಾಯಿಲೆಯಾದರೆ ಅನ್ನ ನೀವಾಳಿಸಿ ಈ ಕರವಗಲ್ಲಿಗೆ ತಂದು ಹಾಕುತ್ತಾರಂತೆ. ಮತ್ತೇ ಕೆಲವರು ಪೂಜೆ ಮಾಡಿಕೊಂಡು ಹೋಗುತ್ತಾರೆ.

ಕುಕ್ಕಲಪಲ್ಲಿ ಮತ್ತು ಮರಿಕುಂಟೆ ಮಧ್ಯೆ ಅಹೋಬಲ ನರಸಿಂಹಸ್ವಾಮಿಯನ್ನು ಸ್ಥಾಪಿಸಿ, ಹಲವಾರು ವರ್ಷಗಳನಂತರ ಅಂದರೆ ಕ್ರಿ.ಶ. ೧೧೭೫ ರ ಸುಮಾರಿಗೆ ಈ ದೇವಸ್ಥಾನದ ಮುಂದೆ ದೊಡ್ಡ ಕಲ್ಲುಕಂಭವನ್ನು ಸ್ಥಾಪಿಸಿ, ಕುಕ್ಕಲಪಲ್ಲಿಯ ದೊಡ್ಡದೇವರು ಮಾಡಿದರು ಎಂದು ತಾಮ್ರದ ಜಯ ರೇಖೆಯಿಂದ ತಿಳಿದು ಬರುತ್ತದೆ.

೨.೧.೨. ಅಡ್ಲಟ್ಟಿ ಭೂತಪ್ಪ : ಚಳ್ಳಕೆರೆಯಿಂದ ದಕ್ಷಿಣಕ್ಕೆ ಹಿರಿಯೂರಿಗೆ ಹೋಗುವ ಮಾರ್ಗದಲ್ಲಿ ಸುಮಾರು ೧೨ ಕಿ.ಮೀ. ದೂರದ, ರಸ್ತೆಯ ಬಲ ಭಾಗದದಲ್ಲಿ ಅಂದರೆ ರಂಗಪ್ಪನಕೆರೆ ಅಥವಾ ಮುಮ್ಮಡಿಸಾಗರದ ಹತ್ತಿರ ಮ್ಯಾಸಬೇಡರು ನೆಲಸಿದ್ದ ಪ್ರಮುಖ ವಸತಿ ದಿಬ್ಬ ಅಡ್ಲಟ್ಟಿ ಕಂಡು ಬರುತ್ತದೆ. ಮೂಲತಃ ನಿಡಗಲ್ಲು ಪ್ರಾಂತ್ಯದಿಂದ ಕ್ರಿ.ಶ. ೧೮೫೦ರ ಸುಮಾರಿಗೆ ವಿರುಪಸಮುದ್ರ, ಖಂಡೇನಹಳ್ಳಿ ಗೋಸಿಕೆರೆ, ನಾಗ್ತಿಹಳ್ಳಿ, ಗೋಪನಹಳ್ಳಿ ಮಾರ್ಗವಾಗಿ ವಲಸೆ ಬಂದು ಪ್ರಸ್ತುತ ರೆವಿನ್ಯೂ ಇಲಾಖೆಯಲ್ಲಿ ಮುಮ್ಮಡಿಸಾಗರ ಎಂದು ಕರೆಯುವ ಅಡ್ಲಟ್ಟಿಯಲ್ಲಿ ನೆಲೆನಿಂತರು. ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ (೧೮೯೫-೧೯೪೦) ಈ ಪ್ರದೇಶದಲ್ಲಿ ಒಂದು ದೊಡ್ಡ ಕೆರೆಯನ್ನು ಕಟ್ಟಿಸಿ ಅದಕ್ಕೆ "ಮುಮ್ಮಡಿಸಾಗರ" ಎಂದು ನಾಮಕರಣ ಮಾಡಿದರು. ಪ್ರಸ್ತುತ ಈ ಕೆರೆಯನ್ನು 'ರಂಗಪ್ಪನಕೆರೆ' ಎಂದೇ ಇಲ್ಲಿಯ ಜನ ಕರೆಯುತ್ತಾರೆ.

ನಿಡಗಲ್ಲು ಸಂಸ್ಥಾನದ ಕಡೆಯಿಂದ ಅಡ್ಲಟ್ಟಿಗೆ ವಲಸೆ ಬಂದ ಮೂಲ ಪುರುಷ ಯಾರು ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಆದರೂ ಅಡ್ಲಟ್ಟಿ ಮ್ಯಾಸಬೇಡರು ಪಶು ಮತ್ತು ಮೇಷ ಪಾಲಕರಾಗಿ ಸುಮಾರು ೫೦೦ ಕುರಿಗಳು; ೨೦೦ ದನಕರುಗಳನ್ನು ಹೊಂದಿ ಗ್ರಾಮ ಸಂಸ್ಕೃತಿಯಿಂದ ಪ್ರತ್ಯೇಕವಾಗಿ 'ಹಟ್ಟಿ' ಕಟ್ಟಿಕೊಂಡು ಬಯಲು ಪ್ರದೇಶದಲ್ಲಿ ದನ-ಕುರಿ-ಮೇಕೆಗಳ ಗೂಡು ತಿರುವಿಕೊಂಡು ಒಂದೇ ಬುಡಕಟ್ಟು ಮತ್ತು ಬೆಡಗಿಗೆ ಸೇರಿದ ಅಣ್ಣ-ತಮ್ಮಗಳ ಸಮೂಹ ಅಡ್ಲಟ್ಟಿಯಲ್ಲಿ ನೆಲಸಿದ್ದರು. ಈ ಬುಡಕಟ್ಟು ಸಮುದಾಯದ ಹಿರಿಯ ಯಜಮಾನಿ 'ದೊಡ್ಡೀರಜ್ಜಿ' ಎಂಬುವಳು ಹಸು, ಕುರಿ, ಮತ್ತು ಮೇಕೆಗಳ ಹಾಲನ್ನು ಕಾಯಿಸಿ ಹೆಪ್ಪು ಹಾಕಿ 'ಗುಡಾಣ'ದಲ್ಲಿ (ಮಣ್ಣಿನ ಸೋರೆ) ಮೊಸರು ಕಡೆಯುತ್ತಿದ್ದಳಂತೆ; ಅದೇ ಸಂದರ್ಭದಲ್ಲಿ ಮೊಸರು ಕಡೆಯುವ ಗುಡಾಣದ ಕೆಳಗೆ ಭೂಮಿಯೊಳಗಿನಿಂದ ಒಂದು ಸಣ್ಣ ಗುಂಡುಕಲ್ಲು ಉದ್ಭವವಾಗಿ ಮೊಸರಿನ ಗುಡಾಣವನ್ನು ಉರುಳಿಸುತ್ತಿತ್ತಂತೆ. ಆಗ ದೊಡ್ಡೀರಜ್ಜಿ ಎಂಬ ಯಜಮಾನಿ ಕಲ್ಲು ತೆಗೆದುಕೊಂಡು ಉದ್ಭವವಾದ ಗುಂಡುಕಲ್ಲಿಗೆ ದಿನೆ ದಿನೆ ಕುಟ್ಟುತ್ತ ಹೋದಂತೆ; ಅದು ದಿನೆ ದಿನೆ ಎತ್ತರಕ್ಕೆ ಬೆಳೆಯಲಾರಂಭಿಸಿ, ಸುಮಾರು ಅರ್ಧ ಅಡಿ ಎತ್ತರಕ್ಕೆ ಬೆಳೆದು ನಿಂತಿತು. ಆಶ್ಚರ್ಯ ದಿಂದ ವಿಚಾರ ಮಾಡಿ ನೋಡಿದಾಗ, ಅದು ಭೂತಪ್ಪ ನಿಮ್ಮ ದೇವರು ಎಂದು ಕನಸಿನಲ್ಲಿ ದೊಡ್ಡೀರಜ್ಜಿಗೆ ಹೇಳಿದಂಗಾಯಿತಂತೆ. ಈ ಘಟನೆಯಿಂದ ಆ ಸ್ಥಳವನ್ನು ಬಿಟ್ಟು ಸ್ವಲ್ಪ ದೂರ ದಕ್ಷಿಣ ಬಲಭಾಗಕ್ಕೆ ಗುಡಿಸಲು ಕಟ್ಟಿಕೊಂಡು ವಾಸ ಮಾಡತೊಡಗಿದರು, ಈ ಹೊತ್ತಿಗೂ ಸಹ 'ಉದ್ಭವ ಭೂತಪ್ಪ' ಮತ್ತು ಭೂತಪ್ಪನ ನೆತ್ತಿಯ ಮೇಲೆ ಕಲ್ಲಿನಿಂದ ಕುಟ್ಟಿದ ಗರುತು ಕಾಣಬಹುದಾಗಿದೆ. ಈ ಉದ್ಭವ ಭೂತಪ್ಪನನ್ನೇ ಮುಮ್ಮಡಿಸಾಗರದಲ್ಲಿ "ಅಡ್ಲಟ್ಟಿ ಭೂತಪ್ಪ" ಎಂದು ಕರೆಯುತ್ತಾರೆ.

'ಅಡ್ಲ' ಎಂದರೆ ಫಲವತ್ತಾದ ಭೂಮಿ ಎಂದು ಅರ್ಥ. ಅಡ್ಲಟ್ಟಿಯ ಮ್ಯಾಸಬೇಡರು ಸಾಕಷ್ಟು ದನಕರು, ಕುರಿ, ಮೇಕೆಗಳು ಮತ್ತು ಫಲವತ್ತಾದ ಭೂಮಿಯನ್ನು ಹೊಂದಿ; ಪಶುಪಾಲನೆಯ ಜೊತೆಗೆ ಕೃಷಿಕರಾಗಿ ಉತ್ತಮ ಬೆಳೆ ಬೆಳೆಯುತ್ತಾ ಆರ್ಥಿಕವಾಗಿ ಮುಂದುವರಿದಿದ್ದರು. ಬೆಳ್ಳಿ, ಬಂಗಾರ, ಹಣ, ದವಸ-ಧಾನ್ಯ ಮತ್ತು ಪಶು ಸಂಪತ್ತನ್ನು ಹೊಂದಿದ ಉತ್ತಮ ಸ್ಥಿತಿವಂತರಾಗಿ, ಹಗೇವುಗಳಲ್ಲಿ ಕಾಳು; ಕೊಡಪಾನಗಳಲ್ಲಿ ಬೆಳ್ಳಿ, ಬಂಗಾರ ಮತ್ತು ಬೆಳ್ಳಿನಾಣ್ಯಗಳನ್ನಿಟ್ಟು ನೆಲದಲ್ಲಿ ಮುಚ್ಚುತ್ತಿದ್ದರಂತೆ. ಈ ಹೊತ್ತಿಗೂ ಮ್ಯಾಸಬೇಡರ ವಸತಿ ಕೇಂದ್ರ ಅಡ್ಲಟ್ಟಿಯಲ್ಲಿ ಅವರು ವಾಸಿಸುತ್ತಿದ್ದ ಮನೆ, ಕಟ್ಟಡದ ತರಗಳು, ಹಗೇವುಗಳು, ಬುನಾದಿ ಮತ್ತು ಮಾನವರು ನೆಲೆಸಿದ್ದ ಹೆಗ್ಗುರುತುಗಳು ಅಲ್ಲಿ ಕಂಡು ಬರುತ್ತವೆ.

ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಉನ್ನತ ಮಟ್ಟ ತಲುಪಿದಾಗ, ನೋಡಿ ಸಹಿಸಲಾರದ ಅಡ್ಲಟ್ಟಿಯ ಸುತ್ತಮುತ್ತ ಕೆಲವು ಊರಿನ ಕಿಡಿಗೇಡಿಗಳು ರಾತ್ರಿ ಹೊತ್ತಿನಲ್ಲಿ ಬಂದು ಕಲ್ಲುಗಳನ್ನು ಎಸೆಯುವುದು, ಕೊಳ್ಳಿ ಬೆಳಕನ್ನು ತಂದು 'ಕೊಳ್ಳಿದೆವ್ವ' ಎಂದು ಹೆದರಿಸುವುದು, ಗುಡಿಸಲು ಮತ್ತು ಹುಲ್ಲಿನ ಬಣವಿಗಳಿಗೆ ಬೆಂಕಿ ಹಚ್ಚುವುದು ಮೊದಲಾದ ತೊಂದರೆಗಳನ್ನು ಕೊಟ್ಟು 'ಅಡ್ಲಟ್ಟಿ' ಬಿಡಿಸಲು ಸಕಲ ಪ್ರಯತ್ನ ನಡೆಸಿದರು. ಆಗ ಅಡ್ಲಟ್ಟಿ ಮ್ಯಾಸಬೇಡರು ಪಕ್ಕದ ಕಮ್ಮತ್ ಮರಿಕುಂಟೆ ಗೌಡರು 'ಚಿಕ್ಕೀರಜ್ಜ'ನ ಹತ್ತಿರ ಹೋಗಿ ಸುತ್ತ ಮುತ್ತಲಿನ ಗ್ರಾಮದ ಕೆಲವು ಕಿಡಿಗೇಡಿ ಜನರು ಕೊಡುವ ತೊಂದರೆಗಳನ್ನು ಹೇಳಿಕೊಂಡಾಗ; ಚಿಕ್ಕೀರಜ್ಜ ಎಂಬ ಯಜಮಾನರು; ನೋಡಿ ನೀವು ಮ್ಯಾಸಬೇಡರು ಬೇರೆ ಬೇಡರಿಗೂ ಮತ್ತು ನಿಮಗೂ ಬಹಳ ವ್ಯತ್ಯಾಸವಿದೆ. ನೀವು ಕೇವಲ ನಾಲ್ಕೈದು ಮನೆಯ ಅಣ್ಣ ತಮ್ಮಗಳು ಒಂಟಿಯಾಗಿ ಅಡವಿಯಲ್ಲಿರುವುದು ಸರಿಯಲ್ಲ ಹತ್ತಿರದ ಯಾವುದಾದರೂ ಊರುಗಳಿಗೆ ಹೋಗಿ ಸೇರಿಕೊಳ್ಳಿರಿ ನಿಮಗೆ ಇಷ್ಟವಿದ್ದರೆ ಕಮ್ಮತ್ ಮರಿರಕುಂಟೆಗೆ ಬನ್ನಿರಿ; ಇಲ್ಲವಾದರೆ ಪಕ್ಕದ ಸಾಣೀಕೆರೆಗಾದರೂ ಹೋಗಿರಿ ಎಂದು ಚಿಕ್ಕೀರಜ್ಜ ಮಾರ್ಗದರ್ಶನ ಮಾಡಿದಾಗ. ಮನೆಯ ಯಜಮಾನರಾದ ಕುರಿ ಓಬನಾಯಕ ಮತ್ತು ಕೆಂಗೋಬನಾಯಕ ಇವರಿಬ್ಬರು ಒಂದು ತೀರ್ಮಾನಕ್ಕೆ ಬಂದು; ಅಣ್ಣ ತಮ್ಮಗಳೆಲ್ಲ ಸೇರಿ ಅಡ್ಲಟ್ಟಿ ಬಿಟ್ಟು ದನ ಕುರಿ ಮೇಕೆಗಳೊಂದಿಗೆ ಸುಮಾರು ಮೂರು ಕಿ.ಮೀ. ದೂರದ ಸಾಣೀಕೆರೆ ಕಡೆಗೆ ಬಂದು; ಸಾಣೀಕೆರೆಯಿಂದ ಒಂದು ಕಿ.ಮೀ. ದೂರದ ಉತ್ತರಕ್ಕೆ ಗಂಜಿಗುಂಟಮ್ಮನ ಹೊರಗಳ ದೇವರ ಗುಡಿಯ ಎಡ ಭಾಗಕ್ಕೆ ಕಾಡುಗೊಲ್ಲರ ಹಳೇಗೊಲ್ಲರಹಟ್ಟಿ ಮತ್ತು ದೇವಸ್ಥಾನದ ಹಿಂಭಾಗ ಕುಗಟೆ ಮರದ ಹತ್ತಿರ ಗುಡಿಸಲು ಮತ್ತು ದನಕರು, ಕುರಿ, ಮೇಕೆಗಳ ಗೂಡು ಕಟ್ಟಿಕೊಂಡು; ಅಡ್ಲಟ್ಟಿಯಿಂದ ಬಂದ ಮ್ಯಾಸಬೇಡರು ಪಶು ಮತ್ತು ಮೇಷ ಪಾಲಕರಾಗಿ ಕೆಲಕಾಲ ಅಲ್ಲಿಯೇ ನೆಲೆನಿಂತರು.

ಹಲವಾರು ವರ್ಷಗಳ ನಂತರ ಅಡ್ಲಟ್ಟಿ ಮ್ಯಾಸಬೇಡರು ಸಾಮೀಕೆರೆಗೆ ಬಂದು ನೆಲಸಿದ ಮೇಲೆ, ಸಾಣೀಕೆರೆ ಗ್ರಾಮದ ಮಂದಲವರು ಬೆಡಗಿನ 'ಕಾವಲರು' ಮತ್ತು 'ಅಡ್ಲರು' ಈ ಎರಡೂ ಮನೆತನಗಳಿಗೆ ನೆಂಟಸ್ತಿಕೆ ಬೆಳೆಯಲಾರಂಬಿಸಿತು. ಕುರಿಓಬನಾಯಕ ಮತ್ತು ಕೆಂಗೋಬನಾಯಕ ಇವರ ಸಂತತಿಯವರಾದ ಹುಚ್ಚೋಬನಾಯಕ, ಈರನಾಯಕ, ಕೆಂಗೋಬಯ್ಯ ಮತ್ತು ಬಡರಂಗಪ್ಪ ಎಂಬುವರ ಮಕ್ಕಳು ಕ್ರಿ.ಶ.೧೯೧೬ರಲ್ಲಿ ಆಸ್ತಿಯನ್ನು ಪಾಲು-ವಿಭಾಗ ಮಾಡಿಕೊಂಡು "ಅಡ್ಲರು" ಎಂಬ ಹೆಸರಿನಲ್ಲಿ ಸಾಣೀಕೆರೆಯಲ್ಲಿ ನೆಲಿಸಿದ್ದಾರೆ. ಈ ಸಾಣೀಕೆರೆಯು ಚಳ್ಳಕೆರೆ

ಯಿಂದ ದಕ್ಷಿಣಕ್ಕೆ ಹಿರಿಯೂರಿಗೆ ಹೋಗುವ ರಸ್ತೆಯಲ್ಲಿ ಸುಮಾರು ೧೫ ಕಿ.ಮೀ. ದೂರದದಲ್ಲಿದೆ. ಈ ಊರಿನ ಪ್ರಮುಖ ದೇವಾಲಯಗಳೆಂದರೆ ಗಂಜಿಗುಂಟಮ್ಮ, ಏಕನಾಥೇಶ್ವರಿ, ಈಶ್ವರ, ಆಂಜನೇಯ ಮತ್ತು ದುರುಗಮ್ಮ. ಇಲ್ಲಿ ಬೇಡರು ಮತ್ತು ಗೊಲ್ಲರು ಸರಿಸಮಾನ ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಮುಮ್ಮಡಿಸಾಗರದ ಅಡ್ಲಟ್ಟಿ ಭೂತಪ್ಪನನ್ನು ಆರಾಧಿಸುವ ಮೂಲತಃ ಅಡ್ಲಟ್ಟಿಯಿಂದ ಬಂದು ಸಾಣೇಕೆರೆಯಲ್ಲಿ ನೆಲೆಸಿರುವ ಪ್ರಸ್ತುತ ೨೨ ಮನೆಗಳು ಮ್ಯಾಸಬೇಡ ಬುಡಕಟ್ಟಿನ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಈ ಅಡ್ಲಟ್ಟಿ ಮ್ಯಾಸಬೇಡರು ತಾವು ನಿಡಗಲ್ಲು ಪ್ರಾಂತ್ಯದಿಂದ ಬಂದವರೆಂದು; ಭಾನುಕೋಟೆ ಪೋತರಾಜಲು ಪೆಟ್ಟಿಗೆ ದೇವರಿಗೆ ಸೇರಿದವರೆಂದು; ಸೂರ್ಯವಂಶದ ಚಿನ್ನಮೊಗಲವರು ಬೆಡಗಿನವರೆಂದು; ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ ನಮ್ಮ ಮನೆದೇವರೆಂದು ಹೇಳಿಕೊಳ್ಳುತ್ತಾರೆ. ಜೊತೆಗೆ ರಾಮದೇವರು, ಭೂತಪ್ಪ ಮತ್ತು ಕರಿಯಮ್ಮ ದೇವರುಗಳನ್ನು ಇವರು ಆರಾಧಿಸುತ್ತಾರೆ. ಚಳ್ಳಕೆರೆ ತಾಲ್ಲೂಕು, ಗೋಸಿಕೆರೆ ಶ್ರೀಗುರುಸಾರ್ವಾಡೇಶ್ವರ ಸ್ವಾಮಿಗಳ ಮಠದ ಹಸ್ತ ಪ್ರತಿಯಲ್ಲಿ "ಚಿನ್ನಮೊಗಲವರು ಬೆಡಗಿನ ಮ್ಯಾಸಬೇಡರು ಮೂಲತಃ ಮಹಾರಾಷ್ಟ್ರದ ವಿದರ್ಭದೇಶದ ರಾಜವಂಶದವರು; ಭಾನುಕೋಟೆ ಪೋತರಾಜಲು ಇವರ ಪೆಟ್ಟಿಗೆ ದೇವರು; ನಿಡಗಲ್ಲು ಸಂತತಿಗೆ ಸೇರಿದ ಸೂರ್ಯವಂಶದವರು; ವಿಠಲ ಪಂಡಿತ ಗೋತ್ರಕ್ಕೆ ಸೇರಿದ, ವೈಷ್ಣವ ಪಂಥದವರು. ಓಬಳದೇವರು, ರಾಮದೇವರು ಕರಿಯಮ್ಮ ಇವರ ದೇವರುಗಳು" ಎಂದು ಬರೆಯಲಾಗಿದೆ. ಈ ಎಲ್ಲಾ ಐತಿಹಾಸಿಕ ಹಿನ್ನೆಲೆಯನ್ನು ನೋಡಿದಾಗ "ಅಡ್ಲಟ್ಟಿ ಮ್ಯಾಸಬೇಡರು" ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕ ಎಂಬ ಮೂರು ರಾಜ್ಯಗಳಲ್ಲಿ ನೆಲೆನಿಂತು ವಲಸೆ ಬಂದವರು ಎಂದು ಹೇಳಬಹುದು. ಸುಮಾರು ಒಂದು ನೂರು ಭಕ್ತಿಗೀತೆಗಳನ್ನು ಬರೆದು, ಧ್ವನಿಸುರುಳಿಯ ಮೂಲಕ ಬಿಡುಗಡೆ ಮಾಡಿದ ಯುವ ಸಾಹಿತಿ ಪ್ರೊ.ಸಾಣೇಕೆರೆ ಸಣ್ಣೋಬಯ್ಯ (ಜನನ: ೨೩.೦೯.೧೯೭೪) ಇದೇ ಊರಿನ ಮ್ಯಾಸಬೇಡ ಬುಡಕಟ್ಟಿನ "ಅಡ್ಲರು" ಮನೆತನದವರು. ಸಾಣೇಕೆರೆಯಲ್ಲಿ ನೆಲಸಿದ ಅಡ್ಲಟ್ಟಿ ಮ್ಯಾಸಬೇಡರು ಪ್ರತಿ ವರ್ಷಕ್ಕೆ ಒಂದು ಸಾರಿ ಯುಗಾದಿ ಹಬ್ಬ ಅಥವಾ ಮದುವೆ ಮಂಗಳ ಕಾರ್ಯದಲ್ಲಿ ಇವರು ಮೂಲ ನೆಲೆಯಾದ ಮುಮ್ಮಡಿಸಾಗರದ 'ಅಡ್ಲಟ್ಟಿ ಭೂತಪ್ಪ'ಗೆ ವಿಶೇಷವಾದ ಪೂಜೆ ಅಥವಾ ಪರ್ವ ಮಾಡಿಕೊಂಡು ಬರುತ್ತಾರೆ.

ಸಾಣೇಕೆರೆಯಿಂದ ಉತ್ತರಕ್ಕೆ ಸುಮಾರು ಎರಡು ಕಿ.ಮೀ.. ದೂರದಲ್ಲಿ ಖಂಡೇನಹಳ್ಳಿ ಗೊಲ್ಲರಹಟ್ಟಿ ಇದೆ. ಈ ಹಟ್ಟಿಯಲ್ಲಿ ಕಾಡುಗೊಲ್ಲರ ೭೭ ಮನೆಗಳಿವೆ. ಹಟ್ಟಿಯ ಮಧ್ಯೆ ತಿಮ್ಮಪ್ಪನ ಗುಡಿ ಇದ್ದು, ಇದು ಆಧುನಿಕ ರೀತಿ ನೀತಿಗಳಂತೆ ಕಲ್ಲಿನ ಕಟ್ಟಡವನ್ನು ಹೊಂದಿದೆ. ಹಟ್ಟಿಯಿಂದ ಹೊರಗೆ ಪಶ್ಚಿಮ ವಾಯುವ್ಯ ಭಾಗಕ್ಕೆ

* ಕಮತ್ ಮರಿಕುಂಟೆ ಗೌಡರು ಚಿಕ್ಕೀರಜ್ಜ ಲಿಂಗಾಯಿತರಾದರೂ ಅಡ್ಲಟ್ಟಿ ಮ್ಯಾಸಬೇಡರು ಪ್ರೀತಿ ವಿಶ್ವಾಸಗಳಿಂದ 'ಮಾವ' ಎಂದೇ ಕರೆಯುತ್ತಿದ್ದರಂತೆ. ಅಡ್ಲಟ್ಟಿ ಮ್ಯಾಸಬೇಡರಿಗೆ ಮಾರ್ಗದರ್ಶಕನ ನೀಡಿದ ಚಿಕ್ಕೀರಜ್ಜನ ಸಂತತಿಯವರಾದ, ಸಾಣೇಕೆರೆ 'ವೀರಭದ್ರಜ್ಜ'ರ ಕುಟುಂಬದವರನ್ನೂ ಅಡ್ಲಟ್ಟಿ ಮ್ಯಾಸಬೇಡರು ಇಂದಿಗೂ ನೆಂಟರೆಂದು ಭಾವಿಸಿಕೊಂಡಿದ್ದಾರೆ.

ಜುಂಜಪ್ಪನ ಕಳ್ಳೆಪೌಳಿಯ ದೇವಸ್ಥಾನ ಕಂಡು ಬರುತ್ತವೆ. ಸಾಣೀಕೆರೆಯಿಂದ ಒಂದು ಕಿ.ಮೀ. ದೂರದ ಉತ್ತರಕ್ಕೆ ಗಂಜಿಗುಂಟಮ್ಮನ ಹೊರಗಳ ದೇವರ ಗುಡಿಯ, ಎಡ ಭಾಗಕ್ಕೆ ಕಾಡುಗೊಲ್ಲರ "ಹಳೇಗೊಲ್ಲರಹಟ್ಟಿ" ಮತ್ತು ದೇವಸ್ಥಾನ ಹಿಂಭಾಗದ ಕುಗಟೆ ಮರದ ಹತ್ತಿರ ಮ್ಯಾಸಬೇಡರ "ಅಡ್ಲಟ್ಟಿ" ಅಕ್ಕ-ಪಕ್ಕ ಇದ್ದ ಹೆಗ್ಗುರುತುಗಳು ಇಲ್ಲಿ ಕಂಡು ಬರುತ್ತವೆ. ಈ ಪ್ರದೇಶದಲ್ಲಿ ವಾಸಿಸುವ ಕಾಡುಗೊಲ್ಲರ ಸಂಸ್ಕೃತಿಗೂ, ಸಾಣೀಕೆರೆಯಲ್ಲಿ ನೆಲೆಸಿರುವ ಮ್ಯಾಸಬೇಡರಾದ ಅಡ್ಲರು ಸಂಸ್ಕೃತಿಗೂ ಪರಸ್ಪರ ಏಕಸಾಮ್ಯತೆ ಕಂಡು ಬರುತ್ತದೆ. ಸಾಣೀಕೆರೆಯಿಂದ ದಕ್ಷಿಣಕ್ಕೆ ಕೆರೆಯ ದಂಡೆಯಲ್ಲಿ ಕಾಡುಗೊಲ್ಲರು ವಾಸಿಸುವ ೨೬ ಮನೆಗಳು ಕೆರೆಮುಂದಲಹಟ್ಟಿಯಲ್ಲಿ ಕಂಡು ಬರುತ್ತವೆ. ಈ ಹಟ್ಟಿಯ ಮಧ್ಯೆ ಕಳ್ಳೆಪೌಳಿಯ ಒಳಗೆ ಚಿತ್ರದೇವರು, ತಿಮ್ಮಪ್ಪ, ಗಟ್ಟಪ್ಪ ಮತ್ತು ಚಿಕ್ಕಣ್ಣ ಎಂಬ ದೇವರುಗಳ ಹಂಚಿ ಹುಲ್ಲಿನ ಚಿಕ್ಕ ದೇವಸ್ಥಾನಗಳಿವೆ. ಈ ಹಟ್ಟಿಯಲ್ಲಿ ಚಿತ್ರದೇವರ ಪೂಜಾರಿ ಚಿತ್ತಣ್ಣ 'ಗಣೆಊದಿ' ಕಣಿ ಹೇಳುವುದು ಪ್ರಸಿದ್ಧಿ ಪಡೆದಿದೆ. ಕೆರೆಮುಂದಲಹಟ್ಟಿಯಿಂದ ದಕ್ಷಿಣಕ್ಕೆ ಸುಮಾರು ಒಂದು ಕಿ.ಮೀ. ದೂರದ, ಕೆರೆಯ ದಡದಲ್ಲಿ ಚಿತ್ರದೇವರ ಕಲ್ಲಿನಪೌಳಿ ಇದೆ. ಈ ಪೌಳಿ ಮತ್ತು ಚಿತ್ರದೇವರ ಬಗ್ಗೆ ಸ್ಥಳೀಯ ಜನರು ಬಹಳ ಭಯಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಬುಡಕಟ್ಟು ಜನಾಂಗದ ಸಂಸ್ಕೃತಿ ಮತ್ತು ಗುಣಲಕ್ಷಣಗಳು ಈ ಹಟ್ಟಿಯ ಕಾಡುಗೊಲ್ಲರಲ್ಲಿ ಪ್ರಧಾನವಾಗಿ ಕಂಡು ಬರುತ್ತವೆ.

ಅಡ್ಲಟ್ಟಿ ಮ್ಯಾಸಬೇಡರ ವಂಶವೃಕ್ಷ

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಗ್ರಾಮದ ಅಡ್ಲೋರ ಮನೆತನದ ವಂಶವೃಕ್ಷವನ್ನು ಇಲ್ಲಿ ಕೊಡಲಾಗಿದೆ. ಮೂಲತಃ ನಿಡಗಲ್ಲು ಸಂಸ್ಥಾನದಿಂದ ವಲಸೆ ಬಂದು ಖಂಡೇನಹಳ್ಳಿ ಮತ್ತು ನಾಗತಿಹಳ್ಳಿಯಲ್ಲಿ ಕೆಲಕಾಲ ನೆಲಸಿ ನಂತರ ಕಮ್ಮತ್ ಮರಿಕುಂಟೆ ಸಮೀಪ ಮುಮ್ಮಡಿಸಾಗರ ಅಡ್ಲಟ್ಟಿ ಎಂಬಲ್ಲಿ ವಾಸವಾಗಿದ್ದು ಕಾಲಕ್ರಮೇಣ ಸಾಣೀಕೆರೆಗೆ ಬಂದಂಥ ಅಡ್ಲಟ್ಟಿ ಮ್ಯಾಸಬೇಡರ ವಂಶವೃಕ್ಷ ಈ ಮುಂದಿನಂತಿದೆ.

ವಂಶವೃಕ್ಷದ ಪಟ್ಟಿ

ಕುರಿಓಬನಾಯಕ + ದೊಡ್ಡೀರಮ್ಮ (ಕ್ರಿ.ಶ.೧೮೦೦)

- ಹುಚ್ಚೋಬನಾಯಕ + ಮುದ್ದರಂಗಜ್ಜಿ (ಕ್ರಿ.ಶ.೧೮೪೦)
  1. ದೊಡ್ಡೋಬಯ್ಯ - ೧೮೭೫
  2. ಮರಿಕುಂಟ್ಲನಾಯಕ - ೧೮೭೮
  3. ರಂಗಮ್ಮ - ೧೮೮೧
  4. ನಿಂಗಮ್ಮ - ೧೮೮೫
  5. ಬೋರಮ್ಮ - ೧೮೯೦
  6. ಮಟೋಬನಾಯಕ - ೧೮೯೪
  7. ಕುರಿಓಬನಾಯಕ - ೧೮೯೮
  8. ಗೋವಿಂದನಾಯಕ - ೧೯೦೧
  9. ಈರೋಬನಾಯಕ - ೧೯೦೫
  10. ದೊಡ್ಡೀರಮ್ಮ - ೧೯೦೮
  11. ತಿಪ್ಪಮ್ಮ - ೧೯೧೧
- ಈರನಾಯಕ + ಸಣ್ಣೋಬಕ್ಕ (ಕ್ರಿ.ಶ.೧೮೪೫)
  1. ದೊಡ್ಡೋಬಕ್ಕ - ೧೮೯೦
  2. ಚಿನ್ನಮ್ಮ - ೧೮೯೫
  3. ಸಾಂತಮ್ಮ - ೧೯೦೦
  4. ನರಸಿಂಹನಾಯಕ - ೧೯೦೫
  5. ದಾಸನಾಯಕ - ೧೯೦೮
  6. ದೇವೀರಮ್ಮ - ೧೯೧೨

ಕೆಂಗೋಬನಾಯಕ + ಬಡರಂಗಜ್ಜಿ (ಕ್ರಿ.ಶ. ೧೮೧೦)

- ಕೆಂಗೋಬಯ್ಯ + ಸತ್ಯಮ್ಮ (ಕ್ರಿ.ಶ.೧೮೫೦)
  - ಸಣ್ಣೋಬನಾಯಕ + ಲಸಮಕ್ಕ (ಕ್ರಿ.ಶ.೧೮೮೦)
    - ಕೆಂಗೋಬಯ್ಯ + ಸಿದ್ದಮ್ಮ (ಕ್ರಿ.ಶ.೧೯೩೫)
      1. ಓಬಳಮ್ಮ
      2. ಲಕ್ಷ್ಮೀದೇವಿ
      3. ಮಂಜಮ್ಮ
      4. ಸಣ್ಣೋಬಯ್ಯ
      5. ಈಶ್ವರಪ್ಪ
      6. ಗುರುಲಿಂಗಮ್ಮ
      7. ಕರಿಯಮ್ಮ
  - ನಿಂಗನಾಯಕ + ತಿಪ್ಪಮ್ಮ (ಕ್ರಿ.ಶ.೧೮೮೫)
    1. ಸತ್ಯಮ್ಮ
    2. ಜಯಮ್ಮ
    3. ಓಬಳಮ್ಮ
    4. ಶಿವಕ್ಕ
    5. ಅಂಬಕ್ಕ
    6. ಚಿದಾನಂದ
    7. ಕಾಂತರಾಜ
- ಬಡರಂಗಪ್ಪ + ಬಡರಂಗಮ್ಮ (ಕ್ರಿ.ಶ.೧೮೫೫)
  - ನರಸಿಂಹಜ್ಜ + ಲಕ್ಷ್ಮಮ್ಮ (ಕ್ರಿ.ಶ.೧೮೯೦)
    - (ನಷ್ಟಸಂತತಿ)
  - ದಾಸಪ್ಪ + ರಂಗಮ್ಮ (ಕ್ರಿ.ಶ.೧೮೯೫)
    - ಓಬಣ್ಣ + ಈರಕ್ಕ, ಲಕ್ಷ್ಮೀದೇವಿ (ಕ್ರಿ.ಶ.೧೯೩೮)
      1. ಓಬಳಮ್ಮ
      2. ಕೆಂಚಮ್ಮ
      3. ನಾಗರಾಜ
      4. ರಂಗಮ್ಮ
      5. ನರಸಿಂಹಯ್ಯ

I. ದೊಡ್ಡೋಬಯ್ಯ+ತಿಪ್ಪಮ್ಮ	II. ಮರಿಕುಂಟ್ನನಾಯಕ+ರಂಗಮ್ಮ	III. ಮಟೋಬನಾಯಕ+ಓಬಮ್ಮ	IV. ಕುರಿಓಬನಾಯಕ+ಕರಿಯಮ್ಮ	V. ಗೋವಿಂದನಾಯಕ + ಗಾದಿರಮ್ಮ	VI. ಈರೋಬನಾಯಕ + ಕರಿಯಮ್ಮ
↓ (ಕ್ರಿ.ಶ.೧೮೭೫)	↓ (ಕ್ರಿ.ಶ.೧೮೭೮)	(ಕ್ರಿ.ಶ.೧೮೯೪) ↓	(ಕ್ರಿ.ಶ.೧೮೯೮) ↓	↓ (ಕ್ರಿ.ಶ.೧೯೦೧)	↓ (ಕ್ರಿ.ಶ.೧೯೦೫)
೧. ಚಿನ್ನೋಬಯ್ಯ	೧. ನರಸಿಂಹಯ್ಯ	೧. ಓಬಣ್ಣ	೧. ಓಬಕ್ಕ	೧. ಓಬಣ್ಣ	೧. ಓಬಕ್ಕ
೨. ಸಾಂತಮ್ಮ	೨. ತಿಪ್ಪಯ್ಯ	೨. ನಿಂಗಯ್ಯ	೨. ತಿಪ್ಪೇಸ್ವಾಮಿ	೨. ನಿಜಲಿಂಗಪ್ಪ	೨. ಜಯಮ್ಮ
೩. ಬೋರಮ್ಮ	೩. ಸಣ್ಣೋಬಯ್ಯ	೩. ತಿಪ್ಪೇಸ್ವಾಮಿ	೩. ಹುಚ್ಚೋಬಯ್ಯ		೩. ತಿಪ್ಪೇಸ್ವಾಮಿ
೪. ನರಸಿಂಹಯ್ಯ		೪. ಜಯಣ್ಣ	೪. ಮುದ್ದರಂಗಮ್ಮ		೪. ಏಕಾಂತಪ್ಪ
೫. ತಿಪ್ಪೇಸ್ವಾಮಿ			೫. ಲಕ್ಷ್ಮೀದೇವಿ		೫. ಮಹಂತೇಶ
			೬. ಮಹಂತೇಶ		೬. ನಾಗರಾಜ

೨.೧.೩. ಸೂರನಹಳ್ಳಿ ಹುಲಿಕಲ್ಲು : ಚಳ್ಳಕೆರೆಯಿಂದ ಪರಶುರಾಂಪುರಕ್ಕೆ ಹೋಗುವ ಮಧ್ಯೆ ಸೂರನಹಳ್ಳಿ ಗೇಟಿನಿಂದ ದಕ್ಷಿಣಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ 'ಸೂರನಹಳ್ಳಿ' ಎಂಬ ಗ್ರಾಮವಿದೆ. ಈ ಗ್ರಾಮದಿಂದ ಸ್ವಲ್ಪ ದೂರದ ಪೂರ್ವ-ಈಶಾನ್ಯ ದಿಕ್ಕಿನಲ್ಲಿ ಲಿಂಗಾಯಿತರ ಜಾತಿಗೆ ಸೇರಿದ ಆರ್.ವಿರೂಪಾಕ್ಷಪ್ಪ ಎಂಬವರ ಹೊಲದಲ್ಲಿ ಮ್ಯಾಸಬೇಡರ ಶರಣ ಗಾದರಿಪಾಲನಾಯಕನಿಗೆ ಸಂಬಂಧ ಪಟ್ಟ ನಾಲ್ಕು 'ಹುಲಿಕಲ್ಲು'ಗಳಿವೆ. ಪೂರ್ವಾಭಿಮುಖವಾಗಿ ನಿಂತಿರುವ ಈ ಹುಲಿಕಲ್ಲುಗಳಲ್ಲಿ, ಹಿಂಭಾಗದ ಒಂದು ಕಲ್ಲು ಸುಮಾರು ಎರಡು ಅಡಿ ಎತ್ತರವಿದ್ದು ಮಣ್ಣಲ್ಲಿ ಮುಚ್ಚಿ ಹೋಗಿದೆ. ಈ ಕಲ್ಲಿನಲ್ಲಿ ಗಾದರಿಪಾಲನಾಯಕ ಬಿಲ್ಲು ಹಿಡಿದ ಮತ್ತು ಹಸುವಿನ ಚಿತ್ರ ಕಂಡು ಬರುತ್ತವೆ. ಉಳಿದ ಮುಂಭಾಗದ ಮೂರು ಕಲ್ಲುಗಳು ಸುಮಾರು ಐದು ಅಡಿ ಎತ್ತರವಿದ್ದು, ಸುಂದರವಾದ ಕೆತ್ತನೆಯಿಂದ ಕೂಡಿವೆ. ಹುಲಿಕಲ್ಲಿನ ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ಆನೆ ಚಿತ್ರಗಳು; ಮಧ್ಯ ಭಾಗದಲ್ಲಿ ದೇವತೆಗಳೊಂದಿಗೆ ಪಲ್ಲಕ್ಕಿಯಲ್ಲಿ ಸ್ವರ್ಗಕ್ಕೆ ಮೆರವಣಿಗೆ ಹೋಗುತ್ತಿರುವದು; ಕೆಳಭಾಗದಲ್ಲಿ ಯುದ್ಧದ ಚಿತ್ರಣ ಮತ್ತು ಪ್ರತಿಯೊಂದು ಹುಲಿಕಲ್ಲುಗಳ ಸುತ್ತ ಅಸ್ಪಷ್ಟವಾದ ಅಕ್ಷರಗಳು ಕಂಡು ಬರುತ್ತವೆ.

ಹುಲಿಕಲ್ಲು ಇರುವ ಗದ್ದೆಯ ಸುತ್ತ-ಮುತ್ತ ನವಣೆ, ಹತ್ತಿ, ತೊಗರಿ ಬಿತ್ತುವುದಿಲ್ಲ, ಈ ಮೂರು ದವಸ ಧಾನ್ಯಗಳು ಗಾದರಿಪಾಲನಾಯಕನಿಗೆ ಆಗುವುದಿಲ್ಲವಂತೆ. ಚಳ್ಳಕೆರೆ ತಾಲ್ಲೂಕಿನ ನನ್ನಿವಾಳ, ನೇರ್ಲಗುಂಟೆ, ಬೊಂಬೇರಹಳ್ಳಿ, ಯಲಗಟ್ಟೆ ಮತ್ತು ನಾಯಕನಹಟ್ಟಿ ಕಡೆಯಿಂದ ಎತ್ತಿನಗಾಡಿ ಕಟ್ಟಿಕೊಂಡು, ದೇವರೆತ್ತುಗಳ ಜೊತೆಗೆ ಗಾದರಿದೇವರುಗಳು ಇಲ್ಲಿಗೆ ಬರುತ್ತವೆ. ಒಂದು ರಾತ್ರಿ ಇಲ್ಲಿ ತಂಗಿದ್ದು, ವೇದಾವತಿ ನದಿಯಲ್ಲಿ ಗಂಗೆಪೂಜೆ ಮಾಡಿಕೊಂಡು, ಹುಲಿಕಲ್ಲುಗಳ ಹತ್ತಿರ ಹರಿಸೇವೆ ಮಾಡಿ "ಎಳ್ಳುಂಡೆ ಸಜ್ಜೆರೊಟ್ಟಿ"ಗಳನ್ನು ಹುಲಿಕಲ್ಲುಗಳಿಗೆ ಎಡೆ ಹಾಕಿ, ಊಟ ಮುಗಿದ ನಂತರ ದೇವರು ಮತ್ತು ದೇವರೆತ್ತುಗಳನ್ನು ಹುಲಿಕಲ್ಲಿಗೆ ಮೂರು ಸಾರಿ ಸುತ್ತುವರಿಸಿಕೊಂಡು ಹೋಗುತ್ತಾರೆ.

ಈ ಜಮೀನಿನ ಮಾಲಿಕರಾದ ಆರ್.ವಿರೂಪಾಕ್ಷಪ್ಪ ನವರು ಕೂಡ, ಹೊಲದಲ್ಲಿ ಬೆಳೆ ಇಡುವಾಗ, ಬೆಳೆತೆಗೆಯುವಾಗ, ಯುಗಾದಿ, ಶಿವರಾತ್ರಿ ಮದುವೆ ಮಂಗಳ ಕಾರ್ಯದಲ್ಲಿ ಬೆಲ್ಲದ ಹುಗ್ಗಿ ಮತ್ತು ಅನ್ನ ಎಡೆ ಹಾಕಿ ಪೂಜೆ ಮಾಡುತ್ತಾರಂತೆ. ವಡೇರಹಳ್ಳಿ, ಯಲಗಟ್ಟೆ, ಬೊಂಬೇರಹಳ್ಳಿ, ತಿಮ್ಮಣ್ಣನಾಯ್ಕನ ಕೋಟೆ, ಚಲ್ಲೂರು, ಲಿಂಗದಹಳ್ಳಿ, ನೇರ್ಲಗುಂಟೆ, ನಾಯಕನಹಟ್ಟಿ ಮೊದಲಾದ ಗ್ರಾಮದ ಮುಚ್ಚಲವರು ಬೆಡಗಿನ ಮ್ಯಾಸಬೇಡರು ಗಾದರಿಪಾಲನಾಯಕಗೆ ನಡೆದು ಕೊಳ್ಳುತ್ತಾರೆ ಮತ್ತು ಮನೆದೇವರೆಂದು ಹೇಳಿಕೊಳ್ಳುತ್ತಾರೆ.

ಪಶುಪಾಲಕನಾದ ಗಾದರಿಪಾಲನಾಯಕ ನನ್ನಿವಾಳ ಗುಡ್ಡದಿಂದ ನಿಡಗಲ್ಲು ಗುಡ್ಡಕ್ಕೆ ದನ ಹೊಡೆದುಕೊಂಡು ಹೋಗುತ್ತಿರುವಾಗ, ಸೂರನಹಳ್ಳಿ ಹತ್ತಿರ ಬಂದಾಗ ವೇದಾವತಿ (ತೊರೆ) ನದಿ ತುಂಬಿ ಹರಿಯುತ್ತಿದ್ದರಿಂದ ನದಿ ದಾಟಲು ಸಾಧ್ಯವಿಲ್ಲದಿದ್ದಾಗ ವೇದಾವತಿ ನದಿ ದಡದಲ್ಲಿ ತಾತ್ಕಾಲಿಕವಾಗಿ ದನಗಳ ಗೂಡು ತಿರುವಿಕೊಂಡು, ತೊರೆ ತಗ್ಗುವ ತನಕ ಕೆಲಕಾಲ ಇಲ್ಲಿ ಗಾದರಿಪಾಲನಾಯಕ ನೆಲಸಿದ್ದನಂತೆ. ದಟ್ಟವಾದ ಕಾಡುಗಳಿಂದ ಸುತ್ತುವರಿದ ಈ ಪ್ರದೇಶದಲ್ಲಿ, ಸಹಜವಾಗಿ ದನಗಳ ಗೂಡಿಗೆ ಆಹಾರಕ್ಕಾಗಿ "ಹುಲಿ" ಬಂದಾಗ ಗಾದರಿಪಾಲನಾಯಕ ವೀರಾವೇಶದಿಂದ ಹೋರಾಡಿ ಹುಲಿಯನ್ನು ಕೊಂದನಂತೆ. ವೇದಾವತಿ ನದಿಯ ನೀರು ತಗ್ಗಿದ ನಂತರ

ಗಾದರಿಪಾಲನಾಯಕ ದನಗಳನ್ನು ಹೊಡೆದುಕೊಂಡು ಮೂಡಗಡೆಗೆ ಹೋದ ಎಂದು ಹೇಳುತ್ತಾರೆ. ಗಾದರಿಪಾಲನಾಯಕ ಕೆಲಕಾಲ ಇಲ್ಲಿ ನೆಲಸಿದ್ದು, ಹುಲಿಯನ್ನು ಕೊಂದ ಕುರುಹಾಗಿ ಈ ಹುಲ್ಲಿಕಲ್ಲುಗಳನ್ನು ನೆಟ್ಟಿದ್ದಾರೆ

ಸಂಶೋಧನ ಕ್ಷೇತ್ರಕಾರ್ಯಕ್ಕೆ ಸೂರನಹಳ್ಳಿಯನ್ನು ಆಯ್ಕೆಮಾಡಿಕೊಂಡಾಗ ಈ ಊರಲ್ಲಿ ಮ್ಯಾಸಬೇಡರ ಏಳು ಮನೆಗಳು ಮತ್ತು ಹಟ್ಟಿಗೊಲ್ಲರ ೫೧ ಮನೆಗಳು ಕಂಡು ಬಂದವು. ಮ್ಯಾಸಬೇಡರ ಮನೆಗಳು ಕಡಿಮೆ ಸಂಖ್ಯೆಯಲ್ಲಿ ಕಂಡು ಬಂದರೂ "ಗಾದರಿಪಾಲನಾಯಕನ ಹುಲಿಕಲ್ಲು" ಗಳಿಂದ ಈ ಊರು ಬಹಳ ಖ್ಯಾತಿ ಹೊಂದಿದೆ. ಈ ಪ್ರದೇಶದ ಹಟ್ಟಿಗೊಲ್ಲರು ಮುಗ್ಧರು ಮತ್ತು ಪ್ರಾಮಾಣಿಕರು; ಕರಿಯಜ್ಜಿ, ಸಿರಿಯಜ್ಜಿ ಮತ್ತು ಬಾಲಜ್ಜಿ ಗುಂಪಿನವರು ಈ ಗೊಲ್ಲರಹಟ್ಟಿಯಲ್ಲಿ ನೆಲಸಿದ್ದಾರೆ. ಕದರಿನರಸಿಂಹ ಮತ್ತು ಕಾಟಮ್ಮದೇವರುಗಳು ಈ ಹಟ್ಟಿಯಲ್ಲಿವೆ. ಕದರಿ ನರಸಿಂಹಸ್ವಾಮಿಗೆ ಮ್ಯಾಸಬೇಡರ ಅಹೋಬಲ ನರಸಿಂಹಸ್ವಾಮಿಯಂತೆ 'ಬಿಲ್ಲುಗೂಡು' ಮಾಡುತ್ತಾರೆ. ಈ ಹಟ್ಟಿಯ ಗೊಲ್ಲರು ಬಹಳ ಸಂಪ್ರದಾಯ ಮತ್ತು ನಂಬಿಕೆಯುಳ್ಳ ಸರಳಜೀವಿಗಳಂತೆ ಕಂಡು ಬರುತ್ತಾರೆ.

೨.೨. ಕಾಡುಗೊಲ್ಲರ ಧಾರ್ಮಿಕ ಕೇಂದ್ರಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ನೆಲಸಿರುವ ಕಾಡುಗೊಲ್ಲರು ತಮ್ಮದೇ ಆದಂತಹ ಹಲವಾರು ಧಾರ್ಮಿಕ ಕೇಂದ್ರಗಳನ್ನು ಹೊಂದಿದ್ದಾರೆ. ಹೊಸದುರ್ಗ ತಾಲ್ಲೂಕು ದೇವಪುರದ ಹಾಲುರಾಮೇಶ್ವರ; ಗವಿರಂಗಾಪುರದ ಗವಿರಂಗನಾಥ; ಬಾಗೂರಿನ ಚನ್ನಕೇಶವ. ಪಾವಗಡ ತಾಲ್ಲೂಕಿನ ನಿಡಗಲ್ಲು ಬೆಟ್ಟದ ಬುಡದ ರಾಮತೀರ್ಥದ ಹೊಂಡ. ತರಿಕೆರೆ ತಾಲ್ಲೂಕು ಕಲ್ಲತ್ತಿಗಿರಿ. ಹೊಳಲ್ಕರೆ ತಾಲ್ಲೂಕು ಮಿಂಚೇರಿ ಮತ್ತು ಗಾದ್ರಿಗುಡ್ಡ; ಚಿತ್ರಹಳ್ಳಿ ಚಿತ್ರಲಿಂಗೇಶ್ವರ; ಅವಳಿಹಟ್ಟಿ ಈರಾವಳೇಶ್ವರ; ರಾಮಗಿರಿ ಕಾಟಮ್ಮಲಿಂಗೇಶ್ವರ; ಗಂಗಸಮುದ್ರದ ರಂಗನಾಥಸ್ವಾಮಿ, ಕಾಟಮ್ಮಲಿಂಗೇಶ್ವರ, ಹಾಲು ಗುಡ್ಡದಪ್ಪ ಮತು ಗಾದರಿಲಿಂಗೇಶ್ವರ. ಹಿರಿಯೂರು ತಾಲ್ಲೂಕು ಕೂಡಲಹಳ್ಳಿ ಹತ್ತಿರ ಕೂಡ್ಲಿ ಸಂಗಮೇಶ್ವರನ ವೇದಾವತಿ ನದಿ; ಕೂಡಲಹಳ್ಳಿಯ ಪಾತೇಲಿಂಗೇಶ್ವರ; ಇಕ್ಕನೂರು ಕಾಟಮ್ಮಲಿಂಗೇಶ್ವರ; ನಂದಿಹಳ್ಳಿ ರಂಗನಾಥಸ್ವಾಮಿ; ಯರಬಳ್ಳಿ ಮಾರಕ್ಕ; ಅಂಬಲಗೆರೆಯ ರಂಗನಾಥ; ಭರಮಗಿರಿಯ ಕಣಿವೆ ಮಾರಮ್ಮ; ಅಬ್ಬಿನಹೊಳೆಯ ರಂಗನಾಥ; ಮದ್ದನಕುಂಟೆ ಯರ್ರಪ್ಪ; ಕರಿಓಬೇನಹಳ್ಳಿ ಮಾರಮ್ಮ; ವದ್ದಿಕೆರೆ ಸಿದ್ದಪ್ಪ; ಯರಬಳ್ಳಿ ದೊಡ್ಡಗೊಲ್ಲರ ಹಟ್ಟಿಯ ಹಾಲುಕುಡಿದಸ್ವಾಮಿ, ಕಾಟಮ್ಮದೇವರು, ಸಿಂಪಣ್ಣ ಮತ್ತು ಗಾದರಿಪಾಲನಾಯಕ ದೇವರುಗಳು. ಚಳ್ಳಕೆರೆ ತಾಲ್ಲೂಕು ಚನ್ನಮ್ಮನಾಗತಿಹಳ್ಳಿಯಲ್ಲಿ ಕ್ಯಾತಲಿಂಗೇಶ್ವರ; ಪುರ್ಲಹಳ್ಳಿ ಭೂತಪ್ಪ ಮತ್ತು ಕ್ಯಾತಪ್ಪನ ವಸದಿ ದಿಬ್ಬ; ಗೌರಸಮುದ್ರದ ಗೌರಸಂದ್ರ ಮಾರಮ್ಮ; ಕ್ಯಾತಗೊಂಡ್ನಹಳ್ಳಿ ಕ್ಯಾತಪ್ಪ; ಸೂರನಹಳ್ಳಿಯಲ್ಲಿ ಕದರಿನರಸಿಂಹ ಮತ್ತು ಕಾಟಮ್ಮಲಿಂಗೇಶ್ವರ ದೇವರುಗಳು; ಕಾಟಪ್ಪನಹಟ್ಟಿಯಲ್ಲಿ ಎತ್ತಪ್ಪ, ರಂಗನಾಥಸ್ವಾಮಿ ಮತ್ತು ಕಾಟಮ್ಮಲಿಂಗೇಶ್ವರ ದೇವರುಗಳು; ಸಾಣೇಕೆರೆ ಕೆರೆಮುಂದಲಹಟ್ಟಿಯಲ್ಲಿ ಚಿತ್ರದೇವರು, ತಿಮ್ಮಪ್ಪ, ಗಟ್ಟಪ್ಪ ಮತ್ತು ಚಿಕ್ಕಣ ದೇವರುಗಳು; ಸಾಣೇಕೆರೆ ಖಂಡೇನಹಳ್ಳಿ ಗೊಲ್ಲರಹಟ್ಟಿಯಲ್ಲಿ ತಿಮ್ಮಪ್ಪ ಮತ್ತು ಜುಂಜಪ್ಪ ದೇವರುಗಳು; ಸಾಣೇಕೆರೆ ಗಿಡದಲ್ಲಿ ವೀರಚಿಕ್ಕಣ್ಣನ ದೇವಸ್ಥಾನ; ಗೋಸಿಕೆರೆಯಲ್ಲಿ ಜುಂಜಪ್ಪ ದೇವರು ಮತ್ತು ಸರ್ವಾದೇಶ್ವರ ಸ್ವಾಮಿಗಳ ಮಠ; ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ. ಚಿತ್ರದುರ್ಗ ತಾಲ್ಲೂಕು ರಾಮನಹಳ್ಳಿಯಲ್ಲಿ

ರಾಮಲಿಂಗೇಶ್ವರ; ಬೆಳಗಟ್ಟದ ಸೂರ್ಯಯರಗಾಟನಾಯಕ ಮೊದಲಾದ ದೇವರುಗಳು ನೆಲೆಸಿರುವ ಸ್ಥಾನಗಳು ಕಾಡುಗೊಲ್ಲರಿಗೆ ಧಾರ್ಮಿಕ ಕೇಂದ್ರಗಳಾಗಿವೆ.

ಹಿರಿಯೂರು ತಾಲ್ಲೂಕು ಕರಿಓಬೇನಹಳ್ಳಿ ಮತ್ತು ತಾಳವಟ್ಟಿ; ಚಿತ್ರದುರ್ಗ ತಾಲ್ಲೂಕು ರಾಮನಹಳ್ಳಿ ಎಂಬ ಮೂರು ಕಟ್ಟೆಮನೆಗಳು ಮತ್ತು ನೆಲೆಸಿರುವ ದೈವಗಳು ಕಾಡುಗೊಲ್ಲರಿಗೆ ಪ್ರಮುಖ ಧಾರ್ಮಿಕ ಕೇಂದ್ರಗಳಾಗಿದ್ದವು, ಆದರೆ ಪ್ರಸ್ತುತ ಕರಿಓಬೇನಹಳ್ಳಿ ಕಟ್ಟೆಮನೆಯನ್ನು ಬಿಟ್ಟರೆ ಉಳಿದ ತಾಳವಟ್ಟಿ ಮತ್ತು ರಾಮನಹಳ್ಳಿ ಕಟ್ಟೆಮನೆಗಳು (ಬೇಚರಾಕ್) ಹಾಳೂರುಗಳಾಗಿದ್ದರಿಂದ, ಈ ಎರಡು ಕಟ್ಟೆಮನೆಗಳು ಹಿರಿಯೂರು ತಾಲ್ಲೂಕು ಯರಬಳ್ಳಿ ಮತ್ತು ಮರಡಿಹಳ್ಳಿಗೆ ವರ್ಗಾವಣೆ ಹೊಂದಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಆರು ತಾಲ್ಲೂಕುಗಳಲ್ಲಿ ಹಿರಿಯೂರು ತಾಲ್ಲೂಕಿನಲ್ಲಿಯೇ ಈಗ ಮೂರು ಕಟ್ಟೆಮನೆಗಳು ಕಾಡುಗೊಲ್ಲರಿಗೆ ಧಾರ್ಮಿಕ ಕೇಂದ್ರಗಳಾಗಿವೆ.

ಈ ಪ್ರಮುಖ ದೇವರು ಮತ್ತು ಕಟ್ಟೆಮನೆಗಳಲ್ಲದೆ, ಪ್ರತಿಯೊಂದು ಗೊಲ್ಲರಹಟ್ಟಿಯಲ್ಲಿ ಒಂದಾದರೂ ದೇವರನ್ನು ಇಟ್ಟುಕೊಂಡು ಪೂಜಿಸುವ ಪದ್ಧತಿ ಕಂಡು ಬರುತ್ತದೆ. ಸಂಶೋಧನ ಕ್ಷೇತ್ರಕಾರ್ಯಕ್ಕೆ ಹೋದಾಗ ಹಲವಾರು ಗೊಲ್ಲರಹಟ್ಟಿಗಳ ಹೊರಗೆ ದೂರದ ಪ್ರದೇಶದಲ್ಲಿ ಜುಂಜಪ್ಪ ಕಳ್ಳೆಪೌಳಿಯ ದೇವಸ್ಥಾನ, ಅದರ ಮಧ್ಯೆ ಒಂದು ಕಲ್ಲಿನ ಗುಂಡುಗಳಿನ್ನಿಟ್ಟು ಅವುಗಳನ್ನು ಬೆನವ (ಜುಂಜಪ್ಪ) ಎಂದು ಕರೆದು ಪೂಜಿಸುವ ಸಂಪ್ರದಾಯಗಳು ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ. ಪೂಜಾರಿ, ದಾಸಯ್ಯ ಮತ್ತು ಜನಾಂಗದ ಒಬ್ಬ ವೀರ ಮರಣ ಹೊಂದಿದ ಸಮಾಧಿಗಳನ್ನೂ ಕೂಡ ಧಾರ್ಮಿಕ ಕೇಂದ್ರಗಳೆಂದು ನಂಬುತ್ತಾರೆ. ಕಾಡುಗೊಲ್ಲರ ಗುಬ್ಬ ಅಥವಾ ದೇವಸ್ಥಾನಗಳಲ್ಲಿ ಇಟ್ಟಿರುವ ಬೆತ್ತದ ಬುಟ್ಟಿ, ಮರದ ಪೆಟ್ಟಿಗೆ, ಗಣೆ, ಬಿಲ್ಲು, ಬಾಣ, ಬಾಕು, ಅಲಗು, ಕತ್ತಿ, ಲಿಂಗ, ಕಲ್ಲು, ಕಟ್ಟಿಗೆಕುದುರೆ, ಕಟ್ಟಿಗೆ ಬಸವ, ಉದ್ಭವಲಿಂಗ, ದುಂಡಾದಕಲ್ಲು, ಮೊದಲಾದ ವಸ್ತುಗಳನ್ನು ದೇವರೆಂದು ಭಾವಿಸಿ ಪೂಜಿಸುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರಿಬ್ಬರೂ ಕೂಡಿ ಆಚರಿಸುವ ಅನೇಕ ಹಬ್ಬ, ಜಾತ್ರೆ, ಉತ್ಸವಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುತ್ತವೆ.

೩. ಪೌಳಿ ಕಟ್ಟುವುದು

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂಲತಃ ದ್ರಾವಿಡ ಸಂಸ್ಕೃತಿ ಮತ್ತು ಗುಣಲಕ್ಷಣಗಳನ್ನು ಹೊಂದಿದವರು. ಕಾಡನ್ನು ತೊರೆದು ನಾಡಲ್ಲಿ ನೆಲಸಿದ್ದರೂ, ಕಾಡಾಡಿ ಜನರ ಬದುಕು ಕೈಬಿಟ್ಟಿಲ್ಲ. ವಸತಿ ವ್ಯವಸ್ಥೆ, ದೇವರ ಗುಬ್ಬ ಮತ್ತು ಪೌಳಿಗಳನ್ನು ನೋಡಿದರೆ ಇವರ ಸಾಂಸ್ಕೃತಿಕ ಆಚರಣೆಗಳನ್ನು ಗುರುತಿಸಬಹುದು. ರಕ್ಷಣೆ, ಧಾರ್ಮಿಕತೆ ಮತ್ತು ಪವಿತ್ರತೆಯನ್ನು ಉಳಿಸಿಕೊಳ್ಳಲು ಕಳ್ಳೆ ಕಡಿದು ದೇವರ ಗುಡಿಯ ಸುತ್ತ ಮುಳ್ಳು ಬೇಲಿ ಕಟ್ಟುವುದನ್ನೇ ಪೌಳಿ ಎಂದು ಕರೆಯುತ್ತಾರೆ. ಈ ಕಳ್ಳೆಪೌಳಿಯ ಮಧ್ಯ ದೇವರ ಗುಬ್ಬ ಅಥವಾ ಗುಡಿಸಲು ಕಟ್ಟಿ ದೇವರಿಡುತ್ತಾರೆ. ಈ ಪೌಳಿ ಧಾರ್ಮಿಕ ಮಹತ್ವ ಪಡೆದುಕೊಂಡಿದೆ. ಮಕ್ಕಳ ನಾಮಕರಣ, ಜವಳ ತೆಗೆಸುವುದು, ಮುದ್ರೆ ಒತ್ತುವುದು, ಪಟ್ಟಕಟ್ಟುವುದು ಮೊದಲಾದ ಕಾರ್ಯಗಳು ನಡೆಯುವುದು ಈ ದೇವರ ಪೌಳಿಯಲ್ಲೇ.

ಈ ಎರಡು ಬುಡಕಟ್ಟು ದೇವರುಗಳಿಗೆ ಜಾಲಿ, ಬಾರೆ, ತರೆದ, ಹೂಲಿ, ತುಗ್ಗಲಿ, ಕಾರೆ, ಮೊದಲಾದ ಮುಳ್ಳು ಗಿಡಗಳನ್ನು ಕಡಿದು ಕಲಾತ್ಮಕವಾಗಿ "ಕಳ್ಳೆಪೌಳಿ" ಕಟ್ಟುವುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ. ಕೆಲವೊಂದು ಗೊಲ್ಲರಹಟ್ಟಿಯಲ್ಲಿ ಐದರಿಂದ ಹದಿನೈದು ಅಡಿ ಎತ್ತರ ಕಳ್ಳೆಪೌಳಿ ಕಟ್ಟಿ ಅದರ ಮಧ್ಯೆ ಹಂಚಿ ಹುಲ್ಲು, ಬಾದೆಹುಲ್ಲು ಮತ್ತು ಬಾಳೆಪಟ್ಟೆಯ ಪುಟ್ಟಗುಡಿಸಲು ಕಟ್ಟಿ ಅದರೊಳಗೆ ದೇವರಿಟ್ಟಿರುತ್ತಾರೆ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡಗೊಲ್ಲರಹಟ್ಟಿ ಹಾಲುಕುಡಿದಸ್ವಾಮಿ ದೇವಸ್ಥಾನದ ಸುತ್ತ ಕಟ್ಟಿರುವ ಕಳ್ಳೆಪೌಳಿ ಮತ್ತು ದೇವರ ಗುಬ್ಬಗಳು; ಹೊಳಲ್ಕೆರೆ ತಾಲ್ಲೂಕು ಅವಳಿಹಟ್ಟಿ ಈರಾವಳೇಶ್ವರಸ್ವಾಮಿ ದೇವರ ಕಳ್ಳೆಪೌಳಿ ಮತ್ತು ಬಾಳೆಪಟ್ಟೆಯಿಂದ ನಿರ್ಮಿಸಿದ ದೇವರಗುಬ್ಬ, ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಕೆರೆಮುಂದಲಹಟ್ಟಿ ಚಿತ್ರದೇವರ ಕಳ್ಳೆಪೌಳಿ ಮತ್ತು ಹಂಚಿ ಹುಲ್ಲಿನ ಗುಬ್ಬಗಳು; ಬೊಂಬೇರಹಳ್ಳಿ ಮತ್ತು ಯಲಗಟ್ಟೆ ಗಾದರಿಪಾಲನಾಯಕ-ಓಬಳದೇವರ ಕಳ್ಳೆಪೌಳಿ ಮತ್ತು ದೇವಸ್ಥಾನಗಳು ಪ್ರಮುಖ ಸಾಕ್ಷಿಗಳಾಗಿವೆ. ಯಾವುದೇ ಹಟ್ಟಿಯಲ್ಲಾಗಲಿ ಜುಂಜಪ್ಪ ಮತ್ತು ಭೂತಪ್ಪನ ದೇವಸ್ಥಾನಗಳು ಹಟ್ಟಿಯಿಂದ ಸ್ವಲ್ಪ ದೂರದಲ್ಲಿ ಕಳ್ಳೆಪೌಳಿಯ ಮಧ್ಯೆ ಒಂದು ಕಟ್ಟೆ ಅದರ ಮೇಲೆ ಎರಡು ಮೂರು 'ಬೆನವ'ಗಳನ್ನು ಇಟ್ಟು ದೇವರೆಂದು ಪೂಜಿಸುತ್ತಾರೆ.

೩.೧. ದೇವರ ಗುಬ್ಬ ಅಥವಾ ಗುಡಿಸಲು

ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಹಂಚಿಹುಲ್ಲು, ಬಾದೆಹುಲ್ಲು ಗಳಿಂದ ದೇವರ ಗುಡಿಸಲು ಕಟ್ಟಿದರೆ. ಹೊಳಲ್ಕೆರೆ, ಹೊಸದುರ್ಗ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಹಂಚಿಹುಲ್ಲು ಮತ್ತು ವಿಶೇಷವಾಗಿ ಬಾಳೆಪಟ್ಟೆಗಳಿಂದ ದೇವರ ಗುಡಿಸಲು ಕಟ್ಟುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಮುತ್ತುಗದ ಎಲೆ ಮತ್ತು ಬೇಟೆ ಸೊಪ್ಪುಗಳಿಂದ ಕಲಾತ್ಮಕವಾಗಿ ದೇವರ ಗುಬ್ಬಗಳನ್ನು ನಿರ್ಮಿಸಿದ್ದಾರೆ. ಈ ದೇವರ ಗುಬ್ಬಗಳನ್ನು ಹಂಚಿಹುಲ್ಲು, ಬಾದೆಹುಲ್ಲು, ಬಾಳೆಪಟ್ಟೆ, ಮುತ್ತುಗದ ಎಲೆ, ಬೇಟೆಸೊಪ್ಪು, ಬಿದಿರುಕಡ್ಡಿ ಮತ್ತು ಗಳ, ಬಿಳಿಹೂಲಿ ಕಡ್ಡಿ, ಲಕ್ಕಿ ಸೊಪ್ಪು ಮತ್ತು ಕಡ್ಡಿ, ಕಮರದನಾರು ಬಳಸಿ ಅವರವರ ಅನುಕೂಲಕ್ಕೆ ತಕ್ಕಂತೆ ದೇವರ 'ಗುಬ್ಬ' ನಿರ್ಮಿಸಿ ಒಂದು ಚಿಕ್ಕ ಬಾಗಿಲು ಇಟ್ಟು ಕದ ಮುಚ್ಚುತ್ತಾರೆ. ಈ ಗುಬ್ಬದ ಸುತ್ತ ಒಂದು ಅಥವಾ ಎರಡು ಸುತ್ತು ಬಲವಾಗಿ ಮುಳ್ಳು ಬೇಲಿ ಹಾಕಿ ಒಂದು ಹತ್ತಿರ ಮಾತ್ರ ಒಳಗೆ ಹೋಗಿ ಬರಲು ಸ್ಥಳಾವಕಾಶ ಬಿಟ್ಟಿರುತ್ತಾರೆ ಇದನ್ನೆ "ಹುದಿ" ಎಂದು ಕರೆಯುತ್ತಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೆಲವೊಂದು ಪ್ರದೇಶಗಳಲ್ಲಿ ಗುಗ್ಗರಿಹಬ್ಬ ಮಾಡುವಾಗ ಹಟ್ಟಿಯಿಂದ ಹೊರಗೆ ಬೆರಗು ಅಥವಾ ತಾತ್ಕಾಲಿಕ ಪೌಳಿಯನ್ನು ಕಟ್ಟಿ ಅದರೊಳಗೆ ದೇವರಿಟ್ಟು ಹಬ್ಬ ಮಾಡುತ್ತಾರೆ. ಕೂಡ್ಲಿಗಿ ತಾಲ್ಲೂಕು ಮಾಕನಡುಕು ಓಬಳದೇವರ ಗುಗ್ಗರಿ ಹಬ್ಬ ಮಾಡುವಾಗ ಊರಿನಿಂದ ಹೊರಗೆ ಪೂರ್ವಕ್ಕೆ ಲಕ್ಕಿಸೊಪ್ಪಿನ ಬೆರಗು ಕಟ್ಟಿ ಅದರೊಳಗೆ ದೇವರಿಟ್ಟು ಗುಗ್ಗರಿ ಹಬ್ಬ ಆಚರಿಸುತ್ತಾರೆ. ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆಯ ಮ್ಯಾಸಬೇಡರು ಊರಿನಿಂದ ಹೊರಗೆ ಒಂದು ಕಿ.ಮೀ. ದೂರದ ದಕ್ಷಿಣ ನೈಋತ್ಯಕ್ಕೆ ಕೆರೆದಂಡೆಯಲ್ಲಿ ಅಂದರೆ ಹೊರಗಳ ಗುಡಿಯ ಹತ್ತಿರ ನರಸಿಂಹಸ್ವಾಮಿ ಮತ್ತು ಗೂಲೋಬಮ್ಮನ ಗುಡಿಗಳ ಮಧ್ಯೆ, ತಾತ್ಕಾಲಿಕವಾಗಿ ಕಳ್ಳೆಪೌಳಿಯನ್ನು ಕಟ್ಟಿ, ಅದರ ಮಧ್ಯೆ ಚಿಕ್ಕ ಹಂಚಿಹುಲ್ಲಿನ ಗುಡಿಸಲು ನಿರ್ಮಿಸಿ, ಆ ಗುಡಿಸಲಲ್ಲಿ "ಅಹೋಬಲ

ನರಸಿಂಹಸ್ವಾಮಿ"ಯನ್ನು ಇಟ್ಟು ಗುಗ್ಗರಿಹಬ್ಬ ಮಾಡುತ್ತಾರೆ. ಮ್ಯಾಸಬೇಡರು ಗುಗ್ಗರಿ ಹಬ್ಬ ಮಾಡುವಾಗ ಕಳ್ಳೆಪೌಳಿ ಮತ್ತು ಹಂಚಿಗುಡಿಸಲು ಕಟ್ಟುವವರು ಈ ಊರಿನ ಕಾಡುಗೊಲ್ಲರು. ಚಿತ್ತಗೊಲ್ಲರ ಬೆಡಗಿನ ತಪಗನಹಳ್ಳಿ ಈರಣ್ಣ ಐದು ಸಿವುಡು ಹಂಚಿಹುಲ್ಲು, ಹೊಂಗೆ ಮತ್ತು ಲಕ್ಕಿ ಬರಲುಗಳಿಂದ ಓಬಳದೇವರ "ಗುಬ್ಬ" ಕಟ್ಟುತ್ತಾನೆ. ಕರಡಿಗೊಲ್ಲರ ಬೆಡಗಿನ ಮೂಗಜ್ಜರ ಈರಣ್ಣ ಮತ್ತು ಅಣ್ಣ ತಮ್ಮಗಳು ಈ ದೇವರಿಗೆ ಕಳ್ಳೆಪೌಳಿ ಕಟ್ಟಿಕೊಡುತ್ತಾರೆ. ಈ ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪರಸ್ಪರ ಹೊಂದಾಣಿಕೆಯಿಂದ ಗುಗ್ಗರಿ ಹಬ್ಬಗಳನ್ನು ಆಚರಿಸುತ್ತಾರೆ.

೩.೨. ಕಳ್ಳೆ ಅಸೆ ಹೊಡೆಯುವುದು

ಮ್ಯಾಸಬೇಡ ಮತ್ತು ಕಾಡುಗೊಲ್ಲರು ದೇವರ ಪೌಳಿಗೆ ಕಳ್ಳೆ ಕಡಿದು ಅಸೆ ಹೊಡೆಯುವಾಗ ಕೆಲವೊಂದು ಸಂಪ್ರದಾಯಗಳನ್ನು ಪಾಲಿಸುತ್ತಾರೆ. ಗುಗ್ಗರಿ ಹಬ್ಬ ಆಚರಿಸುವುದಕ್ಕಿಂತ ಒಂದು ವಾರ ಮುಂಚಿತವಾಗಿ ಎತ್ತುಗಳನ್ನು, ಮೈತೊಳೆದು, ಕೊಂಬುಗಳಿಗೆ ಬಣ್ಣಹಚ್ಚಿ, ಗಂಟೆ, ಕೋಡಣಸು, ಗಗ್ಗರಿ, ಲೊಡಗ, ಹಣೆಪಟ್ಟಿ ಮತ್ತು ಜೂಲು ಹಾಕಿಕೊಂಡು ಸಾಮೂಹಿಕವಾಗಿ ಹೋಗಿ ಸ್ಥಳೀಯವಾಗಿ ಸಿಗುವಂಥ ಕಾರೆ, ಬಾರೆ, ತರೆದ ತುಗ್ಗಲಿ, ಹೂಲಿ, ಜಾಲಿ ಮೊದಲಾದ ಮುಳ್ಳು ಗಿಡಗಳನ್ನು ಕಡಿದು ಅಸೆಹೊಟ್ಟಿ ಎತ್ತುಗಳನ್ನು ಹೂಡಿ ಕಳ್ಳೆ ಅಸೆ ಹೊಡೆಯುವುದು ವಿಶೇಷವಾಗಿ ಕಾಣುತ್ತದೆ. ಸಾಮಾನ್ಯವಾಗಿ ಸಂಜೆ ಐದು ಅಥವಾ ಆರು ಗಂಟೆಯಲ್ಲಿ ಕಳ್ಳೆ ಅಸೆ ಹೊಡೆದು; ಕಲಾತ್ಮಕವಾಗಿ ದೇವರ ಪೌಳಿಕಟ್ಟುತ್ತಾರೆ. ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಗೆ ಅದೇ ಊರಿನ ಕರಡಿಗೊಲ್ಲರ ಮೂಗಜ್ಜರ ಈರಣ್ಣ ಮತ್ತು ಅಣ್ಣತಮ್ಮಗಳು ಗುಗ್ಗರಿ ಹಬ್ಬ ಮಾಡುವುದಕ್ಕಿಂತ ಒಂದು ವಾರ ಮುಂಚೆ ಕಾಡು-ಮೇಡುಗಳನ್ನು ಅಲೆದು, ಬಹಳ ಭಯ ಭಕ್ತಿ ನಿಷ್ಠೆಯಿಂದ ದೇವರ ಹೆಸರಿನಲ್ಲಿ ಕಳ್ಳೆ ಕಡಿದು, ಅಸೆ ಹೊಡೆದು ಮ್ಯಾಸಬೇಡರ "ಅಹೋಬಲ ನರಸಿಂಹಸ್ವಾಮಿ"ಗೆ ಕಳ್ಳೆಪೌಳಿ ಕಟ್ಟಿ ಕೊಡುತ್ತಾರೆ. ಈ ದೇವರಿಗೆ ಕಳ್ಳೆಪೌಳಿಕಟ್ಟುವುದು ನಮ್ಮ ಸಂಪ್ರದಾಯ ಮತ್ತು ಕರ್ತವ್ಯ ಎಂದು ದೇವರ ಮರಿಕುಂಟೆಯ ಕರಡಿಗೊಲ್ಲರ ಬೆಡಗಿನ ಕಾಡುಗೊಲ್ಲರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

೩.೩. ಗುಡಿಸಲು ಬದಲಾಗಿ ಗುಡಿಗಳು

ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿ-ಗ್ರಾಮಗಳಲ್ಲಿ ದೇವರ ಗುಡಿಸಲು ಅಥವಾ ಗುಬ್ಬಗಳು ಕಣ್ಮರೆಯಾಗಿ ಕಲ್ಲಿನ ಕಟ್ಟಡಗಳಿಂದ ಗುಡಿಗಳನ್ನು ಕಟ್ಟುತ್ತಿದ್ದಾರೆ. ಹಂಚಿ, ಬಾದೆ, ಬಾಳೆಪಟ್ಟೆ, ಮುತ್ತುಗದ, ಬೇಟೆಸೊಪ್ಪಿನ ಗುಬ್ಬಗಳನ್ನು ತೆಗೆದಾಕಿ. ಕಲ್ಲು, ಇಟ್ಟಿಗೆ, ಸಿಮೆಂಟ್, ಕಬ್ಬಿಣ, ಹಂಚು, ಬಂಡೆ, ತಗಡು, ಆರ್.ಸಿ.ಸಿ. ಕಟ್ಟಡಗಳಿಂದ ಗುಡಿ ಕಟ್ಟಿಸಿ ದೇವಸ್ಥಾನದ ಮೇಲೆ ವಿಗ್ರಹಗಳು, ಕಳಸಗಳು, ಧ್ವಜಗಳು ಮತ್ತು ಧ್ವನಿವರ್ಧಕಗಳನ್ನು ಹಾಕುವ ಪದ್ಧತಿ ಕಂಡು ಬರುತ್ತಿದೆ. ಆದರೂ ಪ್ರಾಚೀನ ಸಂಸ್ಕೃತಿ ಉಳಿಸಿಕೊಳ್ಳಲು ದೇವಸ್ಥಾನದ ಮೇಲೆ "ಒಂದು ತೊಟ್ಟು ಕಳ್ಳೆ; ಒಂದು ಸಿವುಡಾದರು ಹಂಚಿಹುಲ್ಲು" ಇಟ್ಟಿರುತ್ತಾರೆ. ಈ ಎರಡು ಬುಡಕಟ್ಟು ಸಮೂಹಗಳು ಪ್ರಾಚೀನ ಸಂಸ್ಕೃತಿಯನ್ನು ಕೈಬಿಡದೇ, ಆಧುನಿಕ ಸಂಸ್ಕೃತಿ ಮತ್ತು ರೀತಿ ನೀತಿಗಳಿಗೆ ಹೊಂದಿಕೊಳ್ಳದೆ 'ಸಾಂಸ್ಕೃತಿಕ ಸಂಘರ್ಷಕ್ಕೆ' ಗುರಿಯಾಗಿದ್ದಾರೆ.

೩.೪. ಮ್ಯಾಸಬೇಡರ ದೇವರ ಪೌಳಿ

೧. ದೇವರು ಕುಳಿತುಕೊಳ್ಳುವ ಕಟ್ಟೆ

೨. ದೇವರ ಹಂಚಿ ಹುಲ್ಲಿನ ಗುಡಿಸಲು


೩. ಒಳಗಿನ ಕಳ್ಳೆಪೌಳಿ

೪. ಹೊರಗಿನ ಕಳ್ಳೆಪೌಳಿ

೫. ಒಳಗಿನ ಪೌಳಿಯ ಹುದಿ-ಬಾಗಿಲು

೬. ಹೊರಗಿನ ಪೌಳಿಯ ಹುದಿ-ಬಾಗಿಲು

೭. ಅಡಿಗೆ ಮಾಡುವ ಸ್ಥಳ



೩.೫. ಕಾಡುಗೊಲ್ಲರ ದೇವರ ಪೌಳಿ


೧. ಚಿತ್ರದೇವರ ಮತ್ತು ತಿಮ್ಮಪ್ಪ ದೇವರುಗಳ ಹಂಚಿಹುಲ್ಲಿನ ಗುಬ್ಬ

೨. ಗಟ್ಟಪ್ಪ ದೇವರ ಹಂಚಿಹುಲ್ಲಿನ ಗುಬ್ಬ

೩. ಚಿಕ್ಕಣ ದೇವರ ಹಂಚಿಹುಲ್ಲಿನ ಗುಬ್ಬ

೪. ದೇವರ ಕಳ್ಳೆಪೌಳಿ

೫. ದೇವರ ಪೌಳಿಯ ಹುದಿ-ಬಾಗಿಲು



ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಮ್ಯಾಸಬೇಡರ ಅಹೋಬಲ ನರಸಿಂಹಸ್ವಾಮಿಯ ದೇವರ ಪೌಳಿ ಮತ್ತು ಸಾಣೇಕೆರೆ ಕೆರೆಮುಂದಲಹಟ್ಟಿ ಕಾಡುಗೊಲ್ಲರ ಚಿತ್ರದೇವರ ಪೌಳಿಯನ್ನು ಸಮೀಕ್ಷೆಗೆ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಪ್ರಾಚೀನ ಕಾಲದಿಂದಲೂ ಈ ಎರಡು ಬುಡಕಟ್ಟು ಸಮುದಾಯಗಳು ದೇವರ ಗುಬ್ಬ, ದೇವಸ್ಥಾನ ಮತ್ತು ದೇವರ ಪೌಳಿ ಕಟ್ಟುವಾಗ ವಾಸ್ತು ಸಿದ್ಧಾಂತವನ್ನು ಪಾಲಿಸಿದಂತೆ ಕಂಡು ಬರುತ್ತದೆ.

೪. ದೇವರು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನರಿಗೆ 'ದೇವರೆಂದರೆ ಪಂಚಪ್ರಾಣ' ಸರ್ವಚೇತನವಾದಿಗಳಾದ ಈ ಜನಾಂಗ ಅಸಂಖ್ಯಾತ ದೈವಗಳನ್ನು ಪೂಜಿಸುತ್ತಾರೆ. ಮೂಲತಃ ಈ ಎರಡು ಬುಡಕಟ್ಟುಗಳು ವೈಷ್ಣವ ಅಥವಾ ಶೈವ ಪಂಥದವರೆ? ಎಂಬುದು ಬಿಡಿಸಲಾಗದ ಕಗ್ಗಂಟಾಗಿದೆ. ಮ್ಯಾಸಬೇಡರ ದೇವರು ಆಚಾರ-ವಿಚಾರ ಮತ್ತು ಸಂಸ್ಕೃತಿಯನ್ನು ಅವಲೋಕಿಸಿ ಬೇಡನಾಯಕರು ಮೂಲತಃ ವೈಷ್ಣವರೆಂದು ಥರ್ಸ್ಟನ್ ಸ್ಪಷ್ಟವಾಗಿ ತಿಳಿಸಿದ್ದಾರೆ.

ಅದೇ ರೀತಿ ಯಾದವ ಸಂತತಿಯಿಂದ ಬಂದಂತ ಕಾಡುಗೊಲ್ಲರು ಕೂಡ ಮೂಲತಃ ವೈಷ್ಣವರೆಂದು ಹೇಳಬಹುದು. ಉತ್ತರಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದಾಗ ಅಥವಾ ಅಲೆಮಾರಿಗಳಾದ ಈ ಬುಡಕಟ್ಟು ಜನಾಂಗದ ಸಂಸ್ಕೃತಿಯ ಮೇಲೆ 'ಶೈವ' ಪಂಥದ ಪ್ರಭಾವ ಉಂಟಾಗಿದೆಯೇ ವಿನಃ ಸಂಪೂರ್ಣವಾಗಿ ಶೈವಾರಾಧಕರಾಗಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಬೇಡರ ಮೂಲ ನಾಯಕ ಮೂಗನಾಯಕನಿಗೆ "ಶ್ರೀಕೃಷ್ಣನು ತನ್ನಲಿದ್ದ ಹನ್ನೆರಡು ಸಾಲಿಗ್ರಾಮಗಳನ್ನೂ ಮತ್ತು ಗೋವುಗಳನ್ನೂ ಆತನಿಗೆ ನೀಡಿದನು. ಸಾಲಿಗ್ರಾಮಗಳನ್ನು ಪೂಜಿಸುವುದರಿಂದಲೂ ಮತ್ತು ಗೋವುಗಳನ್ನು ಪ್ರೇಮ ಮತ್ತು ಭಕ್ತಿಗಳಿಂದ ಪೂಜಿಸುವುದರಿಂದಲೂ ತನ್ನ ಅನುಗ್ರಹವನ್ನು ಪಡೆಯುವೆಯೆಂದು ಹರಸಿ ಶ್ರೀಕೃಷ್ಣನು ತನ್ನ ಅವತಾರ ಸಮಾಪ್ತಿ ಮಾಡಿದನು"..... ಎಂದು; "ಈ ಮೂಗನಾಯಕನು ತನಗೆ ಶ್ರೀಕೃಷ್ಣನಿಂದ ನೀಡಲ್ಪಟ್ಟ ಸಾಲಿಗ್ರಾಮಗಳನ್ನು ಬಿದಿರಿನ ಪೆಟ್ಟಿಗೆಗಳಲ್ಲಿ ಜೋಪಾನವಾಗಿಟ್ಟು ಭಕ್ತಿಯಿಂದ ಪೂಜಿಸುತ್ತಿದ್ದನು".... ಎಂದು; "ಸಾಕ್ಷಾತ್ ಕೃಷ್ಣ ನಿಂದಲೇ ನೀಡಲ್ಪಟ್ಟ ಸಾಲಿಗ್ರಾಮಗಳು ಅರ್ಚನೆಗೆ ದೊರೆಯುವುದು ಪುಣ್ಯವಿಶೇಷವೇ ಎಂದು ಬೇರೆ ಬೇರೆ ಪಾಳೆಯದವರು ತಾವಾಗಿಯೇ ಬಂದು ಒಂದೊಂದು ಸಾಲಿಗ್ರಾಮದ ಬುಟ್ಟಿಯನ್ನು ಕೊಂಡೊಯ್ದು ತಮ್ಮ ಆರಾಧನಾ ದೈವವೆಂದು ಪೂಜಿಸಿದರೂ ಅದೇನೂ ಅಸಂಭಾವ್ಯವಲ್ಲ. ಬುಟ್ಟಿದೇವರುಗಳಂತೆಯೇ ಕೃಷ್ಣನಿಂದ ನೀಡಲ್ಪಟ್ಟಿದ್ದ ಗೋವುಗಳನ್ನು ಅಥವಾ ಅವುಗಳ ಸಂತಾನಗಳನ್ನು ಉಳಿದ ಪಂಗಡದವರೂ ಕೊಂಡೊಯ್ದಿರ ಬಹದು"....ಎಂದು ಚಳ್ಳಕೆರೆ ಆರ್. ರಾಜಣ್ಣ ನವರು 'ನಾಯಕ ಜನಾಂಗದ ಇತಿಹಾಸ' ಎಂಬ ಪುಸ್ತಕದಲ್ಲಿ (೧೯೮೨, ಪುಟ:೧೬,೧೭) ಹೇಳಿರುವ ಅಂಶಗಳು ಸರಿಯಾಗಿಯೇ ಇವೆ. ಕಾಲಕ್ರಮೇಣ ಹನ್ನೆರಡು ಸಾಲಿಗ್ರಾಮಗಳಿಟ್ಟ ಬೆತ್ತದ ಪೆಟ್ಟಿಗೆ ದೇವರುಗಳನ್ನು ಮ್ಯಾಸಬೇಡರ ಜೊತೆಗೆ ಕಾಡುಗೊಲ್ಲರು ಪೂಜಿಸಿದಂತೆ ಕಂಡು ಬರುತ್ತದೆ. ಈ ಹನ್ನೆರಡು ಪೆಟ್ಟಿಗೆ ದೇವರುಗಳಲ್ಲಿ ಚಿತ್ರಲಿಂಗೇಶ್ವರ, ಕಾಟಮ್ಮಲಿಂಗೇಶ್ವರ ಮತ್ತು ಪಾತೇಲಿಂಗೇಶ್ವರ ಎಂಬ ಮೂರು ಪೆಟ್ಟಿಗೆ ದೇವರುಗಳನ್ನು ಈ ಹೊತ್ತಿಗೂ ಮ್ಯಾಸಬೇಡ ಮತ್ತು ಕಾಡುಗೊಲ್ಲರ 'ಹಟ್ಟಿ'ಗಳಲ್ಲಿ ಆರಾಧ್ಯದೈವಗಳಾಗಿವೆ. ಶ್ರೀಕೃಷ್ಣ ಕೊಟ್ಟ ಸಾಲಿಗ್ರಾಮಗಳು ಮತ್ತು ಗೋವುಗಳು ಕಾಲಕ್ರಮೇಣ ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗದಲ್ಲಿ ಹಂಚಿ ಹೋಗಿರಬಹುದು. ಏಕೆಂದರೆ ಕಾಡಾಡಿ ಜನರ ಬದುಕಿನ ಪದ್ಧತಿಗಳಾದ ಬಿದಿರು, ಬೆತ್ತ, ಸಾಲಿಗ್ರಾಮ, ಗೋವುಗಳು ಮೊದಲಾದ ಪರಿಕರಗಳು ಈ ಎರಡು ಜನಾಂಗದ ಧಾರ್ಮಿಕ ಸಂಕೇತಗಳಾಗಿವೆ. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದಾಗ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಸಂಸ್ಕೃತಿಯ ಮೇಲೆ 'ಶೈವ' ಪಂಥದ ಪ್ರಭಾವದಿಂದಾಗಿ 'ಪಂಚಲಿಂಗಗಳ' ಆರಾಧನಾ ಪದ್ಧತಿ ಬೆಳೆದು ಬಂದು ವೈಷ್ಣವ ಮತ್ತು ಶೈವ ಪಂಥಗಳ ಸಮನ್ವಯತೆ ಈ ಎರಡು ಜನಾಂಗದಲ್ಲಿ ಕಂಡು ಬರುತ್ತದೆ. ಇವರ ದೇವರ ಬೆತ್ತದ ಬುಟ್ಟಿಗಳಲ್ಲಿ ಸಾಲಿಗ್ರಾಮಗಳು ಮತ್ತು ಲಿಂಗಗಳು ಎರಡೂ ಕಂಡು ಬರುವುದರಿಂದ ಒಬ್ಬನೇ ಪೂಜಾರಿ ಶೈವ ಮತ್ತು ವೈಷ್ಣವ ಪೂಜಾ ಪದ್ಧತಿಯನ್ನು ಅನುಸರಿಸುತ್ತಾನೆ.

ಕೂಡ್ಲಿಗಿ ತಾಲ್ಲೂಕು ಮಾಕನಡುಕು ಮ್ಯಾಸಬೇಡರ ಓಬಳದೇವರನ್ನು ಅಲ್ಲಿಯ ಜನತೆ ಕಂಚೋಬಲ ನರಸಿಂಹಸ್ವಾಮಿ ಎಂದೇ ಕರೆಯುತ್ತಾರೆ.ಈ ದೇವಸ್ಥಾನದ ಶಿಖರದ ಮೇಲೆ ವಿಷ್ಣುವಿನ ದಶಾವತಾರಗಳಾದ ಮತ್ಸ್ಯ,

ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಶ್ರೀಕೃಷ್ಣ, ಬುದ್ಧ ಮತ್ತು ಕಲ್ಕಿ ರೂಪದ ವಿಗ್ರಹಗಳನ್ನು ನಿರ್ಮಿಸಿದ್ದಾರೆ. ಹಲವು ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ದೇವರು, ಧರ್ಮ, ಸಂಸ್ಕೃತಿ, ಸಂಪ್ರದಾಯ, ನಂಬಿಕೆಗಳು ಮತ್ತು ಧಾರ್ಮಿಕ ಆಚರಣೆಗಳಲ್ಲಿ ಪರಸ್ಪರ ಸಾಮ್ಯತೆಗಳು ಕಂಡುಬರುತ್ತವೆ. ಮ್ಯಾಸಬೇಡರ ದೇವರು, ಬೆಡಗು, ಭಾಷೆ, ಕಲೆ ಮತ್ತು ಸಾಹಿತ್ಯವನ್ನು ಗಮನಿಸಿದರೆ ಇವರು ಮೂಲತಃ ಆಂಧ್ರಪ್ರದೇಶದ 'ಅಡವಿಚೆಂಚರು' ಅಥವಾ 'ಕಾಡುಸಂಚರ' ಸಂಸ್ಕೃತಿಗಳು ಇವರಲ್ಲೂ ಕಂಡುಬರುತ್ತವೆ. ವಿಷ್ಣುವಿನ ನಾಲ್ಕನೇ ಅವತಾರವಾದ 'ನರಸಿಂಹ' ಅಡವಿ ಚೆಂಚು ಕನ್ಯೆಯೊಬ್ಬಳನ್ನು ಮೋಹಿಸಿ ಮದುವೆಯಾಗಿದ್ದು, ಚೆಂಚು ಹುಡುಗಿಯೊಂದಿಗಿನ ತೆಲಗುಭಾಷೆಯ ಸಂಭಾಷಣೆ, ಓಬಳೇಶ ನರಸಿಂಹನನ್ನು ತಮ್ಮ ಅಳಿಯನೆಂದು ಭಾವಿಸಿ "ಅಡವಿಚೆಂಚು" ಜನಾಂಗ ಪೂಜಿಸುವುದು, ಈ ಅಳಿಯ ದೇವರು ಎಂಬುದು ಅಪಭ್ರಂಶವಾಗಿ 'ಮನೆದೇವರು' ಎಂಬುದಾಗಿ ರೂಪಾಂತರ ಹೊಂದಿದೆ ಎಂದು ಥರಸ್ಟನ್ ವಿವರವಾಗಿ ಕೊಟ್ಟಿರುವುದು ಸರಿಯಾಗಿಯೇ ಇದೆ. ಈ ಅಡವಿಚೆಂಚು ಬುಡಕಟ್ಟಿನ ಎಲ್ಲಾ ಗುಣಲಕ್ಷಣಗಳು ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಲ್ಲಿ ಕಂಡು ಬರುತ್ತವೆ.

೪.೧. ಬೆತ್ತದ ಬುಟ್ಟಿ ದೇವರುಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಸಾಲಿಗ್ರಾಮ ಮತ್ತು ಲಿಂಗಗಳನ್ನು ಪ್ರತ್ಯೇಕವಾಗಿ ಕಟ್ಟಿ ಬೆತ್ತದ ಬುಟ್ಟಿಗಳಲ್ಲಿಟ್ಟು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ತಲೆಯ ಮೇಲೆ ಹೊತ್ತುಕೊಂಡು ಹೋಗುವಂತೆ, ಅಲೆಮಾರಿ ಜೀವನಕ್ಕೆ ಅನುಕೂಲವಾಗುವಂತೆ ಪೆಟ್ಟಿಗೆ ದೇವರುಗಳು 'ಹಟ್ಟಿ'ಗಳಲ್ಲಿ ಕಂಡು ಬರುತ್ತವೆ. ಸಂಚಾರಿ ಬೇಟೆ, ಪಶುಪಾಲನೆ ಮತ್ತು ಕೃಷಿಯಲ್ಲಿ ತೊಡಗಿದ್ದ ಈ ಬುಡಕಟ್ಟುಗಳು ಎಲ್ಲಿಯೂ ಕಲ್ಲಿನ ವಿಗ್ರಹಗಳನ್ನಾಗಲಿ, ದೇವಸ್ಥಾನಗಳನ್ನಾಗಲಿ ಕಟ್ಟಿದಂತೆ ಕಂಡು ಬರುತ್ತಿಲ್ಲ. ಅಲೆಮಾರಿ ಬದುಕಿಗೆ ಅನುಕೂಲವಾಗಲೆಂದೇ ಬೆತ್ತದ ಬುಟ್ಟಿಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಪ್ರಸ್ತುತ 'ಹಟ್ಟಿ'ಗಳಲ್ಲಿ ದೇವರಿಟ್ಟಿರುವ ಪುಟ್ಟ ಗುಬ್ಬಗಳೇ ಇವರ ಸಂಚಾರಿ, ಕಾಡಾಡಿ ಬದುಕಿನ ಚಿತ್ರಣ ತಿಳಿಸುತ್ತವೆ. ಪ್ರಸ್ತುತ ದೇವರ ಗುಬ್ಬಗಳು ಕಣ್ಮರೆಯಾಗಲು ದೇವಸ್ಥಾನಗಳು ಅಸ್ಥಿತ್ವಕ್ಕೆ ಬರಲು ನಾಗರಿಕ ಸಮಾಜದ ಸಂಪರ್ಕವೆ ಇವರಿಗೆ ಮೂಲ ಪ್ರೇರಣೆಯಾಗಿದೆ. ಕಲ್ಲಿನ ದೇವಸ್ಥಾನಗಳ ನಿರ್ಮಾಣಕ್ಕೆ ಕೆಲವರು ಪ್ರತಿಭಟನೆ ಮಾಡುತ್ತಿದ್ದಾರೆ. ಇವರ ದೇವರುಗಳು ಕೂಡ ಕಲ್ಲಿನ ಕಟ್ಟಡಕ್ಕಿಂತ ಹಂಚಿ ಗುಡಿಸಲು, ಬಾಳೆಪಟ್ಟೆ ಗುಡಿಸಲುಗಳನ್ನೇ ಇಷ್ಟಪಡುತ್ತವೆ, ಎಂದು ಈ ಪ್ರದೇಶದ ಬೇಡರು ಮತ್ತು ಗೊಲ್ಲರು ಹೇಳಿಕೊಳ್ಳುತ್ತಾರೆ.

ಸುಮಾರು ೧೮ ಅಂಗುಲ ಎತ್ತರ ೨೮ ಅಂಗುಲ ಸುತ್ತಳತೆ ಹೊಂದಿದ ವೃತ್ತಾಕಾರದ ಮತ್ತು ಚೌಕಾಕಾರದ ಬೆತ್ತದ ಬುಟ್ಟಿಗಳನ್ನು ಕಲಾತ್ಮಕವಾಗಿ ಹೆಣೆದಿರುತ್ತಾರೆ. ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಓಬಳದೇವರು ಮತ್ತು ಯಲಗಟ್ಟೆ, ಗಾದರಿಪಾಲನಾಯಕ ದೇವರ ಬೆತ್ತದ ಬುಟ್ಟಿಗಳನ್ನು ಒಂದೆ ಸಲ ತಯಾರಿಸಿದ್ದಾರೆ. ಮೂಕನಾಗಿದ್ದ ದೇವರಮರಿಕುಂಟೆಯ ಒಬ್ಬ ಬ್ರಾಹ್ಮಣ ಜೇನು ತುಪ್ಪದಲ್ಲಿ ಬೆತ್ತ ನೆನೆಹಾಕಿ ಕಲಾತ್ಮಕವಾಗಿ ಈ ಎರಡೂ ದೇವರ ಬುಟ್ಟಿಗಳನ್ನು ಹೆಣೆದಿದ್ದಾನೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರ ಬುಟ್ಟಿಗಳು ಒಂದೇ

ತೆರನಾಗಿ ಕಂಡು ಬರುತ್ತವೆ. ಈ ದೇವರ ಬುಟ್ಟಿಗಳಲ್ಲಿ ಏನಿದೆ? ಎಷ್ಟು ಬುಟ್ಟಿಗಳಿವೆ? ಅವುಗಳ ರಚನೆ, ಆಕಾರ, ವಿನ್ಯಾಸದ ಬಗ್ಗೆ ಎಷ್ಟೋ ಪೂಜಾರಿಗಳಿಗೆ ಗೊತ್ತಿರುವುದಿಲ್ಲ. ಕೆಲವೊಂದು ದೇವರ ಬುಟ್ಟಿಗಳಲ್ಲಿ ಒಂದೇ ಬುಟ್ಟಿಯಿದ್ದು ಅದರಲ್ಲಿ ಸಾಲಿಗ್ರಾಮ, ಲಿಂಗ, ತ್ರಿಶೂಲ, ಅಂಬು, ಕೇಲು ಮೊದಲಾದ ದೇವರ ಪರಿಕರಗಳು ಕಂಡು ಬರುತ್ತವೆ. ಕೆಲವು ದೇವರ ಬುಟ್ಟಿಗಳಲ್ಲಿ ಒಂದರೊಳಗೊಂದರಂತೆ ಮೂರು, ಐದು, ಮತ್ತು ಏಳು ಬುಟ್ಟಿಗಳು ಕಂಡು ಬರುತ್ತವೆ. ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ ದೇವರ ಬೆತ್ತದ ಬುಟ್ಟಿಯಲ್ಲಿ ಒಂದರೊಳಗೊಂದರಂತೆ ಒಟ್ಟು ಏಳು ಬುಟ್ಟಿಗಳಿದ್ದು, ಕೊನೆಯ ಬೆತ್ತದ ಚಿಕ್ಕ ಬುಟ್ಟಿಯಲ್ಲಿ ಒಂದು 'ವಿಷ್ಣುಸಾಲಿಗ್ರಾಮ' ಇದೆ. ಉಳಿದ ಆರು ಬೆತ್ತದ ಬುಟ್ಟಿಗಳಲ್ಲಿ ಬಲಮುರಿಶಂಖ, ಅಂಬು, ಕೇಲು, ಬಳೆ, ಲಿಂಗ, ಬೆಳ್ಳಿಯ ವಿಗ್ರಹಗಳು, ಬಂಗಾರದ ಛತ್ರಿ, ನಾಗರ ಎಡೆ, ಪಂಚಲೋಹದ ಲಕ್ಷ್ಮೀನರಸಿಂಹಸ್ವಾಮಿ ವಿಗ್ರಹ ಮೊದಲಾದ ದೇವರ ಪರಿಕರಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಓಬಳದೇವರ ಪೆಟ್ಟಿಗೆಗಳು ಒಂದರೊಳಗೊಂದರಂತೆ ಮೂರು, ಐದು, ಅಥವಾ ಏಳು ಬುಟ್ಟಿಗಳು ಕಂಡು ಬರುತ್ತವೆ. ಚಳ್ಳಕೆರೆ ತಾಲ್ಲೂಕು ಬೊಂಬೇರಹಳ್ಳಿ ಗಾದರಿಪಾಲ ನಾಯಕ ದೇವಸ್ಥಾನದ ಬೆತ್ತದ ಬುಟ್ಟಿಯಲ್ಲಿ ಒಂದೇ ಬುಟ್ಟಿ ಇದ್ದು, ಅದರಲ್ಲಿ ತ್ರಿಶೂಲ, ಬಾಕು, ಲಿಂಗ, ಸಣ್ಣ ಪುಟ್ಟ ವಿಗ್ರಹಗಳು ಮಾತ್ರ ಕಂಡುಬರುತ್ತವೆ. ಈ ದೇವರ ಬುಟ್ಟಿ ಸುಮಾರು ಎರಡು ಅಡಿ ಎತ್ತರ ಮೂರು ಅಡಿ ಸುತ್ತಳತೆ ಹೊಂದಿದ್ದು ಕಲಾತ್ಮಕವಾಗಿ ಈ ಬುಟ್ಟಿಯನ್ನು ತಯಾರಿಸಿದ್ದಾರೆ. ಸಾಣೀಕೆರೆ ಗಂಜಿಗುಂಟಮ್ಮನ ಪೆಟ್ಟಿಗೆ ಒಳಗಡೆ ಸಾಲಿಗ್ರಾಮ ಮತ್ತು ರಕ್ತ ಭೂತಾಳಿ ಮರದಿಂದ ತಯಾರಿಸಿದ ದೇವಿಯ ವಿಗ್ರಹವನ್ನು ಇಟ್ಟಿದ್ದಾರೆ. ಕೆಲವೊಂದು ದೇವಸ್ಥಾನಗಳಲ್ಲಿ ಆಯುಧಗಳು ಚಿಕ್ಕ ಪುಟ್ಟ ಪಂಚಲೋಹದ ವಿಗ್ರಹಗಳು, ಧನಸ್ಸು ಅಥವಾ ಬಿಲ್ಲು ಮತ್ತು ಗಣೆಗಳಿಗೆ ಕರಿಕಂಬಳಿ ಸುತ್ತಿ ಬೆಳ್ಳಿಯ ಆಭರಣಗಳನ್ನು ತೊಡಿಸಿರುತ್ತಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ದೇವರುಗಳ ಬೆತ್ತದ ಬುಟ್ಟಿಗಳು ವೃತ್ತಾಕಾರ ಮತ್ತು ಚೌಕಾಕಾರ ಇಲ್ಲವೇ ಅಡ್ಡ ಪೆಟ್ಟಿಗೆಗಳಂತೆ ಕಂಡುಬರುತ್ತವೆ. ಈ ಬೆತ್ತದ ಬುಟ್ಟಿಗಳಿಗೆ ಕಲಾತ್ಮಕವಾದ ಕೆಂಪು ರೇಷ್ಮೆ ವಸ್ತ್ರವನ್ನು ಮುಚ್ಚಿ ಅದರ ಮೇಲುಗಡೆ ಒಂದು ಕಳಸವಿಟ್ಟು ಹತ್ತಿ ದಾರದಿಂದ ಮಂದಾಸನದ ಕಾಲುಗಳಿಗೆ ಬಿಗಿಯಾಗಿ ಕಟ್ಟಿ, ಬೆತ್ತದ ಬುಟ್ಟಿಯ ಮಧ್ಯಭಾಗಕ್ಕೆ ಬೆಳ್ಳಿಯ ಪಟ್ಟಿಯನ್ನು ಕಟ್ಟಿ ಈ ಪಟ್ಟಿಗೆ ಹೊಂದಿಕೊಂಡಂತೆ ದೇವರ ಆಭರಣಗಳನ್ನು ತೊಡಿಸಿ ಅಲಂಕಾರಕ್ಕಾಗಿ ಹೊಂಬಾಳೆ ಮತ್ತು ಹೂವುಗಳನ್ನು ಈ ಬೆತ್ತದ ಬುಟ್ಟಿಯ ಸುತ್ತ ಇಳಿ ಬಿಟ್ಟಿರುತ್ತಾರೆ.

೪.೨. ಮ್ಯಾಸಬೇಡರ ಹನ್ನೆರಡು ಪೆಟ್ಟಿಗೆ ದೇವರುಗಳು

ಪೆಟ್ಟಿಗೆದೇವರು		ಹಟ್ಟಿಗಳು
೧. ನಲ್ಲಜರುಗು ಓಬಳದೇವರು	-	ರುದ್ರಮ್ಮನಹಳ್ಳಿ, ಚಳ್ಳಕೆರೆ ತಾಲ್ಲೂಕು
೨. ಚಿತ್ರಲಿಂಗೇಶ್ವರ	-	ಉಡೇಗೋಳು, ರಾಯದುರ್ಗ ತಾಲ್ಲೂಕು
೩. ಕಾಟಮ್ಮಲಿಂಗೇಶ್ವರ	-	ಕಾಟಪ್ಪನಹಟ್ಟಿ, ಚಳ್ಳಕೆರೆ ತಾಲ್ಲೂಕು
೪. ಸೂರಲಿಂಗೇಶ್ವರ	-	ಕಾಮಗೇತನಹಳ್ಳಿ, ಜಗಳೂರು ತಾಲ್ಲೂಕು

೫. ಬೊಮ್ಮಲಿಂಗೇಶ್ವರ - ಗೌರಸಮುದ್ರ, ಚಳ್ಳಕೆರೆ ತಾಲ್ಲೂಕು

೬. ಪಾತೇಲಿಂಗೇಶ್ವರ - ಆಕನೂರು, ಜಗಳೂರು ತಾಲ್ಲೂಕು

೭. ದಡ್ಡುಮಾರಮ್ಮ - ಎನ್.ದೇವರಹಳ್ಳಿ, ಚಳ್ಳಕೆರೆ ತಾಲ್ಲೂಕು

೮. ಬಂಗಾರು ದೇವರು - ಬಂಗಾರದೇವರಹಟ್ಟಿ, ಚಳ್ಳಕೆರೆ ತಾಲ್ಲೂಕು

೯. ಕಂಚೋಬಳದೇವರು - ಮಾಕನಡುಕು, ಕೂಡ್ಲಿಗಿ ತಾಲ್ಲೂಕು

೧೦. ಅಲಕೋಬಳದೇವರು - ಹುಣಸೆಕಟ್ಟೆ, ಚಿತ್ರದುರ್ಗ ತಾಲ್ಲೂಕು

೧೧. ಪೆದ್ದತಿರುಮಲದೇವರು - ಬೇಡರಡ್ಡಿಹಳ್ಳಿ, ಚಳ್ಳಕೆರೆ ತಾಲ್ಲೂಕು

೧೨. ರಾಜಲದೇವರು - ಮಲ್ಲೂರಹಳ್ಳಿ, ಚಳ್ಳಕೆರೆ ತಾಲ್ಲೂಕು

೪.೩. ಕಾಡುಗೊಲ್ಲರ ಪ್ರಮುಖ ಪಂಚಲಿಂಗಗಳು

ಲಿಂಗಗಳು		ಹಟ್ಟಿಗಳು
೧. ಚಿತ್ರಲಿಂಗೇಶ್ವರ	-	ಚಿತ್ರಹಳ್ಳಿ, ಹೊಳಲ್ಕೆರೆ ತಾಲ್ಲೂಕು
೨. ಕಾಟಮ್ಮಲಿಂಗೇಶ್ವರ	-	ಇಕ್ಕನೂರು, ಹಿರಿಯೂರು ತಾಲ್ಲೂಕು
೩. ಪಾತೇಲಿಂಗೇಶ್ವರ	-	ಕೂಡಲಹಳ್ಳಿ, ಹಿರಿಯೂರು ತಾಲ್ಲೂಕು
೪. ಕ್ಯಾತರುಲಿಂಗೇಶ್ವರ	-	ಚನ್ನಮ್ಮನಾಗತಿಹಳ್ಳಿ, ಚಳ್ಳಕೆರೆ ತಾಲ್ಲೂಕು
೫. ರಾಮಲಿಂಗೇಶ್ವರ	-	ರಾಮನಹಳ್ಳಿ, ಚಿತ್ರದುರ್ಗ ತಾಲ್ಲೂಕು

೪.೪. ಮ್ಯಾಸಬೇಡರ ಮನೆದೇವರುಗಳು

೧. ಅಹೋಬಲ ನರಸಿಂಹಸ್ವಾಮಿ	೧೩. ಕಣಿವೆ ಮಾರಮ್ಮ	೨೫. ಚಿತ್ರಲಿಗೇಶ್ವರ
೨. ಅಡ್ಲಟ್ಟಿ ಭೂತಪ್ಪ	೧೪. ಕರಿಯಮ್ಮ	೨೬. ಜಗಲೂರಜ್ಜ
೩.ಅಲಕೋಬಳ ದೇವರು	೧೫. ಕರಿಸಿದ್ದೇಶ್ವರ	೨೭. ಜೋಗಪ್ಪ
೪. ಉಗ್ರನರಸಿಂಹ	೧೬. ಕಾಟಮ್ಮಲಿಂಗೇಶ್ವರ	೨೮. ಜೋಗೇಶ್ವರಸ್ವಾಮಿ
೫. ಓಬಳದೇವರು	೧೭. ಗಂಜಿಗುಂಟಮ್ಮ	೨೯. ತ್ಯಾರಮಲ್ಲೇಶ್ವರ
೬. ಓಬಳನರಸಿಂಹ	೧೮. ಗಾದರಿಪಾಲನಾಯಕ	೩೦. ತಿಮ್ಮಪ್ಪ
೭. ಕಂಚಿದೇವರು	೧೯. ಗುಂಡಬೋರಯ್ಯ	೩೧. ತಿಪ್ಪೇಸ್ವಾಮಿ
೮. ಕಂಪಳದೇವರು	೨೦. ಗುರುನಾಥ	೩೨. ದಡ್ಡುಮಾರಮ್ಮ
೯. ಕಂಪಳನರಸಿಂಹಸ್ವಾಮಿ	೨೧. ಗುರುವಯ್ಯ	೩೩. ದಡ್ಡಿಸೂರನಾಯಕ
೧೦. ಕಂಪಳರಂಗಸ್ವಾಮಿ	೨೨. ಗುರುಸ್ವಾಮಿ	೩೪. ದಾರಮಾದೇಶ್ವರ
೧೧. ಕಂಚೋಬಳನರಸಿಂಹ	೨೩. ಗೌರಸಂದ್ರ ಮಾರಮ್ಮ	೩೫. ದೊಡ್ಡಸೂರನಾಯಕ
೧೨. ಕದರಿನರಸಿಂಹ	೨೪. ಚನ್ನಕೇಶವ	೩೬. ನಲ್ಲಜರಯ್ಯ

೩೭. ಪರಮೇಶ್ವರ
೩೮. ಪಾಂಡುರಂಗಸ್ವಾಮಿ
೩೯. ಪಾತಲಿಂಗೇಶ್ವರ
೪೦. ಪಾಪಲಿಂಗೇಶ್ವರ
೪೧. ಬಂಗಾರು ದೇವರು
೪೨. ಭಾಗ್ಯಲಕ್ಷ್ಮೀ
೪೩. ಬೊಮ್ಮದೇವರು
೪೪. ಬೊಮ್ಮಲಿಂಗೇಶ್ವರ
೪೫. ಬೋರೇದೇವರು
೪೬. ಬೋಸೇದೇವರು
೪೭. ಭಗವಂತ
೪೮. ಮಲ್ಲಿಕಾರ್ಜುನ
೪೯. ಮಾದಲಿಂಗೇಶ್ವರ
೫೦. ಯರಬಳ್ಳಿ ಮಾರಕ್ಕ
೫೧. ರಂಗಪ್ಪ
೫೨. ರಾಜಲದೇವರು
೫೩. ರಾಜೇಶ್ವರಿ
೫೪. ರಾಮಲಿಂಗೇಶ್ವರ
೫೫. ಲಕ್ಕಮ್ಮ
೫೬. ಸಿದ್ದಪ್ಪ
೫೭. ಸೂರ್ಯನಾರಾಯಣ
೫೮. ಸೂರ್ಯಯರಗಾಟನಾಯಕ
೫೯. ಸೂರನಾಯಕ
೬೦. ಸೂರಲಿಂಗೇಶ್ವರ
೬೧. ಹನುಮಂತ
೬೨. ಹಾಲುರಾಮೇಶ್ವರ
೬೩. ಹೆಂಚೇರಪ್ಪ
೬೪. ಹೊನ್ನೂರುಸ್ವಾಮಿ

೪.೫. ಕಾಡುಗೊಲ್ಲರ ಮನೆದೇವರುಗಳು

೧. ಅಜ್ಜಪ್ಪ
೨. ಅಕ್ಕಮ್ಮ
೩. ಈರಣ್ಣ
೪. ಈರದಾಸಣ್ಣ
೫. ಈರಾವಳೇಶ್ವರ
೬. ಎತ್ತಪ್ಪ
೭. ಏಳುಮುದ್ದಪ್ಪ
೮. ಓಬಳನರಸಿಂಹ
೯. ಕಂಪಿಲರಾಯ
೧೦. ಕದರಪ್ಪ
೧೧. ಕದರಿನರಸಿಂಹ
೧೨. ಕರಿಯಮ್ಮ
೧೩. ಕಾಟಮ್ಮಲಿಂಗೇಶ್ವರ
೧೪. ಕ್ಯಾತೇಲಿಂಗೇಶ್ವರ
೧೫. ಗಟ್ಟಪ್ಪ
೧೬. ಗಾದ್ರಿಲಿಂಗೇಶ್ವರ
೧೭. ಗಿಡ್ಡಣ್ಣ
೧೮. ಗೌರಸಂದ್ರ ಮಾರಮ್ಮ
೧೯. ಗೊಲ್ಲಾಳಮ್ಮ
೨೦. ಗೋಪಾಲಸ್ವಾಮಿ
೨೧. ಗೋವಿಂದಸ್ವಾಮಿ
೨೨. ಚಿಕ್ಕಣ್ಣ
೨೩. ಚಿತ್ತಪ್ಪ
೨೪. ಚಿತ್ರದೇವರು
೨೫. ಚಿತ್ರಲಿಂಗೇಶ್ವರ
೨೬. ಜುಂಜಪ್ಪ
೨೭. ತಾಳಿದೇವರು
೨೮. ತಿಮ್ಮಪ್ಪ
೨೯. ತೆಲಗಾಡ್ಲಮ್ಮ
೩೦. ನಾಗಪ್ಪ
೩೧. ಪಾತಪ್ಪ
೩೨. ಪಾತಲಿಂಗೇಶ್ವರ
೩೩. ಪುರ್ಲಳ್ಳಿ ಭೂತಪ್ಪ
೩೪. ಬಂಜಗೆರೆ ವೀರಣ್ಣ
೩೫. ಬಾಲದೇವರು
೩೬. ಮಲ್ಲಯ್ಯ
೩೭. ಮಲ್ಲಿಕಾರ್ಜುನ
೩೮. ಮಾಯಸಂದ್ರದ ಕರಿಯಮ್ಮ
೩೯. ಮೈಲಾರಲಿಂಗೇಶ್ವರ
೪೦. ಯರ್ರಪ್ಪಸ್ವಾಮಿ
೪೧. ಯರಬಳ್ಳಿಮಾರಕ್ಕ
೪೨. ಯಲ್ಲಮ್ಮದೇವಿ
೪೩. ರಂಗಸ್ವಾಮಿ
೪೪. ರಾಮಲಿಂಗೇಶ್ವರ
೪೫. ಲಕ್ಷ್ಮೀನರಸಿಂಹ
೪೬. ವೀರಕರಿಯಣ್ಣ
೪೭. ವೀರಚಿಕ್ಕಣ್ಣ
೪೮. ವೀರನಾಗಣ್ಣ
೪೯. ವೀರಮಾರಣ್ಣ
೫೦. ವೀರಮುದಿಯಣ್ಣ
೫೧. ವೀರಭದ್ರಸ್ವಾಮಿ

೫೨. ವೆಂಕಟೇಶ್ವರ	೫೬. ಸುಂಕ್ಲಮ್ಮ	೬೦. ಹಾಲುಕುಡಿದಸ್ವಾಮಿ
೫೩. ಸಿದ್ದಪ್ಪ	೫೭. ಸೂರಪ್ಪ	೬೧. ಹಾಲುಗುಡ್ಡದಪ್ಪ
೫೪. ಸಿರಿಯಣ್ಣ	೫೮. ಸೂರ್ಯಯರಗಾಟನಾಯಕ	೬೨. ಹಾಲುದೇವರು
೫೫. ಸಿಂಪಣ್ಣ	೫೯. ಶ್ರೀಕೃಷ್ಣ	೬೩. ಹಾಲುರಾಮೇಶ್ವರ

೫. ಗಂಗೆಪೂಜೆ

ಪವಿತ್ರತೆಯ ಸಂಕೇತವಾದ 'ಗಂಗೆ'ಗೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವವಾದ ಸ್ಥಾನ ಕೊಡಲಾಗಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ತಮ್ಮ ದೇವರುಗಳನ್ನು ಪವಿತ್ರ ಗಂಗಾ ಸ್ಥಾನಗಳಿಗೆ ದೇವರನ್ನು ತೆಗೆದುಕೊಂಡು ಹೋಗಿ ಜಲಾಭಿಷೇಕ ಮಾಡಿಕೊಂಡು ಬರುವ ಪದ್ಧತಿಗೆ ಗಂಗೆಪೂಜೆ, ಜಲ್ದಿ, ಹೊಳೆಪೂಜೆ, ನದಿಪೂಜೆ ಮೊದಲಾದ ಅರ್ಥಬರುವಂತೆ ಈ ಎರಡು ಬುಡಕಟ್ಟು ಜನಾಂಗ ಕರೆಯುತ್ತಾರೆ. ಇತರ ಜಾತಿ ಜನಾಂಗದವರಿಗಿಂತ ಇವರು ಮಾಡುವ 'ಗಂಗೆಪೂಜೆ' ವಿಶಿಷ್ಟತೆಯಿಂದ ಕೂಡಿರುತ್ತದೆ. ಹಬ್ಬ, ಜಾತ್ರೆ, ಮತ್ತು ಗುಗ್ಗರಿ ಹಬ್ಬಗಳಲ್ಲಿ ಮಾತ್ರ ದೇವರನ್ನು ತಮ್ಮ ಹಟ್ಟಿಯಿಂದ ಹತ್ತಿರ ವಿರುವ ನದಿ, ಹಳ್ಳ, ಹೊಳೆ, ಕೆರೆ, ಹೊಂಡ, ಬಾವಿ, ಮತ್ತು ಪುಣ್ಯಕ್ಷೇತ್ರಗಳಿಗೆ ದೇವರನ್ನು ತೆಗೆದುಕೊಂಡು ಹೋಗುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗಕ್ಕೆ ಬರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳನ್ನು ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು, ನಿಡಗಲ್ಲು ಬೆಟ್ಟದ ಬುಡದಲ್ಲಿರುವ 'ರಾಮತೀರ್ಥಕ್ಕೆ'; ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕಿನಲ್ಲಿ ಹರಿದು ಹೋಗುವ 'ವೇದಾವತಿ' ನದಿಗೆ; ಚಳ್ಳಕೆರೆ ತಾಲ್ಲೂಕು ಗರಣಿಹಳ್ಳ; ದೊಡ್ಡೇರಿ ಹತ್ತಿರ ದೊಡ್ಡಹಳ್ಳ; ಹಿರಿಯೂರು ತಾಲ್ಲೂಕು ಕೂಡಲಸಂಗಮೇಶ್ವರನ ಸನ್ನಿಧಿ; ಚಳ್ಳಕೆರೆ ತಾಲ್ಲೂಕು ನಲ್ಲೂರಹಳ್ಳಿ, ಬೊಂಬೇರಹಳ್ಳಿ ಮತ್ತು ವಡೇರಹಳ್ಳಿ ಹತ್ತಿರ 'ವೇದಾವತಿ ನದಿ' ತೀರಕ್ಕೆ ಜಲ್ದಿಗೆ ಹೋಗುತ್ತಾರೆ. ಅದೇ ರೀತಿ ಚಿತ್ರದುರ್ಗ ಜಿಲ್ಲೆಯ ಪಶ್ಚಿಮ ಭಾಗಕ್ಕೆ ಬರುವ ಈ ಎರಡು ಬುಡಕಟ್ಟು ಜನಾಂಗ ತಮ್ಮ ದೇವರುಗಳನ್ನು ಹೊಸದುರ್ಗ ತಾಲ್ಲೂಕು "ಹಾಲುರಾಮೇಶ್ವರ"ಕ್ಕೆ; ತಾಳವಟ್ಟಿ ಹತ್ತಿರ ನೊಣಬೆ; ಯರಬಳ್ಳಿ ಹತ್ತಿರ ಸುಣ್ಣಗುಡಿ ಹಳ್ಳ; ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಹತ್ತಿರ ಹೀರೆಹಳ್ಳ; ತರೀಕೆರೆ ತಾಲ್ಲೂಕು ಕಲ್ಲತ್ತಿಗಿರಿ; ಕೂಡ್ಲಿಗಿ ತಾಲ್ಲೂಕು ಚಿಕ್ಕಜೋಗಿಹಳ್ಳಿಯ ಸಿದ್ದಾಪುರದ ಹತ್ತಿರ ಬುಗ್ಗುಹೊಳೆ; ಹೊಸಪೇಟೆ ತಾಲ್ಲೂಕು ಹಂಪಿ ತುಂಗಾಭದ್ರ ನದಿಯ 'ತಿರುವಿನಮಡು'ವಿನ ರಾಮಲಕ್ಷ್ಮಣರ ಗುಡಿ ಹತ್ತಿರ, ಮೊಳಕಾಲ್ಮೂರು ತಾಲ್ಲೂಕು ಮೇಲುದುರ್ಗದ 'ಕಂಪಳರಂಗನ ಹೊಂಡ'; ಹೊಳಲ್ಕೆರೆ ತಾಲ್ಲೂಕು ಮಿಂಚೇರಿಪುರದ ಹತ್ತಿರ ಮಿಂಚೇರಿ ಹಳ್ಳ ಮತ್ತು ಹಿರಿಯೂರು ತಾಲ್ಲೂಕಿನಲ್ಲಿ ಹರಿಯುವ ವೇದಾವತಿ ನದಿಗೂ ಕೂಡ ಗಂಗೆಪೂಜೆಗೆ ತಮ್ಮ ದೇವರುಗಳನ್ನು ತೆಗೆದುಕೊಂಡು ಹೋಗಿ ಬರುತ್ತಾರೆ. ಕೆಲವೊಂದು ಬುಡಕಟ್ಟು ದೇವರುಗಳು ಗಂಗೆಪೂಜೆಗೆ ಹೋಗುವಾಗ, ಡಾಂಬರ್ ರಸ್ತೆಯಲ್ಲಾಗಲಿ, ವಿದ್ಯುತ್ ತಂತಿ ಕೆಳಗಡೆಯಾಗಲಿ ಹೋಗುವುದಿಲ್ಲ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡ ಗೊಲ್ಲರಹಟ್ಟಿಯ ಕಾಡುಗೊಲ್ಲರ "ಹಾಲುಕುಡಿದಸ್ವಾಮಿ"ಯು ತಾಳವಟ್ಟಿ ಹತ್ತಿರ ನೊಣಬೆ ಅಥವಾ ಯರಬಳ್ಳಿ ಹತ್ತಿರ ಸುಣ್ಣಗುಡಿ ಹಳ್ಳಕ್ಕೆ 'ಗಂಗೆಪೂಜೆ'ಗೆ ಹೋಗುವಾಗ ದೇವರೆತ್ತುಗಳ ಮಧ್ಯೆ ಹೋಗುತ್ತದೆ, ಆದರೆ ವಿದ್ಯುತ್

ತಂತಿ ಕೆಳಗೆ ಹೋಗುವುದಿಲ್ಲ. ಕೆಲವೊಂದು ದೇವರುಗಳಿಗೆ ವಿದ್ಯುತ್ ತಂತಿ, ಡಾಂಬರ್ ರಸ್ತೆ, ಈಚಲ ಮರದ ನೆರಳು ಕೂಡ ಆಗುವುದಿಲ್ಲ. ನವಣೆ ಮತ್ತು ಹುರುಳಿ ಬೆಳೆದ ಹೊಲಗಳಲ್ಲಿಯೂ ಸಹ ಈ ದೇವರುಗಳು ಹೋಗುವುದಿಲ್ಲ. ಕೆಲವೊಂದು ಬುಡಕಟ್ಟು ದೇವರುಗಳಾದ ಮೊಳಕಾಲ್ಮೂರು ತಾಲ್ಲೂಕು ಕಂಪಳದೇವರಹಟ್ಟಿ ಕಂಪಳರಂಗಸ್ವಾಮಿ; ಕೂಡ್ಲಿಗಿ ತಾಲ್ಲೂಕು ಮಾಕನಡುಕು ಕಂಚೋಬಳನರಸಿಂಹಸ್ವಾಮಿ; ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ; ಹಿರಿಯೂರು ತಾಲ್ಲೂಕು ಯರಬಳ್ಳಿ, ದೊಡ್ಡಗೊಲ್ಲರಹಟ್ಟಿ 'ಹಾಲುಕುಡಿದಸ್ವಾಮಿ'; ಹೊಳಲ್ಕೆರೆ ತಾಲ್ಲೂಕು ದೇವರಗಂಜಿಗಟ್ಟೆ ಗಾದರಿಪಾಲನಾಯಕ ಮತ್ತು ಕಂಪಳನರಸಿಂಹಸ್ವಾಮಿ ಮೊದಲಾದ ದೇವರುಗಳಿಗೆ ವಿದ್ಯುತ್ ಬೆಳಕು ಆಗುವುದಿಲ್ಲ. ಈ ಎಲ್ಲಾ ದೇವರ ಹಬ್ಬಗಳನ್ನು "ಕೊಳ್ಳಿಬೆಳಕಿನಲ್ಲಿ" ಮಾಡುತ್ತಾರೆ. ಕೆಲವೊಂದು ದೇವರ ಪೂಜಾರಿಗಳು ಕೂಡ ಡಾಂಬರ್ ರಸ್ತೆ ಮೇಲೆ ದೇವರನ್ನು ಹೊತ್ತು ನಡೆಯದೆ, ಕಾಡು, ಮೇಡುಗಳಲ್ಲಿ ಕಾಲುದಾರಿಯ ಮುಖಾಂತರ ದೇವರನ್ನು ಹೊತ್ತುಕೊಂಡು ಹೊಳೆಪೂಜೆಗೆ ಹೋಗಿ ಬರತ್ತಾರೆ.

ವರ್ಷದಲ್ಲಿ ಯಾವುದಾದರೂ ಹಬ್ಬದ ವಿಶೇಷ ಸಂದರ್ಭದಲ್ಲಿ ಪೂಜಾರಿ ಮತ್ತು ದಾಸಯ್ಯಗಳಿಗೆ ಪಟ್ಟಕಟ್ಟುವಾಗ ಈ ಬೆತ್ತದ ಬುಟ್ಟಿ ದೇವರುಗಳನ್ನು ತೊರೆ, ಹಳ್ಳ, ನದಿ, ಹೊಂಡ ಅಥವಾ ಪುಣ್ಯಕ್ಷೇತ್ರಗಳಿಗೆ ಹೋಗಿ, ಕರಿಕಂಬಳಿ ಗದ್ದುಗೆ ಮಾಡಿ, ದೇವರು ತೋರಿಸಿದ ಸ್ಥಳದಲ್ಲಿ ಅಥವಾ ದೇವರ ಬೆತ್ತದ ಬುಟ್ಟಿಯ ಸಮ್ಮುಖದಲ್ಲಿ ಹತ್ತರಿಂದ ಹದಿನೈದು ಅಡಿ ಅಂತರದ (ದೂರ) ಮರಳಿನಿಂದ 'ಚಿಲುಮೆ' ತೋಡಿ; ಆ ಚಿಲುಮೆಯಿಂದ ಬರುವ ಒರತೆ ನೀರಿನಿಂದ, ದೇವರಪೂಜಾರಿ ಅಥವಾ ಜಂಗಮ ಗುರುಗಳು ಪೂರ್ಣ ಕರಿಕಂಬಳಿ ಹೊದ್ದುಕೊಂಡು, ಬಾಯಿಗೆ ಬಟ್ಟೆ ಕಟ್ಟಿಕೊಂಡು ಮತ್ತೇ ಕೆಲವರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ದೇವರಪೂಜಾರಿಗಳು ಬೆತ್ತದ ಬುಟ್ಟಿಯನ್ನು ಬಿಚ್ಚಿ ಅದರೊಳಗಿನ ದೇವರ ಪರಿಕರಗಳನ್ನು ತೊಳೆದು ಮತ್ತೇ ಬುಟ್ಟಿಯಲ್ಲಿಟ್ಟು ಪೂಜಿಸುತ್ತಾರೆ. ಆದರೆ ಈ ದೇವರ ಬುಟ್ಟಿಗಳನ್ನು ಬಿಚ್ಚುವಾಗ ಅಥವಾ ಮುಚ್ಚುವಾಗ ಅದರೊಳಗೇನಿದೆ? ಎಂದು ಅಲ್ಲಿ ನೆರದಿದ್ದ ಭಕ್ತರಾರು ನೋಡುವುದಿಲ್ಲ. ಪೂಜಾರಿಗಳು ಸಹ ತೋರಿಸುವುದಿಲ್ಲ. ಗಂಗೆಪೂಜೆಯಲ್ಲಿ ಸೇರಿದ್ದ ಭಕ್ತರು ಈ 'ದೇವರಬುಟ್ಟಿ'ಯಿಂದ ಬಹುದೂರ ನಿಂತು ಕುತೂಹಲದಿಂದ ಗಂಗಾಪೂಜಾ ಕಾರ್ಯವನ್ನು ವೀಕ್ಷಿಸುತ್ತಾರೆ. ವೈಷ್ಣವ ಪಂಥದ ದೇವರುಗಳಾದರೆ ವೈಷ್ಣವ ಸಂಪ್ರದಾಯದ ಪ್ರಕಾರ, ಶೈವ ಪಂಥದ ದೇವರುಗಳಾದರೆ ಶೈವ ಸಂಪ್ರದಾಯದ ಪ್ರಕಾರ ಇಲ್ಲಿಯ ಪೂಜಾರಿಗಳು ಪೂಜೆ ಸಲ್ಲಿಸುತ್ತಾರೆ. ವೈಷ್ಣವ ಪಂಥದವರು ನಾಮ, ಕುಂಕುಮ ಮತ್ತು ವಿಭೂತಿ ಬಳಸಿದರೆ, ಶೈವ ಪಂಥದವರು ವಿಭೂತಿ ಮತ್ತು ಕುಂಕುಮ ಬಳಸುತ್ತಾರೆ, ಆದರೆ ಇವರು ನಾಮ ಧರಿಸುವುದಿಲ್ಲ. ವೈಷ್ಣವ ಪಂಥದ ದೇವರುಗಳ ಪೂಜಾರಿ ಮತ್ತು ದಾಸಯ್ಯಗಳು ಒಂದು ಅಥವಾ ಮೂರು ನಾಮಗಳನ್ನು ಧರಿಸುತ್ತಾರೆ. ದೇವರ ಪೂಜೆಗೆ ವಿಶೇಷವಾಗಿ "ಹೊಂಬಾಳೆ" ಬಳಸುತ್ತಾರೆ. ಸಾಮಾನ್ಯವಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು 'ಗಂಗೆಪೂಜೆ'ಯಲ್ಲಿ ಪ್ರಾಣಿಬಲಿ ಕೊಡುವುದಿಲ್ಲ. ಭಕ್ತಾದಿಗಳು ತರುವ ಕಾಸು ಮತ್ತು ಮೀಸಲು ಹಾಲು, ಮೊಸರು, ಬೆಲ್ಲ, ಬಾಳೆಹಣ್ಣು, ತೆಂಗಿನಕಾಯಿ, ತಂಬಿಟ್ಟು ಮೊದಲಾದ ಸಾತ್ವಿಕ ಆಹಾರ ಪದಾರ್ಥಗಳನ್ನು ಮಾತ್ರ ದೇವರಿಗೆ ನೈವೇದ್ಯ ಮಾಡುತ್ತಾರೆ. ಕೆಲವೊಂದು

ಪ್ರದೇಶದಲ್ಲಿ ಗಂಗೆಪೂಜೆ ಮಾಡುವಾಗ 'ಹರಕೆ'ಯ ಸಾಮಾನುಗಳನ್ನು ಮತ್ತು ದಕ್ಷಿಣೆಯನ್ನು ದೇವರಿಗೆ ಒಪ್ಪಿಸುತ್ತಾರೆ. ಹಟ್ಟಿಗೌಡ, ಯಜಮಾನ, ದೊರೆಗಳು, ದೇವರಿಗೆ "ಕಾಸು ಒಪ್ಪಿಸುವುದು"- ಎಂಬ ಶಾಸ್ತ್ರ ಮಾಡುತ್ತಾರೆ. ಕೂಡ್ಲಿಗಿ ತಾಲ್ಲೂಕು ಮಾಕನಡುಕು ಓಬಳದೇವರು ಸೂರ್ಯನಮುಕ್ಕು ಹೋಗಿ ಬಂದಾಗ ದೊರೆಗಳ ಹಿರಿಯ ಮಗ "ಕಾಸುಒಪ್ಪಿಸುತ್ತಾನೆ" ಇದು ಒಂದು ರೀತಿ ತಪ್ಪು-ನೆಪ್ಪುಗಳನ್ನು ಒಪ್ಪಿಕೊಳ್ಳುವುದು, ಧರ್ಮ-ಕರ್ಮ ಪರಿಪಾಲನೆ ಮತ್ತು ಸತ್ಯದ ಭಕ್ತಿಯ ಅಮರ ಸಂಕೇತವಾಗಿ ಕಂಡು ಬರುತ್ತದೆ. ಈ ಎರಡು ಬುಡಕಟ್ಟುಗಳ ದೇವರ ಪೂಜಾರಿ ಮತ್ತು ದಾಸಯ್ಯಗೆ ಪಟ್ಟಕಟ್ಟುವಾಗ, ಗ್ರಾಮಗಳಲ್ಲಿ ಕಷ್ಟ-ನಷ್ಟಗಳು ಉಂಟಾದಾಗ, ಸಮೃದ್ಧಿ ಬೆಳೆಬಂದಾಗ, ಅಥವಾ ಹನ್ನೆರಡು ವರ್ಷ ತುಂಬುವದರೊಳಗಾಗಿ ತಮ್ಮ ದೇವರ ಮೂಲನಿಧಿ ಅಥವಾ ವಜ್ರಕ್ಕೆ ಹೋಗಿ ಬರಬೇಕೆಂಬ ಸಂಪ್ರದಾಯ ಈ ಎರಡು ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಅಂತಹ ವಜ್ರ ಅಥವಾ ಪುಣ್ಯಕ್ಷೇತ್ರಗಳೆಂದರೆ.

೫.೧. ನಿಡಗಲ್ಲು ಬೆಟ್ಟದ ರಾಮತೀರ್ಥ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ದೇವರುಗಳಿಗೆ, ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು, ನಿಡಗಲ್ಲು ಬೆಟ್ಟದ ಬುಡದಲ್ಲಿರುವ ಪವಿತ್ರ ಹೊಂಡ "ರಾಮತೀರ್ಥ" ಪವಿತ್ರ ಪುಣ್ಯಕ್ಷೇತ್ರವಾಗಿದೆ. ಇದು ಪ್ರಾಚೀನ ಹನ್ನೆರಡು ಪಾಳೆಯ ಪಟ್ಟುಗಳಲ್ಲಿ ಒಂದು. ತುಮಕೂರು ಜಿಲ್ಲಾ, ಪಾವಗಡದಿಂದ ಪಶ್ಚಿಮಕ್ಕೆ ೨೨ ಕಿ.ಮೀ. ದೂರದಲ್ಲಿ ನಿಡಗಲ್ಲು ಎಂಬ ಹೆಸರನ್ನೇ ಹೊಂದಿರುವ ಹಳ್ಳಿಯ ದಕ್ಷಿಣ ಮತ್ತು ಪೂರ್ವ ಭಾಗಕ್ಕಿದೆ. ಒಂದಾನೊಂದು ಕಾಲದಲ್ಲಿ ಬಹಳ ಖ್ಯಾತಿಯನ್ನು ಪಡೆದಿದ್ದ ಐತಿಹಾಸಿಕ ಪಟ್ಟಣವಾಗಿತ್ತು. ಈಗ ಅದೇ ಹೆಸರಿನ ಹೋಬಳಿಯ ಕೇಂದ್ರವಾಗಿದೆ. ಈ ನಿಡಗಲ್ಲು ಬೆಟ್ಟ ಸಮುದ್ರಮಟ್ಟಕ್ಕಿಂತ ೧,೧೪೯ ಮೀ. ಎತ್ತರದಲ್ಲಿದೆ. ಪ್ರಾಚೀನ ಕಾಲದಲ್ಲಿ ಇದಕ್ಕೆ ಅಂಜನಗಿರಿ, ನಿಜಗಲು ಎಂದು ಕರೆಯುತ್ತಿದ್ದರು. ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಈ ನಿಡಗಲ್ಲು ಬೆಟ್ಟ ಮತ್ತು ರಾಮತೀರ್ಥ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಬಹಳ ಮಹತ್ವ ಪಡೆದುಕೊಂಡಿದೆ. "ಹೇಮಾವತಿಯನ್ನು (ಆಂಧ್ರಪ್ರದೇಶ) ರಾಜಧಾನಿಯನ್ನಾಗಿ ಹೊಂದಿದ್ದು ನೊಳಂಬ ರಾಜರು ಈ ಸುತ್ತ ಮುತ್ತಲ ಪ್ರದೇಶಗಳನ್ನು ಒಂಭತ್ತು ಮತ್ತು ಹತ್ತನೆಯ ಶತಮಾನಗಳಲ್ಲಿ ತಮ್ಮ ಆಳ್ವಿಕೆಗೆ ಸೇರಿಸಿಕೊಂಡಿದ್ದರು. ಆನಂತರದಲ್ಲಿ ಇದು ಚೋಳರ ವಂಶಸ್ಥನೇ ಆದ, ಆದರೆ ಚಾಳುಕ್ಯರ ಆಶ್ರಯದಲ್ಲಿ ಆಳುತ್ತಿದ್ದ ಇರುಂಗೋಳನ ವಶವಾಯಿತು. ಇವನ್ನು ಹೊಯ್ಸಳ ಇಮ್ಮಡಿ ಬಲ್ಲಾಳನು ಗೆದ್ದುಕೊಂಡನು. ನಿಡುಗಲ್ಲಿನ ಕೋಟೆಯ ಅಭೇದ್ಯವಾಗಿದ್ದು, ಅಷ್ಟದುರ್ಗೆಯರು ಮತ್ತು ಅಷ್ಟಭೈರವರಿಂದ ರಕ್ಷಿಸಲ್ಪಟ್ಟಿದೆ. ಅನೇಕ ಉಗ್ರಾಣಗಳು, ಮದ್ದುಗುಂಡುಗಳ ಕೋಠಡಿಗಳು, ಕೊಳಗಳು, ಮತ್ತು ಅನೇಕ ದೇವಾಲಯಗಳು ಇಲ್ಲಿನ ಕೋಟೆಯಲ್ಲಿವೆ. ಟಿಪ್ಪು ಸುಲ್ತಾನನು ಗೆಲ್ಲುವವರೆಗೂ ಈ ಪ್ರದೇಶವನ್ನು ಹರತಿ ನಾಯಕರು ಆಳುತ್ತಿದ್ದರು. ಬೆಟ್ಟದ ಕೆಳಭಾಗದಲ್ಲಿ ಹೊಟ್ಟೇಶ್ವರ ಎಂದು ಕರೆಯಲಾಗುವ ೧೬೮೧ರಲ್ಲಿ ರಚಿತವಾದುದೆಂದು ಹೇಳಲಾದ ಸರ್ವದೇವೇಶ್ವರ ದೇವಾಲಯವಿದೆ. ಇಲ್ಲಿ ಮಿರ್ಜಾ ಹುಸೇನ್ ವಲಿಯ ಗೋರಿಯಿದೆ. ಇವರ ಗೌರವಾರ್ಥವಾಗಿ ಪ್ರತೀ ವರ್ಷವೂ ಒಂದು ಉರುಸ್ ಇಲ್ಲಿ ನಡೆಯುತ್ತದೆ".[1] ದಕ್ಷಿಣ

ಭಾರತದ ಆನೆಗೊಂದಿ, ನಿಡಗಲ್ಲು, ಚಿತ್ರದುರ್ಗ, ಹರ್ತಿಕೋಟೆ, ತರಿಕೆರೆ, ರತ್ನಗಿರಿ, ರಾಯದುರ್ಗ, ಮಿಡಿಗೇಶಿ, ಐಮಂಗಲ, ಹಾಗಲವಾಡಿ, ಪಾವಗಡ ಮತ್ತು ಪೆನುಗೊಂಡ ಎಂಬ ಹನ್ನೆರಡು ಬೇಡ ನಾಯಕರ ಸಂಸ್ಥಾನಗಳು ಪ್ರಾಚೀನ ಕಾಲದಲ್ಲಿ ಬಹಳ ಖ್ಯಾತಿಯನ್ನು ಹೊಂದಿದ್ದವು. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಿಗೆ ನಿಡಗಲ್ಲು ಬೆಟ್ಟ ಮತ್ತು ಬೆಟ್ಟದ ಬುಡದಲ್ಲಿರುವ 'ರಾಮತೀರ್ಥ' ಪವಿತ್ರ ಪುಣ್ಯಕ್ಷೇತ್ರವಾಗಿದೆ. ಈ ಕೊಳ ತೀರ್ಥದಷ್ಟೇ ಪವಿತ್ರತೆಯನ್ನು ಹೊಂದಿರುವ ಶುದ್ಧವಾದ ನೀರು ತುಂಬಿ ತುಳುಕುತ್ತಿದೆ, ಸುಸಜ್ಜಿತವಾದ ಕಲ್ಲುಕಟ್ಟಡದಿಂದಲೂ, ಇಳಿಯುವುದಕ್ಕೆ ಸುತ್ತ ಸುಂದರ ಮೆಟ್ಟಿಲುಗಳನ್ನು ಹೊಂದಿದೆ. ಕೊಳದ ಪಶ್ಚಿಮಕ್ಕೆ ಅನೇಕ ನಾಗರಕಲ್ಲುಗಳು, ಮತ್ತೊಂದು ಬದಿಗೆ ಹೊಟ್ಟೇಶ್ವರ ಎಂದು ಕರೆಯಲ್ಪಡುವ 'ಸರ್ವದೇವೇಶ್ವರ' ಎಂಬ ದೇವಾಲಯವಿದೆ. ಈ ಗುಡಿಯ ಸುತ್ತ ಈಶ್ವರನ ಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಹೊಂಡದ ಸುತ್ತ ಎತ್ತರವಾದ ಗುಡ್ಡಗಳು, ಗಿಡ ಮರ ಬಳ್ಳಿಗಳು ದಟ್ಟವಾದ ಕಾಡು, ಹಚ್ಚನೆಯ ವನಸಿರಿ ತುಂಬಿಕೊಂಡಿದೆ. ಇಂತಹ ಪ್ರದೇಶದ 'ರಾಮತೀರ್ಥ'ದ ಹೊಂಡ ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರುಗಳಿಗೆ ಪವಿತ್ರ ಪುಣ್ಯಕ್ಷೇತ್ರವಾಗಿದೆ. ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗಕ್ಕೆ ಬರುವ, ಚಳ್ಳಕೆರೆ, ಹಿರಿಯೂರು ಮತ್ತು ಪಾವಗಡ ತಾಲ್ಲೂಕಿನ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳನ್ನು ನಿಡಗಲ್ಲು ಬೆಟ್ಟದ ರಾಮತೀರ್ಥಕ್ಕೆ ಜಲ್ದಿಗೆ ತೆಗೆದುಕೊಂಡು ಹೋಗಿಬರುತ್ತಾರೆ. ಮಳೆ ಬೆಳೆ ಸಮೃದ್ಧಿಯಾದಾಗ, ಪೂಜಾರಿ ಮತ್ತು ದಾಸಯ್ಯಗಳಿಗೆ ಪಟ್ಟಕಟ್ಟುವಾಗ, ಯಾರಾದರೂ ಭಕ್ತರು ಹರಕೆ ಮಾಡಿಕೊಂಡು ದೇವರನ್ನು ಹೊರಡಿಸಿದಾಗ ನಿಡಗಲ್ಲು ಬೆಟ್ಟದ 'ರಾಮತೀರ್ಥ'ಕ್ಕೆ ಜಲ್ದಿಗೆ ಹೋಗಿ ಬರುತ್ತಾರೆ. ದೇವರ ಬೆತ್ತದ ಬುಟ್ಟಿಯನ್ನು ತಲೆಯ ಮೇಲೆ ಹೊತ್ತು ಕಾಲುನಡಿಗೆಯಲ್ಲಿಯೇ ಹೋಗಿ ಬರುವ ಈ ಎರಡು ಬುಡಕಟ್ಟು ಜನಾಂಗ, ನಿಡಗಲ್ಲು ಬೆಟ್ಟದ 'ರಾಮತೀರ್ಥ' ಹೊಂಡದ ನೀರನ್ನು "ಪವಿತ್ರಗಂಗೆ" ಎಂದು ನಂಬಿದ್ದಾರೆ. ಈ ಸ್ಥಳದ ಮಹಿಮೆಯೊ ಅಥವಾ ಕೊಳದ ಪವಿತ್ರತೆಯೋ ಅಂತೂ ಈ ಸ್ಥಳ ಮತ್ತು ಹೊಂಡದ ಬಗ್ಗೆ ಅಪಾರವಾದ ನಂಬಿಕೆ ಇಟ್ಟುಕೊಂಡಿದ್ದಾರೆ.

ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಮ್ಯಾಸಬೇಡರ ಅಹೋಬಲ ನರಸಿಂಹಸ್ವಾಮಿಯನ್ನು ನಿಡಗಲ್ಲು ಬೆಟ್ಟದ ರಾಮತೀರ್ಥಕ್ಕೆ ಜಲ್ದಿಗೆ ತೆಗೆದುಕೊಂಡು ಹೋಗಿ ಬರುವ ಸಂಪ್ರದಾಯವಿದೆ. 'ರಾಮತೀರ್ಥಕ್ಕೆ' ಹೋದ ಮೇಲೆ ಹೊಂಡದ ದಡದಲ್ಲಿ ಕರಿಕಂಬಳಿ ಗದ್ದಿಗೆಮಾಡಿ ದೇವರಿಟ್ಟು, ಒಡವೆ ವಸ್ತ್ರಗಳನ್ನು ಕೊಳದ ನೀರಿನಿಂದ ತೊಳೆದು ಶುದ್ಧೀಕರಿಸಿ, ಎಲ್ಲರು ಸ್ನಾನಮಾಡಿ, ದೇವರಿಗಾಗಿ 'ತಳಿಗೆ' ಮಾಡಿ, ಆ ಹೊಂಡದ ದಡದಲ್ಲಿ ೧೦೧ ಎಡೆ ಹಾಕಿ, 'ಗಂಗೆಪೂಜೆ' ಮಾಡಿ ತಾಮ್ರದ ಬಿಂದಿಗೆಯಲ್ಲಿ ಹೊಂಡದ ನೀರನ್ನು ತುಂಬಿಕೊಂಡು, ದೇವರಿಗೆ ಮಹಾಪೂಜೆ, ಮಹಾಮಂಗಳಾರತಿ ಮಾಡಿ ಎಲ್ಲಾರು ಊಟ ಮಾಡಿದ ನಂತರ ದೇವರನ್ನ ಎಬ್ಬರಿಸುಕೊಂಡು ಎಲ್ಲಾ ಭಕ್ತರು ಮತ್ತು ಕಾಡುಗೊಲ್ಲರು ಜೊತೆಗೆ ನಡೆದುಕೊಂಡು ಬರುತ್ತಾರೆ. ದಾರಿಯುದ್ದಕ್ಕೂ ದೇವರ ಮೇಲಿನ ತ್ರಿಪದಿಗಳನ್ನು ಹಾಡುತ್ತ ಸಾಗುತ್ತಾರೆ. ಈ ಗ್ರಾಮೀಣ ಹೆಣ್ಣು ಮಕ್ಕಳು ಹಾಡುವ ಜನಪದ ಗೀತೆಗಳು ಹಾಡುವುದಕ್ಕೆ, ಕೇಳುವುದಕ್ಕೆ ಇಂಪಾಗಿ ಕಂಡು ಬಂದರೂ ಎಲ್ಲಾ ದೇವರುಗಳ ತ್ರಿಪದಿಗಳು ಒಂದೇ ರೀತಿ ಕೇಳಿಬರುತ್ತವೆ.

ನಿಡಗಲ್ಲು ಗುಡ್ಡಾದಿ ಗುಲಗಂಜಿ ಗಿಡಹುಟ್ಟಿ
ಅಬ್ಬರಿಸುತಾವೆ ಹುಲಿಕರಡಿ | ಓಬಯ್ಯ
ಸದ್ದಿಲ್ಲವೇನೋ ಗುಡಿಯಾಗೆ||

ಹತ್ತಲಾರದ ಗುಡ್ಡ ಹತ್ಯಾನೆ ಓಬಯ್ಯ
ಹತ್ತಿ ನೋಡ್ಯಾನೆ ನಿಡಗಲ್ಲು| ಊರಮುಂದೆ
ಆಡೋ ಮಕ್ಕಳ ಸುಳವಿಲ್ಲ||

ಮೊದಲಾದ ತ್ರಿಪದಿಗಳನ್ನು ಕಾಡುಗೊಲ್ಲರ ಹೆಣ್ಣು ಮಕ್ಕಳು ಸನ್ನಿವೇಶಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡು ಹಾಡುತ್ತಾರೆ. ಆದರೆ ಈ ದೇವರ ಹುಟ್ಟು, ಬೆಳವಣಿಗೆ, ಅಸ್ತಿತ್ವ, ಐತಿಹಾಸಿಕ ಹಿನ್ನೆಲೆ ಈ ತ್ರಿಪದಿಗಳಲ್ಲಿ ಅಷ್ಟಾಗಿ ಹೆಚ್ಚಿನ ಮಾಹಿತಿ ಕಂಡುಬರುವುದಿಲ್ಲ. ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿ ನಿಡಗಲ್ಲು ಬಿಟ್ಟಮೇಲೆ ವಿರುಪಸಮುದ್ರ ಮಾರ್ಗವಾಗಿ, ಗೋಸಿಕೆರೆ, ವಡೇರಹಳ್ಳಿಯ ಮುಂಖಾತರ ಬೊಂಬೇರಹಳ್ಳಿಯ ಹತ್ತಿರ 'ವೇದಾವತಿ' ನದಿಗೆ ಬರುತ್ತದೆ. ಈ ನದಿಯಲ್ಲಿ ಮತ್ತೇ ಪ್ರತಿ ವರ್ಷದಂತೆ ಶಾಸ್ತ್ರೋಕ್ತವಾಗಿ ಗಂಗೆಪೂಜೆ ಮಾಡಿಕೊಂಡು ದೇವರಮರಿಕುಂಟೆ ಕೆರೆಯದಂಡೆಯ ಮೇಗಳ ದೇವರ ಗುಡಿಯ ಹತ್ತಿರ ಕಳ್ಳೆಪೌಳಿಯ ಹಂಚಿ ಗುಡಿಸಲಿನಲ್ಲಿ ದೇವರನ್ನು ಗದ್ದುಗೆ ಮಾಡಿ ಯಾಥಾ ಪ್ರಕಾರ ಅಕ್ಕಿ ಹುರುಳಿ ಬೇಯಿಸಿ ಗುಗ್ಗರಿ ಹಬ್ಬವನ್ನು ಆಚರಿಸುತ್ತಾರೆ.

ಈ ಪ್ರದೇಶದ ಮ್ಯಾಸಬೇಡರು ನಿಡಗಲ್ಲು ಬೆಟ್ಟದ ರಾಮತೀರ್ಥಕ್ಕೆ ಜಲ್ದಿಗೆ ಹೋಗಿ ಬರುವುದು ಈ ಜನಾಂಗದ ಪ್ರಾಚೀನ 'ನೆಲೆ'ಯನ್ನು ಸೂಚಿಸುತ್ತದೆ. ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದು ಪ್ರಸ್ತುತ ದೇವರಮರಿಕುಂಟೆಯಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದ ನಾಗ್ತಿಹಳ್ಳಿ ಕಟ್ಟೆಯಲ್ಲಿ ನೆಲಸಿ ನಂತರ ಕುಕ್ಕಲಪಲ್ಲಿ (ದೇವರಮರಿಕುಂಟೆ)ಗೆ ಬಂದಿರಬಹುದು, ಎಂಬುದಕ್ಕೆ ದೇವರಮರಿಕುಂಟೆಯಲ್ಲಿ ನೆಲಸಿರುವ ಮ್ಯಾಸಬೇಡರ ಭಾಷೆ, ಬೆಡಗು, ದೇವರು, ಸಂಪ್ರದಾಯ ಮತ್ತು ಈ ದೇವರುಗಳಿಗೆ ಸಂಬಂಧಪಟ್ಟ ಅಣ್ಣ ತಮ್ಮಗಳು ನಿಡಗಲ್ಲು ಪ್ರದೇಶದ ಸುತ್ತ ಮುತ್ತ ಬರುವ ಬೆಳ್ಳಿಬಟ್ಲು, ನಿಡಗಲ್ಲು, ಕೋಟೆಗುಡ್ಡ, ಲಿಂಗದಹಳ್ಳಿ, ವಿರುಪಸಮುದ್ರ ಮೊದಲಾದ ಹಳ್ಳಿಗಳಲ್ಲಿ ಇಂದಿಗೂ ನೆಲೆಸಿದ್ದಾರೆ. ಅವರೆಲ್ಲರ ಮಾತೃಭಾಷೆ ತೆಲುಗು ಆಗಿರುವುದರಿಂದ, ವಿವಾಹ ಸಂಬಂಧಗಳನ್ನು ನಿಡಗಲ್ಲು ಸುತ್ತಮುತ್ತ ಮಾಡುವುದರಿಂದ, ಈ ದೇವರಿಗೆ ಸಂಬಂಧಿಸಿದ ಜನಪದ ಗೀತೆಗಳು ತೆಲುಗು ಭಾಷೆಯಲ್ಲಿ ಹೆಚ್ಚು ಕಂಡು ಬರುವುದರಿಂದ, ದೇವರಮರಿಕುಂಟೆ ಮತ್ತು 'ಕುಕ್ಕಲಪಲ್ಲಿ' ಮಧ್ಯ ಗುಡಿಕಟ್ಟೆ ದೇವರು ಸ್ಥಾಪಿಸಿದ ಬಗ್ಗೆ ದೇವರಮರಿಕುಂಟೆಯ ಜಲರೇಖೆಯಲ್ಲಿ ಪ್ರಸ್ತಾಪವಾಗಿರುವುದರಿಂದ ಈ ಪ್ರದೇಶದ ಮ್ಯಾಸಬೇಡರು ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಹೇಳಬಹುದು. ಈ ಕುಕ್ಕಲಪಲ್ಲಿ ಎಂಬ ಶಬ್ದವೂ ಕೂಡ ತೆಲುಗು ಪದ, 'ಕುಕ್ಕಲ' ಎಂದರೆ 'ನಾಯಿ'ಗಳು, 'ಪಲ್ಲಿ' ಎಂದರೆ 'ಹಳ್ಳಿ' ಎಂದು ಕನ್ನಡದಲ್ಲಿ ಅರ್ಥಬರುತ್ತದೆ. ಈ ಪ್ರದೇಶದ ಕಾಡುಗೊಲ್ಲರ ಮನೆದೇವರುಗಳು ಕೂಡ ಆಂಧ್ರಪ್ರದೇಶದ ಅಹೋಬಲ, ಕದರಿ, ಕಂಚಿ ಮತ್ತು ಪೆನ್ನೋಬಳದ 'ನರಸಿಂಹಸ್ವಾಮಿ' ಎಂದು ಹೇಳಿಕೊಳ್ಳುತ್ತಾರೆ.

೫.೨. ದೇವಪುರದ ಹಾಲುರಾಮೇಶ್ವರ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಪವಿತ್ರ ಪುಣ್ಯಕ್ಷೇತ್ರಗಳಲ್ಲಿ ದೇವಪುರದ ಹಾಲುರಾಮೇಶ್ವರವು ಒಂದು. ಇದು ಹೊಸದುರ್ಗದಿಂದ ಎಂಟು ಕಿ.ಮೀ. ದೂರದಲ್ಲಿ ತಾಳ್ಯರಸ್ತೆಯಲ್ಲಿದೆ. ಮಾಡದಕೆರೆಯ ಹೋಬಳಿಯ ದೇವಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಈ ಕ್ಷೇತ್ರ ಒಳಪಡುತ್ತದೆ. ಇದು ಹಾಲಿನಂತೆ ಬೆಳ್ಳಗಿರುವ ನೀರಿನ ಪವಿತ್ರ ಹೊಂಡದಿಂದ ಪ್ರಸಿದ್ಧವಾಗಿದೆ. ಅದುದರಿಂದ ಇದನ್ನು ಹಾಲುರಾಮೇಶ್ವರ ಎಂದು ಕರೆಯಲಾಗಿದೆ. ಈ ಕ್ಷೇತ್ರವನ್ನು ವಜ್ರ ಮತ್ತು ಗಂಗಾಸ್ಥಾನ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಗಂಗಾಮಾತೆ ಇಲ್ಲಿನ ಪ್ರಧಾನ ದೇವತೆ. ಶ್ರೀರಾಮೇಶ್ವರ, ಪಂಚಲಿಂಗಗಳು, ಸೀತಾಲಕ್ಷ್ಮಣ, ಹನುಮಂತ, ಮತ್ತು ಶ್ರೀ ರಾಮರು ಇಲ್ಲಿನ ಪರಿವಾರ ದೇವತೆಗಳು. ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ತಾಲ್ಲೂಕಿನ ಕೆಲವು ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳನ್ನು ಈ ಪ್ರದೇಶಕ್ಕೆ ಜಲ್ದಿಗೆ ಅಥವಾ ಗಂಗಾಪೂಜೆಗೆ ತೆಗೆದುಕೊಂಡು ಹೋಗಿಬರುತ್ತಾರೆ. ಮಳೆ, ಬೆಳೆ, ಸಮೃದ್ಧಿಯಾದಾಗ, ಪೂಜಾರಿ ಅಥವಾ ದಾಸಯ್ಯಗಳಿಗೆ ಪಟ್ಟುಕಟ್ಟುವಾಗ, ಭಕ್ತರು ಹರಕೆ ಮಾಡಿಕೊಂಡು ದೇವರನ್ನು ಹೊರಡಿಸಿದಾಗ ತಮ್ಮ ದೇವರು ಮತ್ತು ಪರಿವಾರಗಳೊಂದಿಗೆ ಈ ಪುಣ್ಯಕ್ಷೇತ್ರಕ್ಕೆ ಹೋಗಿ ಬರುತ್ತಾರೆ. ಶ್ರೀಹಾಲುರಾಮೇಶ್ವರಸ್ವಾಮಿ ಮತ್ತು ಶ್ರೀ ಗಂಗಾಮಾತೆ ಈ ಕ್ಷೇತ್ರದ ಪ್ರಮುಖ ದೇವರುಗಳು. ಶ್ರೀ ಗಂಗಾಮಾತೆಯನ್ನು ಭಕ್ತಿಯಿಂದ ಪ್ರಾರ್ಥಿಸಿದರೆ ಇಷ್ಟಾರ್ಥಫಲಗಳು ಈ ಹೊಂಡದಲ್ಲಿ ತೇಲಿ ಬರುತ್ತವೆ ಎಂಬ ನಂಬಿಕೆ ಈ ಪ್ರದೇಶದಲ್ಲಿ ಪ್ರಸಿದ್ಧಿ ಪಡೆದಿದೆ. ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಬಹಳ ಪ್ರಸಿದ್ಧಿ ಹೊಂದಿದ ಈ ಸ್ಥಳಕ್ಕೆ "ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ತನ್ನ ಪರಿವಾರದೊಂದಿಗೆ ಈ ಪ್ರದೇಶಕ್ಕೆ ಬಂದು ಒಂದು ಸಂಕಲ್ಪ ಮಾಡಿದಾಗ ಶಿವಲಿಂಗ ಉದ್ಭವವಾಯಿತು ಆಗ ಶ್ರೀರಾಮ-ಲಕ್ಷ್ಮಣಾಧಿಯರು ಈ "ಉದ್ಭವ ಶಿವಲಿಂಗ"ಕ್ಕೆ ಪೂಜೆ ಮಾಡಿ, ಮುಂದೆ ಪ್ರಯಾಣ ಬೆಳಸಿದರಂತೆ ನಂತರ ಶಿವಲಿಂಗಕ್ಕೆ ನಿತ್ಯ ಪೂಜಾ ಕಾರ್ಯಗಳು ಇಲ್ಲದಿದ್ದಾಗ, ಈ ಕಾಡಿನಲ್ಲಿ ಒಂದು 'ಹಸು' ಪ್ರತಿನಿತ್ಯ ಬಂದು 'ಶಿವಲಿಂಗಕ್ಕೆ' ಹಾಲುಕರೆದು ಹಾಲಾಭೀಷೇಕ ಮಾಡಿ ಹೋಗುತ್ತಿತಂತೆ, ಅದಕ್ಕಾಗಿ ಈ ಪ್ರದೇಶಕ್ಕೂ ಮತ್ತು ಈ 'ಉದ್ಭವ ಶಿವಲಿಂಗ'ಕ್ಕೂ ಹಾಲುರಾಮೇಶ್ವರ ಎಂದು ಹೆಸರು ಬಂದಿತು." ಈ ದೇಸ್ಥಾನದ ಹಿಂಭಾಗ (ಪಶ್ಚಿಮ)ದಲ್ಲಿ 'ಗಂಗಾಕೊಳ'ವಿದ್ದು ಅದು ಕಾಶಿಯಿಂದ ಗಂಗಾ ಉದ್ಭವವಾಗಿದೆ ಎಂದು ಪ್ರತೀತ ಇದೆ. ಕಾಶಿಯಲ್ಲಿ ಒಬ್ಬ ಹೆಣ್ಣುಮಗಳು ಬಾಗಿನ ರೂಪದಲ್ಲಿ ಗಂಗಾದೇವಿಗೆ ಬಂಗಾರದ ಕಡಗವನ್ನು ಕೊಟ್ಟಿದ್ದಳಂತೆ. ಆ ಬಂಗಾರದ ಕಡಗ ಈ ಪ್ರದೇಶದ ಹುತ್ತದ ಕೊವೆಯಲ್ಲಿ ಕೈಯಿಟ್ಟಾಗ ಸಿಕ್ಕಿತಂತೆ, ಆಗ ಗಂಗಾದೇವಿ ಪ್ರತ್ಯಕ್ಷವಾಗಿ ನಿನ್ನ ಇಷ್ಟಾರ್ಥವೇನಮ್ಮ ಎಂದು ಕೇಳಿದಾಗ, ಈ ಪ್ರದೇಶ ಎರಡನೇ ಕಾಶಿಯಾಗಿ ಪ್ರಸಿದ್ಧಿ ಹೊಂದಿ ಭಕ್ತರ ಇಷ್ಟಾರ್ಥ ಸಿದ್ಧಿ ಫಲ ಪ್ರಸಾದಗಳನ್ನು ಅನುಗ್ರಹಿಸ ಬೇಕು ತಾಯಿ ಎಂದು ಬೇಡಿಕೊಂಡಳಂತೆ, ಆಗ ಗಂಗಾದೇವಿ 'ತಥಾಸ್ತು' ಎಂದು ವರ ಕೊಟ್ಟಿದ್ದರಿಂದ ಈ ಹೊತ್ತಿಗೂ 'ಗಂಗಾಕೊಳ'ದಲ್ಲಿ ಭಕ್ತರ ಇಷ್ಟಾರ್ಥ ಫಲಗಳು ತೇಲಿ ಬರುತ್ತವೆ. ಆವರವರ ಫಲಗಳಿಗೆ ತಕ್ಕಂತೆ ಬಾಳೆಹಣ್ಣು, ಎಲೆ, ಅಡಿಕೆ, ತಂಬಿಟ್ಟು, ನೆನೆಯಕ್ಕಿ, ನೆನೆಗಡಲೆ, ಉತ್ತತ್ತಿಹಣ್ಣು, ಬಿಲ್ಪುಪತ್ರೆ , ಹೂವು, ನಿಂಬೆಹಣ್ಣು, ಮಾವಿನಹಣ್ಣು, ಮೊಸರನ್ನ, ಬೆಣ್ಣೆ, ಬೆಳ್ಳಿ ಮತ್ತು ಚಿನ್ನದ ತೊಟ್ಟಿಲುಗಳು, ಬವನಾಸಿ, ಶಂಖ, ಶಿವಲಿಂಗಗಳು, ತುಂಬಿದ ಕೊಡ, ತುಂಬುಬಾಗಿನ, ತೆಂಗಿನಕಾಯಿ ಮೊದಲಾದ

ಫಲಗಳು 'ಗಂಗಾಕೊಳ'ದಲ್ಲಿ ತೇಲಿಬರುತ್ತವೆ ಎಂದು ಕೇದಾರ ಪೀಠಕ್ಕೆ ಸೇರಿದ ಈ ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀ ಪಿ.ಎಂ.ಹಾಲುರಾಮಪ್ಪ ನವರನ್ನು ಸಂದರ್ಶನ ಮಾಡಿದಾಗ ಹೆಚ್ಚಿನ ಮಾಹಿತಿ ತಿಳಿದು ಬಂದಿತು. ಭಕ್ತಾದಿಗಳು ಈ "ಗಂಗಾಕೊಳ"ದಲ್ಲಿ ಶ್ರದ್ಧಾಭಕ್ತಿಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ. ಇಲ್ಲಿ ಅನೇಕ ಪವಾಡಗಳು ನಡೆಯುತ್ತವೆ. ಎಂದು ಜನರ ನಂಬಿಕೆಯಾಗಿದೆ. "೧೯೪೩ರಲ್ಲಿ ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರು ಇಲ್ಲಿಗೆ ಬಂದಾಗ ಕುಂಡಲದಲ್ಲಿ ಒಂದು 'ತೊಟ್ಟಿಲು' ತೇಲಿ ಬಂದಿತಂತೆ".[೨] ಅದೇ ರೀತಿ ೧೯೬೭ರಲ್ಲಿ ಕರ್ನಾಟಕದ ರಾಜ್ಯಪಾಲರಾಗಿದ್ದ ವಿ.ವಿ.ಗಿರಿ ದಂಪತಿಗಳಿಗೆ ಈ 'ಗಂಗಾಕುಂಡ'ದಲ್ಲಿ "ವೀಳ್ಯೆದೆಲೆಯಲ್ಲಿ ನೆನೆಯಕ್ಕಿ ತುಂಬಿಟ್ಟು" ತೇಲಿ ಬಂದಿತ್ತಂತೆ. ಅನೇಕ ಭಕ್ತಾದಿಗಳಿಗೆ ಇದು ಪವಿತ್ರ ಪುಣ್ಯ ಕ್ಷೇತ್ರವಾಗಿದ್ದರೂ, ವಿಶೇಷವಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳನ್ನು ಈ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಹಾಲುರಾಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಕರಿಕಂಬಳಿ ಗದ್ದುಗೆ ಹಾಸಿ ದೇವರನ್ನು ಇಡುತ್ತಾರೆ. ನಂತರ ದೇವಸ್ಥಾನದ ಹಿಂಭಾಗ ಪಶ್ಚಿಮ ವಾಯುವ್ಯ ದಿಕ್ಕಿನಲ್ಲಿರುವ 'ಗಂಗಾಮಾತೆ'ಯ ಕುಂಡದ ಪವಿತ್ರ ನೀರಿನಿಂದ ದೇವರ ಪರಿಕರಗಳನ್ನು ಶುದ್ಧಿಕರಿಸಿ, ದೇವರಿಗೆ ಜಲಾಭೀಷೇಕ, ಪೂಜೆ, ಪಟ್ಟಕಟ್ಟುವುದು, ಮುದ್ರೆ ಒತ್ತುವುದು, ಪುಣ್ಯಾಹವಾಚನ, ಪ್ರಾಣಪ್ರತಿಷ್ಠೆ, ಮಹಾಮಂಗಳಾರತಿ ಮೊದಲಾದ ಧಾರ್ಮಿಕ ಕಾರ್ಯಗಳನ್ನು ಈ ದೇವಸ್ಥಾನದಲ್ಲಿ ಅರ್ಚಕರಿಂದ ಅಥವಾ ಪುರೋಹಿತರಿಂದ ಇಲ್ಲವೇ ತಮ್ಮ ದೇವರುಗಳಿಗೆ ಸಂಬಂಧಿಸಿದ ಜಂಗಮ ಗುರುಗಳಿಂದ ಮಾಡಿಸಿಕೊಂಡು, ಒಂದು ರಾತ್ರಿ ಇಲ್ಲಿ ತಂಗಿದ್ದು, ಅಡಿಗೆ ಮಾಡಿ ದಾಸೋಹ ನಡೆಸಿ ಈ ಎರಡು ಬುಡಕಟ್ಟು ಜನಾಂಗ ವಾಪಸ್ಸು ತಮ್ಮ ಹಟ್ಟಿಗಳಿಗೆ ಹೋಗಿ ಹಬ್ಬ-ಜಾತ್ರೆ ಮೊದಲಾದ ಶುಭಕಾರ್ಯಗಳನ್ನು ಪ್ರಾರಂಭಿಸುತ್ತಾರೆ.

೫.೩. ವೇದಾವತಿ ನದಿ

ಕರ್ನಾಟಕದಲ್ಲಿ ಹುಟ್ಟಿ, ಆಂಧ್ರಪ್ರದೇಶಕ್ಕೆ ಹರಿದು ಹೋಗುವ ವೇದಾವತಿ ನದಿಯು ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯದ ದೇವರುಗಳಿಗೆ ಪವಿತ್ರ ಗಂಗಾಸ್ಥಾನವಾಗಿದೆ. ಬೇಟೆ, ಪಶುಪಾಲನೆ, ವ್ಯವಸಾಯ ಮತ್ತು ದೇವರನ್ನೇ ನಂಬಿಕೊಂಡಿದ್ದ ಈ ಎರಡೂ ಬುಡಕಟ್ಟು ಜನಾಂಗದ ಸಣ್ಣ ಪುಟ್ಟ ರೈತರಿಗೆ ವೇದಾವತಿ ನದಿ, ಜೀವ ನದಿಯಾಗಿ ಹಲವು ದೃಷ್ಟಿಯಿಂದ ಉಪಯುಕ್ತತೆಯನ್ನು ಹೊಂದಿದೆ. ಈ ನದಿಯು "ಹಗರಿ ಎಂದು ಕೆಳಕಣಿವೆಯಲ್ಲಿ ಪರಿಚಿತವಾಗಿರುವ ವೇದಾವತಿ ನದಿಯು ಪಶ್ಚಿಮ ಘಟ್ಟಗಳ ಮುಳ್ಳಯ್ಯನ ಗಿರಿಯ ತಳಭಾಗದಲ್ಲಿ ಜನಿಸುತ್ತದೆ. ಇದು ಕರ್ನಾಟಕದ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿಯೂ ಮತ್ತು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿಯೂ ಹರಿದು, ಒಟ್ಟು ೨೩,೪೯೮ ಚ.ಕಿ.ಮೀ. ವಿಸ್ತೀರ್ಣದಷ್ಟು ಜಲಾಯನ ಪ್ರದೇಶವನ್ನೊಳಗೊಂಡಿದೆ. ಇದರ ಒಟ್ಟು ಉದ್ದ ೩೯೧ ಕಿ.ಮೀ. ಅದರಲ್ಲಿ ೨೯೩ ಕಿ.ಮೀ. ಉದ್ದ ಕರ್ನಾಟಕ ರಾಜ್ಯದಲ್ಲಿದ್ದು ೨೬ ಕಿ.ಮೀ. ಉದ್ದಕ್ಕೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಗಡಿ ರೇಖೆಯಾಗಿಯು ಅದು ಹರಿಯುತ್ತದೆ. ಇದು ೭೦ ಸೆಂ.ಮೀ. ನಿಂದ ೫೦ ಸೆಂ.ಮೀ. ನಷ್ಟು ಕಡಿಮೆ ಮಳೆ ಬೀಳುವ ವಲಯದಲ್ಲಿ ಇದೆ.[೩] ಈ ವೇದಾವತಿ ನದಿಯು ಹಲವು ಉಪಕಣಿವೆಗಳಾದ ವೇದಾವತಿ, ದೊಡ್ಡವೇಗು, ಕೋಡೀಹಳ್ಳ, ಗುಂಡೀಹಳ್ಳ, ಸುವರ್ಣಮುಖಿ, ಕೆರೆತೊರೆ, ಚಿಕ್ಕತೊರೆ, ಗರ್ನಿಹಳ್ಳ, ದೊಡ್ಡಹಳ್ಳ, ಜಿನಿಗೆಹಳ್ಳ, ಪೆದ್ದವಂಕ,

ಚಿನ್ನಹಗರಿ ಮತ್ತು ಹಗರಿ ಎಂಬ ವೇದಾವತಿ ನದಿಯ ಉಪಕಣಿವೆಗಳಿಗೆ ಈ ಎರಡೂ ಬುಡಕಟ್ಟು ಜನಾಂಗದ ದೇವರುಗಳನ್ನು ಜಲ್ದಿ ಅಥವಾ ಗಂಗಾ ಪೂಜೆಗೆ ತೆಗೆದು ಕೊಂಡು ಹೋಗಿ ಬರುತ್ತಾರೆ. ಈ ವೇದಾವತಿ ನದಿಯ ಎಡ-ಬಲ ದಂಡೆಯ ಉದ್ದಕ್ಕೂ ಅನೇಕ ಹಟ್ಟಿಗಳಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳನ್ನು ಸಕಲ ವಾದ್ಯ ಬಿರುದಾವಳಿಗಳೊಂದಿಗೆ ವಿಶೇಷ ಹಬ್ಬ ಮತ್ತು ಜಾತ್ರೆಗಳಲ್ಲಿ ವರ್ಷಕ್ಕೊಂದು ಬಾರಿಯಾದರು "ಗಂಗಾಸ್ಥಾನ"ಗಳಿಗೆ ದೇವರನ್ನು ತೆಗೆದುಕೊಂಡು ಹೋಗಿ ಬರುವ ಸಂಪ್ರದಾಯವಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗ ವಾಸಿಸುವ ಕೆಲವೊಂದು ಹಟ್ಟಿಗಳಲ್ಲಿ ದೇವರ ವಿಗ್ರಹ, ಲಿಂಗ, ಸಾಲಿಗ್ರಾಮ, ಉತ್ಸವಮೂರ್ತಿ, ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಬಟ್ಟೆಯಲ್ಲಿ ಕಟ್ಟಿ, ಮಣ್ಣಿನ ಮಡಿಕೆಯಲ್ಲಿಟ್ಟು ದೇವಸ್ಥಾನದ ಸುತ್ತಮುತ್ತ ನೆಲದಲ್ಲಿ ಗುಂಡಿ ತೋಡಿ ಪೂಜಾರಿಗಳು ಮುಚ್ಚಿರುತ್ತಾರೆ. ಹಬ್ಬ, ಜಾತ್ರೆ, ಉತ್ಸವ, ಹೊಳೆಪೂಜೆ ಮೊದಲಾದ ಸಂದರ್ಭಗಳಲ್ಲಿ ದೇವರನ್ನು ಹೊರಡಿಸುವ ಪೂರ್ವದಲ್ಲಿ ಪೂಜಾರಿಯಾದವನು ಒಪ್ಪೊತ್ತಿನಿಂದ, ಹುಟ್ಟುರೂಪಿಲಿ, ಬೆತ್ತಲೆಯಾಗಿ, ಕಣ್ಣುಕಟ್ಟಿಕೊಂಡು ಬಾಯಿಗೆ ಬಟ್ಟೆಕಟ್ಟಿಕೊಂಡು ಮೊದಲಾದ ವಿಧಿ ವಿಧಾನಗಳನ್ನು ಅನುಸರಿಸಿ ದೇವಸ್ಥಾನದಲ್ಲಿ ಕುಳಿತು ಧ್ಯಾನ ಮಾಡಿದಾಗ ದೇವರು ಕೈಯಲ್ಲಿ ಬರುತ್ತದೆ ಎಂದು ಕೆಲವು ದೇವರ ಪೂಜಾರಿಗಳು ಹೇಳುತ್ತಾರೆ.

ದೇವರುಗಳನ್ನು ಗಂಗಾಸ್ಥಾನಕ್ಕೆ ತೆಗೆದುಕೊಂಡು ಹೋಗಿ, ದೇವರು ತೋರಿಸಿದ ಸ್ಥಳದಲ್ಲಿ ಚಿಲುಮೆ ತೋಡಿ, ದೇವರನ್ನು ಗದ್ದಿಗೆ ಮಾಡಿ ಆ ಚಿಲುಮೆಯ ದಡದ ಸುತ್ತ ೧೦೧ ಅಥವಾ ೧೦೮ ಎಡೆ ಹಾಕಿ, ದೇವರ ಎಲ್ಲಾ ಪರಿಕರಗಳನ್ನು ಜಲಾಭಿಷೇಕ ಮಾಡಿ, ದೇವರ ಬೆತ್ತದ ಬುಟ್ಟಿ ಅಥವಾ ಪೆಟ್ಟಿಗೆಗಳನ್ನು ಕರಿಕಂಬಳಿ ತೆರೆಯ ಮರೆಯಲ್ಲಿ ಕುಳಿತು ಪೂಜಾರಿಗಳು ಪೂಜೆಸಲ್ಲಿಸುತ್ತಾರೆ. ಸಾಮಾನ್ಯವಾಗಿ ಈ ಬುಡಕಟ್ಟು ಗಂಡು ದೇವರುಗಳಿಗೆ ಗಂಗಾಪೂಜೆಯಲ್ಲಿ ಪ್ರಾಣಿ ಬಲಿ ಕೊಡುವುದಿಲ್ಲ. ಸಾತ್ವಿಕ ಆಹಾರ ಪದ್ಧತಿಗಳಾದ ಹಾಲು, ಮೊಸರು, ಬೆಲ್ಲ, ಬಾಳೆಹಣ್ಣು, ನೆನೆಯಕ್ಕಿ, ನೆನೆಗಡಲೆ, ತಂಬಿಟ್ಟು, ತೆಂಗಿನಕಾಯಿಗಳನ್ನು ಹೊಳೆಪೂಜೆಗೆ ಬಳಸುತ್ತಾರೆ. ವಿಶೇಷವಾಗಿ ಈ ಬುಡಕಟ್ಟು ಜನಾಂಗ 'ಹೊಂಬಾಳೆ' ಮುತ್ತುಗದ ಎಲೆ ಮತ್ತು ಬೇಟೆಸೊಪ್ಪುಗಳನ್ನು ಬಳಸುತ್ತಾರೆ. ಅಲಂಕಾರಕ್ಕಾಗಿ ಹೂವು ಇತ್ಯಾದಿ ವಸ್ತುಗಳನ್ನು ಬಳಸುವುದು ಕಂಡುಬರುತ್ತದೆ.

ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಮ್ಯಾಸಬೇಡರು ಅಹೋಬಲ ನರಸಿಂಹಸ್ವಾಮಿಯನ್ನು ದೇವರಮರಿ ಕುಂಟೆಯಿಂದ ದಕ್ಷಿಣಕ್ಕೆ ಸುಮಾರು ಮೂರು ಕಿ.ಮೀ. ದೂರದ ನಲ್ಲೂರಹಳ್ಳಿ-ಗೊಲ್ಲರಟ್ಟಿಯ ಹತ್ತಿರ ವೇದಾವತಿ ನದಿಗೆ ಹೊಳೆಪೂಜೆಗೆ ದೇವರನ್ನು ತೆಗೆದುಕೊಂಡು ಹೋಗುತ್ತಾರೆ. ದೇವರು ನದಿಗೆ ಹೋದ ತಕ್ಷಣ ದೇವರು ತೋರಿಸಿದ ಸ್ಥಳದಲ್ಲಿ ಮರಳು ಚಿಲುಮೆ ತೋಡಿ, ಆ ಚಿಲುಮೆಯ ಒರತೆ ನೀರಿನಿಂದ ದೇವರ ಎಲ್ಲಾ ಪರಿಕರಗಳನ್ನು ಶುದ್ಧಿಕರಿಸಿ, ದೇವರನ್ನು ಕರಿಕಂಬಳಿ ಗದ್ದುಗೆ ಮಾಡಿ, ಮರಳು ಚಿಲುಮೆಯ ದಡದ ಸುತ್ತ ೧೦೧ ಹಣ್ಣು ಮತ್ತು ತುಂಬಿಟ್ಟನ್ನು ಎಡೆಹಾಕಿ, ತಾಮ್ರದ ಬಿಂದಿಗೆಯಲ್ಲಿ ಚಿಲುಮೆಯ ಒರತೆ ನೀರು ತುಂಬಿಟ್ಟು, ಬಿಂದಿಗೆಯ ಕಂಠಕ್ಕೆ ಬಾಳೆಎಲೆಯಿಂದ ಬಿಗಿಯಾಗಿ ಕಟ್ಟಿ, ನೀರು ಚಲ್ಲಿದಂತೆ ಮಾಡಿರುತ್ತಾರೆ. ಚಿಲುಮೆಯ ನಾಲ್ಕು ದಿಕ್ಕುಗಳಿಗೆ ಬಿಲ್ಲಿನ ಅಂಬು ಅಥವಾ ಬಾಣಗಳನ್ನು ಮರಳಿನಲ್ಲಿ ಸಿಕ್ಕಿಸಿರುತ್ತಾರೆ. ನಾಲ್ಕು ಮೂಲೆಗೆ ನಾಲ್ಕು

ತೆಂಗಿನಕಾಯಿ ಇಟ್ಟು, ಕರಿಕಂಬಳಿ ಗದ್ದಿಗೆ ಮಾಡಿದ ದೇವರ ಎದುರು ಭಾಗಕ್ಕೆ ಹೊಂದಿಕೊಂಡಂತೆ ಐದು ಚಿಕ್ಕ ಕಲ್ಲುಗಳನ್ನು ಬೆನವಗಳನ್ನಾಗಿಟ್ಟು, ಗಂಗಮ್ಮನ ಸಾಮಾನುಗಳನ್ನು ಬಳಸಿಕೊಂಡು ಚಿಲುಮೆಯ ದಡದಲ್ಲಿ ಪೂಜಾರಿ ಮತ್ತು ಯಜಮಾನರು ಗಂಗೆಪೂಜೆ ಮಾಡುತ್ತಾರೆ. ದಾಸಯ್ಯಗಳು ಶಂಖ ಊದುವುದು, ಜಾಗಟೆ ಬಡಿಯುವುದು, ತಿರುಮಂತ್ರ ಹೇಳುವುದು, ಮಣೇವು ತಿರುಗುವುದು, ಸೂರ್ಯ ನಮಸ್ಕಾರ ಮತ್ತು ಭಕ್ತಾದಿಗಳು ದೇವರಿಗೆ ಹರಕೆ ಒಪ್ಪಿಸುವುದು ಮೊದಲಾದ ಧಾರ್ಮಿಕ ಕಾರ್ಯಗಳು ನಡೆಯುತ್ತವೆ. ಕರಿಕಂಬಳಿ ತೆರೆಯ ಮರೆಯಲ್ಲಿ ದೇವರ ಬೆತ್ತದ ಬುಟ್ಟಿಯನ್ನು ಬಿಚ್ಚಿ ಚಿಕ್ಕಾದಾದ ಒಂದು ಕಿಂಡಿಯಲ್ಲಿ ಚಿಲುಮೆ ನೀರು, ಕುಂಕುಮ, ಹೂವು, ಹಾಕಿ ಪೂಜೆಸಲ್ಲಿಸುತ್ತಾರೆ. ಆದರೆ ಈ ಬೆತ್ತದ ಬುಟ್ಟಿಯ ಒಳಗೆ ಒಟ್ಟು ಏಳು ಬುಟ್ಟಿಗಳಿವೆ ಎಂದು ಪೂಜಾರಿ ಎಂ.ಪಿ.ಓಬಣ್ಣನವರು ಹೇಳುತ್ತಾರೆ. ಪ್ರಸ್ತುತ ಪೂಜಾರಿಗಳಾರು ಈ ದೇವರ ಬುಟ್ಟಿಗಳನ್ನು ಬಿಚ್ಚಿ ನೋಡುವುದಿಲ್ಲ. ಆಕಸ್ಮಿಕವಾಗಿ ದೇವರ ಬೆತ್ತದ ಬುಟ್ಟಿಗಳನ್ನು ಬಿಚ್ಚಿದರೆ ನಾವು ಸಾಯುತ್ತವೆ, ಬೆಂಕಿಯ ಹೊಗೆ ಬರುತ್ತದೆ. ಹಾವು, ಚೇಳು ಕಾಣಿಸಿಕೊಳ್ಳುತ್ತವೆ. ಹಿಂದಕ್ಕೆ ಬೀಳುತ್ತೇವೆ, ಕಣ್ಣುಕಾಣಿಸುವುದಿಲ್ಲ ಮೊದಲಾದ ಕಾರಣಗಳನ್ನು ಇಲ್ಲಿಯ ಪೂಜಾರಿಗಳು ಕೊಡುತ್ತಾರೆ. ಸತ್ಯ ಅಸತ್ಯವೇನೇ ಇದ್ದರೂ ಕೆಲವೊಂದು ಪೂಜಾರಿಗಳು ದೇವರ ಬುಟ್ಟಿಯನ್ನು ಬಿಚ್ಚಿನೋಡುವುದಿಲ್ಲ, ಎಷ್ಟೋ ಪೂಜಾರಿಗಳಿಗೆ ದೇವರ ಬುಟ್ಟಿಯೊಳಗೇನಿದೆ ಎಂದು ಗೊತ್ತೇ ಇರುವುದಿಲ್ಲ. ಆಕಸ್ಮಿಕವಾಗಿ ಒಂದೋ, ಎರಡೋ, ಬುಟ್ಟಿಯನ್ನು ಪೂಜಾರಿಗಳು ಬಿಚ್ಚಿದರೂ ಕೊನೆಯ ಬುಟ್ಟಿಗೆ ಮಾತ್ರ ಕೈ ಹಾಕುವುದಿಲ್ಲ ಏಕೆಂದರೆ ಕೊನೆಯ ಏಳನೇ ಬುಟ್ಟಿಯಲ್ಲಿ "ವಿಷ್ಣುಸಾಲಿಗ್ರಾಮ" ಇರುವುದರಿಂದ ಪೂಜಾರಿಗಳು ಹೆದರುತ್ತಾರೆ ಮತ್ತು ಭಯ ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ಬಹುಹಿಂದೆ ಈ ದೇವರ ಬುಟ್ಟಿಯಲ್ಲಿ ಎರಡು ಸಾಲಿಗ್ರಾಮಗಳಿದ್ದವಂತೆ, ಆದರೆ ಪ್ರಸ್ತುತ ದೇವರ ಬುಟ್ಟಿಯಲ್ಲಿ ಒಂದು ಸಾಲಿಗ್ರಾಮ ಮಾತ್ರ ಇದೆ. ಏಕೆಂದರೆ ಒಂದು ಸಾಲಿಗ್ರಾಮ ಅನಿವಾರ್ಯ ಕಾರಣದಿಂದಾಗಿ ಚಳ್ಳಕೆರೆ ತಾಲ್ಲೂಕು ದೊಡ್ಡೇರಿ ಗ್ರಾಮದ ಬ್ರಾಹ್ಮಣರ ಮನೆಯಲ್ಲಿದೆ ಎಂದು ಇಲ್ಲಿನ ಪೂಜಾರಿಗಳು ಹೇಳುತ್ತಾರೆ.

ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಯ ದೇವರ ಬುಟ್ಟಿಯಲ್ಲಿ ಒಂದರೊಳಗೊಂದರಂತೆ ಒಟ್ಟು ಏಳು ಬೆತ್ತದ ಬುಟ್ಟಿಗಳಿವೆ. ಒಂದೊಂದು ಬುಟ್ಟಿಗಳಲ್ಲಿ ಒಂದೊಂದು ಸಾಮಾನುಗಳನ್ನಿಟ್ಟಿದ್ದಾರೆ. ಒಟ್ಟು ಏಳು ಬುಟ್ಟಿಗಳಲ್ಲಿ ಸಾಲಿಗ್ರಾಮ, ಬಲಮುರಿಶಂಖ, ಲಿಂಗ, ಅಂಬು, ಕೇಲು, ಶ್ರೀಕೃಷ್ಣ ಮತ್ತು ಲಕ್ಷ್ಮೀ ನರಸಿಂಹಸ್ವಾಮಿಯ ಪಂಚಲೋಹದ ವಿಗ್ರಹಗಳು, ಬೆಳ್ಳಿ ಮತ್ತು ಬಂಗಾರದ ಛತ್ರಿಗಳು, ನಾಗರಡೆಗಳು, ಚಿಕ್ಕ ಪುಟ್ಟ ಲೋಹದ ವಿಗ್ರಹಗಳಿರುತ್ತವೆ. ಈ ಎಲ್ಲಾ ದೇವರ ಪರಿಕರಗಳನ್ನು ಒಂದು ಬೆತ್ತದ ಬುಟ್ಟಿಯಲ್ಲಿಟ್ಟು ಕೆಂಪು ರೇಷ್ಮೆ ವಸ್ತ್ರವನ್ನು ಮುಚ್ಚಿ, ಅದರ ತಲೆಯ ಮೇಲೆ ಒಂದು ಬೆಳ್ಳಿಯ ಪಂಚಕಳಸವಿಟ್ಟು ಹತ್ತಿದಾರದಿಂದ ಕೆಳಗಿನ ಮಂದಾಸನಕ್ಕೆ ಬಿಗಿಯಾಗಿ ಕಟ್ಟಿರುತ್ತಾರೆ. ಬೆತ್ತದ ಬುಟ್ಟಿಯ ಮಧ್ಯಕ್ಕೆ ಬೆಳ್ಳಿಯ ಪಟ್ಟಿಯನ್ನು ಕಟ್ಟಿ ಅದರೊಳಗೆ ಛತ್ರಿ, ನಾಗರಡೆ, ಹೊಂಬಾಳೆ ಮೊದಲಾದ ಒಡವೆಗಳನ್ನು ಸಿಕ್ಕಿಸಿ ಅಲಂಕಾರಕ್ಕಾಗಿ ಹೊಂಬಾಳೆ ಮತ್ತು ಹೂವುಗಳನ್ನು ಹಾಕಿರುತ್ತಾರೆ. ಸಾಮಾನ್ಯವಾಗಿ ಈ ದೇವರ ಬೆತ್ತದ ಬುಟ್ಟಿ ಐದ ರಿಂದ ಎಂಟು, ಕೆ.ಜಿ. ತೂಕವಿದ್ದು, ಪೂಜಾರಿ, ತಲೆಯ ಮೇಲಿಟ್ಟು ಕೊಂಡು ಕೈಯಲ್ಲಿ ಬೆಳ್ಳಿ ಬೆತ್ತವನ್ನು ಹಿಡಿದಿರುತ್ತಾನೆ.

ಬಹಳ ಪ್ರಾಚೀನ ಕಾಲದಲ್ಲಿ ಚಿಲುಮೆ ತೆಗೆಯದೆ ದೇವರಬುಟ್ಟಿಯನ್ನು ತೊರೆಯ ನೀರಿನಲ್ಲಿ ಸಂಪೂರ್ಣವಾಗಿ ಎದ್ದಿ ತೆಗೆದು ಪೂಜೆ ಸಲ್ಲಿಸಿಕೊಂಡು ಬರುವ ಪದ್ಧತಿ ಇತ್ತಂತೆ. ಒಮ್ಮೆ ವೇದಾವತಿ ನದಿ ತುಂಬಿ ಹರಿಯುವಾಗ ದೇವರಬುಟ್ಟಿಯನ್ನು ನೀರಿನಲ್ಲಿ ಅದ್ದಿ ತೆಗೆಯುವಾಗ ಆಕಸ್ಮಿಕವಾಗಿ ಪೂಜಾರಿಯ ಕೈತಪ್ಪಿ ನೀರಿನಲ್ಲಿ ಮುಳುಗಿ ಹೋಯಿತಂತೆ, ವೇದಾವತಿ ನದಿ ತುಂಬಿ ಹರಿಯುತ್ತಿರುವದರಿಂದ ದೇವರ ಬುಟ್ಟಿಯನ್ನು ಎಲ್ಲಿ ಹುಡುಕಿದರು ಸಿಗಲಿಲ್ಲವಂತೆ. ಕೊನೆಗೆ ಒಬ್ಬ ದಾಸಯ್ಯ ಮುಳುಗಿ ಹೋದ ದೇವರಬುಟ್ಟಿ ತನ್ನಷ್ಟಕ್ಕೆ ತಾನೇ ದಡಕ್ಕೆ ಬಂದು ಕುಳಿತುಕೊಳ್ಳುವ ತನಕ ನಾನು ಈ ಜಾಗವನ್ನು ಬಿಟ್ಟು ಕದಲುವುದಿಲ್ಲ ಎಂದು ಹಟ ಮಾಡಿ ತಿರುಮಂತ್ರ ಹೇಳುತ್ತಾ ಜಾಗಟೆ ಬಡಿದು ಜೋರಾಗಿ ಶಂಖ ಊದಿದಾಗ ನೀರಿನಲ್ಲಿ ಮುಳುಗಿ ಹೋಗಿದ್ದ ದೇವರ ಬುಟ್ಟಿ ನೀರಿನ ಮೇಲೆ ಮುಳುಗಿ ಹೋಗಿದ್ದ ದೇವರ ಬುಟ್ಟಿ ನೀರಿನ ತಳದಿಂದ ಗುಳುಗುಳು ಶಬ್ಧ ಮಾಡುತ್ತಾ ಮೇಲಕ್ಕೆ ಬಂದಿತಂತೆ. ಆಗ ಎಲ್ಲರೂ ಆ ದಾಸಯ್ಯನ ದೃಢ ಭಕ್ತಿಯನ್ನು ಕೊಂಡಾಡುತ್ತ ದೇವರನ್ನು ಹಿಡಿದುಕೊಂಡರಂತೆ. ಈ ರೀತಿ ಒಂದು ಸಲ ಅಪಾಯಕ್ಕೆ ಸಿಲುಕಿರುವುದರಿಂದ ನದಿಯಲ್ಲಿ ದೇವರನ್ನು ಅದ್ದಿ ತೆಗೆಯುವ ಪದ್ಧತಿ ಕೈಬಿಟ್ಟು, ದೇವರು ತೋರಿಸಿದ ಸ್ಥಳದಲ್ಲಿ ಮರಳು ಚಿಲುಮೆ ತೋಡಿ, ಆ ಚಿಲುಮೆಯ ಒರತೆ ನೀರಿನಿಂದಲೇ ದೇವರ ಪೆಟ್ಟಿಗೆ ಮತ್ತು ಪರಿಕರಗಳನ್ನು ಶುದ್ಧಿಕರಿಸಿ ಪೂಜೆಸಲ್ಲಿಸುತ್ತಾರೆ. ನಂತರ ದೇವರನ್ನೆಬ್ಬಿಸಿ ಕೊಂಡು ಹಿಂದಿರುಗಿ ಬರುವಾಗ ಹರಕೆ ಮಾಡಿಕೊಂಡ ಭಕ್ತಾಧಿಗಳು ನದಿಯಲ್ಲಿ ಸ್ನಾನಮಾಡಿ ಬಿಳಿ ವಸ್ತ್ರವನ್ನುಟ್ಟು, ಕೇಶ ಮುಡಿಯನ್ನು ಬಿಚ್ಚಿ ಬೆನ್ನಿನ ಮೇಲೆ ಹರಡಿಕೊಂಡು, ದೇವರು ಬರುವ ದಾರಿಗೆ ಅಡ್ಡಲಾಗಿ ಮಲಗಿ ಕೊಳ್ಳುತ್ತಾರೆ. ಆಗ ದೇವರು ಹೊತ್ತ ಪೂಜಾರಿ ಮಲಗಿರುವ ಮಹಿಳೆಯರು ಅಥವಾ ಪುರುಷರನ್ನು ತುಳಿಯುತ್ತ ಇಲ್ಲವೇ ದಾಟಿ ಕೊಳ್ಳುತ್ತಾ ಬರುತ್ತಾನೆ. ಇದೇ ಪದ್ಧತಿ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಮಾಕನಡುಕು ಗ್ರಾಮದ ಮ್ಯಾಸಬೇಡರಲ್ಲಿ ಕಂಡು ಬರುತ್ತದೆ. ಈ ಪ್ರದೇಶದ ಕಂಚೋಬಳ ನರಸಿಂಹಸ್ವಾಮಿಗೆ ಬೆಳಗಿನ ಜಾವದಲ್ಲಿ “ಸೌರಃಳಿಸಿ”ದ ನಂತರ ಮುಂಜಾನೆ ಸುಮಾರು ಆರು ಗಂಟೆಗೆ, ದೇವರ ಪೂಜಾರಿ ಮತ್ತು ಜಂಗಮ ಗುರುಗಳು ಜೊತೆಗೂಡಿ, ಮಡಿಯಿಂದ ಬಿಳಿ ಪಂಚೆಯನ್ನುಟ್ಟು, ದೇವರ ಬೆತ್ತ ಮತ್ತು ನವಿಲುಗರಿ ಹಿಡಿದುಕೊಂಡು, ಸಕಲವಾದ್ಯಗಳೊಂದಿಗೆ ಮಾಕನಡುಕಿನಿಂದ ಸುಮಾರು ಒಂದು ಕಿ.ಮೀ. ದೂರದ ಪೂರ್ವ ದಿಕ್ಕಿನ ಈಶಾನ್ಯ ಮೂಲೆಯ ‘ಶಮೀವೃಕ್ಷ’ದ ಹತ್ತಿರ ಹೋಗಿ “ಸೂರ್ಯನಾರಾಯಣ”ಗೆ ಎಡೆಹಾಕಿ ಪೂಜೆ ಸಲ್ಲಿಸುತ್ತಾರೆ. ಈ ಸಂಪ್ರದಾಯವನ್ನು ‘ಸೂರ್ಯಮುಕ್ಕು’ ಹೋಗುವುದು ಎಂದು ಕರೆಯುತ್ತಾರೆ. ಈ “ಬನ್ನಿಮರದ” ಹತ್ತಿರವೇ ಭೂಮಿಯನ್ನು ಮುಟ್ಟಿ ಪೂರ್ವಕ್ಕೆ ಮೂರು ಹೆಜ್ಜೆ ಮತ್ತು ಪಶ್ಚಿಮಕ್ಕೆ ಮೂರು ಹೆಜ್ಜೆ ಹಾಕಿ ಭೂಮಿ ಮುಟ್ಟಿ ಉದಯವಾಗುತ್ತಿರುವ ಸೂರ್ಯನಿಗೆ ನಮಸ್ಕರಿಸಿ ಪೂಜಾರಿ ಮತ್ತು ಗುರುಗಳು ದೇವಸ್ಥಾನಕ್ಕೆ ವಾಪಾಸ್ಸು ಬರುವಾಗ ದೇವಸ್ಥಾನದ ಹತ್ತಿರ ಹರಕೆ ಮಾಡಿಕೊಂಡು ಭಕ್ತಾದಿಗಳು ದಾರಿಗೆ ಅಡ್ಡವಾಗಿ ಮಲಗಿಕೊಂಡಿರುತ್ತಾರೆ, ಆಗ ದೇವರ ಪೂಜಾರಿ ಆವೇಶದಿಂದ ಒಬ್ಬೊಬ್ಬರನ್ನೇ ದಾಟುತ್ತ, ತುಳಿಯುತ್ತಾ ಮುಂದೆ ಸಾಗಿ ನಂತರ ಹಿಂದಕ್ಕೆ ಬರುತ್ತಾನೆ. ಯಾವ ವ್ಯಕ್ತಿಯನ್ನು ಪೂಜಾರಿ ತುಳಿಯುತ್ತಾನೋ ಆವ್ಯಕ್ತಿಗೆ ಒಂದು ತೆಂಗಿನಕಾಯಿಯನ್ನು ಆಶೀರ್ವಾದ ರೂಪವಾಗಿ ಪೂಜಾರಿಗಳು ಕೊಡುತ್ತಾರೆ. ಪೂಜಾರಿ ನಮ್ಮನ್ನು ದಾಟಿ ಹೋದರೆ ತಮ್ಮ ಹರಕೆಯ ಫಲಗಳು ಯಶಸ್ವಿಯಾಗುತ್ತವೆ ಎಂದುಇಲ್ಲಿಯ ಜನರ ನಂಬಿಕೆಯಾಗಿದೆ.

ವೇದಾವತಿ ನದಿಯಲ್ಲಿ ಗಂಗೆಪೂಜೆ ಮುಗಿದ ನಂತರ ಈ ನದಿ ದಡದಲ್ಲಿ ವಾಸಿಸುವ ನಲ್ಲೂರಹಳ್ಳಿ ಗೊಲ್ಲರಹಟ್ಟಿಯ ಕಾಡುಗೊಲ್ಲರು ಸಕಲ ಗೌರವಗಳೊಂದಿಗೆ ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಯನ್ನು ತಮ್ಮ ಗೊಲ್ಲರಹಟ್ಟಿಗೆ ಕರೆದುಕೊಂಡು ಹೋಗುತ್ತಾರೆ. ಮ್ಯಾಸಬೇಡರ ದೇವರನ್ನು ಕಾಡುಗೊಲ್ಲರು ತಮ್ಮ ಹಟ್ಟಿಯೊಳಗೆ ಬರಮಾಡಿಕೊಳ್ಳುವಾಗ ವೇದಾವತಿ ನದಿ ದಡದಿಂದ ಗೊಲ್ಲರಹಟ್ಟಿಯವರೆಗೂ ಮುಳ್ಳು, ಕಲ್ಲುಗಳನ್ನು ಗುಡಿಸಿ ದಾರಿಯನ್ನು ಸ್ವಚ್ಛಮಾಡಿ, ದಾರಿಯುದ್ದಕ್ಕೂ (ನೀರು) ಸೆಳೆವು ಒಯ್ಯುವುದರ ಮುಂಖಾತರ ದೇವರನ್ನು ಕರೆದುಕೊಂಡು ಹೋಗುವ ದೃಶ್ಯ ಕಾಡುಗೊಲ್ಲರ ಸಂಪ್ರದಾಯ, ನಂಬಿಕೆ ಮತ್ತು ಮುಗ್ಧ ಭಕ್ತಿಯನ್ನು ಕಾಣಬಹುದಾಗಿದೆ. ನಲ್ಲೂರಹಳ್ಳಿ ಗೊಲ್ಲರಹಟ್ಟಿಯ ಕರಡಿಗೊಲ್ಲರ ಬೆಡಗಿನ ಮುದಿಯಪ್ಪನ ಮಗ ಚಿಕ್ಕಣ್ಣನವರ ಮನೆ ಮುಂದೆ ಕರಿಕಂಬಳಿ ಗದ್ದುಗೆ ಹಾಸಿ, ಬೆಲ್ಲ, ಬಾಳೆಹಣ್ಣು ಮಣೇವು ಹಾಕಿ ದೇವರು ತಿರುಗಿದ ನಂತರ ಪ್ರಸಾದವಾಗಿ ಎಲ್ಲರಿಗೂ ಹಂಚುತ್ತಾರೆ. ಈ ಹಟ್ಟಿಯ ಕಾಡುಗೊಲ್ಲರು ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಗೆ ಅಕ್ಕಿ, ಹುರುಳಿ, ಬೆಲ್ಲ, ಹಾಲು, ಮೊಸರು, ತುಪ್ಪ ಮೊದಲಾದ ವಸ್ತುಗಳನ್ನು "ಕಾಸು-ಮೀಸಲು" ಎಂದು ಅರ್ಪಿಸುತ್ತಾರೆ. ಈ ಪ್ರದೇಶದ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಪರಸ್ಪರ ಆತ್ಮೀಯತೆಯಿಂದ, ನಾವೆಲ್ಲರೂ ಮೂಲತಃ ಅಣ್ಣ ತಮ್ಮಂದಿರಾಗಿ ಬಾಳಿ ಬದುಕಿದವರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ನಲ್ಲೂರಹಳ್ಳಿ-ಗೊಲ್ಲರಹಟ್ಟಿಯ ಹೊರಭಾಗದ ದಕ್ಷಿಣಕ್ಕೆ ಜನತಾ ಮನೆ ಕಟ್ಟಿಕೊಂಡು ವಾಸಿಸುವ ಹರಿಜನರು ಕೂಡ, ಮ್ಯಾಸಬೇಡರ ಅಹೋಬಲ ನರಸಿಂಹಸ್ವಾಮಿಗೆ ಅಕ್ಕಿ ಹುರಳಿಯನ್ನು ಮೀಸಲು ಕೊಟ್ಟು, ತೆಂಗಿನಕಾಯಿ ಒಡೆಸಿದ ಘಟನೆಗಳು ದಿನಾಂಕ: ೦೯.೦೨.೨೦೦೧ ರಂದು ಸಂಶೋಧನ ಕ್ಷೇತ್ರಕಾರ್ಯದಲ್ಲಿ ಕಂಡು ಬಂದವು.

ಮ್ಯಾಸಬೇಡರ ಅಹೋಬಲ ನರಸಿಂಹಸ್ವಾಮಿ ವೇದಾವತಿ ನದಿಯಿಂದ ನಲ್ಲೂರಹಳ್ಳಿ-ಗೊಲ್ಲರಹಟ್ಟಿಯ ಚಿಕ್ಕಣ್ಣನವರ ಮನೆ ಹತ್ತಿರ ಮಣೇವು ತಿರುಗಿ ಕಾಸು-ಮೀಸಲು ಪಡೆದು ಕೊಂಡ ನಂತರ ದೇವರಮರಿಕುಂಟೆಯಿಂದ ಸುಮಾರು ಒಂದು ಕಿ.ಮೀ. ದೂರದ ಕೆರೆ ದಂಡೆಯ ದಕ್ಷಿಣ ನೈಋತ್ಯಕ್ಕೆ ಕಾಡುಗೊಲ್ಲರ ಜಮೀನಿನಲ್ಲಿಯೇ ಇರುವ ನರಸಿಂಹಸ್ವಾಮಿಯ ಹೊರಗಳ ಗುಡಿ ಮತ್ತು ಗೂಲೋಬಮ್ಮ ಅಗ್ನಿಕೊಂಡವಾದ ಈ ಎರಡೂ ಸ್ಥಳದ ಮಧ್ಯೆ ಕಾಡುಗೊಲ್ಲರು ಕಟ್ಟಿದ ಕಳ್ಳೆಪೌಳಿಯ ನಡುವೆ, ಹಂಚಿಗುಡಿಸಲಿನಲ್ಲಿ ದೇವರಿಟ್ಟು; ಎಲ್ಲಾ ಅಣ್ಣ ತಮ್ಮಗಳು ಸೇರಿ ಗುಗ್ಗರಿಹಬ್ಬ ಆಚರಿಸುತ್ತಾರೆ. ಈ ಪ್ರದೇಶವನ್ನು ಮೇಗಳ ದೇವರ ಗುಡಿ ಎಂದು ಕರೆಯುತ್ತಾರೆ. ಮ್ಯಾಸಬೇಡರು ಆಚರಿಸುವ ಗುಗ್ಗರಿ ಹಬ್ಬದಲ್ಲಿ ಕಾಡುಗೊಲ್ಲರು ಕೂಡ ಅಪ್ರತ್ಯಕ್ಷವಾಗಿ ಎಲ್ಲಾ ರೀತಿಯಿಂದಲೂ, ಸಹಕಾರ ಕೊಡುತ್ತಾರೆ.

೫.೪. ಮಿಂಚೇರಿ ಹಳ್ಳ-ಅರಣ್ಯ

ಹೊಳಲ್ಕೆರೆ, ಹೊಸದುರ್ಗ, ಚನ್ನಗಿರಿ, ದಾವಣಗೆರೆ, ಜಗಲೂರು ಮತ್ತು ಚಿತ್ರದುರ್ಗ ತಾಲ್ಲೂಕಿನ ಕೆಲವು ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳೊಂದಿಗೆ "ಮಿಂಚೇರಿ ಹಳ್ಳ" ಅಥವಾ "ದೊಡ್ಡಹಳ್ಳ"ಕ್ಕೆ ಗಂಗೆ ಪೂಜೆಗೆ ಹೋಗಿಬರುತ್ತಾರೆ. ಹೊಳಲ್ಕೆರೆ ತಾಲ್ಲೂಕು ಬಿ. ದುರ್ಗ ಹೋಬಳಿ ವ್ಯಾಪ್ತಿಯಲ್ಲಿ ಬರುವ 'ದೇವರಗಂಜಿಗಟ್ಟೆ' ಯಿಂದ ದಕ್ಷಿಣ ಆಗ್ನೇಯಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದ 'ಮಿಂಚೇರಿ

ಅರಣ್ಯ'ದಲ್ಲಿ ಗಾದರಿಪಾಲನಾಯಕ ಹುಲಿಯೊಂದಿಗೆ ಹೋರಾಡಿ ಮಡಿದ ಸಮಾಧಿ ಮತ್ತು ಮಿಂಚೇರಿ ಕೊಳ ಈ ಎರಡೂ ಸಮೂಹಗಳಿಗೆ ಧಾರ್ಮಿಕ ಕೇಂದ್ರವಾಗಿದೆ. ಹೊಳಲ್ಕೆರೆ ಮತ್ತು ಹಿರಿಯೂರು ತಾಲ್ಲೂಕುಗಳ ಕಾಡುಗೊಲ್ಲರ ಹಟ್ಟಿಗಳಲ್ಲಿ ಮೊಳಕಾಲ್ಮೂರು, ಚಳ್ಳಕೆರೆ, ಕೂಡ್ಲಿಗಿ, ಜಗಲೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳ ಮ್ಯಾಸಬೇಡರ ಹಟ್ಟಿಗಳಲ್ಲಿ, ಗಾದರಿಪಾಲನಾಯಕ ಧಾರ್ಮಿಕ ಪುರುಷನಾಗಿ, ದೇವರಾಗಿ ಕಂಡು ಬರುವುದರ ಜೊತೆಗೆ ತಮ್ಮ ಹಟ್ಟಿಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಕೊಂಡು ಬಿಲ್ಲಿನಾಕಾರದ ಕೋಲಿಗೆ, ಅಲಗುಗಳಿಗೆ ಮತ್ತು ಬೆತ್ತದ ಬುಟ್ಟಿಯಲ್ಲಿರುವ ಕೆಲವು ಪರಿಕರಗಳಿಗೆ ಗಾದರಿಪಾಲನಾಯಕ ದೇವರೆಂದು ಆರಾಧಿಸುತ್ತಾರೆ.

ದೇವರಗಂಜಿಗಟ್ಟೆಯಲ್ಲಿ ಕಂಪಳನರಸಿಂಹಸ್ವಾಮಿ, ಗಾದರಿಪಾಲನಾಯಕ, ದಡ್ಲುಮಾರಮ್ಮ, ಸೂರ್ಯಲಿಂಗೇಶ್ವರ, ಬೊರಲಿಂಗೇಶ್ವರ ಮತ್ತು ಪರಮೇಶ್ವರ ಎಂಬ ದೇವಸ್ಥಾನಗಳಿವೆ. ಈ ಊರಲ್ಲಿ ಮ್ಯಾಸಬೇಡರ ಸುಮಾರು ೭೫ ಮನೆಗಳು ಕಂಡು ಬರುತ್ತವೆ. ಈ ಪ್ರದೇಶದ ಮ್ಯಾಸಬೇಡರು ಕಂಪಳನರಸಿಂಹಸ್ವಾಮಿ ಮತ್ತು ಗಾದರಿಪಾಲನಾಯಕ ದೇವರುಗಳನ್ನು ಮಾಘ ಮಾಸದಲ್ಲಿ ಗುಗ್ಗರಿಹಬ್ಬ ಆಚರಿಸುವಾಗ ಮಿಂಚೇರಿ ಹಳ್ಳಕ್ಕೆ ಗಂಗೆಪೂಜೆಗೆ ತೆಗೆದುಕೊಂಡು ಹೊಗುತ್ತಾರೆ. ಮಿಂಚೇರಿ ಅರಣ್ಯದ ಮಧ್ಯೆ ಕಲ್ಲುಬಂಡೆಯ ಮೇಲೆ "ಮಿಂಚೇರಿ ಕೊಳ" ಎಂಬ ಪವಿತ್ರ ಗಂಗಾಸ್ಥಾನವಿದೆ, ಈ ಕೊಳದ ದಡದಲ್ಲಿ ಕಂಪಳನರಸಿಂಹಸ್ವಾಮಿ ಮತ್ತು ಗಾದರಿಪಾಲನಾಯಕ ದೇವರುಗಳನ್ನು ಗದ್ದುಗೆ ಮಾಡಿ ಕೊಳವನ್ನು ಸ್ವಚ್ಛಮಾಡಿ ಜೋರಾಗಿ ಉರುಮೆ ಬಡಿದು ಕಂಪಳನರಸಿಂಹಸ್ವಾಮಿಯನ್ನು ಕೊಂಡಾಡಿದರೆ "ಉರುಮೆ ಶಬ್ದಕ್ಕೆ ಈ ಕೊಳದ ಗಂಗೆ ಉಕ್ಕಿ ಬರುತ್ತಾಳೆ" ಎಂದು ಈ ದೇವರುಗಳಿಗೆ ಉರುಮೆ ಮಾಡುವ ಆದಿದ್ರಾವಿಡ (ಚಲುವಾದಿ) ಜಾತಿಯವರಾದ ಶ್ರೀ ಜಿ.ಆರ್.ರವೀಂದ್ರ ಮತ್ತು ಮ್ಯಾಸಬೇಡರಾದ ಕಂಪಳ ನರಸಿಂಸ್ವಾಮಿಯ ದೇವರ ಪೂಜಾರಿ ಶ್ರೀ ಲೋಕೇಶಪ್ಪನವರು ಹೇಳುತ್ತಾರೆ. ಉರುಮೆ ಶಬ್ಧಕ್ಕೆ ಉಕ್ಕಿ ಬಂದ ಪವಿತ್ರ ಗಂಗೆಯಿಂದ ಎಲ್ಲಾ ದೇವರುಗಳಿಗೆ ಜಲಾಭೀಷೆಕ, ಗಂಗೆಪೂಜೆಗಳನ್ನು ಶಾಸ್ತ್ರೋಕ್ತವಾಗಿ ಮಾಡಿಕೊಂಡು ಬರುತ್ತಾರೆ. ಮಿಂಚೇರಿ ಗಂಗಮ್ಮನ ಕೊಳದ ಸ್ವಲ್ಪ ಕೆಳಭಾಗದ ಪಶ್ಚಿಮಕ್ಕೆ ಇಳಿಜಾರಾದ ಕಲ್ಲು ಬಂಡೆಯ ಮೇಲೆ ಗಾದರಿಪಾಲ ನಾಯಕನ ಪಾದದ ಹೆಜ್ಜೆ ಗುರುತು ಮತ್ತು ಆತನ ಕುದುರೆ ಹೆಜ್ಜೆಗಳು ಸ್ಪಷ್ಟವಾಗಿ ಕಂಡುಬರುತ್ತವೆ.

ಮಿಂಚೇರಿ ಕೊಳದಿಂದ ಸ್ವಲ್ಪ ದೂರದ ಪೂರ್ವಕ್ಕೆ ಇದೇ ಅರಣ್ಯದಲ್ಲಿ ದನಗಾಹಿಯಾಗಿದ್ದ ಗಾದರಿಪಾಲನಾಯಕ ಹುಲಿಯೊಂದಿಗೆ ಹೋರಾಡಿ ಮಡಿದ ಸ್ಥಳದಲ್ಲಿ ಹುಲಿ, ಹಸು ಮತ್ತು ಗಾದರಿಪಾಲನಾಯಕನ ಸಮಾಧಿ (ಗುಡ್ಡೆ)ಗಳು ಕಂಡುಬರುತ್ತವೆ. ಗಾದ್ರಿ ಗುಡ್ಡದಿಂದ ಹರಿದುಬಂದು ಅಂದನೂರು ಕೆರೆಗೆ ಹೋಗಿ ಸೇರುವ ಮಿಂಚೇರಿ ಹಳ್ಳ ಅಥವಾ ದೊಡ್ಡಹಳ್ಳದ ಪೂರ್ವ ಭಾಗದ ದಡದಲ್ಲಿ ಗಾರಿಪಾಲನಾಯಕನ ಸಮಾಧಿ ಮತ್ತು ಪಶ್ಚಿಮ ಭಾಗದ ದಡದಲ್ಲಿ 'ಹುಲಿ' ಮತ್ತು 'ಹಸು'ವಿನ ಸಮಾಧಿಗಳ ಕಲ್ಲಿನ ರಾಶಿಗಳು ಮಾತ್ರ ಕಂಡು ಬರುತ್ತವೆ. ಈ ಹಳ್ಳದ ಮಧ್ಯೆಯಲ್ಲಿ ಅಂದರೆ ಎಡಭಾಗದಲ್ಲಿ ಗಾದರಿಪಾಲನಾಯಕನ ಸಮಾಧಿ ಮತ್ತು ಬಲಭಾಗದಲ್ಲಿ ಹುಲಿ ಮತ್ತು ಹಸುವಿನ ಸಮಾಧಿಗಳ ನಡುವೆ ಹಳ್ಳದಲ್ಲಿ ಗಾದರಿಪಾಲನಾಕ ದೇವರುನ್ನು ಗದ್ದುಗೆ ಮಾಡಿ, ಈ ಎಲ್ಲಾ ಸಮಾಧಿಗಳಿಗೆ ಮತ್ತು ದೇವರುಗಳಿಗೆ ಪೂಜೆ ಮಾಡುತ್ತಾರೆ.

ಗಾದರಿಪಾಲನಾಯಕನ ಸಮಾಧಿ ಸ್ಥಳದಿಂದ ಸುಮಾರು ೧೦೦ ಮೀಟರ ಅಂತರದಲ್ಲಿ ದಕ್ಷಿಣ ನೈಋತ್ಯಕ್ಕೆ "ಹೆಸರಿಲ್ಲದ ಮರ" ಅದರ ಬುಡದಲ್ಲಿ ಗಾದರಿಪಾಲನಾಯಕನ ಹೆಂಡತಿಯರಾದ ಕಂಚವ್ವ ಮತ್ತು ಕಾಮವ್ವರು ಮೊಸರು ಕಡಿಯುತ್ತಿದ್ದ ಕಲ್ಲಿನ ಕಂಭವಿದೆ ಇದನ್ನೇ 'ಕಡೆಕಂಭ' ಎಂದು ಕರೆಯುತ್ತಾರೆ. ಈ ಹೊತ್ತಿಗೂ ಸಹ ಬರಡು ಗೋವಿನ (ಹಸು) ಹಾಲನ್ನು ಕರೆದು ಕಾಯಿಸಿ, ಹೆಪ್ಪುಹಾಕಿ, ಮೊಸರು ಮಾಡಿ ಇದೇ 'ಕಡೆಕಂಭ' ದಿಂದ ಮೊಸರು ಕಡೆದು ಬೆಣ್ಣೆತೆಗೆದು, ತುಪ್ಪಮಾಡಿ ಗಾದರಿಪಾಲನಾಯಕನ ದೇವಸ್ಥಾನದಲ್ಲಿ ತುಪ್ಪದ ದೀಪ ಹಚ್ಚುತ್ತಾರೆ. ಗಾದರಿಪಾಲನಾಯಕ ದೇವರು ಈ ಹಳ್ಳಕ್ಕೆ ಹೋದಾಗ ಇಲ್ಲಿಯ ಜನ 'ಗಾದರಿಪಾಲನಾಯಕ' ಮತ್ತು 'ಹುಲಿ'ಯ ವೇಷ ಹಾಕಿಕೊಂಡು ಗಾದರಿಪಾಲನಾಯಕ ಹುಲಿಯೊಂದಿಗೆ ಹೋರಾಡಿದ ದೃಶ್ಯವನ್ನು ನಾಟಕೀಯವಾಗಿ ಆಚರಿಸುತ್ತಾರೆ. ನಂತರ ಅದೇ ಪ್ರದೇಶದಲ್ಲಿ ದೇವರಿಗೆ ಕಾಸು, ಮೀಸಲು, ಅರ್ಪಿಸುವುದು, ದಾಸಯ್ಯಗಳು ಮಣೇವು ತಿರುಗುವುದು ಮೊದಲಾದ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಾರೆ. ಈ ಪ್ರದೇಶದಿಂದ ಸುಮಾರು ನಾಲ್ಕು ಕಿ.ಮೀ. ದೂರದ ಪೂರ್ವಕ್ಕೆ ಮೆದಕೆರಿಪುರದ ಹತ್ತಿರ ಗಾದ್ರಿಗುಡ್ಡದಲ್ಲಿ ಗಾದರಿಪಾಲನಾಯಕನ ತಾಯಿ "ಗಾದಿರಮ್ಮ"ನ ಸಮಾಧಿ ಇದೆ. ಈ ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಇಲ್ಲಿಯ ಸಮಾಧಿಗಳನ್ನು "ಗುಡ್ಡೆ" ಎಂದೇ ಕರೆಯುತ್ತಾರೆ. ಈ ಎಲ್ಲಾ ಗುಡ್ಡೆಗಳ ಮೇಲೆ ಯಾವುದೇ ದೇವಸ್ಥಾನಗಳಾಗಲಿ, ಮಂಟಪಗಳಾಗಲಿ ಕಂಡುಬರುವುದಿಲ್ಲ, ಕೇವಲ ಕಲ್ಲುಗಳ ರಾಶಿ ಮತ್ತು ಚಿಕ್ಕ ಪುಟ್ಟ ಕಲ್ಲಿನ ಬೆನವಗಳು ಮಾತ್ರ ಈ ಸಮಾಧಿಗಳ ಮೇಲೆ ಕಂಡುಬರುತ್ತವೆ.

ದೇವರ ಗಂಜಿಗಟ್ಟೆಯಲ್ಲಿರುವ ಕಂಪಳನರಸಿಂಹಸ್ವಾಮಿ 'ಹೂವು' ಕೊಡುವುದನ್ನು ಈ ಪ್ರದೇಶದ ಭಕ್ತಾದಿಗಳು ಬಲವಾಗಿ ನಂಬುತ್ತಾರೆ; ಗಾದರಿಪಾಲನಾಯಕನ ಭಕ್ತಿಗೆ ಕಂಪಳನರಸಿಂಹಸ್ವಾಮಿ ಮೆಚ್ಚಿ ತಾನೇ ಭಕ್ತನಿಗೆ ಶರಣಾಗುತ್ತಾನೆ. ಈ ದೃಶ್ಯವನ್ನು 'ಗುಗ್ಗರಿಹಬ್ಬ'ದಲ್ಲಿ ಕಾಣಬಹುದು. ಆದ್ದರಿಂದ ಕಂಪಳನರಸಿಂಹಸ್ವಾಮಿಗೆ ಯಾವ ಭಕ್ತ ನಿಷ್ಠೆಯಿಂದ ನಡೆದು ಕೊಳ್ಳುತ್ತಾನೋ ಅಂಥಹ ಭಕ್ತನಿಗೆ ಕಂಪಳನರಸಿಂಹಸ್ವಾಮಿ ಕಾಪಾಡುತ್ತಾನೆ ಎಂದು ಇಲ್ಲಿಯ ಭಕ್ತಾದಿಗಳ ನಂಬಿಕೆ.

ಸಂಶೋಧನ ಸಲವಾಗಿ ಮಿಂಚೇರಿ ಅರಣ್ಯ ಮತ್ತು ಗಾದ್ರಿಗುಡ್ಡದಲ್ಲಿ ತಿರುಗಾಡುತ್ತಿದ್ದಾಗ, ಮ್ಯಾಸಬೇಡ ಮತ್ತು ಕಾಡುಗೊಲ್ಲರ ನೂರಾರು ದನಕರುಗಳು ಈ ಪ್ರದೇಶದಲ್ಲಿ ಮೇಯಿತ್ತಿರುವ ಸನ್ನಿವೇಶ (ದೃಶ್ಯ) ಕಂಡು ಬಂದಿತು. ಫಲವತ್ತಾದ ಕೆಂಪು ಮಿಶ್ರಿತ ಕಪ್ಪುಭೂಮಿಯನ್ನು ಹೊಂದಿದ ಈ ಪ್ರದೇಶ, ಪಶುಪಾಲನೆ ಮತ್ತು ಕೃಷಿಗೆ ಸೂಕ್ತವಾದ ಸ್ಥಳವಾಗಿದೆ. ಸಮೃದ್ಧಿ ಹುಲ್ಲು ನೀರು ಮತ್ತು ಅನೇಕ ಗಿಡಮೂಲಿಕೆ ಔಷಧಿ ಸಸ್ಯಗಳು ಬೆಳೆದುನಿಂತಿವೆ, ದನಗಾಹಿಯಾಗಿದ್ದ ಗಾದರಿಪಾಲನಾಯಕ ಈ ಪ್ರದೇಶದಲ್ಲಿ ದನಗಳ ಗೂಡು ತಿರುವಿಕೊಂಡು ಹೆಂಡತಿಯಾರದ ಕಂಚವ್ವ ಮತ್ತು ಕಾಮವ್ವರೊಂದಿಗೆ ವಾಸಿಸುತ್ತಿದ್ದ ಎಂದು ಮ್ಯಾಸಬೇಡ ಮತ್ತು ಕಾಡುಗೊಲ್ಲರು, ಹಲವು ಪ್ರದೇಶಗಳಿಂದ ಪ್ರತಿ ವರ್ಷಕ್ಕೆ ಒಂದು ಸಾರಿಯಾದರೂ "ಮಿಂಚೇರಿ ಅರಣ್ಯ"ಕ್ಕೆ ತಮ್ಮ ದೇವರುಗಳೊಂದಿಗೆ ಬಂದು ಹೋಗುವ ಪದ್ಧತಿ ಇಟ್ಟುಕೊಂಡಿದ್ದಾರೆ. ಬರಗಾಲ ಬಂದಾಗ ಗಾದ್ರಿಗುಡ್ಡಕ್ಕೆ ಹೋಗಿ ಬಂದೆ ಅಥವಾ 'ಗಾದ್ರಿಗುಡ್ಡದ ಮೇಲೆ ಮಿಂಚಿದರೆ' ಮಳೆ ಬರುತ್ತದೆ ಎಂದು ಈ ಬುಡಕಟ್ಟು ಜನರ ನಂಬಿಕೆಯಾಗಿದೆ. ಮಿಂಚೇರಿ ಅರಣ್ಯ ಮತ್ತು ಗಾದ್ರಿಗುಡ್ಡ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಆಧ್ಯಾತ್ಮಿಕ ಪವಿತ್ರ ಪುಣ್ಯಕ್ಷೇತ್ರಗಳಾಗಿವೆ.

ಮಿಂಚೇರಿ ಕೊಳದಿಂದ ಸುಮಾರು ಎರಡು ಕಿ.ಮೀ. ದೂರದ ದಕ್ಷಿಣ ನೈಋತ್ಯಕ್ಕೆ "ಮಿಂಚೇರಿಪುರ" ಎಂಬ ಚಿಕ್ಕ ಮ್ಯಾಸಬೇಡರ ಹಟ್ಟಿ ಕಂಡು ಬರುತ್ತದೆ. ಈ ಹಟ್ಟಿಯಲ್ಲಿ ಬರೀ ಮ್ಯಾಸಬೇಡರು ಮಾತ್ರ ವಾಸಿಸುತ್ತಾರೆ. ೧೫೦ ಜನಸಂಖ್ಯೆಯನ್ನು ಹೊಂದಿದ ೨೦ ಮ್ಯಾಸಬೇಡರ ಮನೆಗಳು ಈ ಹಟ್ಟಿಯಲ್ಲಿ ಕಂಡುಬರುತ್ತವೆ. ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಮಾತ್ರ, ಒಂದೇ ಶಾಲೆ ಇದ್ದು, ೨೮ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ೧೫೦ ಜನಸಂಖ್ಯೆಯನ್ನು ಹೊಂದಿದ ಈ ಪುಟ್ಟ ಹಟ್ಟಿಯಲ್ಲಿ ಹೆಚ್.ಜೆ. ಮಹೇಶ ಎಂಬ ೨೫ ವರ್ಷದ ಯುವಕ ಮಾತ್ರ ಬಿ.ಎ.ಪದವಿಧರನಾಗಿದ್ದಾನೆ. ಈ ಮಿಂಚೇರಿಪುರದಲ್ಲಿ ಅಂಗಡಿ, ವಿದ್ಯುತ್, ಹಿಟ್ಟಿನಗಿರಣಿ, ಮೊದಲಾದ ಯಾವ ನಾಗರಿಕ ಸೌಲಭ್ಯಗಳು ಕಂಡು ಬರುತ್ತಿಲ್ಲ; ಆದ್ದರಿಂದ ಮೂಲತಃ ಮ್ಯಾಸಬೇಡರ ಪ್ರಾಚೀನ ಸಂಸ್ಕೃತಿ ಮತ್ತು ಸಂಪ್ರದಾಗಳು ಈ ಮ್ಯಾಸಬೇಡರ ಹಟ್ಟಿ "ಮಿಂಚೇರಿಪುರ"ದಲ್ಲಿ ಕಾಣಬಹುದಾಗಿದೆ.

೬. ಹಬ್ಬಗಳು

ಬುಡಕಟ್ಟು ಸಮೂಹಗಳ ಸಾಮಾಜಿಕ ಜೀವನದಲ್ಲಿ ಹಬ್ಬ-ಉತ್ಸವಗಳು ಅತಿ ಮುಖ್ಯ ಪಾತ್ರ ವಹಿಸುತ್ತವೆ. ಒಂದೊಂದು ಋತುಗಳನ್ನು ಬದಲಾವಣೆಯಾದಂತೆ, ಆಯಾ ಕಾಲಕ್ಕೆ ತಕ್ಕಂತೆ ಮನರಂಜನೆ ಮತ್ತು ಸುಖ ಸಂತೋಷಗಳಿಗಾಗಿ ಒಪ್ಪುವಂತಹ ಹಬ್ಬ-ಹರಿದಿನಗಳನ್ನು ಆಚರಿಸುವ ಪದ್ಧತಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಕಂಡು ಬರುತ್ತವೆ. ಮಾನವನು ಸಾಂಪ್ರದಾಯಿಕ ಬಯಕೆಯನ್ನು ತೀರಿಸಿಕೊಳ್ಳಲು, ನಿರ್ದಿಷ್ಟ ಅವಧಿಗೊಮ್ಮೆ ಮನೆಯವರ ಜೊತೆಗೂಡಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಸಂತೋಷವಾಗಿ ಆಚರಿಸುವ ಪದ್ಧತಿಗೆ 'ಹಬ್ಬ' ಎಂದು ಕರೆಯುತ್ತಾರೆ.

ಈ ಹಬ್ಬಗಳು ಜನರಲ್ಲಿ ಏಕತೆಯನ್ನು ಮೂಡಿಸುತ್ತವೆ. ಹಬ್ಬದ ದಿನದಂದು ಜನರು ತಮ್ಮ ಎಲ್ಲಾ ನೋವು ಕಷ್ಟಗಳನ್ನು ಮರೆತು ಸಂತೋಷದಿಂದ ಆಚರಿಸುತ್ತಾರೆ. ಯಾವುದೇ ಹಬ್ಬವಿರಲಿ ಮೂಲ ಉದ್ದೇಶ ತಾವು ನಂಬಿರುವ ದೇವರು-ದೇವತೆ ಆರಾಧನೆಗಾಗಿ ಅಂದು ಮನೆ ಮನೆಗಳಲ್ಲಿ ದೇವರ ಪೂಜೆ, ಆರಾಧನೆ ನಡೆಯುವಂತೆ ಆಯಾ ದೇವರುಗಳಿಗಾಗಿ ಮೀಸಲಾದ ಗುಡಿ ಗುಬ್ಬಗಳಲ್ಲಿ ವಿಶೇಷ ಪೂಜಾ ಕಾರ್ಯಗಳು ನಡೆಯುತ್ತವೆ. ಪ್ರತಿಯೊಂದು ಹಬ್ಬಗಳಲ್ಲಿ ನಿಷ್ಠೆತರಲು ಪುರಾಣ, ಕಥೆಗಳಲ್ಲಿ ಅವುಗಳ ಮಹತ್ವ, ಅಸ್ತಿತ್ವಗಳನ್ನು ಸೇರಿಸಿ, ಯಾವ ಯಾವ ಹಬ್ಬಗಳನ್ನು ಹೇಗೆ ಆಚರಿಸಿ ಯಾವ ರೀತಿಯ ಶುಭ ಪುಣ್ಯ ಫಲಗಳನ್ನು ಪಡೆದುಕೊಳ್ಳಬಹುದು ಎಂಬುದನ್ನು ಅಲ್ಲಿ ಪ್ರಸ್ತಾಪ ಮಾಡಿರುವುದರಿಂದ ಈ ಎರಡು ಬುಡಕಟ್ಟು ಜನರೂ ಕೂಡ ತಮ್ಮವೇ ಆದ ಹಲವು ವೈಶಿಷ್ಟ್ಯಪೂರ್ಣ ಹಬ್ಬಗಳ ಆಚರಣೆಯಲ್ಲಿ ಅಪಾರ ಶ್ರದ್ಧೆ ತೋರಿಸುತ್ತಾರೆ.

ಯಾವುದೇ ಬುಡಕಟ್ಟು ಜನಾಂಗದ ಸಂಪ್ರದಾಯ, ನಂಬಿಕೆ, ಆಚಾರ-ವಿಚಾರ, ಉಡುಗೆ-ತೊಡಿಗೆ ಮತ್ತು ಸಂಸ್ಕೃತಿಯನ್ನು ಅವರು ಆಚರಿಸುವ ಹಬ್ಬ-ಹರಿದಿನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಅದೇ ರೀತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಋತುಮಾನಕ್ಕನುಗುಣವಾಗಿ ಗುಗ್ಗರಿಹಬ್ಬ, ಶಿವರಾತ್ರಿ, ಯುಗಾದಿ, ನಾಗರಪಂಚಮಿ, ಓರಿಯುರಹಬ್ಬ, ದೀಪಾವಳಿ, ಮಾರಮ್ಮನಹಬ್ಬ, ಕಾರಹುಣ್ಣಿಮೆ, ಏಕಾದಶಿ, ಗಿಡದೇವರು, ಭೂತಾರಾಧನೆ

ಮೊದಲಾದ ಹಬ್ಬಗಳನ್ನು ವೈಶಿಷ್ಟಪೂರ್ಣವಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಹಬ್ಬಗಳು ಸಂತೋಷ, ಸಡಗರ, ಶುಚಿತ್ವ ಮತ್ತು ದೈವ ಶ್ರದ್ಧೆಯ ಸಾಂಕೇತಿಕವಾಗಿ ಪ್ರಾದೇಶಿಕ ವೈವಿಧ್ಯತೆಗಳೊಡನೆ ಆಚರಿಸಲ್ಪಡುವುದರ ಜೊತೆಗೆ ಆದಿನ ಹೊಸದಾದ ಇಲ್ಲವೇ ಸಾಂಪ್ರದಾಯಿಕ ಉಡುಗೆ ತೊಡಿಗೆಗಳನ್ನು ಧರಿಸುತ್ತಾರೆ. ದೇವರು, ಧರ್ಮ ಮತ್ತು ಹಬ್ಬಗಳ ವಿಷಯವಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪರಸ್ಪರ ಹೊಂದಾಣಿಕೆ ಹಾಗೂ ಸಾಮ್ಯಾತೆಗಳು ಕಂಡು ಬರುತ್ತವೆ. ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಪ್ರದೇಶಗಳಲ್ಲಿ ಈ ಎರಡು ಜನಾಂಗ ಕೂಡಿಯೇ ಹಬ್ಬ, ಜಾತ್ರೆ ಮತ್ತು ಉತ್ಸಾವಗಳನ್ನು ಆಚರಿಸುತ್ತಾರೆ. ಬಹು ಹಿಂದೆ ಕಾಡುಗೊಲ್ಲರು 'ಗಿರಿಪೂಜಾ' ಎಂಬ ಹಬ್ಬವನ್ನು ಬಹಳ ವೈಭವದಿಂದ ಆಚರಿಸುತ್ತಿದ್ದರಂತೆ. ಈ ಎರಡು ಬುಡಕಟ್ಟು ಜನಾಂಗ ಗುಗ್ಗರಿಹಬ್ಬ, ಹಿರಿಯರಹಬ್ಬ, ನಾಗಪ್ಪನಹಬ್ಬ, ಮಾರಮ್ಮನಹಬ್ಬ ಮತ್ತು ಯುಗಾದಿಹಬ್ಬಗಳಿಗೆ ಕೊಟ್ಟಷ್ಟು ಮಹತ್ವ ನವರಾತ್ರಿ, ದುರ್ಗಾಪೂಜೆ, ಗಣೇಶ ಚತುರ್ಥಿ, ಕಾರ್ತಿಕ, ರಾಮನವಮಿ, ಮೊದಲಾದ ಹಬ್ಬಗಳಿಗೆ ಕೊಡುವುದಿಲ್ಲ. ಎಷ್ಟೋ 'ಹಟ್ಟಿ'ಗಳಲ್ಲಿ ಹಿಂದೂ ಧರ್ಮದ ಹಬ್ಬ ಮತ್ತು ಆಚರಣೆಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಗೊತ್ತಿರುವುದಿಲ್ಲ. ಇವರು 'ಗುಗ್ಗರಿಹಬ್ಬ'ಕ್ಕೆ ಬಹಳ ಮಹತ್ವ ಕೊಡುತ್ತಾರೆ. ಚಳ್ಳಕೆರೆ, ಮೊಳಕಾಲ್ಮೂರು, ಜಗಳೂರು ಮತ್ತು ಕೂಡ್ಲಿಗಿ ತಾಲ್ಲೂಕಿನ ಮ್ಯಾಸಬೇಡರು 'ಗುಗ್ಗರಿಹಬ್ಬ'ಕ್ಕೆ ವಿಶೇಷ ಮಹತ್ವ ಕೊಡುತ್ತಾರೆ. ಹೊಳಲ್ಕೆರೆ, ಹೊಸದುರ್ಗ, ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕಿನ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಯುಗಾದಿ, ಹಿರಿಯರಹಬ್ಬ, ನಾಗರಪಂಚಮಿ, ಹಬ್ಬಗಳಿಗೆ ಬಹಳ ಮಹತ್ವ ಕೊಡುತ್ತಾರೆ.

ಚಳ್ಳಕೆರೆ, ಚಿತ್ರದುರ್ಗ, ಮೊಳಕಾಲ್ಮೂರು, ಹೊಳಲ್ಕೆರೆ, ಹಿರಿಯೂರು ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಬರುವ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಯುಗಾದಿ, ಹಿರಿಯರಹಬ್ಬ, ನಾಗರಪಂಚಮಿ, ಗುಗ್ಗರಿಹಬ್ಬ ಮತ್ತು ಮಾರಮ್ಮನ ಹಬ್ಬಗಳನ್ನು ಮಾತ್ರ ಕಡ್ಡಾವಾಗಿ ಆಚರಿಸುತ್ತಾರೆ. ಉಳಿದ ಪ್ರಾದೇಶಿಕ ಹಬ್ಬ ಹರಿದಿನಗಳನ್ನು ಅವರವರ ಅನುಕೂಲಕ್ಕೆ ತಕ್ಕಂತೆ ಆಚರಿಸುತ್ತಾ ಬರುತ್ತಿದ್ದಾರೆ. ಸ್ಥಳೀಯವಾಗಿ ಯಾವ ದೇವರು, ಜಾತ್ರೆ, ಮಠ, ಮಂದಿರಗಳು ಬಹಳ ಹೆಸರುಗಳಿಸಿವೆಯೋ ಅಂಥವುಗಳ ಬಗ್ಗೆ ಇತ್ತೀಚೆಗೆ ಈ ಬುಡಕಟ್ಟು ಜನರು ಬಹಳ ಒಲವು ತೋರಿಸುತ್ತಿದ್ದಾರೆ. ಇತ್ತೀಚೆಗೆ ಹಬ್ಬಗಳ ಆಚರಣೆಯಲ್ಲಿ ಮೊದಲಿನ ಶ್ರದ್ಧೆ ಮತ್ತು ಭಕ್ತಿ ಕಾಣಿಸುವುದಿಲ್ಲ. ಆದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಬ್ಬಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

೬.೧. ಯುಗಾದಿ ಹಬ್ಬ

'ಉಂಡದ್ದು ಯುಗಾದಿ, ಮಿಂದದ್ದು ದೀಪಾವಳಿ' ಎಂಬ ಗಾದೆ ಯುಗಾದಿಯ ಮಹತ್ವವನ್ನು ತಿಳಿಸುತ್ತದೆ. ಚೈತ್ರ ಮಾಸದಲ್ಲಿ ಬರುವ ಯುಗಾದಿ ಹಬ್ಬವನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮೂರು ದಿನಗಳ ಕಾಲ ಹಟ್ಟಿಯ ಜನರೆಲ್ಲರೂ ಒಗ್ಗಟ್ಟಿನಿಂದ ಆಚರಿಸುತ್ತಾರೆ. ಹೊಲ ಗದ್ದೆಗಳ ಕೆಲಸ ಮುಗಿಸಿ ಬಿಡುವು ಮಾಡಿಕೊಂಡಿದ್ದರಿಂದ ಹೊಸವರ್ಷದ ಹಬ್ಬ ಹರುಷವನ್ನು ತಂದು ಕೊಡುತ್ತದೆ. ಮಾವು-ಬೇವು ಸೇರಿಸಿ ಮನೆ ಬಾಗಿಲಿಗೆ, ದೇವರ ಗುಬ್ಬಗಳಿಗೆ ತೋರಣ ಕಟ್ಟುತ್ತಾರೆ. ಎಣ್ಣೆ ಹಚ್ಚಿಕೊಂಡು ಎಣ್ಣೆನೀರು ಅಥವಾ ಬೇವಿನ ಸೊಪ್ಪು ಬೆರಸಿದ ಬಿಸಿ ನೀರಿನಿಂದ ಜಳಕ ಮಾಡುತ್ತಾರೆ. 'ಯುಗಾದಿ ಗೆದ್ದು ಉಡದಾರ ಕಟ್ಟು' ಎಂಬ ಗಾದೆ ಮಾತಿನಂತೆ ಗಂಡು ಮಕ್ಕಳು

ಹೊಸವರ್ಷದ ಸಂಕೇತವಾಗಿ ಉಡದಾರ ಮತ್ತು ಹೊಸಬಟ್ಟೆ ತೊಟ್ಟು, ತಮ್ಮ ಮನೆದೇವರಿಗೆ ಪೂಜೆ ಸಲ್ಲಿಸುತ್ತಾರೆ. ಕೆಲವೊಂದು ಕುಟುಂಬಗಳಲ್ಲಿ ಮೊದಲನೆಯ ಹಬ್ಬದ ಸಂಜೆ 'ಹಿರೇರಹಬ್ಬ' ಆಚರಿಸುತ್ತಾರೆ. ಮತ್ತೇ ಕೆಲವರು ಸತ್ತವ್ಯಕ್ತಿಯ ಸಮಾಧಿ ಹತ್ತಿರ ಹೋಗಿ ಹಬ್ಬಕ್ಕೆ ಮಾಡಿದ ಮೀಸಲು ಅಡಿಗೆಯನ್ನೇ ಎಡೆಹಾಕಿ, ಹೊಸಬಟ್ಟೆ ಏರಿಸಿ ಕಾಯಿಒಡೆದು ಕೊಂಡು ಬರುತ್ತಾರೆ.

ಮೊದಲನೆಯ ಹಬ್ಬದ ಮುಂಜಾನೆ ಮನೆದೇವರಿಗೆ ಧೂಪಹಾಕಿ, "ಬೇವು-ಬೆಲ್ಲ" ತಿನ್ನುತ್ತಾರೆ. ದಾಸಯ್ಯ ಅಥವಾ ಪೂಜಾರಿಗಳನ್ನು ಆಹ್ವಾನಿಸಿ ಗೋವಿಂದಾ ಗೋವಿಂದಾ ಎನ್ನಿಸುತ್ತಾರೆ. ಹೋಳಿಗೆ ಒಬ್ಬಟ್ಟು ಸಿಹಿ ಊಟ ಮಾಡಿದ ನಂತರ ಹತ್ತಿರದ ಬೇವು ಅಥವಾ ಮಾವಿನ ಮರಕ್ಕೆ ಜೋಕಾಲಿ ಕಟ್ಟಿ ಉಯ್ಯಾಲೆ ಆಡುತ್ತಾರೆ.

ಯುಗಾದಿಯ ಎರಡನೇ ಹಬ್ಬದ ದಿನ ಊಟವಾದ ನಂತರ ಸಾಮೂಹಿಕವಾಗಿ ಕಾಡಿಗೆ ಹೋಗಿ ಬೇಟೆಯಾಡಿ ಯಾವುದಾದರೂ ಕಾಡು ಪ್ರಾಣಿಯನ್ನು ಹಿಡಿದು ತಂದು ಹಟ್ಟಿಯಲ್ಲಿ ಮೆರವಣಿಗೆ ಮಾಡಿ ಬೇಟೆಯ ವೀರರೆಂದು ಮುತ್ತೈದೆಯರಿಂದ ಆರತಿ ಎತ್ತಿಸಿಕೊಳ್ಳುತ್ತಾರೆ. ಹಟ್ಟಿಯ ದೇವಸ್ಥಾನ ಅಥವಾ ಗುಬ್ಬಗಳಲ್ಲಿ ವಿಶೇಷ ಪೂಜೆ ಏರ್ಪಡಿಸುತ್ತಾರೆ. ಕೋಲಾಟ, ಭಜನೆ, ಕಬಡಿ, ರಾಮಪಟ್ಟಿ, ತೆಂಗಿನಕಾಯಿ ಗುದ್ದುವುದು, ಜೂಜಾಟ ಮೊದಲಾದ ಕ್ರೀಡಾ ಚಟುವಟಿಕೆಗಳು ಜರುಗುತ್ತವೆ. ಸಂಜೆ "ಚಂದ್ರದರ್ಶನ" ಮಾಡಿ ತಂದೆ-ತಾಯಿ, ಗುರು-ಹಿರಿಯರಿಗೆ, ದಾಸಯ್ಯ-ಪೂಜಾರಿಗೆ, ಕಾಸು ಕೊಟ್ಟು ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಾರೆ. ಸಾಮಾನ್ಯವಾಗಿ ಈ ದಿನ ಮಾಂಸಾಹಾರದ ಅಡಿಗೆ ಮಾಡುತ್ತಾರೆ.

ಮೂರನೇ ಹಬ್ಬದ ದಿನ ಕೆಲವು ಹಟ್ಟಿಗಳಲ್ಲಿ 'ಮೋಡಿ' ಎಂಬ ಜನಪದ ಆಟವನ್ನು ಪ್ರದರ್ಶನ ಮಾಡುತ್ತಾರೆ. ಪೆದ್ದಟ್ಟಿ ಗೊಲ್ಲರು ಮತ್ತು ಮ್ಯಾಸಬೇಡರು ಸೇರಿ ಆಡುವ ಮೋಡಿ ಆಟ ಬಹಳ ರೋಮಂಚನಕಾರಿ ಯಾಗಿರುತ್ತದೆ. ಹಟ್ಟಿಯ ಮತ್ತೇ ಕೆಲವು ಕಲಾವಿದರು ಹಗಲು ವೇಷಗಳನ್ನು ಹಾಕಿಕೊಂಡು ಹಟ್ಟಿ ಅಥವಾ ಗ್ರಾಮಗಳಲ್ಲಿ ಹಾಸ್ಯಮಾಡುತ್ತಾರೆ.

ಯುಗಾದಿ ಹೊಸವರ್ಷದ ಸಂಕೇತವಾಗಿರುವುದರಿಂದ ಯಾವುದೇ ಶುಭಕಾರ್ಯಗಳನ್ನು ಮೊದಲನೆಯ ಹಬ್ಬದ ದಿನ ಪ್ರಾರಂಭಿಸುತ್ತಾರೆ. ಹೊಸಮನೆ, ಕಟ್ಟಲಿಕ್ಕೆ ಬುನಾದಿ ಹಾಕುವುದು, ಬಾಗಿಲಿಡುವುದು, ವ್ಯವಸಾಯ ಪ್ರಾರಂಭಿಸುವುದು ಮೊದಲಾದ ಶುಭ ಕಾರ್ಯಗಳನ್ನು ಆರಂಭಿಸುತ್ತಾರೆ. ಕೆಲವೊಂದು ಹಟ್ಟಿಗಳಲ್ಲಿ ಪುರೋಹಿತ ಅಥವಾ ಪೂಜಾರಿಗಳಿಂದ ಹೊಸವರ್ಷದ ಪಂಚಾಂಗ, ಪುರಾಣ, ಮತ್ತು ದೇವರ ಕಥೆಗಳನ್ನು ಓದಿಸುತ್ತಾರೆ. ಅದೇ ವರ್ಷದ ಶುಭ ಅಶುಭ ಫಲಗಳನ್ನು ಮಾವು ಮತ್ತು ಚಂದ್ರಮ ಯಾವಕಡೆ ಬಾಗಿದ್ದಾನೆ ಎಂಬುದನ್ನು ಗುರುತಿಸಿ ಕೊಂಡು ಆ ವರ್ಷದ ಮಳೆ, ಬೆಳೆ, ಆರೋಗ್ಯ ಮೊದಲಾದ ಫಲಗಳನ್ನು ಕಂಡುಕೊಳ್ಳುತ್ತಾರೆ.

ಯುಗಾದಿ ಹಬ್ಬ ಹೊಸವರ್ಷದ ಸಂಕೇಂತವಾಗಿದ್ದರೂ ಸಿಹಿ ಮತ್ತು ಮಾಂಸದ ಊಟ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ. ಹಿರಿಯರ ಹೆಸರಿನಲ್ಲಿ ಕುರಿ, ಮೇಕೆಗಳನ್ನು ಬಲಿಕೊಟ್ಟು ಮಾಂಸಾಹಾರದ ಅಡಿಗೆ ಮಾಡಿ ಹಿರಿಯರಿಗೆ ಎಡೆ ಹಾಕುವ ಪದ್ಧತಿಗಳು ಇವರಲ್ಲಿವೆ. ಸತ್ತು ಹೋದ ಹಿರಿಯ ವ್ಯಕ್ತಿಗಳ ಹೆಸರಿನ

ಮೇಲೆ ಬೆಳ್ಳಿ ಅಥವಾ ಕಂಚಿನ ಪ್ರತಿಮೆಗಳನ್ನು ಮಾಡಿಸಿ, ಹಿರಿಯರ ಹಬ್ಬದಲ್ಲಿ ಪೂಜೆ ಸಲ್ಲಿಸುತ್ತಾರೆ ಎಂದು ಕೆಲವು ಸಂಶೋಧಕರು ಬರೆಯುತ್ತಾರೆ. ಆದರೆ ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಸಮಗ್ರ ಕ್ಷೇತ್ರಕಾರ್ಯ ಕೈಗೊಂಡರು. ತಾಮ್ರ, ಕಂಚು, ಹಿತ್ತಾಳೆ, ಅಥವಾ ಬೆಳ್ಳಿಯ ಪ್ರತಿಯೊಂದು ಯಾರ ಮನೆಯಲ್ಲಿಯೂ ಕಂಡು ಬರುತ್ತಿಲ್ಲ. ಹಿರಿಯರ ಹಬ್ಬದಲ್ಲಿ ಹಿತ್ತಾಳೆ ಚಂಬು ಮತ್ತು ಮಣ್ಣಿನ ಕುಂಭಕ್ಕೆ 'ಅಜ್ಜ-ಅಜ್ಜಿ'ಯೆಂದು ಭಾವಿಸಿ ಪೂಜೆಸಲ್ಲಿಸುವ ಪದ್ಧತಿ ಮಾತ್ರ ಇವರಲ್ಲಿ ಕಂಡುಬರುತ್ತದೆ.

೬.೨. ಕಾರಹಬ್ಬ

ಜೇಷ್ಠ ಮಾಸದಲ್ಲಿ ಬರುವ ಪೌರ್ಣಮೆಯೇ ಕಾರಹುಣ್ಣಿವೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗದಲ್ಲಿ ಈ ಕಾರಹುಣ್ಣಿವೆಯನ್ನು 'ಕಾರಹಬ್ಬ' ಎಂದು ಕರೆಯುತ್ತಾರೆ. ಮಳೆಗಾಲದ ಮೊದಲ ಹುಣ್ಣಿಮೆ ಯಾಗಿರುವುದರಿಂದ ಇದನ್ನು 'ಮಳೆಯ ಹುಣ್ಣಿಮೆ'ಯೆಂದೂ; ರೈತನ ಕೃಷಿ ಆರಂಭವಾಗುವ ಕಾಲದ ಹುಣ್ಣಿಮೆ ಯಾಗಿರುವುದರಿಂದ ಇದನ್ನು 'ಎತ್ತಿನ ಹುಣ್ಣಿಮೆ' ಎಂದು ಕರೆಯುತ್ತಾರೆ.

ಈ ಕಾರಹಬ್ಬದ ದಿನ ತಮ್ಮ ದನಕರುಗಳನ್ನು ಕೆರೆ, ನದಿ, ಬಾವಿಗಳಲ್ಲಿ ಮೈತೊಳೆದು, ಕೋಡುಗಳಿಗೆ ಬಣ್ಣಹಚ್ಚಿ, ಸರವನ್ನು ಹಾಕಿ, ಹಣೆಗೆ ಕನ್ನಡಿಯ ಹಣೆ ಪಟ್ಟಿಗಳನ್ನು ಕಟ್ಟಿ, ಮೈಮೇಲೆ ಬಣ್ಣ ಬಣ್ಣದ ಬಟ್ಟೆಯ ಜೂಲ್ ಹೊದಿಸುವದು. ದನದ ಕೋಡುಗಳಿಗೆ ಬಳಿಯುವ ಬಣ್ಣವನ್ನು ಹಟ್ಟಿಗಳಲ್ಲೇ ತಯಾರಿಸುತ್ತಿದ್ದರಂತೆ; ಒಣಗಿದ ಬಾಳೆ ಎಲೆಯ ರವದಿಯನ್ನು ಸುಟ್ಟು, ಅದರ ಭೂದಿಗೆ ಅರಳೆಣ್ಣೆ, ಸ್ವಲ್ಪ ನೀಲಿ ಪುಡಿಯನ್ನು ಸೇರಿಸಿ ದನ ಕರುಗಳ ಕೋಡುಗಳಿಗೆ ಹಚ್ಚುತ್ತಿದ್ದರಂತೆ. ಆದರೆ ಇತ್ತೀಚೆಗೆ 'ವಾರನೆಸ್' ಬಣ್ಣ ಬಳಿಯುತಿದ್ದಾರೆ. ದನದ ಕೊಟ್ಟಿಗೆ, ಗ್ವಾಂದ್ಲಿಗಳಿಗೆ ಸುಣ್ಣ, ಸಗಣಿ, ಉರಮಂಜು, ಹಚ್ಚಿ ಶುಭ್ರಗೊಳಿಸುತ್ತಾರೆ. ಉಳಿದ ಸುಣ್ಣ-ಬಣ್ಣಗಳಿಂದ ದನದ ಕೊಟ್ಟಿಯಲ್ಲಿ ಜೋಡಿ ಎತ್ತುಗಳ, ಸೂರ್ಯ ಚಂದ್ರ, ನೇಗಿಲು, ಮೊದಲಾದ ಚಿತ್ರಗಳನ್ನು ಬಿಡಿಸಿ, ದನಕರುಗಳ ಬೆನ್ನಿನ ಮೇಲೆ ತಮ್ಮ ಹಸ್ತದ ಗುರುತು ಇಲ್ಲವೇ ಸೂರ್ಯ ಚಂದ್ರರ ಚಿತ್ರಗಳನ್ನು ಬರೆಯುತ್ತಾರೆ.

ಶುಭ್ರವಾಗಿಟ್ಟ ಕೊಟ್ಟಿಗೆಯಲ್ಲಿ ಅವುಗಳನ್ನು ಕಟ್ಟಿ, ಶೃಂಗರಿಸಿದ ಬಳಿಕ ತಯಾರಾದ ಅಡಿಗೆಯ 'ಹುಗ್ಗಿ-ಅನ್ನ'ವನ್ನು ನೈವೇದ್ಯ ಹಿಡಿದು, ಪೂಜಿಸಿ, ಆರತಿ, ಬೆಳಗುತ್ತಾರೆ. ನೈವೇದ್ಯಕ್ಕಾಗಿ ಮಾಡಿದ ಈ ಹುಗ್ಗಿಯೇ ಹೊನ್ನುಗ್ಗಿ ಎಂಬ ಹೆಸರನ್ನು ಪಡೆದಿದೆ. ಎತ್ತುಗಳಿಗೆ ಪೂಜೆ ಮಾಡಿದ ನಂತರ ಮನೆ ಮಂದಿಯೆಲ್ಲ ಸಿಹಿ ಊಟ ಮಾಡುವ ಪದ್ಧತಿ ಕಂಡು ಬರುತ್ತದೆ. 'ಕಾರಹಬ್ಬ' ಹಬ್ಬಗಳನ್ನು ಕರೆದುಕೊಂಡು ಬರುತ್ತದೆ; ಯುಗಾದಿ ಹಬ್ಬ ಹಬ್ಬಗಳನ್ನು ಉರಿದುಕೊಂಡು ಹೋಗುತ್ತದೆ'. ಎಂಬ ಪ್ರತೀತಿ ಈ ಬುಡಕಟ್ಟು ಜನಾಂಗದಲ್ಲಿದೆ "ಆದರೆ ಒಕ್ಕಲಿಗನಿಗೆ ಕಾರಹುಣ್ಣಿವೆಯೇ ಮಂಗಲ ಮಹೋತ್ಸವದ ಕಡೆಯ ದಿನವಾಗಿದೆ. ಜಾತ್ರೆ ಮೊದಲಾದ ಉತ್ಸವಗಳಾಗಲಿ, ಮದುವೆ ಮೊದಲಾದ ಮಂಗಲ ಕಾರ್ಯಗಳಾಗಲಿ ಈ ಹುಣ್ಣಿವೆಯಾದ ಮೇಲೆ ಬರುವುದಿಲ್ಲ. 'ಕಾರಹುಣ್ಣಿವೆಯಾದ ಮೇಲೆ ಕತ್ತೆ ಸಹ ಬಾಸಿಂಗ ಕಟ್ಟುವುದಿಲ್ಲ' ಎಂಬ ಮಾತನ್ನೂ ಅವನು ಆಡುವನು. ವಿಶೇಷ ಎಲ್ಲ ಸಂಪ್ರದಾಯಗಳು ಇಲ್ಲಿಗೆ ಕೊನೆಗೊಳ್ಳುತ್ತವೆ. ಅವನಿಗೆ ಮುಂದೆ ಬಿಡುವೇ ದೊರೆಯುವುದಿಲ್ಲ. ಮುಂಗಾರಿಯ ಮಳೆಯು ಆಗಲೇ ಆಂರಭವಾಗಿರಲು ಉತ್ತಿದ ಭೂಮಿಯನ್ನು ಹದಮಾಡಿ ಬಿತ್ತಿ ತನ್ನ

ಉದ್ಯೋಗದಲ್ಲಿ ನಿರತನಾಗುವನು". ಕೆಲವೊಂದು ಹಟ್ಟಿಗಳಲ್ಲಿ ರಂಟೆ, ಕುಂಟೆ, ಕೂರಿಗೆ, ಬಂಡಿ, ಬಿತ್ತುವ ಬೀಜ ಮೊದಲಾದ ಸಾಮಾಗ್ರಿಗಳನ್ನು ತೊಳೆದು ಪೂಜೆಮಾಡಿ ಕೃಷಿಯ ಆರಂಭಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾರೆ. ನಿಸರ್ಗ ಪ್ರಿಯರಾದ ಈ ಬುಡಕಟ್ಟು ಜನಾಂಗ ವ್ಯವಸಾಯದ ಉಪಕರಣಗಳು, ದನಕರುಗಳು, ಬಿತ್ತುವ ಬೀಜ ಮೊದಲಾದ ವಸ್ತುಗಳೆನ್ನಲ್ಲ ದೇವರೆಂದು ಭಾವಿಸಿ ವಿಶಿಷ್ಟ ಕಾಲದಲ್ಲಿ, ವಿಶಿಷ್ಟ ದಿನಗಳಲ್ಲಿಅವುಗಳನ್ನು ಪೂಜಿಸುವ ಪದ್ಧತಿ ಬೆಳೆಸಿಕೊಂಡು ಬಂದಿದ್ದಾರೆ.

ಕರಿ ಹರಿಯುವುದಾಗಲಿ, ಎತ್ತುಗಳನ್ನು ಮೆರವಣಿಗೆ ಮಾಡುವುದಾಗಲಿ, ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುವುದಿಲ್ಲ. ಈ ಹಬ್ಬದಲ್ಲಿ ಹೇಳಿಕೊಳ್ಳುವಂಥಹ ವಿಶೇಷತೆ ಏನೂ ಕಂಡು ಬರುವುದಿಲ್ಲ. ಎಷ್ಟೋಹಟ್ಟಿಗಳಲ್ಲಿ ಈ ಕಾರಹುಣ್ಣಿವೆ ಅಥವಾ ಕಾರಹಬ್ಬವನ್ನು ಆಚರಿಸುವುದಿಲ್ಲವಂತೆ.

೬.೩. ನಾಗರಪಂಚಮಿ

ಶ್ರಾವಣಮಾಸದಲ್ಲಿ ಬರುವ ನಾಗರಪಂಚಮಿ ಅಥವಾ ನಾಗಪ್ಪನಹಬ್ಬವನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬಹಳ ನಿಷ್ಠೆಯಿಂದ ಆಚರಿಸುತ್ತಾರೆ. ಮನೆಗೆ ಸುಣ್ಣ-ಉರಮಂಜು ಹಚ್ಚಿ, ನೆಲ ಕಾರಣೆ ಮಾಡಿ ಮಡಿಗೊಳಿಸುತ್ತಾರೆ. ಸರ್ವಚೇತನವಾದಿಗಳಾದ ಈ ಬುಡಕಟ್ಟು ಜನಾಂಗ 'ಹುತ್ತ' ಅಥವಾ 'ನಾಗರಕಲ್ಲು'ಗಳಿಗೆ ಆದಿನ ಒಂದೊತ್ತಿನಿಂದ ಪೂಜೆ ಸಲ್ಲಿಸುತ್ತಾರೆ. ಮೀಸಲು ಅಡಿಗೆ ಮಾಡಿ, ತಂಬಿಟ್ಟು, ಚಿಗುಳಿ, ನೆನೆಯಕ್ಕಿ, ನೆನೆಗಡಲೆ, ತೆಂಗಿನಕಾಯಿ, ಬಾಳೆಹಣ್ಣು, ಅಂಗನೂಲು, ಮತ್ತು ಹೊಸಕಣ (ವಸ್ತ್ರ) ಮೊದಲಾದ ಸಾಮಾನುಗಳನ್ನು ತೆಗೆದುಕೊಂಡು ಕುಂಟುಬ ಪರಿವಾರದೊಂದಿಗೆ 'ಹಟ್ಟಿ'ಯ ಸುತ್ತ-ಮುತ್ತ ಇರುವ 'ಹುತ್ತ'ದ ಹತ್ತಿರ ಹೋಗುತ್ತಾರೆ. ಹುತ್ತಕ್ಕೆ ಎಡೆಹಾಕಿ, ಕಾಯಿಒಡೆದು, ಹುತ್ತದ ಕೋಮೆಯಲ್ಲಿ ಮುತ್ತೈದೆಯರು ಮೂರು ಸಲ ತಂಬಿಟ್ಟಿನ, ಎಡೆಯನ್ನು ಹುತ್ತದ ಕೋಮೆಯಿಲ್ಲಿ ಇಳಿಬಿಡುತ್ತಾರೆ. ಈ ಹಬ್ಬದಲ್ಲಿ ಸಿಹಿ ಅಡಿಗೆ ಮಾಡಿದರೂ ಗೌಲಿ ಪಾಯಸ ಮಾಡುವುದಿಲ್ಲ, ಕಾರಣ ಗೌಲಿ ನಾಗರಪಂಚಮಿ ಆಕಾರ ಹೊಂದಿರುವುದರಿಂದ, ನಾಗರಹಾವಿನ ಮೇಲಿನ ಭಯವೇ ಈ ಸಂಪ್ರದಾಯಕ್ಕೆ ಮೂಲ ಪ್ರೇರಣೆಯಾಗಿರಬೇಕು.

ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದ ಬುಡಕಟ್ಟು ಜನಾಂಗದಲ್ಲಿ ಈ ಹಬ್ಬ ಹೆಚ್ಚು ಆಚರಣೆಯಲ್ಲಿದೆ. ಇದು "ದ್ರಾವಿಡರ ಹಬ್ಬ"ವೆಂದು ಹೆಸರಾಗಿದೆ. ಕರ್ನಾಟಕದ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಈ ಹಬ್ಬವನ್ನು ನಾಗರಪಂಚಮಿ, ನಾಗಪ್ಪನಹಬ್ಬ, ನಾಗಲಪ್ಪಪಂಡಗ, ನೋಮುನಪಂಡಗ ಎಂದು ಕರೆಯುತ್ತಾರೆ. ಈ ಹಬ್ಬದ ದಿವಸ ಹುತ್ತಪ್ಪ(ನಾಗಪ್ಪ)ನಿಗೆ ಪೂಜೆಮಾಡಿ, ಹಾಲು ಹೊಯ್ಯುವ ಸಂಪ್ರದಾಯ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಆಚರಣೆಯಲ್ಲಿದೆ. ಕೆಲವು ಬುಡಕಟ್ಟು ದೇವರುಗಳನ್ನು ಪ್ರಾಣಿಗಳ ರೂಪದಲ್ಲಿ ಆರಾಧಿಸುವುದುಂಟು, ಅದಕ್ಕಾಗಿ ಹಾವನ್ನು "ನಾಗದೇವರ" ರೂಪದಲ್ಲಿ ಪೂಜಿಸಲ್ಪಡುತ್ತಾರೆ. ಹಿರಿಯೂರು ತಾಲ್ಲೂಕು ಯರಬಳ್ಳಿ-ದೊಡ್ಡಗೊಲ್ಲರಹಟ್ಟಿಯ ಹಾಲುಕುಡಿದಸ್ವಾಮಿಯ ದೇವರ ಕಳ್ಳೆಪೌಳಿಯಲ್ಲಿ "ನಾಗಪ್ಪದೇವರ ಗುಬ್ಬ" ಕಂಡು ಬರುತ್ತದೆ.

ಹೊಸದಾಗಿ ಮದುವೆಯಾದ ಗಂಡು-ಹೆಣ್ಣು, ಗಂಡನ ಮನೆಯಲ್ಲಿ ಅದೇ ವರ್ಷ ಕಡ್ಡಾವಾಗಿ 'ನಾಗರಪಂಚಮಿ'

ಹಬ್ಬ ಆಚರಿಸಿ ಹುತ್ತಕ್ಕೆ ಹಾಲುಹೊಯ್ದು ಸುಖ ಭೋಜನ ಮಾಡುತ್ತಾರೆ. ಮದುವೆ ಮಂಗಳ ಕಾರ್ಯ, ಜಾತ್ರೆ, ಉತ್ಸವ, ಗುಗ್ಗರಿಹಬ್ಬ ಮೊದಲಾದ ಶುಭಕಾರ್ಯಗಳಲ್ಲಿ 'ಹುತ್ತ' ಅಥವಾ 'ನಾಗರಕಲ್ಲು'ಗಳಿಗೆ ಪೂಜೆ ಮಾಡುವ ಪದ್ಧತಿ ಬೆಳೆದುಕೊಂಡು ಬಂದಿದೆ. ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಹತ್ತಿರ ನಾಗ್ತಿಹಳ್ಳಿ ಕಟ್ಟೆಯಲ್ಲಿ; ಸಾಣೇಕೆರೆ ಕೆರೆಯ ಹಿಂಭಾಗ; ನಾಯಕನಹಟ್ಟಿ ಒಳಮಠದ ಮುಂಭಾಗ ಅರಳಿ ಮರದ ಹತ್ತಿರ, ಪಾವಗಡ ತಾಲ್ಲೂಕು ನಿಡಗಲ್ಲು ಬೆಟ್ಟದ ರಾಮತೀರ್ಥ ಹೊಂಡದ ಪಶ್ಚಿಮ ಭಾಗಕ್ಕೆ ಅನೇಕ ನಾಗರಕಲ್ಲುಗಳನ್ನು ನೋಡಬಹುದಾಗಿದೆ, ಈ ಎರಡು ಬುಡಕಟ್ಟು ಜನಾಂಗ ನಾಗರಹಾವು, ಹುತ್ತ, ನಾಗರಕಲ್ಲುಗಳಿಗೆ ವಿಶೇಷ ಮಹತ್ವ ಕೊಟ್ಟು 'ನಾಗರಹಾವು', ಪವಿತ್ರ ಪ್ರಾಣಿಯೆಂದು ಪೂಜಿಸುತ್ತಾರೆ. ಕೆಲವು ಹಟ್ಟಿಗಳಲ್ಲಿ 'ನಾಗಪ್ಪದೇವರು'ಗಳು ಕಂಡು ಬರುತ್ತವೆ. ನಾಗಮುರಿ ಬೆತ್ತ, ನಾಗಲಿಂಗ ನಾಗಾಭರಣ ನಾಗರಹೆಡೆ ಎಂಬ ವಸ್ತುಗಳು ಇವರ ದೇವಸ್ಥಾನ ಗಳಲ್ಲಿವೆ. ತಮ್ಮ ಮಕ್ಕಳಿಗೆ ನಾಗಪ್ಪ, ನಾಗರಾಜ, ನಾಗಲಿಂಗ, ನಾಗಮ್ಮ, ನಾಗಲಾಂಬಿಕೆ, ನಾಗವೇಣಿ, ನಾಗಿಣಿ ಮೊದಲಾದ ಹೆಸರುಗಳು ಈ ಜನಾಂಗಗಳಲ್ಲಿ ಬಳಕೆಯಲ್ಲಿವೆ. ಇವರ ಕುಲ, ಗೋತ್ರ, ಬಳಿ ಮತ್ತು ಬೆಡಗುಗಳಲ್ಲಿ ಹಾವಿಗೆ ಸಂಬಂಧಿಸಿದವುಗಳನ್ನು ಗುರುತಿಸಬಹುದಾಗಿದೆ.

ಸರ್ಪದೋಷ, ಹಾವಿನಕಾಟ, ಮಕ್ಕಳಿಗೆ ಕಿವಿ ಸೋರಿದರೆ, ಹುಣ್ಣಾದರೆ, ಪೋಟಾದರೆ, ನಾಗಪ್ಪಗೆ ಹರಕೆ ಹೊತ್ತು ಒಪ್ಪೊತ್ತಿನಿಂದ ಹುತ್ತಕ್ಕೆ ಪೂಜೆಸಲ್ಲಿಸುವುದು, ಬೆಳ್ಳಿಯ ನಾಗರಹೆಡೆ ಮಾಡಿಸಿ ದೇವರಿಗೆ ಕೊಡುವುದು, ಹುತ್ತದಲ್ಲಿ ಹಾಕುವುದು, ಹಾರನಕಣಿವೆ ರಂಗಪ್ಪಗೆ ಹುಳ ಮಾಡಿಸಿ ಕೊಟ್ಟು ಬರುವುದು, ಕೆಲವು ದೇವರ ಧೂಳ್ತ ಮತ್ತು ತೀರ್ಥ ತಂದು ಮನೆಯಲ್ಲಿಡುವ ಪದ್ಧತಿಗಳು ಈ ಜನಾಂಗದಲ್ಲಿವೆ.

ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ ಚಿತ್ರಲಿಂಗೇಶ್ವರ; ಹಿರಿಯೂರು ತಾಲ್ಲೂಕು ಮದ್ದನಕುಂಟೆ ಯರ್ರಪ್ಪಸ್ವಾಮಿ, ವದ್ದಿಕೆರೆ ಸಿದ್ದಪ್ಪ; ಹೊಸದುರ್ಗ ತಾಲ್ಲೂಕು ಹಾರನಕಣಿವೆ ರಂಗಪ್ಪ; ಹೇಮಾವತಿ ಹೆಂಜೇರಪ್ಪ; ಚಳ್ಳಕೆರೆ ತಾಲ್ಲೂಕು ಸಾಣೇಕೆರೆ ಚಿತ್ರದೇವರು, ಮೊದಲಾದ ದೇವರುಗಳ ಧೂಳ್ತ ಹಚ್ಚಿದರೆ ಎಂಥಹ ವಿಷಜಂತು ಕಡಿದರೂ ವಾಸಿಯಾಗುತ್ತದೆ ಎಂದು ಈ ಜನಾಂಗ ಬಲವಾಗಿ ನಂಬುತ್ತಾರೆ. ಚಿತ್ರಹಳ್ಳಿ ಚಿತ್ರಲಿಂಗೇಶ್ವರ ದೇವಸ್ಥಾನದಲ್ಲಿ ಧೂಳ್ತದ ಗುಂಡಿನೇ ಇದೆ, ಈ ಗುಂಡಿಯಲ್ಲಿರುವ ಧೂಳ್ತವನ್ನು ಹಚ್ಚಿದರೆ ಹೊಟ್ಟೆಯಲ್ಲಿ ಹಾಕಿದರೆ ಎಂಥಹ ಹಾವು, ಚೇಳು, ಮೊಂಡರಗೊಪ್ಪೆ, ಹುಚ್ಚುನಾಯಿ ಕಡಿತ ಯಾವುದೇ ವಿಷಜಂತುವಾದರು ವಾಸಿಯಾಗುತ್ತದೆಂದು ಈ ದೇವಸ್ಥಾನ ಪೂಜಾರಿ ಶ್ರೀ ರಂಗಪ್ಪ ನವರು ಹೇಳುತ್ತಾರೆ. ಕೆಲವೊಂದು ದೇವರ ಧೂಳ್ತ ಮತ್ತು ತೀರ್ಥ ಬೆರಸಿ ಕಿವಿಯಲ್ಲಿ ಹಾಕಿದರೆ ಅಥವಾ ತಿಂದರೆ ಕಿವಿ ನೊವು ವತ್ತು ಸೋರುವುದು ನಿಲ್ಲುತ್ತದೆ ಎಂದು ಬಹುಪಾಲು ವಕ್ತೃಗಳ ಅಭಿಪ್ರಾಯವಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಬಹುಪಾಲು ದೇವಸ್ಥಾನದ ಕಂಭ, ತೊಲೆ, ಬಾಗಿಲು, ಗೋಡೆ, ಕಲ್ಲಿನ ದೀಪಸ್ತಂಭ, ದೇವರ ಆಭರಣಗಳು, ಪಲ್ಲಕ್ಕಿ, ಬೆತ್ತ, ಪ್ರಭಾವಳಿ ಮೊದಲಾದ ಕಡೆ ನಾಗರಹಾವಿನ ಚಿತ್ರಗಳೇ ಹೆಚ್ಚು ಕಂಡು ಬರುತ್ತವೆ. ದೇವಸ್ಥಾನದಲ್ಲಿ ದೇವರ ಆಭರಣಗಳಿಗೆ; ನೆಲದಲ್ಲಿ, ಕೋಟೆ ಕೊತ್ತಲುಗಳಲ್ಲಿ ಹೂತಿಟ್ಟ ನಿಧಿಗಳಿಗೆ; ಕಲ್ಲಿನಲ್ಲಿ ಕೆತ್ತಿದ ದೇವರ ಶಾಸನಗಳಿಗೆ ಸರ್ಪ ಕಾವಲಿರುತ್ತದೆಂದು ಹತ್ತಾರು ಕಥೆಗಳನ್ನೇ

ಸೃಷ್ಟಿಸಿ ಹೇಳುತ್ತಾರೆ. ಕಾಕತಲೀಯವೆಂಬತೆ ನಾವು ಸಂಶೋಧನ ಕ್ಷೇತ್ರಕಾರ್ಯಕ್ಕೆ ಹೋದಾಗ ದಿನಾಂಕ: ೧೩.೦೬. ೨೦೦೧ ರಂದು ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಹತ್ತಿರ ಮುಮ್ಮಡಿಸಾಗರದ 'ಅಡ್ಲಟ್ಟೆ ಭೂತಪ್ಪ'ನ ಹತ್ತಿರ ಮತ್ತು ದಿನಾಂಕ: ೧೮.೦೯.೨೦೦೧ ರಂದು ಹೊಳಲ್ಕೆರೆ ತಾಲ್ಲೂಕು ದೇವರ ಗಂಜಿಗಟ್ಟೆ ಗಾದರಿಪಾಲನಾಯಕ ದೇವಸ್ಥಾನದ ಹತ್ತಿರ ನಾಗರಹಾವು ಹೆಡೆ ಬಿಚ್ಚಿ ಆಡುತ್ತಿದ್ದನ್ನು ನಾವೇ ಕಣ್ಣಾರೆ ಕಂಡು ಬಂದಿದ್ದೇವೆ.

ಬುಡಕಟ್ಟು ದೇವರುಗಳಿಗೆ ಮತ್ತು ನಾಗರಹಾವುಗಳಿಗೆ ಪರಸ್ಪರ ಸಂಬಂಧಗಳಿವೆ. ಚಳ್ಳಕೆರೆ ತಾಲ್ಲೂಕು ಗೋರ್ಲಕಟ್ಟೆಯ ಹತ್ತಿರ ಇರುವ ಜಗಲೂರು ಪಾಪನಾಯಕ ದೇವಸ್ಥಾನದಲ್ಲಿ ಹಾವಿನ ಹುತ್ತಕ್ಕೆ ಕರಿಕಂಬಳಿ ಹೊದಿಸಿ, ಹುತ್ತದ ಕೋಮೆಯಲ್ಲಿ ಬೆಳ್ಳಿಯ ಛತ್ರಿ, ಕತ್ತಿ, ಕಠಾರಿ, ಚೂರಿ ಮೊದಲಾದ ದೇವರ ಪರಿಕರಗಳನ್ನು ಹುತ್ತದಲ್ಲಿ ಸಿಕ್ಕಿಸಿ, 'ಜಗಲೂರಜ್ಜನ ಗುಡಿ' ಎಂದು ಪ್ರಖ್ಯಾತಿ ಹೊಂದಿ ಬಹುಸಂಖ್ಯೆಯ ಭಕ್ತರನ್ನು ಆಕರ್ಷಿಸುವ ಧಾರ್ಮಿಕ ಕೇಂದ್ರವಾಗಿದೆ. ಜಗಲೂರಿನಲ್ಲಿಯು ಕೂಡ ಈತನ ಸಮಾಧಿಯ ದೇವಸ್ಥಾನವಿದೆ. ಆಂಧ್ರಪ್ರದೇಶದ ಆದಿವಾಸಿಗಳಾದ ಅಡವಿಚೆಂಚರು, ಸುಡುಗಾಡುಸಿದ್ಧರು ಮತ್ತು ಬುಡುಬುಡುಕೆ ಜನಾಂಗದವರು ಶಾಸ್ತ್ರಹೇಳುವ 'ತಾಳೆಗರಿ ಹೊತ್ತಿಗೆ'ಗಳಲ್ಲಿ ಬಹುಪಾಲು ನಾಗರಹಾವಿನ ಚಿತ್ರಗಳೇ ಹೆಚ್ಚು ಕಾಣಸುತ್ತವೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಆಚರಿಸುವ 'ನಾಗಪ್ಪನಹಬ್ಬ'ದ ವೈಶಿಷ್ಟತೆ ಪ್ರಕೃತಿ ಆರಾಧನೆಯನ್ನು ತೋರಿಸುತ್ತದೆ. ನಾಗರಹಾವು ವಿಷ ಜಂತುವೆಂದು ತಿಳಿದು ಅದನ್ನು ಒಡೆಯುವುದಾಗಲಿ, ಕೊಲ್ಲುವುದಾಗಲಿ ಇವರಲ್ಲಿ ನಿಷಿದ್ಧ. ಆಕಸ್ಮಿಕವಾಗಿ ನಾಗಾರಹಾವುಗಳಿಗೆ 'ಅರಪೆಟ್ಟು' ಮಾಡಿದರೆ, ಅದು ಹನ್ನೆರಡು ವರ್ಷಗಳಾದರೂ ನಮ್ಮ ಮೇಲೆ ದ್ವೇಷವನ್ನು ಇಟ್ಟುಕೊಂಡು ಕಚ್ಚದೆ ಬಿಡುವುದಿಲ್ಲ ಎಂದು ಹಟ್ಟಿಯ ಹಲವು ಹಿರಿಯರ ಅನುಭವ. ಆಕಸ್ಮಿಕವಾಗಿ ನಾಗರಹಾವುಗಳನ್ನು ಕೊಂದರೆ, ಕೊಂದಂಥ ವ್ಯಕ್ತಿ ಹಾವಿನ ಬಾಯಲ್ಲಿ ನಾಣ್ಯ (ಕಾಸು-ಹಣ) ಇಟ್ಟು ಸುಡುವ ಪದ್ಧತಿಯಿದೆ. ನಾಗರಹಾವು ದಾರಿಯಲ್ಲಿ ಅಡ್ಡಬಂದರೆ ನಾವು ಹೋಗುವ ಕೆಲಸ ಆಗುವುದಿಲ್ಲವೆಂದು ಪ್ರಯಾಣವನ್ನು ಮುಂದೂಡುತ್ತಾರೆ. ಆದರೆ ಕನಸಿನಲ್ಲಿ ನಾಗರಹಾವು, ಹುತ್ತ, ನಾಗರಕಲ್ಲುಗಳು, ಹೆಡೆ ಬಿಚ್ಚಿ ಆಡುತ್ತಿರುವುದು ಕಂಡರೆ ಶುಭ ಲಕ್ಷಣವೆಂದು ಭಾವಿಸುತ್ತಾರೆ.

ಈ ಎರಡೂ ಜನಾಂಗದ ದೇವಸ್ಥಾನ ಗುಬ್ಬಗಳಲ್ಲಿ ಮೂರು, ಐದು, ಏಳು ಮತ್ತು ಒಂಬತ್ತು ನಾಗರಹೆಡೆ ಇರುವ ಹಿತ್ತಾಳೆ ಅಥವಾ ಬೆಳ್ಳಿಯ ಪ್ರಭಾವಳಿಯನ್ನು ದೇವರ ಹಿಂಭಾಗ ಎದ್ದು ಕಾಣುವಂತೆ ಇಟ್ಟಿರುತ್ತಾರೆ. ಕಾಡುಗೊಲ್ಲರು ನಮ್ಮ ದೇವರ 'ಗಣೆ'ಗಳಿಗೆ ನಾಗರಹೆಡೆ ಇರುವ ಬೆಳ್ಳಿಕಟ್ಟನ್ನು ಹಾಕಿಸಿರುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೈವ ಅಹೋಬಲ ನರಸಿಂಹಸ್ವಾಮಿಯನ್ನು 'ಶೇಷಶಯನ' ಎಂದು ಕರೆಯುತ್ತಾರೆ. ಈ ದೇವರ ಪ್ರತಿಯೊಂದು ಪ್ರಭಾವಳಿಯಲ್ಲಿ, ಫೋಟೋ ಚಿತ್ರಗಳಲ್ಲಿ ಒಂಭುತ್ತು ಹೆಡೆಯ ಪ್ರಭಾವಳಿ ಅಥವಾ ಸರ್ಪವನ್ನು ಕಾಣಬಹುದು. ಒಟ್ಟಾರೆ ಈ ಎರಡೂ ಬುಡಕಟ್ಟು ಜನಾಂಗದವರು ನಾಗರಪಂಚಮಿ ಅಥವಾ ನಾಗಪ್ಪನ ಹಬ್ಬವನ್ನು ತಪ್ಪದೆ ಆಚರಿಸುವ ಪದ್ಧತಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುತ್ತದೆ.

೬.೪. ಮಾರಮ್ಮನ ಹಬ್ಬ

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಭಾದ್ರಪದ ಮಾಸದಲ್ಲಿ ಈ ಮಾರಮ್ಮನ ಹಬ್ಬವನ್ನು ಮತ್ತು ಆಚರಿಸುತ್ತಾರೆ. ಚಳ್ಳಕೆರೆಯಿಂದ ೨೯ ಕಿ.ಮೀ. ದೂರದ ಗೌರಸಮುದ್ರದಲ್ಲಿ ಮಾರಮ್ಮನ ಪ್ರಮುಖ ಧಾರ್ಮಿಕ

ಕೇಂದ್ರವಿದೆ. ಕಾಡುಗೊಲ್ಲರ ಎತ್ತಪ್ಪ ಜುಂಜಪ್ಪ ಮೊದಲಾದ ದೇವರ ಕಥೆಗಳಲ್ಲಿ ಗೌರಸಂದ್ರ ಮಾರಕ್ಕ, ಯರಬಳ್ಳಿ ಮಾರಕ್ಕ, ಬೇವಿನಹಳ್ಳಿ ಕರಿಯಮ್ಮ ಮೊದಲಾದ ಶಕ್ತಿ ದೇವತೆಗಳ ಪ್ರಸ್ತಾಪವಿದೆ. ಭಾದ್ರಪದ ಮಾಸದ ಮೊದಲನೆ ಮಂಗಳವಾರ ಗೌರಸಮುದ್ರದಲ್ಲಿ ಮಾರಮ್ಮನ ಹಬ್ಬ ಆಚರಿಸಿದ ನಂತರ ಉಳಿದೆಲ್ಲ ಕಡೆಯೂ ಅವರವರ ಅನುಕೂಲಕ್ಕೆ ತಕ್ಕಂತೆ ಒಂದು ಮಂಗಳವಾರ ಮಾರಮ್ಮನ ಹಬ್ಬ ಆಚರಿಸುತ್ತಾರೆ.

ನವಶಕ್ತಿಯರಲ್ಲಿ ಯಲ್ಲಮ್ಮ, ಮಾರಿ, ಅಂಕಾಲಮ್ಮ, ಪೀಡಾರಿ, ಭದ್ರಕಾಳಿ, ದುರ್ಗೆ, ಚಾಮುಂಡಿ, ಪೂರ್ಣಾ, ಪುಷ್ಕಲಾ ಎಂಬ ಒಂಭತ್ತು ಶಕ್ತಿಗಳ ಸ್ವರೂಪವೇ 'ಆದಿಶಕ್ತಿ'. ಈ ನವ ಶಕ್ತಿದೇವತೆಯಲ್ಲಿ ಮಾರಿ ಅಥವಾ ಮಾರಮ್ಮ ಒಬ್ಬಳು. ಮಕ್ಕಳಿಗೆ ದಡಾರ, ಸಿಡುಬು, ತೊಟ್ಟು, ಗೊಬ್ಬರ, ಅಮ್ಮ ಮೊದಲಾದ ಮಾರಕ ರೋಗಗಳಿಂದ ರಕ್ಷಿಸಿಕೊಳ್ಳಲು, ಮಾರಮ್ಮಗೆ ಹರಕೆ ಹೊತ್ತು ಮಾರಿಜಾತ್ರೆ ಅಥವಾ ಮಾರಮ್ಮನ ಗುಡಿಯ ಹತ್ತಿರ ಬೇವಿನ ಸೀರೆ ಉಟ್ಟು, ಹಿಟ್ಟಿನಾರತಿ ತಲೆಯ ಮೇಲೆ ಹೊತ್ತು ದೇವಿಗುಡಿಯನ್ನು ಪ್ರದಕ್ಷಿಣೆ ಹಾಕಿಸುತ್ತಾರೆ. ಮಾರಮ್ಮಗೆ ಅರಿಶಿಣ, ಕುಂಕುಮ, ಹಣ್ಣು, ಕಾಯಿ ಕೊಟ್ಟು ಆರತಿ ಬೆಳಗುತ್ತಾರೆ. ಮತ್ತೊಂದು ಕಡೆ ಗಂಡಸರು ಗಂಡುಗೊಡಲಿ ಅಥವಾ ಮಚ್ಚು ಕೈಯಲ್ಲಿಡಿದು, ಕುರಿ ಮೇಕೆಗಳನ್ನು ಎಳೆದು ತಂದು ಮಾರಿ ಗುಡಿಯ ಮುಂದೆ ಬೇಟೆ ಕಡಿದುಕೊಂಡು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಬ್ಯಾಟೆ ಕಡಿಯುವ ಹಕ್ಕು 'ಊರಿನ ತಳವಾರ'ನಿಗೆ ಸೇರಿದ್ದರಿಂದ, ಬ್ಯಾಟೆ ಕಡಿಯುವ ವಿಷಯವಾಗಿ ಅನೇಕ ಸಂಘರ್ಷಗಳು ಉಂಟಾಗುತ್ತವೆ. ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಗಂಜಿಗುಂಟಮ್ಮನ ಜಾತ್ರೆಯಲ್ಲಿ ಮೊದಲು ದೇವರ ಪೂಜಾರಿಯು ಬ್ಯಾಟೆ ಕಡಿದ ಮೇಲೆ, ಹಟ್ಟಿ ಗೌಡನ ಬ್ಯಾಟೆಕಡಿಯುತ್ತಾರೆ. ನಂತರ ಗ್ರಾಮಸ್ಥರು ಬ್ಯಾಟೆ ಕಡಿದು ಕೊಳ್ಳುತ್ತಾರೆ.

ಕೆಲವೊಂದು ಮಾರಿ ಗುಡಿಯಲ್ಲಿ 'ಹೆಂಡ'ವನ್ನು 'ಘಟೆ'ಯೆಂದು ನೈವೇದ್ಯವಾಗಿ ಅರ್ಪಿಸುವ ಮತ್ತು ಘಟೆಪೂಜೆ ಮಾಡುವ ಪದ್ಧತಿ ಕಂಡುಬರುತ್ತದೆ. ಈ ಹೆಂಡ ಹೆಂಡ ತುಂಬಿದ ಮಣ್ಣಿನ ಗಡಿಗೆಗೆ ಘಟೆ ಎಂದು ಭಾವಿಸಿ ಬಹಳ ಭಯ ಭಕ್ತಿಯಿಂದ 'ಘಟೆಹೊತ್ತು' ದೇವಿಗೆ ತಂದೊಪ್ಪಿಸುವ ಕೆಲವು ಕುಟುಂಬಗಳನ್ನು ಕಾಣಬಹುದು.

ಕುರಿ ಅಥವಾ ಮೇಕೆಯನ್ನು ಮಾರಮ್ಮಗೆ ಬಲಿಕೊಟ್ಟು ಬ್ಯಾಟೆಯನ್ನು ಹೊತ್ತು ಮನೆ ಕಡೆಗೆ ಹೋಗುವ ಬೇಡ ಮತ್ತು ಗೊಲ್ಲರ ಸಡಗರ ಮತ್ತು ಉತ್ಸಾಹವೇ ಅವರ ಮೂಲ ಬೇಟೆ ವೃತ್ತಿಯ ನೆನಪು ಮರುಕಳಿಸುತ್ತದೆ. ಎಂಥಹ ಬಡವರಾದರೂ ಈ ಜಿಲ್ಲೆಯಲ್ಲಿ ಮಾರಮ್ಮನ ಹಬ್ಬ ಮತ್ತು ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಚಳ್ಳಕೆರೆ ಮತ್ತು ಮೊಳಕಾಲ್ಮುರು ತಾಲ್ಲೂಕಿನ ಕೆಲವೊಂದು ಮ್ಯಾಸಬೇಡ ಮತ್ತು ಕಾಡುಗೊಲ್ಲರು ಒಂದೊಂದು ಕುಂಟುದಲ್ಲಿ ಮೂರು-ನಾಲ್ಕು ಬ್ಯಾಟೆ ಕಡಿದು ಮಾಂಸದೂಟ ಮಾಡಿದ ಘಟನೆಗಳು ಕಂಡುಬಂದಿವೆ.

ಗೌರಸಂದ್ರ ಮಾರಮ್ಮ, ಬೇವಿನಹಳ್ಳಿ ಕರಿಯಮ್ಮ, ಯರಬಳ್ಳಿ ಮಾರಕ್ಕ, ಗೊಲ್ಲಾಳಮ್ಮ, ಬೇನಾಳಮ್ಮ, ಖಂಡೇನಹಳ್ಳಿ ಕರಿಯಮ್ಮ, ಕುಕ್ಕಲಾಟಮ್ಮ, ದಡ್ಡುಮಾರಮ್ಮ, ಕಂಪಳಮಾರಮ್ಮ, ಊರುಮಾರಮ್ಮ, ಕಟ್ಟೆಮಾರಕ್ಕ ಮೊದಲಾದ ಶಕ್ತಿದೇವತೆಗಳಿಗೆ ಕುರಿ, ಮೇಕೆ, ಕೋಳಿ, ಕೋಣಗಳನ್ನು ಬಲಿ ಕೊಡುವ ಪದ್ಧತಿ ಇದ್ದರೂ, ಮ್ಯಾಸಬೇಡ ಮತ್ತು ಕಾಡುಗೊಲ್ಲರು ಮಾತ್ರ ಕುರಿ ಮತ್ತು ಮೇಕೆಗಳನ್ನು ಮಾತ್ರ ಬಲಿಕೊಟ್ಟು ಅದರ

ಮಾಂಸವನ್ನು ಅಡಿಗೆ ಮಾಡಿ ಊಟಮಾಡುತ್ತಾರೆ. ದಕ್ಷಿಣ ಭಾರತದಲ್ಲಿ ನವದುರ್ಗೆಯರ ಆರಾಧನ ಪದ್ಧತಿ ಹೆಚ್ಚು ಕಂಡು ಬರುತ್ತದೆ. “ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಲ್ಲಿ ಆದಿಶಕ್ತಿಗೆ ದುರ್ಗಿ, ಭಗವತಿ ಎಂಬ ರೂಪ ಬಳಕೆಯಲ್ಲಿದೆ. ಈಕೆಯನ್ನು ‘ಕಂದಳಿ’ ಎಂದು ಯುದ್ಧದೇವತೆ ಎಂದು ಕರೆಯುತ್ತಾರೆ. ಇಲ್ಲಿ ಆದಿವಾಸಿ ಬುಡಕಟ್ಟುಗಳ ಜನರು ಯುದ್ಧಕ್ಕೆ ಹೋಗುವ ಮೊದಲು, ಯುದ್ಧದಿಂದ ಹಿಂದಿರುಗಿದ ಮೇಲೆ ಈಕೆಯನ್ನು ನರ್ತನದಿಂದ, ಸಂಗೀತದಿಂದ ಪೂಜಿಸುತ್ತಿದ್ದರು”.[೫] ಚಳ್ಳಕೆರೆ ತಾಲ್ಲೂಕಿನಲ್ಲಿ ಬರುವ ಗೌರಸಂದ್ರ ಮಾರಮ್ಮನ ಹಬ್ಬ ಮತ್ತು ಜಾತ್ರೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಬಹಳ ಮುಖ್ಯವಾದ ಹಬ್ಬವಾಗಿದೆ.

೬.೫. ದಸರಾಹಬ್ಬ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ದಸರಾಹಬ್ಬ ಬಹಳ ಮಹತ್ವ ಪಡೆದು ಕೊಂಡಿದೆ. ವಿಜಯದಶಮಿಯೆಂದು ತಮ್ಮ ದೇವರುಗಳನ್ನು ಬನ್ನಿಮರ (ಶಮೀವೃಕ್ಷ)ದ ಹತ್ತಿರ ತೆಗೆದುಕೊಂಡು ಹೋಗಿ, ದೇವರ ಪರಿಕರಗಳನ್ನು, ಬಿಲ್ಲು, ಬಾಣ, ಕತ್ತಿ, ಕಠಾರಿ ಮೊದಲಾದ ಆಯುಧಗಳನ್ನು ಬನ್ನಿಮರದ ಬುಡಕ್ಕೆ ಇಟ್ಟು ಪೂಜೆಮಾಡಿದ ನಂತರ ದೇವರ ಪೂಜಾರಿ ಶಮೀವೃಕ್ಷಕ್ಕೆ ಮೂರು ಸಾರಿ ಅಂಬು (ಬಾಣ) ಹೊಡೆಯುತ್ತಾನೆ. ಚಳ್ಳಕೆರೆ ತಾಲ್ಲೂಕು ಸಾಣೀಕೆರೆಯ ಮ್ಯಾಸಬೇಡರ ದೇವತೆಯಾದ ಗಂಜಿಗುಂಟಮ್ಮ (ಕರಿಯಮ್ಮ) ಮತ್ತು ಕುರುಬರ ದೇವತೆಯಾದ ಏಕನಾಥೇಶ್ವರಿ ಎರಡು ದೇವತೆಗಳನ್ನು ಸೇರಿಸಿ ದಸರಾಹಬ್ಬ ಆಚರಿಸುತ್ತಾರೆ. ಗಂಜಿಗುಂಟಮ್ಮನ ಪೂಜಾರಿ ಮತ್ತು ಏಕನಾಥೇಶ್ವರಿ ಪೂಜಾರಿಗಳಿಬ್ಬರೂ ಶಮೀವೃಕ್ಷಕ್ಕೆ ಪೂಜೆಮಾಡಿ ಅಂಬು ಹೊಡೆಯುವ ಸಂಪ್ರದಾಯ ಈ ಗ್ರಾಮದಲ್ಲಿ ಕಂಡುಬರುತ್ತದೆ.

ವಿಜಯದಶಮಿಯ “ಈ ಹಬ್ಬಕ್ಕೆ ಬಹಳ ಬುನಾದಿಯ ಪರಂಪರೆಯು ಉಂಟೆದು ಪುರಾಣಳಲ್ಲಿ ಬರುವುದು. ಅಜ್ಞಾತವಾಸಕ್ಕೆ ಹೋದ ಪಾಂಡವರು ಅದನ್ನು ಮುಗಿಸಿಕೊಂಡು ಶಮೀವೃಕ್ಷದಲ್ಲಿಟ್ಟು ತಮ್ಮ ಶಸ್ತ್ರಾಸ್ತ್ರಗಳನ್ನು ಇಳುವಿ ಕೊಂಡ ದಿನವಿದು. ಅಂತೆಯೇ ಈಗಲೂ ಜನರು ಶಸ್ತ್ರಾಸ್ತ್ರಗಳಿನ್ನು ಮೆರೆಸುತ್ತ ಬನ್ನಿಯ ಮುಡಿದು, ಊರ ಸೇರುವರು. ವನವಾಸಕ್ಕೆ ಹೋದ ಪಾಂಡವರು ಶಸ್ತ್ರಾಸ್ತ್ರಧಾರಿಗಳಾಗಿ ಅಂದೇ ಊರನ್ನು ಸೇರಿದರೆಂದು ಒಂದು ಪೌರಣಿಕ ಕಥೆಯೂ ಉಂಟು”. ಬನ್ನಿಮರಕ್ಕೆ ಅಂಬು ಹೊಡೆದ ನಂತರ ದೇವರ ಉತ್ಸವ ಮೂರ್ತಿಗಳನ್ನು ಊರಲ್ಲಿ ಅಥವಾ ಹಟ್ಟಿಯಲ್ಲಿ ಮೆರವಣಿಗೆ ಮಾಡಿ, ಆರತಿ, ಬೆಳಗುವ ಸಂಪ್ರದಾಯ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ. ಹೊಸದುರ್ಗ ತಾಲ್ಲೂಕು ಹಾರನಕಣಿವೆ ರಂಗಪ್ಪ, ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ ಚಿತ್ರಲಿಂಗೇಶ್ವರ, ಹಿರಿಯೂರು ತಾಲ್ಲೂಕು ನಂದಿಹಳ್ಳಿ ರಂಗಪ್ಪ ಮತ್ತು ಹಿರಿಯೂರು ತೇರುಮಲ್ಲೇಶ್ವರನ ಸರಪಳಿ ಹರಿಯುವುದು, ಚಿತ್ರದುರ್ಗ ಪಾಳೆಯಗಾರರ ಮನೆದೇವತೆಯಾದ ಉಚ್ಚಂಗಮ್ಮ ಅಥವಾ ಉತ್ಸವಾಂಬೆ, ಚಳ್ಳಕೆರೆ ತಾಲ್ಲೂಕು ಸಾಣೀಕೆರೆ ಗಂಜಿಗುಂಟಮ್ಮ, ಕಾಪರಹಳ್ಳಿ ಕಾಟಮ್ಮಲಿಂಗೇಶ್ವರ, ಚಳ್ಳಕೆರೆ ಚಳ್ಳಕೆರಮ್ಮದೇವಿ, ಗೊರ್ಲತ್ತು ಮಾರಕ್ಕ ಮೊದಲಾದ ದೇವರುಗಳ ಅಂಬು ಚಿತ್ರದುರ್ಗ ಜಿಲ್ಲೆಯಲ್ಲಿ ಬಹಳ ಹೆಸರಾಗಿವೆ. ದಸರಾ ಹಬ್ಬದಲ್ಲಿ ಶಮೀವೃಕ್ಷಕ್ಕೆ ಅಂಬು ಹೊಡೆಯುವ ಪದ್ಧತಿಗೆ “ಬನ್ನಿಮುಡಿಯುವುದು” ಎಂದು ಕರೆಯುತ್ತಾರೆ.

ದಸರಾ ಹಬ್ಬದ ಮಹಾನವಮಿ ದಿನ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹಿರಿಯರಹಬ್ಬ ಮತ್ತು ಆಯುಧ

ಪೂಜೆ ಎರಡೂ ಹಬ್ಬಗಳನ್ನು ಏಕಕಾಲದಲ್ಲಿ ಆಚರಿಸುತ್ತಾರೆ. ಅಂದು ಕೆಲವರು ಕುರಿ, ಮೇಕೆಗಳನ್ನು ಬಲಿಕೊಟ್ಟು ಮಾಂಸಾಹಾರದ ಎಡೆ ಹಾಕುತ್ತಾರೆ. ಹಿರಿಯರ ಹಬ್ಬ ಮತ್ತು ಆಯುಧ ಪೂಜೆಗೆ ವಿಶೇಷ ಮಹತ್ವ ಕೊಡುವ ಈ ಬುಡಕಟ್ಟು ಜನಾಂಗ ಇತರೆ ಹಬ್ಬಗಳಿಗೆ ಅಷ್ಟಾಗಿ ಮಹತ್ವಕೊಡುವುದಿಲ್ಲ. ಇತರ ಜಾತಿ ಜನಾಂಗದವರಂತೆ ಉಳಿದ ಹಬ್ಬಗಳನ್ನು ಹಳ್ಳಿಗಳಲ್ಲಿ ಆಚರಿಸುತ್ತಾರೆ.

ಭಾರತದ ಯಾವುದೇ ಬುಡಕಟ್ಟು ಜನಾಂಗದ ಹಬ್ಬಗಳು ಹೀಗೆ ಆಚರಿಸುತ್ತಾರೆ ಎಂದು ನಿರ್ಧಿಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ. ಅವರವರ ಆರ್ಥಿಕ ಪರಿಸ್ಥಿತಿಯ ಮೇಲೆ ಹಬ್ಬ ಅವಲಂಬಿಸಿರುತ್ತದೆ. ಹೊಸಬಟ್ಟೆ ಇಲ್ಲದೇ ಸಡಗರ ಸಂಭ್ರಮಗಳಿಲ್ಲದೆ ಹಬ್ಬ ಮಾಡುವ ಜನರೂ ಹಟ್ಟಿಯಲ್ಲಿದ್ದಾರೆ; ಅದ್ದೂರಿಯಾಗಿ ಹಬ್ಬ ಆಚರಿಸುವ ಮಂದಿಯೂ ಹಟ್ಟಿಗಳಲ್ಲಿ ಕಂಡು ಬರುತ್ತಾರೆ. ಆದ್ದರಿಂದ ಅವರವರ ಅನುಕೂಲಕ್ಕೆ ತಕ್ಕಂತೆ ದಸರಾಹಬ್ಬವನ್ನುಆಚರಿಸುವ ಪದ್ಧತಿ ಈ ಬುಡಕಟ್ಟುಗಳಲ್ಲಿ ಕಂಡು ಬರುತ್ತದೆ.

೬.೬. ಹಿರಿಯರ ಹಬ್ಬ

ಅಶ್ವೀಜ ಮಾಸದ ಮಹಾನವಮಿಯೊಂದು ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹಿರಿಯರಹಬ್ಬವನ್ನು ಆಚರಿಸುತ್ತಾರೆ. ಕೆಲವೊಂದು ಹಟ್ಟಿಗಳಲ್ಲಿ ಯುಗಾದಿ, ದಸರ ಮತ್ತು ಗಂಡು ಮಕ್ಕಳಿಗೆ ಮದುವೆ ಸಂದರ್ಭದಲ್ಲಿಯು ಕೂಡ ಹಿರಿಯರಹಬ್ಬ ಮಾಡುತ್ತಾರೆ ಇದನ್ನೇ ದೇವರಊಟ ಎಂದು ಕರೆಯುತ್ತಾರೆ. ಬುಹುಹಿಂದೆ ವೃದ್ಧರಾಗಿ ಸತ್ತವರು ದೇವರುಗಳ ಸಾಲಿನಲ್ಲಿ ಸೇರುತ್ತಾರೆಂಬ ನಂಬಿಕೆಯಿಂದ ಸತ್ತವರ ಮೂರ್ತಿ ಅಥವಾ ಫೋಟೋಗಳನ್ನು ಮಾಡಿಸಿ ಮನೆಗಳಲ್ಲಿ ಇಟ್ಟು ಪೂಜಿಸುವ ಪದ್ಧತಿ ಇತ್ತಂತೆ. ಆದರೆ ಈಗ ಈ ಎಲ್ಲಾ ಪದ್ಧತಿ ಕಡಿಮೆಯಾಗಿ, ಸತ್ತವರ ಹೆಸರಿನಲ್ಲಿ ತಾಮ್ರ, ಕಂಚು ಅಥವಾ ಹಿತ್ತಾಳೆ ಚಂಬು ಮತ್ತು ಮಣ್ಣಿನ ಕುಂಭವನ್ನು 'ಅಜ್ಜ-ಅಜ್ಜಿ'ಯೆಂದು ಭಾವಿಸಿ, ತಾಮ್ರದ ಚಂಬು ಗಂಡೆಂದು; ಮಣ್ಣಿನ ಕುಂಭ ಹೆಣ್ಣೆಂದು ಭಾವಿಸಿ, ನಿಧಿಯಾಕಿ (ಧ್ಯಾನ) ಗದ್ದಿಗೆ ಮಾಡಿ, ನೀರು ತುಂಬಿಟ್ಟು ಚಂಬನ್ನು ಬಲಭಾಗಕ್ಕೆ ಕುಂಭವನ್ನು ಎಡಭಾಗಕ್ಕೆ ಇಟ್ಟು, ಅವುಗಳ ಕಂಠಕ್ಕೆ ಅಂಗನೂಲಿನ ಕಂಕಣಕಟ್ಟಿ, ಕುಂಭ ಮತ್ತು ಚಂಬುಗಳ ಮೇಲಿನ ಬಾಯಿಗೆ ವೀಳ್ಯೆದೆಲೆ ಮತ್ತು ತೆಂಗಿನಕಾಯಿಯನ್ನು ಜೋಡಿಸಿ "ಕುಂಭ ಕಳಸ" ತಯಾರಿಸಿ ಹೊಸಬಟ್ಟೆ ಮತ್ತು ಒಡವೆಗಳನ್ನು ತೊಡಿಸುತ್ತಾರೆ. ಅವರು ಜೀವಂತ ವಾಗಿದ್ದಾಗ ಬಳಸುತ್ತಿದ್ದ ಬಿಲ್ಲು, ಬಾಣ, ಭರ್ಚಿ, ಕತ್ತಿ, ಕಠಾರಿ, ಬಾಕು, ಗಂಡುಗೊಡಲಿ, ಉಳಿ, ಬಾಳಿಸಿ, ಕೊಡಲಿ, ಕುಡುಗೋಲು ಮೊದಲಾದ ಆಯುಧಗಳನ್ನು ಅವುಗಳ ಪಕ್ಕ ಇಡುತ್ತಾರೆ. ಎಲೆ, ಅಡಿಕೆ, ತಂಬಿಟ್ಟು, ತೆಂಗಿನಕಾಯಿ, ಬಾಳೆಹಣ್ಣು, ಹಬ್ಬಕ್ಕೆ ಮಾಡಿದ ಮೀಸಲು ಅಡಿಗೆಯ ಹುಗ್ಗಿ, ಅನ್ನ, ಸಾರು, ಮೊದಲಾದ ಆಹಾರ ಪದಾರ್ಥಗಳನ್ನು ಎಡೆ ಹಾಕುತ್ತಾರೆ. ಅಜ್ಜ-ಅಜ್ಜಿ ಜೀವಂತವಾಗಿದ್ದಾಗ ಬಳಸುತ್ತಿದ್ದ ವಸ್ತುಗಳು, ತಿನ್ನುತ್ತಿದ್ದ ಆಹಾರ ಪದಾರ್ಥಗಳನ್ನು 'ಹಿರಿಯರ' ಪೂಜೆಗೆ ಇಡುವ ಪದ್ಧತಿ ಕಂಡು ಬರುತ್ತದೆ. ಎಲೆ, ಅಡಿಕೆ, ಹೊಗೆಸೊಪ್ಪು, ಹೊಗೆಪುಡಿ, ಬೀಡಿ, ಬಂಗಿ, ಹಣ, ಬೆಳ್ಳಿ, ಬಂಗಾರ ಸಿಹಿ ತಿನುಸುಗಳನ್ನು ಇಟ್ಟು ಕಳಸಹೂಡಿ, ಪೂಜೆಮಾಡಿ ಧೂಪ ಹಾಕುತ್ತಾರೆ.

ಸತ್ತು ಹೋದ ಆತ್ಮಗಳು ಆದಿನ ರಾತ್ರಿ ಮನೆಗೆ ಬಂದು (ಅಜ್ಜ-ಅಜ್ಜಿ) ಅವರಿಗೆ ಇಷ್ಟವಾದ ಪದಾರ್ಥಗಳನ್ನು ತಿಂದು, ತಾಂಬೂಲ ಹಾಕಿಕೊಂಡು ಹೋಗುತ್ತಾರೆ ಎಂಬ ನಂಬಿಕೆ ಈ ಎರಡು ಬುಡಕಟ್ಟುಗಳಲ್ಲಿ

ಕಂಡು ಬರುತ್ತದೆ. ದಸರ ಹಬ್ಬದಲ್ಲಿ ಹಿರಿಯರಹಬ್ಬ ಆಚರಿಸಿದರೆ ಯುಗಾದಿ ಹಬ್ಬದಲ್ಲಿ ಸತ್ತವರ ಸಮಾಧಿಗೆ ಎಡೆ ಹಾಕಿ, ಹೊಸಬಟ್ಟೆ ಏರಿಸಿಕೊಂಡು ಬರುತ್ತಾರೆ. ಇದನ್ನು 'ಅಜ್ಜ-ಅಜ್ಜಿ' ಗುಡ್ಡೆಗೆ ಹೋಗಿ ಬರುವುದು ಎಂದು ಕರೆಯುತ್ತಾರೆ. ಆದರೆ ಚಳ್ಳಕೆರೆಯ ಕೆಲವೊಂದು ಮ್ಯಾಸಬೇಡರ ಮನೆಗಳಲ್ಲಿ ವರ್ಷಕ್ಕೆ ಎರಡು ಬಾರಿ ಅಂದರೆ ದಸರ ಮತ್ತು ಯುಗಾದಿ ಹಬ್ಬದಲ್ಲಿ ಹಿರಿಯರ ಹಬ್ಬಮಾಡುತ್ತಾರೆ. ಹಿರಿಯರಿಗೆ ಇಟ್ಟಿದ್ದ ಚಂಬು ಮತ್ತು ಕುಂಭದ ಕೆಳಗೆ ಹಾಕಿದ್ದ ನಿಧಿ(ಧಾನ್ಯ)ಯನ್ನು ಮರುದಿನ ಬೆಳಿಗ್ಗೆ ಬರುವ ಕಾಡುಗೊಲ್ಲರ ದಾಸಯ್ಯಗೆ ಭಿಕ್ಷೆ ನೀಡುತ್ತಾರೆ.

ಆದಿ ಅನಾದಿಕಾಲದಿಂದಲು 'ಆತ್ಮವಾದ'ದ ನಂಬಿಕೆಯನ್ನು ಬೆಳಸಿಕೊಂಡು, ದೇವರು, ಧರ್ಮ, ಹಿರಿಯರ ಹಬ್ಬ ಮತ್ತು ಪೂಜಾ ಪದ್ಧತಿಗಳು ಅಸ್ತಿತ್ವಕ್ಕೆ ಬಂದಿವೆ. ಭೂತಪ್ರೇತಗಳ ಭಯದಿಂದಲೇ ಧರ್ಮವು ಹುಟ್ಟಿಕೊಂಡಿದೆ. ಎಂಬುದಾಗಿ ಹರ್ಬರ್ಟ್ ಸ್ಪೆನ್ಸರ್ ತಿಳಿಸಿದ್ದಾನೆ. "ಪೂರ್ವಜರ ಪ್ರೇತಗಳು ಅತಿಮಾನವ ಶಕ್ತಿಗಳನ್ನು ಹೊಂದಿದ್ದು ಮಾನವ ವ್ಯವಹಾರಗಳನ್ನು ಹಾಗೂ ನೈಸರ್ಗಿಕ ವಿದ್ಯಾಮಾನಗಳನ್ನು ಏರು-ಪೇರು ಮಾಡುವ ಶಕ್ತಿಯನ್ನು ಹೊಂದಿರುತ್ತವೆಂದೂ ನಂಬಲಾಗಿದೆ. ಈ ನಂಬಿಕೆಯಿಂದಾಗಿ ಆದಿಮಾನವರು ಈ ಪ್ರೇತಾತ್ಮಗಳು ತಮ್ಮ ಪರವಾಗಿ ವರ್ತಿಸುವಂತೆ ನೋಡಿಕೊಳ್ಳ ಬೇಕಾದ್ದರ ಅಗತ್ಯ ತಲೆದೋರಿತು. ಮಹಾನ್ ಶಕ್ತಿಶಾಲಿಗಳಾಗಿದ್ದ ಆದಿವಾಸಿ ನಾಯಕರುಗಳನ್ನು ಅವರು ಸತ್ತು ಹೋದ ನಂತರ 'ಮಹಾನ್ ಪ್ರೇತಾತ್ಮ'ವೆಂದು ದೇವತ್ವಕ್ಕೇರಿಸಿ ಪೂಜಿಸುವ ಕ್ರಮವು ಬೆಳೆದು ಬಂದಿತು. ದೇವರ ಮೇಲಿನ ನಂಬಿಕೆಯು ಈ ರೀತಿಯಲ್ಲಿಯೇ ಬೆಳೆದು ಬಂದಿತು ಎನ್ನುವುದು ಸ್ಪೆನ್ಸರ್‌ನ ಅಭಿಮತ. ಪ್ರೇತಾತ್ಮದ ಮೇಲಿನ ನಂಬಿಕೆಗೆ ಸಂಗತವೆನಿಸುವಂತೆ ಹಿಂದುಗಳಲ್ಲಿ ಇಂದಿಗೂ 'ಶ್ರಾದ್ಧ' ಕರ್ಮವನ್ನು ಆಚರಿಸಿ ಸತ್ತ ಪಿತೃಗಳನ್ನು ತೃಪ್ತಿಪಡಿಸುವ ಆಚರಣಾ ಕ್ರಮ ಮುಂದುವರಿದುಕೊಂಡು ಬಂದಿದೆ".[೭] ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿಸರ್ವಚೇತನವಾದ ಮತ್ತು 'ವಸ್ತು ಪೂಜಾವಾದ' ಈ ಎರಡು ಪದ್ಧತಿಗಳು ಕಂಡು ಬರುತ್ತವೆ.

೬.೭. ದೀಪಾವಳಿ

'ಹಬ್ಬಗಳ ರಾಜ' ಎಂದು ಕರೆಯುವ ದೀಪಾವಳಿ ಹೆಸರಿಗೆ ತಕ್ಕಂತೆ ಬೆಳಕಿನ ಹಬ್ಬ. ಆಶ್ವೀಜ ಹಾಗೂ ಕಾರ್ತಿಕ ಮಾಸಗಳ ಸಂಧಿಸ್ಥಾನದಲ್ಲಿ ದೀಪಾವಳಿ ಹಬ್ಬ ಬರುತ್ತದೆ. ಶ್ರೀ ಕೃಷ್ಣನು ಲೋಕಕಂಟಕನಾದ ನರಕಾಸುರನನ್ನು ಸಂಹರಿಸಿ ನೆನಪಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಉತ್ತರ ಭಾರತದಲ್ಲಿ ದೀಪಾವಳಿ ಹಬ್ಬವನ್ನು ಶ್ರೀರಾಮನ ಪಟ್ಟಾಭಿಷೇಕದ ದಿನವೆಂದು ಪರಿಗಣಿಸುತ್ತಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ದೀಪಾವಳಿ ಹಬ್ಬವನ್ನು ಆಚರಿಸುತ್ತಾರೆ. ಈ ದಿನ ದನ ಕರುಗಳಿಗೆ ಮೈತೊಳೆದು, ಯಾವುದಾದರೂ ಎರಡು ಎತ್ತುಗಳಿಗೆ ಕೊಂಬು ಜೀವಿ, ಬಣ್ಣಹಚ್ಚಿ, ಗಗ್ಗರಿ, ಕೊಡಣಸು, ಹಣೆಪಟ್ಟಿ, ಜೂಲ್ ಹಾಕಿರುತ್ತಾರೆ. ಬಿದಿರು ಮತ್ತು ಹೂಲಿ ಕಡ್ಡಿಗಳಿಂದ ಕಲಾತ್ಮಕವಾಗಿ ತಯಾರಿಸಿದ ಸುಮಾರು ಎರಡರಿಂದ ಐದಾರು ಅಡಿ ಎತ್ತರವಿರುವ ಬಣ್ಣ ಬಣ್ಣದ ಕಾಗದ ಹೂವುಗಳಿಂದ ಅಲಂಕರಿಸಿದ 'ಗುಮ್ಮಟ'ವನ್ನು ಎತ್ತಿನ ಕೊಂಬುಗಳಿಗೆ ಕಟ್ಟಿರುತ್ತಾರೆ. ಚಂಡು ಮತ್ತು ಸೇವಂತಿಗೆ ಹೂವಿನ ಸರಗಳನ್ನು ಎತ್ತಿನ ಮೈಮೇಲೆ ಹಾಕುತ್ತಾರೆ.

ಸಂಜೆಯಾಗುತ್ತಿದ್ದಂತೆ ಹಟ್ಟಿಯ ಎಲ್ಲರ ಮನೆಯ ಎತ್ತುಗಳನ್ನು ಸಿಂಗಾರಮಾಡಿಕೊಂಡು ಹಟ್ಟಿಹುದಿ ಅಥವಾ ಊರ ಮುಂದಕ್ಕೆ ಬಂದು ಸೇರುತ್ತದೆ. ಸಕಲ ವಾದ್ಯ ವೈಭವದೊಂದಿಗೆ ಹಟ್ಟಿಯ ಜನರೆಲ್ಲರೂ ಎತ್ತುಗಳೊಂದಿಗೆ "ಈಡು" ಸುಡುವ ಹತ್ತಿರ ಹೋಗುತ್ತಾರೆ. ಅಲ್ಲಿ ಊರದನ ಕಾಯುವರು ಅಥವಾ ಊರಿನ ತಳವಾರರು ಮುಳ್ಳು ಕಳ್ಳೆಯನ್ನು ರಾಶಿಹಾಕಿ ಎತ್ತರವಾಗಿ ಬಿಟ್ಟಿರುತ್ತಾರೆ. ಇದನ್ನೇ 'ಈಡು' ಎಂದು ಕರೆಯುತ್ತಾರೆ. ಈ 'ಈಡು'ವಿನ ಎದುರು ಒಂದೆರಡು ಕಲ್ಲಿನ ಬೆನವಗಳನ್ನಿಟ್ಟು, ಚಿಕ್ಕ ಕಲ್ಲಿನ ಗುಡಿ ಕಟ್ಟಿರುತ್ತಾರೆ. ಈಡಿನ ಹತ್ತಿರ ಹಟ್ಟಿಯ ಎತ್ತುಗಳು ಹೋದಾಗ ಅಲ್ಲಿ ಇಟ್ಟ ಬೆನವಗಳಿಗೆ ರಾಗಿಮುದ್ದೆ ಬದನೆಕಾಯಿ ಬಜ್ಜಿ ಎಡೆ ಹಾಕಿ ಪೂಜೆ ಮಾಡಿದ ನಂತರ ಗ್ರಾಮದ ಆಯಾಗಾರರೆಲ್ಲರು ಮತ್ತು ಅಲ್ಲಿ ಸೇರಿದ ಕೆಲವು ವ್ಯಕ್ತಿಗಳು ಊಟ ಮಾಡಿದ ನಂತರ ಈಡುವಿಗೆ ಬೆಂಕಿಹಚ್ಚಿ, ಎತ್ತುಗಳನ್ನು ಪ್ರದಕ್ಷಿಣೆ ಹಾಕಿಸಿ, ಉರಿಯುತ್ತಿರುವ ಈಡಿನಲ್ಲಿ ಒಂದೊಂದು ಕಲ್ಲು ಎಸೆದು ಮನೆಗೆ ಬರುತ್ತಾರೆ.

ಮನೆಯ ಹತ್ತಿರ ಎತ್ತುಗಳಿಗೆ ಆರತಿಮಾಡಿ ಬಲಗಾಲು ಮುಂದಿಟ್ಟು ಬರುವಂತೆ ಎತ್ತುಗಳನ್ನು ಮನೆಯ ಒಳಗೆ ಕರೆದು ಕೊಳ್ಳುತ್ತಾರೆ. ಬಲಗಾಲು ಮುಂದಿಟ್ಟು ಎತ್ತು ಒಳಗೆ ಬಂದರೆ ಶುಭ ಲಕ್ಷಣವೆಂದು ಮ್ಯಾಸಬೇಡ ಮತ್ತು ಕಾಡುಗೊಲ್ಲರು ನಂಬುತ್ತಾರೆ. ಪಟಾಕ್ಷಿ ಒಡೆಯುವ ಪ್ರವೃತ್ತಿ ಇತ್ತೀಚೆಗೆ ಬಂದಿದೆ, ಮೊದಲು ನಮ್ಮ ಹಟ್ಟಿಗಳಲ್ಲಿ ಪಟಾಕ್ಷಿ ಒಡೆಯುವ ಪದ್ಧತಿ ಇರಲಿಲ್ಲವೆಂದು ಹಲವು ಹಿರಿಯ ವಕ್ತೃತಗಳ ಅಭಿಪ್ರಾಯವಾಗಿದೆ. ಇತ್ತೀಚೆಗೆ ಮನೆಯ ಬಾಗಿಲಲ್ಲಿ ಮಣ್ಣಿನ ದೀಪ ಹಚ್ಚಿಡುವುದು, ಅಣ್ಣ-ತಮ್ಮಗಳಿಗೆ ಆರತಿ ಮಾಡುವ ಸಂಪ್ರದಾಯಗಳು ಬೆಳೆಯುತ್ತಿವೆ. ಇದಕ್ಕೆ ಮೂಲ ಕಾರಣಗಳೆಂದರೆ ಗ್ರಾಮೀಣ ಮತ್ತು ನಗರ ಸಂಸ್ಕೃತಿಗಳ ಪ್ರಭಾವದಿಂದಾಗಿ ಈ ಎರಡೂ ಬುಡಕಟ್ಟುಗಳಲ್ಲಿ ಆಧುನಿಕ ಪ್ರವೃತ್ತಿಗಳು ಕಾಣಿಸಿಕೊಳ್ಳುತ್ತಿವೆ.

ಚಳ್ಳಕೆರೆ ತಾಲ್ಲೂಕು ವಡೇರಹಳ್ಳಿಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ದೀಪಾವಳಿ ಹಬ್ಬದಲ್ಲಿ ಹಿರಿಯರ ಹಬ್ಬ ಮಾಡುತ್ತಿದ್ದರಂತೆ, ಆದರೆ ಈಗ ದಸರಾಹಬ್ಬದಲ್ಲಿ ಹಿರಿಯರ ಹಬ್ಬಮಾಡುತ್ತಿದ್ದಾರೆ. ಈ ಎರಡೂ ಬುಡಕಟ್ಟು ಸಮುದಾಯಗಳಲ್ಲಿ ಯಾವುದೇ ಹಬ್ಬದಲ್ಲಿಯಾಗಲಿ, ವಿಶೇಷ ಪೂಜಾ ಪದ್ಧತಿಗಳು ಕಂಡು ಬರುವುದಿಲ್ಲ. ಅತ್ಯಂತ ಸರಳ ಪೂಜಾ ವಿಧಾನಗಳನ್ನು ಅನುಸರಿಸುತ್ತಾರೆ.

೬.೮. ಗುಗ್ಗರಿಹಬ್ಬ

ಮಾಘಮಾಸದಲ್ಲಿ ಆಚರಿಸುವ 'ಕಾಳೆಹಬ್ಬ'ವನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರು 'ಗುಗ್ಗರಿಹಬ್ಬ'ವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ಬುಡಕಟ್ಟು ಜನಾಂಗ ಹಟ್ಟಿಯಿಂದ ಹೊರಗೆ ತಾತ್ಕಾಲಿಕವಾಗಿ ಬೆರಗು ಅಥವಾ ಕಳ್ಳೆಪೌಳಿ ಕಟ್ಟಿ ಅದರ ಮಧ್ಯೆ ಹಂಚಿಹುಲ್ಲಿನ ಗುಡಿಸಲು ಕಟ್ಟಿ ಅದರಲ್ಲಿ ದೇವರಿಟ್ಟು ಹಬ್ಬದ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಹಟ್ಟಿಯ ಮಧ್ಯೆ ಇರುವ ದೇವಸ್ಥಾನದ ಪೌಳಿಯಲ್ಲಿ ಶಿವರಾತ್ರಿಯ ದಿನವೇ ಗುಗ್ಗಿರಿಹಬ್ಬ ಮಾಡುತ್ತಾರೆ. ಚಳ್ಳಕೆರೆ ತಾಲ್ಲೂಕು ಹಿರೇಹಳ್ಳಿ ದಡ್ಡಿಸೂರನಾಯಕ ದೇವರ ಗುಗ್ಗರಿಹಬ್ಬವಾದ ನಂತರವೇ ಉಳಿದೆಲ್ಲ ಮ್ಯಾಸಬೇಡರ ಗುಗ್ಗರಿಹಬ್ಬಗಳು ನಡೆಯುತ್ತವೆ. ಒಂದೊಂದು ಸಮುದಾಯದ ಬೆಡಗಿನ ಅಣ್ಣತಮ್ಮಂದಿರು ತಮ್ಮ ಹೊಲ-ಗದ್ದೆಗಳಲ್ಲಿ ಬೆಳದ ಹೊಸ ದವಸ ಧಾನ್ಯಗಳನ್ನು ಅದರಲ್ಲೂ 'ಹುರುಳಿ' ಮತ್ತು

'ಅಕ್ಕಿ'ಯನ್ನು ಬಹಳ ಭಯ ಭಕ್ತಿಯಿಂದ ತಂದು ದೇವರಿಗೆ ಒಪ್ಪಿಸುತ್ತಾರೆ. ದೇವರ ಪೌಳಿಯಲ್ಲಿ ಹುರುಳಿಕಾಳಿಗೆ ಉಪ್ಪುಹಾಕದೆ ಗುಗ್ಗಿರ ಬೇಯಿಸಿ, ತಳಿಗೆ ಅನ್ನಮಾಡಿ ದೇವರಿಗೆ ಎಡೆ ಹಾಕುತ್ತಾರೆ. ದೇವರಿಗೆ ಎಡೆ ಅಥವಾ ನೈವೇದ್ಯಕ್ಕೆ ಬೆಲ್ಲ, ಬಾಳೆಹಣ್ಣು, ಹಾಲು ಮತ್ತು ಮೊಸರನ್ನು ವಿಶೇಷವಾಗಿ ಬಳಸುತ್ತಾರೆ.

ಈ ಎರಡು ಬುಡಕಟ್ಟು ಜನಾಂಗದ ಕೆಲವು ಕುಟುಂಬಗಳಲ್ಲಿ ತಾವು ಬೆಳೆದ ಹೊಸ 'ಹುರುಳಿ'ಯನ್ನು ದೇವರಿಗೆ ಕೊಡುವವರಿಗೂ ಅಥವಾ ಅವರ ದೇವರ ಗುಗ್ಗರಿಹಬ್ಬ ಮಾಡುವ ತನಕ ಅವರು ಹುರುಳಿಯನ್ನು ತಿನ್ನವುದಿಲ್ಲ ಮತ್ತು ಬೇರೆಯವರಿಗೆ ಕೊಡುವುದಿಲ್ಲ. ಚಳ್ಳಕೆರೆ ತಾಲ್ಲೂಕು ಸಾಣೀಕೆರೆಯ ಅಡ್ನಟ್ಟಿ ಮ್ಯಾಸಬೇಡರು, ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಯ ಗುಗ್ಗರಿಹಬ್ಬ ಆಚರಿಸುವ ತನಕ ತಾವು ಬೆಳೆದ ಹೊಸ ಹುರುಳಿಕಾಳನ್ನು ಅಡಿಗೆಗೆ ಬಳಸುವುದಿಲ್ಲ ಮತ್ತು ಯಾರಿಗೂ ಕೊಡುವುದಿಲ್ಲ. ಈ ಪದ್ಧತಿಯನ್ನು 'ಹುರುಳಿ ಬತ' ಎಂದು ಕರೆಯುತ್ತಾರೆ.

ಗಂಗೆಪೂಜೆಯೊಂದಿಗೆ ಗುಗ್ಗರಿಹಬ್ಬ ಆರಂಭಿಸಿ ನಂತರ ಅವರವರ ಸಂಪ್ರದಾಯ ಮತ್ತು ನಂಬಿಕೆಗೆ ತಕ್ಕಂತೆ ಹಬ್ಬವನ್ನು ಆಚರಿಸುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ ಮ್ಯಾಸಬೇಡರ ಗುಗ್ಗರಿಹಬ್ಬದಲ್ಲಿ ಕಾಡುಗೊಲ್ಲರು; ಕಾಡುಗೊಲ್ಲರ ಗುಗ್ಗರಿಹಬ್ಬದಲ್ಲಿ ಮ್ಯಾಸಬೇಡರು ಭಾಗವಹಿಸುವ ಪದ್ಧತಿ ಕಂಡು ಬರುತ್ತದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಈ ಗುಗ್ಗರಿಹಬ್ಬವನ್ನು ಹಲವು ಕಡೆ ಹಲವು ರೀತಿ ಆಚರಿಸುತ್ತಾರೆ. ಅಂಥವುಗಳಲ್ಲಿ ಚಳ್ಳಕೆರೆ ತಾಲ್ಲೂಕ ಹಿರೇಹಳ್ಳಿ ದಡ್ಡಿಸೂರನಾಯಕ, ಬೋರೇದೇವರಹಟ್ಟಿ, ಬೋರೇದೇವರು, ದೇವರ ಮರಿಕುಂಟೆ ಅಹೋಬಲ ನರಸಿಂಹಸ್ವಾಮಿ, ಬೊಂಬೇರಳ್ಳಿ ಗಾದರಿಪಾಲನಾಯಕ ಮತ್ತು ಓಬಳದೇವರು, ಸಾಣೀಕೆರೆ ಚಿತ್ರದೇವರು, ಸೂರನಹಳ್ಳಿ ಕದರಿನರಸಿಂಹ, ಕಾಟಪ್ಪನ ಹಟ್ಟಿ ಎತ್ತಪ್ಪ ಮತ್ತು ರಂಗನಾಥಸ್ವಾಮಿ; ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಕಂಪಳರಂಗನಾಥಸ್ವಾಮಿ, ಬೊಮ್ಮಗೊಂಡನ ಕೆರೆ ಗಾದರಿಪಾಲನಾಯಕ; ಹೊಳಲ್ಕೆರೆ ತಾಲ್ಲೂಕು ದೇವರ ಗಂಜಿಗಟ್ಟೆ, ಕಂಪಳನರಸಿಂಹಸ್ವಾಮಿ, ಚಿತ್ರಹಳ್ಳಿ ಚಿತ್ರಲಿಂಗೇಶ್ವರ; ಹಿರಿಯೂರು ತಾಲ್ಲೂಕು ಹರ್ತಿಕೋಟೆ ಓಬಳದೇವರು, ಯರಬಳ್ಳಿ ದೊಡ್ಡಗೊಲ್ಲರಹಟ್ಟಿ ಹಾಲುಕುಡಿದಸ್ವಾಮಿ, ನಂದಿಹಳ್ಳಿ ರಂಗಪ್ಪ, ಕೂಡಲಹಳ್ಳಿ ಪಾತೇಲಿಂಗೇಶ್ವರ; ಚಿತ್ರದುರ್ಗ ತಾಲ್ಲೂಕು ಹುಣಸೆಕಟ್ಟೆ ಅಲಕೋಬಳ ದೇವರು, ಕೂಡ್ಲಿಗೆ ತಾಲ್ಲೂಕು ಮಾಕನಡುಕು ಕಂಚೋಬಳ ನರಸಿಂಹಸ್ವಾಮಿ, ಮೊದಲಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರುಗಳಿಗೆ ಗುಗ್ಗರಿಹಬ್ಬ ಮಾಡುತ್ತಾರೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಬಹಳ ಹೆಸರಾದ ಗುಗ್ಗರಿಹಬ್ಬಗಳೆಂದರೆ.

೬.೮.೧. ದೇವರಮರಿಕುಂಟೆ ಗುಗ್ಗರಿ ಹಬ್ಬ : ಚಳ್ಳಕೆರೆಯಿಂದ ಸುಮಾರು ೧೫ ಕಿ.ಮೀ. ದೂರದ ಪೂರ್ವ ಆಗ್ನೇಯಕ್ಕೆ ದೇವರಮರಿಕುಂಟೆಯಲ್ಲಿ ಅಹೋಬಲ ನರಸಿಂಹಸ್ವಾಮಿಯ ಗುಗ್ಗರಿಹಬ್ಬವನ್ನು ಮ್ಯಾಸಬೇಡರು ಆಚರಿಸುತ್ತಾರೆ. ಮಾಘಮಾಸದ ಭಾರತ ಹುಣ್ಣಿಮೆಯಾಗಿ ಮರುದಿನವೇ ಅಹೋಬಲ ನರಸಿಂಹಸ್ವಾಮಿಯನ್ನು ದೇವರಮರಿಕುಂಟೆಯಿಂದ ದಕ್ಷಿಣಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದ ನಲ್ಲೂರಹಳ್ಳಿ-ಗೊಲ್ಲರಹಟ್ಟಿಯ ಹತ್ತಿರ ವೇದಾವತಿ ನದಿಯಲ್ಲಿ ಗಂಗೆಪೂಜೆ ಮಾಡುಕೊಂಡು, ದೇವರಮರಿಕುಂಟೆಯಿಂದ ಸುಮಾರು ಒಂದು ಕಿ.ಮೀ. ದೂರದ ದಕ್ಷಿಣ ನೈಋತ್ಯಕ್ಕೆ ಕೆರೆದಂಡೆಯಲ್ಲಿ ಅಂದರೆ ಹೊರಗಳ ಗುಡಿಯ ಹತ್ತಿರ, ಕಾಡುಗೊಲ್ಲರೆ ಕಟ್ಟಿದ ಕಳ್ಳಿಪೌಳಿ ಮತ್ತು ಹಂಚಿ ಗುಡಸಲಿನಲ್ಲಿ ದೇವರಿಟ್ಟು ಎಲ್ಲ ಅಣ್ಣ ತಮ್ಮಗಳು ಸೇರಿ ಗುಗ್ಗರಿಹಬ್ಬ ಆಚರಿಸುತ್ತಾರೆ.

ಅದೇ ದಿನ ರಾತ್ರಿ ಅಣ್ಣತಮ್ಮಂದಿರು, ಭಕ್ತಾದಿಗಳು ತಂದಿದ್ದ ಅಕ್ಕಿ ಹುರುಳಿಯನ್ನು ಕರಿಕಂಬಳಿ ಗದ್ದುಗೆ ಹಾಕಿ ಸೇರಿನಿಂದ ಅಳೆಯುತ್ತಾರೆ. ನಂತರ ರಾತ್ರಿಯೆಲ್ಲ ಅಕ್ಕಿ ಹುರುಳಿ ಬೇಯಿಸಿ ಅಡಿಗೆ ಮಾಡುತ್ತಾರೆ. ಮಾರನೆಯ ದಿನ ಬೆಳಿಗ್ಗೆ ನರಸಿಂಹಸ್ವಾಮಿ, ಓಬಳದೇವರು, ಗುಲೋಬಮ್ಮ, ತಿಮ್ಮಪ್ಪ ಮತ್ತು ನಾಗ್ತಿಹಳ್ಳಿ ಕಟ್ಟೆಯಲ್ಲಿರು ದೇವರುಗಳಿಗೆ 'ಗುಗ್ಗರಿ ಹೊಯ್ಯು' ಎಡೆ ಹಾಕಿದ ನಂತರ ಬಿಲ್ಲುಗೂಡಿನ ಪೂಜೆಗೆ ಸಿದ್ಧತೆ ಮಾಡಿಕೊಳ್ಳುತ್ತಾರೆ.

ದೇವರಮರಿಕುಂಟೆ ಗುಗ್ಗರಿಹಬ್ಬದ ಪ್ರಮುಖ ಆಕರ್ಷಣೆಯ ಎರಡನೆ ಘಟ್ಟವೇ ಬಿಲ್ಲುಗೂಡು. ಕಳ್ಳಿಪೌಳಿಯ ದೇವಸ್ಥಾನದ ಮುಂಭಾಗವೇ ಬಿಲ್ಲುಗೂಡಿನ ಪೂಜೆಗಾಗಿ ಎರಡು ದೊಡ್ಡ ಭೂತನಾಲಿಗೆಗಳನ್ನು (ಹಲಿಗೆ) ಇಟ್ಟಿರುತ್ತಾರೆ. ಇವೆರಡರ ಮಧ್ಯೆ ಬಾಣಗಳನ್ನು ನಿಲ್ಲಿಸಿ ಬೇಟೆಸೊಪ್ಪು, ಹೊಂಬಾಳೆ ಸೇರಿಸಿ ಕೆಂಪು ಬಟ್ಟೆಯಿಂದ ಭೂತನಾಲಿಗೆಗಳ ಹಿಂಭಾಗದ ಮಧ್ಯಕ್ಕೆ ಗೂಡು ಕಟ್ಟುತ್ತಾರೆ. ಭೂತನಾಲಿಗೆಗಳ ಮುಂದೆ ಶಂಖ, ಜಾಗಟೆ, ಬವನಾಸಿ, ಗೂಡಿನಗಂಟೆ, ಗರುಡಗಂಭ, ಮುಂತಾದ ದೇವರ ಪರಿಕರಗಳಿಟ್ಟು ತಳಿಗೆ ಮಾಡಿದ ಅನ್ನ ಮತ್ತು ಹುರುಳಿ ಗುಗ್ಗರಿಯನ್ನು ಭೂತನಾಲಿಗೆ ಎಡೆ ಹಾಕುತ್ತಾರೆ. ಭೂತನಾಲಿಗೆಗಳ ಸುತ್ತ ಸುಮಾರು ಹತ್ತು ಅಡಿ ಅಂತರದಲ್ಲಿ ಮಡಿವಾಳರು ಮಡಿ ಬಟ್ಟೆಗಳನ್ನು ಮಡಿಕೆ ಮಾಡಿ ನಾಲ್ಕು ದಿಕ್ಕುಗಳಿಗೂ ಉದ್ದವಾಗಿ ಹಾಸಿ ಅದರ ಮೇಲೆ ೧೦೧ ಎಡೆ ಮತ್ತು ಅಷ್ಟದಿಕ್ಪಾಲಕರಿಗೆ ಸುತ್ತ ಎಂಟು ಮೊಸರನ್ನ ಮತ್ತು ಹುರಳಿ ಗುಗ್ಗರಿ ಎಡೆಹಾಕಿ ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ.

ಪೂಜೆಗೆ ಇಟ್ಟಿರುವ ಭೂತನಾಲಿಗೆಗಳಿಗೆ ಎದುರಾಗಿ ಸುಮಾರು ಇಪ್ಪತ್ತು ಅಡಿ ಅಂತರದಲ್ಲಿ ಎರಡು ಭಾಗದಲ್ಲಿ ಸ್ವಲ್ಪ ನೆಲವನ್ನು ತಗ್ಗುಮಾಡಿ ಕರಿಕಂಬಳಿ ತೆರೆ ಕಟ್ಟಿಕೊಂಡು ಯಾರಿಗೂ ಕಾಣದಂತೆ, ಬಾಳೆಎಲೆಗಳನ್ನು ಹಾಸಿ ಹೊಸ ಮಣ್ಣಿನ ಮಡಿಕೆಯಲ್ಲಿ ಮಾಡಿದ (ತಳಿಗೆ) ಅನ್ನವನ್ನು ಈ ಬಾಳೆಎಲೆಯಲ್ಲಿ ಹಾಕಿ, ಹಾಲು, ಮೊಸರು, ತುಪ್ಪ, ಬೆಲ್ಲ, ಬಾಳೆಹಣ್ಣುಗಳನ್ನು ಒಟ್ಟಿಗೆ ಕಲಿಸಿ ಆ ಎರಡು ದೊಡ್ಡೆಡೆಯ ಮೇಲೆ ಮತ್ತೇ ಬಾಳೆ ಎಲೆಯನ್ನು ಮುಚ್ಚಿ, ಕಟ್ಟಿದ ಕಂಬಳಿ ತೆರೆಯನ್ನು ತೆಗೆಯುತ್ತಾರೆ.

ಈ ದೊಡ್ಡೆಡೆಯ ಮುಂಭಾಗದಲ್ಲಿ ಇಬ್ಬರು ದಾಸಯ್ಯಗಳು ನಾಮ ಬಳಿದು ಕೊಂಡು, ಕೆಂಪುವಸ್ತ್ರ ತಲೆಯ ಮೇಲೆ ಹೊದ್ದುಕೊಂಡು ದೊಡ್ಡೆಡೆಯ ಮುಂದೆ ಕುಳಿತುಕೊಳ್ಳುತ್ತಾರೆ. ದೇವರಪೂಜೆಯೊಂದಿಗೆ ಮತ್ತೊಬ್ಬ ದಾಸಯ್ಯ ಜಾಗಟೆ ಬಡಿದು ತಿರುಮಂತ್ರ ಹೇಳಿ ದೇವರನ್ನು ಕೊಂಡಾಡಿದ ನಂತರ ಶಂಖ, ಜಾಗಟೆ, ಉರುಮೆ ಮೊದಲಾದ ವಾದ್ಯಗಳು ಹರ್ಷೋದ್ಗಾರವಾಗಿ ಮೊಳಗುತ್ತಿರುವಾಗ ದಾಸಯ್ಯಗಳ ತಲೆಯ ಮೇಲಿನ ಕೆಂಪುವಸ್ತ್ರ ತೆಗೆಯುತ್ತಾರೆ. ಆಗ ದಾಸಯ್ಯಗಳು ಬೇಟೆ ಎಲೆಯಲ್ಲಿಟ್ಟ ಬೆಲ್ಲದ ತುಂಡನ್ನು ಬಾಯಲ್ಲಿ ಕಚ್ಚಿ ತಿಂದು, ಭೂತನಾಲಿಗೆಗಳ ಸುತ್ತ ಮೂರು ಸಾರಿ ಮಣೇವು ತಿರುಗಿ ದೊಡ್ಡೆಡೆಯ ಅನ್ನ ತಿನ್ನುವ ದೃಶ್ಯ ಅತ್ಯಂತ ವಿಸ್ಮಯವಾದುದು. ಇಲ್ಲಿ ದಾಸಯ್ಯಗಳ ವರ್ತನೆ ರೌದ್ರವರ್ತರ ನೋಡಿದರೆ ಉಗ್ರನರಸಿಂಹ ಹಿರಣ್ಯಕಶಿಪುವನ್ನು ಸಂಹಾರಮಾಡಿ ಅವನ ಕರುಳನ್ನೇ ಮಾಲೆಯಾಗಿ ಧರಿಸಿದನೂ ಅದೇ ರೀತಿ ದಾಸಯ್ಯಗಳು ಮಣೇವು ತಿರುಗುವ ದೃಶ್ಯ ಭಕ್ತಾದಿಗಳ ಮನಸ್ಸನ್ನು ಸೆರೆಹಿಡಿದು ಸೂರೆಗೊಳ್ಳುವ ಪೂಜಾವಿಧಾನ ಇದಾಗಿದೆ.

ಬಿಲ್ಲುಗೂಡಿನ ಪೂಜೆ ಎಂದರೆ ಇಲ್ಲಿ 'ಬಿಲ್ಲು' ಮತ್ತು 'ಗೂಡು' ಎಂಬ ಎರಡು ಶಬ್ದಗಳು ಕೂಡಿ

“ಬಿಲ್ಲುಗೂಡು” ಎಂದಾಗಿದೆ. ‘ಬಿಲ್ಲು’ ಎಂದರೆ ಬಾಣವನ್ನು ಬಿಡಲು ಬಳಸುವ ‘ಧನಸ್ಸು’ ಎಂದೂ, ‘ಗೂಡು’ ಎಂದರೆ ಪಂಜರ, ದೇಹ, ನೆಲೆ, ಹಟ್ಟಿ ಎಂಬ ಅರ್ಥ ಬರುತ್ತದೆ. ಈ ಬಿಲ್ಲುಗೂಡಿನ ಪೂಜೆಯನ್ನು ‘ಧನಸ್ಸು’ ಗೂಡಿನ ಪೂಜೆ ಎಂಬ ಅರ್ಥ ಬರುತ್ತದೆ. ಆದರೆ ಈ ಬಿಲ್ಲುಗೂಡಿನ ಪೂಜೆಯಲ್ಲಿ ಧನಸ್ಸು ಅಥವಾ ಬಿಲ್ಲು ಎಲ್ಲಿಯೂ ಕಂಡು ಬರುವುದಿಲ್ಲ, ಕೇವಲ ಬಾಣ (ಅಂಬು)ಗಳನ್ನು ಮಾತ್ರ ಭೂತನಾಲಿಗೆಗಳ ಹಿಂಭಾಗ ನಿಲ್ಲಿಸಿರುತ್ತಾರೆ. ನಿಜವಾದ ಬಿಲ್ಲು ಧನಸ್ಸು ಗೂಡಿನ ಪೂಜೆ ಇಲ್ಲಿ ಕಂಡು ಬರದಿದ್ದರೂ ಸಹ ಹೆಸರು ಮಾತ್ರ ‘ಬಿಲ್ಲುಗೂಡು’ ಎಂದೇ ಹೆಸರಾಗಿದೆ.

ಈ ದೇವರಿಗೆ ಬಾಣಗಳು (ಅಂಬು) ಮಾತ್ರ ಇದ್ದು ಬಿಲ್ಲು ಇಲ್ಲದೆ ಇರುವುದಕ್ಕೆ ಇಲ್ಲಿಯ ಪೂಜಾರಿಗಳು ಕೊಡುವ ಕಾರಣವೆಂದರೆ “ಈ ಓಬಳದೇವರಿಗೆ ಒಬ್ಬ ತಮ್ಮನಿದ್ದ ಕಾರಣಾಂತರ ದಿಂದ ಅವನು ದೇವರಮರಿಕುಂಟೆ ಬಿಟ್ಟು ಹೋಗುವಾಗ ಅಣ್ಣನಿಗೆ ಕೇಳಿದನಂತೆ, ಅಣ್ಣಾ ನಾನು ಊರು ಬಿಟ್ಟು ಬಹುದೂರ ಹೋಗುತ್ತಿದ್ದೇನೆ ಅದಕ್ಕಾಗಿ ನನಗೆ ಜ್ಞಾಪಕಾರ್ಥವಾಗಿ ಏನಾದರೂ ಕೂಡು ಎಂದು ತಮ್ಮ ಕೇಳಿದಾಗ ಅಣ್ಣನಾದ ಓಬಯ್ಯ ತ್ನನಲಿರುವ ‘ಧನಸ್ಸು’ನ್ನೇ ಕೊಟ್ಟು ಈ ಧನಸ್ಸು ತೆಗೆದುಕೊಂಡು ಹೋಗಿ ಇದರ ಮರೆಯಲ್ಲಿಯೇ ಜೀವನ ಸಾಗಿಸು ಎಂದು ಹೇಳಿ ತಮ್ಮನನ್ನು ಕಳಸಿಕೊಟ್ಟನಂತೆ. ಈ ಧನಸ್ಸು ತೆಗೆದುಕೊಂಡು ಹೋದ ತಮ್ಮ ದಾವಣಗೆರೆಜಿಲ್ಲೆ, ಜಗಲೂರು ತಾಲ್ಲೂಕಿನ ದಿಬ್ಬದಹಳ್ಳಿಯಲ್ಲಿ ನೆಲೆಗೊಂಡ” ಎಂದು ಹೇಳುತ್ತಾರೆ. ಈ ಹೊತ್ತಿಗೂ ‘ದಿಬ್ಬದಹಳ್ಳಿ’ಯಲ್ಲಿ ದೇವರಮರಿಕುಂಟೆ ಓಬಳದೇವರಿಗೆ ಸಂಬಂಧ ಪಟ್ಟ ಬಿಲ್ಲುನ್ನು ಈ ಊರಿನ ಮ್ಯಾಸಬೇಡರು ಪೂಜಿಸುತ್ತಾರೆ. ದಿಬ್ಬದಹಳ್ಳಿಯಲ್ಲಿ ಈ ಧನಸ್ಸುಗೆ ಅಥವಾ ದೇವರಿಗೆ “ಮರಿಕುಂಟೆ ಚನ್ನಿಗರಾಯ” ಎಂದೇ ಕರೆಯುತ್ತಾರೆ. ಸುಮಾರು ಏಳು ಅಡಿ ಉದ್ದದ ಧನಸ್ಸು ಪಂಚಲೋಹದಿಂದ ತಯಾರಿಸಿಲಾಗಿದೆ. ದೇವರಮರಿಕುಂಟೆ ಓಬಳದೇವರು ಗುಗ್ಗರಿಹಬ್ಬವಾದ ನಂತರ ಅಲ್ಲಿ ಗುಗ್ಗರಿಹಬ್ಬ ಮಾಡುತ್ತಾರೆ. ಈ ರೀತಿ ಹಿಂದೆ ನೆಡೆದ ಘುಟನೆಯಿಂದ ‘ಧನಸ್ಸು’ ಜಗಲೂರು ತಾಲ್ಲೂಕು ದಿಬ್ಬದಹಳ್ಳಿಯಲ್ಲಿ ಸೇರಿತು, ಅದರ ಬಾಣಗಳು (ಅಂಬು) ಮಾತ್ರ ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಅಹೋಬಲ ನರಸಿಂಹಸ್ವಾಮಿಯ ಗುಡಿಯಲ್ಲಿವೆ.

ಬಿಲ್ಲುಗೂಡಿನ ಪೂಜೆಯ ಬಗ್ಗೆ ಮತ್ತೊಂದು ದಂತ ಕಥೆಯಿದೆ. “ಶ್ರೀಕೃಷ್ಣ ಯುದ್ಧಕ್ಕೆ ಹೋಗುವಾಗ ತನ್ನ ಆಯುಧಗಳಿಗೆ ಪೂಜೆ ಸಲ್ಲಿಸಿ ನಂತರ ಯುದ್ಧಕ್ಕೆ ಹೋಗುತಿದ್ದನಂತೆ ಅದಕ್ಕಾಗಿ ಈ ಬಿಲ್ಲುಗೂಡು ಆಯುಧಪೂಜೆಯ ಸಂಕೇತ ಎಂದು ಪೂಜಾರಿ ಎಂ.ಪಿ. ಓಬಣ್ಣನವರ ಅಭಿಪ್ರಾಯ. ಅದೇ ರೀತಿ ಬಿಲ್ಲುಗೂಡಿನ ಪೂಜೆಯಲ್ಲಿ ಬಾಣಗಳನ್ನು (ಅಂಬು) ಭೂತನಾಲಿಗೆಯ ಹಿಂಭಾಗ ನಿಲ್ಲಿಸಿರುತ್ತಾರೆ”. ಮತ್ತೊಂದು ದಂತ ಕಥೆಯೆಂದರೆ ‘ಉಗ್ರನರಸಿಂಹ ಹಿರಣ್ಯಕಶಿಪುವನ್ನು ಸಂಹರಿಸುವಾಗ ತನ್ನ ಉಗುರುಗಳನ್ನೇ ಆಯುಧವಾಗಿ ಮಾಡಿಕೊಂಡು ಅವನ ಒಡಲನ್ನು ಬಗೆದು, ಕರುಳನ್ನು ಮಾಲೆಯಾಗಿ ಧರಿಸಿ ಆರ್ಭಟಿಸಿದ’ ಸಂಕೇತವೇ ಈ ಹೊತ್ತು ದಾಸಯ್ಯಗಳು ದೊಡ್ಡೆಡೆ ತಿನ್ನುವಾಗ ಅವರ ಸಿಟ್ಟು, ಆರ್ಭಟ, ರೌದ್ರಾವತಾರ ಎಲ್ಲವೂ ಕಂಡು ಬರುವುದರಿಂದ ಈ ಬಿಲ್ಲುಗೂಡು ಉಗ್ರನರಸಿಂಹ ಮತ್ತು ಹಿರಣ್ಯಕಶಿಪುವಿನ ಸಂಕೇತ ಎಂಬ ನಂಬಿಕೆಯನ್ನು ಸಹ ಸ್ಥಳೀಯ ವಕ್ತೃಗಳು ತಿಳಿಸುತ್ತಾರೆ.

ಈ ಎಲ್ಲಾ ಕಥೆಗಳ ಸತ್ಯಾಸತ್ಯ ಏನೇ ಇದ್ದರೂ ಸಹ ಈ ಬಿಲ್ಲುಗೂಡಿನ ದೃಶ್ಯ ಗಂಡೆದೆಯ ಗಂಡು ಭೂಮಿಯ ಲಕ್ಷಣಗಳನ್ನು ಪರಿಚಯಿಸುತ್ತದೆ. ಅಂತಹ ಸುಡು ಬಿಸಿಲಿನಲ್ಲಿ ಸಾವಿರಾರು ಜನ ಭಾವ ಪರವಶರಾಗಿ ಭಕ್ತಿಯಲ್ಲಿ ಲೀನವಾಗುತ್ತಾರೆ. ಆಧುನಿಕ ಜಗತ್ತಿನಲ್ಲಿ ಈ ಘಟನೆ ಅದ್ಭುತ ಮತ್ತು ಒಂದು ವಿಶಿಷ್ಟ ವಿಸ್ಮಯವಾಗಿದೆ.

ಬಿಲ್ಲುಗೂಡಿನ ಪೂಜೆ ಮುಗಿದ ನಂತರ ದೇವರ ಗದ್ದುಗೆ, ಬಸವನ ಗದ್ದುಗೆ, ಕಾಸು-ಮೀಸಲು ಅರ್ಪಿಸುವುದು, ದೇವರೆತ್ತುಗಳಪೂಜೆ, ಜವಳತೆಗೆಸುವುದು, ದಾಸೋಹಮೊದಲಾದ ಕಾರ್ಯಗಳು ನಡೆಯುತ್ತವೆ. ರಾತ್ರಿ ಹತ್ತು ಗಂಟೆಯ ನಂತರ ಕಳ್ಳೆಪೌಳಿಯ ಒಳಗೆ ಹಂಚಿ ಗುಡಿಸಲಲ್ಲಿ ಗದ್ದುಗೆ ಮಾಡಿದ ಅಹೋಬಲ ನರಸಿಂಹಸ್ವಾಮಿಗೆ ಹೂವು, ಹೊಂಬಾಳೆಗಳಿಂದ ಅಲಂಕರಿಸಿ ಮಹಾಮಂಗಳಾರತಿ ಮಾಡಿ ದೇವರನ್ನು ಎಬ್ಬರಿಸಿ ಮೊದಲು ನರಸಿಂಹಸ್ವಾಮಿಯ ಗುಡಿ ಹತ್ತಿರ ಮಣೇವು ತಿರುಗಿ, ನಂತರ ಶಿವಶರಣೆ ಗುಲೋಬಮ್ಮ ಅಗ್ನಿಕೊಂಡ ವಾಗಿರುವ ತುಗ್ಗಲಿ ಮರದ ಹತ್ತಿರ ದೇವರು ಬರುತ್ತದೆ.

ಮಕ್ಕಳಿಲ್ಲದವರು, ಕಷ್ಟನಷ್ಟಕ್ಕೊಳಗಾದವರು, ಕಾಯಿಲೆಯಾಗಿರುವರು, ತಂಡೋಪತಂಡವಾಗಿ ಬಂದು ಶಿವಶರಣೆ ಗುಲೋಬಮ್ಮ ಗುಡಿಯ ಮುಂದೆ ಬೆಲ್ಲ ಬಾಳೆಹಣ್ಣು ತಂದು ಮಣೇವು ಹಾಕುತ್ತಾರೆ. ಜೊತೆಗೆ ಹರಕೆ ಹೊತ್ತ ಭಕ್ತರು ಬಿಳಿ ವಸ್ತ್ರವನ್ನುಟ್ಟು ಗುಲೋಬಮ್ಮನ ಗುಡಿಯ ಮುಂದೆ ಸಾಲು ಸಾಲಗಿ ಕೈಮುಗಿದು ಕೊಂಡು ಮಲಗಿರುತ್ತಾರೆ. ಆಗ ದೇವರೊತ್ತ ಪೂಜಾರಿ ಸುಮಾರು ೪೫ ನಿಮಿಷಗಳ ಕಾಲ ಗರಗರ ತಿರುಗುತ್ತ ಅವರ ಮೇಲೆ ಕಾಲಿಟ್ಟು ಮುಂದೆ ಹೋದರೆ ಅವರು ನಂಬಿಕೊಂಡಂತೆ ಫಲಗಳು ಲಭಿಸುತ್ತವೆ ಎಂಬುದು ಭಕ್ತಾದಿಗಳ ನಂಬಿಕೆಯಾಗಿದೆ. ರಾತ್ರಿಯೆಲ್ಲ ಮಣೇವು ತಿರುಗಿ ನಂತರ ಬೆಳಗಿನ ಜಾವ ನರಸಿಂಹಸ್ವಾಮಿಯ ದೇವರ ಗುಡಿಯ ಮುಂಭಾಗ ಇರುವ ಸಣ್ಣ ಕಲ್ಲುಕಂಭಕ್ಕೆ ಪೂಜೆ ಸಲ್ಲಿಸಿ ಮೇಲುದೀಪ ಹಚ್ಚಿ ದೇವರಮರಿಕುಂಟೆಯ ಗೊಲ್ಲರಹಟ್ಟಿಗೆ ಬಂದು ಗದ್ದುಗೆ ಮಾಡುತ್ತಾರೆ.

ದೇವರಮರಿಕುಂಟೆ ಕಾಡುಗೊಲ್ಲರು ಈ ದೇವರಿಗೆ ಹಾಲು, ಮೊಸರು, ಕಾಸು-ಮೀಸಲು ಕೊಡುವುದು, ದೇವರಿಗೆ ಕಳ್ಳೆಪೌಳಿ ಮತ್ತು ಹಂಚಿ ಗುಡಿಸಲು ಕಟ್ಟುವದು, ದೇವರ ಬಸವನನ್ನು ಕಾಯುವುದು ಈ ಕಾಡುಗೊಲ್ಲರೆ ಆಗಿರುವುರಿಂದ ಓಬಳದೇವರು ಗೊಲ್ಲರಹಟ್ಟಿಯ ಹುದಿಗೆ ಬಂದತಕ್ಷಣ ಅಪಾರ ಭಕ್ತಿಯಿಂದ ದೇವರನ್ನು ಬರಮಾಡಿಕೊಳ್ಳುತ್ತಾರೆ. ನಂತರ ಹಣ್ಣು, ಕಾಯಿಕೊಟ್ಟು ಪೂಜೆ ಮಂಗಳಾರತಿ ಮಾಡಿಸಿ ದೇವರನ್ನು ಕಳುಹಿಸಿ ಕೊಡುತ್ತಾರೆ. ಈ ದೇವರ ಆರಾಧನೆಯಲ್ಲಿ ಗೊಲ್ಲರು ಮತ್ತು ಬೇಡರು ಪರಸ್ಪರ ಹೊಂದಾಣಿಕೆಯಿಂದ ಹಬ್ಬಮಾಡಲು ಒಂದು ಕಥೆಯನ್ನೆ ಹೇಳುತ್ತಾರೆ. "ಒಂದಾನೊಂದು ಕಾಲದಲ್ಲಿ ಈ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಒಂದೇ ತಾಯಿಯ ಮಕ್ಕಳಾಗಿ ಬಾಳಿಬದುಕಿದವರು" ಎಂದು ಸಹ ಹೇಳುತ್ತಾರೆ. ಇನ್ನೊಂದು ಜನಪದ ಗೀತೆಯಲ್ಲಿ 'ಚಿತ್ತಯ್ಯ ಕಾಟಯ್ಯ ಚಿಕ್ಕಾನು ಓಬಯ್ಯ' ಎಂದು ಬರುವುದರಿಂದ ಚಿತ್ರದೇವರು, ಕಾಟಮ್ಮದೇವರು ಕಾಡುಗೊಲ್ಲರ ದೇವರುಗಳಾದರೆ ಓಬಳದೇವರು ಈ ಎರಡೂ ದೇವರುಗಳ ತಮ್ಮನೆಂದು ಕಾಡುಗೊಲ್ಲರು ಹೇಳುತ್ತಾರೆ. ಅದೇ ರೀತಿ ಈ ದೇವರ ಗುಗ್ಗರಿಹಬ್ಬದಲ್ಲಿ ಕಾಡುಗೊಲ್ಲರು ಮತ್ತು ಮ್ಯಾಸಬೇಡರು

ಪರಸ್ಪರ ಹೊಂದಾಣಿಕೆಯಿಂದ ಹಬ್ಬ ಮಾಡತ್ತಾರೆ. ಕೆಲವು ಪೂಜೆ, ಹುಟ್ಟು, ಸಾವು, ಆಹಾರ, ಉಡುಗೆ, ತೊಡಿಗೆಗಳಲ್ಲಿ ಈ ಎರಡು ಬುಡಕಟ್ಟು ಜನಾಂಗ ಪರಸ್ಪರ ಹೋಲಿಕೆಗಳು ಕಂಡುಬರುತ್ತವೆ.

ಗುಗ್ಗರಿಹಬ್ಬದ ಮತ್ತೊಂದು ಮುಖ್ಯ ಆಕರ್ಷಣೆಯೆಂದರೆ ಕಲ್ಲುಕಂಭದ ಮೇಲೆ ದೀಪಹಚ್ಚುವುದು. ಗೊಲ್ಲರಹಟ್ಟಿಯಿಂದ ಬೆಳಗಿನಜಾವ ಸುಮಾರು ನಾಲ್ಕು ಗಂಟೆಗೆ ಬಂದು, ದೇವರ ಗುಡಿಯ ಮುಂಭಾಗದಲ್ಲಿರುವ ದೊಡ್ಡ ಕಲ್ಲುಕಂಭದ ಕಟ್ಟೆಯ ಮೇಲೆ ದೇವರು ಕುಳಿತುಕೊಳ್ಳುತ್ತದೆ. ಆಗ ಕಲ್ಲುಕಂಭದ ಮೇಲೆ ದೀಪ ಹಚ್ಚಿಡುತ್ತಾರೆ. ಕಲ್ಲುಕಂಭದ ಬುಡಕ್ಕೆ ನಾಲ್ಕೂ ದಿಕ್ಕಿಗೂ ಹುರುಳಿ ಗುಗ್ಗರಿ ಎಡೆ ಹಾಕುತ್ತಾರೆ. ನಂತರ ಹೊಸ ಮಣ್ಣಿನ ಮುಚ್ಚಳದಲ್ಲಿ ಬತ್ತಿ, ಎಣ್ಣೆ, ಹತ್ತಿಬೀಜ, ಕಾಯಿಚಿಪ್ಪು, ಹಾಕಿ ಮಹಾಪೂಜೆಯನ್ನು ಸಲ್ಲಿಸಿ ಮೂಡಣದಿ ಸೂರ್ಯ ಉದಯಿಸುತ್ತಿರುವಾಗ ಮಣ್ಣಿನ ಮುಚ್ಚಳದ ದೀಪವನ್ನು ಕಲ್ಲುಕಂಭವನ್ನು ಹತ್ತಿ ಮೇಲುಗಡೆ ಇಡಲಾಗುತ್ತದೆ. ಮ್ಯಾಸಬೇಡರ ಕುಲದೇವತೆ ಸೂರ್ಯನಾರಾಯಣ ಮೂಡಣದಿ ಹುಟ್ಟಿ ಬರುವಾಗ ಕಲ್ಲುಕಂಭದ ಮೇಲೆ ದೀಪ ಉರಿಯುತ್ತದೆ. ಈ ಕಲ್ಲುಕಂಭದ ಬಗ್ಗೆ ಜನರಿಗೆ ಅಪಾರ ನಂಬಿಕೆ ಹಾಗೂ ಭಯ ಭಕ್ತಿಯಿದೆ. ಭಕ್ತ ಪ್ರಹ್ಲಾದನ ಬೇಡಿಕೆಯಂತೆ ನರಸಿಂಹಸ್ವಾಮಿ ಉಕ್ಕುಕಂಭದಲ್ಲಿ ಪ್ರತ್ಯಕ್ಷನಾಗಿ ಆ ಕಂಭವನ್ನೇ ಸೀಳಿ ಹೊರ ಬಂದು ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನಿಗೆ ನರಸಿಂಹ ಆಶೀರ್ವಾಸಿದ್ದಕ್ಕಾಗಿ ಈ ಕಲ್ಲುಕಂಭವನ್ನು ಸಹ ನರಸಿಂಹಸ್ವಾಮಿಯ ಮೇಲಿನ ಭಕ್ತಿಯಂತೆಯೇ ಈ ದೇವರ ಕಲ್ಲುಕಂಭವನ್ನು "ಕಲ್ಲುಕಂಭದಸ್ವಾಮಿ" ಎಂದು ಕರೆಯುತ್ತಾರೆ.

ಹಿಂದೆ ದೇವರಮರಿಕುಂಟೆ ನಿಡಗಲ್ಲು ಪ್ರಾಂತ್ಯಕ್ಕೆ ಸೇರಿದ್ದಾಗ ನಿಡಗಲ್ಲು ಪಾಳೆಯಗಾರ ಹೊಟ್ಟಳನಾಯಕ ರತ್ನಗಿರಿಗೆ ಹೋಗಿ ಕಲ್ಲುಕುಟಿಗರ ಭೀಮಪ್ಪನನ್ನು ಕರೆದುಕೊಂಡು ಬಂದು, ದೇವರಮರಿಕುಂಟೆಯಿಂದ ಉತ್ತರ ಈಶಾನ್ಯಕ್ಕೆ ಸುಮಾರು ನಾಲ್ಕು ಕಿ.ಮೀ. ದೂರದ ಕುರಿಕೆಗುಡ್ಡದಲ್ಲಿ ಅಸಿಕಲ್ಲು ಕೀಳಿಸಿ ನೇರವಾದ ಮತ್ತು ಸುಂದರವಾದ ಸುಮಾರು ೪೫ ಅಡಿ ಉದ್ದದ ಕಲ್ಲುಕಂಭವನ್ನು ಕೆತ್ತಿಸಿ ಕುಕ್ಕಲಪಲ್ಲಿ ಮತ್ತು ದೇವರಮರಿಕುಂಟೆ ಇವೆರಡರ ನಡುವೆ ಇದ್ದ ಅಹೋಬಲ ನರಸಿಂಹಸ್ವಾಮಿಯ ದೇವಸ್ಥಾನದ ಮುಂದೆ ಕ್ರಿ.ಶ. ೧೧೭೫ರ ನಂತರ ಈ ಕಲ್ಲುಕಂಭವನ್ನು ಸ್ಥಾಪಿಸಿ, ಕುಕ್ಕಲಪಲ್ಲಿಯ ದೊಡ್ಡದೇವರು ಮಾಡಿಸಿದ ಎಂದು ತಾಮ್ರದ ಜಯರೇಖೆಯಿಂದ ತಿಳಿದು ಬರುತ್ತದೆ.

ಐದು ಹಂತಗಳಿಂದ ಒಳಗೊಂಡ ಸುಂದರವಾದ ಕಲ್ಲುಕಂಭಕ್ಕೆ ೧೬ ಪಟ್ಟೆಗಳಿವೆ, ಕಂಭವೇರಲು ೧೧ ಮೆಟ್ಟಿಲುಗಳಿವೆ, ಕಂಭದ ಬುಡದಲ್ಲಿ ಪೂರ್ವಕ್ಕೆ ಉಗ್ರನರಸಿಂಹ, ಪಶ್ಚಿಮಕ್ಕೆ ಏಳ್ಹೆಡೆ ಸರ್ಪ, ಉತ್ತರಕ್ಕೆ ಗರುಡ, ದಕ್ಷಿಣಕ್ಕೆ ಆಂಜನೇಯ ವಿಗ್ರಹದ ಕೆತ್ತನೆಗಳಿವೆ. ಕಂಭದ ತುದಿಯಲ್ಲಿ ಸುಮಾರು ಮೂರು ಅಡಿ ಎತ್ತರದ ಕಬ್ಬಿಣದ ದೀಪಸ್ತಂಭವಿದೆ. ಆ ದೀಪ ಸ್ತಂಭದ ಕೆಳಗೆ ಬೋದಿಗೆಯ ನಾಲ್ಕು ದಿಕ್ಕುಗಳಿಗೂ ನಾಲ್ಕು ಕಬ್ಬಿಣದ ಬಳೆ, ಚಿಕ್ಕ ನಾಲ್ಕು ಗಂಟೆಗಳಿವೆ. ಕಂಭದ ಕೆಳಭಾಗದ ಜಗಲಿಯ ಎತ್ತರ ೪.೩ ಅಡಿ, ಉದ್ದ ೧೫ ಅಡಿ, ಅಗಲ ೧೫ ಅಡಿ, ಈ ಕಲ್ಲುಕಂಭ ನೆಲದಿಂದ ಕಬ್ಬಿಣದ ದೀಪ ಸ್ತಂಭದವರೆಗೆ ಸುಮಾರು ೪೫ ಅಡಿ ಎತ್ತರವಿದೆ. ಕಲ್ಲುಕಂಭದ ಜಗಲಿಯ ಸುತ್ತ ಸುಂದರ ಕೆತ್ತನೆಯ ಚಿತ್ರಗಳಿವೆ. ಪಂಚಮುಖಿ ಹಸು, ಗಂಡುಬೇರುಂಢ, ಹಂದಿ,

ಬಿಲ್ಲುಬಾಣಗಳು, ಸೂರ್ಯ, ಚಂದ್ರ, ಗಣಪತಿ, ದೇವತೆ, ಮೇಷ, ಕೋಣ, ವೀಣೆಹಿಡಿದ ಸರಸ್ವತಿ, ಮೃದಂಗ ಹಿಡಿದ ಮನುಷ್ಯ, ನವಿಲು, ಆನೆ, ಜೋಡಿ ದೇವತೆಗಳು, ಸರ್ಪ, ಮಹಿಷ ಮರ್ದಿನಿ, ಉಡ, ವಾಲಿ, ಸುಗ್ರೀವರ ಯುದ್ಧದ ಚಿತ್ರಣ, ಹೂವು, ಕುಂಭ ಕಳಸ ಮೊದಲಾದ ಚಿತ್ರಗಳು ಈ ಕಲ್ಲುಕಂಭದ ಜಗಲಿಯ ಸುತ್ತ ಕಂಡುಬರುತ್ತವೆ.

ಈ ಕಲ್ಲುಕಂಭದ ಬಗ್ಗೆ ಅನೇಕ ಕಥೆಗಳು ಹುಟ್ಟಿಕೊಂಡಿವೆ. ದೇವರಮರಿಕುಂಟೆಯಿಂದ ನಿಡುಗಲ್ಲಿಗೆ ಎನಮಲೋರು ಬೆಡಗಿನ ಒಂದು ಹೆಣ್ಣನ್ನು ಕೊಟ್ಟು ಮದುವೆಮಾಡಲಾಗಿತ್ತು, ಆದರೆ ಅವಳ ಗಂಡ ತವರುಮನೆಯ ಗುಗ್ಗರಿಹಬ್ಬಕ್ಕೆ ಕಳುಹಿಸುತ್ತಿರಲಿಲ್ಲವಂತೆ ಅದಕ್ಕಾಗಿ ಆ ಹೆಣ್ಣುಮಗಳು ಓಬಳದೇವರ ಮೇಲಿನ ಭಕ್ತಿಯಿಂದ "ಗುಗ್ಗರಿಹಬ್ಬದಲ್ಲಿ" ಒಂದೊತ್ತು ಇದ್ದು ದೇವರಮರಿಕುಂಟೆಯ ಕಲ್ಲುಕಂಭದ ಮೇಲೆ ದೀಪಹಚ್ಚಿದಾಗ, ಆ ಹೆಣ್ಣು ಮಗಳು ನಿಡಗಲ್ಲು ಬೆಟ್ಟಹತ್ತಿ ದೀಪ ನೋಡಿ "ನನ್ನ ತವರು ಮನೆಯ ದೀಪ ಚನ್ನಾಗಿ ಉರಿಯಲೆಂದು ಹಾರೈಸಿ ಒಂದೊತ್ತು ಬಿಡುತ್ತಿದ್ದಳಂತೆ. ಅದಕ್ಕಾಗಿ ದೇವರಮರಿಕುಂಟೆಯಿಂದ ಬೇರೆ ಊರಿಗೆ ಹೆಣ್ಣು ಕೊಟ್ಟಾಗ, ಆ ಹೆಣ್ಣು ಮಕ್ಕಳನ್ನು ತಪ್ಪದೆ ಈ ದೇವರ ಗುಗ್ಗರಿಹಬ್ಬಕ್ಕೆ ಕರೆದುಕೊಂಡು ಬಂದು ಉಡುಗೊರೆ ಕೊಟ್ಟು ಕಳುಹಿಸುವ ಪದ್ಧತಿ ಈ ಹೊತ್ತಿಗೂ ದೇವರಮರಿಕುಂಟೆಯಲ್ಲಿ ಕಾಣಬಹುದು.

ಮೂಲತಃ ಓಬಳದೇವರು ಮೊದಲು ನೆಲೆಸಿದ್ದು ನಾಗ್ತಿಹಳ್ಳಿ ಕಟ್ಟೆಯ ಬುರುಜುವಿನಲ್ಲಿ. ಈ ಬುರುಜುವಿನ ಮೇಲೆ ನಿಂತು ಪೂರ್ವಕ್ಕೆ ನೋಡಿದಾಗ ದೇವರಮರಿಕುಂಟೆಯ ಕಲ್ಲುಕಂಭದ ತುದಿ ಮತ್ತು ನಿಡಗಲ್ಲು ಬೆಟ್ಟದ ಮೇಲಿರುವ ಕಬ್ಬಿಣದ ದೀಪಸ್ತಂಭ ಈ ಮೂರು ನೇರವಾಗಿ ಕಾಣುತ್ತವೆ. ಅದೇ ರೀತಿ ನಿಡಗಲ್ಲು ಬೆಟ್ಟದ ಮೇಲಿನ ಕಬ್ಬಿಣದ ದೀಪಸ್ತಂಭದ ಮೇಲೆ ಬೆಂಕಿಹಾಕಿದರೆ ಅಥವಾ ದೀಪಹಚ್ಚಿದರೆ ಚಿತ್ರದುರ್ಗದ ಪಾಳೆಯಗಾರರಿಗೆ ಕಾಣಿಸುತ್ತಿತ್ತಂತೆ ಎಂದು ಸಹ ಹೇಳುತ್ತಾರೆ. ಇತಿಹಾಸದ ಪ್ರಕಾರ ನೋಡಿದಾಗ "ಕಂಬದ ದೇವರು ಅಂದರೆ, ನೆಪಮಾತ್ರಕ್ಕೆ ಒಂದು ಮಂಟಪದಂತೆ ಕಟ್ಟಿ ಪ್ರಯಾಣಿಕರ ಸೌಲಭ್ಯಕ್ಕೆಂಬ ಉದ್ದೇಶ ತೋರ್ಪಡಿಸುತ್ತ ಅಲ್ಲೊಂದು ಸ್ತಂಭ ಸ್ಥಾಪನೆಮಾಡಿರುವುದು, ನಾಯಕನ ಕಡೆಯ ಒಬ್ಬೊಬ್ಬಗೂಡಾಚಾರನು ಅಲ್ಲಿನ ಸುತ್ತಮುತ್ತಾಲು ಸಂಚರಿಸಿಕೊಂಡಿದ್ದು, ಹೋಗಿ ಬರುವ ಪ್ರಯಾಣಕರಲ್ಲಿ ಬೆರತು, ಅಲ್ಲಿರುವ ಕಂಬವು, ದೇವರಂತೆ ಪ್ರಚಾರಮಾಡುತ್ತಾ ಪೂಜೆ ಪುನಸ್ಕಾರಗಳನ್ನು ಮಾಡುತ್ತ ಶತ್ರುಗಳ ಚಲನವಲನವನ್ನರಿತು ಸಮಯಕ್ಕೆ ಸರಿಯಾಗಿ ಎಚ್ಚರಿಕೆ ಕೊಡಲು ಕಂಭದ ಮೇಲೆ ದೀಪ ಹಚ್ಚುವುದಕ್ಕಾಗಿ ನಿಲ್ಲಿಸಿದ ಸೂಚನಾಸ್ತಂಭ" ಎಂದು (ಕ್ಷಾತ್ರಾಂಶ ಪ್ರಬೋಧ, ೧೯೮೭, ಪುಟ:೧೦೨ರಲ್ಲಿ) ಹೆಚ್.ವಿ. ವೀರನಾಯಕರವರು ಹೇಳಿದ ಮಾತು ಒಪ್ಪತಕ್ಕದ್ದು.

ಒಟ್ಟಾರೆ ಮ್ಯಾಸಬೇಡರ ಕುಲದೇವತೆ ಸೂರ್ಯನಾರಾಯಣ ಮೂಡಣದಿ ಉರಿಸುತ್ತಿರುವಾಗ ಕಲ್ಲುಕಂಭದ ಮೇಲೆ ದೀಪ ಉರಿಯುತ್ತದೆ. ದೀಪ ಹಚ್ಚಿದ ನಂತರ ದೇವರು ಗುಡಿದುಂಬುತ್ತದೆ. ದೇವರು ಗುಡಿಯ ಒಳಗೆ ಹೋದ ನಂತರ ದೇವರಿಗೆ ಮಹಾಮಂಗಳಾರತಿ ಪೂಜೆಮಾಡಿಸಿ ಪ್ರಸಾದ ಸ್ವೀಕರಿಸಿ ಭಕ್ತರು ಮನೆಗೆ ತೆರಳುತ್ತಾರೆ. ಅಲ್ಲಿಗೆ ಈ ಗುಗ್ಗರಿಹಬ್ಬದ ಮೂರು ದಿನದ ಎಲ್ಲಾ ಕಾರ್ಯಗಳು ಮುಕ್ತಯವಾಗುತ್ತವೆ.

೬.೮.೨. ಮಾಕನಡುಕು ಗುಗ್ಗರಿ ಹಬ್ಬ : ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಚಿಕ್ಕಜೋಗಿಹಳ್ಳಿಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಮ್ಯಾಸಬೇಡರ ಪ್ರಮುಖ ಧಾರ್ಮಿಕ ಕೇಂದ್ರ ಮಾಕನಡುಕು ಎಂಬ ಹಳ್ಳಿಯಲ್ಲಿ ಕಂಚೋಬಳ ನರಸಿಂಹಸ್ವಾಮಿ ಮತ್ತು ಬಂಜಗೆರೆ ಓಬಳದೇವರ ಗುಗ್ಗರಿಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಊರಿನಿಂದ ಹೊರಗೆ ಪೂರ್ವಕ್ಕೆ ಲಕ್ಕಿ ಸೊಪ್ಪಿನ ಬೆರಗು ಕಟ್ಟಿ ಅದರೊಳಗಿನ ದೇವರಿಟ್ಟು ಕೊಳ್ಳಿಬೆಳಕಿನಲ್ಲಿ ಗುಗ್ಗರಿಹಬ್ಬ ಮಾಡುತ್ತಾರೆ.

ಶುಕ್ರವಾರದ ದಿನ ಚಿಕ್ಕಜೋಗಿಹಳ್ಳಿ ಹತ್ತಿರ ಸಿದ್ಧಾಪುರದ ಬುಗ್ಗುಹೊಳೆಯಲ್ಲಿ ಗಂಗೆಪೂಜೆ ಮಾಡಿಕೊಂಡು ಬಂದು ಅದೇ ದಿನ ದೀಪೋತ್ಸವ ಮತ್ತು ದೇವರಿಗೆ ಕಂಕಣಕಟ್ಟುವುದು ಮಾಡುತ್ತಾರೆ. ಶನಿವಾರ ರಾತ್ರಿ ಚಿಕ್ಕಜೋಗಿಹಳ್ಳಿ ಕುಂಬಾರ ಸಿದ್ಧಪ್ಪನ ಮನೆಯಿಂದ ಮಣ್ಣಿನ ಮಡಿಕೆಗಳನ್ನು ತಂದು, ಮಧ್ಯರಾತ್ರಿ ಸುಮಾರು ಹನ್ನೆರಡು ಗಂಟೆಗೆ ಕರಿಕಂಬಳಿಯಲ್ಲಿ ಮಣ್ಣಿನ ಮಡಿಕೆಗಳನ್ನ ಸುತ್ತಿಕೊಂಡು ಗಂಟೆಗೆ ಹತ್ತಿರದ ಬಾವಿಯ ಬಳಿ ಹೋಗಿ, ಮಡಿಕೆಗಳನ್ನು ತೊಳೆದು ನೀರು ತುಂಬಿಟ್ಟು ಗಂಗೆಪೂಜೆ ಮಾಡಿಕೊಂಡು ನೀರು ತರುತ್ತಾರೆ. ರಾತ್ರಿ ಸುಮಾರು ಎರಡು ಗಂಟೆವೇಳೆಗೆ ಮೂರು ಕಲ್ಲಿನ ಒಲೆ ಗುಂಡುಗಳನ್ನಿಟ್ಟು ಐದು ಮಡಿಕೆಯಲ್ಲಿ ಅವರೆ, ಆಕಳದ ಹಾಲು, ಎಳೆನೀರು, ಜೇನುತುಪ್ಪ, ತುಪ್ಪ, ಬಾಳೆಹಣ್ಣುಗಳನ್ನು ಹಾಕಿ ಒಲೆಮೇಲೆ ಇಟ್ಟು ಸುಮಾರು ಎರಡು ಗಂಟೆಗಳ ಕಾಲ ಉರಿಹಚ್ಚಿ ಬೇಯಿಸುತ್ತಾರೆ, ಅವರೆ ಗುಗ್ಗರಿ ಒಲೆ ಕುದಿಯುತ್ತಿರುವಾಗ ಗುರುತಾಯಿ (ಪಟ್ಟದ ಪೂಜಾರಿಯ ಹೆಂಡತಿ) ಬಿಳಿ ವಸ್ತ್ರವನ್ನುಟ್ಟು ಅಂದು ಒಂದೊತ್ತಿನಿಂದಿದ್ದು ಅವರೆಕಾಳು ಬೇಯುತ್ತಿರುವಾಗ ಮಣ್ಣಿನ ಮಡಿಕೆಯ ಮುಂದೆ ಪೂರ್ವಾಭಿಮುಖವಾಗಿ ನಿಂತುಕೊಳ್ಳುತ್ತಾರೆ. ಅಡ್ಡಲಾಗಿ ಲಕ್ಕಿ, ಬಂದರೆ, ಹೊಂಗೆ ಮೊದಲಾದ ಸೊಪ್ಪಿನ ಕೊನೆಗಳನ್ನು ನಿಲ್ಲಿಸಿರುತ್ತಾರೆ. ಅವರೆ ಕಾಳು ಬೆಂದ ನಂತರ ದೇವರ ಪೂಜಾರಿ ಬಂದು ಆ ಮಣ್ಣಿನ ಮಡಿಕೆ (ಸೋರೆ)ಗೆ ಪೂಜೆ ಮಾಡಿದ ನಂತರ 'ಗುರುತಾಯಿ' ಕುದಿಯುವ ಮಣ್ಣಿನ ಮಡಿಕೆಯಲ್ಲಿ ಮೂರು ಸಲ ಕೈಯಿಟ್ಟು ಅವರೆಕಾಳನ್ನು ತಿರುವಿ ತೋರಿಸುತ್ತಾಳೆ. ಈ ಪದ್ಧತಿಗೆ "ಸೌರಣಿಳಿಸುವುದು" ಎಂದು ಕರೆಯುತ್ತಾರೆ. ಈ ದೃಶ್ಯ ಬಹಳ ರೋಮಂಚನಕಾರಿಯಾಗಿರುವುದರಿಂದ ಭಕ್ತರು ಕುತೂಹಲದಿಂದ ನೋಡುತ್ತಿರುತ್ತಾರೆ.

ಮಾಕನಾಡುಕು ಓಬಳದೇವರು ಗುಗ್ಗರಿಹಬ್ಬವನ್ನು ಮ್ಯಾಸಬೇಡರು ಬೆಂಕಿ ಬೆಳಕಿನಲ್ಲಿ ದೇವರ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ವಿದ್ಯುತ್ ದೀಪಗಳಿದ್ದರೂ ಆದಿನ ಲೈಟ್ ಹಚ್ಚುವುದಿಲ್ಲ. ಕರಿಕಂಬಳಿಗಳಿಗೆ ಬಹಳ ಮಹತ್ವ ಕೊಡುತ್ತಾರೆ, ದೇವರ ಪೂಜಾರಿಗೆ ಕೊಟ್ಟಷ್ಟೇ ಮಹತ್ವವನ್ನು ಆತನ ಹೆಂಡತಿ ಅಂದರೆ ಗುರುತಾಯಿಗೂ ಗೌರವ ಕೊಡುತ್ತಾರೆ.

ಬೆಳಗಿನ ಜಾವ ಸೌರಣಿಳಿಸಿದ ನಂತರ ಭಾನುವಾರ ಮುಂಜಾನೆ ಸುಮಾರು ಆರು ಗಂಟೆಗೆ ದೇವರ ಪೂಜಾರಿ ಮತ್ತು ಜಂಗಮ ಗುರುಗಳು ಜೊತೆಗೂಡಿ, ಮಡಿಯಿಂದ ಬಿಳಿಪಂಚೆಯನ್ನುಟ್ಟು ದೇವರ ಬೆತ್ತ ಮತ್ತು ನವಿಲು ಗರಿ ಹಿಡಿದು ಕೊಂಡು, ಸಕಲವಾದ್ಯಗಳೊಂದಿಗೆ ಮಾಕನಾಡುಕು ಗ್ರಾಮದಿಂದ ಸುಮಾರು ಒಂದು ಕಿ.ಮೀ. ದೂರದ ಪೂರ್ವ ದಿಕ್ಕಿನ ಈಶಾನ್ಯ ಮೂಲೆಯ 'ಶಮೀವೃಕ್ಷ'ದ ಹತ್ತಿರ ಹೋಗಿ, "ಸೂರ್ಯನಾರಾಯಣ"ಗೆ ಬಾಳೆಎಲೆಯಲ್ಲಿ ಅವರೆ, ಆಕಳದಹಾಲು, ತುಪ್ಪ, ಬಾಳೆಹಣ್ಣುಗಳನ್ನಿಟ್ಟು ಎಡೆ ಹಾಕಿ ಪೂಜೆ ಸಲ್ಲಿಸುತ್ತಾರೆ. ನಂತರ ಬನ್ನಿಮರದ

ಹತ್ತಿರವೇ ಭೂಮಿಯನ್ನು ಮೂಟ್ಟಿ ಪೂರ್ವಕ್ಕೆ ಮೂರು ಹೆಜ್ಜೆ ಮತ್ತು ಪಶ್ಚಿಮಕ್ಕೆ ಮೂರು ಹೆಜ್ಜೆ ಹಾಕಿ ಭೂಮಿ ತಾಯಿಯನ್ನು ಮುಟ್ಟಿ ಉದಯವಾಗಿತ್ತಿರುವ 'ಸೂರ್ಯನಿಗೆ' ನಮಸ್ಕರಿಸುತ್ತಾರೆ. ಈ ಸಂಪ್ರದಾಯವನ್ನು "ಸೂರ್ಯಮುಕ್ಕು" ಹೋಗುವುದು ಎಂದು ಕರೆಯುತ್ತಾರೆ.

ಶಮೀವೃಕ್ಷದಿಂದ ದೇವಸ್ಥಾನಕ್ಕೆ ಪೂಜಾರಿ ಮತ್ತು ಜಂಗಮ ಗುರುಗಳು ಹಿಂದಿರುಗಿ ಬರುವಾಗ, ದೇವಸ್ಥಾನದ ಹತ್ತಿರ ಹರಕೆ ಮಾಡಿಕೊಂಡು ಭಕ್ತಾದಿಗಳು ಬಿಳಿವಸ್ತ್ರಗಳನ್ನುಟ್ಟು ದಾರಿಗೆ ಅಡ್ಡವಾಗಿ ಮಲಗಿಕೊಂಡಿರುತ್ತಾರೆ. ಆಗ ದೇವರ ಪೂಜಾರಿ ಆವೇಶದಿಂದ ಒಬ್ಬೋಬರನ್ನೇ ದಾಟುತ್ತ, ತುಳಿಯುತ್ತ ಮುಂದೆ ಸಾಗಿ ನಂತರ ಹಿಂದಕ್ಕೆ ಬರುತ್ತಾನೆ. ಯಾವ ವ್ಯಕ್ತಿಯನ್ನು ಪೂಜಾರಿ ತುಳಿಯುತ್ತಾನೋ ಆ ವ್ಯಕ್ತಿಗೆ ಒಂದು ತೆಂಗಿನಕಾಯಿಯನ್ನು ಆಶೀರ್ವಾದ ರೂಪವಾಗಿ ಪೂಜಾರಿಗಳು ಕೊಡುತ್ತಾರೆ. ದೇವರೊತ್ತ ಪೂಜಾರಿ ನಮ್ಮನ್ನು ದಾಟಿ ಹೋದರೆ ತಮ್ಮ ಹರಕೆಯ ಫಲಗಳು ಯಶಸ್ವಿಯಾಗುತ್ತವೆ ಎಂದು ಇಲ್ಲಿಯ ಜನರ ನಂಬಿಕೆಯಾಗಿದೆ.

'ಸೂರ್ಯಮುಕ್ಕು' ಹೋಗಿ ಬಂದ ನಂತರ ದೊರೆಗಳ ಹಿರಿಯ ಮಗ ಗುರುತಾಯಿಗೆ ಕಾಸುಒಪ್ಪಿಸುವುದು, ಇದು ಒಂದು ರೀತಿ ತಪ್ಪು-ನೆಪ್ಪುಗಳನ್ನು ಒಪ್ಪಿಕೊಳ್ಳುವುದು. ಧರ್ಮ ಪರಿಪಾಲನೆಯ ಸಂಕೇತವಾಗಿರುತ್ತದೆ. ನಂತರ 'ಗುಡಿದಾಸೋಹ' ಕಾರ್ಯ ಜವಳ ತೆಗೆಸುವುದು, ಆಕಳುಪೂಜೆ, ಕಿಲಾರಿಗೆ ಕಾಸುಹಾಕುವುದು, ದೇವರೆತ್ತುಗಳನ್ನು ಓಡಿಸುವುದು, ಮೆರವಣಿಗೆ ಮಹಾಮಂಗಳಾರತಿಯೊಂದಿಗೆ ಗುಗ್ಗರಿಹಬ್ಬದ ಕಾರ್ಯಕ್ರಮ ಮುಕ್ತಾಯವಾಗುತ್ತದೆ. ಮಾಕನಡುಕು ಗುಗ್ಗರಿಹಬ್ಬದಲ್ಲಿ ಆರ್ಯ ಮತ್ತು ದ್ರಾವಿಡ ಸಂಸ್ಕೃತಿಗಳ ಮಿಶ್ರಣ ಕಂಡು ಬರುತ್ತದೆ. ಹುರುಳಿ, ಅವರೆ, ಬೇಯಿಸುವುದು ದ್ರಾವಿಡ ಸಂಸ್ಕೃತಿಯಾದರೆ; ಜಂಗಮ ಗುರುಗಳೊಂದಿಗೆ ಸೂರ್ಯಮುಕ್ಕು ಹೋಗುವುದು, ತೆಂಗಿನಕಾಯಿಯನ್ನು ಅಶೀರ್ವಾದವಾಗಿ ನೀಡುವುದು ಆರ್ಯಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ವೈಷ್ಣವ ಮತ್ತು ಶೈವ ಸಂಪ್ರದಾಯಗಳು ಆಚರಣೆಯಲ್ಲಿವೆ. ಪಟ್ಟಾಧ್ಯಕ್ಷರು ಹಾಗೂ ಪೂಜಾರಿಗಳಾದ ಪಿ. ರಾಮಸ್ವಾಮಿಯವರ ಪೂಜಾಪದ್ಧತಿ ಮತ್ತು ಭಕ್ತಾದಿಗಳು ಅವರ ಮೇಲೆ ಇಟ್ಟಿರುವ ನಂಬಿಕೆಯನ್ನು ಮೆಚ್ಚತಕ್ಕದ್ದು ಆದರೆ ಕಾಲಬದಲಾದಂತೆ ಬೆಂಕಿಬೆಳಕಿನಲ್ಲಿ ಗುಗ್ಗರಿಹಬ್ಬ ಮಾಡುತ್ತಿದ್ದ ಮ್ಯಾಸಬೇಡರು ವಿದ್ಯುತ್ ಬೆಳಕಿಗೆ ಮಾರು ಹೋಗುತ್ತಿದ್ದಾರೆ, ಹಿಂದೆ ಇದ್ದಂಥ ಬಿಗಿಯಾದ ಸಂಪ್ರದಾಯ ಈಗ ಕಂಡು ಬರುತ್ತಿಲ್ಲ.

೬.೯. ಶಿವರಾತ್ರಿ ಹಬ್ಬ

ಮಾಘಮಾಸದ ಕೃಷ್ಣಪಕ್ಷದಲ್ಲಿ ಬರುವ ಚತುರ್ದಶಿಗೆ ಶಿವರಾತ್ರಿ ಎಂದು ಹೆಸರು. ಈ ಮಹಾಶಿವರಾತ್ರಿ ಹಬ್ಬ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಒಂದು ಪುಣ್ಯದಿನವೆಂದರೆ ತಪ್ಪಾಗಲಾರದು. ಶಿವರಾತ್ರಿಯಲ್ಲಿ ಶಿವನಾಮ ಸ್ಮರಣೆ ಮಾಡುತ್ತ ಜಾಗರಣೆ ಮಾಡಿದರೆ ಸಹಸ್ರ ವರ್ಷಗಳವರೆಗೆ ತಪಸ್ಸು ಮಾಡಿದ ಫಲವು ಸಿದ್ಧಿಯಾಗುವುದೆಂದೂ; ಮಹಾಶಿವರಾತ್ರಿಯಲ್ಲಿ ಶಿವಭಕ್ತರು ಒಳ್ಳೇ ಭಕ್ತಿಯಿಂದ ಶಿವಭಜನೆ ಮಾಡುತ್ತ ಶುದ್ಧೋದಕದಿಂದ ಸ್ನಾನಮಾಡಿ ಶಿವನನ್ನು ಧೂಪ, ದೀಪ, ನೈವೇದ್ಯಾದಿಗಳಿಂದ ಪೂಜಿಸಿದ್ದಾದರೆ ಪವಿತ್ರವಾದ ಗಂಗಾನದಿಯಲ್ಲಿ ಮಿಂದು ಕಾಶೀ ವಿಶ್ವೇಶ್ವರನ ದರ್ಶನದಿಂದ ಲಭಿಸುವ ಪುಣ್ಯ ಫಲವು ದೊರಕುತ್ತದೆಯೆಂದು; ಪುಣ್ಯಕ್ಕೆ ಸರಿಸಮಾನ ಯಾವುದೂ ಇಲ್ಲವೆಂದು ಸ್ಕಂದ ಪುರಾಣದಲ್ಲಿ ಹೇಳಿರುವುದರಿಂದ, ಈ ಎರಡು ಬುಡಕಟ್ಟು, ಶೈವ ಪಂಥದ ದೇವರುಗಳಿಗೆ ಆದಿನ ವಿಶೇಷ ಪೂಜೆ ಏರ್ಪಡಿಸುತ್ತಾರೆ.

ಕಾಡುಗೊಲ್ಲರ ಪ್ರಮುಖ ದೈವಗಳಾದ ಚಿತ್ರಲಿಂಗ, ಕಾಟಮ್ಮಲಿಂಗ, ಪಾತೇಲಿಂಗ, ಕ್ಯಾತಲಿಂಗ ಮತ್ತು ರಾಮಲಿಂಗ, ಎಂಬ ಪಂಚಲಿಂಗಗಳು ಪರಮೇಶ್ವರನ ಪ್ರತಿರೂಪವೆಂದು ಭಾವಿಸಿ, ಕೆಲವೊಂದು ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗಳಲ್ಲಿ ಶಿವರಾತ್ರಿ ದಿನ 'ಹುರುಳಿ ಗುಗ್ಗರಿ' ಬೇಯಿಸಿ ದೇವರಿಗೆ ಎಡೆ ಹಾಕುವ ಪದ್ಧತಿಯಿದೆ, ಇದನ್ನೇ ಕೆಲವು ಕಡೆ ಕಾಳೆಹಬ್ಬ ಅಥವಾ ಗುಗ್ಗರಿಹಬ್ಬ ಎಂದು ಆಚರಿಸುತ್ತಾರೆ.

ಶಿವರಾತ್ರಿಯ ಪರ್ವಕಾಲದಲ್ಲಿ ಉಪವಾಸಮಾಡಿ, ಅಂದು ಜಾಗರಣೆಮಾಡಿ, ಲೋಕ ರಕ್ಷಕನಾದ ಶಿವನನ್ನು ಸ್ಮರಿಸಿ ಶಿವ ಶಿವ ಎಂದು ಜಯಘೋಷಮಾಡಿ ಬಿಲ್ವಪತ್ರೆಯಿಂದ ಶಿವನನ್ನು ಪೂಜಿಸಿದರೆ ಜನ್ಮ ಜನ್ಮಾಂತರದ ಪಾಪಗಳು ನಶಿಸಿ ಹೋಗಿ ಸಹಸ್ರ ಕೋಟಿ ಪುಣ್ಯವು ಲಭಿಸುವುದೆಂದು ಸೂತ ಪುರಾಣಿಕರು ಶಿವರಾತ್ರಿಯ ಮಹಿಮೆಯನ್ನು ಅಖಂಡವಾಗಿ ಹೊಗಳಿ ಹಾಡಿದ್ದಾರೆ. ವಶಿಷ್ಠ, ಗಾರ್ಗಿ, ವಿಶ್ವಾಮಿತ್ರರಂಥ ಮಹಾ ಯೋಗಿಗಳು ಕೂಡ ಶಿವರಾತ್ರಿ ವ್ರತವನ್ನು ಆಚರಿಸಿ ಪುಣ್ಯಶಾಲಿಗಳಾಗಿ ಹೋಗಿದ್ದಾರೆ. ಆದ್ದರಿಂದಲೇ ಸ್ಕಂದ ಪುರಾಣದಲ್ಲಿ 'ಶಿವದರುಶನ ಪಡೆಯುತ್ತಿರುವ ಶಿವಭಕ್ತರಿಗೆ ಸದಾ ಸ್ವರ್ಗದ ಬಾಗಿಲು ತೆರೆದಿರುತ್ತದೆ' ಎಂದು ಹೇಳಲಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರುಗಳ, ಐತಿಹಾಸಿಕ ಪುರಾಣ ಪುರುಷ ಕಥೆಗಳಲ್ಲಿ ಗೋಕರ್ಣ,ಕಂಚಿ, ಕಾಳಹಸ್ತಿ, ಅಹೋಬಲ, ಶ್ರೀಶೈಲ, ಕಾಶಿ, ಕದರಿ, ಉಜ್ಜನಿ, ಹಂಪಿ, ಆನೆಗೊಂದಿ, ವಿದ್ಯಾರಣ್ಯ ಮೊದಲಾದ ಧಾರ್ಮಿಕ ಕ್ಷೇತ್ರಗಳ ಪ್ರಸ್ತಾಪ ಗಂಟೆ ಹಳವರು ಹೇಳುವ ಕಥೆಗಳಲ್ಲಿ ಮತ್ತು ಅವರ ಕಡತಗಳಲ್ಲಿ ಕಾಣಬಹುದಾಗಿದೆ. ಬೇಡರ ಕಣ್ಣಪ್ಪನ ಮಗ್ನ ಭಕ್ತಿಗೆ ಶಿವ ಮೆಚ್ಚಿ ಶಿವರಾತ್ರಿಯ ದಿನ ಆತನಿಗೆ ದರುಶನ ಕೊಟ್ಟ ಈ ಪುಣ್ಯಕಥೆಯು ಶಿವರಾತ್ರಿಯ ಕಥೆಯೆಂದು ಬಹು ಪ್ರಸಿದ್ಧಿಯನ್ನು ಪಡೆದಿದೆ.

ಬೇಡ ಬೇಟೆಗೆ ಹೋಗಿ, ಬಿಲ್ವ ಪತ್ತರಿ ಕೊಯ್ದು
ಬೇಡ ಕನ್ನಯ್ಯ ಶಿವಪೂಜೆ| ಮಾಡಿದನು
ನಾಡೊಳಗೆ ನೋಡ ಶಿವರಾತ್ರಿ

ಎಂಬ ಜಾನಪದ ಹಾಡು ಶಿವರಾತ್ರಿ ಮತ್ತು ಬೇಡರ ಕಣ್ಣಪ್ಪನ ಭಕ್ತಿಯ ಮಹತ್ವವನ್ನು ಕೊಂಡಾಡಿದ್ದಾರೆ. ಜಗತ್ ಕರ್ತನಾದ ಶಿವನೊಬ್ಬನೇ ಅಖಿಲಾಂಡ ಕೋಟಿ ಬ್ರಹ್ಮಾಂಡವನ್ನು ರಕ್ಷಿಸತಕ್ಕವನೆಂಬ ಮಾತು ಈ ಶಿವರಾತ್ರಿಗೆ ಅನ್ವಯಿಸುತ್ತದೆ. ಪ್ರಾತಃಕಾಲದಲ್ಲಿ ಶಿವನ ದರ್ಶನವನ್ನು ಪಡೆದುಕೊಂಡರೆ ಹಿಂದಿನ ರಾತ್ರಿಯಲ್ಲಿ ಮಾಡಿದ ಪಾಪವು ನಶಸಿ ಹೋಗುವುದೆಂಬ ಮಾತು ಈ ಎರಡು ಬುಡಕಟ್ಟು ಜನಾಂಗದ ಕಲೆ ಮತ್ತು ಸಾಹಿತ್ಯಗಳಲ್ಲಿ ಶಿವನಿಗೆ ಪ್ರಧಾನ ಪಾತ್ರಕೊಟ್ಟು ಆರಾಧಿಸುವ ಪ್ರವೃತ್ತಿ ಕಾಣಬಹುದಾಗಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಭಜನೆ, ಕೀರ್ತನೆ, ಜಾಗರಣೆ, ಉಪವಾಸದ ಮೂಲಕ ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ.

ಉಪವಾಸ, ಜಾಗರಣೆ, ಶಿವಪೂಜೆ, ಶಿವಸ್ಮರಣೆಗಳನ್ನು ಯಾವ ಶವಭಕ್ತರು ಮಾಡುತ್ತಾರೋ ಅವರಿಗೆ ಶಿವ ಸದ್ಗತಿಯು ಖಂಡಿತ ಲಭಿಸುತ್ತದೆ. ಅಲ್ಲದೆ ಯಾರು ಈ ಮಹಾಶಿವರಾತ್ರಿಯ ಕಥೆಯನ್ನು ಶಿವರಾತ್ರಿಯ ದಿನದಲ್ಲಿ ಭಕ್ತಿಯಿಂದ ಕೇಳುವರೋ ಅಂಥವರಿಗೆ ಶಿವಸಾಯುಜ್ಯ ಪದವಿ ಲಭಿಸುತ್ತದೆಂದು ಹೇಳುವ ಪುರಾಣಗಳ ಕಥೆಗಳನ್ನು

[illegible]

[illegible]

[illegible]

[illegible]

[illegible]

[illegible]

[illegible]

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬಲವಾಗಿ ನಂಬಿಕೊಂಡು, ಶಿವನ ಆರಾಧಕರಾಗಿ ಮಹಾಶಿವರಾತ್ರಿ ಹಬ್ಬವನ್ನು ಅತ್ಯಂತ ಸರಳವಾಗಿ ಆಚರಿಸುತ್ತಾರೆ.

೭. ಜಾತ್ರೆಗಳು

ಜನ ಸೇರುವ ತಾಣಗಳನ್ನು ಜಾತ್ರೆ ಎನ್ನುತ್ತಾರೆ. ಜಾತ್ರೆ ಎಂಬ ಪದ 'ಯಾತ್ರಾ' ಎಂಬ ಸಂಸ್ಕೃತ ಪದದಿಂದ ಬಂದಿದೆ. ಜಾತ್ರೆಯಲ್ಲಿ ನೋಟವೇ ಹೆಚ್ಚು ಹೀಗಾಗಿ 'ಯಾತ್ರ' ಪದದ ಅರ್ಥವನ್ನು 'ಜಾತ್ರೆ' ಶಬ್ದ ಉಳಿಲಸಿಕೊಂಡಿದೆ. ಈ ಜಾತ್ರೆ ಭಾರತಕ್ಕೆ ಮಾತ್ರ ಸಿಮೀತವಲ್ಲ, ಪಾಶ್ಚಾತ್ಯಾರಾಷ್ಟ್ರಗಳಲ್ಲಿಯೂ ಕೂಡ ಜಾತ್ರೆ ನಡೆಯುತ್ತಿದ್ದವು ಎಂಬುದಕ್ಕೆ ನಿರ್ದೇಶನಗಳಿವೆ. ಹಬ್ಬ ಮತ್ತು ಜಾತ್ರೆಗಿರುವ ಪ್ರಮುಖ ವ್ಯತ್ಯಾಸಗಳೆಂದರೆ, ಹಬ್ಬಗಳನ್ನು ಪ್ರತಿಯೊಂದು ಮನೆಯಲ್ಲಿಯೂ ಆಚರಿಸುತ್ತಾರೆ. ಯಾವುದೇ ಜಾತ್ರೆಗಳಾಗಲಿ ಸಾಮೂಹಿಕವಾಗಿ ನಡೆಯುತ್ತವೆ. ಒಂದೆರಡು ದಿನಗಳಿಂದ ಹಿಡಿದು ಹತ್ತುಹದಿನೈದು ದಿನಗಳಕಾಲ ನಡೆಯುವ ಜಾತ್ರೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುತ್ತವೆ. ದೇವರ ಆರಾಧನೆ ಮತ್ತು ಕೂಡಿಬಾಳುವ ಉದ್ದೇಶವೇ ಜಾತ್ರೆಯ ಮುಖ್ಯಾಂಶಗಳು.

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಭಾಗವಹಿಸುವ ಮತ್ತು ಆಚರಿಸುವ ಪ್ರಮುಖವಾದ ಜಾತ್ರೆಗಳೆಂದರೆ, ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಜಾತ್ರೆ; ಗೌರಸಮುದ್ರ ಮಾರಮ್ಮನ ಜಾತ್ರೆ; ಕ್ಯಾತಪ್ಪನ ಜಾತ್ರೆ; ಚಳ್ಳಕೆರೆ ವೀರಭದ್ರಸ್ವಾಮಿ ಮತ್ತು ಚಳ್ಳಕೆರೆಮ್ಮ; ಸಾಣೀಕೆರೆ ಗಂಜಿಗುಂಟಮ್ಮನ ಜಾತ್ರೆ. ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಕಂಪಳರಂಗಸ್ವಾಮಿ ಜಾತ್ರೆ; ದೇವಸಮುದ್ರ ಜಟ್ಟಂಗ ರಾಮೇಶ್ವರ ಜಾತ್ರೆ; ಮೊಳಕಾಲ್ಮೂರು ನುಂಕೆಮಲ್ಲೇಶ್ವರ ಜಾತ್ರೆ, ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ ಚಿತ್ರಲಿಂಗೇಶ್ವರ ಜಾತ್ರೆ; ದೇವರಗಂಜಿಗಟ್ಟೆ ಮಿಂಚೇರಿ ಜಾತ್ರೆ; ಬಾಗೂರು ಚೆನ್ನಕೇಶವ ಜಾತ್ರೆ; ಚಿತ್ರದುರ್ಗ ನಗರ ಬೇಟಿ ಉತ್ಸವ; ಹಿರೇಗುಂಟನೂರು ದ್ಯಾಮವ್ವನ ಜಾತ್ರೆ; ದೊಡ್ಡಸಿದ್ದನಹಳ್ಳಿ ಹನುಮಂತರಾಯನ ಮುಳ್ಳುಪಲ್ಲಕ್ಕಿ ಉತ್ಸವ; ಹಿರಿಯೂರು ತಾಲ್ಲೂಕು ಹರ್ತಿಕೋಟೆ ವೀರಭದ್ರಸ್ವಾಮಿ ದನಗಳ ಜಾತ್ರೆ; ಯರಬಳ್ಳಿ ಮಾರಕ್ಕನ ಜಾತ್ರೆ; ಯರಬಳ್ಳಿ ದೊಡ್ಡಗೊಲ್ಲರಹಟ್ಟಿ ಕಾಟಮ್ಮದೇವರ ಜಾತ್ರೆ; ವದ್ದಿಕೆರೆ ಸಿದ್ದಪ್ಪನ ಜಾತ್ರೆ; ಹಾರನಕಣಿವೆ ರಂಗಸ್ವಾಮಿ ಜಾತ್ರೆ; ಕೂಡಲಹಳ್ಳಿ ಪಾತೇದೇವರ ಜಾತ್ರೆ, ಕೂಡ್ಲಿ ಸಂಗಮೇಶ್ವರನ ಜಾತ್ರೆ,

ಮೊದಲಾದ ಜಾತ್ರೆಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಭಾಗವಹಿಸಿದರೂ ಅವರಿಗೆ ಕಂಪಲರಂಗಸ್ವಾಮಿ ಜಾತ್ರೆ, ಗೌರಸಮುದ್ರ ಮಾರಮ್ಮನ ಜಾತ್ರೆ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮತ್ತು ಕ್ಯಾತಪ್ಪನ ಜಾತ್ರೆಗಳು ಬಹು ಪ್ರಮುಖವಾಗಿವೆ.

೭.೧. ಕಂಪಳ ರಂಗಸ್ವಾಮಿ ಜಾತ್ರೆ

ಮೊಳಕಾಲ್ಮೂರಿನಿಂದ ಸುಮಾರು ೧೮ ಕಿ.ಮೀ. ದೂರದ ಚಿಕ್ಕುಂತಿ ಅಥವಾ ದೇವರಹಟ್ಟಿಯಲ್ಲಿ ಕಂಪಳರಂಗಸ್ವಾಮಿ ಜಾತ್ರೆ ನಡೆಯುತ್ತದೆ. ಕಂಪಳರಂಗಸ್ವಾಮಿ, ಜಗಳೂರು ಪಾಪನಾಯಕ, ಗಾದರಿಪಾಲನಾಯಕ ಮತ್ತು ಭಾಗ್ಯಲಕ್ಷ್ಮೀ ಎಂಬ ಮ್ಯಾಸಬೇಡರ ದೇವರುಗಳು ಈ ಹಟ್ಟಿಯಲ್ಲಿ ಕಂಡುಬರುತ್ತವೆ. ಕಂಪಳರಂಗಸ್ವಾಮಿ

ಯಿಂದಲೇ ಈ ಊರಿಗೆ ಕಂಪಳದೇವರಹಟ್ಟಿ ಎಂಬ ಹೆಸರು ಬಂದಿದೆ. ಈ ಹಟ್ಟಿಯಲ್ಲಿ ಸುಮಾರು ೨೫೦ ಮ್ಯಾಸಬೇಡರ ಮನೆಗಳು ಕಂಡುಬರುತ್ತವೆ. ಯಾವುದೇ ನಾಗರಿಕ ಸೌಲಭ್ಯಗಳು ಈ ಹಟ್ಟಿಯಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಬುಡಕಟ್ಟು ಜನಾಂಗದ ಪ್ರಧಾನ ಸಂಸ್ಕೃತಿಗಳನ್ನು ಇಲ್ಲಿ ಕಾಣಬಹುದಾಗಿದೆ. ಚಡ್ಡಿ, ಚಲ್ಲಣ ಹೆಗಲಮೇಲೊಂದು ಕರಿಕಂಬಳಿ, ತಲೆಗೆ ಪೇಟ, ಕೈಯಲ್ಲಿ ಕೋಲು, ಮುಂಗೈಗೆ ಬದ್ದು ಮೊದಲಾದ ವೇಷ-ಭೂಷಣಗಳು ಈ ಹಟ್ಟಿಯ ಮ್ಯಾಸಬೇಡರಲ್ಲಿ ಕಂಡುಬರುತ್ತವೆ.

ಕಂಪಳರಂಗಸ್ವಾಮಿ ಮ್ಯಾಸಬೇಡರಿಗೆ ಮೂಲ ದೇವರು ಮತ್ತು ಚಿಕ್ಕುಂತಿಯ ಪ್ರಧಾನ ದೇವರಾಗಿದ್ದಾನೆ. ಪಶುಪಾಲಕರಾದ ಜಗಲೂರು ಪಾಪನಾಯಕ ಮತ್ತು ಗಾದರಿಪಾಲನಾಯಕ ಇಬ್ಬರೂ ಕಂಪಳರಂಗನ ಶಿಷ್ಯರೆಂದು ಹೇಳುತ್ತಾರೆ. ಜಗಳೂರು ಪಾಪನಾಯಕ ತಿರುಪತಿಗೆ ಹೋಗಿ ತಿಮ್ಮಪ್ಪನ ದರುಶನ ಪಡೆದುಬಂದು ಚಿಕ್ಕುಂತಿಯಲ್ಲಿ 'ಕಂಪಳರಂಗಸ್ವಾಮಿ'ಯನ್ನು ಸ್ಥಾಪಿಸಿ ಕೆಲಕಾಲ ಅಲ್ಲಿಯೇ ವಾಸಿಸಿರಬೇಕೆಂದೂ ಶ್ರೀಶೈಲದಿಂದ ದೇವರುತ್ತುಗಳು ಬಂದವೆಂದು ಇಲ್ಲಿಯ ಪೂಜಾರಿಗಳು ಹೇಳುತ್ತಾರೆ.

ದೇವರಹಟ್ಟಿಯಿಂದ ಪೂರ್ವಕ್ಕೆ ಸ್ವಲ್ಪದೂರದಲ್ಲಿ 'ಕಳ್ಳಿ' ಹಾಕುವುದರೊಂದಿಗೆ ಮೂಹೂರ್ತ ಮಾಡಿ ಲಕ್ಕಿ ಸೊಪ್ಪಿನ ತರಡಿಕೆ ಅಥವಾ ಬೆರಗುಪಟ್ಟಿ ಜಾತ್ರೆ ಪ್ರಾರಂಭಿಸುತ್ತಾರೆ. ಒಂಭತ್ತು ದಿನ ಹೊಸಪೌಳಿಯಲ್ಲಿ ದೇವರಿಟ್ಟು ದೇವರ ಹಬ್ಬಗಳ ಮುಂದೆ ಬೆಂಕಿಹಾಕಿ ಬೆಳಕು ಮಾಡಿಕೊಂಡು ಒಂದೊಂದು ಕಾರ್ಯಕ್ರಮ ಆರಂಭಿಸುತ್ತಾರೆ. ಲಕ್ಕಿ ಮತ್ತು ಬಂದ್ರೆಸೊಪ್ಪುಗಳಿಂದ ನಿರ್ಮಿಸಿದ ಹೊಸಗುಡಿಸಲಿಗೆ ಕರಿಕಂಬಳಿ ಹೊದ್ದಿಸಿ, ಕಂಬಳಿ ಧ್ವಜ ನೆಟ್ಟಿರುತ್ತಾರೆ. ದೇವರ ಪೌಳಿಯ ಸುತ್ತ ಒಂದೊಂದು ಬೆಡಗಿನವರು 'ಉಗಾಡೆ' ಕಟ್ಟಿಕೊಳ್ಳುತ್ತಾರೆ. ಉಗಾಡೆ ಎಂದರೆ, ತಾತ್ಕಾಲಿಕ ವಾಸಕ್ಕಾಗಿ ಕಟ್ಟಿಕೊಂಡ ಹಸಿರು ಸೊಪ್ಪುಗಳ ತಡಿಕೆ. ಹಂಪಿ ಆನೆಗೊಂದಿಯಿಂದ ಮೈಸೂರು ಪ್ರಾಂತ್ಯದವರೆಗೂ ಆಂಧ್ರಪ್ರದೇಶದ ಅನಂತಪುರ ಮತ್ತು ಮಡಕಶಿರಾದವರೆಗೂ ಭಕ್ತಾಧಿಗಲು ಈ ದೇವರಿಗೆ ಬರುತ್ತಾರೆ. ಎತ್ತಿನ ಗಾಡಿಯಲ್ಲಿ ಜಾತ್ರೆಗೆ ಬರುವುದು, ಕೋಲಾಟ ನೃತ್ಯ ಮತ್ತು ಜನಪದ ಹಾಡುಗಳು ಈ ಕಂಪಳರಂಗನ ಜಾತ್ರೆಯ ಮುಖ್ಯಾಂಶಗಳು.

ಶಿವರಾತ್ರಿ ವೇಳೆಯಲ್ಲಿ ಮೊಳಕಾಲ್ಮೂರು ಹತ್ತಿರ ಮೇಲುದುರ್ಗದ 'ಕಂಪಳರಂಗನ ಹೊಂಡ' ಮತ್ತು ಹೊಸಪೇಟೆ ತಾಲ್ಲೂಕು ಹಂಪಿ ತುಂಗಭದ್ರನದಿಯ 'ತಿರುವಿನ ಮಡು' ಹತ್ತಿರ ಗಂಗೆಪೂಜೆ ಮಾಡಿಕೊಂಡು ಬರುತ್ತಾರೆ. ಮಾಘ ಮಾಸದಲ್ಲಿ ನಡೆಯುವ ಗುಗ್ಗರಿಹಬ್ಬ ಅಥವಾ ಜಾತ್ರೆಯ ಪ್ರಾರಂಭದ ದಿನ ಭಕ್ತಾದಿಗಳು ಕಾಸು ಮೀಸಲು ಅಂದರೆ ಹಾಲು, ಬೆಣ್ಣೆ, ಕಾಣಿಕೆ ಎರುತ್ತಾರೆ. ನಂತರ ತಿರುಪತಿ ಪೂಜೆ ಕಾರ್ಯದಲ್ಲಿ ಕಂಪಳರಂಗಸ್ವಾಮಿ ದೇವರ ಮುಂದೆ ಉರಿಯುವ ದೀವಟಿಗೆಯಿಂದ ಪಂಜು ಹಚ್ಚಿಕೊಂಡು ಆವೇಶ ಭರಿತರಾಗಿ ದಾಸರಿ ಬೆಡಗಿನ ದಾಸಯ್ಯಗಳು ಕುಣಿಯುತ್ತ ಸ್ವಾಮಿಯನ್ನು ನೆನದು ಉರಿಯುವ ಪಂಜನ್ನು ಬಾಯಲ್ಲಿಟ್ಟುಕೊಂಡು ಆರಿಸುತ್ತಾರೆ. ಜಗಳೂರು ಪಾಪನಾಯಕ ತಿರುಪತಿಗೆ ಹೋಗಿ ಕಾಸು ಅರ್ಪಿಸಿದ್ದ ಎಂಬ ಪ್ರತೀತಿಯಿಂದ ಪಾಪನಾಯಕ ದೇವರ ಪೂಜಾರಿಗಳು ಕಂಪಳರಂಗಸ್ವಾಮಿಗೆ ಕಾಸು ಒಪ್ಪಿಸುತ್ತಾರೆ. ನಂತರ ಗೋವಿನ ಕೊಂಬಿನಲ್ಲಿ ದೇವರಿಗೆ ಬೆಣ್ಣೆ ಅರ್ಪಿಸುವ "ಬೆಣ್ಣೆಪಡಿ" ಎಂಬ ಕಾರ್ಯ ಕಂಪಳರಂಗನಲ್ಲಿ ನಡೆಯುತ್ತದೆ.

ಹಿಂದೆ ಭಾಗ್ಯಲಕ್ಷ್ಮೀ ಶ್ರೀಕೃಷ್ಣನಿಗೆ ಮುತ್ತು ರತ್ನಗಳನ್ನು ಜೋಳಿಗೆ ಅರ್ಪಿಸಿದ್ದಳಂತೆ, ಅದಕ್ಕಾಗಿ "ಬೆತ್ತಜೋಳಿಗೆ" ಕಾರ್ಯವೆಂದು ಕಂಪಳರಂಗಸ್ವಾಮಿಗೆ ಮಾಡುತ್ತಾರೆ. ಭಾಗ್ಯಲಕ್ಷ್ಮೀಯ ಪಚ್ಚೆಕಡಗ ಮತ್ತು ಮಾಂಗಲ್ಯ, ಶ್ರೀಕೃಷ್ಣ ತನ್ನ ಕಾಲಿಗೆ ಹಾಕಿಕೊಳ್ಳುತ್ತಿದ್ದ 'ಮುತ್ತಿನ ಕಾಲ್ಪೆಂಡಿ' ಮೊದಲಾದ ಬೆಲೆ ಬಾಳುವ ಆಭರಣಗಳು ಕಂಪಳರಂಗನ ಗುಡಿಯಲ್ಲಿವೆ. ಗುಡಿಪೂಜಾರಿಗಳ ಜವಾಬ್ದಾರಿಯಲ್ಲಿ "ಮುತ್ತಿನ ಕಾಲ್ಪೆಂಡಿ" ಇರುತ್ತದೆ. ಹತ್ತೀಪ್ಪತ್ತು ವರ್ಷಗಳಿಗೆ ಒಂದು ಸಲ ನಾಗರಪಂಚಮಿಯಲ್ಲಿ 'ಎಡಕಟ್ಟಿನ ಹಬ್ಬ' ಮಾಡಿದಾಗ ಮಾತ್ರ ಮುತ್ತನ ಕಾಲ್ಪೆಂಡಿ ಹೊರತೆಗೆದು ದೇವರ ಪಟ್ಟದ ಪೂಜಾರಿಗಳ ಬಲಗೈಗೆ ಹಾಕಿ ಪ್ರದರ್ಶನ ಮಾಡಿ ನಂತರ ಬಚ್ಚಿಡುತ್ತಾರಂತೆ. ಜಗಳೂರು ಪಾಪನಾಯಕನ ಮುಕ್ಕಣ್ಣನ ಕಠಾರಿ ಮತ್ತು ಗಾದರಿ ಪಾಲನಾಯಕನ ಬಿಲ್ಲು ಈ ದೇವರಹಟ್ಟಿಯ ದೇವಸ್ಥಾನಗಳಲ್ಲಿವೆ. ಜಾತ್ರೆ ಸಂದರ್ಭದಲ್ಲಿ ಮಾತ್ರ ನೋಡಲು ಅವಕಾಶಗಳಿವೆ. ಬೇರೆ ಸಂದರ್ಭಗಳಲ್ಲಿ ನೋಡಲು ಸಿಗುವುದಿಲ್ಲ.

ಕಂಪಳರಂಗಸ್ವಾಮಿ, ಜಗಳೂರು ಪಾಪನಾಯಕ ಮತ್ತು ಗಾದರಿಪಾಲನಾಯಕ ದೇವರುಗಳಿಗೆ ಭಕ್ತಾದಿಗಳು ತರುವ ಮೀಸಲು ನೈವೇಧ್ಯ ಪದಾರ್ಥಗಳೆಂದರೆ ಹಾಲು, ಬೆಣ್ಣೆ, ತುಪ್ಪ, ಹುರುಳಿ, ಜೋಳ, ಬೆಲ್ಲ ಮತ್ತು ಬಾಳೆಹಣ್ಣು, ಪೂಜೆ ಕಾರ್ಯ ಮುಗಿದ ನಂತರ ಜೋಳದ ಅನ್ನ, ಹಾಲು, ಮೊಸರು ಇಲ್ಲವೇ ಹುರುಳಿ ಸಾರು ಪ್ರಸಾಧವಾಗಿ ಸ್ವೀಕರಿಸುತ್ತಾರೆ. ಅದೇ ದಿನ ಕಂಪಳರಂಗ ಮತ್ತು ಪಾಪನಾಯಕ ದೇವರುಗಳ ದೇವರೆತ್ತುಗಳು ಬರುತ್ತವೆ, ಭಾಗ್ಯಲಕ್ಷ್ಮೀ ಗುಡಿ ಹತ್ತಿರ ಎತ್ತಿನ ಕಿಲಾರಿಗಳು ಕರಿಕಂಬಳಿ ಗದ್ದಿಗೆ ಹಾಸುತ್ತಾರೆ. ಆಗ ಭಕ್ತಾದಿಗಳು ಕಿಲಾರಿಗಳಿಗೆ ಕಾಸು ಅರ್ಪಿಸುತ್ತಾರೆ. ಉಡೇವು ಗ್ರಾಮದಿಂದ ಲಿಂಗಾಯಿತರು ಕುದುರೆ ಹಿಡಿದುಕೊಂಡು ಬಂದು ಕಂಪಳರಂಗಸ್ವಾಮಿಗೆ ಕಾಣಿಕ ಅರ್ಪಿಸುತ್ತಾರೆ. ದೇವರೆತ್ತುಗಳ ಪೂಜಾಕಾರ್ಯ ಮುಗಿದ ನಂತರ ಪಾಪನಾಯಕನ ಗುಡಿಯಿಂದ ಕಂಪಳರಂಗಸ್ವಾಮಿ ಗುಡಿಯವರೆಗೆ ದೇವರೆತ್ತುಗಳನ್ನು ಮೆರವಣಿಗೆ ಹೊರಡಿಸುವುದೇ ಜಾತ್ರೆಯ ಮುಖ್ಯ ಅಂಗವಾಗಿರುತ್ತದೆ. ನಂತರ ಎಲ್ಲಾ ದೇವರುಗಳನ್ನು ಮೆರವಣಿಗೆಯ ಮೂಲಕ ಗುಡಿದುಂಬಿಸಿ ಮಹಾ ಮಂಗಳಾರತಿಯೊಂದಿಗೆ ಜಾತ್ರೆ ಕಾರ್ಯಕ್ರಮಗಳು ಮುಕ್ತಾಯವಾಗುತ್ತವೆ.

೭.೨. ಗೌರಸಂದ್ರದ ಮಾರಮ್ಮನ ಜಾತ್ರೆ

ಚಳ್ಳಕೆರೆಯಿಂದ ಉತ್ತರ ಈಶಾನ್ಯಕ್ಕೆ ೨೮ ಕಿ.ಮೀ ದೂರದ ತಳಕು ಹೋಬಳಿಗೆ ಸೇರಿದ ಗೌರಸಮುದ್ರ ಎಂಬ ಹಳ್ಳಿಯಲ್ಲಿ ಗೌರಸಮುದ್ರಮ್ಮ ಅಥವಾ ಮಾರಮ್ಮ ದೇವತೆಯ ಗುಡಿ ಇದೆ ಐತಿಹಾಸಿಕವಾಗಿ ಮತ್ತು ಧಾರ್ಮಿಕವಾಗಿ ಈ ಗ್ರಾಮ ಬಹಳ ಮಹತ್ವ ಪಡೆದುಕೊಂಡಿದೆ. ಈ ಊರನಲ್ಲಿ ಮಾರಮ್ಮ ದೇವತೆಯ ಬಹುದೊಡ್ಡ ಜಾತ್ರೆ 'ತುಮ್ಮ್ಲು'ನಲ್ಲಿ ನಡೆಯುತ್ತದೆ. ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿ ನಡೆಯುವ ಈ ಮಾರಿಜಾತ್ರೆಗೆ ಸುಮಾರು ೨೫ ರಿಂದ ೩೦ ಸಾವಿರ ಜನಸಂಖ್ಯೆ ಸೇರುತ್ತದೆ. ಚಿತ್ರದುರ್ಗ ಜಿಲ್ಲೆಯ ಬಹುದೊಡ್ಡ "ಮಾರಿಜಾತ್ರೆ" ಎಂದೇ ಪ್ರಖ್ಯಾತವಾಗಿದೆ. ಈ ಪ್ರದೇಶದಲ್ಲಿ ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗದವರು ಈ ಜಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರುತ್ತಾರೆ. ಈ ಎರಡು ಸಮುದಾಯಗಳಿಗೆ 'ಕುಲದೇವತೆ'ಯಾಗಿ, ಮತ್ತು ಹಲವಾರು ಪಾಳೆಯಗಾರರ ಇತಿಹಾಸದಲ್ಲಿ "ಗೌರಸಮುದ್ರ

ಮಾರಮ್ಮ"ನ ವಿಷಯ ಪ್ರಸ್ತಾಪವಾಗಿದೆ. ಕಾಡುಗೊಲ್ಲರ ಎತ್ತಪ್ಪ ಮತ್ತು ಜುಂಜಪ್ಪನ ಕಥೆ. ಪುರಾಣಗಳಲ್ಲಿ ಗೌರಸಂದ್ರದ ಮಾರಕ್ಕನ ಪಾತ್ರ ಬಹುಮುಖ್ಯವಾಗಿದೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗದ ಕಥೆ, ಪುರಾಣಗಳಲ್ಲಿ ಗೌರಸಂದ್ರದ ಮಾರಕ್ಕ 'ಕಣಿ' ಹೇಳುವ ಕೊರವಂಜಿ ವೇಶದಲ್ಲಿ ಪ್ರತ್ಯಕ್ಷವಾಗುತ್ತಾಳೆ.

ನವಶಕ್ತಿಯರಲ್ಲಿ ಈಕೆ 'ಮಾರಿ' ಇತರರು ಆದಿಶಕ್ತಿ, ಅಂಕಾಲಮ್ಮ, ಪೀಠಾರಿ, ಭದ್ರಕಾಳಿ, ದುರ್ಗೆ, ಚಾಮುಂಡಿ, ಪೂರ್ಣಾ ಮತ್ತು ಪುಷ್ಕಲಾ ಈಕೆಯ ವಿಚಾರವಾಗಿ ಹಲವಾರು ಕಡೆ ಹಲವಾರು ಕಥೆಗಳು ಪ್ರಚಲಿತವಾಗಿವೆ. ಕಷ್ಟನಷ್ಟಕ್ಕೆ ಒಳಗಾದ ಭಕ್ತಾಧಿಗಳಿಗೆ 'ಅಮ್ಮ'ನಾಗಿ ಹರಸಿ ಆರ್ಶಿವಾದಿಸಿದ ಕಥೆಗಳಂತೂ ಈ ಪ್ರದೇಶದಲ್ಲಿ ನೂರಾರು ಕೇಳಿ ಬರುತ್ತವೆ.

ಹಲವು ಬುಡಕಟ್ಟು ಜನಾಂಗದ ಕಥೆ, ಪುರಾಣಗಳಲ್ಲಿ ಗೌರಸಂದ್ರ ಮಾರಕ್ಕ ಕಣಿ ಹೇಲುವ ಕೊರವಂಜಿ ವೇಶದಲ್ಲಿ ಕಾಣಿಸಿಕೊಳ್ಳುವುದರಿಂದ ಈ ಜಾತ್ರೆಯಲ್ಲಿ ಕೊರವಂಜಿಗಳಿಗೆ ವಿಶೇಷ ಗೌರವ ಕೊಟ್ಟು 'ಕಣಿ ಕೇಳುವ' ಸಂಪ್ರದಾಯ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಬೆಳೆದು ಬಂದಿದೆ. ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದ, ಕೊರಚರ ಹೆಂಗಸರು ಕೊರವಂಜಿ ಪುಟ್ಟಿ ಹೊತ್ತು 'ಕಣಿಹೇಳಿ' ಕೊಂಡು ತಿರುಗುವ ಸುಮಾರು ೩೦ ರಿಂದ ೪೦ ಕೊರವಂಜಿಗಳನ್ನು ಈ ಜಾತ್ರೆಯಲ್ಲಿ ಗುರಿತಿಸಬಹುದು.

ಈ ಎರಡು ಬುಡಕಟ್ಟು ಜನಾಂಗಕ್ಕೆ ಕಣಿಕೇಳುವ ಪದ್ಧತಿ ಬಹು ಹಿಂದಿನಿಂದಲೂ ಬೆಳೆದುಬಂದಿದೆ. ಅದೇ ರೀತಿ ಕಾಡುಗೊಲ್ಲರ ಪೂಜಾರಿಗಳು 'ಗಣೆಊದಿ' ಕಣಿ ಹೇಳುವುದನ್ನು ಕೂಡ ಈ ಜನಾಂಗ ಬಲವಾಗಿ ನಂಬುತ್ತಾರೆ.

ಗೌರಸಂದ್ರದ ಮಾರಮ್ಮನ ಜಾತ್ರೆ ಪ್ರಾರಂಭವಾಗುವುದೇ ಅಮಾವಾಸ್ಯನಂತರ ಗೌರಿ ಗಣೇಶನ ಹಬ್ಬದ ಸಂದರ್ಭದಲ್ಲಿ. ಹಿಂದಿನ ದಿನ ಗೌರಿಬರುತ್ತಾಳೆ. ಮರುದಿನ ಗಣಪತಿ ಬರುತ್ತಾನೆ ಎಂಬ ಸಂಪ್ರದಾಯವಿದೆ. ಅದೇ ಸಮಯಕ್ಕೆ ಗೌರಸಮುದ್ರದಲ್ಲಿ 'ಗೌರಿದೇವಿ' ಬರುತ್ತಾಳೆ. ಅವಳೇ 'ಮಾರಮ್ಮ' ಎಂದು ಇಲ್ಲಿನ ಪ್ರತೀತಿ ಇದೆ. ಆದ್ದರಿಂದಲೇ ಗೌರಸಮುದ್ರಕ್ಕೆ "ಗೌರಿಸಂದ್ರ"ವೆಂದು ಕರೆಯುತ್ತಾರೆ.

ಭಾದ್ರಪದ ಮಾಸದ ಮೊದಲನೆ ಮಂಗಳವಾರ ಗೌರಸಮುದ್ರದಲ್ಲಿ ಮಾರಮ್ಮನ ಜಾತ್ರೆ ಮಾಡುವುದರಿಂದ ಆದಿನ ಊರೊಳಗಿರುವ ಗುಡಿಯಲ್ಲಿ 'ಮಾರಮ್ಮನ ಬುಟ್ಟಿ'ಗೆ ಅಲಂಕಾರ ಮಾಡುತ್ತಾರೆ. ನಿಡಗಲ್ಲಿನಿಂದ 'ಹೂವು' ಬಂದ ಮೇಲೆ ಗೌರಸಂದ್ರ ಮಾರಮ್ಮ ಹೊರಡುತ್ತಾಳೆ. ಅಕ್ಕರಾಯಮ್ಮನ ಅವತಾರ ಗೌರಸಂದ್ರ ಮಾರಮ್ಮ ಎಂದು ಹೇಳುತ್ತಾರೆ. ಗೌರಸಮುದ್ರಕ್ಕೆ ಐವೋದಿ ಮಠ ಎಂದು ಕರೆಯುತ್ತಾರೆ. ಸಾಲಿಗ್ರಾಮಗಳಿಟ್ಟ ಬೆತ್ತದ ಬುಟ್ಟಿಗೆ ಕೆಂಪು ವಸ್ತ್ರಸುತ್ತಿ, ಬೆಳ್ಳಿ ಬಂಗಾರದ ಆಭರಣಗಳನ್ನು ತೊಡಿಸಿ ದೇವರ ಪೂಜಾರಿ ತಲೆಯ ಮೇಲೆ ಹೊತ್ತುಕೊಂಡು ಸಾಗುತ್ತಾನೆ. ಸಕಲ ವಾದ್ಯವೇಳಗಳೊಂದಿಗೆ ಸುಮಾರು ಮೂರು ಕಿ.ಮೀ. ದೂರವಿರುವ 'ತುಮ್ಮು' ಕಡೆಗೆ ಮಾರಮ್ಮನ ಹೊತ್ತ ಪೂಜಾರಿ ಮತ್ತು ಜನ ಸಮೂಹ ಓಡುತ್ತಿರುತ್ತಾರೆ. ದಾರಿ ಮಧ್ಯೆ ಬಳೆಗಾರನ ಕಟ್ಟೆ ಹತ್ತಿರ ದೇವರನ್ನು ನಿಲ್ಲಿಸಿ ಗದ್ದಿಗೆ ಮಾಡಿ ನಂತರ ತುಮ್ಮು ಕಡೆಗೆ 'ಮಾರಮ್ಮ' ಬರುತ್ತಾಳೆ. 'ತುಮ್ಮು' ಅಂದರೆ ಅಡವಿ ಎಂದು ಅರ್ಥ. ಹಿಂದಿನ ಕಾಲದಲ್ಲಿ ಈ ಪ್ರದೇಶ ದೊಡ್ಡ ಅರಣ್ಯವಾಗಿತ್ತಂತೆ. ಮೊತ್ತೊಂದು ಅರ್ಥದಲ್ಲಿ 'ಮಾರಮ್ಮ' ಎಂದರೆ 'ದೊಂಬಿಕಾಳಗ', 'ಗೊಂದಲ'ದ ಸ್ಥಳವೆಂದು ಅರ್ಥವಿದೆ.

ಸುಮಾರು ಎರಡು ಗಂಟೆ ವೇಳೆಗೆ 'ಮಾರಮ್ಮ' ತುಮ್ಮುಗೆ ಬರುವಾಗ, ತಳಕು ಹೋಬಳಿ ಸುತ್ತ ಮುತ್ತಲಿನ ರೈತಾಪಿ ಜನರು, ತಮ್ಮ ಹೊಲ ಗದ್ದೆಗಳಲ್ಲಿ ಬೆಳೆದಿದ್ದ ಬೆಳೆಗಳನ್ನೂ ಅದರಲ್ಲೂ 'ಉಳ್ಳಾಗಡ್ಡೆ' ಮತ್ತು ಕೋಳಿಮರಿಗಳನ್ನು ತಂದು ದೇವಿಗೆ ತೂರುತ್ತಾರೆ. ಬೆಳೆದ ಬೆಳೆಗಳನ್ನು ತೂರಿದರೆ ಫಸಲು ಚೆನ್ನಾಗಿ ಬರುತ್ತದೆಂದೂ ಕೋಳಿ ಮರಿಗಳನ್ನು ತೂರಿದರೆ ಕೋಳಿಗಳ ಸಂತತಿ ಹೆಚ್ಚುತ್ತದೆಂದು ಇಲ್ಲಿಯ ಭಕ್ತಾದಿಗಳ ನಂಬಿಕೆಯಾಗಿದೆ. ದೇವರು ತುಮ್ಮುಗೆ ಬಂದು ಪೌಳಿಯಲ್ಲಿ ಗದ್ದಿಗೆ ಮಾಡಿದ ನಂತರ, ಪೌಳಿಯ ಮುಂಭಾಗ ಕರಿಬಣ್ಣದ ಮೇಕೆ ಹೋತವನ್ನು ವಾಸೆ ಕೊಯ್ಯುತ್ತಾರೆ. ಈ ಮೇಕೆ ಹೋತಗೆ ಪೋತರಾಜ ಎನ್ನುತ್ತಾರೆ. ವಾಸೆಕೊಯ್ದಾಗ (ಬಲಿಕೊಟ್ಟಾಗ) ಎಲ್ಲರೂ 'ಸೂರ್ಯನಮುಕ್ಕು' ಎಂದು ಸೂರ್ಯನಿಗೆ ನಮಸ್ಕಾರ ಮಾಡುತ್ತಾರೆ. ಹೀಗೆ ಸೂರ್ಯನಮಸ್ಕಾರ ಮಾಡುವುದರಿಂದ ಮ್ಯಾಸಬೇಡರ ಮೂಲ ಪುರುಷರಲ್ಲಿ ಒಬ್ಬನಾದ ಯರಮಂಚನಾಯಕನಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಎಂಬ ಉದ್ದೇಶದಿಂದ ಸಾಂಪ್ರದಾಯಿಕವಾಗಿ ಈ ಪದ್ಧತಿಯನ್ನು ಆಚರಿಸುತ್ತಾರೆ. ವಾಸೆಕೊಯ್ದ ಮಾಂಸವನ್ನು ಯರಮಂಚನಾಯಕನ ಬೆಡಗಿನ ಅಣ್ಣತಮ್ಮಗಳು ಮಾತ್ರ ಅಡಿಗೆ ಮಾಡಿ ಊಟ ಮಾಡುತ್ತಾರೆ. ಆಕಸ್ಮಿಕವಾಗಿ ಉಳಿದ ಮಾಂಸ ಮತ್ತು ಮೂಳೆ, ಚರ್ಮ ಮುಂತಾದವುಗಳನ್ನು ಗುಂಡಿ ಮಾಡಿ ನೆಲದಲ್ಲಿ ಮುಚ್ಚುತ್ತಾರೆ. ವಾಸೆಕೊಯ್ಯುವ ಸಂಪ್ರದಾಯವನ್ನು ಪ್ರತಿವರ್ಷ ಗೌರಸಮುದ್ರದಲ್ಲಿ ಆಚರಿಸುತ್ತಾರೆ.

ವಾಸೆಕೊಯ್ದ ನಂತರ ಹರಕೆ ಹೊತ್ತ ಭಕ್ತಾಧಿಗಳು ಹಿಟ್ಟಿನಾರತಿ, ಬೇವಿನ ಸೀರೆ, ಬಾಯಿಬೀಗ, ದಿಂಡುಳ್ಳು ಮೊದಲಾದ ಸೇವೆಗಳನ್ನು ಸಲ್ಲಿಸಿ ಪೌಳಿಸುತ್ತ ಪ್ರದಕ್ಷಿಣೆ ಹಾಕುತ್ತಾರೆ. ಭಕ್ತಾದಿಗಳು ಉಟ್ಟುಬಿಟ್ಟ ಬೇವಿನಸೊಪ್ಪಿನ ಉಡುಗೆ ಸುಮಾರು ಒಂದೆರಡು ಲಾರಿಯಷ್ಟಾದರೂ ಪೌಳಿಯ ಸುತ್ತಮುತ್ತ ಬಿದ್ದಿರುತ್ತದೆ. ಹೊಸ ಮಣ್ಣಿನ ಗಡಿಗೆಯಲ್ಲಿ ಈಚರ ಹೆಂಡವನ್ನು ತುಂಬಿಕೊಂಡು 'ಘಟಪೂಜೆ' ಎಂದು ಮಾಡಿ ಮಾರಮ್ಮಗೆ ಅರ್ಪಿಸುತ್ತಾರೆ. ಹೆಂಡವನ್ನು ಹಾಲು ಎಂದೇ ಕರೆಯುತ್ತಾರೆ. ಸಾವಿರಾರು ಕುರಿ, ಕೋಳಿ, ಕೋಣ, ಮೇಕೆಗಳನ್ನು ಇದೇ ಸಂದರ್ಭದಲ್ಲಿ ಮಾರಮ್ಮಗೆ ಬಲಿಕೊಟ್ಟು ಮಾಂಸದ ಅಡಿಗೆ ಮಾಡಿ ಜಾತ್ರೆಯಲ್ಲಿ ಊಟ ಮಾಡುತ್ತಾರೆ. ಜೊತೆಗೆ ಸಸ್ಯಹಾರಿಗಳು ಕೂಡ ಹುಗ್ಗಿ, ಹೋಳಿಗೆ, ಅನ್ನ ಮೊದಲಾದ ಸಿಹಿ ಪದಾರ್ಥಗಳನ್ನು ದೇವರಿಗೆ ಎಡೆ ಹಾಕಿ ಊಟ ಮಾಡುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕುರಿ ಮತ್ತು ಮೇಕೆಗಳನ್ನು ಮಾತ್ರ ಕಡಿಯುತ್ತಾರೆ. ಕೋಳಿಯನ್ನು ಕಡಿಯುವುದಿಲ್ಲ ಮತ್ತು ತಿನ್ನುವುದಿಲ್ಲ.

'ಮಧ್ಯಾಹ್ನದ ಮಾರಮ್ಮ'ನೆಂದು ಹೆಸರಾದ ಈ ಜಾತ್ರೆ ಕೆಲವೇ ಗಂಟೆಗಳಲ್ಲಿ ನಡೆದು, ಸಂಜೆಯಾಗುವುದರೊಳಗಾಗಿ ಪ್ರತಿಯೊಬ್ಬರು 'ತುಮ್ಮು'ನಲ್ಲಿ ಇರದಂತೆ ಗಡಿಬಿಡಿಯಾಗಿ ಜಾಗ ಖಾಲಿ ಮಾಡಿ ಅವರವರ ಊರಿಗಳಿಗೆ ಹೋಗುತ್ತಾರೆ. ಆಕಸ್ಮಿಕವಾಗಿ ತುಮ್ಮುನಲ್ಲಿ ಯಾರಾದರೂ ಉಳಿದುಕೊಡರೆ, ಆದಿನ ರಾತ್ರಿ ಈ ಪ್ರದೇಶದಲ್ಲಿ ಮಾರಮ್ಮ ಓಡಾಡುತ್ತಾಳೆ, ಕುರಿ, ಕೋಳಿ, ಕೋಣ ಕಡಿದು ಚಲ್ಲಿದ ರಕ್ತ ಕುಡಿಯಲು ನವದುರ್ಗಿಯರು ಬರುತ್ತಾರೆ. ಆಗ ಯಾರು ನೋಡಬಾರದು ಆಕಸ್ಮಿಕವಾಗಿ ನೋಡಿದ್ದಾದರೆ ಎದೆ ಒಡೆದು ಕೊಂಡು ಸಾಯುತ್ತಾರೆಂದು ಇಲ್ಲಿಯ ಜನರ ನಂಬಿಕೆಯಾಗಿದೆ. ಬಳೆಮಲಾರ ಹೊತ್ತು ಜೀವಿಸುತ್ತಿದ್ದ ಬಳೆಗಾರ ನೊಬ್ಬ, ಮಾರಮ್ಮನ ಜಾತ್ರೆ ನೆಡೆದಾಗ ಆದಿನ ರಾತ್ರಿ ಮರಹತ್ತಿ ಕುಳಿತು ತುಮ್ಮುನಲ್ಲಿ ಉಳಿದು ಕೊಂಡನಂತೆ.

ಮಧ್ಯರಾತ್ರಿ ಸಮಯದಲ್ಲಿ ಆರ್ಭಟಿಸುತ್ತ ಬಂದ "ಮಾರಿ"ಯ ರೌದ್ರಾವತಾರ ನೋಡಿ ರಕ್ತಕಾರಿ ಮರದಿಂದ ಕೆಳಗೆ ಬಿದ್ದು ಸತ್ತನೆಂದು ಆತನ ಸಮಾಧಿಕಟ್ಟೆ ಮತ್ತು ಮರವನ್ನು ಈಗಲೂ ತೋರಿಸುತ್ತಾರೆ. ಅದಕ್ಕಾಗಿ ದೇವರು ತುಮ್ಲುಗೆ ಹೋಗುವಾಗ ಬಳೆಗಾರನ ಕಟ್ಟೆ ಹತ್ತಿರ ಗದ್ದುಗೆ ಮಾಡಿ ನಂತರ ಹೊರಡುವ ಪದ್ಧತಿಯಿದೆ.

ಈ ಕಥೆ ಮತ್ತು ಘಟನೆಯಿಂದ ಜಾತ್ರೆ ನಡೆದ ಸ್ಥಳದಲ್ಲಿ ಯಾರು ಇಲ್ಲದೇ ಸಂಜೆಯಾಗುವುದರೊಳಗಾಗಿ ದೇವರನ್ನು ಹೊರಡಿಸಿಕೊಂಡು ಗೌರಸಮುದ್ರ ಸೇರಿ ದೇವರನ್ನು ಗುಡಿ ದುಂಬಿಸುತ್ತಾರೆ. ಮಾರಮ್ಮನ ಗುಡಿ ಪಕ್ಕ ಬೊಮ್ಮಲಿಂಗದೇವರ ಗುಡಿಯಿದ್ದು ಈ ದೇವರು ಮಾರಕ್ಕನ ತಮ್ಮ ಎಂದು ಹೇಳುತ್ತಾರೆ. ಗೌರಸಮುದ್ರದ ಮಾರಮ್ಮನ ಹಬ್ಬ ಮಂಗಳವಾರ ವಾದರೆ ಅದರ ಹಿಂದಿನ ಗುರುವಾರ ಬೊಮ್ಮಲಿಂಗ ದೇವರ ಗುಡಿ ಹತ್ತಿರ ವಾಸೆ ಕೊಯ್ಯುತ್ತಾರೆ. ಮರುದಿನ ಅಂದರೆ ಬುಧವಾರ ಮಾರಮ್ಮನ ಗುಡಿ ಮುಂದೆ ಸಿಡಿ, ಓಕುಳಿ ಉತ್ಸವಗಳು ಊರಲ್ಲಿ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಗೌರಸಮುದ್ರ ಗ್ರಾಮದವರ ವಿಶೇಷತೆಯೆಂದರೆ ಜಾತ್ರೆಯ ದಿನ ಯಾರೊಬ್ಬರು ಬೇಟೆ ಕಡಿಯುವುದಿಲ್ಲ ಮತ್ತು ಮಾಂಸಾಹಾರವನ್ನು ಅಡಿಗೆ ಮಾಡುವುದಿಲ್ಲ, ಹೊರಗಿನಿಂದ ಜಾತ್ರೆಗೆ ಬಂದ ಭಕ್ತಾದಿಗಳು ತುಮ್ಲುನಲ್ಲಿ ಮಾಂಸಾಹಾರ ಮಾಡುತ್ತಾರೆ. ಆದರೆ ತಿಂಗಳು ಕಳೆದ ನಂತರ ಮರಿ ಪರಿಷೆಯಲ್ಲಿ ಮಾತ್ರ ಈ ಊರಿನ ಮಾಂಸಾಹಾರಿಗಳು ಬೇಟೆ ಕಡಿಯುತ್ತಾರೆ. ಸಸ್ಯಹಾರಿಗಳು ಹುಗ್ಗಿ, ಹೋಳಿಗೆ, ಅನ್ನ ಸಿಹಿ ಪದಾರ್ಥಗಳನ್ನು ಅಡಿಗೆ ಮಾಡುತ್ತಾರೆ. ಭಾದ್ರಪದ ಮಾಸದ ಮೊದಲನೆ ಮಂಗಳವಾರ ಗೌರಸಮುದ್ರದಲ್ಲಿ ಮಾರಮ್ಮನ ಜಾತ್ರೆ ಮುಗಿದ ನಂತರ ಉಳಿದೆಲ್ಲ ಕಡೆಯೂ ಅವರವರ ಅನುಕೂಲಕ್ಕೆ ತಕ್ಕಂತೆ ಬಂದು ಮಂಗಳವಾರ ಮಾರಮ್ಮನ ಹಬ್ಬ ಮಾಡುತ್ತಾರೆ.

ಗೌರಸಮುದ್ರದ ಮಾರಮ್ಮನಿಗೆ ಮ್ಯಾಸಬೇಡರು, ಕಾಡುಗೊಲ್ಲರು, ಭೋವಿಗಳು, ಉಪ್ಪಾರರು, ಕುರುಬರು, ಕುಂಚಿಟಗರು, ಚಲುವಾದಿ ಮತ್ತು ಮಾದಿಗರು ಅತಿ ಹೆಚ್ಚು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಬಹುಪಾಲು ಬುಡಕಟ್ಟು ಜನಾಂಗಗಳಿಗೆ "ಅಮ್ಮ"ನಾಗಿ ಈ ಪ್ರದೇಶದಲ್ಲಿ ಹೆಸರಾಗಿದ್ದಾಳೆ ಗೌರಸಮುದ್ರದ ಮಾರಮ್ಮ.

೭.೩. ನಾಯಕನಹಟ್ಟಿ ತಿಪ್ಪೇಸ್ವಾಮಿ ರಥೋತ್ಸವ

ಚಳ್ಳಕೆರೆಯಿಂದ ೩೩ ಕಿ.ಮೀ ದೂರದಲ್ಲಿರುವ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗಳ ತಪೋಭೂಮಿ ಮತ್ತು ಪುಣ್ಯಕ್ಷೇತ್ರವಾಗಿದೆ. ಕಾಟಮಲ್ಲನಾಯಕನೆಂಬುವನು ಕಟ್ಟಿದ 'ಹಟ್ಟಿ'ಗೆ ನಾಯಕನಹಟ್ಟಿ ಎಂದು ಕರೆಯಲಾಗಿದೆ. ಮುಂದೆ ಈತನು ವಂಶೀಕರು ಹಟ್ಟಿಯ ಪಾಳೆಯಗಾರರೆಂದೇ, ಪ್ರಸಿದ್ಧರಾದರು. ಇಂಥ ನಾಯಕನಹಟ್ಟಿಯ ಐತಿಹಾಸಿಕ ಕ್ಷೇತ್ರದಲ್ಲಿ ಪ್ರತಿವರ್ಷ ಪಾಲ್ಗುಣ ಮಾಸದ ಚಿತ್ತಾ ನಕ್ಷತ್ರದಲ್ಲಿ ತಿಪ್ಪೇರುದ್ರಸ್ವಾಮಿಗಳ ರಥೋತ್ಸವ ಮತ್ತು ಜಾತ್ರೆ ನಡೆಯುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲೇ ಅತ್ಯಂತ ದೊಡ್ಡ ಜಾತ್ರೆಯಾಗಿದ್ದು ಲಕ್ಷಾಂತರ ಭಕ್ತಾದಿಗಳು ನಾಡಿನ ಸುತ್ತಡೆಗಳಿಂದ ಇಲ್ಲಿಗೆ ಬರುತ್ತಾರೆ. ಈ ಪ್ರದೇಶದ ಸುತ್ತಮುತ್ತ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಅಧಿಕ ಸಂಖ್ಯೆಯಲ್ಲಿ ವಾಸಿಸುವುದರಿಂದ ಈ ಜಾತ್ರೆಯಲ್ಲಿಯೂ ಕೂಡ ಅವರೇ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತಾರೆ. ಜಾತಿ ಭೇದ ವಿಲ್ಲದೆ ಎಲ್ಲಾ ಜಾತಿಯ ಹಿಂದು ಮುಸ್ಲಿಂರು ಈ ಜಾತ್ರೆಯಲ್ಲಿ ಭಾಗವಹಿಸಿ ದೇವರ ದರ್ಶನ ಪಡೆಯುತ್ತಾರೆ.

ರಥೋತ್ಸವಕ್ಕೆ ಮುಂಚೆ ಎಲ್ಲಾ ಹನ್ನೆರಡು ಕೈವಾಡದವರು ಸೇರಿ ಪೂಜೆ, ಧ್ವಜರೋಹಣ, ರಥಕ್ಕೆ ಎಣ್ಣೆ,

ಹಾಕುವುದು ತೇರು ಕಟ್ಟುವುದು ಬಲೆಬಾನ ಹಾಕುವುದು ಮೊದಲಾದ ಕೆಲಸ ಕಾರ್ಯಗಳನ್ನು ಅವರೆಲ್ಲರೂ ನಿಷ್ಠೆಯಿಂದ ಆಚರಿಸುತ್ತಾರೆ. ಸುಮಾರು ೬೦ ಅಡಿ ಎತ್ತರದ ಪಂಚ ಗಾಲಿಯ ತೇರು ಒಂಭತ್ತು ಅಂತಸ್ತುಗಳನ್ನು ಹೊಂದಿದೆ. ಹಲವಾರು ದೇವಾನು ದೇವತೆಗಳ ವಿಗ್ರಹಗಳು, ಬಣ್ಣಬಣ್ಣದ ಬಾವುಟಗಳಿಂದ ಅಲಂಕರಿಸಿ, ತೇರಿನ ತುದಿಯಲ್ಲಿ ಹಿತ್ತಾಳೆಯ ಕಳಸವಿಟ್ಟು ತೇರಿನ ಮಧ್ಯಭಾಗದಲ್ಲಿ ತಿಪ್ಪೇರುದ್ರಸ್ವಾಮಿಗಳ ಉತ್ಸವ ಮೂರ್ತಿಯನ್ನು ಇಟ್ಟಿರುತ್ತಾರೆ. ಈ ತೇರಿಗೆ ತಳಕು ಮತ್ತು ಮನ್ನೆಕೋಟೆಯಿಂದ ಮಿಣಿ ತಂದು ಕೊಡುತ್ತಾರೆ. ಉದ್ದನೆಯ ಪಂಜು, ಛತ್ರಿ, ಚಾಮರ, ನಂದಿಕೋಲುಗಳೊಂದಿಗೆ ರಥೋತ್ಸವ ಪ್ರಾರಂಭವಾಗುವ ಹೊತ್ತಿಗೆ, ಆಂಜನೇಯನಿಗೆ ಪೂಜೆ ಸಲ್ಲಿಸುತ್ತಾರೆ. ಕುಪ್ಪಿನಕೆರೆಯ ಆಂಜನೇಯನೇ ಬಂದು ರಥೋತ್ಸವ ನಡೆಸುತ್ತನೆಂದೂ ಜಗಳೂರು ತಾಲ್ಲೂಕು ಕೊಡದ ಗುಡ್ಡದ ವೀರಭದ್ರಸ್ವಾಮಿಯಿಂದ ಹೊಂಬಾಳೆ ಮತ್ತು ಕೂಡ್ಲಿಗಿ ತಾಲ್ಲೂಕು ಕುಪ್ಪಿನಕೆರೆಯ ಆಂಜನೇಯನಿಂದ ವಿಭೂತಿ ಪ್ರಸಾದ ಬಂದ ನಂತರವೇ ತಿಪ್ಪೇರುದ್ರಸ್ವಾಮಿಯ ರಥೋತ್ಸವ ನಡೆಯುತ್ತದೆಂದೂ ಇಲ್ಲಿಯ ಜನರಲ್ಲಿ ಪ್ರತೀತಿ ಇದೆ.

ತೇರಿನ ದಿನ ಮುಂಜಾನೆ ಹರಕೆ ಹೊತ್ತ ಭಕ್ತಾದಿಗಳು ಜವಳ ತೆಗೆಸುವುದು ಹೊರಮಠದ ಸುತ್ತಮುತ್ತ ಬೇಟೆ ಕಡಿದು ಪರವು ಮಾಡಿ ಎಡೆ ಕೊಟ್ಟು ಬರುತ್ತಾರೆ. ನಂತರ ಮಧ್ಯಾಹ್ನ ಮೂರು ಗಂಟೆ ಸುಮಾರಿಗೆ ಸಕಲ ವಾದ್ಯ ರಾಜವೈಭವದೊಂದಿಗೆ ತೇರು ಪಾದಗಟ್ಟೆಯ ಕಡೆ ಹೊರಟು ನಿಂತಾಗ ಭಕ್ತಾಧಿಗಳ ಹರ್ಷೋದ್ಗಾರ ಮುಗಿಲು ಮುಟ್ಟುತ್ತದೆ. ಸೂರ ಬೆಲ್ಲ ಮೆಣಸು, ದವನ, ಪತ್ರೆ, ಬಾಳೆಹಣ್ಣುಗಳನ್ನು ತೇರಿಗೆ ತೂರುತ್ತಾರೆ. ಮೈ ಮೇಲೆ ಪುಳ್ಳುರೆ ಎದ್ದಾಗ ತೇರಿಗೆ ಕಾಲುಮೆಣಸು ತೂರಿದೆ ಪುಳ್ಳುರೆ ವಾಸಿಯಾಗುತ್ತವೆ ಎಂಬ ನಂಬಿಕೆಯಿದೆ. ಆಂಜನೇಯ ದೇವಸ್ಥಾನದಿಂದ ಹೊರಟ ತೇರು ಪಾದಗಟ್ಟೆ ಹತ್ತಿರ ಬಂದು ವಿಶೇಷ ಪೂಜೆಕಾರ್ಯ ಮುಗಿದ ನಂತರ ವಾಪಾಸ್ಸು ಹೋಗಿ ಮೊದಲಿನ ಸ್ಥಾನದಲ್ಲಿ ನಿಂತು ಕೊಳ್ಳುತ್ತದೆ. ನಂತರ ಸಂಜೆ ದೇವರಿಗೆ ಹಣ್ಣು ಕಾಯಿ ಕೊಟ್ಟು ಒಳಮಠ ಮತ್ತು ಹೊರಮಠದ ಹತ್ತಿರ ಕೊಬರಿ ಸುಟ್ಟು ಹರಕೆ ಒಪ್ಪಿಸುತ್ತಾರೆ.

ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಗಳ ಕ್ಷೇತ್ರದಲ್ಲಿ ಹೊರಮಠ, ಒಳಮಠ, ಪಾದಗಟ್ಟಿ, ಚಿಕ್ಕತೇರು, ದೊಡ್ಡತೇರು ಏಕಾಂತಮಠ, ಹೊಸಗುಡ್ಡ, ಆಂಜನೇಯನ ದೇವಸ್ಥಾನ, ತಿಪ್ಪೇರುದ್ರಸ್ವಾಮಿಗಳು ಕಟ್ಟಿಸಿದ ಕೆರೆಗಳು, ಹಟ್ಟಿ ಮಲ್ಲಪ್ಪನಾಯಕನ ಅರಮನೆ ಇದ್ದ ಸ್ಥಳ, ಹೊಂಡ ಮೊದಲಾದವುಗಳು ನೋಡುತಕ್ಕಂತ ಪ್ರಮುಖ ಸ್ಥಳಗಳಾಗಿವೆ. ಈ ಜಾತ್ರೆಯಲ್ಲಿ ಮಾಂಸಾಹಾರಿಗಳು ಬೇಟೆ ಕಡಿಯುತ್ತಾರೆ. ಸಸ್ಯಹಾರಿಗಳು ಸಿಹಿ ಅಡಿಗೆ ಮಾಡುತ್ತಾರೆ. ರಥೋತ್ಸವದ ಮರುದಿನ ಸಂಜೆ ಓಕುಳಿಯಾಡುತ್ತಾರೆ ನಂತರ ದೇವರು ಗುಡಿದುಂಬುವ ಕಾರ್ಯ, ಮಹಾಮಂಗಳಾರತಿಯೊಂದಿಗೆ ಜಾತ್ರೆ ಮುಕ್ತಾಯವಾಗಿ ಮುಂಬರುವ ಸೋಮವಾರ 'ಮರಿ ಪರುಷೆ' ನಡೆಯುತ್ತದೆ. ಆಗಲೂ ಸಹ ಭಕ್ತಾಧಿಗಳು ಹೆಚ್ಚಿನ ಸಂಖ್ಯೆಲ್ಲಿ ಸೇರುತ್ತಾರೆ. ಪ್ರತಿ ಸೋಮವಾರ ಸಂಜೆ ಒಳಮಠದಿಂದ ಹೊರಮಠಕ್ಕೆ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿ ಹೋಗಿ ಬರುತ್ತದೆ. ಒಳಮಠದಲ್ಲಿ ಲಿಂಗಾಯಿತರ ಜಾತಿಗೆ ಸೇರಿದ ಪಣಿಯಪ್ಪನ ವಂಶಸ್ಥರು ಪೂಜೆ ಮಾಡುತ್ತಾರೆ. ಹೊರಮಠದ ಜಾಗೃತಗದ್ದಿಗೆಗೆ ವಾಲ್ಮೀಕಿ ಗೋತ್ರದ, ಮಳೆಲೋರು ಬೆಡಗಿನ, ಮ್ಯಾಸಬೇಡರು ಪೂಜೆ ಮಾಡುತ್ತಾರೆ.

೭.೪. ಕ್ಯಾತಪ್ಪನ ಜಾತ್ರೆ

ಚಳ್ಳಕೆರೆಯಿಂದ ಸುಮಾರು ೧೮ ಕಿ.ಮೀ ದೂರದ ಪುರ್ಲಳ್ಳಿ ಹತ್ತಿರದ 'ವಸತಿ ದಿಬ್ಬ'ದ ಬಳಿ ಕಾಡುಗೊಲ್ಲರ ಪಂಚಲಿಂಗಗಳಲ್ಲಿ ಒಂದಾದ ಕ್ಯಾತೇಲಿಂಗ(ಕ್ಯಾತಪ್ಪ)ನ ಜಾತ್ರೆ ನಡೆಯುತ್ತದೆ. ಗ್ರಾಮೀಣ ಜನರು ಆಡು ಭಾಷೆಯಲ್ಲಿ ಕ್ಯಾತಪ್ಪನ ಪರಿಷೆ ಎಂದೇ ಚಳ್ಳಕೆರೆ ತಾಲ್ಲೂಕಿನಲ್ಲಿ ಹೆಸರಾಗಿದೆ. ಸುಮಾರು ೩೦ ಸಾವಿರ ಜನಸಂಖ್ಯೆ ಸೇರುವ ಈ ಜಾತ್ರೆಯಲ್ಲಿ ಕಾಡುಗೊಲ್ಲರೇ ಅಧಿಕ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಕಡಿಮೆ ಸಂಖ್ಯೆಯಲ್ಲಿ ಮ್ಯಾಸಬೇಡರು ಸೇರಿರುತ್ತಾರೆ. ಕಾಡುಗೊಲ್ಲರ ಪವಿತ್ರ ಪಂಚಲಿಂಗಗಳಲ್ಲಿ ಒಂದಾದ "ಕ್ಯಾತೇಲಿಂಗ" ನೆಲೆಸಿರುವುದೇ ಚಳ್ಳಕೆರೆ ತಾಲ್ಲೂಕು ಚನ್ನಮ್ಮ ನಾಗತಿಹಳ್ಳಿಯಲ್ಲಿ. ಕ್ಯಾತೇದೇವರ ಜಾತ್ರೆ ಪ್ರತಿವರ್ಷ ನಡೆಯದಿದ್ದರೂ ಮೂರುನಾಲ್ಕು ವರ್ಷಗಳಿಗೊಮ್ಮೆ ನಡೆಯುತ್ತದೆ.

ಜಾತ್ರೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಈ ದೇವರಿಗೆ ನಡೆದುಕೊಳ್ಳುವ ಕಾಡುಗೊಲ್ಲರು, ಮನೆಗಳಿಗೆ ಹೊಸ ಹಂಚಿ, ಆಪು, ಬಾದೆ, ಗರಿ ಇತ್ಯಾದಿ ಹುಲ್ಲುಗಳನ್ನು ಗುಡಿಸಲಿಗೆ ಹೊದಿಸಿ ಹಟ್ಟಿ ಸುತ್ತ ಹೊಸ ಕಳ್ಳೆ ಹಾಕಿ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಬಳಿದುಕೊಂಡು ಮನೆಯಲ್ಲಿದ್ದ ಹುರುಳಿ ಮತ್ತು ನವಣೆಯನ್ನು ಹಟ್ಟಿಯಿಂದ ಆಚೆ ಪ್ರತ್ಯೇಕವಾಗಿ ಗುಡಿಸಲಿನಲ್ಲಿ ಇಟ್ಟಿರುತ್ತಾರೆ. ನೆಂಟರಿಷ್ಟರಿಗೆ ಹೇಳಿಕಳುಹಿಸಿ ಜಾತ್ರೆಯ ಸಿದ್ಧತೆ ಮಾಡಿಕೊಳ್ಳುತ್ತಾರೆ. ಕ್ಯಾತಪ್ಪನ ಜಾತ್ರೆ ಮುಗಿಯುವವರೆಗೂ ಅವರು ಹುರುಳಿ ಮತ್ತು ನವಣೆಯನ್ನು ಮುಟ್ಟುವುದಿಲ್ಲ. ಮನೆಯೊಳಗೆ ತಂದಿಟ್ಟುಕೊಳ್ಳುವುದಿಲ್ಲ ಈ ಪದ್ಧತಿಗೆ 'ಹುರುಳಿ ಬತ' ಮತ್ತು 'ನವಣೆ ಬತ' ಎಂದು ಕರೆಯುತ್ತಾರೆ. ಇಲ್ಲಿ ಬತ ಎಂದರೆ 'ವ್ರತ' ಎಂದರ್ಥ. ಹುರುಳಿ ಮುಟ್ಟದಿರುವುದನ್ನು 'ಹುರುಳಿ ಕಾಳು ತೊಳೆಯುವುದು' ಎಂದೂ ನವಣೆ ಮುಟ್ಟದಿರುವುದನ್ನು 'ನವಣೆ ಕಾಳು ತೊಳೆಯುವುದು' ಎಂದೇ ಈ ಪ್ರದೇಶದಲ್ಲಿ ಕರೆಯುತ್ತಾರೆ. ಪುರ್ಲಳ್ಳಿ ವಸತಿ ದಿಬ್ಬದಿಂದ ಸುಮಾರು ೩ ಕಿ.ಮೀ ದೂರದಲ್ಲಿರುವ ಸೂರನಹಳ್ಳಿಯ ಹಟ್ಟಿಗೊಲ್ಲರು ಕ್ಯಾತಪ್ಪನ ಜಾತ್ರೆಯ ನವಣೆ ಮತ್ತು ಹುರುಳಿ ಪ್ರಸಾದ ಬಂದು ತಲುಪಿದ ನಂತರವೇ ನವಣೆ ಮತ್ತು ಹುರುಳಿಯನ್ನು ಮುಟ್ಟುತ್ತಾರೆ. ಈ ಸಂಪ್ರದಾಯಕ್ಕೆ 'ಬತ' ಹರಿಯುವುದು ಎಂದು ಕರೆಯುತ್ತಾರೆ. ಕೆಲವೊಂದು ಪ್ರದೇಶದ ಸನ್ನರಗೊಲ್ಲರು ಸಾಮಾನ್ಯವಾಗಿ ಹುರುಳಿ ಮತ್ತು ನವಣೆಯನ್ನು ತಿನ್ನುವುದಿಲ್ಲ, ಮುಟ್ಟುವುದಿಲ್ಲ ಕೊನೆಗೆ ಹುರುಳಿ ನವಣೆ ಹೊಲಗಳಲ್ಲೂ ಕೂಡ ಹೋಗುವುದಿಲ್ಲ. ಏಕೆಂದರೆ 'ಬತ' ಹಿಡಿದ ಈ ಅಲೆಮಾರಿ ಜನಾಂಗ ಬತ ಹರಿದಿಲ್ಲದೆ ಇರುವುದರಿಂದ ಇವರಿಗೆ ನವಣೆ ಮತ್ತು ಹುರುಳಿಕಾಳು ಆಗುವುದಿಲ್ಲ.

ಕಾಡುಗೊಲ್ಲರ ೧೩ ಗುಡಿಕಟ್ಟು, ಕುಲಬಾಂಧವರು ಸೇರಿ ಕ್ಯಾತೇದೇವರ ಜಾತ್ರೆ ಬಗ್ಗೆ ತೀರ್ಮಾನ ಮಾಡಿ ಜಾತ್ರೆಯ ವಿವರಗಳನ್ನು ಎಲ್ಲಾ ಕಡೆಗೆ ತಿಳಿಸುತ್ತಾರೆ. ಈ ೧೩ ಗುಡಿಕಟ್ಟೆಗೂ ಸೂರನಹಳ್ಳಿ ಹಟ್ಟಿಗೊಲ್ಲರ 'ಕದರಿ ನರಸಿಂಹಸ್ವಾಮಿ'ಯನ್ನೂ ಮಾನ್ಯದೇವರು ಎಂದು ಕರೆಯುತ್ತಾರೆ. ಅದಕ್ಕಾಗಿ ಸೂರನಹಳ್ಳಿಯ ಹಟ್ಟಿಗೊಲ್ಲರು ಕ್ಯಾತಪ್ಪನ ಜಾತ್ರೆಗೆ ವಂತಿಗೆ ಹಣ ಕೊಡುವುದಿಲ್ಲವಂತೆ. ಜಾತ್ರೆಗಿಂತ ಐದು ದಿವಸ ಮುಂಚೆ ಕಳ್ಳಿ, ಹತ್ತಿ, ಆಲ ಅಥವಾ ಯಾವುದಾದರೂ 'ಹಾಲು' ಬರುವ ದೊಡ್ಡ ಮರವನ್ನು ಕಡಿದು ನೆಲಕ್ಕೆ ಮುಟ್ಟದಂತೆ ಅಲ್ಲಿಂದಲೇ ಹೊತ್ತುಕೊಂಡು ಬಂದು ಪುರ್ಲಳ್ಳಿ ವಸತಿ ದಿಬ್ಬದಲ್ಲಿ ನೆಟ್ಟು, ಕಾರೆಕಳ್ಳೆ, ಬಾರೆಕಳ್ಳೆ, ಜಾಲಿಕಳ್ಳೆ ಮತ್ತು ತುಗ್ಗಲಿ

ಕಟ್ಟಿಗೆಗಳಿಂದ ನೂರಾರು ಜನ ಸೇರಿ ಮುಂಜಾನೆ ಸೂರ್ಯ ಹುಟ್ಟುವುದರೊಳಗಾಗಿ ಕೇವಲ ೨೦ ರಿಂದ ೩೦ ನಿಮಿಷಗಳಲ್ಲಿ ಒಂದು ಗುಡಿಕಟ್ಟಿ ಅದರ ತುದಿಯಲ್ಲಿ ಒಂದು ಕಂಚಿನ ಕಳಸ ಸಿಕ್ಕಿಸಿರುತ್ತಾರೆ. ಈ ಮುಳ್ಳಿನ ಗುಡಿ ಕಟ್ಟುವಾಗ "ಕೊಟ್ಟು ಕೂಸು ತೊಟ್ಟು" ಎಂಬ ಮೂರು ಶಬ್ದಗಳನ್ನು ಗೊಲ್ಲರು ತೆಗೆದುಕೊಂಡು ಹೋಗುತ್ತಾರೆ. "ತೊಟ್ಟು" ಎಂದರೆ ಮುಳ್ಳಿನ ಕೊನೆ ಎಂದರ್ಥ. ಸುಮಾರು ೮ ರಿಂದ ೧೦ ಎತ್ತಿನಗಾಡಿಯಲ್ಲಿ ಬೇರೆ ಬೇರೆ ಕಡೆಯಿಂದ ಕಾಡುಗೊಲ್ಲರು ಮುಳ್ಳುಕಳ್ಳೆಯನ್ನು ತಂದು ಗುಡಿಗೆ ಹೊದಿಸುತ್ತಾರೆ. ಈ ರೀತಿ ಕಟ್ಟುವ ಮುಳ್ಳಿನ ಗುಡಿಗೆ 'ಹಸಿರು ಬೆರಗು' ಎಂದು ಕರೆಯುತ್ತಾರೆ.

ದೇವರ ಬೆರಗು ನಿರ್ಮಾಣವಾದ ನಂತರ ಬಂಜಗೆರೆ ವೀರಣ್ಣ ದೇವರು ಮತ್ತು ಐಗಾರ್ಲಹಳ್ಳಿ ತಾಳೀದೇವರು ಈ ಎರಡೂ ದೇವರುಗಳನ್ನು ಚನ್ನಮ್ಮನಾಗತಿಹಳ್ಳಿಯ ಕ್ಯಾತೇದೇವರ ದೇವಸ್ಥಾನಕ್ಕೆ ಕರೆದು ಕೊಂಡು ಬಂದು, ಈ ಮೂರು ದೇವರುಗಳು ಸೇರಿ ಹೊಳೆಯಲ್ಲಿ ಗಂಗೆಪೂಜೆ ಮಾಡಿಕೊಂಡು ಪುರ್ಲಳ್ಳಿಯ ಹತ್ತಿರ ವಸತಿ ದಿಬ್ಬಕ್ಕೆ ಬಂದು ಮುಳ್ಳು ಕಳ್ಳೆಯಿಂದ ಕಟ್ಟಿದ 'ಹಸಿರು ಬೆರಗು' ಗುಡಿಯಲ್ಲಿ ದೇವರುಗಳನ್ನು ಗದ್ದಿಗೆ ಮಾಡಿ ಜಾತ್ರೆಗೆ ಪೂಜಾ ಕಾರ್ಯಕ್ರಮಗಳನ್ನು ಪ್ರಾರಂಭಿಸುತ್ತಾರೆ.

ವಸತಿ ದಿಬ್ಬದ ಗುಡಿಯ ಮುಂಭಾಗದಲ್ಲಿರುವ, ಹುತ್ತಕ್ಕೆ ಹುತ್ತದ ಪೂಜೆ, ಅಕ್ಕಮ್ಮಗಳ ಮಜ್ಜ ಬಾವಿ ಪೂಜೆ, ಮತ್ತು ದನಗಳನ ಗೂಡಿನ ಪೂಜೆ ಮುಗಿದ ನಂತರ ಗುಡಿಯ ಮುಂಭಾಗದ ನೆಲದಲ್ಲಿ ಐದು ಒಳ್ಳು ಗುಂಡಿ ತೆಗೆದು ಅದರಲ್ಲಿ ನವಣೆ ತುಂಬಿ ಐದು ಜನ ಮುತ್ತೈದೆಯರು ಒನಕೆಯಿಂದ ನವಣೆ ಕುಟ್ಟುತ್ತಾರೆ ನವಣೆ ಕುಟ್ಟುವಾಗ ಈ ಹೆಂಗಸರು ಮಾತಾಡುವಂತಿಲ್ಲ 'ಉಹುಂ' ಎಂದು ಸಹ ಮುಲುಕುವಂತಿಲ್ಲ, ಬೇಕಾದರೆ ಕ್ಯಾತೇದೇವರ ಮೇಲೆ ಹಾಡುಗಳನ್ನು ಹಾಡಬಹುದು. ಈ ರೀತಿ ಮಡಿಯಿಂದ ನವಣೆ ಕುಟ್ಟುವಾಗ ಕಾಡುಗೊಲ್ಲರ ಒಬ್ಬ ಹೆಂಗಸು ನವಣೆ ಕುಟ್ಟಲಾರದೆ 'ಮುಟ್ಟಾಗಿದ್ದೇನೆಂದು' ಸುಳ್ಳು ಹೇಳಿ ಗುಡಿಯಿಂದ ಹೊರಗೆ ದೂರ ಹೋಗಿ ಕುಳಿತುಕೊಂಡಳಂತೆ. ಹೀಗೆ ಸುಳ್ಳು ಹೇಳಿದ ಸೋಮಾರಿ ಹೆಂಗಸು, ದೇವರ ಶಾಪದಿಂದ ಕರವುಗಲ್ಲಾಗಿ (ಕಲ್ಲಾಗಿ) ಕುಳಿತುಕೊಂಡಿದ್ದಾಳೆ. ಆದರೂ ಜಾತ್ರೆ ನಡೆಯುವಾಗ ಆಕೆಗೆ ಒಂಟಿ ಉರುಮೆ ಜುಟ್ಟಿಲ್ಲದ ತೆಂಗಿನಕಾಯಿ ತೆಗೆದುಕೊಂಡು ಹೋಗಿ ಪೂಜೆ ಮಾಡಿಕೊಂಡು ಬರುತ್ತಾರೆ.

ನವಣೆ ಕುಟ್ಟಿದ ನಂತರ ಜೆನ್ನಿಗೆ ಕುರಿಯ ಹಸಿಹಾಲಿನಿಂದ ನವಣೆ ಹಿಟ್ಟನ್ನು ಮೀದು ೧೦೧ ಮಿದಿಕೆ ಮಾಡಿ ಕ್ಯಾತೇದೇವರಿಗೆ ಎಡೆ ಹಾಕುತ್ತಾರೆ. ನಂತರ ಭಕ್ತಾದಿಗಳಿಗೆ ಪ್ರಸಾದವೆಂದು ಹಂಚುತ್ತಾರೆ. ಈ ಪ್ರಸಾದ ಮುಟ್ಟಿದ ಮೇಲೆ ಅಥವಾ ತಿಂದಮೇಲೆಯೇ ಅವರ 'ನವಣೆ ಬತ' ಹರಿಯುವುದು. ಅದೇ ದಿನ ಸಾಯಂಕಾಲ ಕ್ಯಾತೆಪ್ಪನ ಕಳಸ ಕೀಳುವ ಜಾತ್ರೆಯ ಮುಖ್ಯ ಕಾರ್ಯಕ್ರಮ ನಡೆಯುತ್ತದೆ. ಸೋಮನವರು ಗೊಲ್ಲರು ಮೊದಲು ಗುಡಿಗೆ ಕಳಶವಿಟ್ಟರೆ, ಕೋಣನವರು ಗೊಲ್ಲರು ಗುಡಿಯ ಕಳಸ ಕೀಳುವ ಸಂಪ್ರದಾಯ ಇಲ್ಲಿ ನಡೆದು ಕೊಂಡು ಬಂದಿದೆ. ಕಳಸ ಕೀಳುವಾಗ ಮೂರು ದೇವರುಗಳನ್ನು 'ಹಸಿರು ಬೆರಗು'ನಿಂದ ಹೊರಕ್ಕೆ ತಂದಿಟ್ಟಿರುತ್ತಾರೆ. ನಂತರ ಎಂಟು ಹತ್ತು ಜನ ಕಾಡುಗೊಲ್ಲರು ಒಂದೊತ್ತಿನಿಂದ ಅಕ್ಕಮ್ಮನ ಮಜ್ಜ ಬಾವಿಯಲ್ಲಿ ಜಳಕ ಮಾಡಿ, ಜೋರಾಗಿ ಉರುಮೆ ಬಡಿದಾಗ ಅಲ್ಲಿಂದಲೇ ಓಡೋಡಿ ಬಂದು ಕಳ್ಳೆ ಮುಳ್ಳಿನ ರಾಶಿ ತುಳಿದುಕೊಂಡು ಹತ್ತಿ ಕಳಶ ಕೀಳಲು

ಪೈಪೋಟಿಯಿಂದ ಮುನ್ನುಗುತ್ತಾರೆ. ಆದರೆ ಕಳಶ ಕೀಳಲು ಎಷ್ಟೇ ಜನ ಹತ್ತಿದರೂ ಕೊನೆಗೆ 'ಕೋಣದ ಗೊಲ್ಲರು' ಮಾತ್ರ ಗುರಿ ಮುಟ್ಟಿ ಕಳಶ ಕಿತ್ತುಕೊಂಡು ಬರುತ್ತಾರೆ. ಕಳ್ಳೆ ಹತ್ತಿ ಮುಳ್ಳು ತುಳಿದಿದ್ದರೂ ಕ್ಯಾತಪ್ಪನ ಮಹಿಮೆಯಿಂದ ಯಾರಿಗೂ ಏನು ಆಗಿರುವುದಿಲ್ಲ ಎಂದು ಕಾಡುಗೊಲ್ಲರು ಹೆಮ್ಮೆಯಿಂದ ಹೇಳುತ್ತಾರೆ.

ಕ್ಯಾತಪ್ಪನ ಕಳಶ ಕಿತ್ತನಂತರ ದೇವರುಗಳಿಗೆ ಹಣ್ಣು, ಕಾಯಿ ಕೊಟ್ಟು ಭಕ್ತಾದಿಗಳು ಜಾತ್ರಿಯಿಂದ ನಿರ್ಗಮಿಸುತ್ತಾರೆ. ನಂತರ ಸಂಜೆ ದೇವರುಗಳಿಗೆ ಮಹಾಮಂಗಳಾರತಿ ಮಾಡಿಕೊಂಡು ಮೂರು ದೇವರುಗಳನ್ನು ಚನ್ನಮ್ಮನಾಗತಿಹಳ್ಳಿಗೆ ಕರೆದುಕೊಂಡು ಹೋಗುತ್ತಾರೆ. ಬಂಜಿಗೆರೆ ವೀರಣ್ಣ ದೇವರನ್ನು ಬಂಜಿಗೆರೆ ಗೊಲ್ಲರಹಟ್ಟಿಗೂ, ತಾಳೀದೇವರನ್ನು ಐಗಾರ್ಲಹಳ್ಳಿ ಗೊಲ್ಲರಹಟ್ಟಿಗೂ ಕಳಸಿಕೊಡುತ್ತಾರೆ. ಕ್ಯಾತರು ಲಿಂಗ ದೇವರನ್ನು ಮಾತ್ರ ಚನ್ನಮ್ಮನಾಗತಿಹಳ್ಳಿಯಲ್ಲಿ ಉಳಸಿಕೊಂಡು ಹುರುಳಿ ಬೇಯಿಸಿ 'ಹುರುಳಿ ಗುಗ್ಗರಿ' ಎಡೆ ಹಾಕಿ ಪ್ರಸಾದವಾಗಿ ಹುರುಳಿ ಗುಗ್ಗರಿ ಸ್ವೀಕರಿಸಿದ ನಂತರವೇ 'ಹುರುಳಿ ಬತ'ವನ್ನು ಹರಿಸುತ್ತಾರೆ. ನಂತರ ಭಕ್ತಾಧಿಗಳು ಹಣ್ಣು ಕಾಯಿ ಮಾಡಿಸುವುದು ಕಾಸು, ಮೀಸಲು ಹಾಲನ್ನೂ ದೇವರಿಗೆ ಅರ್ಪಿಸಿ, ಖರ್ಚು ವೆಚ್ಚದ ನಂತರ ಜಾತ್ರೆಯ ಎಲ್ಲಾ ಕಾರ್ಯಕ್ರಮಗಳು ಮುಕ್ತಾಯ ವಾಗುತ್ತವೆ.

೮. ಪೂಜಾರಿಗಳು

ದೇವರ ಪ್ರತಿನಿಧಿಯಾದ ಪೂಜಾರಿಗೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ದೇವರಷ್ಟೇ ಮಹತ್ವ ಕೊಟ್ಟು ಗೌರವಿಸುತ್ತಾರೆ. ಪೂಜಾರಿ ಮನೆತನದವರು ವಿಶಿಷ್ಟ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಹೊಂದಿರುತ್ತಾರೆ. ಈ ಪೂಜಾರಿಕೆ ವೃತ್ತಿ ವಂಶಪರಂಪರಾಗತವಾಗಿ ಬಂದಿರುತ್ತದೆ. ಪೂಜಾರಿ ಮನೆತನದವರು ತಮ್ಮ ಅವಿವಾಹಿತ ಗಂಡು ಮಕ್ಕಳಲ್ಲಿ ಹಿರಿಯ ಮಗನನ್ನು ಇಲ್ಲವೇ ಅತ್ಯಂತ ಕಿರಿಯ ಮಗನನ್ನು ಪೂಜಾರಿಕೆಗೆ ಆಯ್ಕೆ ಮಾಡುತ್ತಾರೆ. ಕೆಲವು ಪ್ರದೇಶಗಳಲ್ಲಿ ಬ್ರಾಹ್ಮಣ ಪುರೋಹಿತರನ್ನು ಮತ್ತೇ ಕೆಲವು ಪ್ರದೇಶಗಳಲ್ಲಿ ಜಂಗಮರನ್ನು ಕರೆಯಿಸಿ, ದೇವರ ಪೌಳಿ ಅಥವಾ ಪುಣ್ಯಕ್ಷೇತ್ರಗಳಲ್ಲಿ ಪೂಜಾರಿಗೆ ಪಟ್ಟಕಟ್ಟುವ ಪದ್ಧತಿ ಇದೆ. ಹೊಸದುರ್ಗ ತಾಲ್ಲೂಕು ಹಾಲು ರಾಮೇಶ್ವರ; ಪಾವಗಡ ತಾಲ್ಲೂಕು ನಿಡಗಲ್ಲು ಬೆಟ್ಟದ ಬುಡದ ರಾಮ ತೀರ್ಥ ಹಿರಿಯೂರು ತಾಲ್ಲೂಕು ಕೂಡ್ಲಿಸಂಗಮೇಶ್ವರ ತಾಳವಟ್ಟಿ ಹತ್ತಿರ ನೊಣಬೆ; ಯರಬಳ್ಳಿ ಹತ್ತಿರ ಸುಣ್ಣಗುಡಿ ಹಳ್ಳ; ಹಂಪಿ ಹತ್ತಿರ ತಿರುವಿನ ಮಡು ಮೊಳಕಾಲ್ಮೂರು ತಾಲ್ಲೂಕು ಮೇಲುರ್ದುಗದ ಕಂಪಳ ರಂಗನ ಹೊಂಡ ತರಿಕೆರೆ ತಾಲ್ಲೂಕು ಕಲ್ಲತ್ತಿಗಿರಿ ಮುಂತಾದ ಪವಿತ್ರ ಪುಣ್ಯಕ್ಷೇತ್ರಗಳಲ್ಲಿ ಪೂಜಾರಿಗೆ ಪಟ್ಟಕಟ್ಟುವ ಪದ್ಧತಿ ಕಂಡುಬರುತ್ತದೆ. ಕಾಡುಗೊಲ್ಲರು ಪೂಜಾರಿಗೆ ಪಟ್ಟ ಕಟ್ಟುವಾಗ "ಆ ದಿನ ಹಟ್ಟಿಯ ಹಿರಿಯರು ಬಂದು ಕಂಬಿಯ ತುಂಬ ಹಸುವಿನ ಹಾಲನ್ನು ತುಂಬಿ ಅದನ್ನು ಪೂಜಾರಿಯಾಗಲಿರುವ ವ್ಯಕ್ತಿಯ ತಲೆಯ ಮೇಲೆ ಹೊರಿಸಿಕೊಂಡು ಹಟ್ಟಿಯನ್ನು ಬಿಟ್ಟು ಹೊರಡುತ್ತಾರೆ. ಪೂಜಾರಿಯಾಗಲಿರುವ ವ್ಯಕ್ತಿ ತನಗೆ ದೇವರು ಸೂಚಿಸಿದ ಒಂದು ಹುಣಸೆ ಮರದ ಬಳಿಗೆ ಬಂದು ಅದರ ಬುಡಕ್ಕೆ ತಾನು ಹೊತ್ತು ಕೊಂಡಿರುವ ಕಂಬಿಯಲ್ಲಿರುವ ಹಾಲನ್ನು ಹುಯ್ಯುತ್ತಾನೆ. ಈ ಹುಣಸೆ ಮರವನ್ನು 'ಹಾಲು ಹುಯ್ಯು ಹುಣಿಸೆಮರ' ಎಂದು ಕರೆಯುತ್ತಾರೆ. ಈ ಮರದ ಒಂದು ಕೊಂಬೆಯನ್ನು ಯಾರು ಕಡಿಯುವುದಿಲ್ಲ. ಕಾಡುಗೊಲ್ಲರ ದೃಷ್ಟಿಯಲ್ಲಿ ಈ ಮರ ಪವಿತ್ರವಾದುದು. ಹುಣಿಸೆ ಮರಕ್ಕೆ ಹಾಲನ್ನು

ಹುಯ್ದಮೇಲೆ ಹಿರಿಯರು ಪೂಜಾರಿಯಾಗಲಿರುವ ವ್ಯಕ್ತಿಯನ್ನು ಹಟ್ಟಿಗೆ ವಾಪಸ್ ಕರೆದುಕೊಂಡು ಬರುತ್ತಾರೆ"[೮] ಕೆಲವೊಂದು ಪ್ರದೇಶಗಳಲ್ಲಿ ಪೂಜಾರಿಗೆ ಶಂಖ ಚಕ್ರದಿಂದ ಮುದ್ರೆಹಾಕಿದರೆ, ಮತ್ತೇ ಕೆಲವೊಂದು ಪ್ರದೇಶಗಳಲ್ಲಿ ಹೂವಿನ ಹಾರ ಹಾಕಿ ದೇವರನ್ನು ತಲೆಯ ಮೇಲೆ ಇಡುತ್ತಾರೆ. ಹೊಸದುರ್ಗ, ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಜಂಗಮ ಮತಕ್ಕೆ ಸೇರಿದ ಶ್ರೀಗುರು ಸಾರ್ವಾಡೇಶ್ವರಸ್ವಾಮಿಗಳನ್ನು ತಮ್ಮ ಗುರುಗಳೆಂದು ಕರೆದುಕೊಳ್ಳುತ್ತಾರೆ.

ಚಳ್ಳಕೆರೆ ತಾಲ್ಲೂಕಿನ ಗೋಸಿಕೆರೆ ಗ್ರಾಮದ ಊರಿನ ಹೊರಭಾಗದ ಉತ್ತರ ಈಶಾನ್ಯಕ್ಕೆ ಕಾಡುಗೊಲ್ಲರ ಮತ್ತು ಮ್ಯಾಸಬೇಡರ ಗುರುಗಳಾದ "ಶ್ರೀ ಗುರು ಸಾರ್ವಾಡೇಶ್ವರ ಸ್ವಾಮಿಗಳು ಸ್ವಸ್ತಿ ಶ್ರೀ ಶಾಲಿವಾಹನ ಶಕ ೧೫೮೨ನೇ ಶಾರ್ವರಿನಾಮ ಸಂವತ್ಸರ ಮಾಘಶುದ್ಧ ಏಕಾದಶಿಯಲ್ಲಿ ಸಜೀವ ಸಮಾಧಿಸ್ತರಾಗಿರುವ ಗದ್ದಿಗೆಯ ದೇವಸ್ಥಾನವಿದೆ. ಬಾಳೆ ಹೊನ್ನೂರು ಪೀಠಕ್ಕೆ ಸೇರಿದ ಜಂಗಮರು ಹಾಗೂ "ಶ್ರೀಗುರು ಸಾರ್ವಾಡೇಶ್ವರ ಸ್ವಾಮಿಗಳ" ವಂಶಸ್ಥರಾದ ಶ್ರೀ ಜಿ.ಎಂ.ಶ್ರೀಶೈಲ ಮೂರ್ತಿಯವರು ಈ ಊರಲ್ಲಿ ನೆಲೆಸಿದ್ದಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪೂಜಾರಿಗೆ ಪಟ್ಟಕಟ್ಟುವಾಗ "ಶ್ರೀಗುರು ಸಾರ್ವಾಡೇಶ್ವರ ಸ್ವಾಮಿಗಳ" ವಂಶಸ್ಥರು ಕರೆದುಕೊಂಡು ಹೋಗಿ ಪೂಜಾರಿಗೆ ಪಟ್ಟಕಟ್ಟಿಸುತ್ತಾರೆ. ಚಳ್ಳಕೆರೆ ತಾಲ್ಲೂಕು ಗೋಸಿಕೆರೆಯಲ್ಲಿರುವ ಶ್ರೀಗುರು ಸಾರ್ವಾಡೇಶ್ವರ ಸ್ವಾಮಿಗಳ ಮಠ ಮತ್ತು ವಂಶಸ್ಥರ ಮತ್ತು ವಂಶಸ್ಥರ ಬಗ್ಗೆ ಇತಿಹಾಸಕಾರರು ಹೆಚ್ಚು ಗಮನಹರಿಸಬೇಕಾಗಿದೆ.

೮.೧. ಸಂಪ್ರದಾಯ ಮತ್ತು ನಂಬಿಕೆಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಪೂಜಾರಿಗಳು ಹಲವಾರು ವಿಧಿವಿಧಾನಗಳನ್ನು ಪಾಲಿಸಬೇಕಾಗುತ್ತದೆ. ತಲೆಗೆ ಪೇಟೆ, ತುಂಡು ಪಂಚೆ ಅಥವಾ ಲಂಗೋಟಿ, ಚಲ್ಲಣ್ಣ ತೊಟ್ಟು, ಹೆಗಲಿಗೆ ಕರಿಕಂಬಳಿ ಅಥವಾ ವಸ್ತ್ರ ಹಾಕಿಕೊಂಡಿರುತ್ತಾರೆ. ಚಿತ್ರಹಳ್ಳಿ ಚಿತ್ರಲಿಂಗೇಶ್ವರ ಪೂಜಾರಿ ರಂಗಪ್ಪನವರು ಕಾಲುಂಗರ ಇಟ್ಟಿದ್ದಾರೆ. ವೈಷ್ಣವ ಮತ್ತು ಶೈವ ಎರಡೂ ಸಂಪ್ರದಾಯಗಳನ್ನು ಇಲ್ಲಿಯ ಪೂಜಾರಿಗಳು ಪಾಲಿಸುತ್ತಾರೆ. ಕೆಲವೊಂದು ದೇವರ ಪೆಟ್ಟಿಗೆಗಳಲ್ಲಿ ಸಾಲಿಗ್ರಾಮ ಮತ್ತು ಲಿಂಗಗಳು ಇಟ್ಟಿರುವುದರಿಂದ ವಿಭೂತಿ ಮತ್ತು ನಾಮಗಳನ್ನು ಯಾವ ಸಂಘರ್ಷವಿಲ್ಲದೆ ಧರಿಸುತ್ತಾರೆ. ಕೆಲವು ಪೂಜಾರಿಗಳಿಗೆ ಬ್ರಾಹ್ಮಣ ಸಂಸ್ಕೃತಿ ಪ್ರಭಾವ ಉಂಟಾಗಿದ್ದಾರೆ, ಮತ್ತೆ ಕೆಲವೊಂದು ಪೂಜಾರಿಗಳಿಗೆ ವೀರಶೈವ ಸಂಸ್ಕೃತಿ ಪ್ರಭಾವ ಉಂಟಾಗಿದೆ. ಈ ಪೂಜಾರಿಗಳಿಗೆ ಪಟ್ಟಕಟ್ಟುವಾಗ ಬ್ರಾಹ್ಮಣ ಪುರೋಹಿತರು ಜನಿವಾರ ಹಾಕಿ ವೈಷ್ಣವ ಸಂಪ್ರದಾಯ ಪಾಲಿಸುವಂತೆ ಮಾಡಿದ್ದಾರೆ. ಜಂಗಮ ಗುರುಗಳು ಬಂದು ಪಟ್ಟಕಟ್ಟಿದಾಗ ಲಿಂಗದೀಕ್ಷೆ ಕೊಟ್ಟು ಶೈವ ಸಂಪ್ರದಾಯ ಪಾಲಿಸುವಂತೆ ಮಾಡಿದ್ದಾರೆ. ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ "ಅಹೋಬಲ ನರಸಿಂಹಸ್ವಾಮಿ"ಯನ್ನು ಪ್ರಾದೇಶಿಕವಾಗಿ 'ಓಬಳೇಶ್ವರ' ಮತ್ತು 'ನರಸಿಂಹಸ್ವಾಮಿ' ಎಂದು ಎರಡು ರೀತಿ ವರ್ಗಿಕರಿಸಿ ಆರಾಧಿಸುತ್ತಿದ್ದಾರೆ. ಬ್ರಾಹ್ಮಣರು ಮತ್ತು ಜಂಗಮರ ಪ್ರಭಾವದಿಂದ ಒಂದೇ ದೇವರು ಎರಡಾಗಿರುವುದುಂಟು. ಆದರೆ ಈ ಎರಡು ದೈವಗಳು ಮೂಲತಃ "ಅ ಹೋಬಲ ನರಸಿಂಹಸ್ವಾಮಿ" ಎಂಬುದನ್ನು ಭಕ್ತರು ಗಮನಿಸಬೇಕಾಗಿದೆ. ಕೆಲವೊಂದು ಪ್ರದೇಶದ ಮ್ಯಾಸಬೇಡರ ಪೂಜಾರಿಗಳು ಜನಿವಾರ ಹಾಕಿಕೊಂಡಿದ್ದಾರೆ. ಆದರೆ ಕಾಡುಗೊಲ್ಲರಲ್ಲಿ ಈ ಜನಿವಾರ ಪದ್ಧತಿ ಕಂಡುಬರುವುದಿಲ್ಲ.

ಕಾಡುಗೊಲ್ಲರ ಪೂಜಾರಿಗಳು ವೃತ್ತಾಕಾರದ ಗುಡಿಸಲು ಅಥವಾ ಭವಂತಿ ಮನೆಗಳಲ್ಲಿ ವಾಸಿಸುತ್ತಾರೆ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡಗೊಲ್ಲರ ಹಟ್ಟಿಯ ಹಾಲು ಕುಡಿದ ಸ್ವಾಮಿಯ ದೇವರ ಪೂಜಾರಿ ನಿಂಗಣ್ಣನವರು ಪ್ರತ್ಯೇಕವಾದ ಹತ್ತು ಅಡಿ ಸುತ್ತಳತೆಯ ಭವಂತಿ ಗುಡಿಸಲಲ್ಲಿ ವಾಸಿಸುತ್ತಾರೆ. ಮ್ಯಾಸಬೇಡರ ಪೂಜಾರಿಗಳಲ್ಲಿ ಈ ಪದ್ಧತಿ ಕಂಡು ಬರುತ್ತಿಲ್ಲ.

ಕಾಡುಗೊಲ್ಲರ ಪೂಜಾರಿಗಳಾದ ನಂದಿಹಳ್ಳಿ ರಂಗಪ್ಪನ ಪೂಜಾರಿ ಪಾಂಡುರಂಗಪ್ಪ, ರಾಮಗಿರಿ ಕಾಟಮ್ಮಲಿಂಗೇಶ್ವರ ಪೂಜಾರಿ ನಾಗಲಿಂಗಪ್ಪ, ಚಿತ್ರಹಳ್ಳಿ ಚಿತ್ರಲಿಂಗೇಶ್ವರ ಪೂಜಾರಿ ರಂಗಪ್ಪ, ಅವಳಿಹಟ್ಟಿ ಈರಾವಳೇಶ್ವರ ಪೂಜಾರಿ ಅವಿನೀರಪ್ಪ, ಹಿರೇಹಳ್ಳಿ ದಡ್ಡಿಸೂರನಾಯಕ ದೇವರ ಪೂಜಾರಿ ಪ್ರಕಾಶ್, ಸಾಣೇಕೆರೆ ಕೆರೆಮುಂದಲಹಟ್ಟಿ ಚಿತ್ರದೇವರ ಪೂಜಾರಿ ಚಿತ್ತಣ್ಣ, ಚಳ್ಳಕೆರೆ ಕಾಟಪ್ಪನಹಟ್ಟಿ ಎತ್ತಪ್ಪದೇವರ ಪೂಜಾರಿ ಕರಿಮಣ್ಣ, ರಂಗನಾಥಸ್ವಾಮಿ ಪೂಜಾರಿ ಯರ್ರಣ್ಣ, ಯರಬಳ್ಳಿ ದೊಡ್ಡಗೊಲ್ಲರ ಹಟ್ಟಿ ಹಾಲು ಕುಡಿದ ಸ್ವಾಮಿ ಪೂಜಾರಿ ನಿಂಗಣ್ಣ, ಅದೇ ರೀತಿ ಮ್ಯಾಸಬೇಡರ ಪೂಜಾರಿಗಳಾದ ಕಂಪಳದೇವರಹಟ್ಟಿ ಕಂಪಳರಂಗಸ್ವಾಮಿ ದೇವರ ಪೂಜಾರಿ ಬಿ.ರೇವಣ್ಣ, ಮಾಕನಡುಕು ಓಬಳ ದೇವರ ಪೂಜಾರಿ ಪಿ.ರಾಮಸ್ವಾಮಿ, ದೇವರ ಮರಿಕುಂಟೆ ಆಹೋಬಲ ನರಸಿಂಹ ಕಂಪಳನರಸಿಂಹಸ್ವಾಮಿ ದೇವರ ಪೂಜಾರಿ ಲೋಕೇಶಪ್ಪ, ಕಾಟಪ್ಪನ ಹಟ್ಟಿ ಕಾಟಮ್ಮ ಲಿಂಗೇಶ್ವರ ದೇವರ ಪೂಜಾರಿ ಕಾಟಮ್ಮ ಲಿಂಗಯ್ಯ, ಮೊದಲಾದ ಪೂಜಾರಿಗಳ ಸಂಪ್ರದಾಯ ಮತ್ತು ನಂಬಿಕೆಗಳು ವಿಚಿತ್ರವಾಗಿದ್ದರು ಸತ್ಯವಾಗಿವೆ.

೮.೨. ಪೂಜಾರಿಗಳ ವಿಧಿ-ವಿಧಾನಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಪೂಜಾರಿಗಳು ಹಲವಾರು ವಿಧಿ ವಿಧಾನಗಳನ್ನು ಪಾಲಿಸುತ್ತಾರೆ. ತಮ್ಮ ಜನಾಂಗದವರ ಮದುವೆ ಮಂಗಳ ಕಾರ್ಯದಲ್ಲಿ ಈ ಪೂಜಾರಿಗಳೇ ಮುಹೂರ್ತ ಮಾಡುತ್ತಾರೆ. ಈ ಬುಡಕಟ್ಟು ಜನಾಂಗದಲ್ಲಿ ಪುರೋಹಿತರನ್ನು ಕರೆಯಿಸಿ ಮದುವೆ ಮುಹೂರ್ತ ಮಾಡುವ ಪದ್ಧತಿ ಕಂಡುಬರುತ್ತಿಲ್ಲ. ಮಗುವಿನ ನಾಮಕರಣ ಗೃಹಪ್ರವೇಶ, ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಪೂಜಾರಿಗಳಿಗೆ ಬಹಳ ಪ್ರಾಮುಖ್ಯತೆ ಕೊಡಲಾಗುತ್ತದೆ. ದೇವರನ್ನು ಹೊಳೆ ಅಥವಾ ನದಿಗೆ ತೆಗೆದುಕೊಂಡು ಹೋದಾಗ ಶಾಸ್ತ್ರೋಕ್ತವಾಗಿ ಪೂಜೆ ಮಾಡುವುದು, ತೆರೆಮರೆಯಲ್ಲಿ ದೇವರ ಬುಟ್ಟಿಯನ್ನು ತೊಳೆದು ಸಿದ್ಧಿ ಮಾಡುವುದು ಆಭರಣ ತೊಡಿಸುವುದು, ಮೊದಲಾದ ದೇವರ ಕಾರ್ಯಗಳನ್ನು ಈ ಪೂಜಾರಿಗಳು ಮಾತ್ರ ಮಾಡುತ್ತಾರೆ.

ದೇವರ ಪೂಜಾರಿ ಪವಿತ್ರತೆಯನ್ನು ಕಾಪಾಡಿಕೊಳ್ಳಲು ಆತನಿಗೆ ಹಲವು ಸಾಮಾಜಿಕ ನಿಯಮಗಳನ್ನು ಹೇರಲಾಗಿರುತ್ತದೆ. ಬಸ್ಸು, ರೈಲು ಇತ್ಯಾದಿ ವಾಹನಗಳನ್ನು ಹತ್ತುವುದಾಗಲಿ ಹೋಟೆಲ್‌ನಲ್ಲಿ ಊಟ ತಿಂಡಿ ಮಾಡುವುದಾಗಲಿ, ಚಪ್ಪಲಿ ತೊಡುವುದಾಗಲಿ, ಹರಿಜನರಹಟ್ಟಿ ಪ್ರವೇಶಿಸುವುದಾಗಲಿ, ಸಹ ಪಂಕ್ತಿ ಬೋಜನ ಅಥವಾ ಬೇರೆ ಜಾತಿಯವರ ಮನೆಯಲ್ಲಿ ಊಟ ಮಾಡುವುದಾಗಲಿ, ಮಧ್ಯ ಮಾಂಸ ಮುಟ್ಟುವುದಾಗಲಿ, ಸತ್ತ ಹೆಣ ಮುಟ್ಟುವುದು ಅಥವಾ ಹೊರುವುದಾಗಲಿ ಮಾಡುವಂತಿಲ್ಲ. ಬಹಳಷ್ಟು ಪೂಜಾರಿಗಳು ಕುಡಿಯಲು ಒರತೆ ನೀರು ಅಥವಾ ತುಂಬಿದ ಗಡಿಗೆ ನೀರು, ಕಲ್ಲುಬಾವಿ ನೀರು, ಹೊಂಡದ ನೀರನ್ನು ಮಾತ್ರ ಬಳಸುತ್ತಾರೆ. ಹೊಳಲ್ಕೆರೆ ತಾಲ್ಲೂಕು ರಾಮಗಿರಿ ಗೊಲ್ಲರಹಟ್ಟಿ ಕಾಟಮ್ಮ ಲಿಂಗೇಶ್ವರ ಪೂಜಾರಿ ನಾಗಲಿಂಗಪ್ಪನವರು ಕಲ್ಲುಬಾವಿಯ ನೀರನ್ನು

[illegible]

ಮಾತ್ರ ಕುಡಿಯುತ್ತಾರೆ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡಗೊಲ್ಲರಹಟ್ಟಿ ಹಾಲು ಕುಡಿದಸ್ವಾಮಿ ದೇವರ ಪೂಜಾರಿ ನಿಂಗಣ್ಣನವರು ಕಾಯಿಲೆಯಾದರೂ ಆಸ್ಪತ್ರೆಗೆ ಹೋಗುವುದಾಗಲಿ ಮಾತ್ರೆ ಅಥವಾ ಔಷಧಿಯಾಗಲಿ ಸೇವಿಸುವುದಿಲ್ಲ. ಅಕ್ಕ, ತಂಗಿ, ಅಣ್ಣ, ತಮ್ಮಗಳ ಮನೆಗೆ ಸಹ ಹೋಗುವುದಿಲ್ಲ. "ಒರತೆ ನೀರಿನ ಚಿಲುಮೆ" ಯಿಂದ ನೀರು ತಂದು ಕುಡಿಯುತ್ತಾರೆ. ಈ ಪೂಜಾರಿ ನಿಂಗಣ್ಣನವರು ವಿದ್ಯುತ್ ತಂತಿ ಕಂಬದ ಕೆಳಗಡೆ ಹೋಗದೆ, ಈಚಲ ಬೋರ್‌ವೆಲ್ ಮತ್ತು ಕೆರೆಯ ನೀರನ್ನು ಕುಡಿಯದೆ, ಮದುವೆಯಾಗಿದ್ದರೂ ಹತ್ತು ಅಡಿ ಸುತ್ತಳತೆಯ ಭವಂತಿ ಗುಡಿಸಲಲ್ಲಿ ಏಕಾಂತ ವಾಸಿಸುತ್ತಾರೆ. ಕೆಲವೊಂದು ಪೂಜಾರಿಗಳು ಮತಗಟ್ಟೆ ಒಳಗೆ ಹೋಗಿ ಮತಚಲಾಯಿಸುವುದಿಲ್ಲ, ಕಿಟಕಿಯ ಪಕ್ಕಡಬ್ಬಿ ತಂದಿಟ್ಟರೆ ಕಿಟಕಿಯ ಮೂಲಕ ಹೊರಗಿನಿಂದಲೇ ಮತ ಹಾಕುತ್ತಾರೆ. ಬೇರೆಯವರ ಮನೆಯಲ್ಲಿ ಊಟ ಮಾಡಬೇಕಾದರೆ ಬಾಳೆಎಲೆ, ಮುತ್ತುಗದ ಎಲೆ, ಕೊನೆಗೆ ಎಕ್ಕೆಎಲೆಯನ್ನಾದರೂ ಬಳಸುತ್ತಾರೆ. ಬೇರೆ ಊರುಗಳಿಗೆ ಮತ್ತು ಸಂತೆಗೆ ಹೋಗಬೇಕಾದರೆ ನಡೆದುಕೊಂಡು ಹೋಗಿ ಬರುತ್ತಾರೆ.

ಮ್ಯಾಸಬೇಡರ ಮತ್ತು ಕಾಡುಗೊಲ್ಲ ಹಟ್ಟಿಗಳಲ್ಲಿ ಗುಗ್ಗರಿಹಬ್ಬ ಮೊದಲಾದ ಧಾರ್ಮಿಕ ಕಾರ್ಯಗಳಲ್ಲಿ ಅನೇಕ ವಾದ್ಯ ಬಿರುದಾವಳಿಗಳೊಂದಿಗೆ ಹತ್ತಿರದ ಗಂಗೆಸ್ಥಾನಕ್ಕೆ ಹೋಗಿ ದೇವರ ಪರಿಕರಗಳನ್ನು ತೊಳೆಯುವುದು, ದೇವರಿಗೆ ಒಡವೆ, ವಸ್ತ್ರಗಳಿಂದ ಅಲಂಕಾರ ಮಾಡುವುದು, ವಾರದ ಪೂಜೆಯನ್ನು ನಿಷ್ಠೆಯಿಂದ ಮಾಡುವುದು ಪೂಜಾರಿಯ ಪ್ರಮುಖ ಕರ್ತವ್ಯವಾಗಿರುತ್ತದೆ. ಕಾಡುಗೊಲ್ಲರಿಗೆ 'ಗಣೆ' ಇವರ ಪವಿತ್ರವಾದ್ಯ, ಮೀಸಲು ಹಾಲು, ಜೆನ್ನಿಗೆ ಕುರಿ, ಕುರಿಹಟ್ಟಿ, ಹಬ್ಬ, ಜಾತ್ರೆಗಳು ಇವರ ಸಾಂಸ್ಕೃತಿಕ ಸಂಕೇತಗಳು. ದೇವರು "ಕುರುಹು" ತೋರಿಸುವುದು "ಹೂ" ಕೊಡುವುದು ಹಾಗೂ ದೇವರ ಪೂಜಾರಿಗಣೆ ಊದಿ 'ಕಣಿ' ಹೇಳುವುದನ್ನು ಕಾಡುಗೊಲ್ಲರು ಬಲವಾಗಿ ನಂಬುತ್ತಾರೆ. ಚಳ್ಳಕೆರೆ ತಾಲ್ಲೂಕು ಸಾಣೇಕೆರೆ ಕೆರೆ ಮುಂದಲಹಟ್ಟಿಯ ಚಿತ್ರದೇವರ ಪೂಜಾರಿ ಚಿತ್ತಣ್ಣ, ಹಿರಿಯೂರು ತಾಲ್ಲೂಕು ಮದ್ದನಕುಂಟೆ ಯರ್ರಪ್ಪನ ಪೂಜಾರಿಗಣೆ ಊದಿ ಕಣಿ ಹೇಳುವುದು ಪ್ರಸಿದ್ಧಿ ಪಡೆದಿದೆ. ದೇವರ ಪೂಜಾರಿಗಳು ಮರಣ ಹೊಂದಿದರೆ ದೇವರ ಪೌಳಿಯ ಸುತ್ತಮುತ್ತ ಅಥವಾ ಪ್ರತ್ಯೇಕವಾದ ಸ್ಥಳದಲ್ಲಿ ಮಣ್ಣು ಮಾಡುತ್ತಾರೆ. ಕಾಲಕ್ರಮೇಣ ಈ ಪೂಜಾರಿಗಳ ಸಮಾಧಿಗಳು ಕೂಡ ದೇವರೆಂದು ಪೂಜಿಸುವ ಸಂಪ್ರದಾಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಈ ಎರಡು ಸಮುದಾಯಗಳ ಪೂಜಾರಿ ಮತ್ತು ದಾಸಯ್ಯಗಳ ಸಂಪ್ರದಾಯ ಮತ್ತು ನಂಬಿಕೆಗಳು ಪರಸ್ಪರ ಸಾಮ್ಯತೆ ಪಡೆದುಕೊಂಡಿವೆ. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ಪ್ರಬಂಧದ "ದಾಸಯ್ಯಗಳು" ಎಂಬ ಲೇಖನವನ್ನು ಗಮನಿಸಿರಿ.

೯. ದಾಸಯ್ಯಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ, ದಾಸಯ್ಯನ ಪಾತ್ರ ಬಹು ಮುಖ್ಯವಾಗಿದೆ. ಹಬ್ಬ ಹರಿದಿನಗಳಲ್ಲಿ, ಮದುವೆ-ಮಂಗಳ ಕಾರ್ಯಗಳಲ್ಲಿ, ಗೃಹ ಪ್ರವೇಶ, ಮಕ್ಕಳ ನಾಮಕರಣ ಮೊದಲಾದ ಶುಭ ಕಾರ್ಯಗಳಲ್ಲಿ, ಮ್ಯಾಸಬೇಡರು ಮತ್ತು ಕಾಡುಗೊಲ್ಲರು ತಮ್ಮ ಕುಲದೇವರಿಗೆ ಸಂಬಂಧಪಟ್ಟ, ತಮ್ಮ

ಜನಾಂಗದವರೇ ಆದ ದಾಸಯ್ಯಗಳಿಗೆ ವಿಶೇಷವಾಗಿ ಆಹ್ವಾನ ನೀಡುತ್ತಾರೆ. ತಮ್ಮ ಸಮುದಾಯದವರು ಬಂದು ಕರೆದಾಗ "ದಾಸಯ್ಯ" ಹೋಗಿ ಶಂಖ ಊದಿ ಜಾಗಟೆ ಬಡಿದು ಭಗವಂತನ ನಾಮಸ್ಮರಣೆ ಮಾಡುತ್ತ "ಲಕ್ಷ್ಮೀರಮಣ ಗೋವಿಂದಾ ಗೋವಿಂದ" ಎಂದು ತಿರುಮಂತ್ರ ಹೇಳುತ್ತ ದೇವರನ್ನು ಕೊಂಡಾಡಿ, ದಕ್ಷಿಣೆ, ಪ್ರಸಾದ ಸ್ವೀಕರಿಸಿ ಬರುತ್ತಾನೆ.

ಈ ಎರಡು ಬುಡಕಟ್ಟುಗಳಲ್ಲಿ ದಾಸಯ್ಯನ ವೃತ್ತಿ ವಂಶಪರಂಪರಾಗತವಾಗಿ ಬಂದಿರುತ್ತದೆ. ದಾಸಯ್ಯನ ಮನೆತನದವರು ತಮ್ಮ ಗಂಡು ಮಕ್ಕಳಲ್ಲಿ ಹಿರಿಯ ಮಗನನ್ನು ಇಲ್ಲವೇ ಅತ್ಯಂತ ಕಿರಿಯ ಮಗನನ್ನು ದೇವರ ಅಪ್ಪಣೆಯಮೇರೆಗೆ ದಾಸಯ್ಯನನ್ನಾಗಿ ಮಾಡಿ 'ಮುದ್ರೆ' ಹಾಕಿಸುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಮನೆ ದೇವರ ದೇವಸ್ಥಾನದ ಕಳ್ಳೆ ಪೌಳಿಯಲ್ಲಿ, ಅಥವಾ ದೈವದಮೂಲ ನಿಧಿ ಅಥವಾ ವಜ್ರ ಎಂದು ಕರೆಯುವ ಪುಣ್ಯಕ್ಷೇತ್ರಗಳಲ್ಲಿ ಮುದ್ರೆ ಹಾಕಿಸುತ್ತಾರೆ.

೯.೧. ಮುದ್ರೆ ಒತ್ತುವ ವಿಧಾನ

ದಾಸಯ್ಯಗೆ ಮುದ್ರೆ ಒತ್ತುವಾಗ ದೇವರ ಸನ್ನಿಧಿಯಲ್ಲಿ ಕರಿ ಕಂಬಳಿ ಗದ್ದುಗೆ ಹಾಸಿ, ಕಳಸ ಹೂಡಿ, ಕಂಕಣಕಟ್ಟಿ ಮದುವೆ ಮಂಗಳ ಕಾರ್ಯದಂತೆ ದಾಸಯ್ಯಗೆ ಪೇಟ ಸುತ್ತಿ, ಬಿಳಿ ಕಚ್ಚೆ ಪಂಚೆ ಉಡಿಸಿ, ಹಣೆಯ ಮೇಲೆ ಮೂರುನಾಮಗಳನ್ನಿಟ್ಟು ಗದ್ದುಗೆಯ ಮೆಲೆ ಕುಳ್ಳಿರಿಸುತ್ತಾರೆ. ಅಕ್ಕಸಾಲಿಗರು ತಯಾರಿಸಿದ ಪಂಚಲೋಹದ ಸುಮಾರು ನಾಲ್ಕು ಇಂಚು ಉದ್ದ ೧½ ಇಂಚು ವ್ಯಾಸವುಳ್ಳ ಎರಡು ಶಂಖ-ಚಕ್ರಗಳನ್ನು ಬೆಂಕಿಯಲ್ಲಿ ಕಾಯಿಸಿ ದಾಸಯ್ಯನ ಎಡ-ಬಲ ಭುಜಗಳಮೇಲೆ ದೇವರ ಪೂಜಾರಿ ಮುದ್ರೆ ಒತ್ತುತ್ತಾನೆ. ದಾಸಯ್ಯ ಸತ್ಯವಂತನಾದರೆ ಅಥವಾ ನಿರ್ಣಾಯವಾಗಿದ್ದರೆ. ಈ ಮುದ್ರೆಗಳು ಸುಡುವುದಿಲ್ಲವೆಂದೂ, ಇಲ್ಲವಾದರೆ ಸುಡುತ್ತವೆ ಎಂದು ನಂಬಿಕೆಯಿದೆ. ಅದಕ್ಕಾಗಿಯೇ "ದಾಸಯ್ಯನ ಸತ್ಯವೂ ಕದರಿಯಲ್ಲಿ" ಎಂಬ ಗಾದೆ ದಾಸಯ್ಯನ 'ಮುದ್ರೆ' ಮಹತ್ವವನ್ನು ತಿಳಿಸುತ್ತದೆ. ಮುದ್ರೆ ಹಾಕಿ ೧೦೮ ತುಳಸಿ ಮಣಿಯನ್ನು ಕೊರಳಿಗೆ ಕಟ್ಟುತ್ತಾರೆ. ಈ ತುಳಸಿ ಮಣಿಯನ್ನು ದಾಸಯ್ಯ ಜೀವಂತವಾಗಿರುವ ತನಕ ತೆಗೆಯುವಂತಿಲ್ಲ, ಆಕಸ್ಮಿಕ ದಾಸಯ್ಯ ಮರಣ ಹೊಂದಿದ ಕಾಲಕ್ಕೆ ಮತ್ತೇ ಶಾಸ್ತ್ರೋಕ್ತವಾಗಿ ಪೂಜಾರಿ, ದಾಸಯ್ಯ, ಗುರುಹಿರಿಯರ ಸಮ್ಮುಖದಲ್ಲಿ ತುಳಸಿ ಮಣಿಯನ್ನು ತೆಗೆಯುತ್ತಾರೆ. ಇದಕ್ಕೆ 'ಪಟ್ಟ ಇಳಿಸುವುದು' ಎನ್ನುತ್ತಾರೆ, ನಂತರ ದಾಸಯ್ಯನ ಶವಸಂಸ್ಕಾರ ಮಾಡುತ್ತಾರೆ. ಅವಿವಾಹಿತ ದಾಸಯ್ಯ ಮರಣ ಹೊಂದಿದರೂ ಕೂಡ, ವಿವಾಹಿತರಂತೆ ಎಲ್ಲಾ ರೀತಿಯ ತಿಥಿ-ಕರ್ಮಗಳನ್ನು ಮಾಡುತ್ತಾರೆ.

೯.೨. ಜೀವನ ಪದ್ಧತಿ ಮತ್ತು ಪರಿಕರಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ದೇವರ ದಾಸಯ್ಯನ ಚಟುವಟಿಕೆಗಳನ್ನು ಅವಲೋಕಿಸಿದರೆ ಅವನ ಜೀವನ ಪದ್ಧತಿ ಮತ್ತು ರೀತಿ ನೀತಿಗಳು ಎದ್ದು ಕಾಣುತ್ತವೆ. ಸಾಮಾನ್ಯವಾಗಿ ದಾಸಯ್ಯ ತಲೆಗೆ ಪೇಟ, ತುಂಡು ಕಚ್ಚೆ ಪಂಚೆ ಉಟ್ಟು, ಎದೆ, ಹೊಟ್ಟೆ, ಕಾಣುನ ಹಾಗೆ ಮೈ ಮೇಲೆ ಬಿಳಿ ವಸ್ತ್ರ ಹೊದ್ದಿರುತ್ತಾನೆ. ಹಣೆ, ಮುಂಗೈ, ತೋಳು, ಎದೆ ಮೊದಲಾದ ಭಾಗಗಳಲ್ಲಿ ಮೂರು ನಾಮ ಬಳಿದು ಕೊಂಡಿರುತ್ತಾನೆ. ಈ ನಾಮ ಮೂರು ಪಟ್ಟಿಗಳಿಂದ ಕೂಡಿದ್ದು, ಎಡ-ಬಲ ಪಟ್ಟಿಗಳು ಬಿಳಿ ನಾಮವನ್ನು, ಮಧ್ಯದ ಒಂದು ಪಟ್ಟಿ ಕೆಂಪು ನಾಮವನ್ನು ಒಳಗೊಂಡಿರುತ್ತದೆ. ದಾಸಯ್ಯ ಬಲಗೈಯಲ್ಲಿ ಜಾಗಟೆ ಎಡಗೈಯಲ್ಲಿ ಶಂಖ, ಹೆಗಲಿಗೆ ಬವನಾಸಿ ಮತ್ತು

ಜೋಳಿಗೆ ಹಾಕಿಕೊಂಡಿರುತ್ತಾನೆ. ಸುಮಾರು ಮೂರು ಅಡಿ ಎತ್ತರವಿರುವ ಒಂದು ಕಬ್ಬಿಣದ ಗರುಡಗಂಭಕ್ಕೆ ಬೇಟೆ ಸೊಪ್ಪು, ಕನಗಲ ಕೊನೆ, ಹೊಂಬಾಳೆ ಕಟ್ಟಿ, ಮುಂಭಾಗ ದೇವರ ಒಂದು ಚಿಕ್ಕ ಫೋಟ ಅಥವಾ ಲೋಹದ ವಿಗ್ರಹ ಕಟ್ಟಿರುತ್ತಾನೆ. ಗರುಡಗಂಭಕ್ಕೆ ಒಣಗಿದ ತೆಂಗಿನ ಕಾಯಿ ಬುರುಡೆಯನ್ನು ಎಣ್ಣೆಹಾಕಿ ಕೊಳ್ಳಲಿಕ್ಕೆ ಕಟ್ಟಿ ಗರುಡಗಂಭವನ್ನು ಅಲಂಕರಿಸುತ್ತಾನೆ.

'ಜಾಗಟೆ' ಕಂಚಿನಿಂದ ಮಾಡಿದ ವಾದ್ಯ, ಇದು ವೃತ್ತಾಕಾರವಾಗಿದ್ದು, ಸುಮಾರು ಚಿಕ್ಕ ಊಟದ ತಟ್ಟೆಯ ಗಾತ್ರವನ್ನು ಹೊಂದಿ, ಚಿಕ್ಕ ಮತ್ತು ದೊಡ್ಡ ಗಾತ್ರದ ಜಾಗಟೆಗಳು ಕಂಡು ಬರುತ್ತವೆ. ಪವಿತ್ರ ಪಂಚ ವಾದ್ಯಗಳಲ್ಲಿ ದಾಸಯ್ಯ ಬಳಸುವ ಶಂಖ ಜಾಗಟೆ ಬಹಳ ಮುಖ್ಯವಾದವು. ಸಾಮಾನ್ಯವಾಗಿ ಜಾಗಟೆಯ ತೂಕ ೪೦೦ ಗ್ರಾಂನಿಂದ ಹಿಡಿದು ೧೦೦೦ ಗ್ರಾಂನವರಿಗೂ ತೂಕವಿರುತ್ತದೆ. ಮೇಲ್ಭಾಗದಲ್ಲಿ ಎರಡು ಚಿಕ್ಕ ರಂಧ್ರಗಳಿರುತ್ತವೆ, ಹಿಡಿದು ಕೊಳ್ಳಲು ಅನುಕೂಲವಾಗುವಂತೆ, ರಂಧ್ರದೊಳಗೆ ದಪ್ಪವಾದ ಹತ್ತಿ ಅಥವಾ ಸೆಣಬಿನ ದಾರವನ್ನು ಸೇರಿಸಿ ಕಟ್ಟಿರುತ್ತಾನೆ. ಬಲಗೈಯ ಹೆಬ್ಬೆಟ್ಟಿಗೆ ತಗಲಿ ಹಾಕಿಕೊಂಡು; ಬೆತ್ತ ಅಥವಾ ಕಣಗಲಿ ಗಿಡದ ಕಟ್ಟಿಗೆಯಿಂದ ತಯಾರಿಸಿದ ಸುಮಾರು ಒಂಬತ್ತು ಅಂಗುಲ ಉದ್ದದ "ಜಾಗಟೆ ಕಡ್ಡಿ" ಯಿಂದ ಮೇಲೆ ರಂಧ್ರಕ್ಕೆ ಕಟ್ಟಿದ ದಾರದ ಮೂಲಕ ಕೈಹಾಯಿಸಿ ಜಾಗಟಿ ಬಾರಿಸುತ್ತಾನೆ.

'ಬವನಾಸಿ' ತಾಮ್ರದಿಂದ ಮಾಡಿದ ದಾಸಯ್ಯನ ಪರಮ ಪವಿತ್ರ ಆಸ್ತಿ ಉಪ್ಪು ಮತ್ತು ಹುಣಸೆ ಹಣ್ಣನ್ನು ಕೂಡಿಸಿ ಸ್ವಚ್ಛವಾಗಿ ಬೆಳಗಿದ ಈ ಬವನಾಸಿಗೆ ಎದ್ದು ಕಾಣುವಂತೆ ಮೂರು ನಾಮಗಳನ್ನು ಹಾಕಿರುತ್ತಾನೆ. ಇದರ ಕಂಠದ ಎರಡೂ ಬದಿಗಳಿಗೆ ಸುಮಾರು ಆರು ಇಂಚು ವ್ಯಾಸವುಳ್ಳ ಎರಡು ಚಿಕ್ಕ ಬಳೆಗಳಿರುತ್ತವೆ. ಈ ಬಳೆಗೆ ದಾರ ಕಟ್ಟಿ ಸುಮಾರು ಒಂದು ಅಡಿ ಉದ್ದ ಹೆಗಲಿಗೆ ಇಳಿಬಿಟ್ಟಿರುತ್ತಾನೆ. ದಾಸಯ್ಯನಿಗೆ ಬರುವ ಭಿಕ್ಷೆ, ಎಡೆ, ದಕ್ಷಿಣೆ, ಕಾಯಿ ಬಾಳೆಹಣ್ಣು, ತಂಬಿಟ್ಟು ಮೊದಲಾದ ಸಾಮಾಗ್ರಿಗಳು ಬೀಳುವುದು ಈ "ಅಕ್ಷಯ ಪಾತ್ರೆ" ಬವನಾಸಿಗೆ.

'ಜೋಳಿಗೆ' ದಾಸಯ್ಯನ ಜೀವನ ಸಂಗಾತಿ. ಜಿಂಕೆ ಚರ್ಮದಿಂದ ಕಲಾತ್ಮಕವಾಗಿ ತಯಾರಿಸಿದ್ದು, ಸುಮಾರು ಒಂದು ಅಡಿ ಉದ್ದ ಮೂರು ಅಡಿ ಸುತ್ತಳತೆ ಹೊಂದಿರುತ್ತದೆ. ದಾಸಯ್ಯ ಊರಿಂದ ಊರಿಗೆ ಹೋಗುವಾಗ, ದೇವರ ಪರಿಕರಗಳಾದ ಶಂಖ, ಜಾಗಟೆ, ಗಂಟೆ, ದಾಸಯ್ಯನ ಉಡುಪುಗಳನ್ನು ಈ ಜೋಳಿಗೆಯಲ್ಲಿ ಇಟ್ಟುಕೊಂಡಿರುತ್ತಾನೆ. ಜೋಳಿಗೆ ಹೆಗಲಿಗೆ ಹಾಕಿದರೆ, ಚಪ್ಪಲಿ ತೊಡುವಂತಿಲ್ಲ, ವಾಹನ ಹತ್ತುವಂತಿಲ್ಲ, ಅನ್ಯರ ಮನೆಯಲ್ಲಿ ಊಟ ಮಾಡುವಂತಿಲ್ಲ ಮೊದಲಾದ ವಿಧಿ-ವಿಧಾನಗಳನ್ನು ದಾಸಯ್ಯ ಪಾಲಿಸಬೇಕಾಗುತ್ತದೆ. ಈ ಎರಡು ಬುಡಕಟ್ಟುಗಳಲ್ಲಿ ಪೂಜಾರಿ ಮತ್ತು ದಾಸಯ್ಯಗೆ ವಿಶೇಷ ಗೌರವ ಕೊಡುತ್ತಾರೆ. ಕೆಲವು ಹಬ್ಬ, ಜಾತ್ರೆ ಮದುವೆ, ಮಂಗಳ ಕಾರ್ಯಗಳಲ್ಲಿ ದಾಸಯ್ಯ ಬಂದು 'ಗೋವಿಂದಾ ಗೊವಿಂದ "ಎಂದು ದೇವರ ನಾಮಸ್ಮರಣೆ ಮಾಡಿ 'ಶಂಖ' ಊದಿ 'ಜಾಗಟೆ' ಬಡಿದನಂತರವೇ ಊಟ ಮಾಡುತ್ತಾರೆ. ಹಬ್ಬ, ಮಂಗಳ ಕಾರ್ಯ, ದಾಸೋಹ ಮೊದಲಾದ, ಧಾರ್ಮಿಕ ಕಾರ್ಯಗಳಲ್ಲಿ ದಾಸಯ್ಯನ ಪಂಕ್ತಿ ಮೊದಲು, "ಭಕ್ತರ ಪಂಕ್ತಿ ನಂತರ " ಎಂಬ ಸಂಪ್ರದಾಯ ಬೆಳೆದು ಬಂದಿದೆ.

ದೇವರು, ಗರುಡಗಂಭ ಮತ್ತು ಬವನಾಸಿಗೆ ಹಾಕಿದ ಎಡೆ, ದಕ್ಷಿಣೆ ದಾಸಯ್ಯ ತೆಗೆದು ಕೊಳ್ಳುತ್ತಾನೆ. ಸುಗ್ಗಿಯ ಕಾಲದಲ್ಲಿ ಹಳ್ಳಿಯಾಡಿ ಭಿಕ್ಷೆ ಎತ್ತುತ್ತಾನೆ. ರೈತರ ಕಣಗಳಿಗೆ ಹೋಗಿ ದವಸ- ಧಾನ್ಯ ಸಂಗ್ರಹಿಸುತ್ತಾನೆ.

ಗ್ರಾಮದಲ್ಲಿ "ಆಯಾ" ಎಂದು ರೈತರು ಬೆಳದ ದವಸ-ಧಾನ್ಯ, ತರಕಾರಿಗಳನ್ನು ಪಡೆಯುತ್ತಾನೆ. ದೇವರಿಗೆ ಮುದ್ರೆ ಒತ್ತಿಸಿಕೊಂಡು ದಾಸಯ್ಯ ಆರ್ಥಿಕವಾಗಿ ಎಷ್ಟೇ ಶ್ರೀಮಂತನಾಗಿದ್ದರೂ ಸಹ ವರ್ಷಕ್ಕೆ ಒಂದು ಸಲವಾದರೂ ಯುಗಾದಿ, ಶಿವರಾತ್ರಿ, ಏಕಾದಶಿ, ದಸರಾ ಮೊದಲಾದ ಹಬ್ಬಗಳಲ್ಲಿ ಕನಿಷ್ಟ ಐದು ಮನೆಗಾದರೂ 'ಭಿಕ್ಷೆಯಾಡಿ' ಗೋವಿಂದಾ ಗೋವಿಂದ, ಎಂದು ಭಗವಂತನ ನಾಮಸ್ಮರಣೆ ಮಾಡಲೇ ಬೇಕೆಂಬ ನಿಯಮ ದಾಸಯ್ಯನ ಮನೆತನಗಳಲ್ಲಿ ಬೆಳೆದು ಬಂದಿದೆ.

೯.೩. ದಾಸಯ್ಯಗಳ ವಿಧಿ-ನಿಷೇಧಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ 'ಮುದ್ರೆ' ಒತ್ತಿಸಿಕೊಂಡ ದಾಸಯ್ಯ ಹಲವಾರು ವಿಧಿ -ನಿಷೇಧಗಳನ್ನು ಪಾಲಿಸಬೆಕಾಗುತ್ತದೆ. ಅನೌಪಚಾರಿಕ ಸಾಮಾಜಿಕ ಚೌಕಟ್ಟನ್ನು ಮೀರಿ ವರ್ತಿಸುವಂತಿಲ್ಲ. ದಾಸಯ್ಯನ ಮನೆತನದವರು ಮಾತ್ರ ಈ ವೃತ್ತಿಗೆ ಅರ್ಹರು. ಹಿರಿಯ ಗಂಡು ಮಗ ಇಲ್ಲವೇ ಕಿರಿಯ ಗಂಡು ಮಗ, ಅದರಲ್ಲೂ ಅವಿವಾಹಿತ ಮಕ್ಕಳಿಗೆ ಮಾತ್ರ ದಾಸಯ್ಯನ ಮುದ್ರೆ ಒತ್ತಿಸುತ್ತಾರೆ. ಒಂದು ಮನೆಯಲ್ಲಿ ಒಬ್ಬ ವ್ಯಕ್ತಿಗೆ ಮುದ್ರೆ ಹಾಕಿಸಿದರೆ ಆ ವ್ಯಕ್ತಿ ಜೀವಂತ ಇರುವವರಿಗೂ ಮತ್ತೊಬ್ಬ ವ್ಯಕ್ತಿಗೆ ಮುದ್ರೆ ಹಾಕಿಸುವಂತಿಲ್ಲ. ಮುದ್ರೆ ದಾಸಯ್ಯ ಕಡ್ಡಾಯವಾಗಿ ಶಂಖ, ಜಾಗಟೆ, ಬವನಾಸಿ, ಜೋಳಿಗೆ ಮತ್ತು ಗರುಡಗಂಭ ಹೊಂದಿರಬೇಕು, ಕುಲಸ್ತರು ಯಾವುದೇ ಶುಭ ಸಮಾರಂಭಗಳಿಗೆ ಕರೆದರೆ ತಪ್ಪದೆ ಹೋಗಬೆಕು. ಮಧ್ಯ, ಮಾಂಸ, ಭಂಗಿ ಮುಟ್ಟಬಾರದು, ಹರಿಜನ ಹಟ್ಟಿಗೆ ಹೋಗಬಾರದು, ಬಸ್ಸು ರೈಲು ಇತ್ಯಾದಿ ವಾಹನಗಳನ್ನು ಹತ್ತಬಾರದು, ಚಪ್ಪಲಿ ತೊಡುವಂತಿಲ್ಲ, ಹೆಣವನ್ನು ಹೊರಬಾರದು, ತಿಥಿ-ಕರ್ಮಗಳಲ್ಲಿ ಊಟ ಮಾಡಬಾರದು, ಸಹ ಪಂಕ್ತಿ ಭೋಜನ ಮಾಡಬಾರದು, ಹಿತ್ತಾಳೆ, ಕಂಚು ತಟ್ಟೆಯಲ್ಲಿ ಊಟ ಮಾಡಬಾರದು, ತಿರುಮಂತ್ರ ಕಲಿತಿರಬೇಕು,ದೇವರ ವಾರ, ಹಬ್ಬ, ಜಾತ್ರೆ ಮತ್ತು ಉತ್ಸವಗಳಲ್ಲಿ ಉಪವಾಸ ಮಾಡಬೇಕು. ಹಟ್ಟಿಯಲ್ಲಿ ಯಾರಾದರೂ ಮರಣ ಹೊಂದಿದರೆ ಶವ ಸಂಸ್ಕಾರ ಆಗುವತನಕ ಊಟ ಮಾಡುವಂತಿಲ್ಲ, ಊಟ ಮಾಡಲೇ ಬೇಕಾದಾಗ ಹಟ್ಟಿಯ ಹೊರಗೆ ಹೋಗಿ ಊಟ ಮಾಡಿ ಬರಬೇಕು. ಹೆತ್ತ ತಂದೆ-ತಾಯಿಗಳೇ ಆಗಲಿ ಪಾದ ಮುಟ್ಟಿ ನಮಸ್ಕರಿಸಬಾರದು, ಬೇರೆಯವರ ಮನೆಗೆ ಹೋದಾಗ ಎಲ್ಲರೂ ಬಳಸುವ ತಟ್ಟೆಯಲ್ಲಿ ಊಟ ಮಾಡಬಾರದು. ಊಟ ಮಾಡುವ ಅನಿವಾರ್ಯತೆ ಬಂದಾಗ ಊಟದ ಎಲೆ (ಪತ್ರವಳಿ) ಮುದುಕದ, ಬಾಳೆ, ಎಕ್ಕೆ ಎಲೆಯಲ್ಲಿಯೇ ಊಟ ಮಾಡಬೆಕು. ಹೊಲದಲ್ಲಿ ನೇಗಿಲು ಹೊಡೆಯುವಾಗ ಚರ್ಮದ ಬಾರಿಕೊಲನ್ನು ಬಳಸಬಾರದು. ಮತ್ತು ಹೆಗಲ ಮೇಲೆ ಹಾಕಿಕೊಳ್ಳಬಾರದು. ಈ ಚಲ ಚಾಪೆ ಮೇಲೇ ಮಲಗಬಾರದು. ದನದ ಸಗಣಿ ಬುಟ್ಟಿ ತಲೆಯ ಮೇಲೇ ಇಡುವಂತಿಲ್ಲ, ದೇವರು ಮತ್ತು ದೈವದ ಬಗ್ಗೆ ನಂಬಿಕೆ ಇರಬೇಕು ಮೊದಲಾದ ಅನೌಪಚಾರಿಕ ಸಾಮಾಜಿಕ ನಿಯಮಗಳನ್ನು ಈ ಎರಡೂ ಬುಡಕಟ್ಟುಗಳ ದಾಸಯ್ಯಗಳು ಪಾಲಿಸಬೇಕಾಗುತ್ತದೆ. ಕೆಲವೆಡೆ ಮನೆಯಲ್ಲಿ ಶಿವಗಣಾರಾಧನೆ ಅಥವಾ ವೈಕುಂಠ ಸಮಾರಾಧನೆ ಮಾಡಿದಾಗ ಮ್ಯಾಸಬೇಡರ ಮನೆಯಲ್ಲಿ ಮೊದಲು ದಾಸಯ್ಯನಿಗೆ ಬವನಾಸಿ ತುಂಬಿಸಿ ಎಡೆ ನೀಡಿ ದಿವಂಗತರನ್ನು ಹೆಸರಿಸಿ ಹಿರಿಯರ ಪಾಲಿಗೆ ಬರುವಂತೆ ಕರೆದು ನಂತರ ಬೇರೆಯವರಿಗೆ ಪ್ರಸಾದ (ಊಟ) ಹಾಕುವ ಏರ್ಪಾಡು ಮಾಡುತ್ತಾರೆ.

೯.೪. ಜನಪದ ಕಲೆ ಮತ್ತು ಆಚರಣೆಗಳು

ಜನಪದ ಕಲೆ ಮತ್ತು ಆಚರಣೆಗಳಲ್ಲಿ, ಮ್ಯಾಸಬೇಡ ಮತ್ತು ಕಾಡುಗೊಲ್ಲರ ದಾಸಯ್ಯನ ಪಾತ್ರ ವರ್ಣರಂಜಿತವಾಗಿದೆ. ಈ ಎರಡು ಬುಡಕಟ್ಟು ಹಟ್ಟಿಗಳಲ್ಲಿ ನೆಡೆಯುವ ಹಬ್ಬ, ಜಾತ್ರೆ, ಉತ್ಸವ ಮೊದಲಾದ

ಧಾರ್ಮಿಕ ಕಾರ್ಯಗಳಲ್ಲಿ ದಾಸಯ್ಯ ಪ್ರಧಾನವಾಗಿ ಕಾಣಿಸಿಕೊಳ್ಳುತ್ತಾನೆ. ದೇವರ ಪೂಜಾ ಕಾರ್ಯಗಳಲ್ಲಿ ಪೂಜಾರಿಗೆ ಸಹಾಯಕರಾಗಿ ಕೆಲಸ ಮಾಡುವುದು, ದೇವರ ಪಲ್ಲಕ್ಕಿ ಹೊರುವುದು,ಬೆಂಕಿ (ಅಗ್ನಿಗೊಂಡ) ತುಳಿಯುವುದು, ಉರಿಯುವ ಪಂಜು ನುಂಗುವುದು, ಮಣೇವು ಆಡುವುದು ಬಿಲ್ಲುಗೊಡು ತಿರುಗುವುದು, ಸೋಮನ ಕುಣಿತ, ಭೂತನಾಲಿಗೆ ಕುಣಿತ, ಮುಳ್ಳು ತುಳಿಯುವುದು, ಕಳ್ಳೆ ಬೇಲಿಯ ಮೇಲೇ ಮಲಗುವುದು, ದೇವರು ಮೈಯಲ್ಲಿ ಬಂದಂತೆ ನಟಿಸುವುದು, ನಾಲಿಗೆ ಚಾಚುವುದು, ಹತ್ತು ಜನ ತಿನ್ನುವ ಮೊಸರನ್ನವನ್ನು ಒಬ್ಬರೇ ತಿನ್ನುವುದು, ಮೈದುಂಬಿ ನಡುಗುವುದು, ರೌದ್ರವತರದಿಂದ ಜಾಗಟೆ ಬಡಿಯುವುದು, ಶಂಖ ಊದುವುದು, ತಿರುಮಂತ್ರ ಹೇಳುವುದು, ನೆಲಕ್ಕೆ ಬಿದ್ದು ಉರುಳಾಡುವುದು, ಉರುಮೆಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ಕುಣಿಯುವುದು, ಗರಗರಮಣೇವು ತಿರುಗುವುದು, ಜೋರಾಗಿ ಕೂಗುವುದು, ಬೇಟೆ ಎಲೆಯಲ್ಲಿ ಇಟ್ಟು ಬೆಲ್ಲ-ಬಾಳೆಹಣ್ಣನ್ನು ಕೈಯಲ್ಲಿ ಮುಟ್ಟದೆ ಬಗ್ಗಿ ಬಾಯಲ್ಲಿ ತಿನ್ನುವುದು, ಭವಿಷ್ಯ ಹೇಳುವುದು, ನಾಟಿ ವೈದ್ಯೋಪಚಾರಗಳನ್ನು ಮಾಡುವುದು, ದೆವ್ವ-ಭೂತಗಳನ್ನು ಬಿಡಿಸುವುದು, ಮಾಟ-ಮಂತ್ರಗಳನ್ನುಮಾಡುವುದು, ಮತ್ತು ಇಳಿಸುವುದು ಸಕಲ ವಿದ್ಯೆಗಳು ನನಗೆ ಗೊತ್ತು ಎಂದು ಹೇಳಿಕೊಳ್ಳುವುದು, ಮೊದಲಾದ ಸಾಮಾಜಿಕ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ದಾಸಯ್ಯಗಳು ತಮ್ಮನ್ನು ತಾವೇ ತೊಡಗಿಸಿ ಕೊಳ್ಳುತ್ತಾರೆ. ಭಾರತೀಯ, ಸನಾತನ ಧರ್ಮ, ಸಂಸ್ಕೃತಿಯ ಬೆಳವಣಿಗೆಗೆ ಈ ದಾಸಯ್ಯಗಳ ಜನಪದ ಕಲೆ ಮತ್ತು ಆಚರಣೆಗಳು ಸಾಕಷ್ಟು ಪ್ರೋತ್ಸಾಹ ನೀಡುತ್ತವೆ.

೯. ೫. ಪ್ರಸ್ತುತ ದಾಸಯ್ಯನ ಸ್ಥಿತಿಗತಿಗಳು

ಕೃಷಿ ಪ್ರಧಾನವಾದ ಭಾರತದ ಗ್ರಾಮೀಣ ಸಮುದಾಯಗಳ ಮೇಲೇ ಕೈಗಾರಿಕೀಕರಣ, ನಗರೀಕರಣ, ಆಧುನೀಕರಣ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ "ಚಿಕ್ಕಗಣರಾಜ್ಯಗಳಂತಿದ್ದ" ಹಳ್ಳಿಗಳ ಮಹತ್ವ ಹುದ್ದೆಗಳಾದ ಗೌಡ, ಶ್ಯಾನುಭೋಗ, ಗೊಂಚಿಕಾರ, ಪೂಜಾರಿ, ತಳವಾರ, ತೋಟಿ, ಕ್ಷೌರಿಕ, ಕಮ್ಮಾರ, ಬಡಗಿ, ಅಗಸ, ಚಲವಾದಿ, ಮಣೆಗಾರ ಎಂಬ ಹನ್ನೆರಡು ಕೈವಾಡದವರ ಅಧಿಕಾರ ಕಡಿಮೆಯಾಗಿರುವಂತೆ, ಈ ದಾಸಯ್ಯಗಳ ಧಾರ್ಮಿಕ ಮತ್ತು ಮಹತ್ವ ಕಡಿಮೆಯಾಗಿ ಸಾಮಾಜಿಕ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವುದು ಕಷ್ಟವಾಗಿದೆ.

ಚಿತ್ರದುರ್ಗ ಜಿಲ್ಲೆ ಬರಗಾಲ ಪೀಡಿತವಾಗಿರುವುದರಿಂದ ಈ ಪ್ರದೇಶದ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ಮೊದಲಾದ ಕ್ಷೇತ್ರಗಳಲ್ಲಿ ರೈತರು ಸಂಕಷ್ಟದಲ್ಲಿ ಜೀವಿಸುತ್ತಿದ್ದರೆ. ದಾಸಯ್ಯಗಳಿಗೆ ದವಸ-ಧಾನ್ಯ ಕೊಟ್ಟು ಪ್ರೋತ್ಸಾಹಿಸುತ್ತಿದ್ದ ಜನತೆ ಈಗ ಹತ್ತು ಪೈಸೆ ಕಾಸು ಕೊಟ್ಟು ಕೈತೊಳೆದು ಕೊಳ್ಳುತ್ತಾರೆ. ದಾಸಯ್ಯನ ವೃತ್ತಿ ಲಾಭದಾಯಕವಲ್ಲದಿರುವುದರಿಂದ ಆಧುನಿಕ ಯುವಕರು ಇದನ್ನು ಕಡೆಗಣಿಸಿ, ಬೇರೆ ಬೇರೆ ವೃತ್ತಿಯಲ್ಲಿ ತೊಡಗಿದ್ದಾರೆ. ವಂಶಪಾರಂಪರ್ಯವಾಗಿ ಬಂದಂಥ ದಾಸಯ್ಯನ ವೃತ್ತಿಗೆ ಈಗ ಗೌರವ ಇಲ್ಲದಿರುವುದರಿಂದ ಇದನ್ನು ಮುಂದುವರಿಸಲು ಆಗದಿರುವುದರಿಂದ, ಹಿರಿಯ ತಲೆಮಾರುಗಳ ದಾಸಯ್ಯಗಳು ಮರಣ ಹೊಂದಿದ ನಂತರ, ಆ ದಾಸಯ್ಯನ ಪರಿಕರಗಳನ್ನು ನದಿ, ಹಳ್ಳ, ತೊರೆ, ಬಾವಿಗೆ ಹಾಕಿ ಗಂಗೆ ಕಾಣಿಸಿ ಕೈಮುಗಿದು ಬರುವ ಯುವಕರು ನಮ್ಮ ಗ್ರಾಮೀಣ ಪ್ರದೇಶ ದಲ್ಲಿದ್ದಾರೆ; "ದಾಸಯ್ಯ ಕಣೋ ಕೈಯಾಗೆ ಕಾಸಿಲ್ಲ ಕಣೋ" "ಅದಲ್ಲ ಕಣೋ ದಾಸಯ್ಯ ಅಂದ್ರೆ ಗುಡಿ ಹಿಂದಕ್ಕೊಗಿ ಟಂಗ್‌ಅದ್ನಂತೆ", ಹಾದ್ಯಾಗ್ಹೋಗ ದಾಸಯ್ಯನ ಏನು ಕೇಳ್ತೀಯಾ" ಎಂಬ ದಾಸಯ್ಯನ ಗಾದೆಗಳು ಹುಟ್ಟಿ ಕೊಂಡಿವೆ. ಪ್ರಸ್ತುತ ವೃತ್ತಿ ದಾಸಯ್ಯಗಳ ಸಂಖ್ಯೆ ಈಗ ಕಡಿಮೆಯಾಗಿ, ಹೊಟ್ಟೆ ಪಾಡಿಗಾಗಿ ಪ್ರವೃತ್ತಿ ದಾಸಯ್ಯಗಳ ಸಂಖ್ಯೆ ಅಧಿಕವಾಗುತ್ತಿದೆ. ಆದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಈ

ವೃತ್ತಿ ದಾಸಯ್ಯಗಳಿಗೆ ಬಹಳ ಮಹತ್ವ ಕೊಡುತ್ತಾರೆ. ಸಂಶೋಧನ ಕ್ಷೇತ್ರ ಕಾರ್ಯದಲ್ಲಿ ದಾಸಯ್ಯಗಳನ್ನು ಸಂದರ್ಶನ ಮಾಡಿದಾಗ ಶೇಕಡ ೯೦ ರಷ್ಟು ಯುವ 'ದಾಸಯ್ಯ'ಗಳಿಗೆ 'ತಿರುಮಂತ್ರ' ಹೇಳುವುದಾಗಲಿ, ದಾಸಯ್ಯನ ವೃತ್ತಿಯ ರೀತಿ ನೀತಿಗಳಾಗಲಿ ತಿಳಿದಿರುವುದಿಲ್ಲ; ಚಿತ್ರದುರ್ಗ ಜಿಲ್ಲೆಯ ಕೆಲವೊಂದು ಪ್ರದೇಶಗಳಲ್ಲಿ ಮ್ಯಾಸಬೇಡರ ದೇವರುಗಳಿಗೆ ಹರಿಜನರು ಕೂಡ ಮುದ್ರೆ ಒತ್ತಿಸಿಕೊಂಡು ದಾಸಯ್ಯಗಳಾಗಿದ್ದಾರೆ, ಹೊಳಲ್ಕೆರೆ ತಾಲ್ಲೂಕು ದೇವರಗಂಜಿಗಟ್ಟೆ ಕಂಪಳ ನರಸಿಂಹಸ್ವಾಮಿಗೆ ಆದಿದ್ರಾವಿಡ ಜನಾಂಗಕ್ಕೆ ಸೇರದ ಶ್ರೀ ಜಿ.ಆರ್.ರವೀಂದ್ರ ಎಂಬುವರಿಗೆ ಹೂವಿನ ಮುದ್ರೆಯಾಗಿದೆ; ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಹೊಸ-ಹಟ್ಟಿಯ ಹರಿಜನ ಜಾತಿಗೆ ಸೇರಿದ ಲಸ್ಮೇಲರು ಬೆಡಗಿನ ತಿಮ್ಮಣ್ಣ, ಲಕ್ಕಪ್ಪ, ಗೋವಿಂದರಾಯ ಎಂಬುವರು ದೇವರಮರಿಕುಂಟೆ ಅಹೋಬಲನರಸಿಂಹಸ್ವಾಮಿಗೆ ದಾಸಯ್ಯರಾಗಿ ಮುದ್ರೆ ಒತ್ತಿಸಿಕೊಂಡು ದೇವರ ಸೇವೆ ಮಾಡುತ್ತಿದ್ದಾರೆ. ಅದೇ ರೀತಿ ಹರಿಜನರು ಕೂಡ ಮ್ಯಾಸಬೇಡರ ವೈಷಣವ ಪಂಥದ ದೇವರಿಗೆ ಹಲವುಕಡೆ ದಾಸಯ್ಯಗಳಾಗಿದ್ದಾರೆ ಎಂದು ಅಲ್ಲಿಯ ಜನರು ತಿಳಿಸಿದರು. ಆದರೆ ಕಾಡುಗೊಲ್ಲರಲ್ಲಿ ಈ ಪದ್ಧತಿ ಕಂಡು ಬರುವುದಿಲ್ಲ.

ಒಟ್ಟಾರೆ ಈ ದಾಸಯ್ಯಗಳ ಸಾಮಾಜಿಕ ಸ್ಥಿತಿಗತಿಗಳು ಏನೇ ಇದ್ದರೂ ಈ ವೃತ್ತಿ ನಮ್ಮ ಸಾಮಾಜಿಕ ಹಿನ್ನಲೆಯನ್ನು ಗೌರವಿಸುತ್ತದೆ. ನಮ್ಮ ಸನಾತನ ಧರ್ಮ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಮಾಕನಡಕು ಗ್ರಾಮ ಕೆಂಚೋಬಳನರಸಿಂಹಸ್ವಾಮಿಗೆ ಚಲುವಾದಿ ಜಾತಿಯವರು ದಾಸಯ್ಯಗಳಿದ್ದು ಸೂರ್ಯನ ಮುಕ್ಕು ಮುಗಿದನಂತರ ದೇವರ ಪೂಜಾರಿ ಬರುವಾಗ ಅತೀ ಅವೇಶದಿಂದ ಹುಡಿ ತುಂಬಲು ಬರುವಾಗ ನರಸಿಂಹಸ್ವಾಮಿಯ ತಿರುಮಂತ್ರವನ್ನು ದಾಸಯ್ಯ ಹೇಳಿದಾಗ ಮಾತ್ರ ಸ್ವಾಮಿ ಉಗ್ರತೆ ಕಡೆಮೆಯಾಗಿ ಶಾಂತಿಯಿಂದ ಗುಡಿ ತುಂಬುವುದನ್ನು ಕಂಡಿದ್ದೇವೆ.

೧೦. ದೇವರೆತ್ತುಗಳು

ಮ್ಯಾಸ್ಯಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ದೇವರಿಗೆ 'ದೇವರೆತ್ತು' ಮತ್ತು 'ಬಸವ'ಗಳನ್ನು ಬಿಡುವ ಪದ್ಧತಿ ಕಂಡುಬರುತ್ತದೆ. ಭಕ್ತಾಧಿಗಳು ಹರಕೆ ಮಾಡಿಕೊಂಡ ಅಥವಾ ದೇವರ ಅಪ್ಪಣೆಯ ಮೇರೆಗೆ "ಬಸವ" ಮತ್ತು ದೇವರೆತ್ತುಗಳನ್ನು ಬಿಡುತ್ತಾರೆ. ಕಾಡುಗೊಲ್ಲರು "ಪಟ್ಟದ ಬಸವ"ನಿಗೆ ಮಹತ್ವ ಕೊಟ್ಟಿದೆ. ಮ್ಯಾಸಬೇಡರು "ದೇವರೆತ್ತುಗಳು" ಮತ್ತು "ಪಟ್ಟದ ಬಸವ" ಎರಡಕ್ಕೂ ಮಹತ್ವ ಕೊಡುತ್ತಾರೆ. ಎತ್ತಪ್ಪ, ಜುಂಜಪ್ಪ ಮೊದಲಾದ ಕಾಡುಗೊಲ್ಲರ ಪುರಾಣಗಳಲ್ಲಿ 'ಬಸವ'ನ ಮಹತ್ವ ಮತ್ತು ಈ ಎರಡು ಬುಡಕಟ್ಟು ಜನಾಂಗ ಪಶುಪಾಲಕರಾಗಿದ್ದರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಹೊಳೆಲ್ಕೆರೆ ತಾಲ್ಲೂಕು ದೇವರ ಗಂಜಿಗಟ್ಟೆ ಹತ್ತಿರ ಮಿಂಚೇರಿ ಹಳ್ಳ ಚಳ್ಳಕೆರೆ ತಾಲ್ಲೂಕು ನನ್ನಿವಾಳದ ಕಾವಲು, ಸೂರನಹಳ್ಳಿ ಹತ್ತಿರ ವೇದಾವತಿ ನದಿ ದಂಡೆಯಲ್ಲಿ ಕಂಡು ಬರುವ ಗಾದರಿಪಾಲನಾಯಕನ 'ಹುಲಿಕಲ್ಲು' ಮೊದಲಾದ ಅಂಶಗಳಿಂದ ಮ್ಯಾಸಬೇಡರು ಮೂಲತಃ ಪಶುಪಾಲಕರಾಗಿದ್ದರು ಎಂಬುದನ್ನು ತಿಳಿಯಬಹುದು.

ಈ ದೇವರೆತ್ತುಗಳು ಶ್ರೀಕೃಷ್ಣನಿಂದ ಬೇಡರ ಮೂಲ ಪುರುಷ ಮೂಗನಾಯಕನಿಗೆ ನೀಡಲ್ಪಟ್ಟ ಗೋವುಗಳೆಂದ; ಶ್ರೀಶೈಲದ ಮಲ್ಲಿಕಾರ್ಜುನನಿಂದ ಬಳುವಳಿಯಾಗಿ ಬಂದವುಗಳೆಂದು ಮ್ಯಾಸಬೇಡರು ಬಲವಾಗಿ

ನಂಬಿದ್ದಾರೆ. ಕಾಡುಗೊಲ್ಲರು ಸಾಂಪ್ರದಾಯಿಕವಾಗಿ ತಾವು ಭಗವಾನ್ ಶ್ರೀಕೃಷ್ಣನ ಮೂಲದಿಂದ ಬಂದವರೆಂದು, ಉತ್ತರ ಭಾರತದ ದೆಹಲಿ ಮತ್ತು ನೆರಹೊರೆಯಿಂದ ಪಶುಪಾಲಕರಾಗಿ ದಕ್ಷಿಣ ಭಾರತಕ್ಕೆ ವಲಸೆ ಬಂದವರೆಂದು ಹೇಳಿಕೊಳ್ಳುತ್ತಾರೆ. ಶ್ರೀಕೃಷ್ಣ ಮ್ಯಾಸಬೇಡರಿಗೆ ಕೊಟ್ಟ ಗೋವುಗಳಾಗಲಿ, ಕಾಡುಗೊಲ್ಲರು ಶ್ರೀಕೃಷ್ಣನ ಸಂತತಿಯವರೆಂದು ಹೇಳಿಕೊಳ್ಳವುದಾಗಲಿ, ಇವೆರೆಡೂ ಬುಡಕಟ್ಟು ಜನಾಂಗದವರು ಮೂಲತಃ ವೈಷ್ಣವ ಸಂಪ್ರದಾಯವನ್ನು ಪಾಲಿಸಿದಂತೆಯೂ; ಕಾಲಾಕ್ರಮೇಣ ದಕ್ಷಿಣ ಭಾರತಕ್ಕೆ ವಲಸೆ ಬಂದಾಗ ಶೈವ ಸಂಪ್ರದಾಯ ಅನುಸರಿಸಿದಂತೆಯೂ ಕಂಡು ಬರುತ್ತದೆ.

ಭಕ್ತರು ಹರಕೆ ಹೊತ್ತು ಅಥವಾ ದೇವರ ಅಪ್ಪಣೆ ಮೇರೆಗೆ ಬಿಡುವ ಬಸವಗಳಿಗೆ ದೇವರ ಪೌಳಿಯಲ್ಲಿ ಬೆರಣಿ, ತುಗ್ಗಲಿ, ಉತ್ತಾರಣಿಕಡ್ಡಿ, ಶ್ರೀಗಂಧ ಮೊದಲಾದ ಚಕ್ಕೆಗಳಿಂದ ಚಿಕ್ಕ ಗುಂಡಿಯಲ್ಲಿ ಬೆಂಕಿಮಾಡಿ; ಪಂಚಲೋಹದ ಶಂಖ ಮತ್ತು ಚಕ್ರಗಳನ್ನು ಕಾಯಿಸಿ ಮುದ್ರೆ ಹಾಕುತ್ತಾರೆ. ನಂತರ ದೇವರ ತೀರ್ಥ ಹಾಗೂ ದೇವರ ಮೇಲಿನ ಹೂವಿನಹಾರ ಹಾಕಿ ಕೈಬಿಡುತ್ತಾರೆ. ಅಂದಿನಿಂದ ಈ ಹೋರಿ ಕರುವನ್ನು "ಪಟ್ಟದ ಬಸವ" ಎಂದು ಕರೆಯುತ್ತಾರೆ. ಈ ಬಸವ ಎಲ್ಲಿ ಬೇಕಾದರೂ ಮೇಯಿದು ಹೊಟ್ಟೆ ತುಂಬಿಸಿಕೊಳ್ಳಬಹುದು. ಆದರೆ ದೇವರೆತ್ತುಗಳನ್ನು ಹರಕೆ ಮಾಡಿ ಕೊಂಡ ಭಕ್ತರು ಬಿಟ್ಟ ದನಕರುಗಳಾಗಿರುವದರಿಂದ ಇವುಗಳನ್ನು ರಕ್ಷಣೆ ಮಾಡಲು 'ಕಿಲಾರಿ'ಗಳನ್ನು ನೇಮಕ ಮಾಡುತ್ತಾರೆ. ಈ 'ಎತ್ತಿನ ಕಿಲಾರಿ'ಗಳ ಬಗ್ಗೆ ಎರಡೂ ಬುಡಕಟ್ಟು ಜನರು ಪೂಜ್ಯ ಭಾವನೆ ಹೊಂದಿದ್ದಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರುಗಳಲ್ಲಿ 'ಪಟ್ಟದ ಬಸವ' ಮತ್ತು ದೇವರಿಗೆಂದು ಬಿಟ್ಟ ದನಕರುಗಳು "ಮೊಳಕಾಲ್ಮೂರು ತಾಲ್ಲೂಕು ಬಿ.ಜಿ.ಕೆರೆಯ ಕಮರದ ಕಾನಿನಲ್ಲಿ ಮೂನ್ನೂರು ಇವೆ. ಕೂಡ್ಲಿಗಿ ತಾಲ್ಲೂಕು ಗುಡೇಕೋಟೆಯ ಅಪ್ಪೇನಹಳ್ಳಿ ಸರಹದ್ದಿನ ಅಡವಿಯಲ್ಲಿ ನೂರು ಎತ್ತುಗಳಿವೆ. ಇವನ್ನು ದೊಡ್ಡ ಸೂರನಾಯಕನ ಎತ್ತುಗಳೆಂದು ಕರೆಯುವರು. ಚಿಕ್ಕಕುಮತಿ ಕಂಪಳದೇವರ ಹಟ್ಟಿ ಹತ್ತಿರದ ಕಮರದ ಕಾಡಿನಲ್ಲಿ ಪಾಪನಾಯಕನ ಎತ್ತುಗಳೆಂದು ಕರೆಸಿಕೊಳ್ಳುವವು ಸುಮಾರು ಐವತ್ತು ಇವೆ. ಕೂಡ್ಲಿಗಿ ತಾಲ್ಲೂಕು ತಿಮ್ಮನಹಳ್ಳಿ ಅಡವಿಯಲ್ಲಿ ಕಂಪಳರಂಗಸ್ವಾಮಿ ಎತ್ತುಗಳು ನಲವತ್ತೈದು ಇವೆ. ಬೋಸೇದೇವರ ಹಟ್ಟಿಯಲ್ಲಿ ಇಪ್ಪತ್ತು ದೇವರೆತ್ತುಗಳಿವೆ. ನಲಗೇತನಹಟ್ಟಿಯಲ್ಲಿಇಪ್ಪತ್ತು ಎತ್ತುಗಳಿವೆ."[೬] ಈ ಎಲ್ಲಾ ದೇವರೆತ್ತುಗಳಿಗೆ ಮ್ಯಾಸಬೇಡರು ಗುಗ್ಗರಿ ಹಬ್ಬಗಳಲ್ಲಿ ಬಹಳ ಮಹತ್ವ ಕೊಡುತ್ತಾರೆ. "ದೇವರೆತ್ತುಗಳನ್ನು ಓಡಿಸುವುದು" ಎಂದು ಮೂಕನಾಡುಕು ಓಬಳದೇವರೆತ್ತುಗಳು. ದೇವರಮರಿಕುಂಟೆ ಓಬಳದೇವರ ಬಸವ ಮತ್ತು ಎತ್ತುಗಳು. ಕಂಪಳದೇವರಹಟ್ಟಿ, ಹಬ್ಬಿ ಹಾಲು ಕುಡಿದಸ್ವಾಮಿ ದೇವರೆತ್ತುಗಳು ಮೊದಲಾದ ದೇವರೆತ್ತುಗಳನ್ನು ಗುಗ್ಗರಿ ಹಬ್ಬದಲ್ಲಿ ದೇವರ ಪೌಳಿಯ ಹತ್ತಿರ ಓಡಿಸುವ ಸಂಪ್ರದಾಯ ಕಂಡು ಬರುತ್ತಿದೆ.

ಹಿರಿಯೂರು ತಾಲೂಕು ಯರಬಳ್ಳಿ ದೊಡ್ಡ ಗೊಲ್ಲರಹಟ್ಟಿಯ ಕಾಡುಗೊಲ್ಲರ ಹಾಲು ಕುಡಿದ ಸ್ವಾಮಿಯ ದೊಡ್ಡ ಗುಗ್ಗರಿ ಹಬ್ಬದ ಸಂದರ್ಭದಲ್ಲಿ ಚಳ್ಳಕೆರೆ ತಾಲ್ಲೂಕು ನನ್ನಿವಾಳ ಗುಡ್ಡದಿಂದ ಮ್ಯಾಸಬೇಡರು ದೇವರೆತ್ತುಗಳನ್ನು ಹೊಡೆದುಕೊಂಡು ಬಂದು ಈ ಹಟ್ಟಿಯ ಪಕ್ಕ ಬೆರಗು ಹಾಕಿಕೊಂಡು ದೇವರೆತ್ತುಗಳಿಗೆ 'ಗೂಡು' ತಿರುವುತ್ತಾರೆ. ಈ ಹಬ್ಬದಲ್ಲಿ 'ಹಾಲುಕುಡಿದ ಸ್ವಾಮಿ' ದೇವರು ತಾಳವಟ್ಟಿ ಹತ್ತಿರ ನೊಣಬೆ ಅಥವಾ

ಯರಬಳ್ಳಿ ಹತ್ತಿರ ಸುಣಗುಡಿ ಹಳ್ಳಕ್ಕೆ 'ಗಂಗಾಪೂಜೆ'ಗೆ ಹೋಗುವಾಗ ದೇವರೆತ್ತುಗಳ ಮಧ್ಯೆ ಹೋಗಿ ಬರುತ್ತದೆ. ಈ ಗುಗ್ಗರಿ ಹಬ್ಬದಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ದೇವರ ಪೌಳಿಯಲ್ಲಿ "ಒಂದೇ ಬಾಳೆ ಎಲೆ ಹಾಕಿಕೊಂಡು ಒಂದು ಕಡೆ ಮ್ಯಾಸಬೇಡರು, ಮತ್ತೊಂದು ಕಡೆ ಕಾಡುಗೊಲ್ಲರು ಊಟ ಮಾಡುತ್ತಾರೆ". ಬಹು ಹಿಂದೆ ಜೊತೆಗೆ ಅನ್ನಕಲಿಸಿ ಊಟ ಮಾಡುತ್ತಿದ್ದೆವು. ಆದರೆ ಈಗ ಒಂದೇ ಬಾಳೆ ಎಲೆಯಲ್ಲಿ ಭಾಗ ಮಾಡಿಕೊಂಡು ಊಟ ಮಾಡುತ್ತೇವೆ ಎಂದು ಗುಡಿ ಗೌಡ ಪಿಳ್ಳಪ್ಪ, ಅಂಗಡಿ ನಾಗಪ್ಪ ಮತ್ತು ಹಟ್ಟಿಯ ಜನರು ತಿಳಿಸಿದರು. ಮ್ಯಾಸಬೇಡರ ದೇವರೆತ್ತುಗಳು ಬರುವತನಕ ಈ ಹಟ್ಟಿಯ ಕಾಡುಗೊಲ್ಲರು ದೊಡ್ಡ ಗುಗ್ಗರಿ ಹಬ್ಬ ಮಾಡುವುದಿಲ್ಲವಂತೆ. ಹಾಲುಕುಡಿದ ಸ್ವಾಮಿಯ ದೇವರ, ಕಳ್ಳೆ ಪೌಳಿಯಲ್ಲಿ ಮ್ಯಾಸಬೇಡರ ಶರಣ ಗಾದರಿಪಾಲನಾಯಕನ ಅಂಚಿ ಹುಲ್ಲಿನ ಗುಡಿಸಲು ಇದೆ, ಜೊತೆಗೆ ಕಾಟಮ್ಮದೇವರುಗಳು ಮತ್ತು ಸಿಂಪಣ್ಣ ಎಂಬ ದೇವರ ಗುಬ್ಬಗಳು ಕಂಡು ಬರುತ್ತವೆ. ಹಾಲು ಕುಡಿದ ಸ್ವಾಮಿ, ಸಿಂಪಣ್ಣ, ಕಾಟಮ್ಮದೇವರುಗಳು ಕಾಡುಗೊಲ್ಲರ ದೈವಗಳಾದರೆ, ಗಾದರಿಪಾಲನಾಯಕ ಮ್ಯಾಸಬೇಡರ ದೈವ. ಆದ್ದರಿಂದ ಬಹುಪಾಲು ವಕ್ತೃಗಳ ಅಭಿಪ್ರಾಯಗಳೆಂದರೆ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಮೂಲತಃ ಒಂದೇ ತಾಯಿಯ ಮಕ್ಕಳು ಹಲವು ಕಾರಣಗಳಿಂದ ಇವರಿಬ್ಬರೂ ಬೇರೆಯಾಗಿದ್ದಾರೆ ಎಂಬುದನ್ನು ಆಧಾರ ಸಹಿತವಾಗಿ ಈ ಬುಡಕಟ್ಟು ಜನಾಂಗದವರು ತಿಳಿಸುತ್ತಾರೆ. ಹೊಳಲ್ಕೆರೆ ತಾಲ್ಲೂಕು ಗಂಗಸಮುದ್ರದ ಗೊಲ್ಲಹರಟ್ಟಿಯಲ್ಲಿ 'ಗಾದರಿಲಿಂಗೇಶ್ವರಸ್ವಾಮಿ"ಯ ಬಾಳೆಪಟ್ಟಿಯ ಚಿಕ್ಕ ಗುಡಿಸಲು ಕಂಡು ಬರುವುದರ ಜೊತೆಗೆ ಈ ಹಟ್ಟಿಯ ಕಾಡುಗೊಲ್ಲರು 'ಗಾದ್ರಿ ಗುಡ್ಡ' ಮತ್ತು 'ಮಿಂಚೇರಿ ಹಳ್ಳ'ದ ಬಗ್ಗೆ ಬಹಳ ನಂಬಿಕೆ ಇಟ್ಟಿರುವುದರಿಂದ ಈ ಎರಡು ಬುಡಕಟ್ಟು ಜನಾಂಗದ ಕಾಡಾಡಿಗಳ ಬದುಕು ಮತ್ತು ಸಂಸ್ಕೃತಿಯಲ್ಲಿ ಪರಸ್ಪರ ಸಾಮ್ಯತೆಯನ್ನು ಗುರುತಿಸಬಹುದಾಗಿದೆ.

ಚಳ್ಳಕೆರೆ ತಾಲ್ಲೂಕು ದೇವರಮರಿಕುಂಟೆ ಮ್ಯಾಸಬೇಡರ "ಅಹೋಬಲ ನರಸಿಂಹಸ್ವಾಮಿ"ಗೆ ದೇವರೆತ್ತುಗಳು ಇರುವುದಿಲ್ಲ. ಒಂದು 'ಪಟ್ಟದ ಬಸವ' ಮಾತ್ರ ಇರುತ್ತದೆ. ಈ 'ಪಟ್ಟದ ಬಸವ'ನನ್ನು ಇದೇ ಊರಿನ ಕಾಡುಗೊಲ್ಲರ ಮಾಗಣ್ಣರ ಈರಣ್ಣ ಮತ್ತು ಅಣ್ಣತಮ್ಮಗಳು ತಮ್ಮ ದನಕರುಗಳ ಜೊತೆಗೆ ಈ 'ಪಟ್ಟದ ಬಸವನ'ನ್ನು ಮೇಯಿಸುವುದಕ್ಕೆ ಅಡವಿಗೆ ಹೊಡೆದುಕೊಂಡು ಹೋಗುತ್ತಾರೆ. ಇಲ್ಲವೇ ದೇವರ ಬಸವ ಸ್ವತಂತ್ರವಾಗಿ ಯಾರಾದರೂ ಹೊಲ, ಗದ್ದೆ ಅಥವಾ ಅಡವಿಯಲ್ಲಿ ಮೇದು ಅಲ್ಲಿ ಇಲ್ಲಿ ಸುತ್ತಾಡಿಕೊಂಡಿರುತ್ತದೆ. ಗುಗ್ಗರಿ ಹಬ್ಬದ ಬಿಲ್ಲುಗೂಡಿನ ಪೂಜೆ ಮುಗಿದ ನಂತರ ಗೋಪಾಲಕರಾದ ಈ ಕಾಡುಗೊಲ್ಲರು ತಮ್ಮ ದನಕರುಗಳ ಜೊತೆಗೆ ಈ 'ಪಟ್ಟದ ಬಸವ'ನನ್ನು ಹೊಡೆದುಕೊಂಡು ಬಂದು ದೇವರ ಕಳ್ಳೆಪೌಳಿಯ ಒಳಗೆ ಕೊಡುತ್ತಾರೆ. ಆಗ ಮ್ಯಾಸಬೇಡರ 'ಅಹೋಬಲ ನರಸಿಂಹಸ್ವಾಮಿಯ ಪೂಜಾರಿಗಳು 'ಪಟ್ಟದ ಬಸವ'ನಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಅದೇ ಸಂದರ್ಭದಲ್ಲಿ ಕರಿಕಂಬಳಿ ಗದ್ದುಗೆ ಹಾಕಿ "ಬಸವನ ಗದ್ದಿಗೆ" ಎಂದು ಪೂಜೆ ಮಾಡಿದ ನಂತರ ಗುಗ್ಗರಿ ಹಬ್ಬಕ್ಕೆ ಬಂದಿದ್ದ ಹೆಣ್ಣು ಮಕ್ಕಳು ಆ ಗದ್ದುಗೆಯ ಮೇಲೆ ಎಲೆ ಅಡಿಕೆ ಮತ್ತು ದಕ್ಷಿಣೆ ಇಟ್ಟು ತವರು ಮನೆ ದೇವರಿಗೆ ನಮಸ್ಕರಿಸುತ್ತಾರೆ. ಪಟ್ಟದ ಬಸವನನ್ನು ಕಾಯುವ ಕರಡಿಗೊಲ್ಲರ ಬೆಡಗಿನ ಕಾಡುಗೊಲ್ಲರು 'ಬಸವನ ಗದ್ದುಗೆ'ಯ ಮೇಲೆ ಇಟ್ಟ ಎಲೆ, ಅಡಿಕೆ, ದಕ್ಷಿಣೆ, ಕಾಯಿ, ಬಾಳೆಹಣ್ಣುಗಳನ್ನು

ತೆಗೆದುಕೊಂಡು ಗದ್ದುಗೆ ಎತ್ತುತ್ತಾರೆ. ನಂತರ ಜೋರಾಗಿ ಉರುಮೆ ಬಡಿಯುತ್ತ ಪಟ್ಟದ ಬಸವ ಮತ್ತು ದನಕರುಗಳನ್ನು ಓಡಿಸುತ್ತಾರೆ.

ಅಹೋಬಲ ನರಿಸಿಂಹಸ್ವಾಮಿಯ 'ಪಟ್ಟದ ಬಸವ'ನನ್ನು ಕಾಯುವ ದೇವರಮರಿಕುಂಟೆ ಕಾಡುಗೊಲ್ಲರು ಈ ದೇವರ ಬಗ್ಗೆ ಬಹಳ ಶ್ರದ್ಧೆ, ಭಯ-ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮ್ಯಾಸಬೇಡರ ಗುಗ್ಗರಿ ಹಬ್ಬದಲ್ಲಿ ಎಲ್ಲಾ ರೀತಿಯಿಂದ ಸಹಾಯ-ಸಹಕಾರ ಕೊಡುವುದರ ಜೊತೆಗೆ "ನಾವು - ಅವರು" - ಅಣ್ಣತಮ್ಮಗಳಾಗಿ ನಡೆದುಕೊಂಡಿದ್ದೇವೆ ಎಂದು ಈ ಪ್ರದೇಶದ ಕಾಡುಗೊಲ್ಲರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈ ದೇವರ 'ಬಸವ'ನನ್ನು ಕಾಯುವುದರಿಂದ; ಇದು ನಮ್ಮ ದನಕರುಗಳ ಮಧ್ಯೆ ಇರುವುದರಿಂದ; ನಮ್ಮ 'ರಾಸು'ಗಳಿಗೆ ಯಾವುದೇ ಕಾಯಿಲೆ ಬರುವುದಿಲ್ಲವೆಂದು; ಪಶುಪಾಲನೆ ನಮ್ಮ ಪವಿತ್ರ ಕಾಯಕವೆಂದು; ಓಬಳದೇವರು ನಮಗೆ ಎಲ್ಲಾ ರೀತಿಯಿಂದ ಅನುಕೂಲ ಮಾಡಿದ್ದಾನೆ ಎಂದು 'ಪಟ್ಟದ ಬಸವ'ನನ್ನು ಕಾಯುವ ಕಾಡುಗೊಲ್ಲರು ಹೇಳಿಕೊಳ್ಳುತ್ತಾರೆ. ಆಕಸ್ಮಿಕವಾಗಿ 'ಪಟ್ಟದ ಬಸವ' ಮರಣ ಹೊಂದಿದರೆ ದೇವಸ್ಥಾನದ ಹೊರಗಳ ಗುಡಿಯ ಹತ್ತಿರ ಅಂದರೆ ಗುಲೋಬಮ್ಮನ ತುಗ್ಗಲಿ ಮರದ ಕೆಳಗೆ "ಶಾಸ್ತ್ರೋಕ್ತವಾಗಿ ಮಣ್ಣು ಮಾಡುತ್ತಾರೆ" ಪ್ರತಿ ವರುಷ ಗುಗ್ಗರಿ ಹಬ್ಬದಲ್ಲಿ ಈ 'ಬಸವನ ಗುಡ್ಡೆ'ಗೆ ಪೂಜೆ ಸಲ್ಲಿಸುತ್ತಾರೆ. ಮತ್ತೇ ದೇವರ ಅಪ್ಪಣೆಯ ಮೇರೆಗೆ ಭಕ್ತರಾಗಲಿ ಅಥವಾ ಹಟ್ಟಿಯ ಯಜಮಾನ, ಪೂಜಾರಿ ಮತ್ತು ಅಣ್ಣತಮ್ಮಗಳು ಸೇರಿ ಶುಭ ಲಕ್ಷಣಗಳನ್ನು ಹೊಂದಿದ ಒಂದು ಹೊಸ ಹೋರಿಕರುವನ್ನು ತಂದು, ದೇವರ ಸಮ್ಮುಖದಲ್ಲಿ ಅದಕ್ಕೆ ಮುದ್ರೆ ಹಾಕಿ ಕೈಬಿಡುತ್ತಾರೆ. ಆ ಹೊತ್ತಿನಿಂದ ಅದು "ದೇವರ ಬಸವ"ವಾಗಿ ಪೂಜ್ಯತೆಯನ್ನು ಹೊಂದುತ್ತದೆ.

೧೧. ಕಿಲಾರಿಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೇವರುಗಳಿಗೆ ಹರಕೆ ಮಾಡಿಕೊಂಡು ಬಿಟ್ಟ ದನಕರುಗಳನ್ನು ಒಂದು ಗೂಡಿಸಿ ಆಯಾ ದೇವರ ಹಟ್ಟಿಗಳ ಸಮೀಪದ ಅಡವಿಯಲ್ಲಿ, ಎರಡು ಅಥವಾ ಮೂರು ಕಿ.ಮೀ. ದೂರದಲ್ಲಿ ಕಳ್ಳೆ ಬೇಲಿಯಿಂದ ನಿರ್ಮಿಸಿದ ದನದ ಗೂಡುಗಳನ್ನೇ "ಮುತ್ತೈಗಳ ಗೂಡು" ಅಥವಾ "ಎತ್ತೈಗಳ ಹಟ್ಟಿ" ಎಂದು ಕರೆಯುತ್ತಾರೆ. ಈ ದೇವರೆತ್ತುಗಳಲ್ಲಿ ಹಸು ಮತ್ತು ಎತ್ತುಗಳೂ ಕೂಡಿಕೊಂಡಿರುತ್ತವೆ. ಇವುಗಳನ್ನು ಕಾಯುವ ಅತವಾ ಸಂರಕ್ಷಣೆ ಮಾಡುವವರನ್ನು "ಎತ್ತಿನ ಕಿಲಾರಿಗಳು" ಎಂದು ಕರೆಯುತ್ತಾರೆ. ದೇವರೆತ್ತುಗಳ ಕಿಲಾರಿಗಳಾಗಲು ಅವಿವಾಹಿತ ಬಾಲಕರಿಗೆ ದೇವರ ಕಳ್ಳೆಪೌಳಿಯಲ್ಲಿ ದೀಕ್ಷೆಕೊಟ್ಟು ಶಾಸ್ತ್ರೋಕ್ತವಾಗಿ ಎತ್ತಿನ ಕಿಲಾರಿಗಳೆಂದು ನೇಮಕ ಮಾಡುತ್ತಾರೆ. ದೀಕ್ಷೆ ಪಡೆದ ನಂತರ ಮದುವೆಯಾಗಬಹುದು. ಆದರೆ ಹೆಂಡತಿ ಮಕ್ಕಳಿಗಿಂತ ದೇವರೆತ್ತುಗಳ ಸಂರಕ್ಷಣೆ ಮಾಡುವುದು ಅತ್ಯಂತ ಮಹತ್ವವಾಗಿರುವುದರಿಂದ; ತನಗೆ ಬೇಕಾದಗಲೆಲ್ಲ ಮನೆಯ ಕಡೆ ಹೋಗಿ ಹೆಂಡತಿ-ಮಕ್ಕಳಿಗೆ ದವಸ ಧಾನ್ಯಕೊಟ್ಟು ಕಷ್ಟ ಸುಖಗಳಲ್ಲಿ ಭಾಗಿಯಾಗಿ ಬರಬಹುದು.

ಚಳ್ಳಕೆರೆ, ಮೊಲಕಾಲ್ಮೂರು, ಜಗಳೂರು ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಮ್ಯಾಸಬೇಡರಿಗೆ ಸಂಬಂಧಿಸಿದ ದೇವರೆತ್ತು, ಎತ್ತೈಗಳ ಹಟ್ಟಿ, ಮತ್ತು ಕಿಲಾರಿಗಳನ್ನು ಕಾಣಬಹುದು. ಒಂದು 'ದನದ ಗೂಡಿನ' ಅಥವಾ 'ಎತ್ತೈಗಳ ಹಟ್ಟಿ'ಯಲ್ಲಿ ನಾಲ್ಕೈದು ಜನ ಕಿಲಾರಿಗಳು, ಸುಮಾರು ೨೫ ರಿಂದ ೩೫೦ ರವರೆಗೆ 'ರಾಸು'ಗಳು ಈ

ಗೂಡಿನಲ್ಲಿರುತ್ತವೆ. ಯಾವುದೇ ಕಾರಣಕ್ಕೂ ಈ ದೇವರೆತ್ತುಗಳನ್ನಾಗಲಿ, ಇವುಗಳು ಕರೆಯುವ ಹಾಲು, ಮೊಸರು, ತುಪ್ಪ, ಬೆಣ್ಣೆಯನ್ನಾಗಲಿ, ಅವುಗಳು ಹಾಕಿದ ಸಗಣಿ ಗೊಬ್ಬರವನ್ನಾಗಲಿ ಮಾರಾಟ ಮಾಡುವಂತಿಲ್ಲ. ಹಟ್ಟಿಗಳ ಸಂಪರ್ಕದಿಂದ ದೂರವಿದ್ದು, ದನದ ಗೂಡುಗಳ ಹತ್ತಿರವೆ ವಾಸ ಮಾಡಬೇಕಾಗಿರುವುದರಿಂದ; ಎತ್ತಿನ ಕಿಲಾರಿಗಳ ವೇಷ-ಭೂಷಣ ಅತ್ಯಂತ ಸರಳವಾಗಿರುತ್ತವೆ. ಚಡ್ಡಿ ಚಲ್ಲಣ, ಹೆಗಲ ಮೇಲೆ ಕರಿಯ ಕಂಬಳಿ, ತಲೆಯ ಮೇಲೊಂದು ಪೇಟ, ಕೈಯಲ್ಲೊಂದು ಕೋಲು, ಚರ್ಮದ ಮೂತಿ ಮೆಟ್ಟು, ಮುಂಗೈಯಲ್ಲೊಂದು ಬದ್ದು, ಕೆಲವೊಂದು ಕಿಲಾರಿಗಳು ಹೆಗಲ ಮೇಲೆ ಚಿಪ್ಪು ಕೊಡಲಿ ಇಟ್ಟುಕೊಂಡಿರುತ್ತಾರೆ. ಕಿವಿಯಲ್ಲಿ ಹತ್ತಕಡಕ, ಹೆಗಲ ಮೇಲೊಂದು ಬಿಳಿ ವಸ್ತ್ರವಿರುತ್ತದೆ.

ಎತ್ತಿನ ಗೂಡಿನಲ್ಲಿ ಮಲಗಿಕೊಳ್ಳಲು ಬಂದ್ರೆ ಸೊಪ್ಪು, ಆಪು, ರಾಗಿ ಕಡ್ಡಿಗಳನ್ನು ಉದ್ದ ಮತ್ತು ಅಗಲಕ್ಕೆ ತಕ್ಕಂತೆ ಹೊಂದಿಸಿಕೊಂಡು ಹಾಸಿಗೆ ತಯಾರಿಸಿಕೊಳ್ಳುತ್ತಾರೆ. ಹೊದಿಯಲು ಎಂಟು ಮೊಳ ಉದ್ದದ ಕರಿಕಂಬಳಿಯನ್ನು ಬಳಸುತ್ತಾರೆ. ನಾಲ್ಕೈದು ಜನ ಎತ್ತಿನ ಕಿಲಾರಿಗಳಲ್ಲಿ ಒಂದಿಬ್ಬರು ಮ್ಯಾಸಬೇಡರ ಹಟ್ಟಿಗಳಿಗೆ ಹೋಗಿ ದೇವರಿಗೆ ಸಂಬಂಧಿಸಿದ ಮನೆಗಳಿಂದ ದವಸ-ಧಾನ್ಯ, ಹಿಟ್ಟು ಮೊದಲಾದವುಗಳನ್ನು ಸಂಗ್ರಹಿಸಿಕೊಂಡು ಬಂದು ದನದ ಗೂಡಿನ ಹತ್ತಿರ ಮಣ್ಣಿನ ಮಡಿಕೆಗಳಲ್ಲಿ ಅಡಿಗೆ ಮಾಡಿ ಹಸುಗಳು ಕರೆಯುವ 'ಹಾಲು'ಗಳಿಂದ ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪಗಳನ್ನು ತಯಾರಿಸಿ ಊಟಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಯಾವುದೇ ಕಾರಣಕ್ಕೂ 'ಹೈನು' ಮಾರಾಟ ಮಾಡುವಂತಿಲ್ಲ.

ಮ್ಯಾಸಬೇಡ ಬುಡಕಟ್ಟುಗಳಲ್ಲಿ ಎತ್ತಿನ ಕಿಲಾರಿಗಳಿಗೆ ವಿಶೇಷ ಗೌರವ ಮತ್ತು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಕೆಲವೊಂದು 'ನ್ಯಾಯ ಪದ್ಧತಿ' ಸಂದರ್ಭಗಳಲ್ಲಿ ಗುಡಿಕಟ್ಟೆ, ಕಟ್ಟೆಮನೆ ಮತ್ತು ಗುರುಸ್ಥಾನಗಳ ಯಜಮಾನರು ನ್ಯಾಯಾ ತೀರ್ಮಾನ ಮಾಡುವಾಗ ತಪ್ಪಿತಸ್ಥರಿಗೆ ಕೆಲವೊಂದು ಸಾಮಾಜಿಕ ನಿರ್ಭಂಧಗಳನ್ನು ಹಾಕಿ, ಎತ್ತೈಗಳ ಹಟ್ಟಿ ಎತ್ತಿನ ಕಿಲಾರಿಗಳಿಂದ ತೀರ್ಥ ಅಥವಾ 'ಗೋಗಂಜು' ಹಾಕಿಕೊಂಡು ಶುದ್ಧರಾಗಿ ಬರಬೇಕೆಂಬ ತೀರ್ಪುಗಳು ಕೊಡುತ್ತಿದ್ದರು. ಆದ್ದರಿಂದ 'ಎತ್ತೈಗಳ ಹಟ್ಟಿ'ಯನ್ನು ಧಾರ್ಮಿಕ ಪವಿತ್ರ ಪುಣ್ಯಕ್ಷೇತ್ರವೆಂದು ಮ್ಯಾಸಬೇಡರು ನಂಬಿದ್ದಾರೆ. ಮದುವೆ-ಮಂಗಳ ಕಾರ್ಯದಲ್ಲಿ; ಹೆಣ್ಣು ಮೈನೆರೆತಾಗ; ಮಕ್ಕಳ ನಾಮಕರಣ ಮಾಡಿದಾಗ; ರೋಗಗಳಿಂದ ಬಳಲುತ್ತಿದ್ದಾಗ; ಹಟ್ಟಿಯಲ್ಲಿ ನ್ಯಾಯಾ ತೀರ್ಮಾನವಾಗದಿದ್ದಾಗ ಮತ್ತು ಸಾವು ನೋವುಗಳು ಸಂಭವಿಸಿದಾಗ ಮ್ಯಾಸಬೇಡರು. "ಎತ್ತೈಗಳ ಹಟ್ಟಿ"ಗೆ ಬಂದು ಎತ್ತಿನ ಕಿಲಾರಿಗಳು ಕೊಡುವ ಹಾಲು, ಮೊಸರು, ಮಜ್ಜಿಗೆ ಮತ್ತು ಅಂಬಲಿಯನ್ನು ಪ್ರಸಾದವನ್ನಾಗಿ ಸ್ವೀಕರಿಸಿ ಹೋಗುತ್ತಾರೆ.

ಮ್ಯಾಸಬೇಡರ ಹಟ್ಟಿಗಳಲ್ಲಿ 'ಗುಗ್ಗರಿ ಹಬ್ಬ' ನಡೆಯುವಾಗ ಈ ದೇವರೆತ್ತುಗಳೆಲ್ಲ ಅಲ್ಲಿಗೆ ಹೋಗುತ್ತವೆ. ದೇವರ ಪೌಳಿಯಲ್ಲಿ ದೇವರೆತ್ತುಗಳು ಅಥವಾ ಪಟ್ಟದ ಬಸವನಿಗೆ ಪೂಜೆ ಮಾಡಿ, ದೇವರೆತ್ತುಗಳನ್ನು ಒಂದು ದೇವರ ಗುಡಿಯಿಂದ ಇನ್ನೊಂದು ದೇವರ ಗುಡಿಯವರೆಗೆ ಮೆರವಣಿಗೆ ಮೂಲಕ ಓಡಿಸುತ್ತಾರೆ. ಕೆಲವೊಂದು ಪ್ರದೇಶದ ದೇವರುಗಳಿಗೆ ದೇವರೆತ್ತುಗಳ ಬದಲು 'ಪಟ್ಟದ ಬಸವ'ನನ್ನು ಬಿಟ್ಟಿರುತ್ತಾರೆ. ಕಾಡುಗೊಲ್ಲರಲ್ಲಿ ದೇವರೆತ್ತುಗಳಿಗಿಂತ 'ಪಟ್ಟದ ಬಸವ'ನಿಗೆ ಮಹತ್ವ ಕೊಡುತ್ತಾರೆ. ಎತ್ತಪ್ಪ ಮತ್ತು ಜುಂಜಪ್ಪ ದೇವರುಗಳಿಗೆ

‘ಪಟ್ಟದ ಬಸವ’ ಮಾತ್ರ ಇದ್ದು. ಜುಂಜಪ್ಪನ ಪೂಜಾರಿಗಳು ಈ ‘ಪಟ್ಟದ ಬಸವ’ನನ್ನು ಊರಿಂದ-ಊರಿಗೆ ಹೊಡೆದುಕೊಂಡು ಹೋಗಿ ‘ಭಿಕ್ಷೆಯಾಡಿ’ ಬರುತ್ತಾರೆ. ಆದ್ದರಿಂದ ಈ ‘ಬಸವ’ನ ಸಂರಕ್ಷಣೆ, ಪೂಜಾರಿಗಳೇ ಮಾಡುತ್ತಾರೆ. ಕಾಡುಗೊಲ್ಲರಲ್ಲಿ ‘ಎತ್ತಿನ ಕಿಲಾರಿಗಳು’ ಎಂಬ ಪದ್ಧತಿ ಕಂಡು ಬರುವುದಿಲ್ಲ. ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ದೇವರೆತ್ತುಗಳಾಗಲಿ, ಎತ್ತಿನ ಕಿಲಾರಿಗಳಾಗಲಿ ಕಂಡು ಬರುವುದಿಲ್ಲ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ದೇವರುಗಳಿಗೆ ‘ಪಟ್ಟದ ಬಸವ’ ಮಾತ್ರ ಇರುತ್ತದೆ. ಈ ಪಟ್ಟದ ಬಸವಗಳನ್ನು ಯಾರೇ ಕಿಲಾರಿಗಳು ಕಾಯುವುದಿಲ್ಲ, ಅವು ಸ್ವತಂತ್ರವಾಗಿ ತಿರುಗಾಡಿಕೊಂಡು ಯಾರಾದರೂ ಹೊಲ, ಗದ್ದೆ ಅಥವಾ ಅಡವಿಗಳಲ್ಲಿ ಮೇದು ಹಟ್ಟಿಯಲ್ಲಿ ಬಂದು ಮಲಗುತ್ತವೆ.

ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ ಅಹೋಬಲ ನರಸಿಂಹಸ್ವಾಮಿಗೆ ದೇವರೆತ್ತುಗಳ ಬದಲಾಗಿ ‘ಪಟ್ಟದ ಬಸವ’ ಇದೆ. ಈ ‘ಬಸವ’ನನ್ನು ಇದೇ ಊರಿನ ಕಾಡುಗೊಲ್ಲರು ತಮ್ಮ ದನಕರುಗಳ ಜೊತೆಗೆ ಮೇಯಿಸುವುದಕ್ಕೆ ಅಡವಿಗೆ ಹೊಡೆದುಕೊಂಡು ಹೋಗುತ್ತಾರೆ, ಇಲ್ಲವೇ ಆ ‘ಪಟ್ಟದ ಬಸವ’ ಸ್ವತಂತ್ರವಾಗಿ ಯಾರಾದರೂ ಹೊಲಗದ್ದೆಗಳಲ್ಲಿ ಮೇದು ಊರು ಮುಂದೆ ಇರುವ ದೇವರ ಕಲ್ಲು ಕಂಭದ ಹತ್ತಿರ ಬಂದು ಮಲಗುತ್ತದೆ. ಈ ದೇವರೆತ್ತುಗಳ ಕಿಲಾರಿಗಳು ಮತ್ತು ಪಟ್ಟದ ಬಸವನನ್ನು ಕಾಯುವ ಕಾಡುಗೊಲ್ಲರ ಆಯಾಯ ಪ್ರದೇಶದ ದೇವರ ಬಗ್ಗೆ ಬಹಳ ಭಯ-ಭಕ್ತಿ ಇಟ್ಟುಕೊಂಡಿರುತ್ತಾರೆ.

ಅಡಿಟಿಪ್ಪಣಿ

೧. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ೧೯೮೬, ಭಾಗ-೩, ಪುಟ : ೫೩೬

೨. ಅದೇ. ಪುಟ : ೬೩೬

೩. ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ೧೯೮೪, ಭಾಗ-೧, ಪುಟ : ೩೨

೪. ಡಾ.ಬಿ.ಎಸ್. ಗದ್ದಗಿಮಠ, ‘ಗದ್ದಗಿಮಠರ ಬರಹಗಳು’, ೧೯೮೮, ಪುಟ : ೫೭, ೫೮

೫. ಪ್ರೊ. ಸಾಣೇಕೆರೆ ಸಣ್ಣೋಬಯ್ಯ, ‘ವಾಲ್ಮೀಕಿ ವಾಣಿ’ ಮಾಸಪತ್ರಿಕೆ, ‘ಶ್ರೀರೇಣುಕಾ ಯಲ್ಲಮ್ಮ ಪುಣ್ಯಕ್ಷೇತ್ರ ಸವದತ್ತಿ’, ನವೆಂಬರ್-ಡಿಸೆಂಬರ್, ೧೯೯೯, ಪುಟ : ೧೮

೬. ಡಾ.ಬಿ.ಎಸ್. ಗದ್ದಗಿಮಠ, ‘ಗದ್ದಗಿಮಠರ ಬರಹಗಳು’, ೧೯೮೮, ಪುಟ : ೩೬, ೩೭

೭. ಚ.ನ. ಶಂಕರ್‌ರಾವ್, ‘ಸಮಾಜಶಾಸ್ತ್ರ’, ಭಾಗ-೪, ೧೯೯೨, ಪುಟ : ೬೭

೮. ಡಾ.ತೀ.ನಂ. ಶಂಕರನಾರಾಯಣ, ‘ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು’, ೧೯೮೨, ಪುಟ : ೧೫೧

೯. ಡಾ. ಕೃಷ್ಣಮೂರ್ತಿ ಹನೂರು, ‘ಮ್ಯಾಸಬೇಡರ ಸಂಸ್ಕೃತಿ’, ೧೯೯೩, ಪುಟ : ೧೨೮, ೧೨೯

ಅಧ್ಯಾಯ-೬

ಭಾಷೆ-ಸಾಹಿತ್ಯ-ಕಲೆ

ಅ. ಭಾಷೆ

೧. ಭಾಷೆಗಳ ವರ್ಗೀಕರಣ

೨. ಅಪಭ್ರಂಶ ಶಬ್ಧಗಳು

ಆ. ಜನಪದ ಸಾಹಿತ್ಯ

೧. ಹಾಡುಗಳು

೨. ಕಥೆಗಳು

೩. ಗಾದೆಗಳು

೪. ಒಗಟುಗಳು

೫. ಒಡಪುಗಳು

೬. ನುಡಿಗಟ್ಟುಗಳು

೭. ಲಾವಣಿ

ಇ. ಜನಪದ ಕಲೆಗಳು

೧. ಕ್ರೀಡೆಗಳು

೨. ವಾದ್ಯಗಳು

೩. ಕಲಾವಿದರು

೪. ನಾಟಕ

೫. ಕೋಲಾಟ

೬. ಭಜನೆ

೭. ಮಣೇವು ಕುಣಿತ

೮. ಮೊಂಡರ ಆಟ

೯. ಬಲೆಗಳು

೧೦. ಹಚ್ಚೆ

೧೧. ರಂಗೋಲಿ

೬. ಭಾಷೆ-ಸಾಹಿತ್ಯ-ಕಲೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಭಾಷೆ, ಸಾಹಿತ್ಯ ಮತ್ತು ಕಲೆಗಳಲ್ಲಿ ವಿಶೇಷತೆಯನ್ನು ಗುರುತಿಸಬಹುದು. ಭಾಷೆಯ ವಿಚಾರವಾಗಿ ಅವರು ಆಡುವ ಭಾಷೆಗಳ ವರ್ಗೀಕರಣ ಮತ್ತು ಅಪಭ್ರಂಶ ಶಬ್ದಗಳನ್ನು ಗುರ್ತಿಸಲಾಗಿದೆ. ಜನಪದ ಸಾಹಿತ್ಯದಲ್ಲಿ ಅವರ ಹಾಡುಗಳು, ಕಥೆಗಳು, ಗಾದೆಗಳು, ಒಗಟುಗಳು, ಒಡಪುಗಳು, ನುಡಿಗಟ್ಟುಗಳು ಮತ್ತು ಲಾವಣಿಗಳನ್ನು ವಿವರಿಸಲಾಗಿದೆ. ಜನಪದ ಕಲೆಗಳಲ್ಲಿ ಕ್ರೀಡೆಗಳು, ವಾದ್ಯಗಳು, ಕಲಾವಿದರು, ನಾಟಕ, ಕೋಲಾಟ, ಭಜನೆ, ಮಣೇವು ಕುಣಿತ, ಮೊಂಡರ ಆಟ, ಬಲೆಗಳು, ಹಚ್ಚೆ ಮತ್ತು ರಂಗೋಲಿ ಕಲೆಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಭಾಷೆ, ಸಾಹಿತ್ಯ ಮತ್ತು ಕಲೆಗಳನ್ನು ಕುರಿತು ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಅವುಗಳಲ್ಲಿ ಅ) ಭಾಷೆ. ಆ) ಜನಪದ ಸಾಹಿತ್ಯ ಇ) ಜನಪದ ಕಲೆಗಳು ಎಂದು ವರ್ಗೀಕರಿಸಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಸಂಬಂಧಿಸಿದ ಭಾಷೆ, ಸಾಹಿತ್ಯ ಮತ್ತು ಕಲೆಗಳ ಕುರಿತಂತೆ ಸಮಗ್ರವಾದ ವಿವರಣೆ ಮತ್ತು ಚರ್ಚೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಕೂಲಂಕುಷವಾಗಿ ವಿವರಿಸಲಾಗಿದೆ.

ಅ. ಭಾಷೆ

ಆ. ಜನಪದ ಸಾಹಿತ್ಯ

ಇ. ಜನಪದ ಕಲೆಗಳು

ಅ. ಭಾಷೆ


ಮೂಲತಃ ಆಂಧ್ರಪ್ರದೇಶದ ಶ್ರೀಶೈಲ, ಕದರಿ, ತಿರುಪತಿ, ಅಹೋಬಲದ ಕಡೆಯಿಂದ ಪಶುಪಾಲಕರಾಗಿ ಕರ್ನಾಟಕದ ಕಡೆಗೆ ವಲಸೆ ಬಂದ ಮ್ಯಾಸಬೇಡರ ಮಾತೃಭಾಷೆ ತೆಲಗು. ಆಂಧ್ರಪ್ರದೇಶ ಮತ್ತು ಕರ್ನಾಟಕದ ಗಡಿ ಭಾಗದ ಗುಡ್ಡಗಾಡುಗಳಲ್ಲಿ, ಕಣಿವೆ ಕಾನನಗಳಲ್ಲಿ, ಗಿರಿ ಶಿಖರಗಳಲ್ಲಿ, ಕಾಡು-ಮೇಡುಗಳಲ್ಲಿ, ಹುಲ್ಲು, ನೀರು ಸಮೃದ್ಧಿ ಇರುವ ಪ್ರದೇಶಗಳಲ್ಲಿ ಮ್ಯಾಸಬೇಡರು ನೆಲೆಸಿದ್ದಾರೆ. ಉತ್ತರ ಭಾರತದಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಹೇಳಿಕೊಳ್ಳುವ, ಗ್ರಾಮೀಣ ಸಂಸ್ಕೃತಿಯಿಂದ ಪ್ರತ್ಯೇಕವಾಗಿ 'ಹಟ್ಟಿ' ಕಟ್ಟಿಕೊಂಡು ಪಶುಪಾಲಕರಾಗಿ ಕಾಡು-ಮೇಡುಗಳಲ್ಲಿ ಅಲೆಯುವ ಕಾಡುಗೊಲ್ಲರ ಭಾಷೆ 'ಕನ್ನಡ'ವಾಗಿದೆ. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳ ಕ್ಷೇತ್ರ ಕಾರ್ಯಕೈಗೊಂಡಾಗ ಕಾಡುಗೊಲ್ಲರು ಸ್ಪಷ್ಟವಾಗಿ 'ಕನ್ನಡ' ಮಾತನಾಡುತ್ತಾರೆ. ಆದರೆ ಅವರಾಡುವ ಕನ್ನಡ ಭಾಷೆಯಲ್ಲಿ ಅಡವಿಚೆಂಚರ, ಮ್ಯಾಸಬೇಡರ, ಕುರುಬರ ಮತ್ತು ಒಕ್ಕಲಿಗರ ಸಂಸ್ಕೃತಿಯ ಪ್ರಭಾವ ಕಂಡು ಬರುವುದರಿಂದ ಕನ್ನಡ ಭಾಷೆಯನ್ನು ಅಪಭ್ರಂಶವಾಗಿ ಬಳಸುತ್ತಾರೆ. ಉದಾ: ಚೀಲ-ಸೀಲ, ರಕ್ತ-

ರೈತ, ಜ್ವರ-ಜರ, ಅಕ್ಕ-ಯಕ್ಕ, ಚಿಂತೆ-ಸಿಂತೆ ಮೊದಲಾದ ಪದಗಳನ್ನು ಗುರುತಿಸಬಹುದು. ಅದೇ ರೀತಿ ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲ್ಲೂಕಿನಲ್ಲಿ ವಾಸಿಸುವ ಮ್ಯಾಸಬೇಡರು 'ತೆಲುಗು' ಭಾಷೆಯನ್ನು ಹೆಚ್ಚಾಗಿ ಮಾತನಾಡುತ್ತಾರೆ. ಹೊಸದುರ್ಗ, ಹೊಳಲ್ಕೆರೆ ಮತ್ತು ಹಿರಿಯೂರು ತಾಲ್ಲೂಕುಗಳ ಮ್ಯಾಸಬೇಡರು 'ಕನ್ನಡ'ವನ್ನೇ ಹೆಚ್ಚು ಬಳಸುತ್ತಾರೆ. ಕೆಲವೊಂದು ಪ್ರದೇಶಗಳಲ್ಲಿ 'ತೆಲುಗು' ಭಾಷೆಯನ್ನು ಮಾತನಾಡುತ್ತಾರೆ.

ಅನಕ್ಷರಸ್ಥರು, ಅಜ್ಞಾನಿಗಳು ಹಾಗೂ ಬುಡಕಟ್ಟು ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಮ್ಯಾಸಬೇಡರು ಮನೆಯಲ್ಲಿ ತೆಲುಗು ಭಾಷೆಯನ್ನು ಬಳಸಿದರೆ, ಹೊರಗಡೆ ಕನ್ನಡವನ್ನು ಮಾತನಾಡುತ್ತಾರೆ. ಅವರಾಡುವ ತೆಲುಗು ಭಾಷೆಯಲ್ಲಿ ಕನ್ನಡ ಪದಗಳು, ಕನ್ನಡ ಭಾಷೆಯಲ್ಲಿ ತೆಲುಗು ಪದಗಳು ಸೇರಿಕೊಂಡಿರುತ್ತವೆ. ಆದ್ದರಿಂದ ಕನ್ನಡ ಮತ್ತು ತೆಲಗು ಮಿಶ್ರಣವಾದ ಅಪಭ್ರಂಶ ಭಾಷೆಗೆ ಅವರದೇ ಆದಂತಹ ಶಬ್ದಾರ್ಥಗಳಿರುತ್ತವೆ.

ಪಿಳ್ಳಂಗೋವಿ ನುಡಿಸುವುದು, ಚಪ್ಪಾಳೆ ತಟ್ಟುವುದು, ಕೇಕೆ ಹಾಕುವುದು, ಸಿಳ್ಳು ಹೊಡೆಯುವುದು, ಕಂಬಳಿ ತೂರುವುದು ಮೊದಲಾದ ಶಾಬ್ದಿಕ ಸಂಕೇತ ಭಾಷೆಗಳು ಕಾಡುಗೊಲ್ಲ ಮತ್ತು ಮ್ಯಾಸಬೇಡರಲ್ಲಿ ಕಂಡು ಬರುತ್ತವೆ. ಮೂಲತಃ ಒಂದೇ ಬುಡಕಟ್ಟಿನ ಗುಣಲಕ್ಷಣಗಳನ್ನು ಹೊಂದಿದ ಮ್ಯಾಸಬೇಡರು, ಕಾಡುಗೊಲ್ಲರು, ಅಡವಿಚೆಂಚರು, ಕುರುಬರು ಮತ್ತು ಒಕ್ಕಲಿಗರ ಭಾಷೆ ಮತ್ತು ಸಂಸ್ಕೃತಿಯಲ್ಲಿ ಪರಸ್ಪರ ಹತ್ತಿರದ ಸಂಬಂಧಗಳಿವೆ. ಈ ಎಲ್ಲಾ ಬುಡಕಟ್ಟು ಸಮೂಹಗಳು ಬೇಟೆ, ಪಶುಪಾಲನೆ ಮತ್ತು ಕೃಷಿ ಒಟ್ಟಿಗೆ ಮಾಡಿದ ಹೆಗ್ಗುರುತುಗಳನ್ನು ಅವರಾಡುವ 'ಭಾಷೆ'ಯ ಮೂಲಕ ಗುರುತಿಸಬಹುದು. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಮೂಲತಃ ಒಂದೇ ಎಂದು ಹೇಳುತ್ತಿದ್ದರೂ, ಮ್ಯಾಸಬೇಡರ ಮಾತೃಭಾಷೆ 'ತೆಲುಗು', ಕಾಡುಗೊಲ್ಲರ ಮಾತೃಭಾಷೆ 'ಕನ್ನಡ'ವಾಗಿರುವುದರಿಂದ; ಈ ಎರಡು ಬುಡಕಟ್ಟುಗಳ 'ಭಾಷೆ' ವಿಚಾರವಾಗಿ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಅತ್ಯವಶ್ಯಕವಾಗಿದೆ. ಜೊತೆಗೆ ಸಂಶೋಧಕರು ಈ ಪ್ರದೇಶದ ಮ್ಯಾಸಬೇಡ ಮತ್ತು ಕಾಡುಗೊಲ್ಲರ "ಭಾಷೆ" ವಿಷಯವಾಗಿಯೇ ಪಿಎಚ್.ಡಿ. ಅಧ್ಯಯನ ಕೈಗೊಳ್ಳಬಹುದು. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ಸಂಸ್ಕೃತಿ, ಸಂಪ್ರದಾಯ, ನಂಬಿಕೆಗಳು, ಆಚರಣೆ, ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಕಲೆ ಸಾಹಿತ್ಯ ಮೊದಲಾದ ವಿಷಯಗಳಲ್ಲಿ ಪರಸ್ಪರ ಸಾಮ್ಯತೆಯನ್ನು ಕಾಣಬಹುದಾಗಿದೆ. ಆದರೆ ಪ್ರಸ್ತುತ ಈ ಎರಡು ಬುಡಕಟ್ಟುಗಳ ಸಂಸ್ಕೃತಿಯ ಮೇಲೆ ಇತರ ಜಾತಿ, ಜನಾಂಗಗಳ ಪ್ರಭಾವದಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲರ 'ಭಾಷೆ'ಗಳಲ್ಲಿಯೂ ಕೂಡ ನಾಗರೀಕತೆ ಮತ್ತು ನಗರೀಕರಣದ ಅಂಶಗಳು ಕಂಡು ಬರುತ್ತವೆ.

೮.೧. ಭಾಷೆಗಳ ವರ್ಗೀಕರಣ



೬.೨. ಅಪಭ್ರಂಶ ಶಬ್ದಗಳು

ಕ್ರಮ ಸಂಖ್ಯೆ	ಕರ್ನಾಟಕದ ಕನ್ನಡ ಭಾಷೆ	ಆಂಧ್ರಪ್ರದೇಶದ ತೆಲುಗು ಭಾಷೆ	ಮ್ಯಾಸಬೇಡರ ಭಾಷೆ	ಕಾಡುಗೊಲ್ಲರ ಭಾಷೆ
೦೧	ಇಲ್ಲಾ	ಲೇದು	ನೇದು	ಇಲ್ಲಾ
೦೨.	ಎಲ್ಲರು	ಅಂದರು	ಎಲ್ಲ್‌ರು	ಎಲ್ಲರು
೦೩.	ಕಾಗೆ	ಕಾಕಿ	ಕಾಕೆ	ಕಾಗೆ
೦೪.	ಗಂಡ-ಹೆಂಡತಿ	ಆಲು-ಮೊಗಲು	ಆಲು-ಮೊಗಡು	ಗಂಡ-ಹೆಂಡ್ತಿ
೦೫.	ಚೆಂಡುಹೂವು	ಚೆಂಡುಪೂಲು	ಚಂಡುಪೂಲು	ಚೆಂಡುಹೂವು
೦೬.	ತೆಗೆದುಕೊಂಡು ಬಾ	ತೀಸುಕೊನಿರಾ	ತೀಸ್‌ಕೆನಿದಾ	ತಗ್ಗೊಂಡು ಬಾ
೦೭.	ದುಡ್ಡು	ಡಬ್ಬು	ದುಡ್ಲು	ದುಡ್ಡು
೦೮.	ದೇವರು	ದೇವುಡು	ದ್ಯಾವರ	ದೇವರು
೦೯.	ನೀರು	ನೀಳ್ಳು	ನೀಡ್ಲು	ನೀರು
೧೦.	ಬಾ	ರಾ	ದಮ್ಮಲೇ (ದಾ)	ಬಾ
೧೧.	ಬಾಳೆಹಣ್ಣು	ಅರಟಿಪೊಂಡ್ಲು	ಬಾಳೆಪೊಂಡ್ಲು	ಬಾಳೆಹಣ್ಣು
೧೨.	ಬೆಳ್ಳುಳ್ಳಿ	ಎಲ್ಲಿಪಾಯಿಲು	ಬೆಳ್ಳಗಡ್ಲು	ಬೆಳ್ಳುಳ್ಳಿ
೧೩.	ಮುದ್ದೆ	ಸಂಗಟಿ	ಮುದ್ದ	ಮುದ್ದೆ
೧೪.	ಯಾವಾಗ	ಎಪ್ಪುಡು	ಯವುಡು	ಯಾವಾಗ
೧೫.	ಹೊರಡು	ಎಲ್ಲೂ	ಎಡ್ಲೂ	ಹೊಲ್ಲು

ಆ. ಜನಪದ ಸಾಹಿತ್ಯ

ಯಾವುದೇ ದೇಶದ ಸಾಮೂಹಿಕವಾಗಿ ಸೃಷ್ಟಿಯಾದ ಸಾಹಿತ್ಯದಲ್ಲಿ ಎರಡು ಬಗೆಗಳಿವೆ. ಒಂದು ವಿದ್ಯಾವಂತರಿಂದ ರಚಿತವಾದ ಶಿಷ್ಟಸಾಹಿತ್ಯ. ಇನ್ನೊಂದು ಬರಹದ ಮೂಲಕ ಪ್ರಕಟವಾಗದ ಅಂದರೆ ಗ್ರಂಥಸ್ಥ ವಲ್ಲದ, ಕಲಿಯದವರಿಂದ ನಿರ್ಮಿತವಾದ, ಬಾಯಿಯಿಂದ ಬಾಯಿಗೆ ಹರಿದು ಬಂದ ಜಾನಪದ ಸಾಹಿತ್ಯ. ಈ ಸಾಹಿತ್ಯ ಗ್ರಾಮೀಣರ, ಕೃಷಿಕರ, ಕೂಲಿ-ಕಾರ್ಮಿಕರ, ದಿನ ದಿನದ ಬದುಕಿನ ನಿರ್ವಹಣೆಯಲ್ಲಿ ಮೂಡಿದ ಸಹಜ ಸಾಹಿತ್ಯ. ಅವರ ಬದುಕೇ ಹಾಡಾಗಿ ನಿಂತ ಸಹಜತೆ ಅಲ್ಲಿರುತ್ತದೆ. ಯಾವುದೇ ಭಾಷೆಯಲ್ಲಿ ಶಿಷ್ಟಪದ ಸಾಹಿತ್ಯಕ್ಕಿಂತ ಮೊದಲು ಈ ಜಾನಪದ ಸಾಹಿತ್ಯ ನಿರ್ಮಾಣ ಆಗಿರುತ್ತದೆ. ಆದ್ದರಿಂದ ವಿದ್ವಾಂಸರು ಈ ಸಾಹಿತ್ಯವನ್ನು "ಜನವಾಣಿ ಬೇರು, ಕವಿವಾಣಿ ಹೂವು" ಎಂದು ಕರೆದರು.

ಕನ್ನಡದ ಜನಪದರು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದು ಹೆಸರಾದವರು. ಅವರು ತಮ್ಮ ಬಾಳಿನ ಬಗೆ ಬಗೆಯ ಅನುಭವಗಳನ್ನು ಅನೇಕ ರೀತಿಯಿಂದ ವ್ಯಕ್ತ ಮಾಡಿದರು. ಅವು ಜಾನಪದ ಗೀತೆ, ಕಥೆ, ಗಾದೆ, ಒಗಟು, ಒಡಪು, ನುಡಿಗಟ್ಟು, ಲಾವಣಿ, ಬಯಲಾಟ ಭಜನೆ ಮೊದಲಾದ ಜನಪದ ಸಾಹಿತ್ಯದ ರೂಪದಲ್ಲಿ - ಹೀಗೆ ಅವರ ವಿಭಿನ್ನ ಅನುಭವ, ವಿಸ್ತಾರವಾಗಿ ಮೂಡಿ ಬಂದಿತು. ಒಟ್ಟಾರೆ ತನ್ನ ಸಹಜತೆ ಮತ್ತು

ಸರಳತೆಯಿಂದಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗ ಆಡಿದ ಮಾತೆಲ್ಲ ಸಾಹಿತ್ಯವೇ ಆಗಿ ಮೂಡಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ತಮ್ಮದೇ ಆದ ಜನಪದ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾರೆ. ಈ ಎರಡೂ ಜನಾಂಗದ ಜನಪದ ಸಾಹಿತ್ಯವು ಹಲವಾರು ಶಾಖೆಗಳಲ್ಲಿ ಹರಡಿಕೊಂಡಿದೆ. ಅವುಗಳಲ್ಲಿ ಅತ್ಯಂತ ಮುಖ್ಯವಾದ ಹಾಡುಗಳು, ಕಥೆಗಳು, ಗಾದೆಗಳು, ಒಗಟುಗಳು, ಒಡಪುಗಳು, ನುಡಿಗಟ್ಟುಗಳು ಮತ್ತು ಲಾವಣಿಗಳನ್ನು ವಿವರವಾಗಿ ಅಧ್ಯಯನ ಮಾಡಲಾಗಿದೆ.

೧. ಹಾಡುಗಳು

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ, ಜನಪದ ಹಾಡುಗಳು ಅಥವಾ ಗೀತೆಗಳು ಸಮೃದ್ಧಿಯಾಗಿ ದೊರೆಯುತ್ತವೆ. ಬೇಟೆ, ಪಶುಪಾಲನೆ, ಕೃಷಿ ಮತ್ತು ಯೋಧ ವೃತ್ತಿಯಲ್ಲಿ ತೊಡಗಿದ್ದ ಮ್ಯಾಸಬೇಡರಗಿಂತ; ಕಾಡುಗೊಲ್ಲರ ಹಟ್ಟಿಗಳಲ್ಲಿ ಜನಪದ ಹಾಡುಗಳು ಸಾಕಷ್ಟಿವೆ. ಪಶು ಮತ್ತು ಮೇಷ ಮಂದೆಗಳ ಹಿಂದೆಯೇ ಜೀವನ ಪರ್ಯಂತರ ಕಾಲ ಕಳೆಯುವ ಕಾಡುಗೊಲ್ಲರ ಗಂಡಸರು ಮತ್ತು ಹೆಂಗಸರು ವೈವಿಧ್ಯಮಯವಾದ ಕಾವ್ಯಗಳನ್ನು ತುಂಬ ಸೊಗಸಾಗಿ ಹಾಡುತ್ತಾರೆ. ನಾಟಕ, ಕೋಲಾಟ, ಭಜನೆ, ಲಾವಣಿ, ಕಥನಗೀತೆ ಮತ್ತು ಗಣೆಪದ-ಮೊದಲಾದವುಗಳನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರ ಗಂಡಸರು ಹಾಡಿದರೆ; ನಾಮಕರಣ, ಋತುಮತಿ, ಮದುವೆ, ಸೋಬಾನ, ದೇವರು-ಮೊದಲಾದ ಹಾಡುಗಳನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹೆಂಗಸರು ಹಾಡುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರ ಯಾವುದೇ 'ಹಟ್ಟಿ'ಗಳಿಗೆ ಹೋದರೂ ಅಲ್ಲಿ ಕನಿಷ್ಟ ಪಕ್ಷ ಒಬ್ಬನಾದರೂ ಅಥವಾ ಒಬ್ಬಳಾದರೂ; ಹಾಡು ಅಥವಾ ಕಥೆ ಹೇಳುವವರು ಸಿಗುತ್ತಾರೆ.

ಮ್ಯಾಸಬೇಡ ಬುಡಕಟ್ಟು ಸಮುದಾಯದ ಗಾದರಿಪಾಲನಾಯಕ ಮತ್ತು ಜಗಳೂರು ಪಾಪನಾಯಕ ಇಬ್ಬರು ಸಾಂಸ್ಕೃತಿಕ ವೀರರನ್ನು ಕುರಿತು ಅವರ ಹುಟ್ಟು, ಬೆಳವಣಿಗೆ, ಪಶುಪಾಲನೆ, ಬೇಟೆ, ಹೋರಾಟ ಮೊದಲಾದ ಕಥನ ಗೀತೆಗಳನ್ನು ಹಾಡುತ್ತಾರೆ. ಅದೇ ರೀತಿ ಅಹೋಬಲ ನರಸಿಂಹಸ್ವಾಮಿ, ಕಂಪಳರಂಗಸ್ವಾಮಿ, ಬೊಮ್ಮಲಿಂಗೇಶ್ವರ, ನಾಯಕನಹಟ್ಟಿ ತಿಪ್ಪೇಸ್ವಾಮಿ, ದೊಡ್ಡ ಮಾರಮ್ಮ, ದಡ್ಡಿಸೂರನಾಯಕ, ಗೌರಸಮುದ್ರ ಮಾರಮ್ಮ ಮೊದಲಾದ ದೇವರ ಕುರಿತಂಥ ಧಾರ್ಮಿಕ ಹಾಡುಗಳು ಸಾಕಷ್ಟು ದೊರೆಯುತ್ತವೆ. ಕಾಡುಗೊಲ್ಲರ ಜುಂಜಪ್ಪ, ಎತ್ತಪ್ಪ, ಚಿತ್ರದೇವರು, ಗಟ್ಟಪ್ಪ, ತಿಮ್ಮಪ್ಪ, ಚಿಕ್ಕಣ್ಣ, ಕದರಿನರಸಿಂಹ, ಹಾಲುಕುಡಿದಪ್ಪ, ಈರಾವಳೇಶ್ವರ, ಕಾಟಮ್ಮದೇವರು, ಕೇತೇದೇವರು, ಪಾತೇದೇವರು, ರಾಮಲಿಂಗೇಶ್ವರ, ಭೂತಪ್ಪ, ಬೇವಿನಹಳ್ಳಿ ಕರಿಯಮ್ಮ, ಕರಿಓಬೇನಹಳ್ಳಿ ಮಾರಮ್ಮ, ಯರಬಳ್ಳಿ ಮಾರಕ್ಕ-ಮೊದಲಾದ ದೇವತೆಗಳ ಕುರಿತಂಥ ಧಾರ್ಮಿಕ ಹಾಡುಗಳೂ ಸಾಕಷ್ಟಿವೆ. ಕಾಡುಗೊಲ್ಲರಲ್ಲಿ ಜುಂಜಪ್ಪ ಮೇಲಿನ ಕಾವ್ಯಗಳಂತೂ ಚಿತ್ರದುರ್ಗ ಜಿಲ್ಲೆಯಲ್ಲಿ ಹೇರಳವಾಗಿ ದೊರೆಯುತ್ತವೆ. ಆತನ ಹುಟ್ಟು, ಬಾಲ್ಯ, ಪಶುಪಾಲನೆ, ಸಾಹಸ, ಪವಾಡ ಮತ್ತು ಸೋದರ ಮಾವಗಳಿಂದ ಅನುಭವಿಸಿದ ಸಂಕಷ್ಟ ಮೊದಲಾದ ಕಥನ ಗೀತೆಗಳನ್ನು ಅಥವಾ ಪುರಾಣಗಳನ್ನು ಗಣೆ ಊದುತ್ತ ಗಂಡಸರು ಮಾತ್ರ ಹಾಡುತ್ತಾರೆ. ಹೆಂಗಸರು ಕೂಡ ಎಲ್ಲಾ ದೇವರಗಳ ಹಾಡಿನಂತೆಯೇ ಜುಂಜಪ್ಪನ ಹಾಡುಗಳನ್ನು ಹಾಡುತ್ತಾರೆ.

ಆದರೆ ಈ ಎರಡೂ ಬುಡಕಟ್ಟು ಜನಾಂಗದ ಜನಪದ ಹಾಡುಗಳಲ್ಲಿ ಪರಸ್ಪರ ಏಕಸಾಮ್ಯತೆ ಕಂಡು ಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ, ಕ್ಷೇತ್ರಕಾರ್ಯ ಕೈಗೊಂಡು ಜನಪದ ಹಾಡುಗಳನ್ನು

ಸಂಗ್ರಹಿಸಿದ್ದರೂ ಕೆಲವೊಂದು ಧಾಟಿಗಳು, ಸ್ಥಳನಾಮಗಳು ಮತ್ತು ದೇವರ ಹೆಸರುಗಳು ಮಾತ್ರ ಬದಲಾವಣೆಯಾಗುತ್ತವೆ. ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ, ಸಾಣೀಕೆರೆ ಮೊದಲಾದ ಪ್ರದೇಶಗಳಲ್ಲಿ ದೇವರು, ಉತ್ಸವ, ಮದುವೆ, ಮಂಗಳ ಕಾರ್ಯಗಳಲ್ಲಿ ಕಾಡುಗೊಲ್ಲರ ಮತ್ತು ಮ್ಯಾಸಬೇಡರ ಜನಪದ ಹಾಡುಗಾರ್ತಿಯರು ಜೊತೆಜೊತೆಯಾಗಿಯೇ ಹಾಡುತ್ತಿರುವ ಸನ್ನಿವೇಶ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡು ಬಂದಿದೆ.

೨. ಕಥೆಗಳು

ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಕಥೆಗಳಿಗೆ ವಿಶಿಷ್ಟ ಸ್ಥಾನವಿದೆ. ಈ ಕಥೆಗಳ ಮೂಲಕವೇ ಒಂದು ಜನಾಂಗದ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಜನಪದ ಕಥೆಗಳಲ್ಲಿ ಬುಡಕಟ್ಟು ಜನಾಂಗದ ಉಗಮ, ವಿಕಾಸ, ಬೆಳವಣಿಗೆ, ಸಂಪ್ರದಾಯ, ನಂಬಿಕೆ, ಆಚರಣೆ ಮತ್ತು ವೃತ್ತಿಗಳಿಗೆ ಸಂಬಂಧಿಸಿದ ಐತಿಹ್ಯಗಳು ತಿಳಿದು ಬರುತ್ತವೆ. ಕೆಲವೊಂದು ಕಥೆಗಳಲ್ಲಿ ನೀತಿ, ತತ್ವ, ಪ್ರಾಮಾಣಿಕತೆ, ಭಕ್ತಿ ಮೊದಲಾದ ಅಂಶಗಳನ್ನು ಗುರುತಿಸಬಹುದು.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಲ್ಲಿ ಕಥೆಗಳು ಹೇರಳವಾಗಿ ದೊರೆಯುತ್ತವೆ. ಕೆಲವೊಂದು ಹಟ್ಟಿಗಳಲ್ಲಿ ಹತ್ತಾರು ಜನ ಕಥೆ ಹೇಳುವ ವ್ಯಕ್ತಿಗಳು ಸಿಗುತ್ತಾರೆ. ಈ ಕಥೆಗಳ ಮೂಲಕವೇ ಅವರ ಸಾಮಾಜಿಕ ಜೀವನ ಪದ್ಧತಿ, ಜನಾಂಗದ ಮೂಲ ಪುರಷನ ಉದಯ ಮೊದಲಾದ ಅಂಶಗಳು ಕಂಡು ಬರುತ್ತವೆ. ಮ್ಯಾಸಬೇಡರಿಗೆ ಸಂಬಂಧಿಸಿದ ಕಥೆಗಳಲ್ಲಿ ಜನಾಂಗದ ಮೂಲ ಪುರುಷ ಹುಟ್ಟಿದ್ದು, ಚೆಂಚುಲಕ್ಷ್ಮೀ ನರಸಿಂಹನನ್ನು ಮದುವೆಯಾಗಿದ್ದು, ಕುಲ ಬೆಡಗುಗಳು ಹುಟ್ಟಿ ಕೊಂಡಿದ್ದು, ಎಳೆ ಕರುವಿನ ಕಾಲು ಮುರಿದು ತಿಂದು ಬ್ಯಾಡನಾಗಿದ್ದು, ಹನ್ನೆರೆಡು ಪೆಟ್ಟಿಗೆ ದೇವರುಗಳು ಬಂದಿದ್ದು, ಕಟ್ಟೆಮನೆಗಳ ಸ್ಥಾಪನೆ, ಆಹಾರ ಪದ್ಧತಿಯಲ್ಲಿ ವಿಧಿ ನಿಷೇಧ, ಬೇಟೆ ಮತ್ತು ಬೇಡರು, ಬೇಡರು ಮತ್ತು ಮುಸಲ್ಮಾನರು, ಬೇಡರು ಮತ್ತು ಗೊಲ್ಲರು, ಬೇಡರು ಮತ್ತು ಮಾದಿಗರು, ಕೆರೆಕಟ್ಟಿ ದೇವಸ್ಥಾನಗಳ ನಿರ್ಮಾಣ, ಪಾಳೆಪಟ್ಟುಗಳನ್ನು ಕಟ್ಟಿದ್ದು ಮೊದಲಾದ ಕಥೆಗಳ ಜೊತೆಗೆ ಆದಿಕವಿ ವಾಲ್ಮೀಕಿ, ಮಾತೃ ಹೃದಯದ ಶಬರಿ, ಧರ್ಮವ್ಯಾಧ, ಗುರುಭಕ್ತಿ ದುರಂಧರ ಏಕಲವ್ಯ, ನಿಜಭಕ್ತ ಬೇಡರ ಕಣ್ಣಪ್ಪ, ಗಾದರಿ ಪಾಲನಾಯಕ, ಜಗಲೂರು ಪಾಪನಾಯಕ, ಗೌರಸಂದ್ರ ಮಾರಕ್ಕ, ಅಡ್ನಟ್ಟಿ ಭೂತಪ್ಪ, ನಾಯಕನಹಟ್ಟಿ ತಿಪ್ಪೇಸ್ವಾಮಿಯ ಪವಾಡಗಳು ಮೊದಲಾದ ಕಥೆಗಳು ಮ್ಯಾಸಬೇಡರಲ್ಲಿ ಕಂಡು ಬರುತ್ತವೆ.

ಕಾಡುಗೊಲ್ಲರಿಗೆ ಸಂಬಂಧಿಸಿದ ಕಥೆಗಳಲ್ಲಿ ಹಾಸ್ಯಕಥೆಗಳು ಪ್ರಾಣಿ ಮತ್ತು ಪಕ್ಷಿ ಕಥೆಗಳು, ಬೆಡಗು, ದೇವರು, ಕಟ್ಟೆಮನೆಗಳಿಗೆ ಸಂಬಂಧಿಸಿದ ಸಾವಿರಾರು ಪುಟಗಳಷ್ಟು ಉತ್ತಮ ಕಥೆಗಳನ್ನು ಗೊಲ್ಲರ ಹಟ್ಟಿಯಲ್ಲಿ ಸಂಗ್ರಹಿಸಬಹುದು. ಅವರ ಬೆಡಗುಗಳಲ್ಲಿ ಕಂಡು ಬರುವ ಕರಡಿಗೊಲ್ಲರು, ಸೀಲುವಾಡಿಗೊಲ್ಲರು, ಮುದ್ದೇರಗೊಲ್ಲರು ಮೊದಲಾದ ಬೆಡಗುಗಳ ಬಗ್ಗೆಯೇ ಸಾಕಷ್ಟು ಕಥೆಗಳು ಲಭ್ಯವಾಗುತ್ತವೆ. ಶ್ರೀ ಕೃಷ್ಣನ ಬಾಲಲೀಲೆಗಳು ಮತ್ತು ಗೋಕುಲಕ್ಕೆ ಆತನ ಕೊಡುಗೆ, ಜುಂಜಪ್ಪನ ಕಥೆಯಲ್ಲಿ ಆತನ ಮೂರು ತಲೆಮಾರಿನ ವಂಶಾವಳಿ, ಹುಟ್ಟು, ಬೆಳವಣಿಗೆ, ಸಾಹಸ, ಪವಾಡ, ಮರಣ ನಂತರ ಜುಂಜಪ್ಪ ತೋರಿದ ಮಹಿಮೆಗಳು, ಚಿತ್ರಲಿಂಗ, ಕಾಟಮ್ಮಲಿಂಗ, ಕ್ಯಾತುರುಲಿಂಗ, ಪಾತೇಲಿಂಗ ಮತ್ತು ರಾಮಲಿಂಗ ಎಂಬ ಪಂಚಲಿಂಗಗಳಿಗೆ ಸಂಬಂಧಿಸಿದ ಕಥೆಗಳು; ಎತ್ತಪ್ಪ, ಪುಲ್ಲಳ್ಳಿ ಭೂತಪ್ಪ, ಗೌರಸಂದ್ರ ಮಾರಕ್ಕ, ಯರಬಳ್ಳಿ ಮಾರಕ್ಕ ಮೊದಲಾದ ದೈವಗಳಿಗೆ ಸಂಬಂದಿಸಿದ ಕಥೆಗಳು;

ಹುರುಳಿ ಮತ್ತು ನವಣೆ 'ಬತ'ಕ್ಕೆ ಸಂಬಂಧಿಸಿದ; ಪೂಜಾರಿ, ದಾಸಯ್ಯ ಮತ್ತು ಹಟ್ಟಿಗೌಡರ ಕಥೆಗಳು ಕಂಡು ಬರುತ್ತವೆ. ಈ ಎರಡೂ ಬುಡಕಟ್ಟುಗಳಲ್ಲಿ 'ದಾಸಯ್ಯ'ನ ಕಥೆಗಳಂತೂ ತುಂಬ ಹಾಸ್ಯಭರಿತವಾಗಿರುತ್ತವೆ. ಪ್ರಸ್ತುತ ಎರಡೂ ಜನಾಂಗದ ಹಟ್ಟಿಗಳಲ್ಲಿ ಕಥೆ ಹೇಳುವ ಮತ್ತು ಕೇಳುವ ಪ್ರವೃತ್ತಿ ಕಡಿಮೆಯಾಗುತ್ತಿದೆ.

೩. ಗಾದೆಗಳು

ಕನ್ನಡದಲ್ಲಿ 'ಗಾದೆ' ಪದಕ್ಕೆ ಸಂವಾದಿಯಾಗಿ ನಾಣ್ನುಡಿ ಎಂಬ ಪದವು ಪ್ರಚಲಿತವಿದೆ. ಗಾದೆ ಸಂಸ್ಕೃತದ 'ಗಾಥಾ' ಪದದಿಂದ ಬಂದಿದೆ. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗಾದೆ ಅತ್ಯಂತ ಪ್ರಾಚೀನವಾದ ಪ್ರಕಾರ. ಇದ್ದುದನ್ನು ಇದ್ದಂತೆ ಹೇಳುವ ಬಿಚ್ಚುಗತ್ತಿಯಂತಿರುವ ಗಾದೆಗಳನ್ನು ಸಮಕಾಲೀನ ಜಾನಪದ ವಿಮರ್ಶೆ ಎಂದು ಕರೆಯಬಹುದು. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಯೇ ಅದರ ಸ್ವರೂಪವನ್ನು ತಿಳಿಸುತ್ತದೆ. 'ಗಾದೆ ವೇದಕ್ಕೆ ಸಮಾನ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆಗಳೇ ಗಾದೆಗಳ ಮಹತ್ವವನ್ನು ತಿಳಿಸುತ್ತವೆ. ಗಾದೆಗಳಿಲ್ಲದ ದೇಶ ಜನಾಂಗ ಇಲ್ಲವೆಂದೇ ಹೇಳಬಹುದು. ಗಾದೆ ಅನುಭವದ ಹರಳು ಜೀವನದಲ್ಲಿ ಅನುಭವಿಸಿದ ಅನುಭವಗಳನ್ನು ಬೇರೆಯವರಿಗೆ ತಿಳಿಸುವಾಗ ವಿಷಯಕ್ಕೆ ಮಹತ್ವ ಬರಲು ಗಾದೆಗಳನ್ನು ಬಳಸುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮೂಹಗಳು ಗಾದೆಗಳನ್ನು ಸಮಯ ಸಂದರ್ಭಗಳಿಗನುಗುಣವಾಗಿ ಬಳಸುತ್ತಾರೆ. ದಿನ ನಿತ್ಯದ ಅವರ ಬದುಕಿನಲ್ಲಿ ಗಾದೆಗಳು ಊಟಕ್ಕೆ ಉಪ್ಪಿನಕಾಯಿಯಂತೆ ಮಾತಿನ ಸನ್ನಿವೇಶದಲ್ಲಿ ಸರಳವಾಗಿ ತೂರಿ ಬರುತ್ತವೆ. ಈ ಎರಡೂ ಬುಡಕಟ್ಟು ಜನಾಂಗದ ದೇವರು, ಧರ್ಮ, ಹುಟ್ಟು, ಸಾವು, ಮಳೆ, ಬೆಳೆ,ಬದುಕು, ದನಕರು, ಕುಲ, ವೃತ್ತಿ, ಸಂಪ್ರದಾಯ, ನಂಬಿಕೆ, ಆಚರಣೆ ಮೊದಲಾದ ಸಂಘ, ಸಂಸ್ಥೆಗಳಲ್ಲಿ ಗಾದೆಗಳನ್ನು ಕಾಣಬಹುದು. ತಮ್ಮ ಬದುಕಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಿಗೆ ಗಾದೆ ಮಾತು ಜೋಡಿಸುತ್ತಾರೆ.

'ಅಗ್ಗದ ಚಪ್ಪಲಿ ಕಾಲಿಗೆ ಮೂಲ' ಎನ್ನುವಲ್ಲಿ ಕ್ಷುಲಕ ಮನುಷ್ಯರ ಸಹವಾಸದಿಂದ ತನಗೆ ಕೇಡು ಎಂಬ ಅರ್ಥವಿದೆ. 'ಬೇಡ ಕಳ್ಳ ಮಾದಿಗ ಸುಳ್ಳ', 'ಗೊಲ್ಲಗೆಣೆಯಲ್ಲ ತುರುಕ ದಾಸನಲ್ಲ', 'ಗೊಲ್ಲ ಮಾಯದಂಥ ಮಾಯವಿಲ್ಲ ನೆಗ್ಗಲಿ ಮುಳ್ಳಂಥ ಮುಳ್ಳಿಲ್ಲ', 'ಬೆಲ್ಲದ ಹಂಗಿದ್ದರೂ ಬೇಡನನ್ನು ನಂಬಬೇಡ', 'ಜಾಲಿ ಸಾಕಿದರೆ ಕಾಲಿಗೆ ಮೂಲ ಬೇಡನನ್ನು ಸಾಕಿದರೆ ಜೀವಕ್ಕೆ ಮೂಲ', 'ಮಾತ್ಗಿತ್ತಿ ಮಗಳಲ್ಲ ತಾಟಗಿತ್ತಿ ಸೊಸೆಯಲ್ಲ', 'ಸೊಸೆ ಸತ್ರೆ ಸೋಬಾನ ಮಗ ಸತ್ರೆ ಮನೆಹಾಳು', 'ಹೆಣ್ಣು ಹೆಚ್ಚಿದ ಮನೆಹಾಳು', 'ಏಡಿ ಹೆಚ್ಚಿದ ಕೆರೆಹಾಳು', 'ಹೆಣ್ಣಿಗೆ ಓಡಿತ ಹಿಟ್ಟಿಗೆ ಜಡಿತ', 'ಹೊಲೆಯರ ಮಾತು ಕೇಳಿ ದೇವರ್ನ ಹೊರಗಿಟ್ಟಂಗೆ' ಎಂಬ ಗಾದೆಗಳು ಆಯಾಯ ಜಾತಿಯ ಜನರ ಗುಣಲಕ್ಷಣಗಳನ್ನು ತಿಳಿಸುತ್ತವೆ. 'ಕೆಲಸಕ್ಕೆ ಕರಿಬ್ಯಾಡ್ರಿ ಊಟಕ್ಕೆ ಮರಿಬ್ಯಾಡ್ರಿ', 'ಕೂತು ಉಣ್ಣಾವಗೆ ಕುಡಿಕೆ ಹೊನ್ನು ಸಾಲ್ದು', 'ಹಚ್ಚಗಿದ್ದ ಕಡೆ ಉಂಡ ಬೆಚ್ಚಗಿದ್ದ ಕಡೆ ಮಲಗಿದ', 'ಮಲಗಿ ಮಗ ಕೆಟ್ಟ ತಿರುಗಿ ಸೊಸೆ ಕೆಟ್ಟಳು', 'ಏಳುಲಾರದವನಿಗೆ ಏಳು ಜನ ಹೆಂಡ್ತೀರು', 'ಗಬ್ಬನಾರವನಿಗೆ ಇಬ್ಬರು ಹೆಂಡ್ರು' ಎಂಬ ಗಾದೆ ಮಾತುಗಳು ಆಲಸ್ಯದಿಂದ ಮನುಷ್ಯ ಹಾಳಾಗುವನೆಂದು ದುಡಿಯದೆ ಕೂತು ತಿಂದರೆ ಬಹಳ ದಿನ ಸಾಗಲಾರದೆಂದೂ ಅದಕ್ಕಾಗಿ ಮನುಷ್ಯ ಕಾಯಕ ಜೀವಿಯಾಗಿರಬೇಕೆಂದು ಎಚ್ಚರಿಸಿದ್ದಾವೆ. 'ಅಸಲಿಲ್ಲದೆ ಬಡ್ಡಿಯಿಲ್ಲ ಮಳೆಯಿಲ್ಲದೆ ಬೆಳೆಯಿಲ್ಲ', 'ಮಳೆ ಬಿದ್ರೆ ಸೊಬಗು ಇಲ್ಲದಿದ್ರೆ ಕೊರಗು', 'ಸ್ವಾತಿ ಮಳೆ ಹೇತೇನು ಅಂದ್ರ ಬಿಡ್ತು', 'ಆರಿದ್ರ ಮಳೆಗೆ ಆದ್ದೂರಿ ಬೆಳೆಯಂತೆ', 'ಹದ ನೋಡಿ ಹರಗು ಬೆದ ನೋಡಿ ಬಿತ್ತು', 'ಕೋಟಿ

ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು', 'ಸ್ವಾತಿ ಮಳೆಯಲ್ಲಿ ಕಾಸಿಗೊಂದು ಕುರಿ' ಎನ್ನುವಲ್ಲಿ ಮಳೆ, ಬೆಳೆ, ಕಷ್ಟ, ಸುಖ ಮತ್ತು ರೈತನ ಕರ್ತವ್ಯವನ್ನು ಎಚ್ಚರಿಸುತ್ತವೆ. 'ಬಣವಿಗೆ ಬೆಂಕಿ ಹತ್ತಿದಾಗ ಬಾವಿ ತೋಡಿದ' ಎನ್ನುವಲ್ಲಿ ಯೋಜನೆ ಹಾಕಿಕೊಳ್ಳದ ಮನಷ್ಯ ಹೊತ್ತು ಬಂದಾಗಲೇ ಕಾರ್ಯಕ್ಕೆ ಕೈಹಾಕಿದರೆ ಅಲ್ಲಿ ಫಲಸಿಗುವುದಿಲ್ಲ ಎಂಬ ಅನುಭವದ ಮಾತಿನ ಅರ್ಥವಿದೆ. 'ಎತ್ತು ಏರಿಗೆ ಕ್ವಾಣ ಕೆರಿಗೆ' ಎಂಬ ಗಾದೆ ಗಂಡ ಹೆಂಡತಿಯರಲ್ಲಿ ಹೊಂದಾಣಿಕೆ ಇಲ್ಲದಿದ್ದರೆ ಸಂಸಾರ ನಡೆಯುವುದಿಲ್ಲ ಎಂಬ ಸತ್ಯಾಂಶವನ್ನು ತಿಳಿಸುತ್ತದೆ. 'ಹನಿಹನಿ ಕೂಡಿದರೆ ಹಳ್ಳ' ಎನ್ನುವಲ್ಲಿ ಒಗ್ಗಟ್ಟು ಮತ್ತು ಐಕ್ಯತೆಯಿಂದ ಗುರಿ ಮುಟ್ಟಲು ಸಾಧ್ಯವೆಂಬುದನ್ನು ತಿಳಿಸುತ್ತದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎನ್ನುವ ಗಾದೆ ಮನುಷ್ಯನ ಶಕ್ತಿ ಸಾಮಾರ್ಥ್ಯಕ್ಕೆ ತಕ್ಕಂತೆ ಬಾಳಿ ಬದುಕುವ ಕಲೆಯನ್ನು ತೋರಿಸುತ್ತದೆ. 'ಕೂತ ಜಾಗದಲ್ಲಿ ಕುಂಡಿಗೆ ಗೆದ್ದಲು ಹಿಡಿದವು', 'ಇವರಿಗೆ ತಿಳಿಯಲ್ಲ ಇವರಿಗೆ ಬಗೆ ಹರಿಯಲ್ಲ', ಎಂಬ ಗಾದೆ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿನ್ಯಾಯ ತೀರ್ಮಾನದ ವಿವರಣೆಯನ್ನು ತಿಳಿಸುತ್ತದೆ.

'ಕುರಿ ಕೊಟ್ಟೋರಿಗೆ ಮರಿ ಕೊಡಬೇಕು', 'ಅರಮನೆ ಇದ್ದರೂ ನೆರಮನೆ ಇರಬೇಕು', 'ಜ್ಯೋತಿ ಉರಿದ ಮನೆ ನೀತಿ ಹೆಚ್ಚು', 'ಪೂಜೆಗೆ ತಕ್ಕಗಂಡ ಪುಣ್ಯಕ್ಕೆ ತಕ್ಕ ಮಕ್ಕಳು', 'ಬರಿಗೈಗಿಂತ ಹಿತ್ತಾಳೆ ಕಡಗ ಲೇಸು', 'ಉಪ್ಪು ತಿಂದವ ನೀರು ಕುಡಿಯಲೇಬೇಕು', 'ಹಾಲಿನದು ಹಾಲಿಗೆ ನೀರಿನದು ನೀರಿಗೆ', 'ಮೂರು ವರ್ಷದ ಬುದ್ದಿ ನೂರು ವರ್ಷದವರೆಗೆ', 'ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ', 'ನಡಕೊಂಡವರು ಪಡಕೊಂಡರು' ಮೊದಲಾದ ನೀತಿ, ತತ್ವ, ಪ್ರಾಮಾಣಿಕ ಅಂಶಗಳನ್ನು ಒಳಗೊಂಡ ಗಾದೆಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರ ದಿನ ನಿತ್ಯದ ಬದುಕಿನಲ್ಲಿ ಸಹಜವಾಗಿ ಮೂಡಿ ಬರುತ್ತವೆ.

'ಮೂರು ಬಿಟ್ಟೋನು ಊರಿಗೆ ದೊಡ್ಡೋನು', 'ಕುಂಬಳಕಾಯಿ ಕಳ್ಳ ಎಂದರೆ ಹೆಗಲ ಮುಟ್ಟಿ ನೋಡ್ಕೊಂಡ', 'ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು ಮುಳ್ಳು', 'ಅನ್ಯಾಯ ಮಾಡೋರಿಗೆ ಹನ್ನೆರಡು ದೇವರು', 'ಗರತಿ ಅಡುಗೆ ಚೆಂದ ಹಾದರಗಿತ್ತಿ ಮಾತು ಚೆಂದ', 'ಮಂಗನ ಕೈಲಿ ಮಾಣಿಕ್ಯ ಕೊಟ್ಟಂಗ', 'ಇಲಿ ಹೋದ್ರೆ ಹುಲಿ ಹೋಯ್ತು ಅಂದ್ರು', 'ಇದ್ದದ್ದು ಇದ್ಹಾಂಗೆ ಹೇಳಿದರೆ ಎದ್ದು ಬಂದು ಎದೆಗೊದ್ದಂಗ', 'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು' ಎಂಬ ಗಾದೆಗಳು ಧರ್ಮ-ಅಧರ್ಮ, ನೀತಿ-ಅನೀತಿ, ಸತ್ಯ-ಅಸತ್ಯದ ಮಹತ್ವವನ್ನು ತಿಳಿಸುತ್ತವೆ.

'ಅತ್ತೆಗೊಂದು ಕಾಲ ಸೊಸೆಗೊಂದು ಕಾಲ', 'ಹಗಲೆಲ್ಲ ಹಾರಾಟ ಗಂಡ ಬಂದಾಗ ಗೂರಾಟ', 'ಹುಟ್ಟುಗುಣ ಸುಟ್ಟರೂ ಹೋಗದು', 'ನಾಯಿ ಬಾಲ ಡೊಂಕು', 'ಗಂಡಗೆ ನೀಡಲ ನಾನೇ ಉಂಬಲ', 'ಮುದ್ದೆಯಂಥ ಊಟವಿಲ್ಲ, ಸಿದ್ದಪ್ಪನಂತ ದೇವರಿಲ್ಲ', 'ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ', 'ತೇರು ಮುಗಿದ ಮೇಲೆ ಪರ್ಸೆಗೇನು ಕೆಲಸ', 'ಗಟ ಇದ್ದರೆ ಮಠ ಕಟ್ಟಬಹುದು', 'ಅಟ್ಟ ಮೇಲೆ ಒಲೆ ಉರಿಯಿತು ಕೆಟ್ಟ ಮೇಲೆ ಬುದ್ದಿ ಬಂತು', 'ಗಾಳಿ ಬಂದಾಗ ತೂರಿಕೋ', 'ತುಂಬಿದ ಕೊಡ ತುಳುಕುವುದಿಲ್ಲ', 'ಬೆಳ್ಳಗಿರುವುದೆಲ್ಲಾ ಹಾಲಲ್ಲ', 'ಹೊತ್ತು ಬಂದತ್ತ ಕೊಡೆ ಹಿಡಿ', 'ಕಣ್ಣು ಅರಿಯದಿದ್ದರೂ ಕರಳು ಅರಿಯದೆ', 'ವರ ಕೊಟ್ಟ ದೇವರಿಗೆ ಶಿರ ಕೊಡೋದು ದೊಡ್ಡದೇ', 'ಹುಚ್ಚೆ ಮಳೆಗೆ ಗುಬ್ಬಿ ತಲೆಯೂ ನೆನೆಯದು', 'ಊರಿಗೆ ಬಂದವಳು ನೀರಿಗೆ ಬರಲ್ವೆ, 'ಎದ್ಹೋಗೋ ಮಾತು ಬಿದ್ಹೋಗ್ಲಿ' 'ಬೀಸೋ ದೊಣ್ಣೆ ತಪ್ಪಿಸ್ಕೊಂಡ್ರೆ ಸಾವಿರ ವರ್ಷ ಆಯುಸ್ಸು', 'ಅನ್ನ ಹಾಕಿದ ಮನೆ ಕೆಡಲ್ಲ ಗೊಬ್ಬರ ಹಾಕಿದ ಹೊಲಕೆಡಲ್ಲ', 'ತಳಿ ನೋಡಿ ದನ ತತ್ತ ಸುಳಿ ನೋಡಿ

ಹೆಣ್ಣುತತ್ತ', 'ಕೊಚ್ಚೆ ಮೇಲೆ ಕಲ್ಲು ಹಾಕಿ ಮುಖಕ್ಕೆ ಸಿಡಿಸಿಕೊಂಡ ಹಾಗೆ', 'ಬಾಳೆ ಬಗೆದು ಹಾಕು ತೆಂಗು ತೇಲಿಸಿ ಹಾಕು,' 'ತಾಳಿದವನು-ಬಾಳಿಯಾನು' ಎಂಬ ಅನುಭವದ ಗಾದೆ ಮಾತುಗಳು ಈ ಎರಡೂ ಬುಡಕಟ್ಟು ಜನಾಂಗದಲ್ಲಿ ಬಳಕೆಯಲ್ಲಿವೆ.

ಈ ಮೇಲಿನ ಎಲ್ಲಾ ಗಾದೆಗಳು ಗಾದೆಗಳ ಮಹತ್ತು ಹಾಗೂ ಬೃಹತ್ತುಗಳನ್ನು ತಿಳಿಸುವ ಸಲುವಾಗಿಯೇ ಹುಟ್ಟಿಕೊಂಡವುಗಳಾಗಿವೆ. ವಚನ ಸಾಹಿತ್ಯದಲ್ಲಿ ಸರ್ವಜ್ಞನ ವಚನಗಳಿಗೆ ಹೇಗೆ ಹಿರಿದಾದ ಸ್ಥಾನವಿದೆಯೋ ಹಾಗೆಯೇ ಜನಪದ ಸಾಹಿತ್ಯದಲ್ಲಿ ಈ ಗಾದೆಗಳ ಪ್ರಕಾರವೂ ಬಹಳ ಪ್ರಮುಖವಾದವು.

೪. ಒಗಟುಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮೂಹಗಳಲ್ಲಿ ಒಗಟುಗಳು ಬಹಳ ಮಹತ್ವ ಪಡೆದುಕೊಂಡಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವಾದ ಒಗಟು ಮಾನವನ ಅನುಭವದ ಮೂಲಕ ವ್ಯಕ್ತವಾಗುತ್ತವೆ. ಜಾನಪದ ಅಧ್ಯಯನದಲ್ಲಿ ಭಾಷಿಕ ಬಗೆಯನ್ನಾಗಿ ಗುರುತಿಸಲಾಗಿರುವ ಈ ಒಗಟುಗಳು ಒಂದೇ ಸಾಲಿನಲ್ಲಿರಬಹುದು ಅಥವಾ ಹತ್ತಾರು ಸಾಲುಗಳಲ್ಲಿರಬಹುದು. ಕೊಲವೊಂದು ಸಲ ಚುಟುಕುಗಳಂತೆಯೂ ಇರುವ ಒಗಟುಗಳು ಗದ್ಯ ಪದ್ಯಗಳೆರಡು ರೂಪದಲ್ಲಿಯೂ ಕಂಡು ಬರುತ್ತವೆ. "ಸಾಮಾನ್ಯವಾಗಿ ಒಗಟುಗಳು ಬುದ್ಧಿ ಪ್ರಧಾನವಾಗಿರುತ್ತವೆ. ಅನುಭವಗಳ ಆಧಾರದ ಮೇಲಿಂದ ಹಿರಿ-ಕಿರಿಯರು ಒಗಟುಗಳನ್ನು ರೂಪಿಸಿಕೊಳ್ಳುತ್ತಾರೆ. ವಿಶಿಷ್ಟ ವಸ್ತುಗಳ ಗೌಪ್ಯವನ್ನು ಬಳಸಿಕೊಂಡು ಒಗಟು ರಚಿಸಿಕೊಳ್ಳುತ್ತಾರೆ. ಒಗಟುಗಳು ಕೇಳಿದ ತಕ್ಷಣವೇ ದಿಗ್ಭ್ರಮೆಯನ್ನುಂಟು ಮಾಡುತ್ತವೆ. ಸಮಸ್ಯೆಗಳನ್ನು ಸುಲಭವಾದ ರೀತಿಯಲ್ಲಿ ಬಿಡಿಸಲು ಬರದಂತೆ ಹೆಣೆಯಲ್ಪಟ್ಟಿರುತ್ತವೆ".[೧] ಆದ್ದರಿಂದ ಒಗಟುಗಳು ಕೇಳಿದ ತಕ್ಷಣವೇ ಬಿಡಿಸಲಾರದ ಕಗ್ಗಂಟುಗಳಾಗಿರುತ್ತವೆ, ಆದರೆ ನಿಧಾನವಾಗಿ ಯೋಚಿಸಿದಾಗ ಸಮಸ್ಯೆಗಳಿಗೆ ಉತ್ತರ ಸಿಗುತ್ತವೆ. ಆದ್ದರಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಇಂಥ ಅನೇಕ ಒಗಟುಗಳು ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ.

ಶಿವರಾತ್ರಿ ಕಳೆದು
ಶಿವ ಶಿವ ಅಂತ ಹೋತು (ಉತ್ತರ: ಚಳಿ)

ಅಂಗಡಿಯಿಂದ ತರೋದು
ಅದರ ಮುಂದೆ ಕೂತು ಅಳೋದು (ಉತ್ತರ: ಈರುಳ್ಳಿ)

ಕರಿಕಂಬ್ಳಿ ನೆಂಟ
ಅರ್ಧ ರಾತ್ರಿಲಿ ಹೊಂಟ (ಉತ್ತರ: ಇಲಿ)

ತಳ ತಾಮ್ರ ನಡುಪಚ್ಚೆ
ಕೊನೆ ಮುತ್ತು (ಉತ್ತರ: ತೊಗರಿ)

ಜಡೆಯುಂಟು ಜಂಗಮನಲ್ಲ
ಹೆಡೆಯುಂಟು ಹಾವಲ್ಲ
ಮೂರು ಕಣ್ಣುಂಟು ಮುಕ್ಕಣ್ಣನಲ್ಲ (ಉತ್ತರ: ತೆಂಗಿನ ಕಾಯಿ)

ಕಡಿದರೆ ಕಚ್ಚಾಗದು

ಹಿಡಿದರೆ ಮಡಿಕೆಯಾಗದು (ಉತ್ತರ: ನೀರು)

ಎದೆ ಮ್ಯಾಗೆ ಹಿಡ್ತ

ಹೊಕ್ಕಳು ಕೆಳಗೆ ಹೊಡ್ತ (ಉತ್ತರ: ತಪ್ಪಡೆ)

ಬಗ್ಗಿದರೆ ಬಾಯಿಗೆ ಬರತೈತಿ

ಎದ್ದರ ಎದಿಗೆ ಬಡೀತೈತಿ (ಉತ್ತರ: ತಾಳಿಸರ)

ಹಾಸಿದ ಚಾಪೆ ಮಡಿಸುವವರಿಲ್ಲ

ಚೆಲ್ಲಿದ ಹಣ ಎಣೆಸೋರಿಲ್ಲ (ಉತ್ತರ: ಆಕಾಶ, ನಕ್ಷತ್ರ)

ಹತ್ತಲಾರದ ಮರ

ಮುಡಿಯಲಾಗದ ಹೂ

ಎಲ್ಲರಿಗೂ ಬೇಕು ಇದರ ಫಲ (ಉತ್ತರ: ಮೆಣಸಿನ ಕಾಯಿ)

ಅಕ್ಕನ ಮನೆಗೆ ತಂಗಿ ಹೋಗಬಹುದು

ತಂಗಿ ಮನೆಗೆ ಅಕ್ಕ ಹೋಗೋಕಾಗಲ್ಲ (ಉತ್ತರ: ಸೇರು,ಪಾವು)

ರಾಜಗಿರಿ ಮೇಲೊಂದು ಬೀಜವಿಲ್ಲದ ಮರ

ರಾಜ ರಾಜರಿಗೆಲ್ಲ ಬೇಕು ಇದರ ಫಲ (ಉತ್ತರ: ಬಾಳೆಹಣ್ಣು)

ನನ್ನ ಕಂಡರೆ ಎಲ್ಲರೂ ಒದೀತಾರೆ (ಉತ್ತರ: ಚೆಂಡು)

ಅಕ್ಕನ ಕೈಗೆ ಪಚ್ಚೆಯ ಕಡಗ

ಹಾಕುವರುಂಟು ತೆಗೆವವರಿಲ್ಲ (ಉತ್ತರ: ಹಚ್ಚೆ)

ಹಸರು ಗಿಡದಾಗ ಮೊಸರು

ಚೆಲ್ಲೈತಿ (ಉತ್ತರ: ಮಲ್ಲಿಗೆ)

ಹೀಗೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಒಗಟುಗಳು ಹೇರಳವಾಗಿ ಕಂಡು ಬರುತ್ತವೆ. ಹಟ್ಟಿಯ ಜಾತ್ರೆ, ಉತ್ಸವ, ಹಬ್ಬ, ಹೊಲ ಗದ್ದೆಗಳಲ್ಲಿ ಕೆಲಸ ಮಾಡುವಾಗ ಮನರಂಜನೆಗಾಗಿ ಇಂಥ ಒಗಟುಗಳನ್ನು ಬಳಸುತ್ತಾರೆ. ಒಬ್ಬರು ಬಂದು ಒಗಟು ಹಾಕಿದರೆ ಇನ್ನೊಬ್ಬರು ಆ ಒಗಟನ್ನು ಬಿಡಿಸುವ ಪದ್ಧತಿ ಇರುತ್ತದೆ.

೫. ಒಡಪುಗಳು

ಜನಪದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ 'ಒಡಪು' ಕೂಡ ಒಂದು ವಿಶಿಷ್ಟಸ್ಥಾನ ಪಡೆದು ಕೊಂಡಿದೆ. ಕೆಲವೊಂದು ಸಂದರ್ಭದಲ್ಲಿ 'ಒಡಪು' ಮತ್ತು 'ಒಗಟು' ಎರಡೂ ಶಬ್ದಗಳನ್ನು ಸಮಾನಾರ್ಥದಲ್ಲಿ ಬಳಸುವುದುಂಟು. ಆದರೆ ಒಗಟು ಮತ್ತು ಒಡಪು ಶಬ್ದಗಳ ಅರ್ಥ ಮತ್ತು ಉದ್ದೇಶ ಬೇರೆ ಬೇರೆಯಾಗಿರುತ್ತವೆ. ಒಗಟುಗಳಲ್ಲಿ

ಸಮಸ್ಯೆಯನ್ನು ಬಿಡಿಸುವ ಚಮತ್ಕಾರ ಕಂಡು ಬರುತ್ತದೆ. ಆದರೆ ಒಡಪುಗಳಲ್ಲಿ ಸ್ಪಷ್ಟವಾದ ಅರ್ಥ ವಿವರಣೆ ಇರುತ್ತದೆ. ಈ ಒಡಪುಗಳು ಅವರವರ ಸ್ವಭಾವ, ಪರಿಸರ ಮತ್ತು ಕೌಟುಂಬಿಕ ಹಿನ್ನೆಲೆಯಿಂದ ಬೆಳೆದು ಬಂದಿರುತ್ತವೆ. ಋತುಮತಿ, ಮದುವೆ ಮಂಗಳ ಕಾರ್ಯಗಳಲ್ಲಿ, ಜಾತ್ರೆ ಉತ್ಸವ ಮತ್ತು ದೇವರ ಪೂಜೆಗಳಲ್ಲಿ ಆರತಿ ಮಾಡುವಾಗ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಒಡಪುಗಳನ್ನು ಬಳಸುತ್ತಾರೆ. ಮುತ್ತೈದೆಯರು ಆರತಿ ಮಾಡುವಾಗ ಒಡಪು ಕಟ್ಟಿ ಗಂಡನ ಹೆಸರು ಹೇಳಿಯೇ ಆರತಿ ಕೆಳಗಿಡುವ ಸಂಪ್ರದಾಯವಿದೆ.

ಪ್ರೀತಿ, ವಿಡಂಬನೆ ಮತ್ತು ವಿನೋದಗಳಿಂದಾಗಿ ಗಂಡ ತನ್ನ ಹೆಂಡತಿಯ ಹೆಸರನ್ನು, ಹೆಂಡತಿ ತನ್ನ ಗಂಡನ ಹೆಸರನ್ನು ಹೇಳಬೇಕಾದಾಗ ಚುಟುಕು ವರ್ಣನೆಯನ್ನು ಹೇಳಿ ಅದಕ್ಕೆ ಗಂಡ ಇಲ್ಲವೇ ಹೆಂಡತಿ ಹೆಸರನ್ನು ಸೇರಿಸಿ ಹೇಳುತ್ತಾರೆ. ಸಾಮಾನ್ಯವಾಗಿ ಹೆಂಗಸರು ಒಡಪು ಕಟ್ಟಿ ಗಂಡನ ಹೆಸರು ಹೇಳುವಾಗ ಗೌರವ ಸೂಚಕ ಅಥವಾ ಬಹುವಚನದಲ್ಲಿ ಉಚ್ಚರಿಸುತ್ತಾಳೆ. ಆದರೆ ಗಂಡಸರು ಹೆಂಡತಿ ಹೆಸರು ಹೇಳುವಾಗ ಇದ್ದ ಹೆಸರನ್ನೇ ಮೊಟಕುಗೊಳಿಸಿ ಏಕವಚನದಲ್ಲಿ ವ್ಯಂಗ್ಯವಾಗಿ ಹೇಳುತ್ತಾರೆ. ಮದುವೆ ಸಮಾರಂಭಗಳಲ್ಲಿ ನವದಂಪತಿಗಳಿಗೆ ಒಡಪು ಕಟ್ಟಿ ಹೆಸರೇಳಬೇಕೆಂದು ಒತ್ತಾಯಿಸುವುದನ್ನು ಕಾಣಬಹುದು. ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯದಲ್ಲಿ ಯಾವುದೇ ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುವಾಗ ಪ್ರೀತಿ ವಿಶ್ವಾಸದಿಂದ, ಸಲುಗೆ, ವಿಡಂಬನೆ ಮತ್ತು ವಿನೋದಗಳಿಂದಾಗಿ ಅತ್ತೆ-ಸೊಸೆ, ಗಂಡ-ಹೆಂಡತಿ, ಮಾವ-ಸೊಸೆ, ಅತ್ತಿಗೆ-ನಾದಿನಿ, ಅತ್ತೆ-ಅಳಿಯ ಮೊದಲಾದವರ ಮಧ್ಯೆ ಒಡಪು ಕಟ್ಟಿ 'ಗಂಡ' ಅಥವಾ 'ಹೆಂಡತಿ'ಯ ಹೆಸರನ್ನು ಕೇಳುವ ಪದ್ಧತಿ ಈ ಎರಡೂ ಬುಡಕಟ್ಟು ಜನಾಂಗದಲ್ಲಿ ಪ್ರಚಲಿತವಿರುವ ಸಂಗತಿ. ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಕೆಲವೊಂದು ಒಡಪುಗಳನ್ನು ಇಲ್ಲಿ ಕೊಡಲಾಗಿದೆ.

ಅಡಿಕೆ ಹಾಕಿ ಕಟುಂ ಕಡಿದು
ಲವಂಗ ಹಾಕಿ ಲೋಲು ಮಾಡಿ
ಮಂದಲಗಿರಿಯೆಂಬ ಹೋರಿ ಅತ್ಕೊಂಡು
ಅವರಕ್ಕತಂಗಿರ್ನ ಕರೆಯೋಕೆ ಹೋಗ್ತಾರೆ ನಮ್ಮ...... ಮಾವ.

ಚಿನ್ನದ ತಟ್ಟೆಯಲ್ಲಿ ಚಿತ್ರನ್ನ ಇಟ್ಟರೆ
ಸಿಟ್ ಮಾಡ್ಕೊಂಡು ಚಿತ್ರಹಳ್ಳಿಗೆ
ಹೋಗಿಬರ್ತಾರೆ ನಮ್ಮ...... ಗೌಡ್ರು.

ಆರು ಸೇರು ಬಿಲ್ಪತ್ರೆ
ಮೂರು ಸೇರು ಮಲ್ಲಿಗೂವ್ವ
ಸಿಂಹಾಸನ ಮೇಲೆ ಕುತ್ಗೊಂಡು
ಶಿವಪೂಜೆ ಮಾಡ್ತಾರೆ ನಮ್ಮ.... ಮಾವ.

ನಾಕ್ ತೋಳು ಅಂಗಿ
ನಾನ್ನೂರು ರೂಪಾಯಿ ಸಂಬಳ

ನಾನಸ್ಯೆನ ಮಾಡ್ಸಂದ್ರೆ ನಾಳೆ ನಾಳೆ
ಅಂತಾರೆ ನಮ್ಮ.... ಮಾವ.

ಪುಟ್ಟೆ ಇದ್ಲು ತಟ್ಟೆಕಬ್ಬಿ
ಅವರಕ್ಕತಂಗೆರ್ಗೆ ಪಟ್ಟೆ ಮಾಡ್ಸಕೆ
ಹೋಗ್ತಾರೆ ನಮ್ಮ....... ಮಾವ.

ಅರಗಿನ ಕೊಡ ಸೆರಗಿನ ಸಿಂಬಿ
ಶೀಲವಂತರ ಮಗಳು ಪಾರ್ವತಮ್ಮ
ಬರ್ತಾಳಂತ ಮಾರಿ ನೋಡಿ
ದಾರಿ ಬಿಡ್ತಾರ ನಮ್ಮ..... ಮಾವ.

ಹತ್ತು ಬೆಳ್ಳಿಗೆ ಪಚ್ಚೇದುಂಗರ
ಮತ್ತೊಂದು ಬೆಳ್ಳಿಗೆ ಮುತ್ತಿನುಂಗರ
ಬಂಗಾರ ಕುರ್ಚಿಮ್ಯಾಲ ಕುತ್ಕೊಂಡು
ಅಂಗೈಯಾಗ ಪುಸ್ತಕ ಹಿಡ್ಕೊಂಡು
ಓದ್ತಾ ಇರ್ತಾರೆ ನಮ್ಮ.... ಮಾವ.

ಗೌರಮ್ಮನಂಥ ಹೆಂಡ್ತಿನ್ ಬಿಟ್
ರಾಮಲಕ್ಷ್ಮಣರಂಥ ಮಕ್ಕಳ್ನ ಬಿಟ್
ಮತಿಗೆಟ್ಕೋಳ ಮನೀಗೆ
ಗತಿಗೆಟ್ಟು ಹೋಗ್ತಾರೆ ನಮ್ಮ.... ಮಾವ.

ನಾಯ್ಕನಟ್ಟಿ ಕೆರೆ ನೋಡು
ಕೆರೆಯಾಗ ನೀರು ನೋಡು
ನೀರಿಗ್ ಬರೋ ಹುಡ್ಗಿನೋಡು
ಹುಡ್ಗೀಗೆ ತಕ್ಕ ಕೊಡ ನೋಡು
ಕೊಡದ್ ಮೇಲೆ ಕೈನೋಡು
ಕೈ ಮೇಗಳ ಹಚ್ಚೆ ನೋಡು
ಹಚ್ಚೆ ನೋಡಿ ಮೆಚ್ಚಿ ಬಂದವರೆ
ನಮ್ಮ.... ಮಾವ.

ಚಳ್ಕೇರಿಗೆ ಇಲ್ಲೊಂದು ದಾರಿ
ದಾರಿಗೊಂದು ಹರ್ವಾರಿ
ಹರ್ವಾರಿಗೊಂದು ಗಿರ್ವಾರಿ

ಗಿರ್ಪಾರಿಗೊಂದು ಕಸಾರಿ

ಕಸಾರೆಗೆ ಕುತ್ಕೊಂಡು

ವಿಚಾರ್ನೆ ಮಾಡ್ತಾರೆ ನಮ್ಮ.... ಮಾವ.

ಬಳ್ಳಾರಿಯೆಂಬುದು ಬಡಿವಾರ

ಮುತ್ತಿನ ಬಜಾರ

ಒಂಟೆ ಸಾಲೇರಿದಾರೆ

ಕಂಠಿಸರ ಹಾಕಿದಾರೆ

ಬಾಗಲಾಗೆ ಸಿಂತವರೆ

ಬಾಳೆಗೊನೆ ಹಿಡಿದವರೆ

ಬಾಳವಂತರ ಮಗಳು

ಪಾರ್ವತಮ್ಮ ಬರ್‍ತಾಳೆ

ಬಾಚ್ ಬಿಡು ಅಂಬ್ತಾರೆ

ನಮ್ಮ..... ಮಾವ.

ಹೀಗೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳಲ್ಲಿ ಸಂದರ್ಭಕ್ಕನುಗುಣವಾಗಿ ಈ ತೆರನಾದ ಒಡಪುಗಳನ್ನು ಬಳಸುತ್ತಾರೆ.

೬. ನುಡಿ ಗಟ್ಟುಗಳು

ನುಡಿಗಟ್ಟುಗಳು ಜನಪದ ಸಾಹಿತ್ಯದ ಪ್ರಕಾರವೆಂದು ಗುರುತಿಸಲಾಗುತ್ತಿದೆ. 'ನುಡಿಗಟ್ಟು' ಎಂಬ ಪದಕ್ಕೆ 'ನುಡಿವಳಿ', 'ಒಕ್ಕಣೆ', 'ಮಾತಿನ ಜೋಡಣೆ', 'ಮಾತಿನ ನಿಯಮ' ಮುಂತಾದ ಅರ್ಥಗಳಿವೆ. ಅದು ಮಾತಿನಲ್ಲಿ ಇಂಥ ನುಡಿಗಟ್ಟುಗಳನ್ನು ಬಳಸುವುದರಿಂದ ಭಾಷೆಗೆ ಸತ್ವತೆ ಮತ್ತು ಶಿಷ್ಟತೆ ಉಂಟಾಗುತ್ತದೆ. ಮಾನವನ ಸಾಮಾಜಿಕ ಜೀವನದಲ್ಲಿ ಉಂಟಾಗುವ ಏರು-ಪೇರುಗಳಲ್ಲಿ, ಸುಖ-ದುಃಖಗಳಲ್ಲಿ ಪ್ರೀತಿ-ವಿಶ್ವಾಸಗಳಲ್ಲಿ, ಪರಸ್ಪರ ಕೂಡಿ ಬಾಳುವಾಗ ನೀತಿಯ ಮಾತುಗಳನ್ನು ಹೇಳುವುದು ಮತ್ತು ಕೇಳುವುದು ಸಹಜ ಕ್ರಿಯೆಯಾಗಿತ್ತು. ಆದ್ದರಿಂದಲೇ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಹಲವಾರು ನುಡಿಗಟ್ಟುಗಳನ್ನು ಬಳಸುತ್ತಾರೆ. ಮಾನವನ ಭಾಷೆಯ ಮೆರಗಿಗೆ ನುಡಿಗಟ್ಟುಗಳು ಆಕರಗಳಾಗಿವೆ. ಈ ಎರಡೂ ಬುಡಕಟ್ಟುಗಳು ಸಮಯ ಸಂದರ್ಭಕ್ಕೆ ತಕ್ಕಂತೆ ನುಡಿಗಟ್ಟುಗಳನ್ನು ಬಳಸುವ ಕಲೆ ಸಹಜವಾಗಿ ಇವರಲ್ಲಿ ಮೂಡಿ ಬಂದಿದೆ. ಅಂಥ ಪ್ರಮುಖ ನುಡಿಗಟ್ಟುಗಳೆಂದರೆ.

ಅಜ್ಜನ ಕಾಲದ್ದು - ಬಹಳ ಹಳೆಯದು

ಉಪ್ಪಿಲ್ಲ ಹುಳಿಯಲ್ಲ - ಸ್ವಾರಸ್ಯವಿಲ್ಲದ್ದು

ಎತ್ತಿದ ಕೈ - ಪ್ರವೀಣ

ಎದೆ ತಟ್ಟಿ ಹೇಳು - ಧೈರ್ಯದಿಂದ ಹೇಳು

ಒಡಕು ಬಾಯಿ - ಮಾತಾಡುವವ

ಒಣಜಂಬ - ವ್ಯರ್ಥ ಅಹಂಕಾರ

ಕಟ್ಟಿಟ್ಟ ಬುತ್ತಿ - ಅನುಭವಿಸಲೇ ಬೇಕಾಗಿರುವುದು

ಕಣ್ಣಲ್ಲಿ ಎಣ್ಣೆ ಹಾಕಿ ನೋಡು - ಸೂಕ್ಷ್ಮವಾಗಿ ಪರಿಶೀಲಿಸು

ಕಲ್ಲು ಮನಸ್ಸು - ಕಠಿಣ ಮನಸ್ಸು

ಗಂಟು ತಿನ್ನು - ಕೊಟ್ಟ ಹಣ ಕೊಡದೆ ಮೋಸ ಮಾಡು

ಗಾಯದ ಮೇಲೆ ಬರೆ ಹಾಕು - ಕಷ್ಟದ ಮೇಲೆ ಕಷ್ಟಕೊಡು

ಚಳ್ಳೆಹಣ್ಣು ತಿನ್ನಿಸು - ಮೋಸಪಡಿಸು

ಟೋಪಿ ಹಾಕು - ಮೋಸ ಮಾಡು

ತಲೆ ಮೇಲೆ ಮೆಣಸು ಅರೆ - ಪೀಡಿಸು

ತಲೆಯಿಲ್ಲ - ಬುದ್ದಿಯಿಲ್ಲ

ನುಂಗಿ ನೀರು ಕುಡಿ - ನಾಶಮಾಡು

ಪಂಚ ಪ್ರಾಣ - ಅತಿಪ್ರಿಯ ವಸ್ತು

ಬಣ್ಣ ಬಯಲಿಗೆ ಬರು - ರಹಸ್ಯ ಬಯಲಾಗು

ಬೀದಿ ರಂಪವಾಗು - ಎಲ್ಲರಿಗೂ ತಿಳಿ

ಮಂಗ ಮಾಯ - ಇದ್ದಕ್ಕಿದ್ದಂತೆ ಮಾಯವಾಗುವಿಕೆ

ಮುಖಕ್ಕೆ ಮಸಿ ಹಚ್ಚು - ಕಳಂಕ ತರು

ಹಾಲು ತುಪ್ಪದಲ್ಲಿ ಕೈತೊಳೆ - ಸಮೃದ್ಧ ಜೀವನ ನಡೆಸು

ಹೊಟ್ಟೆ ತಣ್ಣಗಾಗು - ತೃಪ್ತಿಯಾಗು

ಹೀಗೆ ಆಯಾ ಸಂದರ್ಭ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಲ್ಲಿ ನುಡಿಗಟ್ಟುಗಳು ಬಳಕೆಯಾಗುತ್ತವೆ.

೭. ಲಾವಣಿ

ಜನಪದ ಸಾಹಿತ್ಯದ ಒಂದು ಪ್ರಕಾರವಾದ 'ಲಾವಣಿ' ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಜನಪ್ರಿಯತೆ ಪಡೆದು ಕೊಂಡಿದೆ. ಸಮಾಜದ ಜನತೆಗೆ ಬುದ್ಧಿಯ ಮಾತು ಹೇಳುವ ಗಾರುಡಿಗನಂತೆ ಕಾಣಿಸಿಕೊಳ್ಳುವ ಲಾವಣಿಕಾರ ಐತಿಹಾಸಿಕ, ಪೌರಾಣಿಕ ಮತ್ತು ಸಾಮಾಜಿಕ ಅಂಶಗಳನ್ನು ಪರಿಚಯಿಸುವುದರ ಜೊತೆಗೆ ಆದರ್ಶ ಮೌಲ್ಯಗಳನ್ನು ಮನ ಮುಟ್ಟುವಂತೆ ಹಾಡುತ್ತಾನೆ. ಸಾಮಾನ್ಯ ವೇಷ ಭೂಷಣಗಳಲ್ಲಿಯೇ ಕಾಣಿಸಿಕೊಳ್ಳುವ ಲಾವಣಿಕಾರ ತಾಳ, ಡಕ್ಕಿ ಇಲ್ಲವೇ ತಮಟೆ ಹಿಡಿದು ಹಾಡಲು ಪ್ರಾರಂಭಿಸಿದರೆ ಯಾವ ವೇದಿಕೆಯೂ ಬೇಕಾಗಿಲ್ಲ. ಸಾಹಿತ್ಯಕ್ಕೆ ತಕ್ಕಂತೆ ವಾದ್ಯದ ಗತ್ತು ಹಾಡುವ ಶೈಲಿ ತುಂಬ ಸೊಗಸಾಗಿರುತ್ತದೆ. ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳನ್ನು ರಾಗ ಮತ್ತು ತಾಳ ಬದ್ಧವಾಗಿ ಹಾಡುವ ಕಲೆ, ಕೇಳುಗರಲ್ಲಿ ಆತುರ ಕುತೂಹಲಗಳನ್ನು ಹೆಚ್ಚಿಸುತ್ತದೆ. ಆದಿ ಅನಾದಿ ಕಾಲದಿಂದ ಪ್ರಸ್ತುತ ಸಮಾಜದವರೆಗೂ ಆಗಿ ಹೋಗಿರುವ ಉತ್ತಮ ವಿಚಾರಗಳನ್ನು ತಿಳಿಸುವ ಅನೌಪಚಾರಿಕ

ಶಿಕ್ಷಕನಾಗಿ ಲಾವಣಿಕಾರ ಕಾರ್ಯನಿರ್ವಹಿಸುತ್ತಾನೆ. ರಾಮ, ಕೃಷ್ಣ, ಬುದ್ಧ, ಬಸವ, ಗಾಂಧಿ ತತ್ವಗಳಿಂದ ಹಿಡಿದು ಪ್ರಸ್ತುತ ಬಡತನ, ವರದಕ್ಷಿಣೆ, ಕಳ್ಳತನ, ಬಹುಪತ್ನಿತ್ವ, ಶೋಭಚಾರ, ವೇಶ್ಯಾವೃತ್ತಿ, ಅಜ್ಞಾನ, ಮೂಢನಂಬಿಕೆ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ತೋರಿಸಿ, ನಂತರ ಪರಿಹಾರ ಕ್ರಮಗಳನ್ನು ವಿವರವಾಗಿ ಮನ ಮುಟ್ಟುವಂತೆ ಹಾಡುತ್ತಾನೆ. ಈ ಲಾವಣಿ ಸಾಹಿತ್ಯದಲ್ಲಿ ಸಾಮಾಜಿಕ ನೀತಿ, ತತ್ವ, ಭಕ್ತಿ, ಆದರ್ಶ ಅಂಶಗಳು, ಭಾರತ ಸ್ವಾತಂತ್ರ ಪಡೆದ ಸಂಕಷ್ಟಗಳು ಮುಂತಾದ ವಿಚಾರಗಳನ್ನು ಒಳಗೊಂಡ ಲಾವಣಿಗಳು ಸಾಕಷ್ಟಿವೆ.

ಲಾವಣಿ ಹಾಡುಗಳು ಸಾಮಾನ್ಯವಾಗಿ ದೀರ್ಘವಾಗಿರುತ್ತವೆ, ಕೆಲವೊಂದು ಐತಿಹಾಸಿಕ, ಪೌರಾಣಿಕ ಮತ್ತು ದೇಶಭಕ್ತಿ ಲಾವಣಿಗಳಂತೂ ಜಾನಪದ ಕಾವ್ಯಗಳೇ ಆಗಿರುತ್ತವೆ. ಸಂಶೋಧನ ಕ್ಷೇತ್ರಕಾರ್ಯಕ್ಕೆ ಹೋದಾಗ ಚಳ್ಳಕೆರೆ ತಾಲ್ಲೂಕು ಸಾಣೀಕರೆ ಗ್ರಾಮದಲ್ಲಿ ಮ್ಯಾಸಬೇಡರ ಸಮುದಾಯಕ್ಕೆ ಸೇರಿದ ಲಾವಣಿ ತಿಪ್ಪಯ್ಯ ಎಂಬ ವ್ಯಕ್ತಿ ಲಾವಣಿ ಹಾಡುವುದರಲ್ಲಿ ಬಹಳ ಹೆಸರಾಗಿದ್ದಾನೆ. ಈತನ ಲಾವಣಿ ಹಾಡಿನಲ್ಲಿ ಚಿತ್ರದುರ್ಗದ ಶ್ರೀಮುರುಘಾರಾಜೇಂದ್ರ ಸ್ವಾಮಿಗಳು, ಮದಕರಿನಾಯಕ, ಶೋಭಾಚಾರ, ಬಡತನ, ಬಹುಪತ್ನಿತ್ವ ಮತ್ತು ಪ್ರಾದೇಶಿಕವಾಗಿ ಕಂಡು ಬರುವ ಜಾತಿ, ಊರು, ದೇವರುಗಳ ವಿಡಂಬನೆ ಮೊದಲಾದ ಅಂಶಗಳನ್ನು ಮನ ಮುಟ್ಟುವಂತೆ ಲಾವಣಿ ತಿಪ್ಪಯ್ಯನವರು ಹಾಡುತ್ತಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮುದಾಯಗಳಲ್ಲಿ ಹಬ್ಬ, ಜಾತ್ರೆ, ಉತ್ಸವ, ಮದುವೆ ಮಂಗಳ ಕಾರ್ಯಗಳಲ್ಲಿ ಇಂತಹ ಲಾವಣಿಕಾರರನ್ನು ಕರೆಯಿಸಿ ಲಾವಣಿ ಹಾಡಿಸಿ ಮನರಂಜನೆ ಪಡೆಯುವ ಪ್ರವೃತ್ತಿ ಅನೇಕ ಹಟ್ಟಿಗಳಲ್ಲಿ ಕಂಡು ಬರುತ್ತಿತ್ತು. ಆದರೆ ಪ್ರಸ್ತುತ ಲಾವಣಿ ಹಾಡುವವರ ಸಂಖ್ಯೆ ತೀರ ಕಡಿಮೆಯಾಗುತ್ತಿದೆ.

೯. ಜನಪದ ಕಲೆಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಸಮೂಹಗಳಲ್ಲಿ ವೈವಿಧ್ಯಮಯವಾದ ಜನಪದ ಕಲೆಗಳು ಕಂಡು ಬರುತ್ತವೆ. ಆದಿ ಅನಾದಿಕಾಲದಿಂದಲೂ ಬೆಳೆದು ಬಂದ ಜನಪದ ಕಲೆ ಆಯಾ ಜನರ ಸಾಂಸ್ಕೃತಿಕ ಅಧ್ಯಯನಕ್ಕೆ ಬಲವಾದ ಆಕರಗಳಾಗಿವೆ. ಒಂದು ಜನಾಂಗದ ಕಲೆ ಮತ್ತು ಸಾಹಿತ್ಯದ ಆಧಾರದ ಮೇಲೆಯೇ ಆ ಜನಾಂಗದ ಸಂಸ್ಕೃತಿ ಮತ್ತು ಸಂಪ್ರಾದಯಗಳನ್ನ ಗುರುತಿಸಬಹುದು. ಆದ್ದರಿಂದ ಬುಡಕಟ್ಟು ಜನಾಂಗದ ಜನಪದ ಕಲೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ, ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ವಂಶಪಾರಂಪರ್ಯವಾಗಿ ವರ್ಗಾವಣೆಗೊಳ್ಳುವ ಜನಪದ ಕಲೆಗಳು ನಾಡಿನಾದ್ಯಂತ ವ್ಯಾಪಿಸಿವೆ. ಸಾಮಾನ್ಯವಾಗಿ ಬುಡಕಟ್ಟು ಜನರ ಹಬ್ಬ-ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ಹುಟ್ಟು ಸಾವುಗಳಲ್ಲಿಯೂ ಜನಪದ ಕಲೆಗಳು ಹೊರ ಹೊಮ್ಮುತ್ತವೆ. ಪ್ರತಿಯೊಂದು ಜಾತಿ, ಜನಾಂಗವು ಕೂಡ ತಮ್ಮದೇ ಆದಂಥ ಜನಪದ ಕಲೆಗಳನ್ನು ಉಳಿಸಿ ಬೆಳಸಿಕೊಂಡು ಬಂದಿದ್ದಾರೆ. ಕೆಲವರು ದೇವರು ಧರ್ಮದ ಹೆಸರಿನಲ್ಲಿ, ಮತ್ತೇ ಕೆಲವರು ಉಪ ಜೀವನಕ್ಕಾಗಿ ಜನಪದ ಕಲೆಗಳನ್ನು ಉಳಿಸಿಕೊಂಡು ಬಂದಿದ್ದಾರೆ.

ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಕಂಡು ಬರುವ ಕ್ರೀಡೆಗಳು, ವಾದ್ಯಗಳು, ಕಲಾವಿದರು, ನಾಟಕ, ಕೋಲಾಟ, ಭಜನೆ, ಮಣೇವು ಕುಣಿತ, ಮೊಂಡರ ಆಟ, ಬಲೆನೇಯುವುದು, ಹಚ್ಚೆ ಹಾಕಿಸುವುದು, ರಂಗೋಲಿ ಮೊದಲಾದ ಜನಪದ ಕಲೆಗಳನ್ನು ಗುರುತಿಸಬಹುದು. ಈ ಎಲ್ಲಾ ಕಲೆಗಳು ಇವರ

ದೈನಂದಿನ ಬದುಕಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ. ಜನಪದ ಕಲೆಗಳಿಗೂ ಮತ್ತು ಬುಡಕಟ್ಟುಗಳ ಸಂಸ್ಕೃತಿಗೂ ಪರಸ್ಪರ ಸಂಬಂಧವಿರುವುದರಿಂದ ಈ ಕಲೆಯ ಮೂಲಕ ಅವರವರ ಸಂಪ್ರದಾಯ ಮತ್ತು ನಂಬಿಕೆಗಳು, ಆಚಾರ ಮತ್ತು ವಿಚಾರಗಳನ್ನು ಸುಲಭವಾಗಿ ಗುರುತಿಸಬಹುದು.

೧. ಕ್ರೀಡೆಗಳು

ಆದಿ ಅನಾದಿ ಕಾಲದಿಂದಲೂ ಬುಡಕಟ್ಟು ಜನರು ಕ್ರೀಡೆಗೆ ಬಹಳ ಮಹತ್ವ ಕೊಟ್ಟಿದ್ದಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗ ತಮ್ಮವೇ ಆದಂಥ ಕೆಲವೊಂದು ಕ್ರೀಡೆಗಳನ್ನು ಮೈಗೂಡಿಸಿಕೊಂಡಿದ್ದಾರೆ. ಹಬ್ಬ ಹರಿದಿನ, ಜಾತ್ರೆ ಉತ್ಸವಗಳಲ್ಲಿ ಮನರಂಜನೆಗಾಗಿ ಕೆಲವೊಂದು ಕ್ರೀಡೆಗಳನ್ನು ಆಡುತ್ತಾರೆ. ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡು ಬರುವ ಮಕ್ಕಳ, ವಯಸ್ಕರರ ಮತ್ತು ಸ್ತ್ರೀಯರ ಆಟಗಳೆಂದರೆ ಗೋಲಿ ಆಟ, ಬಗರಿ ಆಟ, ಕಪ್ಪೆ ಆಟ, ಚಿನ್ನಿದಂಡ ಆಟ, ಹಗ್ಗದ ಆಟ, ಮರಕೋತಿ ಆಟ, ಚೆಂಡಿನ ಆಟ, ಜೋಕಾಲಿ, ರಾಮಪಟ್ಟಿ, ಕಬಡಿ ಆಟ, ಕಾಯಿಗುದ್ದುವುದು, ಕಡ್ಡಿಯಾಟ, ಕುಸ್ತಿಆಡುವುದು, ಬಸವನಕಟ್ಟೆ, ಟಗರುಕಾಳಗ, ದೇವರೆತ್ತುಗಳನ್ನು ಓಡಿಸುವುದು, ನೀರುಗ್ಗುವ ಆಟ, ಚೌಕಾಬಾರ, ಅಟ್ಟುಗುಣಿ ಆಟ, ಕುಂಟೆಬಿಲ್ಲೆ, ಕಣ್ಣಾಮುಚ್ಚಾಲೆ, ಮೋಡಿಯಾಟ, ಕೋಲಾಟ, ಈಜು ಸ್ಪರ್ಧೆ-ಮೊದಲಾದ ಕ್ರೀಡಾ ಚಟುವಟಿಕೆಗಳು ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡುಬರುತ್ತವೆ.

ಈ ಎರಡೂ ಬುಡಕಟ್ಟು ಜನಾಂಗದಲ್ಲಿ ನಿರ್ದಿಷ್ಟವಾದ ಯಾವ ಕ್ರೀಡೆಗಳು ಕಂಡು ಬರುತ್ತಿಲ್ಲ. ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳ ಪ್ರಭಾವದಿಂದ ಈಗ ಹಟ್ಟಿಗಳಲ್ಲಿ ಕ್ರಿಕೇಟ್, ವಾಲಿಬಾಲ್, ಕೋಕೋ, ಬ್ಯಾಟ್‌ಮಿಟನ್ ಮೊದಲಾದ ಆಧುನಿಕ ಆಟಗಳನ್ನು ಆಡುತ್ತಿದ್ದಾರೆ. ಕೇವಲ ಸಂತೋಷ ಮತ್ತು ಮನರಂಜನೆಗಾಗಿ ಆಡುತ್ತಿದ್ದ ಮರಕೋತಿ ಆಟ, ಕುಂಟೆಬಿಲ್ಲೆ, ಕಣ್ಣಾಮುಚ್ಚಾಲೆ, ಬಸವನಕಟ್ಟೆ-ಮೊದಲಾದ ಆಟಗಳು ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಣ್ಮರೆಯಾಗುತ್ತಿವೆ.

೨. ವಾದ್ಯಗಳು

ಮ್ಯಾಸಬೇಡ ಮತ್ತು ಕಾಡುಗೊಲ್ಲರು ವೈವಿಧ್ಯಮಯವಾದ ಜನಪದ ವಾದ್ಯಗಳನ್ನು ಬಳಸುತ್ತಾರೆ. ಈ ವಾದ್ಯಗಳಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿರುವುದರಿಂದ, ಹಟ್ಟಿಯ ಜಾತ್ರೆ, ಹಬ್ಬ, ಉತ್ಸವ ಮೊದಲಾದ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಉರುಮೆ, ದಗಮ್, ಕೊಂಬು ಕಹಳೆ, ತಮಟೆ, ಡೊಳ್ಳು, ನಗಾರಿ, ಕರಡಿಮಜಲು, ಶಂಖ, ಜಾಗಟೆ, ಗಂಟೆ, ಕೊಳಲು, ಗಣೆ, ತಾಳ, ಡಕ್ಕಿ, ತಂಬೂರಿ ಮೊದಲಾದ ಜನಪದ ವಾದ್ಯಗಳನ್ನು ಸಮಯ ಸಂದರ್ಭಕ್ಕೆ ತಕ್ಕಂತೆ ಬಳಸುವ ಕಲೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತದೆ.

ಒಂದೊಂದು ವಾದ್ಯಗಳನ್ನು ನಿರ್ಮಿಸುವಾಗ ಅವರದೇ ಆದಂಥ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. 'ದಗಮ್' ಎಂಬ ವಾದ್ಯವನ್ನು ತಯಾರಿಸುವಾಗ ಜೀವಂತ ಬಂಜೆ ಮಣಕದ ಚರ್ಮ ಸುಲಿದು ಹದಮಾಡಿ ದಗಮ್ ವಾದ್ಯ ತಯಾರಿಸುತ್ತಾರೆ. ಅದೇ ರೀತಿ ಉಡವಿನ ಚರ್ಮದಿಂದ ಡಕ್ಕಿ; ಮೇಕೆ ಚರ್ಮದಿಂದ ಉರುಮೆ ಮತ್ತು ಕರಡಿ ಮಜಲು; ದನದ ಚರ್ಮದಿಂದ ತಮಟೆ, ನಗಾರಿ ಮತ್ತು ಡೊಳ್ಳು ತಯಾರಿಸುತ್ತಾರೆ. ಕೊಳಲು

ಮತ್ತು ಗಣೆ ಬಿದಿರುಗಳದಿಂದ ತಯಾರಿಸುತ್ತಾರೆ. ಕೊಂಬು ಕಹಳೆಯನ್ನು ಗೌರವದ ಸಂಕೇತವಾಗಿ ಶುಭಕಾರ್ಯಗಳಲ್ಲಿ ಬಳಸುತ್ತಾರೆ. ಕಂಚಿನ ಗಂಟೆಯನ್ನು ಗಂಟೆ ಹೆಳವರು ಪದ ಹೇಳುವಾಗ, ಕುಲ ಕೊಂಡಾಡುವಾಗ ಬಳಸುತ್ತಾರೆ. ಈ ಎರಡೂ ಬುಡಕಟ್ಟು ಸಮುದಾಯಗಳ ದಾಸಯ್ಯಗಳು ಶಂಖ ಮತ್ತು ಜಾಗಟೆಗಳನ್ನು ಧಾರ್ಮಿಕ ಕಾರ್ಯಗಳಲ್ಲಿ ಬಳಸುತ್ತಾರೆ. ತಂಬೂರಿ, ತಾಳ, ಡಕ್ಕಿ ಭಜನೆ ಮಾಡುವಾಗ; ಉರುಮೆ, ಡೊಳ್ಳು, ಕರಡಿಮಜಲು, ತಮಟೆ, ನಗಾರಿ ಮೊದಲಾದ ಜನಪದ ವಾದ್ಯಗಳನ್ನು ಜಾತ್ರೆ ಉತ್ಸವಗಳಲ್ಲಿ ಬಳಸುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ವಿಶೇಷವಾಗಿ 'ಉರುಮೆ' ವಾದ್ಯಕ್ಕೆ ಬಹಳ ಮಹತ್ವಕೊಟ್ಟು ಯಾವುದೇ ಹಟ್ಟಿಯ ಹಬ್ಬ, ಜಾತ್ರೆ, ಉತ್ಸವ ಮೊದಲಾದ ಕಾರ್ಯಗಳಿಗೆ ಉರುಮೆ ವಾದ್ಯದವರನ್ನು ಕರೆಯಿಸಿ ಧಾರ್ಮಿಕ ಕಾರ್ಯಗಳನ್ನು ಆಚರಿಸುತ್ತಾರೆ.

೨.೧. ಉರುಮೆ : ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರ ಹಬ್ಬ, ಜಾತ್ರೆ ಉತ್ಸವಗಳಲ್ಲಿ ಬಳಸುವ ಜನಪದ ವಾದ್ಯಗಳಲ್ಲಿ ಉರುಮೆ ವಾದ್ಯವು ಬಹು ಮುಖ್ಯವಾಗಿದೆ. ಉರುಮೆ ಮಾಡುವ ಕಲೆ ಆದಿದ್ರಾವಿಡರಲ್ಲಿ ಮಾತ್ರ ಪ್ರಚಲಿತವಿದ್ದು ಇದು ವಂಶಪಾರಂಪರ್ಯವಾಗಿ ಮುಂದುವರಿದುಕೊಂಡು ಬರುವ ಕಲೆಯಾಗಿದೆ. ಉರುಮೆ ತಯಾರಿಸುವಾಗ ಕೆಲವೊಂದು ಸಾಮಾಜಿಕ ನಿಯಮಗಳನ್ನು ಪಾಲಿಸುತ್ತಾರೆ. ದೇವರ ಅಪ್ಪಣೆ ಪಡೆದು, ದೇವರ ಆಭರಣಗಳನ್ನು ಮಾಡುವ ಜೀನುಗಾರರ ಹತ್ತಿರವೇ ಉರುಮೆ ಮಾಡಿಸುತ್ತಾರೆ. ಮೂರು ಕೆ.ಜಿ. ತೂಕದ ಕಂಚಿನ ತಗಡಿನಲ್ಲಿ ೧೮ ಅಂಗುಲ ಉದ್ದ ಮತ್ತು ೧೮ ಅಂಗುಲ ವ್ಯಾಸವಿರುವಂತೆ ಅಚ್ಚುಪಡಿಯಿಂದ ಕಲಾತ್ಮಕವಾಗಿ ಕೊಳಗ ತಯಾರಿಸಿ. ಅದರ ಎರಡೂ ಕಡೆಗೂ ಕಬ್ಬಿಣ್ಣದ ಎರಡು ಬಳೆಗಳಿಗೆ ಹದ ಮಾಡಿದ ಮೇಕೆ ಮರಿಯ ಚರ್ಮವನ್ನು ಕಟ್ಟಿ ದಾರದಿಂದ ಬಿಗಿಯುತ್ತಾರೆ. ಹರಳು ಬೀಜದಿಂದ ತಯಾರಿಸಿದ, ಕಪ್ಪು ಬಣ್ಣವನ್ನು ಉರುಮೆ ಎಡ ಭಾಗಕ್ಕೆ ಹಚ್ಚಿ ನೆರಳಲ್ಲಿ ಒಣಗಿಸುತ್ತಾರೆ.

ಉರುಮೆ ಬಡಿಯಲು ಎರಡು ಕಡ್ಡಿಗಳನ್ನು ಬಳಸುತ್ತಾರೆ. ಬಲ ಭಾಗದಲ್ಲಿ ಬಡಿಯುವ ಕಡ್ಡಿ ಬಂದರಿಕೆ ಗಿಡದ ಕಡ್ಡಿಯಿಂದ ತಯಾರಿಸಿದ್ದು ಸುಮಾರು ೧೦ ಅಂಗುಲ ಉದ್ದವಿರುತ್ತದೆ. ಉರುಮೆ ಎಡಭಾಗದಲ್ಲಿ ಉಜ್ಜುವ ಜಿಗಿರು ಕಡ್ಡಿ ಎಕ್ಕೆ ಅಥವಾ ಹುಲಿ ಗಿಡದ ಕಡ್ಡಿಯಿಂದ ತಯಾರಿಸಿದ್ದು ಸುಮಾರು ೧೮ ಅಂಗಲು ಉದ್ದವಿರುತ್ತದೆ.

ಉರುಮೆ ಬಡಿಯುವ ಕಲಾವಿದರು ಸಾಮಾನ್ಯ ವೇಷದಲ್ಲಿದ್ದು ತಲೆಗೆ ಪೇಟ, ಹೆಗಲ ಮೇಲೆ ಬಿಳಿ ವಸ್ತ್ರ ಹಾಕಿಕೊಂಡು ಚಪ್ಪಲಿ ತೊಡದೆ ಉರುಮೆ ವಾದ್ಯವನ್ನು ಕೊರಳಿಗೆ ತಗಲಿ ಹಾಕಿಕೊಂಡು ಜಾಣ್ಮೆಯಿಂದ ಬಡಿಯುತ್ತ ಹೋದರೆ ಒಂದು ರೀತಿ ವಿಲಕ್ಷಣನಾದವು ಹೊರಹೊಮ್ಮುತ್ತದೆ. ದೇವರ ಹಬ್ಬ ಉತ್ಸವ ಜಾತ್ರೆಗಳಲ್ಲಿ ದೇವಸ್ಥಾನದ ಮುಂದೆ ನಿಂತು ಉರುಮೆ ಬಡಿದರೆ ಅದರ ಶಬ್ದವನ್ನು ಕೇಳಿ ಹಟ್ಟಿಯ ಜನರೆಲ್ಲ ಬಂದು ಸೇರುತ್ತಾರೆ. ದೇವರ ಉತ್ಸವ ಮೂರ್ತಿ ಹೊರಟು ಗುಡಿಯಿಂದ ಹೊರಬಂದಾಗ ಉರುಮೆ ಬಡಿಯುವ ಕಲಾವಿದರು ದೇವರ ಮಹಿಮೆಯನ್ನು ಕೊಂಡಾಡುವ ಪದಗಳು ತುಂಬ ಆಕರ್ಷಣೀಯವಾಗಿರುತ್ತವೆ.

ಹಿಂದಿನಾ ಕಾಲದಲ್ಲಿ
ಒಂದಾಳುದ್ದ ಮನುಷ್ಯರಂತೆ
ಮನುಷ್ಯರಾದದಿಂದಲ್ಲಿ
ಬೆಳ್ಳಿಯಂತ ದೇವರು

ಬೆಳ್ಳಿಯಂತ ಲಿಂಗ

ಬೆಳ್ಳಿಯಂತ ಪೂಜಾರಿ

ಬೆಳ್ಳಿಯಂತ ಒಕ್ಕಲು

ಬೆಳ್ಳಿಗೆ ಸರಿಸಮನಾದ

ದೇವರಯ್ಯಾ

ಬುದ್ಧೀ..... ದಾತಾರ....ಭೂಪಾರ.... .

ಎಂದು ದೇವರನ್ನು ಕೊಂಡಾಡುತ್ತಾರೆ. ಹಲಗೆ ಮತ್ತು ಸೋಮನ ಕುಣಿತಕ್ಕೆ ಉರುಮೆ ವಾದ್ಯ ಅತ್ಯವಶ್ಯಕವಾಗಿದೆ. ಉರುಮೆ ಬಡಿಯುವ ಕಲಾವಿದರಿಗೆ ಮನೆಗಿಷ್ಟು ದವಸ ಧಾನ್ಯಗಳೆಂದು ಆಯಾ ಕೊಡುವ ಪದ್ಧತಿ ಈ ಬುಡಕಟ್ಟುಗಳಲ್ಲಿವೆ. ಮ್ಯಾಸಬೇಡರಲ್ಲಿ ಕಂಡು ಬರುವ ಎಲ್ಲಾ ಬೆಡಗುಗಳು, ಆದಿದ್ರಾವಿಡರಲ್ಲಿ ಕಂಡು ಬರುತ್ತವೆ. ಚಿತ್ರದುರ್ಗ ಜಿಲ್ಲಾದ್ಯಂತ ಆದಿದ್ರಾವಿಡರು ವಾಸಿಸುತ್ತಾರೆ. ಆದರೆ ಮ್ಯಾಸಬೇಡ ಮತ್ತು ಕಾಡುಗೊಲ್ಲರ ದೇವರುಗಳಿಗೆ ಉರುಮೆ ಮಾಡುವ ಕಲಾವಿದರು ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ, ಮತ್ಸಸಮುದ್ರ, ಜಡೆಕುಂಟೆ, ಗೋಸಿಕೆರೆ, ಗೌರಸಮುದ್ರ, ನೇಕಿಲಕೆರೆ, ಬೆಳಗೆರೆ; ಚಿತ್ರದುರ್ಗ ತಾಲ್ಲೂಕು ಜೋಡಿ ಚಿಕ್ಕೇನಹಳ್ಳಿ; ಹೊಳಲ್ಕೆರೆ ತಾಲ್ಲೂಕು ದೇವರ ಗಂಜಿಗಟ್ಟೆ; ಕೂಡ್ಲಿಗಿ ತಾಲ್ಲೂಕು ಮಾಕನಡುಕು; ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಮೊದಲಾದ ಪ್ರದೇಶಗಳಲ್ಲಿ ಉರುಮೆ ಮಾಡುವ ಆದಿದ್ರಾವಿಡರು ಕಂಡು ಬರುತ್ತಾರೆ.

೨.೨. ಕೊಳಲು ಮತ್ತು ಗಣೆ : ಜನಪದ ವಾದ್ಯಗಳಲ್ಲಿ ಕೊಳಲು ಮತ್ತು ಗಣೆಗೆ ವಿಶೇಷ ಮಹತ್ವವಿದೆ. ಸುಮಾರು ಒಂದೂವರೆ ಅಡಿ ಉದ್ದದ ಬಿದಿರಿನ ಕಟ್ಟಿಗೆಗೆ ಸ್ವರದ ತೂತು ಕೊರೆದು ಮಾಡಿಕೊಂಡ ಚಿಕ್ಕ ವಾದ್ಯವೇ ಕೊಳಲು. ಇದನ್ನೇ ಪಿಳ್ಳಂ ಗೋವಿಯೆಂದು ಕರೆಯುತ್ತಾರೆ. ಮ್ಯಾಸಬೇಡ ಮತ್ತು ಕಾಡುಗೊಲ್ಲರು ದನ-ಕರು ಕುರಿ-ಮೇಕೆಗಳನ್ನು ಮೇಯಿಸಲು ಕಾಡಿಗೆ ಹೋದಾಗ ಮನರಂಜನೆ ಸಲವಾಗಿ ಕೊಳಲು ನುಡಿಸುತ್ತಾರೆ. ಗೋಪಾಲಕನಾದ ಶ್ರೀಕೃಷ್ಣ ಕೊಳಲು ನುಡಿಸುತ್ತಿದ್ದ. ಕೆಲವೊಂದು ಸಲ ಕೊಳಲು ಮತ್ತು ಗಣೆಯನ್ನು ಒಂದೇ ಎಂಬ ಅರ್ಥದಲ್ಲಿ ಬಳಸುತ್ತಾರೆ, ಇದು ತಪ್ಪು. ಏಕೆಂದರೆ ಕೊಳಲು ಆಕಾರಧಲ್ಲಿ ಚಿಕ್ಕದಿರುತ್ತದೆ. ಗಣೆ ಆಕಾರದಲ್ಲಿ ದೊಡ್ಡದಿರುತ್ತದೆ. ಕೊಳಲನ್ನು ಯಾರು ಬೇಕಾದರೂ ನುಡಿಸಬಹುದು ಆದರೆ ಗಣೆಯನ್ನು ದೇವರ ಪೂಜಾರಿ ಅಥವಾ ದೇವರಿಗೆ ಸಂಬಂಧ ಪಟ್ಟ ವ್ಯಕ್ತಿ ಮಾತ್ರ ಊದುತ್ತಾನೆ.

ಸುಮಾರು ಐದಾರು ಅಡಿ ಉದ್ದದ ಬಿದಿರಿನ ಬೊಂಬಿಗೆ ಸ್ವರದ ತೂತು ಕೊರೆದು ಮಾಡಿ ಕೊಂಡ ಪವಿತ್ರ ವಾದ್ಯವೇ ಗಣೆ, ಕೆಲವೊಂದು ದೇವಸ್ಥಾನಗಳಲ್ಲಿ ಆಳೆತ್ತರದ ಬೆಳ್ಳಿಗಣೆಗಳುಂಟು. “ ‘ಗಣೆ’ಯ ಪ್ರಾಚೀನತೆ ಜುಂಜಪ್ಪನಿಗಿಂತ ಹಿಂದಕ್ಕೆ ಅಂದರೆ ಶ್ರೀಕೃಷ್ಣನ ಕಾಲದವರೆಗೂ ಸರಿಯುತ್ತದೆ. ‘ಕೊಳಲಿಲ್ಲದೆ ಕೃಷ್ಣನಿಲ್ಲ’ ಎಂಬ ಗಾದೆ ಮಾತೇ ಇದೆ. ಬಹುಶಃ ಶ್ರೀಕೃಷ್ಣ ಬೆಳೆದ ನಂದಗೋಕುಲದಲ್ಲಿ ‘ಗಣೆ’ ಬಳಸುತ್ತಿದ್ದಿರಬೇಕು. ಕವಿಗಳು ಮತ್ತು ಕಲಾವಿದರು ಮಹೋನ್ನತ ಸಂಸ್ಕೃತಿಯ ಸಂಕೇತವೆಂದು ವೈಭವಿಸಿ ಚಿತ್ರಿಸಿದ ಶ್ರೀಕೃಷ್ಣನ ಕೈಯಲ್ಲಿರುವ ಅಡಕವಾದ ಕೊಳಲಿಗೆ ಗಣೆಯೇ ಮೂಲವಿರಬೇಕು”.[೨] ಎಂದು ಹೇಳಿದ ಮಾತು ಸರಿಯಾಗಿಯೇ ಇದೆ. ಕೆಲವೊಂದು ಕಾಡುಗೊಲ್ಲರ ಹಟ್ಟಿಯಲ್ಲಿ ದೇವರ ಪೂಜಾರಿ ದೇವಸ್ಥಾನದ ಮುಂಭಾಗ ಕರಿ ಕಂಬಳಿ ಗದ್ದಿಗೆ ಹಾಸಿ ಅದರ ಮೇಲೆ ಕುಳಿತು ಗಣೆ ಊದಿ ಕಣಿ ಅಥವಾ ಭವಿಷ್ಯ ಹೇಳುವ ಪದ್ಧತಿಯಿದೆ. ಚಳ್ಳಕೆರೆ ತಾಲ್ಲೂಕು ಸಾಣೇಕೆರೆ

ಕೆರೆಮುಂದಲಹಟ್ಟಿ ಚಿತ್ರದೇವರ ಪೂಜಾರಿ; ಹಿರಿಯೂರು ತಾಲ್ಲೂಕು ಮದ್ದನಕುಂಟೆ ಯರ್ರಪ್ಪನ ಪೂಜಾರಿ ಮತ್ತು ಇಕ್ಕನೂರು ಕಾಟಮ್ಮದೇವರ ಪೂಜಾರಿ ಮೊದಲಾದ ದೇವರ ಕೇಂದ್ರಗಳಲ್ಲಿ ಪೂಜಾರಿಗಳು ಗಣೆ ಊದಿ ಭವಿಷ್ಯ ಹೇಳುತ್ತಾರೆ. ಕಾಡುಗೊಲ್ಲರ ಮಹಾಶರಣ ಜುಂಜಪ್ಪನ ಪ್ರತೀಕವಾದ ಈ ಗಣೆಗೆ ನಾನಾರೀತಿಯ ಬೆಳ್ಳಿಯ ಆಭರಣಗಳನ್ನು ತೊಡಿಸಿ, ಅಲಂಕರಿಸಿರುತ್ತಾರೆ. ಬಹುತೇಕ ಕಾಡುಗೊಲ್ಲರ ಹಟ್ಟಿಗಳಲ್ಲಿ ಇಂಥಹ ಗಣೆಗಳನ್ನು ಕಾಣಬಹುದು. "ಕಂಚಿನ ಗಣೆಯನ್ನು ಜುಂಜಪ್ಪ ಬಳಸುತ್ತಿದ್ದನೆಂದೂ ಗಣೆಯೂದಿ ತನ್ನ ದನಗಳನೆಲ್ಲ ಅವನು ತಿರುವುತ್ತಿದ್ದನೆಂದೂ ಕಾವ್ಯದಲ್ಲಿ ವರ್ಣನೆ ಬರುತ್ತದೆ. 'ಬಟ್ಟನ್ನ' ಬಡಮ್ಮೆಲ ಎಂಬ ಜುಂಜಪ್ಪನ ನೆಚ್ಚಿನ ಹೋರಿಯನ್ನು ಚೋಳೂರು ಪಾಳೆಯಗಾರರು ಕೋಟೆಯಲ್ಲಿ ಕೂಡಿ ಕೊಳ್ಳುತ್ತಾರೆ. ಮದಗದ ಗುಡ್ಡವನ್ನೇರಿ ಜುಂಜಪ್ಪ ತನ್ನ ಗಣೆಯನ್ನು ಊದ ತೊಡಗುತ್ತಾನೆ. ಆ ಗಣೆಯ ನಾದಕ್ಕೆ ರೋಮಂಚನಗೊಂಡ ಬಡಮ್ಮೆಲ ಕೋಟೆಯ ಮೇಲೆ ಹಾರಿ ತನ್ನ ಸ್ವಾಮಿಯನ್ನ ಸೇರಿಕೊಂಡ."[೩] ಎಂಬ ಅದ್ಭುತವಾದ ವರ್ಣನೆ ಜುಂಜಪ್ಪನ ಕಾವ್ಯದಲ್ಲಿ ಬರುತ್ತದೆ. ಆದ್ದರಿಂದ ಜುಂಜಪ್ಪನ ಪದಗಳನ್ನು ಹಾಡುವಾಗ ಗಣೆಯನ್ನು ಬಳಸುತ್ತಾರೆ. ಗಣೆಪದ ಹಾಡುವಾಗ ಸಾಮಾನ್ಯವಾಗಿ ಇಬ್ಬರಿರುತ್ತಾರೆ. ಒಬ್ಬನು ಗಣೆ ಊದುತ್ತಿದ್ದರೆ ಇನ್ನೊಬ್ಬನು ಅದರ ನಾದಕ್ಕೆ ತಕ್ಕಂತೆ ಜುಂಜಪ್ಪನ ಪದ ಹೇಳುತ್ತಾನೆ. ಕೆಲವೊಂದು ಪ್ರದೇಶದ ಪೂಜಾರಿಗಳು ಜುಂಜಪ್ಪನ ಗಣೆಯನ್ನು ಹೊತ್ತು ಊರೂರು ತಿರುಗಿ ಗಣೆಪದ ಹಾಡುತ್ತಾರೆ. ಕಾಡುಗೊಲ್ಲರಿಗೆ ಗಣೆ ಪವಿತ್ರ ವಾದ್ಯವಾಗಿರುವುದರಿಂದ. ಜುಂಜಪ್ಪನ ಮೇಲಿನ ಭಯ ಭಕ್ತಿಯಿಂದ ಬರಗಾಲ ಬಂದಾಗ, ಮಳೆಬಾರದಿದ್ದರೆ, ಹಟ್ಟಿಯಲ್ಲಿ ಕಷ್ಟ-ನಷ್ಟಗಳಾದರೆ ದೇವಸ್ಥಾನದ ಮುಂದೆ 'ಗಣೆ ಊದಿ'ಸುವ ಸಂಪ್ರಾದಾಯ ಕಾಡುಗೊಲ್ಲರಲ್ಲಿದೆ. ಆದರೆ ಮ್ಯಾಸಬೇಡರಲ್ಲಿ ಗಣೆ ಪದ್ಧತಿ ಕಂಡು ಬರುವುದಿಲ್ಲ.

೩. ಕಲಾವಿದರು

ರಾಜ್ಯಮಟ್ಟದಲ್ಲಿ ಹೆಸರುಗಳಿಸಿದ ಉತ್ತಮ ಕಲಾವಿದರು ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಕಂಡು ಬರುತ್ತಾರೆ. ಕೋಲಾಟ, ಭಜನೆ, ನಾಟಕ, ಕರಡಿ ಮಜಲು, ನಂದೀಧ್ವಜ, ವೀರಗಾಸೆ, ಬೇಡರಕುಣಿತ, ಕಗ್ಗದ ಪದ ಹಾಡುವುದು, ಮೋಡಿ, ಮೊಂಡರು, ಹಲಗೆ ಕುಣಿತ, ಮಣೇವು ಕುಣಿತ, ಬೇಟೆ, ಬಲೆನೇಯುವುದು, ರಂಗೋಲಿ ಹಾಕುವುದು, ಗಣೆ ಊದುವುದು, ಪಿಳ್ಳಂಗೋವಿ ನುಡಿಸುವುದು, ಕವಣೆ, ಮುದ್ದೆಕಲ್ಲಿ ತಯಾರಿಸುವುದು, ಕಂಬಳಿಗೆ ಕರೆಕಟ್ಟುವುದು, ಬಡಗಿತನ ಮಾಡುವುದು, ಮನೆಕಟ್ಟುವುದು, (ಹುಲ್ಲು) ಬಣವೆ ಮತ್ತು ಗುಡಿಸಲು ನಿರ್ಮಿಸುವುದು, ಜನಪದ ಹಾಡುಗಾರಿಕೆ, ಸೋಮನ ಕುಣಿತ, ಗಾವುಸಿಗಿಯುವ ಪೋತರಾಜರು-ಮೊದಲಾದ ಜನಪದ ಕಲೆಗಳಲ್ಲಿ ಪರಿಣಿತರಾದ ಕಲಾವಿದರು ಈ ಎರಡೂ ಸಮುದಾಯಗಳಲ್ಲಿ ಕಂಡುಬರುತ್ತಾರೆ.

ಹೊಳಲ್ಕೆರೆ ತಾಲ್ಲೂಕು ಗಂಗಸಮುದ್ರದ ಗೊಲ್ಲರ ಹಟ್ಟಿಯಲ್ಲಿ "ಶ್ರೀರಾಮ ಯುವಕ ಸಂಘದ ಕಲಾವಿದರು ಗಂಗಸಮುದ್ರ" ಎಂಬ ಹೆಸರಿನಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ರಾಜ್ಯಮಟ್ಟದಲ್ಲಿ ಪ್ರಶಸ್ತಿ ಮತ್ತು ಬಹುಮಾನಗಳನ್ನು ತಂದಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಯಾವುದೇ ಗೊಲ್ಲರಹಟ್ಟಿ ಮತ್ತು ಮ್ಯಾಸಬೇಡರ ಹಟ್ಟಿಗೆ ಹೋದರು ಅಲ್ಲಿ ಒಬ್ಬರಾದರೂ ಜನಪದ ಕಲಾವಿದರು ಸಿಗುತ್ತಾರೆ. ಕಲೆ ಮತ್ತು ಸಂಗೀತ ಕ್ಷೇತ್ರದಲ್ಲಿ ಕಾಟಪ್ಪನ ಹಟ್ಟಿ ಪಿ.ತಿಪ್ಪೇಸ್ವಾಮಿ, ಪರಶುರಾಂಪುರದ ಗುರುನಾಥ, ಅರೇಹಳ್ಳಿಹಟ್ಟಿ ಕೆ.ಎಸ್.ಮಲ್ಲಿಕಾರ್ಜುನಪ್ಪ, ಜಗಳೂರು ಬಿ.ವೀರಭದ್ರಸ್ವಾಮಿ, ಚಿತ್ರದುರ್ಗದ ಡಾ.ರಾಮಚಂದ್ರನಾಯಕ, ಬಂಗಾರಕ್ಕನಹಳ್ಳಿ ಕಮಲಮ್ಮ,

ಜಗಳೂರು ಪಾಪಮ್ಮ, ಗೋಸಿಕೆರೆ ಹಾರ್ಮೋನಿಯಂ ಮಾಸ್ಟರ್ ಚಿತ್ರಲಿಂಗಪ್ಪ, ಕಾಟಪ್ಪನಹಟ್ಟಿ ಬೈಯ್ಯಜ್ಜ, ಮರಿಯಮ್ಮನಹಳ್ಳಿ ಕೆ.ನಾಗರತ್ನಮ್ಮ, ಲೋಕಸಭಾ ಸದಸ್ಯರಾದ ಶಶಿಕುಮಾರ್, ಮುಂತಾದ ನೂರಾರು ಕಲಾವಿದರನ್ನು ಗುರುತಿಸಬಹುದು.

೪. ನಾಟಕ

ಯುಗಾದಿ, ಕಾರ್ತೀಕ, ದಸರಾ ಮೊದಲಾದ ಹಬ್ಬಗಳು ಮತ್ತು ಸುಗ್ಗಿಯ ಕೆಲಸ ಮುಗಿದ ಮೇಲೆ ನಾಟಕ ಆಡುವ ಕಲೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡು ಬರುತ್ತವೆ. ಪ್ರಾಚೀನ ಕಾಲದಿಂದಲೂ ಹಟ್ಟಿಗಳಲ್ಲಿ ಮನರಂಜನೆ ಒದಗಿಸಿ ಕೊಂಡು ಬರುತ್ತಿರುವ ಹವ್ಯಾಸಿ ಕಲೆಯೆಂದರೆ ನಾಟಕ. ಜನಪದ ಕಲೆಗಳಲ್ಲಿ ನಾಟಕವೂ ಒಂದಾಗಿರುವುದರಿಂದ ಬಹುತೇಕ ಹಟ್ಟಿಗಳಲ್ಲಿ 'ಬಯಲಾಟ' ಪ್ರದರ್ಶನಗಳೇ ಹೆಚ್ಚು. ಪಾತ್ರಗಳಿಗೆ ಆಯ್ಕೆಯಾದ ಕಲಾವಿದರು ಅನೇಕ ತಿಂಗಳುಗಳ ಕಾಲ ಪ್ರತಿ ದಿನ ಭಾಗವತ ಅಥವಾ ಸಂಗೀತ ನಿರ್ದೇಶಕರ ಮುಖಾಂತರ ತರಬೇತಿ ಪಡೆದು ನಾಟಕದ ಸಿದ್ಧತೆ ಮಾಡಿ ಕೊಳ್ಳುತ್ತಾರೆ. ಬಯಲಾಟವಾದರೆ ಇವರು ಆಯ್ಕೆ ಮಾಡುವ ನಾಟಕದ ಕಥಾವಸ್ತುಗಳೆಂದರೆ ರಾಮಾಯಾಣ ಮತ್ತು ಮಹಾಭಾರತದಿಂದ ಆಯ್ಕೆಮಾಡಿಕೊಂಡ ಪ್ರಸಂಗಗಳೇ ಹೆಚ್ಚು.

ಕುರುಕ್ಷೇತ್ರ, ಕೃಷ್ಣಸಂಧಾನ, ಕೃಷ್ಣಪಾರಿಜಾತ, ಸೀತಾಪಹರಣ, ಕರಿಭಂಟನ ಕಾಳಗ, ರತಿಕಲ್ಯಾಣ, ಸತ್ಯಹರಿಶ್ಚಂದ್ರ, ದ್ರೌಪದೀ ವಸ್ತ್ರಾಪಹರಣ, ವೀರಅಭಿಮನ್ಯು, ವಿರಾಟಪರ್ವ, ನೃಪತುಂಗ, ದುರ್ಗದ ದುರಂತ, ನಿಡಗಲ್ಲುದುರಂತ, ಜಗಲೂರಜ್ಜ, ಗಂಡುಗಲಿ ಮದಕರಿನಾಯಕ, ದಳವಾಯಿ ಮುದ್ದಣ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮೊದಲಾದ ಪೌರಾಣಿಕ ನಾಟಕಗಳಿಗೆ ಹೆಚ್ಚು ಮಹತ್ವ ಕೊಡುತ್ತಾರೆ. ಕಲಾವಿದರೂ ಕೂಡ ಅಷ್ಟೇನಿಷ್ಟೆಯಿಂದ ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬಿ ಅಭಿನಯಿಸುತ್ತಾರೆ.

ಪ್ರಸ್ತುತ ಈ ಎರಡೂ ಜನಾಂಗದಲ್ಲಿ ಪೌರಾಣಿಕ ನಾಟಕಗಳ ಮಹತ್ವ ಕಡಿಮೆಯಾಗಿ, ಸಾಮಾಜಿಕ ನಾಟಕಗಳಿಗೆ ಹೆಚ್ಚು ಒಲವು ತೋರಿಸಿ ತಾಯಿ ಕರುಳು, ಮಾಂಗಲ್ಯಭಾಗ್ಯ, ಸೇಡಿನ ಸಿಡಿಲು, ತವರಿನ ತೊಟ್ಟಿಲು, ಅತ್ತಿಗೆಯ ಕಣ್ಣೀರು, ಬಸ್ ಕಂಡಕ್ಟರ್ ಮೊದಲಾದ ಸಾಮಾಜಿಕ ನಾಟಕಗಳನ್ನು ಪ್ರದರ್ಶನ ಮಾಡುತ್ತಾರೆ. ಬಯಲಾಟ ನಾಟಕಗಳಲ್ಲಿ ಸ್ತ್ರೀಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. ಆದರೆ ಸಾಮಾಜಿಕ ನಾಟಕಗಳಲ್ಲಿ ಸ್ತ್ರೀಪಾತ್ರಕ್ಕೆ ಸ್ತ್ರೀಕಲಾವಿದರನ್ನೇ ಹಿರಿಯೂರು, ಹುಳಿಯಾರ, ಕೂಡ್ಲಿಗಿ, ಹೊಸಪೇಟೆ, ಬಳ್ಳಾರಿ, ಚಿತ್ರದುರ್ಗ ದಾವಣಗೆರೆ ಮೊದಲಾದ ಊರುಗಳಿಂದ ನಾಟಕದ ಹೆಂಗಸರನ್ನು ಕರೆಯಿಸಿ ನಾಟಕವಾಡುವ ಕಲಾವಿದರು ಹಟ್ಟಿಗಳಲ್ಲಿದ್ದಾರೆ. ಕಥೆ ಮತ್ತು ಸಂಗೀತಕ್ಕೆ ಮಹತ್ವ ಕೊಡದೆ ಬರೀ ಸಿನಿಮಾ ಹಾಡಿಗೆ ತಕ್ಕಂತೆ ಕುಣಿಯುವ ಪ್ರವೃತ್ತಿ ಸಾಮಾಜಿಕ ನಾಟಕಗಳಲ್ಲಿ ಕಂಡು ಬರುವುದರಿಂದ ಕಥೆಯ ಪ್ರಾರಂಭ ಮತ್ತು ಮುಕ್ತಾಯ ಹೇಗಿದೆ ಎಂದು ಗುರುತಿಸಲಿಕ್ಕೆ ಕಷ್ಟವಾಗುತ್ತದೆ. ಆದರೂ ಸಹ ಬಯಲಾಟ ಮತ್ತು ಸಾಮಾಜಿಕ ನಾಟಕಗಳಲ್ಲಿ ಬಹುದೊಡ್ಡ ಹೆಸರು ಮಾಡಿದ ಕಲಾವಿದರು ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡು ಬರುತ್ತಾರೆ.

ಸರಳವಾದ ರಂಗಸಜ್ಜಿಕೆ ನಿರ್ಮಾಣ ಮಾಡಿ ಬಯಲಾಟ ಆಡುವುದರ ಜೊತೆಗೆ, ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಿಗೆ ಹಿರಿಯೂರು, ಹರ್ತಿಕೋಟೆ, ಹುಳಿಯಾರ, ಚಳ್ಳಕೆರೆ, ಪರಶುರಾಂಪುರ, ಮದ್ದನಕುಂಟೆ ಮೊದಲಾದ ಊರುಗಳಿಂದ ಸೀನು (ರಂಗ ಸಜ್ಜಿಕೆ) ತರಿಸಿಕೊಂಡು ನಾಟಕವಾಡುವ ಕಲಾವಿದರೇ ಈಗ ಹೆಚ್ಚಾಗಿ

ಕಂಡು ಬರುತ್ತಾರೆ. ಸಂಗೀತ ಮತ್ತು ನಾಟಕ ನಿರ್ದೇಶನಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಪರಶುರಾಂಪುರದ ಗುರನಾಥ ಮತ್ತು ಕಾಟಪ್ಪನಹಟ್ಟಿ ಪಿ.ತಿಪ್ಪೇಸ್ವಾಮಿಯವರು ನಾಟಕ ಕಲೆಯಲ್ಲಿ ಬಹಳ ಹೆಸರಾಗಿದ್ದಾರೆ. ಸಿ.ಸದ್ಯೋಜಾತಮೂರ್ತಿಯವರು ರಚಿಸಿದ 'ಶ್ರೀಗುರು ತಿಪ್ಪೇರುದ್ರಸ್ವಾಮಿ' ಎಂಬ ಭಕ್ತಿ ಪ್ರಧಾನ ಸಂಗೀತ ನಾಟಕ, ಪ್ರೊ.ಸಾಣೇಕೆರೆ ಸಣ್ಣೋಬಯ್ಯನವರು ರಚಿಸಿದ 'ಅತ್ತಿಗೆಯ ಕಣ್ಣೀರು' ಎಂಬ ಸಾಮಾಜಿಕ ನಾಟಕ, ಕಾಟಪ್ಪನಹಟ್ಟಿ ಪಿ.ತಿಪ್ಪೇಸ್ವಾಮಿಯವರು ಸಂಗೀತ ಮತ್ತು ನಿರ್ದೇಶನ ನೀಡಿದ 'ಜಗಲೂರಜ್ಜ' ಮತ್ತು 'ಮದಕರಿನಾಯಕ' ಎಂಬೆರೆಡು ನಾಟಕಗಳು ಈ ಜಿಲ್ಲೆಯಲ್ಲಿ ಬಹಳ ಹೆಸರುಗಳಿಸಿವೆ. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ, ನಾಟಕ ನಿರ್ದೇಶನದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಅದರಲ್ಲೂ ಮ್ಯಾಸಬೇಡರಾದ ಸಿ.ಜಿ.ಕೃಷ್ಣಸ್ವಾಮಿಯವರು ಚಿತ್ರದುರ್ಗ ಜಿಲ್ಲಾ ಚಳ್ಳಕೆರೆಯವರು.

೫. ಕೋಲಾಟ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಪ್ರಚಲಿತವಿರುವ ಒಂದು ಪ್ರಮುಖ ಜನಪದ ಕಲೆ ಕೋಲಾಟ. ಬೇಸಿಗೆಯ ಬಿಡುವಿನ ವೇಳೆಯಲ್ಲಿ ಮತ್ತು ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಈ ಕೋಲಾಟ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ಈ ಎರಡೂ ಜನಾಂಗದ ಯಾವುದೇ ಹಟ್ಟಿಗಳಿಗೆ ಹೋದರು ಅಲ್ಲಿ 'ಕೋಲಾಟ'ದ ಕಲಾವಿದರನ್ನು ಕಾಣಬಹುದು. ಸುಮಾರು ಹತ್ತಕ್ಕೂ ಹೆಚ್ಚು ವೈವಿಧ್ಯಮಯ ಕೋಲಾಟದ ಪ್ರಕಾರಗಳಿದ್ದರೂ 'ಹೆಜ್ಜೆ ಕೋಲಾಟ' ಬಹು ಪ್ರಸಿದ್ಧಿ ಪಡೆದಿದೆ. ಚಡ್ಡಿ ಚಲ್ಲಣ ಅಥವಾ ಕಚ್ಚೆಪಂಚೆ ಕಟ್ಟಿಕೊಂಡ ಕಲಾವಿದರು, ಸುಮಾರು ಒಂದು ಅಡಿ ಉದ್ದದ ಎರಡು ಕೋಲುಗಳನ್ನು ಹಿಡಿದು, ಕಾಲಿಗೆ ಗೆಜ್ಜೆಕಟ್ಟಿಕೊಂಡಿರುತ್ತಾರೆ. ಪ್ರಾರ್ಥನೆಯೊಂದಿಗೆ ಕೋಲಾಟ ಪ್ರಾರಂಭವಾಗಿ, ಹಿಮ್ಮೇಳ ಮತ್ತು ಮುಮ್ಮೇಳದೊಂದಿಗೆ ಬರುವ ಕೋಲಾಟದ ಪದಗಳು ಪ್ರೇಮ, ಹಾಸ್ಯ, ಕರುಣೆ, ಭಕ್ತಿ ಮೊದಲಾದ ರಸ ಪ್ರಕರಣಗಳು ಸ್ವಾರಸ್ಯವಾಗಿರುತ್ತವೆ. ಪ್ರತಿಯೊಬ್ಬರೂ ಒಬ್ಬರ ಕೋಲಿಗೆ ಮತ್ತೊಬ್ಬರ ಕೋಲನ್ನು ತಾಕಿಸುತ್ತಾ ಸುತ್ತುವುದು, ಗೆಜ್ಜೆ ಕಾಲಿನ ಹೆಜ್ಜೆಗಳು ತುಂಬ ಆಕರ್ಷಣೀಯವಾಗಿರುತ್ತದೆ. ಕೋಲಾಟ ನೃತ್ಯ ಜನಪದ ಕಲೆಯಾದರೆ, ಕೋಲಾಟದ ಪದ ಜನಪದ ಸಾಹಿತ್ಯದಲ್ಲಿ ಬರುತ್ತದೆ. ಆದ್ದರಿಂದ 'ಕೋಲಾಟ' ಕಲೆ ಮತ್ತು ಸಾಹಿತ್ಯ ಎರಡೂ ಅಂಶಗಳನ್ನು ಒಳಗೊಂಡಿರುತ್ತದೆ.

ಕೋಲಾಟದಲ್ಲಿ ಕೋಲುಗಳೇ ಪ್ರಧಾನವಾಗಿರುವುದರಿಂದ, ಹಾಡು ಮತ್ತು ನೃತ್ಯವೂ ಇದರಲ್ಲಿ ಸೇರಿರುವುದರಿಂದ ಈ ಕಲೆಗೆ ಮತ್ತುಷ್ಟು ಶೋಭೆ ಬಂದಿದೆ. ಹಬ್ಬ, ಜಾತ್ರೆ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬಹಳ ಆಸಕ್ತಿಯಿಂದ ಕೋಲಾಟ ಆಡುತ್ತಾರೆ. ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಕಂಪಳರಂಗಸ್ವಾಮಿ ಜಾತ್ರೆಯಲ್ಲಿ ಸುತ್ತ ಮುತ್ತಲಿನ ಮ್ಯಾಸಬೇಡರು ಕೋಲಾಟ ಪ್ರದರ್ಶನ ಮಾಡಲು ಈ ದೇವರ ಜಾತ್ರೆಗೆ ಬರುತ್ತಾರೆ. ಈ ಮ್ಯಾಸಬೇಡರ ಕೋಲಾಟ ಪದಗಳಲ್ಲಿ ಜಗಳೂರು ಪಾಪನಾಯಕ ಮತ್ತು ಗಾದರಿಪಾಲನಾಯಕ ದೇವರುಗಳ ಕಥೆಯನ್ನು ಒಳಗೊಂಡಿರುತ್ತವೆ. ಅದೇ ರೀತಿ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಜಾತ್ರೆಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಕೋಲಾಟ ನೃತ್ಯ ಪ್ರದರ್ಶನ ಮಾಡುತ್ತಾರೆ. ಹೊಳಲ್ಕೆರೆ ತಾಲ್ಲೂಕು ಗಂಗಸಮುದ್ರದ ಗೊಲ್ಲರ ಹಟ್ಟಿಯಲ್ಲಿ ಕಾಡುಗೊಲ್ಲರ ಒಂದು ಕೋಲಾಟದ ತಂಡವೇ ಇದೆ. ಚಳ್ಳಕೆರೆ ತಾಲ್ಲೂಕು ಕ್ಯಾತಪ್ಪನ ಜಾತ್ರೆ, ಗೌರಸಮುದ್ರ ಮಾರಮ್ಮನ ಜಾತ್ರೆಗಳಲ್ಲಿ ಕಾಡುಗೊಲ್ಲರು ಕೋಲಾಟ ನೃತ್ಯ ಪ್ರದರ್ಶನ ಮಾಡುತ್ತಾರೆ. ಕೋಲಾಟ ಕಲೆಗೆ ಜನಪದ ಹಾಡುಗಳು ಬಹಳ

ಮುಖ್ಯವಾಗಿರುವುದರಿಂದ ಕಾಡುಗೊಲ್ಲರು ಕೃಷ್ಣಲೀಲೆಯನ್ನು ತುಂಬ ಸೊಗಸಾಗಿ ಹಾಡುತ್ತ ಕೋಲಾಕುವ ನೃತ್ಯ ಆಕರ್ಷಣೀಯವಾಗಿರುತ್ತದೆ.

ಚಳ್ಳಕೆರೆ ತಾಲ್ಲೂಕು ಕಾಟಪ್ಪನಹಟ್ಟಿ ಮ್ಯಾಸಬೇಡರ ಬೈಯ್ಯಜ್ಜ, ಸಾಣೀಕೆರೆಯ ಪಾದಜ್ಜಗಳ ಕರಿಯಪ್ಪ ಮತ್ತು ಸೂರಪ್ಪ ಎಂಬುವರು ಕೋಲಾಟ ನೃತ್ಯದಲ್ಲಿ ಬಹಳ ಹೆಸರಾಗಿದ್ದರಂತೆ "ಗೋಕುಲದಲ್ಲಿ ಶ್ರೀಕೃಷ್ಣನ ಜನನವಾದಗ ಯಾದವರು ಕೋಲಾಟದ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದುದು ಮತ್ತು ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲುಗಳೊಂದಿಗೆ ಆಟವಾಡಿದುದು ಇವೆಲ್ಲ ಕೋಲಾಟ ಪ್ರಾಚೀನವಾದ ಕಲೆ ಎಂಬುದನ್ನು ಶೃತಪಡಿಸುತ್ತವೆ"[೪] ಆದ್ದರಿಂದ ಮ್ಯಾಸಬೇಡರಿಗಿಂತ ಕಾಡುಗೊಲ್ಲರಲ್ಲಿ ಕೋಲಾಟ ನೃತ್ಯ ಹೆಚ್ಚು ಬಳಕೆಯಲ್ಲಿದೆ.

ಕೋಲಾಟ ಆಡುವಾಗ ಕಲಾವಿದರು ಬಹಳ ಉತ್ಸಾಹಿಭರಿತರಾಗಿರುತ್ತಾರೆ. ಮಧ್ಯೆ ಮಧ್ಯೆ 'ಥೆಯ್ಯೆ' 'ಉಡದ್ಯೆಯ್ಯ' ಎಂಬೆರೆಡು ಶಬ್ಧಗಳನ್ನು ಕಲಾವಿದರಲ್ಲಿ ಒಬ್ಬಿಬ್ಬರು ದನಿ ಮಾಡುತ್ತಾರೆ. ಪ್ರತಿ ಹಾಡು ಮತ್ತು ಕೋಲಾಟದ ಗತ್ತು ಮುಗಿಯುತ್ತಿದ್ದಂತೆ ಮುಗಿತಾಯದ ನುಡಿ ಹೇಳುತ್ತಾರೆ. ನಾಡಿನಾದ್ಯಂತ ಪ್ರಚಲಿತವಿರುವ ಪ್ರಮುಖವಾದ ಹಾಗೂ ಅತ್ಯಂತ ಜನಪ್ರಿಯವಾದ ಈ ಕಲೆಯನ್ನು ಮ್ಯಾಸಬೇಡ ಮತ್ತು ಕಾಡುಗೊಲ್ಲರು ಉಳಿಸಿ, ಬೆಳೆಸಿಕೊಂಡು ಬರುತ್ತಿದ್ದಾರೆ. ಇವರಿಗೆ ಕೋಲಾಟದ ನೃತ್ಯ ಬಿಟ್ಟರೆ ಇನ್ನಾವುದೇ ನೃತ್ಯ ಈ ಎರಡೂ ಬುಡಕಟ್ಟುಗಳಲ್ಲಿ ಕಂಡು ಬರುವುದಿಲ್ಲ. ಆದ್ದರಿಂದ ಸರ್ಕಾರ ಅಥವಾ ವಿಶ್ವವಿದ್ಯಾಲಯಗಳು ಈ ಕೋಲಾಟ ಎಂಬ ಜನಪದ ಕಲೆ ಉಳಿಸಿಕೊಳ್ಳುವುದರ ಜೊತೆಗೆ, ಕೋಲಾಟದ ಪದಗಳನ್ನು ಸಂಗ್ರಹಿಸುವುದು ಒಳ್ಳೆಯದು.

೬. ಭಜನೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಕೆಲವೊಂದು ಹಟ್ಟಿಗಳಲ್ಲಿ ಭಜನೆ ಮಾಡುವ ತಂಡಗಳು ಕಂಡು ಬರುತ್ತವೆ. ರೈತಾಪಿ ಜನರಿಗೆ ಬಿಡುವು ಸಿಕ್ಕಾಗ ವಯಸ್ಸಿನ ಭೇದವಿಲ್ಲದೆ ಸಾಮೂಹಿಕವಾಗಿ ಕುಳಿತು ಸಂಜೆ ಹೊತ್ತಿನಲ್ಲಿ ಭಜನೆ ಮಾಡುತ್ತಾರೆ. ಭಜನೆಗಾಗಿಯೇ ಯಾವತರಹದ ವೇಷ ಭೂಷಣಗಳೇನೂ ಇವರಲ್ಲಿ ಕಂಡು ಬರುವುದಿಲ್ಲ. ಸರಳವಾದ ಉಡುಪಿನಲ್ಲಿ ಕುಳಿತು ಹಣೆಗೆ ವಿಭೂತಿ ಕುಂಕುಮ ಇಟ್ಟುಕೊಂಡು ಅವರವರ ಧರ್ಮ ಮತ್ತು ದೇವರ ವಿಷಯವಾಗಿ ಪದಗಳನ್ನು ಕಟ್ಟಿ ಹಾಡುತ್ತಾರೆ. ಪ್ರತಿಯೊಂದು ಹಾಡಿನಲ್ಲಿ ಆಧ್ಯಾತ್ಮಿಕ ತತ್ವಗಳು, ಹುಟ್ಟು ಸಾವು ಮೊದಲಾದ ಪರಮಾರ್ಥಿಕ ಅಂಶಗಳನ್ನು ಒಳಗೊಂಡಿರುತ್ತವೆ. ತಂಬೂರಿ, ತಾಳ, ಡಕ್ಕಿ ಗೆಜ್ಜೆ, ಕಂಬಿ ಮುಂತಾದ ವಾದ್ಯಗಳ ಹಿನ್ನೆಲೆಯಲ್ಲಿ ದೇವರ ಸ್ತುತಿ, ತತ್ವಗೀತೆ ಮೊದಲಾದ ಪದಗಳನ್ನು ಹಾಡುತ್ತ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತಾರೆ. ಕೆಲವರು ಭಜನೆ ಮಾಡುತ್ತಿದ್ದರೆ ಉಳಿದವರು ಸುತ್ತ ಕುಳಿತು ಕೇಳುತ್ತಾರೆ. ಭಜನೆಗಳಲ್ಲಿ 'ಶಿವಭಜನೆ' ಮತ್ತು 'ಹರಿಭಜನೆ' ಎಂಬೆರೆಡು ಭಜನೆಗಳು ಉಂಟು. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಶಿವಭಜನೆಗೆ ಬಹಳ ಮಹತ್ವ ಕೊಟ್ಟು ಶಿವನನ್ನು ಕುರಿತು ಭಜನೆ ಪದ ಹಾಡುತ್ತಾರೆ.

ಶಿವ ಶಿವ ಎಂದರೆ ಭಯವಿಲ್ಲ
ಶಿವನಾಮಕೆ ಸಾಟಿ ಬೇರಿಲ್ಲ।
ಶಿವ ಭಕ್ತನಿಗೆ ನರಕ ವಿಲ್ಲಾ
ಜನಮ ಜನುಮದ ಕಾಟವಿಲ್ಲಾ ॥೧॥

ಎಂಬ ಶಿವನಾಮ ಪದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಭಜನ ತಂಡಗಳಲ್ಲಿ ಬಹಳ ಹೆಸರಾಗಿದೆ. ಭಜನೆ ಮಾಡುವಾಗ ಅವರದೆ ಆದ ಕೆಲವೊಂದು ಸಾಮಾಜಿಕ ನಿಯಮಗಳನ್ನು ಪಾಲಿಸುತ್ತಾರೆ. ಜಾತಿ ಭೇದವಿಲ್ಲದೆ ಪ್ರಸಾದ ಸ್ವೀಕರಿಸುತ್ತಾರೆ. ಭಜನೆ ತಂಡಗಳಲ್ಲಿ ಕೆಲವರು 'ಗುರುಬೋಧ' ತೆಗೆದು ಕೊಂಡಿರುತ್ತಾರೆ. ಅವರು ಗಾಂಜಾ ಮತ್ತು ಮಧ್ಯಪಾನ ಮಾಡುತ್ತಾರೆ. ಅಲಾಲ್ ಮಾಡಿದ ಮಾಂಸವನ್ನು ಮಾತ್ರ ತಿನ್ನುತ್ತಾರೆ. ಆದರೂ ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ, ಕೈಯಲ್ಲಿ ತಂಬೂರಿ ಹಿಡಿದು ಕೆಲವರು ಕಾವಿ ಬಟ್ಟೆ ತೊಟ್ಟಿರುತ್ತಾರೆ.

ಕಾರ್ತೀಕ, ಶ್ರಾವಣ, ಶಿವರಾತ್ರಿ ಮತ್ತು ಉತ್ಸವಗಳಲ್ಲಿ ಭಜನೆ ಕಾರ್ಯಕ್ರಮ ವಿರುತ್ತದೆ. ಹಟ್ಟಿಯಲ್ಲಿ ಯಾರಾದರೂ ಮರಣ ಹೊಂದಿದರೆ ಬಂಧು ಬಳಗ ಸೇರುವತನಕ ಶವದ ಬಳಿ ಭಜನೆ ಮಾಡುತ್ತಾರೆ. ವಿಷ ಜಂತುಗಳು ಕಚ್ಚಿದಾಗ ನಿದ್ರೆಮಾಡ ಬಾರದೆಂಬ ನಿಯಮವಿರುವುದರಿಂದ ರಾತ್ರಿ ಕಳೆಯುವುದಕ್ಕೆ ಭಜನೆ ತಂಡದವರನ್ನು ಕರೆಯಿಸಿ ಭಜನೆ ಮಾಡಿಸುತ್ತಾರೆ. ಬಹುತೇಕ ಭಜನೆ ಪದಗಳು ಹುಟ್ಟು, ಸಾವು, ನಶ್ವರತೆ ಮೊದಲಾದ ಆಧ್ಯಾತ್ಮಿಕ ಅಂಶಗಳನ್ನು ಕುರಿತ ಪದಗಳನ್ನು ತುಂಬ ಅರ್ಥಪೂರ್ಣವಾಗಿ ಹಾಡುತ್ತಾರೆ.

ಕಾಯಕ ಯೋಗಿ ಸದ್ಗುರು ರುದ್ರನ
ನಿತ್ಯವೂ ಜಪಿಸಣ್ಣ!
ತಿಪ್ಪೇರುದ್ರರ ಗುರುಕೃಪೆ ದೊರೆತರೆ
ಬಾಳೇ ಸಾಕಣ್ಣ ||ಪ||

ಸೇವೆ ತ್ಯಾಗ ಹರನಿಗೆ ಅರ್ಪಣೆ
ಅರಿತು ಬಾಳಣ್ಣ,
ದಾನ ಧರ್ಮ ಮಾಡಿದ ಪುಣ್ಯವು
ಮುಕ್ತಿಗೆ ಬೇಕಣ್ಣ.

ನರಕ ಸ್ವರ್ಗ, ಇಲ್ಲೇ ಎಲ್ಲವೂ
ಬಾಳಿ ಬದುಕಣ್ಣ,
ಹುಟ್ಟು, ಸಾವು ಜೀವನ ಚಕ್ರವು
ಎಂದು ತಿಳಿಯಣ್ಣ.

ನಾನು ನನ್ನದು ಎಂಬ ಮೋಹವ
ಬಿಟ್ಟು ಬಾಳಣ್ಣ,
ಮಾನವನಾಗಿ ಹುಟ್ಟಿದ ಮೇಲೆ
ಮೋಕ್ಷವ ಪಡೆಯಣ್ಣ.

ಎಂಬ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯ ಭಜನೆ ಪದ ಆಧ್ಯಾತ್ಮಿಕ ಚಿಂತನೆಯನ್ನು ಒಳಗೊಂಡಿದೆ. ಶಿವರಾತ್ರಿ, ರಾಮನವಮಿ ಹಬ್ಬ ಮತ್ತು ಉತ್ಸವಗಳಲ್ಲಿ ಭಜನೆ ತಂಡಗಳಿಗೆ ಬಹಳ ಬೇಡಿಕೆಯಿದೆ. ವಾದ್ಯಗಾರರು ಮಧ್ಯ ಕುಳಿತು ವಾದ್ಯ ನುಡಿಸಿದರೆ ಒಳ್ಳೆಯ ಕಂಠವಿರುವ ಕಲಾವಿದರು ಹಾಡುತ್ತಾರೆ. ಭಜನೆ ಪ್ರಾರಂಭ ಮತ್ತು

ಕೊನೆಗೆ ಶಿವ ಭಜನೆಯಾದರೆ "ಜಯಾ ಜಯ ನಮಃ ಪಾರ್ವತೀ ಪತೇ" ಎಂದು ಮುಖಂಡನಾದವನು ಹೇಳಿದರೆ ಉಳಿದವರು "ಹರರ ಮಹಾದೇವ".... ಎಂದು ಒಟ್ಟಿಗೆ ಹೇಳುತ್ತಾರೆ. ಶ್ರಾವಣ, ಶಿವರಾತ್ರಿ ತಿಂಗಳಲ್ಲಿ ಈ ಎರಡೂ ಜನಾಂಗ ವಿಶೇಷ ಭಜನೆ ಮಾಡುತ್ತಾರೆ. ಕೆಲವೊಂದು ಭಜನೆ ತಂಡಗಳು 'ಹಟ್ಟಿ'ಯ ದೇವಸ್ಥಾನದ ಜೊತೆಗೆ ಹಟ್ಟಿ ಅಥವಾ ಗ್ರಾಮದ ಬೀದಿಗಳಲ್ಲಿ ಭಜನೆ ಮಾಡಿಕೊಂಡು ಹೋಗುತ್ತಾರೆ. ಇದಕ್ಕೆ ಊರಾಡುವುದು ಎಂದು ಕರೆಯುತ್ತಾರೆ. ನಂತರ ಭಜನೆ ಮಂದಿರ ಅಥವಾ ದೇವಾಲಯಕ್ಕೆ ಬಂದು ಮತ್ತೇ ಒಂದೆರಡು ಪದ ಹಾಡಿ, ಪ್ರಸಾದ ಸ್ವೀಕರಿಸಿ ಭಜನೆ ಮುಕ್ತಾಯ ಮಾಡುತ್ತಾರೆ. ಈ ಭಜನೆ ಸಾಮೂಹಿಕವಾಗಿ ಮಾಡುವ ಒಂದು ಜನಪದ ಕಲೆಯಾಗಿರುವುದರಿಂದ, ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ವಾಸಿಸುವ ಹಟ್ಟಿಗಳಲ್ಲಿ ಹಲವಾರು ಭಜನೆ ತಂಡಗಳು ಕಂಡು ಬರುತ್ತವೆ. ಹೊಳಲ್ಕೆರೆ ತಾಲ್ಲೂಕು ಗಂಗಸಮುದ್ರದ ಗೊಲ್ಲರಹಟ್ಟಿಯಲ್ಲಿ 'ಶ್ರೀರಾಮ ಯುವಕ ಸಂಘದ ಕಲಾವಿದರು ಗಂಗಸಮುದ್ರ' ಎಂಬ ಹೆಸರಿನಲ್ಲಿ ಭಜನೆ ತಂಡವಿದೆ. ಹಿರಿಯೂರು ತಾಲ್ಲೂಕು ಕೂಡ್ಲಿಗಿ ಸಂಗಮೇಶ್ವರ ದೇವಸ್ಥಾನ; ಚಿತ್ರದುರ್ಗದ ಶ್ರೀ ಸದ್ಗುರು ಕಬೀರಾನಂದಾಶ್ರಮ; ಹೊಸದುರ್ಗ ತಾಲ್ಲೂಕು ದೇವಪುರದ ಹಾಲುರಾಮೇಶ್ವರದ ದೇವಸ್ಥಾನ; ಮೊಳಕಾಲ್ಮೂರು ತಾಲ್ಲೂಕು ಕೊಂಡ್ಲಹಳ್ಳಿ ಹತ್ತಿರ ಬಿಳಿನೀರು ಚಿಲುಮೆ ತಿಪ್ಪೇರುದ್ರಸ್ವಾಮಿ ದೇವಸ್ಥಾನ; ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ, ತಿಪ್ಪೇರುದ್ರಸ್ವಾಮಿಯ ಹೊರಮಠ; ಹೆಗ್ಗೆರೆ ಕೆಂಚಾವಧೂತರ ಮಠ; ಸಾಣೀಕೆರೆ, ಗೋಸಿಕೆರೆ, ದೊಡ್ಡಚಲ್ಲೂರು, ವಡೇರಹಳ್ಳಿ, ಪರಶುರಾಂಪುರ ಮೊದಲಾದ ಊರುಗಳ ಧಾರ್ಮಿಕ ಕೇಂದ್ರ ಮತ್ತು ಮಠಗಳಲ್ಲಿ ಭಜನೆ ಮಾಡುವ ತಂಡಗಳಿವೆ.

ಪ್ರಸ್ತುತ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ 'ಭಜನೆ'ಯ ಮಹತ್ವ ಕಡಿಮೆಯಾಗುತ್ತಿದೆ. ಭಜನೆ ಮಾಡುವ ಕಲಾವಿದರೂ ಕೂಡ ಭಂಗಿ ಅಥವಾ ಗಾಂಜಾ ಮತ್ತು ಮಧ್ಯಪಾನ ಚಟಕ್ಕೆ ಬಲಿಯಾಗಿ ದೇವರು ಮತ್ತು ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದಾರೆ.

೭.. ಮಣೇವು ಕುಣಿತ

ಜನಪದ ಕಲೆಗಳಲ್ಲಿ ಮಣೇವು ಕುಣಿತ ಒಂದಾಗಿದೆ. ಯಾವುದೇ ದೇವರ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಮಣೇವು ಕುಣಿತ ಒಂದು ಧಾರ್ಮಿಕ ಆಚರಣೆಯಾಗಿರುತ್ತದೆ. ಆದ್ದರಿಂದ ಈ ಜನಪದ ಕಲೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯತ್ಯಾಸವನ್ನು ಒಳಗೊಂಡಿರುತ್ತದೆ. ಎಲ್ಲಾ ಜಾತಿ ಜನಾಂಗದಲ್ಲಿ ಈ ಕಲೆ ಕಂಡು ಬಂದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮಣೇವು ಕುಣಿತ ಭಿನ್ನವಾಗಿರುತ್ತದೆ. ದೇವರ ಕಾರ್ಯಕ್ರಮಗಳು ನಡೆಯುತ್ತಿರುವಾಗಲೆ ಮಧ್ಯೆ ಮಧ್ಯೆ ಮಣೇವು ಕುಣಿತದ ಸಂಪ್ರದಾಯ ಇಟ್ಟುಕೊಂಡಿರುತ್ತಾರೆ. ದೇವರು ಗುಡಿಯಿಂದ ಹೊರ ಬಂದಾಗ, ನದಿಯಲ್ಲಿ ಪೂಜೆ ಮಾಡಿದಾಗ, ಹಟ್ಟಿಯ ಹುದಿಗೆ ದೇವರು ಬಂದಾಗ, ಮಹತ್ವವಾದ ದೇವರ ಕಾರ್ಯಕ್ರಮಗಳಿದ್ದಾಗ ಮಣೇವು ಕುಣಿತ ಇದ್ದೇ ಇರುತ್ತದೆ.

ಮಡಿವಾಳರು ತಂದ ಮಡಿಬಟ್ಟೆ ಇಲ್ಲವೇ ಕರಿಕಂಬಳಿಯನ್ನು ಮಡಿಚಿ ಪೂರ್ವ ಪಶ್ಚಿಮಕ್ಕೆ ಮುಖ ಮಾಡಿ ಗದ್ದಿಗೆ ಹಾಸಿ ಅದರ ಮೇಲೆ ಬೆಲ್ಲ, ಬಾಳೆಹಣ್ಣು, ತೆಂಗಿನಕಾಯಿ, ಹಲಸಿನಹಣ್ಣಿನ ತೊಳೆಗಳು, ಮಂಡಕ್ಕಿ ಮೊದಲಾದ ಸಾಮಾನುಗಳನ್ನು ಮೂರು ಅಥವಾ ಐದು ಕುಪ್ಪೆಗಳನ್ನಾಗಿ ಮಾಡಿ ಗದ್ದುಗೆಯ ಮೇಲೆ ಇಡುತ್ತಾರೆ. ಆಗ ದಾಸಯ್ಯಗಳಾಗಲಿ, ದೇವರಾಗಲಿ, ದೇವರ ಪರಿಕರಗಳಿಡಿದ ಜನರಾಗಲಿ ಅಥವಾ 'ಸೋಮ'ಗಳನ್ನು ಹೊತ್ತ ವ್ಯಕ್ತಿಗಳಾಗಲಿ ಮೂರು ಸುತ್ತು ಮಣೇವು ತಿರುಗಿ ಕೈಯಲ್ಲಿ ಮುಟ್ಟದಂತೆ ಬಗ್ಗಿ ಬಾಯಲ್ಲಿ ತಿನ್ನುತ್ತಾರೆ. ಇದನ್ನೇ

ಮಣೇವು ಕುಣಿತ ಎಂದು ಕರೆಯುತ್ತಾರೆ. ಮಣೇವು ಆಡುವ ಸಮಯದಲ್ಲಿ ವಾದ್ಯಗಳ ಗತ್ತಿಗೆ ತಕ್ಕಂತೆ ಮಣೇವು ತಿರುಗುವುದು ಒಂದು ಅನುಭವದ ಜನಪದ ಕಲೆಯಾಗಿರುತ್ತದೆ. ಕೆಲವೊಂದು ಮ್ಯಾಸಬೇಡರ ಹಟ್ಟಿಗಳಲ್ಲಿ ಸೋಮನ ಕುಣಿತ ಕಾಣಬಹುದು. ಗ್ರಾಮ ದೇವತೆಯ ಅಂಗರಕ್ಷಕ 'ಸೋಮ' ಎಂಬ ನಂಬಿಕೆಯಿದೆ. ಗ್ರಾಮ ದೇವತೆಗಳ ಜಾತ್ರೆ ಮತ್ತು ಉತ್ಸವ ಸಂದರ್ಭಗಳಲ್ಲಿ ಸೋಮನ ಕುಣಿತ ತುಂಬ ಆಕರ್ಷಕವಾಗಿರುತ್ತದೆ. ಈ ಸೋಮಗಳಲ್ಲಿ ಎರಡು ವಿಧ, ಒಂದು ಕರಿಸೋಮ ಮತ್ತೊಂದು ಕೆಂಪು ಸೋಮ ಇವುಗಳನ್ನು ಮುಖಕ್ಕೆ ಹಾಕಿಕೊಂಡು ಉರುಮೆ ವಾದ್ಯಕ್ಕೆ ತಕ್ಕಂತೆ ಕುಣಿಯುತ್ತ ಮಣೇವು ತಿರುಗುವ ದೃಶ್ಯ ನೋಡಲು ಕುತೂಹಲಕಾರಿ ಯಾಗಿರುತ್ತದೆ.

ಚಳ್ಳಕೆರೆ ತಾಲ್ಲೂಕು ದೇವರ ಮರಿಕುಂಟೆ ಓಬಳದೇವರ ಗುಗ್ಗರಿ ಹಬ್ಬದಲ್ಲಿ ಮ್ಯಾಸಬೇಡರ ದಾಸಯ್ಯಗಳು qÛ]Aj 'ಬಿಲ್ಲುಗೂಡಿನ ಮಣೇವು' ಮತ್ತು 'ಭೂತನಾಲಿಗೆಕುಣಿತ' ಅದ್ಭುತವಾಗಿ ಕಾಣಿಸುತ್ತದೆ. ಸಾಣೀಕೆರೆ ಗ್ರಾಮದೇವತೆ ಗಂಜಿಗುಂಟಮ್ಮನ ದೇವಸ್ಥಾನದಲ್ಲಿ ಕರಿಸೋಮ, ಕೆಂಪುಸೋಮ ಮತ್ತು ಮಜ್ಜಿಗೆ ಸೋಮಗಳೆಂಬ ಮೂರು ಸೋಮಗಳು ಕಂಡುಬರುತ್ತವೆ. ಕರಿ ಮತ್ತು ಕೆಂಪು ಸೋಮಗಳಿಗೆ ಮಾಂಸಾಹಾರ ಎಡೆ ಹಾಕಿದರೆ ಮಜ್ಜಿಗೆ ಸೋಮಕ್ಕೆ ಹುಗ್ಗಿ ಅನ್ನ ಎಡೆ ಹಾಕುತ್ತಾರೆ. ಕರಿ ಮತ್ತು ಕೆಂಪು ಸೋಮಕ್ಕೆ ಎಡೆಹಾಕಿದ ಮಾಂಸಾಹಾರವನ್ನು ಈ ಪ್ರದೇಶದ ಗೊಲ್ಲರು ಮತ್ತು ಬೇಡರು ಜೊತೆಗೆ ಕುಳಿತು ತಿನ್ನುತ್ತಾರೆ. ಚಳ್ಳಕೆರೆ ಹತ್ತಿರ ಕಾಟಪ್ಪನಹಟ್ಟಿಯ ಕಾಡುಗೊಲ್ಲರ ಹಟ್ಟಿಯಲ್ಲಿ ಹಾಕುವ 'ಭೂತನ ಎಡೆ' ಮತ್ತು 'ಮಣೇವು ತಿರುಗುವುದು' ರೋಮಂಚನಕಾರಿ ಯಾಗಿರುತ್ತದೆ. ಕೆಲವೊಂದು ಪ್ರದೇಶಗಳ ದೇವರ ಕಾರ್ಯಕ್ರಮಗಳಲ್ಲಿ ಚಿಕ್ಕ ಬೇಟೆ ಎಲೆಯಲ್ಲಿ ಬೆಲ್ಲ ಅಥವಾ ಬಾಳೆಹಣ್ಣುಗಳನ್ನಿಟ್ಟು ದಾಸಯ್ಯಗಳು ಮಣೇವು ತಿರುಗಿ ಕೈಯಿಂದ ಮುಟ್ಟದೆ ಬಾಯಿಯಿಂದಲೇ ಕಚ್ಚಿ ತಿನ್ನುತ್ತಾರೆ.

ಮಣೇವು ಕುಣಿತಕ್ಕೆ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮಟೆ ವಾದ್ಯಗಳನ್ನು ಬಳಸುವುದಿಲ್ಲ. ಉರುಮೆ ವಾದ್ಯಗಳನ್ನು ಮಾತ್ರ ಬಳಸುತ್ತಾರೆ. ವಾದ್ಯಗಳಿಗೆ ತಕ್ಕಂತೆ ಹೆಜ್ಜೆ ಹಾಕುತ್ತ ಮಣೇವು ತಿರುಗಿ ಕುಣಿಯುವ ಗ್ರಾಮೀಣ ಜನಪದ ಕಲೆ ಅನುಭವದಿಂದ ಮಾತ್ರ ಬರುತ್ತದೆ. ಎಷ್ಟೋ ಹಟ್ಟಿಗಳಲ್ಲಿ ಮಣೇವು ಕುಣಿತದ ಮಹತ್ವ ಪ್ರಸ್ತುತ ಸಮಾಜದಲ್ಲಿ ಕಡಿಮೆಯಾಗುತ್ತಿದೆ. ಕೇವಲ ಕಾಟಾಚಾರಕ್ಕೆ ಅಥವಾ ಸಾಂಕೇತಿಕವಾಗಿ ಮಣೇವು ಇಟ್ಟು ಲಯಬದ್ಧತೆ ಇಲ್ಲದೆ ಕುಣಿಯುವ ಪದ್ಧತಿ ಇತ್ತೀಚಿಗೆ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕಂಡು ಬರುತ್ತದೆ.

೮. ಮೊಂಡರ ಆಟ

ಅಲೆಮಾರಿ ಬುಡಕಟ್ಟುಗಳ ಸಾಲಿನಲ್ಲಿ ಬರುವ 'ಮೊಂಡರು' ಮೂಲತಃ ಆಂಧ್ರಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಜನಪದ ಕಲೆಗಳಲ್ಲಿ ಮೊಂಡರ ವೃತ್ತಿಯೂ ಒಂದೆಂದು ಗುರುತಿಸಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಹಠ ಮಾಡುವ ವ್ಯಕ್ತಿಗೆ 'ಮೊಂಡ' ಎಂದೇ ಕರೆಯುತ್ತಾರೆ. ಮ್ಯಾಸಬೇಡರಿಗೂ ಮತ್ತು ಮೊಂಡರಿಗೂ ಪರಸ್ಪರ ಸಂಬಂಧವಿದೆ. ದೇವರು, ಬೆಡಗು, ಹೆಸರು ಮತ್ತು ಸಂಸ್ಕಾರಗಳಲ್ಲಿ ಪರಸ್ಪರ ಏಕತೆ ಇದೆ. ಮ್ಯಾಸಬೇಡರ ಮನೆಗಳಿಗೆ ಭಿಕ್ಷೆಗೆ ಹೋದಾಗ ತಮ್ಮ ಹಕ್ಕು ಎಂಬಂತೆ ಕಾಡಿ ಬೇಡಿ ಭಿಕ್ಷೆ ಪಡೆಯುತ್ತಾರೆ. ಮಂದಲೋರು, ಎನುಮಲೋರು, ಮುಚ್ಚಲೋರು, ಮಳೆಲೋರು ಎಂಬ ಬೆಡಗುಗಳು; ಓಬಳದೇವರು, ನರಸಿಂಹ, ಮಾರಮ್ಮ ದೇವರುಗಳು ಮೊಂಡರಲ್ಲಿ ಕಂಡು ಬರುತ್ತವೆ. ಶ್ರೀಶೈಲ ಪರ್ವತದ ಸಮೀಪವಿರುವ ಚಂದ್ರಗಿರಿ ಬೂದುಕೋಟೆಯ ಮಂದಕಾಮಗೆತಿ ಭೂಪಾಲ ಮತ್ತು ಅಂಬೋಜರಾಜ ಈ ಮೊಂಡರ ಮೂಲ

ಪುರುಷರಂತೆ. ಅದೇ ಮಂದಕಾಮಗೇತಿ ಭೂಪಾಲ ಮತ್ತು ಅಂಬೋಜರಾಜ ಇವರಿಬ್ಬರೂ ಮ್ಯಾಸಬೇಡರ ಮೂಲ ಪುರುಷರೆಂದೆ ಹೇಳುತ್ತಾರೆ.

ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲು ಪಡೆಯವರಾಗಿದ್ದ ಮ್ಯಾಸಬೇಡರ ಒಂದು ಗುಂಪು ಬೇಹುಗಾರರಾಗಿ ಕೆಲಸ ಮಾಡುತ್ತಿದ್ದರಂತೆ, ಹೀಗೆ ವೇಷ ಬದಲಿಸಿ ಕೊಂಡು ಬೇಹುಗಾರರಾಗಿ ಹೋದವರು ಅದೇ ವೇಷ ಭೂಷಣಗಳಲ್ಲಿ ಉಳಿದು ಕೊಂಡ ಮ್ಯಾಸಬೇಡರೇ 'ಮೊಂಡರು' ಆಗಿದ್ದಾರೆ. ಈ ಹೊತ್ತಿಗೂ ಮೊಂಡರು ಮ್ಯಾಸಬೇಡರ ಮನೆಗೆ ಭಿಕ್ಷೆಗೆ ಹೋದಾಗ ಭಿಕ್ಷೆ ಬೇಡುವುದು ನಮ್ಮ ಹಕ್ಕುವೆಂಬಂತೆ ದವಸ-ಧಾನ್ಯಗಳನ್ನು ಕಡ್ಡಾಯವಾಗಿ ಪಡೆದುಕೊಂಡು ಹೋಗುತ್ತಾರೆ. ಬಹಳ ಹೊತ್ತು ಭಿಕ್ಷೆ ಕೊಡದೆ ಕಾಯಿಸಿದರೆ, ಕೈಯಲ್ಲಿರುವ ಚೂರಿಯಿಂದ ರಕ್ತ ಬರುವಂತೆ ಕೈಯನ್ನು ಗಾಯಮಾಡಿ ಕೊಳ್ಳುತ್ತಾರೆ. ಮೂಳೆಗಳ ಕಟ್ಟನ್ನು ಬಿಚ್ಚಿ ಆ ಮೂಳೆಗಳಿಗೆ ರಕ್ತಾಭಿಷೇಕ ಮಾಡುತ್ತಾರೆ. ಇಲ್ಲವೇ ವಾಂತಿ ಮಾಡುವುದು, ಅಶ್ಲೀಲ ಮತ್ತು ಅಸಂಬದ್ಧ ಹಾಡುಗಳನ್ನು ಹಾಡುತ್ತಾ ಆವೇಶಭರಿತರಾಗಿ ಕಬ್ಬಿಣದ ಬಳೆಗೆ ಚೂರಿಯಿಂದ ಜೋರಾಗಿ ಬಡಿದು ಕೊಳ್ಳುತ್ತಾರೆ. ಅಷ್ಟರಲ್ಲಿ ಮನೆಯವರು ಅವರು ಕೇಳಿದ್ದನ್ನು ಕೊಟ್ಟು ಕಳುಹಿಸುತ್ತಾರೆ. "ಮನೆಯ ಮುಂದೆ ಲಂಗೋಟಿ ಹಾಕಿಕೊಂಡು ಕೂತು ಕೈಯಲ್ಲಿನ ಕಡಗಕ್ಕೆ ಇನ್ನೊಂದು ಲೋಹದ ತುಂಡಿನಿಂದ ಬಡಿಯುತ್ತ ಹಾಡುತ್ತ ಭಿಕ್ಷೆ ಬೇಡುವ "ಜಗಮಂಡರು" ಮ್ಯಾಸಬೇಡರು""[೫] ಎಂದು ಹೇಳುತ್ತಾರೆ.

ಭಿಕ್ಷಾಟನೆಗಾಗಿ ವಲಸೆ ಹೋಗುವ ಮೊಂಡರ ಭಾಷೆ ತೆಲುಗು ಆದರೂ ಅಪಭ್ರಂಶವಾಗಿ ಕನ್ನಡ ಮಾತನಾಡುತ್ತಾರೆ. ಉದ್ದನೆಯ ತಲೆಕೂದಲು ಗಂಟಾಕಿಕೊಂಡು ದೊಡ್ಡ ರುಮಾಲ ಸುತ್ತಿರುತ್ತಾರೆ, ಕರಿಕೋಟು ಚಡ್ಡಿ ಚಲ್ಲಾಣ, ಸೊಂಟಕ್ಕೆ ಕೆಂಪು ವಸ್ತ್ರ ಬಿಗಿದುಕೊಂಡಿರುತ್ತಾರೆ. ಒಂದು ಜೋಳಿಗೆ ಹೆಗಲಿಗೆ ಹಾಕಿಕೊಂಡು, ಬಲಿಗೈಗೆ ಕಡಗ ಧರಿಸಿ ಚೂರಿ ಹಿಡದುಕೊಂಡಿರುತ್ತಾರೆ. ಹಣೆಗೆ ವಿಭೂತಿ ಕುಂಕುಮ, ಕೊರಳಿಗೆ ಹುಲಿ ಉಗುರಿನ ತಾಯಿತ ಕಟ್ಟಿಕೊಂಡು, ಹಲವಾರು ಜಾತಿಯ ಮಣಿಸರಗಳನ್ನು ಹಾಕಿಕೊಂಡಿರುತ್ತಾರೆ. ಗಲ್ಲಿ ಮೀಸೆ, ಕಿವಿಯಲ್ಲಿ ಹತ್ತ್ತಕಡಗ, ಮುಂಗೈಗೆ ಕಬ್ಬಿಣದ ಬಳೆ, ಎಡಗೈಯಲ್ಲಿ ವಿಕಾರ ರೂಪದ ಒಂದೆರೆಡು ಮೂಳೆಗಳನ್ನು ಹಿಡಿದಿರುತ್ತಾರೆ. ಮೂರು ನಾಲ್ಕು ಬೆರಳುಗಳಿಗೆ ತಿರುಪತಿ, ಶ್ರೀಶೈಲ, ಧರ್ಮಸ್ಥಳ ಮತ್ತು ದೇವಿಯ ಚಿತ್ರವಿರುವ ತಾಮ್ರದ ಉಂಗುರಗಳನ್ನು ಇಟ್ಟುಕೊಂಡಿರುತ್ತಾರೆ. ಕೆಲವರು ಕಾಲಿಗೆ ದೊಡ್ಡ ಗಗ್ಗರಿ ಹಾಕಿಕೊಂಡಿರುತ್ತಾರೆ. ಅಶ್ಲೀಲ ಮತ್ತು ಅಸಂಬದ್ಧ ಹಾಡುಗಳನ್ನು ಹೇಳಿಕೊಂಡು ಮನೆಯ ಮುಂಬಾಗಿಲಿನ ಹೊಸ್ತಿಲ ಹತ್ತಿರ ಬಂದು ಕುಳಿತು ಕೊಳ್ಳುತ್ತಾರೆ. ಭಿಕ್ಷೆ ಕೊಡದ ಹೊರತು ಕುಳಿತ ಜಾಗ ಬಿಟ್ಟು ಕದಲುವುದಿಲ್ಲ. ಆದ್ದರಿಂದಲೇ ಮೊಂಡರು ಬಾಗಿಲಿಗೆ ಬಂದ ತಕ್ಷಣವೇ ಭಿಕ್ಷೆ ಕೊಟ್ಟು ಕಳುಹಿಸುತ್ತಾರೆ. 'ಮೊಂಡನಿಗೆ ನಾಚಿಕೆಯಿಲ್ಲ ಮರಳಿಗೆ ಗಾಳಿಯಿಲ್ಲ' ಎಂಬ ಗಾದೆಯ ಮಾತು ಅರ್ಥಪೂರ್ಣವಾಗಿದೆ.

ಮೊಂಡರು ಒಂದೇ ಸಾರಿ ಎಲ್ಲ ಗ್ರಾಮಗಳಿಗೆ ಭಿಕ್ಷೆಗೆ ಹೋಗುವುದಿಲ್ಲ. ಇವರು ತಮ್ಮದೆ ಆದಂಥ ಕೆಲವು ನಿಯಮಗಳನ್ನು ಪಾಲಿಸುತ್ತಾರೆ. ಒಂದೊಂದು ಕುಟುಂಬಕ್ಕೆ ಕೆಲವೊಂದು ಗ್ರಾಮಗಳನ್ನು ಹಂಚಿಕೊಟ್ಟಿರುತ್ತಾರೆ. ಒಂದು ಕುಟುಂಬದವರು ಭಿಕ್ಷಾಟನೆ ಮಾಡುವ ಪ್ರದೇಶದಲ್ಲಿ ಮತ್ತೊಂದು ಕುಟುಂಬದವರು ಭಿಕ್ಷಾಟನೆಗೆ ಹೋಗುವುದಿಲ್ಲ. ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಇಂಥಹ 'ಜಗಮಂಡ'ರನ್ನು ಕಾಣಬಹುದು.

೯. ಬಲೆಗಳು

ಮೂಲತಃ ಬೇಟೆ ಮತ್ತು ಪಶುಪಾಲನೆ ವೃತ್ತಿಯಲ್ಲಿ ತೊಡಗಿದ್ದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬಲೆ ನೇಯುವುದರಲ್ಲಿ ನಿಪುಣರಾಗಿದ್ದಾರೆ. ಬೇಟೆಗೆ ಬೇಕಾಗುವ ಬಲೆ ಮತ್ತು ಬೇಟೆ ಪರಿಕರಗಳನ್ನು ತಾವೇ ತಯಾರಿಸಿ ಕೊಳ್ಳುತ್ತಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಕೆಲವೊಂದು ಹಟ್ಟಿಗಳಲ್ಲಿ ಒಂದೆರಡು ಕುಟುಂಬಗಳು ಮಾತ್ರ ಬೇಟೆ ಮತ್ತು ಬಲೆಗಳನ್ನು ನೇಯುವ ಕಲೆ ಮೈಗೂಡಿಸಿ ಕೊಂಡಿದ್ದಾರೆ. ಬಲೆ ತಯಾರಿಸುವ ಕಲೆ ಕಾಡುಗೊಲ್ಲರಿಗಿಂತ ಮ್ಯಾಸಬೇಡರಲ್ಲಿ ಹೆಚ್ಚು ಕಂಡು ಬರುತ್ತಾರೆ. ಮೊಲ, ಜಿಂಕೆ, ಕವುಜಗ, ಮೀನು ಮೊದಲಾದ ಬಲೆಗಳ ಜೊತೆಗೆ ಕೊಡಮೆ, ಸೊಪ್ಪು, ಗಾಳ, ಭರ್ಚಿ, ಉರುಲು ಮೊದಲಾದ ಬೇಟೆಯ ಸಾಮಾಗ್ರಿಗಳನ್ನು ತಾವೇ ತಯಾರಿಸಿ ಕೊಳ್ಳುತ್ತಾರೆ.

ಚಿಕ್ಕ ಮತ್ತು ದೊಡ್ಡ ಮೀನಿನ ಬಲೆಗಳನ್ನು ರೇಷ್ಮೆದಾರಗಳಿಂದ ಕಲಾತ್ಮಕವಾಗಿ ತಯಾರಿಸಿ, ಚಿಕ್ಕ ಚಿಕ್ಕ ಕಣ್ಣುಗಳಂತೆ ಮನೆಗಳನ್ನು ಮಾಡಿ, ನೀರಿನಲ್ಲಿ ಬಲೆ ಮುಳಗಬಾರದೆಂದು ಬಲೆಯ ಮೇಲ್ಭಾಗಕ್ಕೆ ನುಗ್ಗೆ, ಆಳವಣ ಗಿಡದ ಬೆಂಡುಗಳು ಮತ್ತು ಕೆಲವು ಮಣಿಗಳನ್ನು ಪೋಣಿಸಿರುತ್ತಾರೆ. ಸುಮಾರು ೩೦ ರಿಂದ ೪೦ ಅಡಿ ಉದ್ದದ ಮೀನಿನ ಬಲೆಗಳು ಇವರಲ್ಲಿ ಕಂಡು ಬರುತ್ತವೆ. ಕವುಜಗದ ಬಲೆಯನ್ನು ಹಲವು ಬಿದಿರು ಕಡ್ಡಿಗಳನ್ನು ಬಿಗಿಯಾಗಿ ರೇಷ್ಮೆದಾರದಿಂದ ಕಟ್ಟಿ ಕವುಜಗದ ಬಲೆ ತಯಾರಿಸುತ್ತಾರೆ. ಮೊಲದ ಬಲೆಯು ಕೂಡ ರೇಷ್ಮೆ ಮತ್ತು ಪ್ಲಾಸ್ಟಿಕ್ ಚೀಲದ ದಾರದಿಂದ ತಯಾರಿಸುತ್ತಾರೆ. ಸಾಮಾನ್ಯವಾಗಿ ೨೫ ರಿಂದ ೩೦ ಅಡಿ ಉದ್ದದ ಮೊಲದ ಬಲೆಗಳಿರುತ್ತವೆ. ಎರಡು ಇಂಚು ಉದ್ದ ಮತ್ತು ಎರಡು ಇಂಚು ಅಗಲದ ಚಿಕ್ಕ ಚಿಕ್ಕ ಕಣ್ಣುಗಳನ್ನು ಹೊಂದಿದ ಮೊಲದ ಬಲೆ ನೋಡಲು ಸುಂದರವಾಗಿರುತ್ತದೆ. ಒಂದು ಗೋಣಿ ಚೀಲದಲ್ಲಿ ಬಲೆ ಇಟ್ಟುಕೊಂಡು ಬೇಟೆಗಾರರು ಅಡವಿಗೆ ಹೋಗಿ ಮೊಲಗಳು ಓಡಾಡಿದ ಹೆಜ್ಜೆ ಮತ್ತು ಹಿಪ್ಪೆ (ಪಿಚ್ಚಿಗೆ) ಹಾಕಿದ ಗುರುತುಗಳಿಂದ ಮೊಲಗಳು ವಾಸಿಸುವ ಪ್ರದೇಶವನ್ನು ಗುರುತಿಸಿ, ಮೊಲ ಎಬ್ಬಿರಿಸಿದರೆ ಯಾವ ಕಡೆ ಹೋಗುತ್ತದೆ ಎಂಬುದನ್ನು ಮೊದಲೇ ನಿರ್ಧರಿಸಿ ಆಯಾ ಕಟ್ಟಿನ ಜಾಗದಲ್ಲಿ ಬಲೆ ಕಟ್ಟುವ ವ್ಯವಸ್ಥೆ ಮಾಡುತ್ತಾರೆ. ಬಲೆಯ ಎರಡು ಕಡೆಗೂ ಕಬ್ಬಿಣದ ಗೂಟಗಳನ್ನು ನೆಲದಲ್ಲಿ ಬಡಿದು ಬಲೆಕಟ್ಟಿ ಎರಡೂ ಕಡೆಗೆ ಊಡಿನ ನಾಲ್ಕು ಕಡ್ಡಿಗಳನ್ನು ಬಲೆ ಎತ್ತಿ ಸಮನಾಂತರವಾಗಿ ಸಿಕ್ಕಿಸಿರುತ್ತಾರೆ. ನಂತರ ಬಲೆಯ ಎರಡು ಕಡೆಗೂ ಸ್ವಲ್ಪದೂರದಲ್ಲಿ ಯಾರಿಗೂ ಕಾಣದಂತೆ ಇಬ್ಬರು ಕುಳಿತು ಮೊಲ ಬರುವುದನ್ನೇ ಕಾಯುತ್ತಿರುತ್ತಾರೆ. ಉಳಿದವರು ಗಿಡ ಗೆಂಟೆಗಳಲ್ಲಿ ಮೊಲವನ್ನು ಹುಡುಕುತ್ತಾರೆ. ಮೊಲಕಂಡ ತಕ್ಷಣವೇ ಜೋರಾಗಿ ಕೇಕೆ ಹಾಕಿ ಬಲೆಯ ಕಡೆಗೆ ಮೊಲವನ್ನು ಓಡಿಸುತ್ತಾರೆ. ಆಗ ಮೊಲ ದಿಕ್ಕು ತಪ್ಪಿ ಓಡುವ ರಭಸದಲ್ಲಿ ಬಲೆಗೆ ತಾಕಿದರೆ ಸಾಕು ನಾಲ್ಕು ಊಡಿನ ಕಡ್ಡಿಗಳು ನೆಲಕ್ಕೆ ಬಿದ್ದು ತಕ್ಷಣ 'ಮೊಲ' ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ನಂತರ ಅದನ್ನು ಹಿಡಿದು ಕೊಂಡು ಕಾಲುಗಳನ್ನು ಕಟ್ಟಿ ಗೋಣಿ ಚೀಲದಲ್ಲಿ ಹಾಕಿಕೊಂಡು ಮನೆಗೆ ಹೋಗಿ ಮೊಲವನ್ನು ಕೊಯ್ದು ಎಲ್ಲರಿಗೂ ಸಮಪಾಲು ಬರುವಂತೆ 'ಪಾಲು' ಹಾಕಿಕೊಂಡು ಮಾಂಸದ ಅಡಿಗೆ ಮಾಡಿ ಊಟ ಮಾಡುತ್ತಾರೆ.

ಮೊಲದ ಬಲೆಗಿಂತ ಜಿಂಕೆ ಬಲೆ ಗಾತ್ರದಲ್ಲಿ ದೊಡ್ಡದಿರುತ್ತದೆ. ಸಾಮಾನ್ಯವಾಗಿ ೩೦ ರಿಂದ ೪೦ ಅಡಿ ಉದ್ದದ ಜಿಂಕೆ ಬಲೆಗಳು ಈ ಎರಡು ಬುಡಕಟ್ಟು ಜನಾಂಗದಲ್ಲಿವೆ. ಹಿರಿಯೂರು ತಾಲ್ಲೂಕು ಹೊಸಯಳನಾಡು ಗ್ರಾಮದ ತಳವಾರ ರಂಗಪ್ಪನ ಮನೆಯಲ್ಲಿ; ಚಳ್ಳಕೆರೆ ತಾಲ್ಲೂಕು ಸಾಣೇಕೆರೆ ಕಡ್ಲೆಕಾಯಿ ರಂಗಪ್ಪನ ಮನೆಯಲ್ಲಿ;

ವಡೇರಹಳ್ಳಿ ಗ್ರಾಮದ ಸಿರುವಲ್ಲಪ್ಪನ ಮನೆ ಮತ್ತು ಹಟ್ಟಿಗೊಲ್ಲರ ಕರಿಯಜ್ಜನ ಮನೆಯಲ್ಲಿ ಬೇಟೆಗೆ ಸಂಬಂಧಿಸಿದ ಎಲ್ಲಾ ತರಹದ ಬಲೆಗಳು ಮತ್ತು ಪರಿಕರಗಳಿವೆ. ಆದರೆ ಇತ್ತೀಚೆಗೆ ಜಿಂಕೆ ಅಥವಾ ಚಿಗರೆ ಬೇಟೆಗೆ ರಾತ್ರಿ ಹೊತ್ತಿನಲ್ಲಿ ಹೋಗಿ, ಹಣೆಗೆ ಬ್ಯಾಟರಿ ಕಟ್ಟಿಕೊಂಡು ಬಂದೂಕದಿಂದ ಗುರಿ ಇಟ್ಟು ಚಿಗರೆ ಹೊಡೆಯುವ ಪ್ರವೃತ್ತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡುಬರುತ್ತಿದೆ. ಈ ಬೇಟೆಗಾರರು ಜಿಂಕೆಯನ್ನು ಹುಲ್ಲೇಕರ ಎಂದೇ ಕರೆಯುತ್ತಾರೆ. ಗಂಡು ಜಿಂಕೆಗೆ ಕೋಡು ಇರುವುದರಿಂದ 'ಹೋರಿ' ಎಂದು; ಹೆಣ್ಣು ಜಿಂಕೆಗೆ ಕೋಡು ಇಲ್ಲದಿರುವುದರಿಂದ 'ಬೋಡಿ' ಎಂದು ಕರೆಯುತ್ತಾರೆ. ಚಳ್ಳಕೆರೆ ತಾಲ್ಲೂಕಿನಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ದಿನಾಂಕ : ೦೮.೦೨.೨೦೦೧ ರಂದು ವಡೇರಹಳ್ಳಿ ಕಾವಲುನಲ್ಲಿ ಮುಚ್ಚಲೋರು ಬೆಡಗಿಗೆ ಸೇರಿದ ಮ್ಯಾಸಬೇಡರ ತಳವಾರ ಪೆದ್ದಣ್ಣ ಮತ್ತು ಆತನ ಸಹೋದರರು ಮೊಲದ ಬೇಟೆಗಾಗಿ 'ಬಲೆಕಟ್ಟಿ' ಮೊಲ ಹಿಡಿಯುವ ಸನ್ನಿವೇಶ ಕಂಡು ಬಂದಿತು. ಕೆಲವೊಂದು ಪ್ರದೇಶಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಬ್ಬರೂ ಸೇರಿ ಮೊಲ, ಜಿಂಕೆ ಮತ್ತು ಮೀನು ಹಿಡಿಯುವುದನ್ನು ಕಾಣಬಹುದು.

೧೦. ಹಚ್ಚೆ

ಭಾರತೀಯ ಬುಡಕಟ್ಟು ಸಂಸ್ಕೃತಿಯಲ್ಲಿ ಹಚ್ಚೆ ಸನಾತನ ಧರ್ಮದ ಕುರುಹಾಗಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಹೆಣ್ಣು ಸತ್ತಾಗ ಜೊತೆಯಲ್ಲಿಯೇ ಬರುವ ಮುತ್ತೈದೆಯರ ಸೌಭಾಗ್ಯದ ಸಂಪತ್ತು ಎಂಬ ನಂಬಿಕೆಯಿಂದ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮೂಹಗಳಲ್ಲಿ ಹೆಣ್ಣು ಹುಟ್ಟಿ ಮೈನೆರೆಯುವದರೊಳಗಾಗಿ ಕಡ್ಡಾಯವಾಗಿ ಮಕ್ಕಳಿಗೆ ಹಚ್ಚೆ ಹಾಕಿಸುತ್ತಾರೆ. ಹಚ್ಚೆ ಹಾಕಿಸುವುದು ಮತ್ತು ಹಾಕಿಸಿಕೊಳ್ಳುವುದು ಅತ್ಯಂತ ಅಭಿಮಾನದ ಸಂಗತಿಯಾಗಿದೆ. ಸೋದರತ್ತೆ, ಸೋದರಮಾವ, ಬಂಧುಗಳು ಮತ್ತು ಸ್ನೇಹಿತರು ತಮ್ಮ ಪ್ರೀತಿಯ ಕುರುಹಾಗಿ ಹಚ್ಚೆ ಹಾಕಿಸುತ್ತಾರೆ. 'ಗಿಂಡಿ ಇಲ್ದೋಳು ಗಂಡನ ಕೈಗೆ ನೀರು ಕೊಡಬಾರ್ದು', 'ಹಚ್ಚೆ ಯಿಲ್ಲದವಳು ಮುದ್ದೆ ಸ್ವಾರ್‍ಯಾಗೆ ಕೈ ಇಡಬಾರ್ದು', 'ಹಚ್ಚೆ ಇಲ್ಲದ ಹೆಣ್ಣು ರಾಸಿ ಕಣಕ್ಕೆ ಹೋಗಬಾರ್ದು', 'ಹಚ್ಚೆ ಹಾಕಿಸಿಕೊಂಡ ಮಹಿಳೆ ಮಾಡಿದ ಅಡಿಗೆ ಹಳಸುವುದಿಲ್ಲ' ಎಂಬ ಮುಂತಾದ ನಂಬಿಕೆಯಿಂದ ಈ ಎರಡು ಸಮೂಹದ ಜನರು ಹಚ್ಚೆ ಹಾಕಿಸಿಕೊಳ್ಳುತ್ತಾರೆ.

ಈ ಸಮುದಾಯಗಳಲ್ಲಿ ಗಂಡು ಮತ್ತು ಹೆಣ್ಣು ಇಬ್ಬರೂ ಹಚ್ಚೆ ಹಾಕಿಸಿಕೊಳ್ಳುವ ಪದ್ಧತಿಯಿದ್ದರೂ ಹೆಣ್ಣಿನ ಪಾಲು ಪ್ರಧಾನವಾಗಿದೆ. ಪುರುಷರು ಕೈಕಾಲು ನೋವಿಗೆ, ನರಗಳ ದೌರ್ಬಲ್ಯಕ್ಕೆ ಸಂದು ವಾತ, ಪಿತ್ತ ಇತ್ಯಾದಿ ರೋಗಳಿಗೆ ಹಚ್ಚೆ ಚಿಕಿತ್ಸೆ ನೀಡುತ್ತದೆ ಎಂದು ಮತ್ತೆ ಕೆಲವರು ಶೋಭಾಚಾರಕ್ಕೂ ಕೂಡ ಕೈಗಳ ಮೇಲೆ ಗರುಡ, ಹಾವು ಮತ್ತು ಕೆಲವು ಹೆಸರುಗಳನ್ನು ಹಚ್ಚೆ ಹಾಕಿಸಿ ಕೊಳ್ಳುತ್ತಾರೆ. ಇದು ಈಗಿನ "ಆಕ್ಯುಪಂಕ್ಚರ್" ಎಂಬ ಆಧುನಿಕ ವೈದ್ಯ ಪದ್ಧತಿಯನ್ನು ನೆನಪಿಗೆ ತರುತ್ತದೆ. ಹೆಂಗಸರು ಆರೋಗ್ಯ ಮತ್ತು ಸೌಂದರ್ಯವನ್ನು ಹೆಚ್ಚಿಸುತ್ತದೆಂದೂ, ಮುತ್ತೈದೆಯರ ಸೌಭಾಗ್ಯದ ಸಂಪತ್ತೆಂದೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ. 'ಜಪಾನಿನ ಐನೂ ಆದಿವಾಸಿಗಳಲ್ಲಿ ವಿವಾಹಿತ ಸ್ತ್ರೀಯರು ತಮ್ಮ ಬಾಯಿಯ ಸುತ್ತಲೂ ಬಣ್ಣ ಬಣ್ಣದ ಹೂವುಗಳನ್ನು ಹಚ್ಚೆ ಹಾಕಿಸಿ ಕೊಳ್ಳುತ್ತಾರೆ. ನಂತರ ದೇಹದ ಮೇಲೆ ಪಶುಪಕ್ಷಿ, ಗಿಡ, ಮರಗಳ ಚಿತ್ರಗಳನ್ನು ಹಚ್ಚೆ ಚುಚ್ಚಿಸಿಕೊಂಡರೆ ತಮಗೆ

ಯಾವ ಕೆಡಕೂ ಸಂಭವಿಸುವುದಿಲ್ಲವೆಂಬ ನಂಬಿಕೆ ಅವರಿಗಿದೆ'. ಮ್ಯಾಸಬೇಡ ಮತ್ತು ಕಾಡುಗೊಲ್ಲ ರಲ್ಲಿ ಅವರು ಆರಾಧಿಸುವ ನಂಬಿದ ದೇವರು, ಪ್ರಾದೇಶಿಕವಾಗಿ ಆಚರಿಸುವ ಸಂಪ್ರದಾಯಗಳು ಮತ್ತು ನಂಬಿಕೆಗಳನ್ನು ಆಧರಿಸಿ ಪ್ರಾಣಿ, ಪಕ್ಷಿ, ಹೂವು, ಬಳ್ಳಿ, ಗಿಡ, ಮರ, ಚಂದ್ರ, ಸೂರ್ಯ, ತ್ರಿಶೂಲ, ಬಿಲ್ಲು, ಬಾಣ, ಬುಟ್ಟಿ, ರಥ, ನಂದಿ, ಹನುಮಂತ, ಹಣತೆ. ಒಲೆಗುಂಡು, ಗರುಡ, ಹಾವು ಮತ್ತು ವ್ಯಕ್ತಿಯ ಹೆಸರು ಇತ್ಯಾದಿ ಹಚ್ಚೆಗಳನ್ನು ಹಾಕಿಸಿ ಕೊಳ್ಳುತ್ತಾರೆ. ವಿಶೇಷವಾಗಿ ಹೆಂಗಸರು ಎರಡೂ ಕೈಗಳ ಮಣಿಕಟ್ಟು ಅಂಗೈ ಮೇಲಿನ ಭಾಗ, ಎದೆ, ಹಣೆಯ ಮಧ್ಯಭಾಗ , ಗಲ್ಲದ ಮೇಲೆ, ಬೆರಳಿನ ಮತ್ತು ಹೆಬ್ಬಟ್ಟಿನ ಹಿಂಭಾಗ, ಕೈಗಳು, ತೋಳು, ರಟ್ಟೆ, ಕಾಲುಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಒಮ್ಮೆ ಹಚ್ಚೆ ಹಾಕಿಸಿಕೊಂಡರೆ ಏನೇ ಮಾಡಿದರು ಆ ಕಲೆ ಹೋಗುವುದಿಲ್ಲ. 'ಉತ್ರಾಣಿಕೆಗಿಡ ಹುಟ್ಟಿ ಉತ್ತರೂ ಬರದು ಕಿತ್ತರೂ ಬರದು'- ಎಂದು ಕನ್ನಡದಲ್ಲಿ ಒಗಟುಂಟು; ಅದಕ್ಕೆ ಉತ್ತರ ಹಚ್ಚೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಚ್ಚೆ ಹಾಕುವ ಕುಲ ಕಸಬು ಮಾಡುತ್ತಿರುವ ಹೆಂಗಸರು ಮೂಲತಃ ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಭಿಕ್ಷಾಟನೆ ಮತ್ತು ಕಣಿ ಹೇಳುವ ವೃತ್ತಿ ಮಾಡುತ್ತಿರುವ ಕೊರವರು ಮತ್ತು ಕಿಳ್ಳಿಕ್ಯಾತರ ಹೆಂಗಸರು ಹಚ್ಚೆ ಹಾಕುವ ಕಾಯಕ ಮಾಡುತ್ತಾರೆ. ಈ ಹೆಂಗಸರ ಮಾತೃಭಾಷೆ ತೆಲುಗು ಆದರೂ ಕನ್ನಡವನ್ನು ಅಪಭ್ರಂಶವಾಗಿ ಮಾತನಾಡುತ್ತಾರೆ. ಕಣಿ ಹೇಳುವ ಕೊರವರ ಜಾತಿಯ ಕೊರವಂಜಿಗಳು ಮತ್ತು ಕಿಳ್ಳಿಕ್ಯಾತರ ಹೆಂಗಸರು ಮಾತ್ರ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹೆಂಗಸರಿಗೆ ಹಚ್ಚೆ ಹಾಕುತ್ತಾರೆ. ಹಚ್ಚೆ ಹಾಕುವುದು ಒಂದು ಜನಪದ ಕಲೆಯಾಗಿರುವದರಿಂದ ಹಚ್ಚೆ ಚುಚ್ಚುವಾಗ ಉಂಟಾಗುವ ನೋವನ್ನು ಮರೆಸಲು ಕೊರವಂಜಿಗಳು ಹಚ್ಚೆಯ ಮಹತ್ವವನ್ನು ಕುರಿತು ರಾಗಬದ್ಧವಾಗಿ ಹಾಡುತ್ತಾರೆ. ಹಚ್ಚೆ ಹಾಕಿದ ಪ್ರತಿಫಲವಾಗಿ ಅವರ ಮನೆಯಲ್ಲಿ ದವಸ-ಧಾನ್ಯಗಳನ್ನು ಸ್ವೀಕರಿಸುತ್ತಾರೆ. ಹಚ್ಚೆ ಮಾನವನ ವಿವಿಧ ಅಂಗಗಳ ಮೇಲೆ ಮುದ್ರಿತವಾಗುವ ಶಾಶ್ವತವಾದ ಕಲೆಯಾಗಿರುವುದರಿಂದ ಕೊರವರು ಮತ್ತು ಕಿಳ್ಳಿಕ್ಯಾತರ ಹೆಂಗಸರು ಇದನ್ನು "ಅರಿಷಿಣ ಪುಡಿಯೊಡನೆ ಹಚ್ಚೆಯ ಸೊಪ್ಪು ಅರೆದು, ಒಂದು ತೆಳುವಾದ ಬಟ್ಟೆಯ ಮೇಲೆ ಲೇಪಿಸಿ ಅದನ್ನು ಸುರುಳಿಯಾಗಿ ಸುತ್ತಿ ಹರಳೆಣ್ಣೆ ದೀಪದ ಮೇಲೆ ಕಾಸುತ್ತಾರೆ. ಅನಂತರ ಇದನ್ನು ದೀಪದ ಕಾಡಿಗೆಯೊಡನೆ ಎದೆಯ ಹಾಲಿನಲ್ಲಿ ಬೆರೆಸಿ ಒಂದು ರಸವಾಗುವಂತೆ ಮಾಡಿದರೆ ತೀರಿತು. ಇದೇ ಹಚ್ಚೆ . ಕೆಲವು ಕಡೆ ಹಚ್ಚೆಯ ಸೊಪ್ಪಿಗೆ ಬದಲಾಗಿ ಅಗಸೆಯ ಸೊಪ್ಪು, ತುಂಬೆಯ ಸೊಪ್ಪು, ಬರಗಾರದ ಸೊಪ್ಪು ಮುಂತಾದ ಸ್ಥಾನಿಕ ಸೊಪ್ಪುಗಳನ್ನು"[೬] ಬಳಸಿ ಹಚ್ಚೆ ರಸ ತಯಾರಿಸಿ ಒಂದು ಚಿಕ್ಕ ಮಣ್ಣಿನ ಕುಡಿಕೆಯಲ್ಲಿ ಹಾಕಿ ಬಟ್ಟೆ ಮುಚ್ಚಿ ದಾರ ಕಟ್ಟುತ್ತಾರೆ. ನಂತರ ಹಚ್ಚೆ ಚುಚ್ಚುವ "ಮೂರು ಸೂಜಿಗಳು ಕೂಡಿಸಿ ದಾರದಿಂದ ಬಿಗಿಯಾಗಿ ಸುತ್ತಿ ಕಟ್ಟಿ ಹಚ್ಚೆಯ ಚಿತ್ರ ವಿನ್ಯಾಸಗಳನ್ನು ತೆಗೆದ ಆ ಬಣ್ಣದಲ್ಲಿ ಅದ್ದಿ ಚುಚ್ಚುತ ಹೋಗುತ್ತಾರೆ[೭]". ಈ ರೀತಿ ಹಚ್ಚೆ ಹಾಕುವಾಗ ನೋವು ಮತ್ತು ನಲಿವು ಎರಡು ಪ್ರಧಾನವಾಗಿ ಮಹಿಳೆಯರಲ್ಲಿ ಕಂಡು ಬರುತ್ತವೆ.

ಆಧುನಿಕ ಕಾಲದಲ್ಲಿ ಹಚ್ಚೆಹಾಕಸಿಕೊಳ್ಳವ ಪದ್ಧತಿಗೆ ಬದಲಾಗಿ 'ಹಚ್ಚೆ ಪ್ರಿಂಟಿಂಗ್' ವ್ಯವಸ್ಥೆ ಬಂದಿರುವದರಿಂದ ಹಚ್ಚೆಯ ಮಹತ್ವ ಮತ್ತು ಪವಿತ್ರತೆ ಕಡಿಮೆಯಾಗುತ್ತಿದೆ. ಜೊತೆಗೆ ಸೂಜಿಯನ್ನು ಕ್ರಿಮಿಶುದ್ಧಿ ಮಾಡದೇ

ಚರ್ಮಗೀರಿ ಎಲ್ಲರಿಗೂ ಒಂದೇ ಸೂಜಿಯಿಂದ ಹಚ್ಚೆ ಹಾಕುವುದರಿಂದ, ಮನಷ್ಯನ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವ 'ಎಚ್.ಐ.ವಿ.' ಈ ವೈರಸ್ ನಿಂದಲೇ ಜನರಿಗೆ ಏಡ್ಸ್ ರೋಗ ಉಂಟಾಗುತ್ತದೆ. ಎಂಬ ವೈಜ್ಞಾನಿಕ ಕಾರಣಗಳಿಂದ ಪ್ರಸ್ತುತ ಈ ಹಚ್ಚೆಯ ಮಹತ್ವ ಕಡಿಮೆಯಾಗುತ್ತಿದೆ. ಆದರೂ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಈ ಹಚ್ಚೆಯ ಪವಿತ್ರತೆ ಮತ್ತು ಮಹತ್ವ ಅಲ್ಪ ಸ್ವಲ್ಪ ಉಳಿದುಕೊಂಡಿದೆ.

೧೧. ರಂಗೋಲಿ

ರಂಗೋಲಿ ಒಂದು ಜನಪದ ಕಲೆ. ಈ ಕಲೆಗೆ ಪ್ರಾಚೀನ ಇತಿಹಾಸವೇ ಇದೆ. ಹಿಂದೂ ಸನಾತನ ಧರ್ಮದ ವೇದೋಪನಿಷತ್ತು, ಪುರಾಣಗಳಲ್ಲಿ ರಂಗೋಲಿ ಕಲೆಯ ಬಗ್ಗೆ ಉಲ್ಲೇಖಗಳಿವೆ. ಅರವತ್ನಾಲ್ಕು ಕಲೆಗಳಲ್ಲಿ ರಂಗವಲ್ಲಿಯೂ ಒಂದಾಗಿದೆ. ನೂರೆಂಟು ಬಗೆಯ ರಂಗೋಲಿಗಳಿದ್ದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗ ಸರಳವಾದ ರಂಗೋಲಿ ವಿಧಾನವನ್ನು ಕಂಡು ಕೊಂಡಿದ್ದಾರೆ. ಕೇವಲ ಚುಕ್ಕೆಗಳ ಆಧಾರದ ಮೇಲೆ ಬಿಡಿಸುವ ರುದ್ರನ ಜಡೆ, ಕೃಷ್ಣನ ತೊಟ್ಟಿಲು, ಗಂಟಿನ, ಒಂದೆಳೆ, ಎರಡೆಳೆ, ನಾಲ್ಕು ಮತ್ತು ಎಂಟು ಮೂಲೆ ರಂಗೋಲಿಗಳು ತುಂಬ ಆಕರ್ಷಣೆಯಾವಾಗಿರುತ್ತವೆ. ಹಬ್ಬ ಹರಿದಿನ, ಜಾತ್ರೆ ಉತ್ಸವ, ಮದುವೆ ಮಂಗಳ ಕಾರ್ಯಗಳಲ್ಲಿ ಮನೆಯ ಅಂಗಳಕ್ಕೆ ಸಗಣಿ ನೀರು ಹಾಕಿ ಸರಳವಾದ ರಂಗೋಲಿಗಳನ್ನು ಇವರು ಹಾಕುತ್ತಾರೆ. ಈ ಎರಡೂ ಜನಾಂಗದ ಮಹಿಳೆಯರು ಪ್ರಾಥಃ ಕಾಲದಲ್ಲಿ ಎದ್ದು ಮನೆಯ ಕಸಗುಡಿಸಿ, ಸಾರಿಸಿ ಹೊಸ್ತಿಲು ತೊಳೆದು, ಅರಿಷಿಣ ಕುಂಕುಮ ಹಚ್ಚಿ, ಮೂರು ಎಳೆ ರಂಗೋಲಿ ಬಿಡುವ ಪದ್ಧತಿ ಹಟ್ಟಿಗಳಲ್ಲಿ ಕಂಡು ಬರುತ್ತದೆ. ಮನೆಯ ಅಂಗಳಕ್ಕೆ ಸಗಣಿ ಕಲಸಿದ ನೀರು ಹಾಕಿ, ರಂಗೋಲಿ ಹಾಕಿದರೆ ಮನೆಯ ಸುತ-ಮುತ್ತ ವಿಷ ಜಂತುಗಳು ಬರುವುದಿಲ್ಲ ಎಂಬ ವೈಜ್ಞಾನಿಕ ನಂಬಿಕೆಯೂ ಕೂಡ ಈ ಜನಾಂಗದಲ್ಲಿದೆ.

'ರಂಗೋಲೆಕಲ್ಲು' ಎಂದೇ ಕರೆಯುವ ಬಿಳಿಯ ಹಿಟ್ಟುಕಲ್ಲನ್ನು ತಂದು ಸಣ್ಣಗೆ ಕುಟ್ಟಿ, ನಂತರ ದೊಡ್ಡ ಕಲ್ಲುಗುಂಡಿನಿಂದ ರುಬ್ಬಿ ರಂಗೋಲಿ ಹಿಟ್ಟು ತಯಾರಿಸುತ್ತಾರೆ. ಮತ್ತೇ ಕೆಲವರು ಅಕ್ಕಿಹಿಟ್ಟು, ಕೆಮ್ಮಣ್ಣು, ಸುಣ್ಣದ ಪುಡಿ, ಸೀಮೆಸುಣ್ಣ, ಆಯಲ್ ಪೇಂಟ್‌ಗಳನ್ನು ರಂಗೋಲಿ ಹಾಕುವಾಗ ಬಳಸುತ್ತಾರೆ. ರಂಗೋಲಿ ಸಾಮಾನ್ಯರ ದೃಷ್ಟಿಯಲ್ಲಿ 'ಮನೆಯ ಒಳಗೆ ಮತ್ತು ಹೊರಗೆ ಅಲಂಕಾರಕ್ಕಾಗಿ ಹಾಕುವ ಕಲಾತ್ಮಕ ಗೆರೆಗಳು.' ಚುಕ್ಕೆ ಮತ್ತು ಚುಕ್ಕೆ ರಹಿತ ಬಣ್ಣ ಬಣ್ಣದ ಮನಮೋಹಕ ರಂಗೋಲಿಗಳನ್ನು ಪ್ರತಿನಿತ್ಯ ಸೂರ್ಯೋದಯ ಮತ್ತು ಸೂರ್ಯಸ್ತ ಸಮಯಗಳಲ್ಲಿ ಮನೆಯ ಅಂಗಳ ಮತ್ತು ಬಾಗಿಲ ಹೊಸ್ತಿಲ ಮೇಲೆ ಹಲವು ವಿನ್ಯಾಸಗಳಲ್ಲಿ ರಂಗೋಲಿ ಹಾಕುವುದನ್ನು ಕಾಣಬಹುದು. ಚಳ್ಳಕೆರೆ ತಾಲ್ಲೂಕು ವಡೇರಹಳ್ಳಿ, ಬೊಂಬೇರಹಳ್ಳಿ, ಯಲಗಟ್ಟೆ, ಚಿಕ್ಕೇನಹಳ್ಳಿ, ದೊಡ್ಡಬೀರನಹಳ್ಳಿ, ಕ್ಯಾದಿಗುಂಟೆ, ಲಿಂಗದಹಳ್ಳಿ, ಮಂಕಕೋಟೆ, ಪಾಲನಾಯಕನಕೋಟೆ, ತಿಮ್ಮಣನಾಯಕನಕೋಟೆ, ಓಬಳಾಪುರ, ದೊಡ್ಡಚಲ್ಲೂರು, ಗೋಸಿಕೆರೆ ಮೊದಲಾದ ಹಳ್ಳಿಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಮನೆಯ ತೊಲೆ, ಜಂತೆ, ಕಂಬ, ತೀರು ಮತ್ತು ಮೇಜಕಟ್ಟಿನ ಮೇಲೆ ಬಣ್ಣ ಬಣ್ಣದ ರಂಗೋಲಿ ಒತ್ತುವ ಜನಪದ ಕಲೆ ಬೆಳಸಿಕೊಂಡಿದ್ದಾರೆ.

ಕೆಲವೊಂದು ಪ್ರದೇಶಗಳಲ್ಲಿ ಮಾಟ, ಮಂತ್ರ, ಪೂಜೆ, ಬಲಿ ಮತ್ತು ದೇವರ ಕಾರ್ಯಗಳಲ್ಲಿ ಹಾಕುವ ಮಂಡಲಕ್ಕೆ 'ರಂಗೋಲಿ' ಎಂದು ಕರೆಯುತ್ತಾರೆ. ಆದರೆ ರಂಗೋಲಿ ಶುಭ ಲಕ್ಷಣವಾದರೆ; 'ಮಂಡಲ' ಶುಭ-

ಅಶುಭ ಎರಡೂ ಲಕ್ಷಣವನ್ನು ಹೊಂದಿದೆ. ಮಂಡಲ ಬರೆಯುವುದು ವಯೋವೃದ್ಧ ಪುರುಷರಾದರೆ; ಎಲ್ಲಾ ವಯಸ್ಸಿನ ಮಹಿಳೆಯರು ರಂಗೋಲಿ ಹಾಕುತ್ತಾರೆ. ಆದ್ದರಿಂದ ಮಂಡಲ ಬರೆಯುವುದು ಮತ್ತು ರಂಗೋಲಿಯನ್ನು ಸಮನಾರ್ಥದಲ್ಲಿ ಬಳಸುವುದು ತಪ್ಪು.

ಆಧುನೀಕರಣದ ಪ್ರಭಾವದಿಂದಾಗಿ ಗುಡಿಸಲು ಬದಲಾಗಿ ಕಾಂಕ್ರಿಟ ಮನೆಗಳು ಬಂದಿರುವುದರಿಂದ; ರಬ್ಬರ್, ಪ್ಲಾಸ್ಟಿಕ್ ಮತ್ತು ಕಟ್ಟಿಗೆಯ ರಂಗೋಲಿ ಅಚ್ಚಿನ ವಿನ್ಯಾಸಗಳು ಮತ್ತು ರಂಗೋಲಿ ಪುಡಿ ಮಾರುಕಟ್ಟೆಗಳಲ್ಲಿ ಸಿಗುವುದರಿಂದ ಹಾಗೂ ಇತ್ತೀಚಿನ ಯುವತಿಯರಿಗೆ ರಂಗೋಲಿ ಕಲೆಯ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿರುವುದರಿಂದ ರಂಗೋಲಿ ಎಂಬ ಜನಪದ ಕಲೆ ಅಳಿದು ಹೋಗುತ್ತಿದೆ ಎಂದರೆ ತಪ್ಪಗಲಾರದು. ಆದರೂ ಮ್ಯಾಸಬೇಡ ಮತ್ತು ಕಾಡುಗೊಲ್ಲರು ವಾಸಿಸುವ ಪ್ರದೇಶಗಳಲ್ಲಿ ರಂಗೋಲಿ ಕಲೆ ಉಳಿದುಕೊಂಡು ಬಂದಿದೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಡಾ. ಟಿ.ಎಂ.ಭಾಸ್ಕರ್, 'ಸುಡುಗಾಡು ಸಿದ್ಧರು : ಒಂದು ಸಾಂಸ್ಕೃತಿಕ ಅಧ್ಯಯನ', ೨೦೦೦, ಪುಟ:೨೨೭

೨. ಗೊ.ರು.ಚನ್ನಬಸಪ್ಪ (ಸಂ), 'ಕರ್ನಾಟಕದ ಜನಪದ ಕಲೆಗಳು', ೧೯೭೭, ಪುಟ:೫೬

೩. ಕನ್ನಡ ವಿಶ್ವಕೋಶ, ಸಂಪುಟ-ಎಂಟು, ೧೯೭೫, ಪುಟ:೨೭೭

೪. ಗೊ.ರು.ಚನ್ನಬಸಪ್ಪ (ಸಂ), 'ಕರ್ನಾಟಕದ ಜನಪದ ಕಲೆಗಳು', ೧೯೭೭, ಪುಟ:೪೩

೫. ಎಂ.ಜಿ.ಈಶ್ವರಪ್ಪ, 'ಮ್ಯಾಸಬೇಡರು', ೧೯೮೨, ಪುಟ:೧೭

೬. ಜಾನಪದ ಜಗತ್ತು, ೧೯೮೫, ಸಂಚಿಕೆ ೫ ಮತ್ತು ೬ ಪುಟ:೧೫

೭. ಡಾ. ಟಿ.ಎಂ.ಭಾಸ್ಕರ್, 'ಸುಡುಗಾಡು ಸಿದ್ಧರು', ೨೦೦೦, ಪುಟ:೨೭೧

ಅಧ್ಯಾಯ -೭

ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳು

೧. ಭೌಗೋಳಿಕ ಪರಿಸರ

೨. ಸಾಂಸ್ಕೃತಿಕ ವ್ಯವಸ್ಥೆ

೩. ಸಾಮಾಜಿಕ ಸ್ಥಿತಿಗತಿ

೪. ಆರ್ಥಿಕ ವ್ಯವಸ್ಥೆ

೫. ಶೈಕ್ಷಣಿಕ ಸ್ಥಿತಿಗತಿ

೬. ಆರೋಗ್ಯ ಮತ್ತು ನೈರ್ಮಲ್ಯ

೭. ಧಾರ್ಮಿಕತೆ

೮. ರಾಜಕೀಯ ಕ್ರಮ

೭. ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳು

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ಎಂಬ ಆರು ತಾಲ್ಲೂಕುಗಳಲ್ಲಿ ಹಂಚಿ ಹೋದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗದ ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಕ್ಷೇತ್ರ ಕಾರ್ಯದ ಅಂಶಗಳಿಗೆ ಬಹಳ ಮಹತ್ವಕೊಟ್ಟು, ಅವರ ಭೌಗೋಳಿಕ ಪರಿಸರ, ಸಾಂಸ್ಕೃತಿಕ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ ಆರ್ಥಿಕತೆ, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ಧಾರ್ಮಿಕತೆ ಮತ್ತು ರಾಜಕೀಯ ಕ್ರಮ ಎಂಬ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಮ್ಯಾಸಬೇಡ ಮತ್ತುಕಾಡುಗೊಲ್ಲರ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ, ನಂತರ ಈ ಎರಡು ಜನಾಂಗದ ಸಂಘ, ಸಂಸ್ಥೆಗಳು ಮತ್ತು ಸಂಘಟನೆಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅವುಗಳ ಪ್ರಭಾವ, ಪರಿಣಾಮ ಮತ್ತು ಪರಿಹಾರೋಪಾಯಗಳನ್ನು ಕೂಡ ಚರ್ಚಿಸಲಾಗಿದೆ. ಪ್ರಸ್ತುತ ಸರ್ಕಾರದ ಯೋಜನೆ ಮತ್ತು ಸುಧಾರಣೆಗಳು ಅವುಗಳ ಅನುಕೂಲ ಮತ್ತು ಅನಾನುಕೂಲ ಪರಿಸ್ಥಿತಿಗಳನ್ನು ಇಲ್ಲಿ ಚರ್ಚಿಸಲಾಗಿದೆ. ಕೆಲವೊಂದು ಪ್ರದೇಶದ ಮುಖ್ಯ ಸಮಸ್ಯೆಗಳು, ಹೆಸರುಗಳು ಮತ್ತು ಅಂಕಿ ಸಂಖ್ಯೆಗಳನ್ನು ಕೂಡ ಸಾಧ್ಯವಾದ ಮಟ್ಟಿಗೆ ಕೊಡಲಾಗಿದೆ. ಪ್ರಸ್ತುತ ಈ ಎರಡು ಬುಡಕಟ್ಟುಗಳ ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳು ಎಂಬ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಭೌಗೋಳಿಕ ಪರಿಸರ

ಆರು ತಾಲ್ಲೂಕುಗಳನ್ನೊಳಗೊಂಡ ಚಿತ್ರದುರ್ಗ ಜಿಲ್ಲೆ ಅನೇಕ ಬೆಟ್ಟ ಗುಡ್ಡಗಳಿಂದ ಕೂಡಿದ ಫಲವತ್ತಾದ ಭೂಪ್ರದೇಶ ಮತ್ತು ಹುಲ್ಲುಗಾವಲುಗಳನ್ನು ಹೊಂದಿದೆ. ವಾರ್ಷಿಕ ಸರಾಸರಿ ೬೫೫.೦ ಮಿ.ಮೀ. ಮಳೆ ಬೀಳುವ ಈ ಪ್ರದೇಶ ಬರಗಾಲ ಪೀಡಿತ ಪ್ರದೇಶವೆಂದು ಗುರುತಿಸಲಾಗಿದೆ. ಸಮುದ್ರಮಟ್ಟದಿಂದ ೭೩೩.೬೫ ಮೀಟರುಗಳು ಎತ್ತರದಲ್ಲಿರುವ ಚಿತ್ರದುರ್ಗ ಜಿಲ್ಲೆ ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಮಹತ್ವ ಪಡೆದುಕೊಂಡು ಭೌಗೋಳಿಕ ಪರಿಸರವನ್ನು ಹೊಂದಿದೆ. ಉತ್ತರದಲ್ಲಿ ಬಳ್ಳಾರಿ, ಪೂರ್ವದಿಕ್ಕಿನಲ್ಲಿ ಅನಂತಪುರ, ಆಗ್ನೇಯದಿಕ್ಕಿನಲ್ಲಿ ತುಮಕೂರು, ಪಶ್ಚಿಮದಲ್ಲಿ ದಾವಣಗೆರೆ ನೈರುತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರಿಯಲ್ಪಟ್ಟು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಮೊಳಕಾಲ್ಮೂರು, ಹೊಸದುರ್ಗ ಮತ್ತು ಹೊಳಲ್ಕೆರೆ ಎಂಬ ಆರು

ತಾಲ್ಲೂಕುಗಳನ್ನು ಒಳಗೊಂಡಿದೆ. ಅನೇಕ ಜಲಾಶಯ, ಕೆರೆ, ನದಿ, ಗೋಮಾಳಗಳನ್ನು ಒಳಗೊಂಡ ಈ ಜಿಲ್ಲೆಯಲ್ಲಿ ದನ ಕರುಗಳಿಗೆ ಸಮೃದ್ಧಿಯಾದ ಹುಲ್ಲು ನೀರಿನ ಪ್ರದೇಶಗಳಿವೆ. ಮೂಲತಃ ಆಂಧ್ರಪ್ರದೇಶದಿಂದ ವಲಸೆ ಬಂದವರೆಂದು ಹೇಳಿಕೊಳ್ಳುವ ಮ್ಯಾಸಬೇಡರು; ದೆಹಲಿಯಿಂದ ಬಂದವರೆಂದು ಹೇಳಿಕೊಳ್ಳುವ ಕಾಡುಗೊಲ್ಲರು. ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಈ ಎರಡು ಬುಡಕಟ್ಟುಗಳ ಮೂಲದ ಬಗ್ಗೆ ಸ್ಪಷ್ಟತೆ ಇಲ್ಲದಿದ್ದರೂ ಇವರ 'ವೃತ್ತಿ' ಬೇಟೆ ಮತ್ತು ಪಶುಪಾಲನೆ ನಂತರ ಕೃಷಿಯೆಂದು ಸ್ಪಷ್ಟವಾಗಿ ಹೇಳಬಹುದು. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹರಡಿಕೊಂಡಿರುವ ಈ ಬುಡಕಟ್ಟು ಜನಾಂಗ ಇಲ್ಲಿಯ ಭೌಗೋಳಿಕ ಪರಿಸರಕ್ಕೆ ಹೊಂದಿಕೊಂಡು ಜೀವಿಸುತ್ತಿದ್ದಾರೆ. ಮೊಳಕಲ್ಮೂರು, ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ ಮತ್ತು ಹಿರಿಯೂರು ತಾಲ್ಲೂಕುಗಳ ಸುತ್ತ-ಮುತ್ತ ಕಂಡು ಬರುವ ಅನೇಕ ಗುಡ್ಡ ಬೆಟ್ಟಗಳ ತಪ್ಪಲು ಪ್ರದೇಶಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು 'ಹಟ್ಟಿ' ಕಟ್ಟಿಕೊಂಡು ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ಪ್ರತ್ಯೇಕವಾಗಿ ವಾಸಿಸತೊಡಗಿದ್ದಾರೆ. ಪ್ರಾರಂಭದಲ್ಲಿ ಇಡೀ ಮ್ಯಾಸಮಂಡಲಕ್ಕೆ ೭೭ ಹಟ್ಟಿಗಳು ಮಾತ್ರ ಇದ್ದವಂತೆ, ಆದರೆ ಈಗ ನೂರಾರು ಹಟ್ಟಿಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಕಾಣಬಹುದು.

ಕಾಡಾಡಿ ಬದುಕಿನ ಬುಡಕಟ್ಟು ಸಂಸ್ಕೃತಿಯನ್ನು ಮೈಗೂಡಿಸಿಕೊಂಡ, ಈ ಎರಡು ಜನಾಂಗದ ಆಹಾರ, ಉಡುಪು, ಭಾಷೆ, ದೈಹಿಕ ಲಕ್ಷಣ ರೀತಿನೀತಿಗಳು, ಧಾರ್ಮಿಕತೆ ಮೊದಲಾದವುಗಳ ಮೇಲೆ ಭೌಗೋಳಿಕ ಪರಿಸರದ ಪ್ರಭಾವ ಎದ್ದು ಕಾಣುತ್ತದೆ. ಉಗ್ರವಾದ ಬಿಸಿಲು, ಬರಗಾಲ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದ ನೈಸರ್ಗಿಕ ವಿಕೋಪಗಳಿಂದ ತಮ್ಮ ವೃತ್ತಿ, ವಸತಿ ಮತ್ತು ಜೀವನ ವ್ಯವಸ್ಥೆಯಲ್ಲಿ ಸಾಕಷ್ಟು ಪರಿವರ್ತನೆಗಳನ್ನು ಕಂಡು ಕೊಂಡಿದ್ದಾರೆ. ಇವರು ವಾಸಿಸುವ ಕೆಲವೊಂದು ಹಟ್ಟಿಗಳಿಗೆ ಹೆಸರಗಳಿಲ್ಲದಿರುವುದರಿಂದ ಸಹಜವಾಗಿ ದೇವರಹಟ್ಟಿ, ಮೇಗಳಹಟ್ಟಿ, ಸಣ್ಣಹಟ್ಟಿ, ದೊಡ್ಡಹಟ್ಟಿ, ಕೆರೆಮುಂದಲಹಟ್ಟಿ, ಕಲ್ಲಗಡ್ಡೆರಹಟ್ಟಿ, ಗುಡ್ಡದಹಟ್ಟಿ, ಬೇಡರಹಟ್ಟಿ, ಗೊಲ್ಲರಹಟ್ಟಿ, ಕುರಿಹಟ್ಟಿ ಮೊದಲಾದ ಹೆಸರುಗಳಿಂದಲೇ ಗುರುತಿಸಿಕೊಳ್ಳುತ್ತಾರೆ. ಈ ಬೌಗೋಳಿಕ ಪ್ರತ್ಯೇಕತೆಯು ಅವರ ಮತ್ತು ನಾಗರೀಕ ಜನರ ನಡುವೆ ಬಹುದೊಡ್ಡ ಸಾಮಾಜಿಕ ಅಂತರ ನಿರ್ಮಾಣವಾಗುತ್ತಿದೆ. ಇವರು ವಾಸಿಸುವ ಅನೇಕ ಪ್ರದೇಶಗಳಿಗೆ ಯಾವುದೇ ಬಗೆಯ ಸಂಪರ್ಕ ಹಾಗೂ ಸಾರಿಗೆ ಸೌಲಭ್ಯಗಳು ಇಲ್ಲವಾಗಿವೆ. ಯಾವುದೇ ಕಡೆ ಹೋದರು ಮೂರ್‍ನಾಲ್ಕು ಕಿಲೋ ಮೀಟರ್ ಕಾಲ್ನಡಿಗೆಯಲ್ಲೇ ಹೊಗಬೇಕಾದ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಸರ್ಕಾರಿ ಅಧಿಕಾರಿಗಳೂ ಕೂಡ ಇತಂಹ ಹಟ್ಟಿಗೆ ಭೇಟಿಕೊಡಲು ಹಿಂಜರಿಯುತ್ತಾರೆ. ಆದರೆ ಇತ್ತೀಚಿಗೆ ಸರ್ಕಾರ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಪ್ರತಿಯೊಂದು ಹಟ್ಟಿಗೂ ಹೊಸ ಹೆಸರಿಡಲಾಗುತ್ತಿದೆ.

ಅಲೆಮಾರಿ ಬದುಕನ್ನು ತ್ಯಜಿಸಿ ಹಟ್ಟಿಕಟ್ಟಿಕೊಂಡು ಸ್ಥಿರವಾಗಿ ನೆಲೆಸಿ ಪಶುಪಾಲನೆ ಮತ್ತು ಕೃಷಿಯನ್ನು ಪ್ರಧಾನ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಮೂಢನಂಬಿಕೆ, ಆಂಧಶ್ರದ್ಧೆ, ಮಂತ್ರ ತಂತ್ರಗಳಲ್ಲಿಯೇ ನಂಬಿಕೆ ಇಟ್ಟಿರುವ ಈ ಜನಾಂಗ ಹೊಸ ಬದಲಾವಣೆಗೆ ಹೊಂದಿಕೊಳ್ಳದೆ ಸಾಂಪ್ರದಾಯಿಕ ಜೀವನ ವೃತ್ತಿಯಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಬಳಲುತ್ತಿದ್ದಾರೆ. ಈ ಜಿಲ್ಲೆಯಲ್ಲಿ ಪದೇ ಪದೇ ಉಂಟಾಗುವ ಉಗ್ರಬಿಸಲು,

ಬರಗಾಲ, ಅತಿವೃಷ್ಟಿ ಮತ್ತು ಅನಾವೃಷ್ಟಿಗಳ ಪ್ರಭಾವದಿಂದ ತಮ್ಮ ಮೂಲ ವೃತ್ತಿಯನ್ನು ಉಳಿಸಿಕೊಳ್ಳಬೇಕೆ? ಅಥವಾ ಬೇಡವೆ? ಎಂಬ "ವೃತ್ತಿ ಸಂಘರ್ಷ" ನಿರ್ಮಾಣವಾಗಿದೆ. ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳ ಕೆಲವೊಂದು ಮ್ಯಾಸಬೇಡರ ಹಟ್ಟಿಗಳಲ್ಲಿ ಒಪ್ಪತ್ತಿನ ಊಟಕ್ಕೂ ಚಿಂತಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದಿಮಾನವ ಸಂಸ್ಕೃತಿಯನ್ನು ಮರುಕಳಿಸುವಂತಹ; ಕೆರೆ, ನದಿ, ಹಳ್ಳಗಳಲ್ಲಿ ಮೀನು, ಏಡಿ, ಕಂದ ಮೂಲಗಳನ್ನು ತಿಂದು ಬದುಕುವಂತಹ ಬರಗಾಲಗಳು ಈ ಜಿಲ್ಲೆಯಲ್ಲಿ ಬಂದು ಹೋಗಿವೆಯೆಂತೆ.

ಈ ಬುಡಕಟ್ಟುಗಳು ವಾಸಿಸುವ ಮತ್ತು ಹೊಲಗದ್ದೆಗಳಿರುವ ಭೌಗೋಳಿಕ ಪರಿಸರ ಬೆಟ್ಟ, ಗುಡ್ಡ, ನದಿ. ಅರಣ್ಯ ತಪ್ಪಲು ಪ್ರದೇಶಗಳಲ್ಲಿ ಕಾಡುಪ್ರಾಣಿಗಳು ವಾಸ ಮಾಡುವುದರಿಂದ ಇವರ ಬೆಳೆ ಮತ್ತು ಪ್ರಾಣಹಾನಿಗಳು ಉಂಟಾಗುತ್ತಿವೆ. ಈ ಎಲ್ಲಾ ಭೌಗೋಳಿಕ ಸಮಸ್ಯೆಗಳಿಂದ ಇತ್ತ ಬುಡಕಟ್ಟು ಜನರಂತೆಯೂ ಅಲ್ಲದೆ, ಅತ್ತ ನಾಗರಿಕ ಜನರಂತೆಯೂ ಅಲ್ಲದೆ ವಿಚಿತ್ರ ಸನ್ನಿವೇಶದಲ್ಲಿ ಬದುಕಿನ ಕ್ರೂರ ವಾಸ್ತವವನ್ನು ಎದುರಿಸುತ್ತಾ ಯಾವತ್ತು ಭಯದ ನೆರಳಲ್ಲೆ ಜೀವಿಸುವ ಪರಿಸ್ಥಿತಿ ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ನಿರ್ಮಾಣವಾಗುತ್ತಿದೆ.

೨. ಸಾಂಸ್ಕೃತಿಕ ವ್ಯವಸ್ಥೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಜೀವನ ಬಹಳಮಟ್ಟಿಗೆ ಸರಳವೂ ಹಾಗೂ ಸ್ವಯಂ ಪರಿಪೂರ್ಣವೂ ಆಗಿರುತ್ತದೆ. ಇವರು ತಮ್ಮದೇ ಆದ ಸಾಂಸ್ಕೃತಿಕ ವೈಶಿಷ್ಟ್ಯತೆಯನ್ನು ಮೈಗೂಡಿಸಿ ಕೊಂಡಿರುತ್ತಾರೆ. ಕಾಡಾಡಿ ಬದುಕಿನ ಸಾಂಸ್ಕೃತಿಕ ಲಕ್ಷಣಗಳು ಇವರಲ್ಲಿ ಎದ್ದು ಕಾಣುತ್ತವೆ. ಆದರೆ ಪ್ರಸ್ತುತ ನಾಗರಿಕ ಜನರ ಸಂಪರ್ಕ ಮತ್ತು ಪ್ರಭಾವದ ಫಲವಾಗಿ ಅವರ ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿವೆ. ಸರ್ಕಾರ ಹಲವು ಮೂಲಭೂತ ಸೌಲಭ್ಯಗಳನ್ನು ಈ ಹಟ್ಟಿಗಳಿಗೆ ಕಲ್ಪಿಸಿ ಕೊಟ್ಟಿದ್ದರೂ, ಒಂದು ರೀತಿಯಿಂದ ಉಪಯೋಗ ಮತ್ತೊಂದು ರೀತಿಯಿಂದ ದುರುಪಯೋಗ ನಡೆಯುತ್ತಿವೆ. ಹಲವು ಸಂಘ ಸಂಸ್ಥೆಗಳು, ರಾಜಕೀಯ ಪಕ್ಷಗಳು ಅಭಿವೃದ್ಧಿ ಮತ್ತು ಸುಧಾರಣೆಯ ನೆಪದಲ್ಲಿ ಈ ಎರಡು ಬುಡಕಟ್ಟು ಜನರ ಸಂಸ್ಕೃತಿಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ಇವರ ಆಹಾರ, ಉಡುಪು, ಭಾಷೆ, ಆಚಾರ, ವಿಚಾರಗಳು, ಹಬ್ಬ, ಜಾತ್ರೆ ಮೊದಲಾದವುಗಳಲ್ಲಿ ಗ್ರಾಮ ಮತ್ತು ನಗರ ಸಂಸ್ಕೃತಿಯ ಗುಣಲಕ್ಷಣಗಳು ಹಟ್ಟಿಯಲ್ಲಿ ಕಂಡು ಬರುತ್ತವೆ.

ಈ ಬುಡಕಟ್ಟು ಜನರ ಬಡತನ ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ಬಂಡವಾಳವನ್ನಾಗಿ ಮಾಡಿಕೊಂಡು ಈ ಪ್ರದೇಶದ ಕ್ರಿಶ್ಚಿಯನ್ ಚರ್ಚುಗಳು ಅತ್ಯಂತ ಹಿಂದುಳಿದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಿಗೆ ಭೇಟಿಕೊಟ್ಟು ಧರ್ಮಪ್ರಚಾರದ ಸೋಗಿನಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ಮತಾಂತರ ಮಾಡುವ ಚರ್ಚುಗಳ ವಿರುದ್ಧ ಸ್ಥಳೀಯ ಅನೇಕ ಹಿಂದೂ ಮುಖಂಡರು ಪ್ರತಿಭಟನೆ ಮಾಡುತ್ತಲೇ ಬರುತ್ತಿದ್ದಾರೆ. ಮತಾಂತರ ವಿಚಾರವಾಗಿ ಕಾಡುಗೊಲ್ಲರಿಗಿಂತ, ಮ್ಯಾಸಬೇಡರನ್ನು ಮತ್ತು ಹರಿಜನರನ್ನು ಸುಲಭವಾಗಿ ಮತಾಂತರಗೊಳಿಸುತ್ತಾರೆ. ಆದರೆ ಕಾಡುಗೊಲ್ಲರು ಇಂತಹ ಮತಾಂತರಕ್ಕೆ ಒಪ್ಪುವುದಿಲ್ಲ. ಸಮಯ ಸಂದರ್ಭ ಬಂದರೆ ಸಮುದಾಯದ ಸಲುವಾಗಿ ಪ್ರತಿಭಟಿಸಿ ನಿಲ್ಲುತ್ತಾರೆ.

ಸಾರಿಗೆ ಸಂಪರ್ಕಗಳ ಪ್ರಭಾವದಿಂದ ಗ್ರಾಮ ಮತ್ತು ನಗರ ಸಂಸ್ಕೃತಿಗಳಲ್ಲಿ ಪರಸ್ಪರ ಹೊಂದಾಣಿಕೆಗಳಾಗಿವೆ. ಅದೇ ರೀತಿ ಹಟ್ಟಿ ಮತ್ತು ಗ್ರಾಮ ಸಂಸ್ಕೃತಿಗಳಲ್ಲಿ ಪರಸ್ಪರ ಹೊಂದಾಣಿಕೆಗಳಾಗಿರುವುದರಿಂದ ಗ್ರಾಮ ಮತ್ತು ನಗರ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಮ್ಯಾಸಬೇಡ ಮತ್ತು ಕಾಡುಗೊಲ್ಲರು ತಮ್ಮ ಮೂಲ ಸಂಸ್ಕೃತಿಯನ್ನು ಆಚರಿಸಬೇಕೆ? ಅಥವಾ ಕೈಬಿಡಬೇಕೆ? ಗ್ರಾಮ ಮತ್ತು ನಗರ ಸಂಸ್ಕೃತಿಯನ್ನು ಸ್ವೀಕರಿಸಬೇಕೆ? ಅಥವಾ ಕೈ ಬಿಡಬೇಕೆ? ಎಂಬ ಸಾಂಸ್ಕೃತಿಕ ಗೊಂದಲಕ್ಕೆ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಸಿಲುಕಿಕೊಂಡಿದ್ದಾರೆ.

೩. ಸಾಮಾಜಿಕ ಸ್ಥಿತಿಗತಿ

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಸಂಪ್ರದಾಯ ಶರಣರು, ಮುಗ್ಧರು, ಮೂಢನಂಬಿಕೆಗೆ ಬಲಿಯಾಗಿರುವವರಾಗಿದ್ದಾರೆ ಹುಲ್ಲು, ನೀರು ಸಮೃದ್ಧಿಯಾಗಿರುವ ಬೆಟ್ಟ, ಗುಡ್ಡ, ನದಿ, ಹಳ್ಳ ಮೊದಲಾದ ತಪ್ಪಲು ಪ್ರದೇಶಗಳಲ್ಲಿ ವಾಸಿಸುತ್ತಾರೆ. ಚಿತ್ರದುರ್ಗ ಜಿಲ್ಲೆಯ ಯಾವುದೇ ತಾಲ್ಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡರು ಅವರು ವಾಸಿಸುವ ಪ್ರದೇಶಗಳು ಸಾಮಾನ್ಯವಾಗಿ ನಾಗರೀಕ ಪ್ರಪಂಚದಿಂದ ಬಹುದೂರ ಪ್ರತ್ಯೇಕ 'ಹಟ್ಟಿ' ಕಟ್ಟಿಕೊಂಡು 'ಹಟ್ಟಿ' ಸುತ್ತ ಮುಳ್ಳು ಬೇಲಿ ಹಾಕಿಕೊಂಡು ಒಂದು ಅಥವಾ ಎರಡು ಹತ್ತಿರ ಹಟ್ಟಿ ಹುದಿ ಅಥವಾ ಹೊಳೆಬಾಗಿಲು ಬಿಟ್ಟಿರುತ್ತಾರೆ. ಹಟ್ಟಿಯ ಮಧ್ಯೆ ದೇವಸ್ಥಾನ ಅದರ ಸುತ್ತ ಹುಲ್ಲಿನ ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ. ಇಡೀ ಮಾನವ ಕುಲ ವಿಸ್ಮಯ ಪಡುವಂತ ಕಟ್ಟು ಪಾಡುಗಳು ಮತ್ತು ಸಂಪ್ರದಾಯಗಳು ಈ ಹಟ್ಟಿಗಳಲ್ಲಿವೆ. ಹಟ್ಟಿಯೊಳಕ್ಕೆ ಹಂದಿ, ಕೋಳಿ, ಹರಿಜನ ಮತ್ತು ಮುಸಲ್ಮಾನರನ್ನು ಬಿಟ್ಟುಕೊಳ್ಳುವುದಿಲ್ಲ. ದೇವರ ಗುಬ್ಬಗಳಿಗೆ ಕೂಡ ಮುಳ್ಳು ಬೇಲಿಯ ಪೌಳಿಯನ್ನು ಹಾಕಿ, ಪೂಜಾರಿಯನ್ನೇ ಜೀವಂತ ದೇವರೆಂದು ತಿಳಿದು ವಿಶೇಷ ಗೌರವ ತೋರಿಸುತ್ತಾರೆ. ದೇವರವಾರ, ಹಬ್ಬ, ಜಾತ್ರೆಗಳಲ್ಲಿ ಮನೆ ಬಳಿದು ಮಡಿ ಮಾಡಿಕೊಳ್ಳುತ್ತಾರೆ. ಹಬ್ಬ, ಜಾತ್ರೆಗಳನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಈ ಎರಡು ಬುಡಕಟ್ಟುಗಳಲ್ಲಿ ಗುಗ್ಗರಿಹಬ್ಬ ಬಹಳ ಪ್ರಾಮುಖ್ಯತೆ ಪಡೆದು ಕೊಂಡಿದೆ. ಯಾವುದೇ ಮದುವೆ ಮಂಗಳ ಶುಭಕಾರ್ಯಗಳಿಗೆ ಪೂಜಾರಿ ಮತ್ತು ದಾಸಯ್ಯಗಳನ್ನು ಕರೆಯಿಸುತ್ತಾರೆ. ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ನ್ಯಾಯ ತೀರ್ಮಾನಕ್ಕೆ ಈ ಎರಡೂ ಬುಡಕಟ್ಟುಗಳು ತಲೆಬಾಗುತ್ತಾರೆ. ಪ್ರಸ್ತುತ ವ್ಯವಸಾಯ ಮತ್ತು ಪಶುಪಾಲನೆ ಪ್ರಧಾನ ವೃತ್ತಿಯಾಗಿದೆ; ಬೇಟೆ ಕೇವಲ ಪ್ರವೃತ್ತಿಯಾಗಿದೆ. ಪಿತೃಪ್ರಧಾನ ಕುಟುಂಬ ಅಸ್ಥಿತ್ವದಲ್ಲಿದ್ದು, ಅವಿಭಕ್ತ ಕುಟುಂಬಗಳಿಗಿಂತ ವಿಭಕ್ತ ಕುಟುಂಬಗಳೇ ಅಧಿಕವಾಗಿವೆ. ಹಿರಿಯಮಗನೇ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುತ್ತಾನೆ. ಹೆಣ್ಣು ಮಕ್ಕಳು ಋತುಮತಿ ಮತ್ತು ಹೆರಿಗೆ ಸಂದರ್ಭದಲ್ಲಿ ಸೂತಕವೆಂದು ಭಾವಿಸಿ ಹಟ್ಟಿ ಅಥವಾ ಮನೆಯಿಂದ ಹೊರಗಿಡುತ್ತಾರೆ. ಕೆಲವೊಂದು ಹಟ್ಟಿಗಳಲ್ಲಿ ಸೂತಕದ ಸಂದರ್ಭದಲ್ಲಿ ದೆವಸ್ಥಾನದ ಬಾಗಿಲುಗಳನ್ನೇ ಮುಚ್ಚುತ್ತಾರೆ. ಮಣ್ಣಿನ ಮಡಿಕೆ ಕುಡಿಕೆಗಳನ್ನೇ ಹೆಚ್ಚು ಮನೆಯಲ್ಲಿ ಅಡಿಗೆಗೆ ಬಳಸುತ್ತಾರೆ. ಹಾಲು, ಮೊಸರು, ತುಪ್ಪಗಳನ್ನು ಹಗ್ಗ ಕಟ್ಟಿದ ನೆಲವುಗಳಲ್ಲಿಡುತ್ತಾರೆ. ದವಸ ಧಾನ್ಯಗಳನ್ನ ಹಗೇವು ಮತ್ತು ವಾಡೇವುಗಳಲ್ಲಿ ಸಂಗ್ರಹಿಸಿಡುತ್ತಾರೆ. ಬಿತ್ತನೆ ಬೀಜ ಮತ್ತು ಬೆಲೆಬಾಳುವ ವಸ್ತುಗಳನ್ನು ಮಣ್ಣಿನ ಮಡಿಕೆಯ ಸೋರೆ ಅಥವಾ ಬಾನಗಳಲ್ಲಿಟ್ಟು ಒಂದರ ಮೇಲೊಂದ

ರಂತೆ ಏರಿಸಿರುತ್ತಾರೆ. ಬಹು ಪುರಾತನ ಕಾಲದಲ್ಲಿ ಬೆಳ್ಳಿ, ಬಂಗಾರ, ನಗ, ನಾಣ್ಯಗಳನ್ನು ತಾಮ್ರದ ಕೊಡ ಅಥವಾ ಹಂಡೇವುಗಳಲ್ಲಿ ತುಂಬಿ ನೆಲದಲ್ಲಿ ಹೂಳುತ್ತಿದ್ದರಂತೆ.

ವ್ಯವಸಾಯ ಪ್ರಧಾನ ವೃತ್ತಿಯಾಗಿರುವುದರಿಂದ ಬೇಸಾಯಕ್ಕೆ ಬೇಕಾಗುವ ಉಪಕರಣ ಮತ್ತು ಮುಟ್ಟುಗಳನ್ನು ತಾವೇ ತಯಾರಿಸಿ ಕೊಳ್ಳುತ್ತಾರೆ. ಕೆಲವೊಂದು ಕುಟುಂಬಗಳು ಆಯಗಾರರಿಂದ ಮಾಡಿಸಿಕೊಳ್ಳುತ್ತಾರೆ. ಚಿತ್ರದುರ್ಗ ಜಿಲ್ಲೆಯ ಕೆಲವೊಂದು ತಾಲ್ಲೂಕುಗಳಲ್ಲಿ 'ಕಮ್ಮಾರಿಕೆ' ಮತ್ತು 'ಬಡಗಿ' ವೃತ್ತಿ ಮಾಡುವ ಮ್ಯಾಸಬೇಡರ ಕುಟುಂಬಗಳಿವೆ. ಇವರನ್ನು ಆಯಗಾರರೆಂದು ಕರೆಯುತ್ತಾರೆ. ಇಂದೀಗೂ ಕೆಲವೊಂದು ಪ್ರದೇಶಗಳಲ್ಲಿ ವಸ್ತುಗಳ 'ಅದಲು-ಬದಲು ಪದ್ಧತಿ' ಅಸ್ಥಿತ್ವದಲ್ಲಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳಲ್ಲಿ ಹಟ್ಟಿಯ ಯಜಮಾನ, ಗೌಡ ಮತ್ತು ಪೂಜಾರಿಗಳಿಗೆ ವಿಶೇಷ ಗೌರವವಿದೆ. ಈ ಎರಡು ಬುಡಕಟ್ಟುಗಳಲ್ಲಿ ಸೂರ್ಯ ಆರಾಧನೆ ಪದ್ಧತಿಯಿದೆ. ಕುಲ ಅಥವಾ ಬೆಡಗುಗಳಲ್ಲಿ 'ಚಂದ್ರವಂಶದವರು' ಮತ್ತು 'ಸೂರ್ಯವಂಶದವರು' ಎಂದು ಎರಡು ರೀತಿ ಗುರುತಿಸಿಕೊಳ್ಳುತ್ತಾರೆ. ಇವರ ಕುಲ ಅಥವಾ ಬೆಡಗುಗಳಲ್ಲಿ ಪ್ರಕೃತ್ತಿಗೆ ಸಂಬಂಧಿಸಿದ ಹಲವಾರು ಹೆಸರುಗಳಿವೆ. ಮ್ಯಾಸಬೇಡರಿಗೆ ಮೂರು ಕಟ್ಟೆಮನೆಗಳು, ಹನ್ನೆರಡು ಗುಡಿಕಟ್ಟೆಗಳು; ಕಾಡುಗೊಲ್ಲರಿಗೆ ಮೂರು ಕಟ್ಟೆಮನೆಗಳು, ಐದು ಗುಡಿಕಟ್ಟೆಗಳು ಬಹಳ ಮುಖ್ಯವಾಗಿವೆ. ಕಾಡುಗೊಲ್ಲರ ಮಾತೃಭಾಷೆ ಕನ್ನಡವಾದರೆ, ಮ್ಯಾಸಬೇಡರ ಮಾತೃಭಾಷೆ ತೆಲುಗು. ಆರ್ಥಿಕವಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಈ ಎರಡು ಜನಾಂಗ ಸಮಾನಾಂತರ ಸ್ಥಾನಮಾನ ಉಳಿಸಿಕೊಂಡಿದ್ದಾರೆ. ಕೆಲವೊಂದು ಪ್ರದೇಶದ ಹಟ್ಟಿಗಳಲ್ಲಿ ನಾಗರೀಕ ಸೌಲಭ್ಯಗಳ ಕೊರತೆ ಕಂಡು ಬರುತ್ತದೆ. ಆದ್ದರಿಂದ ಸರ್ಕಾರ, ಸಂಘ, ಸಂಸ್ಥೆಗಳು, ಮಹಿಳಾ ವೇದಿಕೆಗಳು ಈ ಜನಾಂಗಗಳು ವಾಸಿಸುವ ಪ್ರದೇಶದ ಮೇಲೆ ಬೆಳಕು ಚೆಲ್ಲಬೇಕಾಗಿದೆ.

೪. ಆರ್ಥಿಕ ವ್ಯವಸ್ಥೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಮೂಲ ವೃತ್ತಿ ಬೇಟೆ ಮತ್ತು ಪಶುಪಾಲನೆಯಾಗಿತ್ತು. ಆದರೆ ಪ್ರಸ್ತುತ ಶೇಕಡ ೯೦ರಷ್ಟು ಮಂದಿ ವ್ಯವಸಾಯವನ್ನೇ ನಂಬಿ ಬದುಕುತ್ತಿದ್ದಾರೆ. ವರ್ಷವೊಂದರಲ್ಲಿ ಹದಿನಾರು ಇಂಚುಗಳಿಂದ ಇಪ್ಪತ್ನಾಲ್ಕು ಇಂಚುಗಳಷ್ಟು ಮಳೆ ಚಿತ್ರದುರ್ಗ ಜಿಲ್ಲೆಯಲ್ಲಾಗುತ್ತಿದೆ. ಅದರಲ್ಲಿ ಹೆಚ್ಚು ಉಷ್ಣಾಂಶ ಮತ್ತು ಕಡಿಮೆ ಮಳೆ ಬೀಳುವ ಪ್ರದೇಶವೆಂದರೆ ಚಳ್ಳಕೆರೆ ತಾಲ್ಲೂಕು. ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳ ಸುತ್ತ ಮುತ್ತ ಪ್ರದೇಶಗಳಲ್ಲಿ ಬೇಸಿಗೆಯೊಳಗೆ ಅತಿಹೆಚ್ಚು ಉಷ್ಣಮಾಪನ, ಅಂದರೆ ೨೬.೨° ಸೆಂಟಿಗ್ರೇಡಿನಿಂದ ೪೩° ಸೆಂಟಿಗ್ರೇಡಿನವರೆಗೂ ಬೇಸಿಗೆಯಲ್ಲಿ ಬಿಸಿಲು ಬೀಳುತ್ತದೆ. ಆದ್ದರಿಂದ ಅತಿಹೆಚ್ಚು ಉಷ್ಣಾಂಶ ಮತ್ತು ಮಳೆ ಬೆಳೆಯ ವೈಫಲ್ಯತೆಯಿಂದಾಗಿ ಪಶುಪಾಲನೆ ಮತ್ತು ವ್ಯವಸಾಯವನ್ನೇ ನಂಬಿಕೊಂಡಿದ್ದ ಈ ಎರಡೂ ಬುಡಕಟ್ಟುಗಳ ಆರ್ಥಿಕ ಪರಿಸ್ಥಿತಿ ತುಂಬ ಶೋಚನಿಯವಾಗಿದೆ. ಹಟ್ಟಿಗಳಲ್ಲಿ ವಾಸಿಸುವ ಜನರ ಉಡಿಗೆ ತೊಡಿಗೆ ಮತ್ತು ದೈಹಿಕ ಲಕ್ಷಣಗಳೇ ಅವರ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಸುತ್ತವೆ.

ಇವರ ಮೂಲ ವೃತ್ತಿ ಬೇಟೆ ಮತ್ತು ಪಶುಪಾಲನೆಯಾಗಿದ್ದರೂ ಬೇಟೆ ಮತ್ತು ಪಶುಪಾಲನೆಯಿಂದಲೇ ಜೀವನ ಸಾಗಿಸುವುದು ಈಗಿನ ಪರಿಸ್ಥಿತಿಯಲ್ಲಿ ಕಷ್ಟವಿದೆ. ಬಹುಪಾಲು ಈ ಎರಡೂ ಜನಾಂಗದವರು ಪಶುಪಾಲನೆ ಮತ್ತು ವ್ಯವಸಾಯ ವೃತ್ತಿಯಲ್ಲಿ ತೊಡಗಿ ಉಪಜೀವನಕ್ಕಾಗಿ ಬೇಟೆ ಮತ್ತು ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಗಂಡು ಹೆಣ್ಣು ಎಂಬ ಭೇದವಿಲ್ಲದೆ ದುಡಿದು ಊಟಕ್ಕೆ ಮುದ್ದೆ, ಚಟ್ನಿ ಸಿಕ್ಕರೆ ಸಾಕು ಅದರಲ್ಲೇ ತೃಪ್ತಿ ಪಟ್ಟುಕೊಳ್ಳುತ್ತಾರೆ. ಸರ್ಕಾರದ ಬಂಜರು ಭೂಮಿಗಳನ್ನು ಸಕ್ರಮಗೊಳಿಸಿಕೊಂಡು ಬೇಸಾಯ ಮಾಡುತ್ತಿರುವುದರಿಂದ, ಅರಣ್ಯಗಳು ನಾಶವಾಗಿ ಹುಲ್ಲು ನೀರಿನ ಸಮಸ್ಯೆಗಳಿಂದ ಪಶು ಮತ್ತು ಮೇಷ ಪಾಲನೆ ವೃತ್ತಿಯನ್ನು ಕೈಬಿಡುತ್ತಿದ್ದಾರೆ. ಒಂದು ಕಾಲಕ್ಕೆ ಅಲೆಮಾರಿ ಜೀವಿಗಳಾಗಿ ಕಾಡು ಮೇಡುಗಳಲ್ಲಿ ಸಿಗುವ ಕಂದ ಮೂಲಗಳನ್ನು ತಿಂದು ಸ್ವಾವಲಂಬಿಗಳಾಗಿ ಬದುಕಿದ್ದ ಈ ಜನಾಂಗ, ಪ್ರಸ್ತುತ ಒಪ್ಪತ್ತಿನ ಊಟಕ್ಕೆ ಯೋಚಿಸುವಂತಾಗಿದೆ. ಜೀವನ ಕಷ್ಟವೆನಿಸಿದಾಗ ಅನೇಕ ಯುವಕ ಯುವತಿಯರು ಹತ್ತಿರದ ನಗರ ಪ್ರದೇಶಗಳಿಗೆ ವಲಸೆ ಹೋಗಿ ಕೈಗಾರಿಕೆಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಬಹುಪಾಲು ಹಮಾಲರು ಮ್ಯಾಸಬೇಡರೆ ಆಗಿದ್ದಾರೆ. ಕೆಲವೊಂದು ಪ್ರದೇಶಗಳಲ್ಲಿ ಹೆಂಗಸರು ಮತ್ತು ಮಕ್ಕಳು ಕೂಲಿ ನಾಲಿ ಮಾಡಿ ಹೊಟ್ಟೆ ತುಂಬಿಸಿಕೊಂಡರೆ ಗಂಡಸರು ಸೋಮಾರಿಗಳಾಗಿ ಹಟ್ಟಿಯಲ್ಲೇ ತಿರುಗಾಡುತ್ತಾರೆ. ಮಕ್ಕಳಿಗೆ ಏಳೆಂಟು ವರ್ಷ ತುಂಬವುದರೊಳಗಾಗಿ ದನ, ಕುರಿ, ಮೇಕೆ ಕಾಯಲು ಕಳುಹಿಸುತ್ತಾರೆ. ಈ ಎರಡು ಪಂಗಡಗಳಲ್ಲಿ ಬಾಲ ಕಾರ್ಮಿಕ ಪದ್ಧತಿ ಸ್ವಲ್ಪ ಹೆಚ್ಚಾಗಿ ಕಂಡು ಬರುತ್ತದೆ. ಬಹುಪಾಲು ಮ್ಯಾಸಬೇಡರು ಬಡತನದ ರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ಅಂದಿನ ಕೂಲಿ ಅಂದಿನ ಊಟಕ್ಕೆ ಸರಿಹೊಂದುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದರೆ ಕಾಡುಗೊಲ್ಲರು ಕುರಿ, ಮೇಕೆ ಮತ್ತು ಪಶುಪಾಲನೆಯ ಜೊತೆಗೆ ಕಷ್ಟ ಜೀವಿಗಳಾಗಿ ದುಡಿಯುವುದರಿಂದ ಮ್ಯಾಸಬೇಡರಿಗಿಂತ ಕಾಡುಗೊಲ್ಲರು ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದ್ದಾರೆ.

ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಮಳೆ ಬೆಳೆಗಳ ವೈಫಲ್ಯತೆಯಿಂದ ಜನರು ಸಂಕಷ್ಟದಲ್ಲಿದ್ದಾರೆ. ಹಿರಿಯೂರು ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದ್ದಾರೆ. ಒಂದೆರೆಡು ಎಮ್ಮೆ, ಹಸುಗಳಿದ್ದವರು ಹಾಲು ತುಪ್ಪಗಳನ್ನು ನಗರಕ್ಕೆ ತಂದು ಮಾರಾಟಮಾಡಿ ಜೀವನಾವಶ್ಯಕ ವಸ್ತುಗಳನ್ನು ಕೊಂಡು ಕೊಳ್ಳುತ್ತಾರೆ. ದನ, ಕುರಿ ಕಾಯುವ ಕೆಲವೊಂದು ಮಕ್ಕಳು ಅಡವಿಯಲ್ಲಿ ಸಿಗುವಂಥ ಹೊಂಗೆಬೀಜ, ಬೇವಿನಬೀಜ ಮತ್ತು ಉರುವಲ ಕಟ್ಟಿಗೆಗಳನ್ನು ತಂದು ಹಳ್ಳಿಯಲ್ಲಿನ ಅಂಗಡಿಗಳಿಗೆ ಹಾಕಿ ಹಣ ಸಂಗ್ರಹಿಸುತ್ತಾರೆ. ಪ್ರಸ್ತುತ ಬಹುಪಾಲು ಮಕ್ಕಳು ನಗರದಲ್ಲಿ ಮನೆ ಕಟ್ಟುವ ಕಟ್ಟಡದ ಕೆಲಸಕ್ಕೆ ಮತ್ತು ಕಾರ್ಖಾನೆಗಳಲ್ಲಿ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾರೆ.

ಆಸ್ತಿ-ಪಾಸ್ತಿ ಇಲ್ಲದ ಕೆಲವೊಂದು ಬಡಕುಟುಂಬಗಳಿಗೆ ಸಂಪಾದನೆ ಮಾಡುವ ಯಾವ ವೃತ್ತಿಗಳು ಗೊತ್ತಿಲ್ಲದಿರುವದರಿಂದ, ಯಾವ ವೃತ್ತಿ ಮಾಡಬೇಕು? ಯಾವ ವೃತ್ತಿ ಕೈಬಿಡ ಬೇಕು? ಎಂಬ ಯೋಚನೆ ಕಾಡುತ್ತಿದೆ. ಬೇಟೆ ಪಶುಪಾಲನೆ ಮತ್ತು ಕೃಷಿ ಜೀವನವನ್ನು ಕೈಬಿಡದೆ ಹೊಸ ವೃತ್ತಿಗಳಿಗೆ ಹೊಂದಿಕೊಳ್ಳದೆ 'ವೃತ್ತಿ ಸಂಘರ್ಷಕ್ಕೆ' ಸಿಲುಕಿದ್ದಾರೆ. ಚಳ್ಳಕೆರೆ ಸುತ್ತಮುತ್ತ ಕೆಲವೊಂದು ಮ್ಯಾಸಬೇಡರ ಹಟ್ಟಿಗಳಲ್ಲಿ 'ಮಂಡಕ್ಕಿ ಭಟ್ಟಿ'ಗಳನ್ನು ಇಟ್ಟುಕೊಂಡು ಜೀವನ ನಿರ್ವಹಿಸುತ್ತಿದ್ದಾರೆ.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬೇಟೆ ಮತ್ತು ಪಶುಪಾಲನೆ ವೃತ್ತಿಯನ್ನು ಕೈಬಿಟ್ಟು ಕುರಿ ಸಾಕಣಿಕೆ ಮತ್ತು ವ್ಯವಸಾಯ ವೃತ್ತಿಗಳನ್ನು ಕೈಗೊಳ್ಳುತ್ತಿದ್ದಾರೆ. ಗುಡಿಸಲುಗಳು ಬದಲಾಗಿ ಮನೆಗಳು, ದೇವರ ಗುಬ್ಬಗಳಿಗೆ ಬದಲಾಗಿ ಗುಡಿಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ವ್ಯವಸಾಯಕ್ಕೆ ಕಬ್ಬಿಣ ನೇಗಿಲು, ಟ್ರ್ಯಾಕ್ಟರ್, ಕ್ರೀಮಿನಾಶಕ ಔಷಧಿಗಳನ್ನು ಬಳಸತ್ತಿದ್ದಾರೆ. ಆಹಾರ ಬೆಳಗಳ ಜೊತೆಗೆ ವಾಣಿಜ್ಯ ಬೆಳೆಗಳಾದ ಶೇಂಗಾ, ಈರುಳ್ಳಿ ರೇಷ್ಮೆ, ತೆಂಗು, ಅಡಿಕೆ ಮತ್ತು ಬಾಳೆಗಳನ್ನು ಬೆಳೆಯುತ್ತಿದ್ದಾರೆ. ಹಳೆಯ ಕಾಲದ ಬೇಸಾಯ ಪದ್ಧತಿಗಳನ್ನು ಕೈಬಿಟ್ಟು ವೈಜ್ಞಾನಿಕ ಬೇಸಾಯ ಪದ್ಧತಿಗಳಲ್ಲಿ ತೊಡಗಿದ್ದಾರೆ. ಸರ್ಕಾರದ ಸೌಲಭ್ಯಗಳಿಂದ ಬಂಜರು ಭೂಮಿಗಳನ್ನು ನೀರಾವರಿಗಳನ್ನಾಗಿ ಮಾಡಿ ಉತ್ತಮ ಬೀಜ, ಗೊಬ್ಬರ, ಔಷಧಿಗಳನ್ನು ಬಳಸಿಕೊಂಡು ಉತ್ತಮ ಬೆಳೆ ಬೆಳೆಯುತ್ತಿದ್ದಾರೆ. ಹತ್ತು ಹಲವಾರು ಬ್ಯಾಂಕುಗಳು ಮತ್ತು ಕೃಷಿ ಇಲಾಖೆ ಈ ಬುಡಕಟ್ಟುಗಳ ಏಳಿಗೆಗಾಗಿ ಪ್ರೋತ್ಸಾಹ ನೀಡುತ್ತಿವೆ. ಮೊದಲಿಗಿಂತ ಈಗ ಜನ ಕಷ್ಟಪಟ್ಟು ವ್ಯವಸಾಯ ಮಾಡುತ್ತಿದ್ದಾರೆ. ಅವಿಭಕ್ತ ಕುಟುಂಬಗಳು ನಾಶವಾಗಿ ವಿಭಕ್ತ ಕುಟುಂಬಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಮಕ್ಕಳಿಗೆ ಶಿಕ್ಷಣ ಮತ್ತು ಸಂಸ್ಕಾರ ಕೊಡುತ್ತಿದ್ದಾರೆ. ನೀರಾವರಿ ಸೌಲಭ್ಯಗಳಿಂದ ನಿರುದ್ಯೋಗ ಮತ್ತು ಅರೆ ಉದ್ಯೋಗಗಳು ದೂರವಾಗುತ್ತಿವೆ. ಆರ್ಥಿಕ ಮಟ್ಟ ಸುಧಾರಿಸುತ್ತಿದೆ. ಜೀವನ ಮಟ್ಟ ಈಗ ಸುಧಾರಿಸಿರುವುದರಿಂದ ಜೀತ ಪದ್ಧತಿ ಮತ್ತು ಶೋಷಣೆ ಕಡಿಮೆಯಾಗುತ್ತಿದೆ. ಆದರೂ ಈ ಪ್ರದೇಶದಲ್ಲಿ ಬಾಲಕಾರ್ಮಿಕ ಪದ್ಧತಿ ಅಧಿಕವಾಗಿದೆ. ಚಿತ್ರದುರ್ಗ ಜಿಲ್ಲೆಯ ಈ ಎರಡು ಬುಡಕಟ್ಟುಗಳು ಆರ್ಥಿಕವಾಗಿ ಸುಧಾರಣೆ ಹೊಂದಬೇಕಾದರೆ ಪ್ರಾಮಾಣಿಕ ದುಡಿಮೆ ಮತ್ತು ಜೀವನ ಅತ್ಯವಶ್ಯಕವಾಗಿದೆ. ಪ್ರಾಚೀನ ಕಾಲದಿಂದ ಬೆಳೆದು ಬಂದ ಗೊಡ್ಡು ಸಂಪ್ರದಾಯಗಳು, ಆಚಾರ ವಿಚಾರಗಳು, ದುಂದುವೆಚ್ಚ, ಸೋಮಾರಿತನ, ಕುಡಿತ ಮೊದಲಾದ ಸಾಮಾಜಿಕ ಸಮಸ್ಯೆಗಳನ್ನು ಕೈಬಿಡಬೇಕು. ಪಶುಪಾಲನೆ, ಕೃಷಿ ಎರಡನ್ನೇ ನಂಬಿಕೊಳ್ಳದೆ ವ್ಯಾಪಾರ, ಸ್ವಯಂ ಉದ್ಯೋಗ ಮತ್ತು ಸರ್ಕಾರಿ ನೌಕರಿಗಳಲ್ಲೂ ತೊಡಗಿಕೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್ ಸೂಚಿಸಿದ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ತ್ರಿವಳಿ ಸೂತ್ರಗಳನ್ನು; ಸ್ವ-ಸುಧಾರಣೆ ಸ್ವ-ಏಳ್ಗೆ, ಸ್ವಾವಲಂಬನೆ, ಸ್ವಾಭಿಮಾನ ಹಾಗೂ ಸ್ವ-ನಂಬಿಕೆ ಎಂಬ ಪಂಚಸೂತ್ರಗಳನ್ನು ಈ ಎರಡೂ ಬಡುಕಟ್ಟುಗಳು ಅರ್ಥಮಾಡಿಕೊಳ್ಳಬೆಕಾಗಿದೆ. ಹಳೆಯ ಮಾದರಿಯ ವ್ಯವಸಾಯ ಪದ್ಧತಿಗಳನ್ನು ಕೈಬಿಟ್ಟು ವೈಜ್ಞಾನಿಕ ವ್ಯವಸಾಯ ಪದ್ಧತಿಗಳನ್ನು ಅಳವಡಿಸಿಕೊಂಡು ಆಹಾರ ಮತ್ತು ವಾಣಿಜ್ಯ ಎರಡು ಬೆಳೆಗಳನ್ನು ಸಮಾನಾಂತರವಾಗಿ ಬೆಳೆಯಬೇಕು. ಗೊಬ್ಬರ ಮತ್ತು ಹೈನುಗಾರಿಕೆಗಾಗಿ ಉತ್ತಮ ತಳಿಯ ಹಸು ಮತ್ತು ಎಮ್ಮೆಗಳನ್ನು ಸಾಕಬೇಕು ಒಂದು ಕುಟುಂಬ ಆರ್ಥಿಕವಾಗಿ ಮುಂದೆ ಬಂದರೆ, ಸಾಮಾಜಿಕವಾಗಿಯೂ ಅದು ಮುಂದೆ ಬರಲು ಸಾಧ್ಯವಿದೆ. ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಈ ಜನಾಂಗಗಳು ಪ್ರಾಮಾಣಿಕವಾಗಿ ಉಪಯೋಗಿಸಿಕೊಂಡು ಆರ್ಥಿಕವಾಗಿ ಮುಂದೆ ಬರಲು ಪ್ರಯತ್ನಿಸಬೇಕು. ಶ್ರೀಮಂತರ ಶೋಷಣೆ, ದಲ್ಲಾಳಿಗಳ ಅವ್ಯವಹಾಹ, ಜೀತಪದ್ಧತಿ, ಬಾಲಕಾರ್ಮಿಕ ಪದ್ಧತಿ ಮೊದಲಾದ ಸಾಮಾಜಿಕ ಸಮಸ್ಯೆಗಳತ್ತ ಸರ್ಕಾರ ಗಮನ ಹರಿಸಬೇಕಾಗಿದೆ. ಅರ್ಥರಲೇವಿಸ್‌ರು ಹೇಳಿದಂತೆ 'ನಾವು ಬಡತನ,ಅನಕ್ಷರತೆ ಹಾಗೂ ರೋಗರುಜಿನಗಳ ನಿವಾರಣೆಗೆ ಅಪೇಕ್ಷಿಸುತ್ತೇವೆ. ಆದರೆ ಇನ್ನೊಂದಡಿಯಲ್ಲಿ ಹತಾಶರಾಗಿ ಮೂಢನಂಬಿಕೆ, ಚಟಗಳು ಹಾಗೂ ಸಾಮಾಜಿಕ ಕಟ್ಟಳೆಗಳಿಗೆ

ಬಲಿಯಾಗುತ್ತಿದ್ದೆವೆ. ಇದರಿಂದ ಬಡತನ ನಿವಾರಣೆಯ ಬದಲಾಗಿ ಅದರ ವೃದ್ಧಿಯಾಗುತ್ತದೆ' ಎಂಬ ಮಾತು ಪ್ರಸ್ತುತ ಭಾರತೀಯ ಸಮಾಜಕ್ಕೆ ಅನ್ವಯಿಸುತ್ತದೆ.

೫. ಶೈಕ್ಷಣಿಕ ಸ್ಥಿತಿಗತಿ

ವ್ಯಕ್ತಿಯಲ್ಲಿರುವ ಪ್ರತಿಭೆಯನ್ನು ಹೊರಗೆಳೆದು ಅವನು ಅದನ್ನು ತನ್ನ ಜೀವನ ನಿರ್ವಹಣೆಗಾಗಿ ಬಳಸುವಂತೆ ತರಬೇತಿ ಕೊಡುವುದೇ ಶಿಕ್ಷಣವಾಗಿದೆ. ನಾಗರಿಕ ಪ್ರಪಂಚದಿಂದ ಪ್ರತ್ಯೇಕವಾಗಿ 'ಹಟ್ಟಿ' ಕಟ್ಟಿಕೊಂಡು ವಾಸಿಸುವ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಶಿಕ್ಷಣ ನುಂಗಲಾರದ ತುತ್ತಾಗಿದೆ. ಬಡತನ, ಅಜ್ಞಾನ ಮತ್ತು ಮೂಢನಂಬಿಕೆ ಮೊದಲಾದ ಕಾರಣಗಳಿಂದಾಗಿ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಾಗಿ ಕೂಲಿ ನಾಲಿ ಕಳುಹಿಸುವುದಕ್ಕೆ ಪಾಲಕರೆ ಬೆಂಬಲಿಸುತ್ತಾರೆ. ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕಿನ ಕೆಲವೊಂದು ಹಟ್ಟಿಯ ಮ್ಯಾಸಬೇಡರಿಗೆ ಸ್ಪಷ್ಟವಾಗಿ ಕನ್ನಡ ಮಾತನಾಡುವುದಕ್ಕೆ ಬರುವುದಿಲ್ಲ. ಸರ್ಕಾರದ ಪಠ್ಯಪುಸ್ತಕಕ್ಕೂ ಅವರು ಆಡುವ ಭಾಷೆಗೂ ಬಹಳ ಅಂತರವಿದೆ. ಕನ್ನಡ ಮತ್ತು ತೆಲಗು ಎರಡೂ ಭಾಷೆಯನ್ನೂ ಅಪಭ್ರಂಶವಾಗಿ ಬಳಸುತ್ತಾರೆ. ಕಾಡುಗೊಲ್ಲರ ಕೆಲವೊಂದು ಹಟ್ಟಿಗಳಲ್ಲಿ ಇಂದಿಗೂ ತಲೆಗೆ ತುಪ್ಪ ಹಚ್ಚಿಕೊಂಡು, ಚಡ್ಡಿ, ನಿಕ್ಕರ್, ಬನಿನಲ್ಲಿಯೇ ಮಕ್ಕಳು ಶಾಲೆಗೆ ಹೋಗುತ್ತಾರೆ. ಅನ್ನ, ಬಟ್ಟೆ, ಪುಸ್ತಕಗಳ ಕೊರತೆಯಿಂದ, ಪಾಲಕರ ಬೇಜಾವಾಬ್ದಾರಿತನದಿಂದ ಮತ್ತು ಶಿಕ್ಷಕರ ಅಸಡ್ಡೆತನದಿಂದ ಶ್ರೀಮಂತರ ಮಕ್ಕಳ ಪಕ್ಕದಲ್ಲಿ ಸರಿಸಮನವಾಗಿ ಕುಳಿತು ಕೊಳ್ಳದೆ ಸಂಕೋಚ ಭಾವನೆಯಿಂದಾಗಿ ಈ ಮಕ್ಕಳು ಶಾಲೆಗೆ ತಪ್ಪಿಸುತ್ತಾರೆ.

ಪಶುಪಾಲನೆ ಮತ್ತು ಕೃಷಿ ಎರಡನ್ನೇ ನಂಬಿ ಜೀವಿಸುವ ಈ ಜನಾಂಗದಲ್ಲಿ ಬಾಲಕಾರ್ಮಿಕ ಪದ್ಧತಿ ಅಧಿಕವಾಗಿದೆ. ಏಳೆಂಟು ವರ್ಷದ ಮಕ್ಕಳು ಶಾಲೆಬಿಟ್ಟು ದನ, ಕರು, ಕುರಿ, ಮೇಕೆಗಳ ಹಿಂದೆ ತಿರುಗುವ ದೃಶ್ಯ ಕ್ಷೇತ್ರಕಾರ್ಯದಲ್ಲಿ ಕಂಡು ಬಂದಿದೆ. ಆಕಸ್ಮಿಕವಾಗಿ ಮಕ್ಕಳು ಶಾಲೆಗೆ ಹೋಗುತ್ತಿದ್ದರೂ ಸುಗ್ಗಿ ಮತ್ತು ಬೇಸಾಯದ ಕಾಲದಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಕೃಷಿ ಪ್ರಧಾನ ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳ ಶ್ರಮ ಅತ್ಯವಶ್ಯಕವಾಗಿದೆ. ಅವಿಭಕ್ತ ಕುಟುಂಬದಲ್ಲಿ ವ್ಯಕ್ತಿಯ ಲಿಂಗ, ವಯಸ್ಸು ಮತ್ತು ಪ್ರತಿಭೆಗೆ ತಕ್ಕಂತೆ ಕೆಲಸ ಕಾರ್ಯಗಳನ್ನು ಹಂಚಿ ಕೊಡುವುದರಿಂದ, ಚಿಕ್ಕ ಮಕ್ಕಳನ್ನು ಎತ್ತಿಕೊಳ್ಳುವುದು, ಆಡಿಸುವುದು, ಹುಲ್ಲು, ನೀರು ತರುವುದು, ಹೊಲಗದ್ದೆಗಳಿಗೆ ಬುತ್ತಿಕೊಟ್ಟು ಬರುವುದು ಮೊದಲಾದ ಸಣ್ಣ ಪುಟ್ಟ ಕೆಲಸ ಕಾರ್ಯಗಳಿಗೆ ಮಕ್ಕಳನ್ನು ಬಳಸಿಕೊಳ್ಳುತ್ತಾರೆ.

ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಶೈಕ್ಷಣಿಕವಾಗಿ ಮುಂದುವರಿದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಿವೆ. ಆದರೆ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಹಟ್ಟಿಗಳಿವೆ. ಕೆಲವೊಂದು ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ನೋಡದೆ ಇರುವಂಥ ಜನತೆ ಹಟ್ಟಿಗಳಲ್ಲಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಲ್ಲಿ ಶೇಕಡ ೩೦%ರಷ್ಟು ಕಾಡುಗೊಲ್ಲರಲ್ಲಿ ಶೇಕಡ ೧೫%ರಷ್ಟು ಸಾಕ್ಷರತೆ ಪ್ರಮಾಣ ಕಂಡು ಬರುತ್ತದೆ. ಈ ಎರಡು ಜನಾಂಗದಲ್ಲಿ ಶೇಕಡ ೩%ರಷ್ಟು ಮಾತ್ರ ಪದವಿ ಪಡೆದಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಬೆರಳೆಣಿಕೆಯಷ್ಟು ಜನರು ಮಾತ್ರ ಪದವಿಧರರಾಗಿದ್ದಾರೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರ ವಾಸಿಸುವ ಪ್ರದೇಶ ಮತ್ತು ಹಟ್ಟಿಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಾಗಲಿ ಅಥವಾ ಶಿಕ್ಷಣ ಇಲಾಖೆಯಾಗಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಕೆಲವೊಂದು ಶಿಕ್ಷಕರು ಕೃಷಿ, ವ್ಯಾಪಾರ, ಬಡ್ಡಿವ್ಯವಹಾರ ಮತ್ತು ಮಧ್ಯಪಾನ ಮಾಡುವ ಪ್ರವೃತ್ತಿಗಳನ್ನು ಕ್ಷೇತ್ರಕಾರ್ಯದಲ್ಲಿ ಗುರುತಿಸಲಾಗದೆ. ಧಾರವಾಡ, ಬೆಳಗಾವಿ, ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ, ಈ ಚಿತ್ರದುರ್ಗ ಜಿಲ್ಲೆಯನ್ನು ಹೋಲಿಕೆ ಮಾಡಿದರೆ, ಶಿಕ್ಷಣ ಕ್ಷೇತ್ರದಲ್ಲಿ ಬಹಳ ಹಿಂದೆ ಸರಿಯುತ್ತಿದೆ. ಸ್ತ್ರೀ ಮತ್ತು ಪುರುಷರಿಗೆ ಹೋಲಿಸಿದರೆ ಸ್ತ್ರೀಯರ ಸಾಕ್ಷರತೆ ಪ್ರಮಾಣ ಶೇಕಡ ೧೦%ರಷ್ಟು ಮಾತ್ರ ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುತ್ತದೆ.

ಈ ಎರಡು ಜನಾಂಗ ಇತ್ತೀಚಿಗೆ ಶಿಕ್ಷಣಕ್ಕೆ ಬಹಳಷ್ಟು ಮಹತ್ವ ಕೊಡುತ್ತಿದ್ದಾರೆ. ಅಲ್ಲಲ್ಲಿ ಅವರ ಸಂಘ ಸಂಸ್ಥೆಗಳು ಶಿಕ್ಷಣ ಸಂಸ್ಥೆಗಳನ್ನು ತೆಗೆದು ಆ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿವೆ. ತಮ್ಮ ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕಳುಹಿಸುತ್ತಿದ್ದಾರೆ. ಮೂಢನಂಬಿಕೆಗಳನ್ನು ಬದಿಗೊತ್ತಿ ವೈಜ್ಞಾನಿಕ ಅಂಶಗಳನ್ನು ಮೈಗೂಡಿಸಿಕೊಂಡು ಹೆಣ್ಣು ಮತ್ತು ಗಂಡು ಎಂಬ ಭೇದವಿಲ್ಲದೆ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. 'ಹಟ್ಟಿ'ಗಳಲ್ಲೇ ಕಟ್ಟಿಕೊಂಡ ಹಲವು ವಿದ್ಯಾವಂತ ಯುವಕ ಸಂಘ ಸಂಸ್ಥೆಗಳು ಹಳೆಯ ಸಂಪ್ರದಾಯ ಮತ್ತು ನಂಬಿಕೆಗಳನ್ನು ಹೊರಹಾಕಿ ಶಿಕ್ಷಣ ಕ್ಷೇತ್ರಕ್ಕೆ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ಆದರೂ ಹೇಳಿ ಕೊಳ್ಳುವಷ್ಟು ಶಿಕ್ಷಣಮಟ್ಟ ಸುಧಾರಿಸಿಲ್ಲ.

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಜನಾಂಗಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರಬೇಕಾದರೆ ಮೊದಲು ಶಿಕ್ಷಣಕ್ಷೇತ್ರದಲ್ಲಿ ಸುಧಾರಣೆಯಾಗಬೇಕು. ಸರ್ಕಾರ ಈ ಜನಾಂಗ ವಾಸಿಸುವ ಪ್ರದೇಶದ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಎಲ್ಲಾ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಕೊಡಬೇಕು. ಪ್ರತಿಯೊಂದು ಹಟ್ಟಿಗೂ ಕನಿಷ್ಟ ಪಕ್ಷ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯನ್ನಾದರೂ ತೆರೆದು. ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿ, ಪ್ರಾಮಾಣಿಕ ಶಿಕ್ಷಕರನ್ನು ಇಂಥ ಹಟ್ಟಿಗಳಿಗೆ ಕಳುಹಿಸಿಕೊಡಬೇಕು. ಕರ್ತವ್ಯ ನಿಷ್ಠೆಯಿಂದ ದುಡಿಯುವ ಮತ್ತು ಹಟ್ಟಿಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಸರ್ಕಾರ, ಸಂಘ, ಸಂಸ್ಥೆಗಳು ಪ್ರಶಸ್ತಿ ಮತ್ತು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕು. ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕು. ಈ ಎರಡೂ ಜನಾಂಗದಲ್ಲಿ ಪ್ರಸ್ತುತ ಪ್ರಚಲಿತವಿರುವ ಗೊಡ್ಡು ಸಂಪ್ರದಾಯ ಮತ್ತು ಆಚಾರ ವಿಚಾರಗಳು, ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ಅಸ್ಪೃಶ್ಯತೆ ಹೆಣ್ಣು ಮತ್ತು ಗಂಡುಗಳ ನಡುವಿನ ಅಂತರ ಮೊದಲಾದ ಸಾಮಾಜಿಕ ಸಮಸ್ಯೆಗಳತ್ತ ಸರ್ಕಾರ ಮತ್ತು ಸಂಘ, ಸಂಸ್ಥೆಗಳು ಸೂಕ್ತ ಕ್ರಮ ಕೈಗೊಂಡರೆ ಇನ್ನೂ ಹತ್ತು ವರ್ಷಗಳಲ್ಲಾದರೂ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಸುಧಾರಿಸಬಹುದು.

೬. ಆರೋಗ್ಯ ಮತ್ತು ನೈರ್ಮಲ್ಯ

ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಯಾವುದೇ ಕಲ್ಪನೆ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಇಲ್ಲದಿರುವುದರಿಂದ ಅವರು ಹಲವಾರು ರೋಗ ರುಜಿನಗಳಿಗೆ ಬಲಿಯಾಗುತ್ತಾರೆ. ಮಲೇರಿಯಾ, ಜ್ವರ, ಕೆಮ್ಮು,

ದಮ್ಮು, ಅಸ್ತಮಾ, ಸಿಡುಬು, ದಡಾರ ಮುಂತಾದ ರೋಗಗಳು ಹಟ್ಟಿಗಳಲ್ಲಿ ಕಂಡು ಬರುತ್ತವೆ. ಆಧುನಿಕ ವೈದ್ಯಕೀಯ ಸೌಲಭ್ಯಗಳು ಮತ್ತು ಆಸ್ಪತ್ರೆಗಳ ಬಗ್ಗೆ ಅವರಿಗೆ ನಂಬಿಕೆ ಇಲ್ಲದಿರವುದರಿಂದ, ಮಂತ್ರ ತಂತ್ರಗಳನ್ನೇ ಅವರು ನಂಬುತ್ತಾರೆ. ರೋಗಗಳು ವಾಸಿಯಾಗಲು ದೇವರು, ಪಂಡಿತ. ದಾಟು, ನಾಟಿಪದ್ಧತಿ ಮೊದಲಾದವುಗಳಿಗೆ ಮೊರೆ ಹೋಗುತ್ತಾರೆ. ಹುಟ್ಟು ಸಾವು ಸೂತಕವೆಂದು ತಿಳಿದು ಹಟ್ಟಿಯ ಹೊರಗೆ ಹೆರಿಗೆ ಮಾಡಿಸುತ್ತಾರೆಯೇ ವಿನಃ ಆಸ್ಪತ್ರೆಗೆ ಹೋಗುವುದಿಲ್ಲ. ಯಾವುದೇ ಕಾಯಿಲೆಗೆ ದೇವರ ಧೂಳ್ತ ತೀರ್ಥಕ್ಕೆ ಕೊಟ್ಟಷ್ಟು ಮಹತ್ವ ಮಾತ್ರ ಔಷಧಿಗಳಿಗೆ ಕೊಡುವುದಿಲ್ಲ. ಸಾಮಾನ್ಯವಾಗಿ ಈ ಎರಡು ಜನಾಂಗದ ದಾಸಯ್ಯ ಮತ್ತು ಪೂಜಾರಿಗಳು ಆಸ್ಪತ್ರೆಗೆ ಹೋಗುವುದಿಲ್ಲ. ಗುಳಿಗೆ ಮತ್ತು ಔಷಧಿಗಳನ್ನು ಮುಟ್ಟುವುದಿಲ್ಲ. ಹಿರಿಯೂರು ತಾಲ್ಲೂಕು ಯರಬಳ್ಳಿ ದೊಡ್ಡಗೊಲ್ಲರ ಹಟ್ಟಿಯ ಹಾಲು ಕುಡಿದ ಸ್ವಾಮಿ ದೇವರ ಪೂಜಾರಿ ನಿಂಗಣ್ಣನವರು ಎಂತಹ ಕಾಯಿಲೆ ಬಂದರೂ ಆಸ್ಪತ್ರೆಗೆ ಹೋಗುವುದಿಲ್ಲವಂತೆ.

ಮಕ್ಕಳಿಗೆ ದಡಾರ ಎದ್ದರೆ ಗೌರಸಂದ್ರಮ್ಮಗೆ, ಕೆಮ್ಮಾದರೆ ಕುಕ್ಕಲಾಟಮ್ಮಗೆ ಪೂಜೆ ಮಾಡಿಸಿ ಎಡೆ ಕೊಟ್ಟು ಬರುತ್ತಾರೆ. ದನಕರು ಕುರಿ ಮೇಕೆಗಳು ರೋಗದಿಂದ ಬಳಲಿ ಸಾಯುತ್ತಿದ್ದರೆ ದಾಟು ತೆಗೆಸುತ್ತಾರೆ. ಇಲ್ಲವೆ ಮೂಗಬಸವಣ್ಣಗೆ ಪೂಜೆ ಮಾಡಿಸುತ್ತಾರೆ. ಹೆರಿಗೆ ಕಷ್ಟವಾದರೆ ಮನೆ ದೇವರಿಗೆ ಮುಡುಪು ಕಟ್ಟಿಕೊಳ್ಳುತ್ತಾರೆ. ಕೈ ಕಾಲು ಉಳುಕಿದರೆ ಎಣ್ಣೆದಾರ (ಎಳೆ) ಕಟ್ಟಿಕೊಳ್ಳುತ್ತಾರೆ. ಕಿವಿ ಸೋರುತ್ತಿದ್ದರೆ ನಾಗಪ್ಪಗೆ ಪೂಜೆ ಮಾಡಿಸುತ್ತಾರೆ. ಹೀಗೆ ಹಲವಾರು ರೋಗಗಳಿಗೆ ಅವರದೆ ಆದಂತಹ ಸಾಂಪ್ರದಾಯಿಕ ಪದ್ಧತಿಗಳನ್ನು ಅನುಸರಿಸುತ್ತಾರೆ.

ಈ ಎರಡು ಬುಡಕಟ್ಟು ಜನಾಂಗ ವಾಸಿಸುವ ಮನೆ ಅಥವಾ ಗುಡಿಸಲುಗಳಿಗೆ ಸರಿಯಾದ ಕಿಟಕಿ ಬಾಗಿಲುಗಳಿಲ್ಲದೆ ಗಾಳಿ ಬೆಳಕಿನ ಸಮಸ್ಯೆ ಕಂಡು ಬರುತ್ತದೆ. ತಾವು ವಾಸಿಸುವ ಮನೆಯ ಹತ್ತಿರವೇ ದನಕರು ಮತ್ತು ಕುರಿ ಮೇಕೆಗಳ ಹಟ್ಟಿಗಳು, ತಿಪ್ಪೇಗುಂಡಿಗಳು ಮನೆಯ ಸುತ್ತಾ ಮುತ್ತಾ ಕಕ್ಕಸ್ಸು ಮಾಡುವುದು ಮೊದಲಾದ ಅನೈರ್ಮಲ್ಯದ ವಾತಾವರಣದಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ಮನೆಯಲ್ಲಿರುವ ಬಟ್ಟೆ ಬರೆಗಳು, ಅಡಿಗೆಯ ಉಪಕರಣಗಳು, ಆಹಾರ ಸಾಮಾಗ್ರಿಗಳನ್ನು ಕೂಡ ಶುಚಿಯಾಗಿ ಇಟ್ಟುಕೊಳ್ಳುವುದಿಲ್ಲ. ಕೆರೆ ಕಟ್ಟೆಯಲ್ಲಿ ನಿಂತ ನೀರನ್ನು ಬಳಸುವುದು, ದನ ಕರುಗಳ ಮೈತೊಳೆಯುವುದು, ಕಕ್ಕಸು ತೊಳೆಯುವುದು ಮತ್ತು ಅದೆ ನೀರನ್ನು ಅಡಿಗೆಗೆ ಬಳಸುವುದರಿಂದ ಹಲವಾರು ಸಾಂಕ್ರಾಮಿಕ ರೋಗಗಳಿಗೆ ಇವರು ಬಲಿಯಾಗುತ್ತಾರೆ. ನಾಗರಿಕ ಸಂಪರ್ಕಗಳ ಪ್ರಭಾವದಿಂದ ಮಧ್ಯಪಾನ ಮತ್ತು ಧೂಮಪಾನ ಚಟಕ್ಕೆ ಬಲಿಯಾಗಿದ್ದಾರೆ. ಈ ಪ್ರದೇಶದ ಕಾಡುಗೊಲ್ಲರಿಗಿಂತ ಮ್ಯಾಸಬೇಡರಲ್ಲಿ ಮಧ್ಯಪಾನ ಮತ್ತು ಧೂಮಪಾನ ಹೆಚ್ಚಾಗಿದೆ. ಹಾಲು ಮೊಸರು ಸಮೃದ್ಧಿಯಾಗಿದ್ದರೂ ದುಡ್ಡಿನಾಸೆಯಿಂದ ಪಟ್ಟಣಗಳಿಗೆ ತಂದು ಮಾರಾಟ ಮಾಡುತ್ತಾರೆಯೇ ವಿನಃ ಮಕ್ಕಳು ಮರಿಗಳಿಗೆ ಉಣ್ಣಿಸುವುದು ಕಡಿಮೆಯೇ. ಆದ್ದರಿಂದ ಪೌಷ್ಠಿಕಾಂಶದ ಕೊರತೆಯಿಂದ ಮಕ್ಕಳು ಬಳಲುತ್ತಾರೆ.

ಭಾರತ ಸ್ವಾತಂತ್ರ್ಯ ಪಡೆದ ನಂತರ ಬುಡಕಟ್ಟು ಜನರ ಆರೋಗ್ಯ ಮತ್ತು ನೈರ್ಮಲ್ಯದ ಅಭಿವೃದ್ಧಿ ದೃಷ್ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇವರು ವಾಸಿಸುವ ಪ್ರದೇಶಗಳಲ್ಲಿ ಆಸ್ಪತ್ರೆ ಇಲ್ಲವೆ ಸಂಚಾರಿ ಆಸ್ಪತ್ರೆಗಳನ್ನು ತೆರೆಯಲಾಗಿದೆ. ಇವರ ವೈದ್ಯಕೀಯ

ತಪಾಸಣೆಯನ್ನು ಉಚಿತವಾಗಿ ಮಾಡಲಾಗುತ್ತಿದೆ. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆಧುನಿಕ ವೈದ್ಯಕೀಯ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅವರನ್ನು ಪ್ರೋತ್ಸಾಹಿಸಲಾಗುತ್ತಿದೆ. ಸರ್ಕಾರದ ಈ ಎಲ್ಲಾ ಪ್ರಯತ್ನಗಳಿಂದ ಈ ಎರಡೂ ಜನಾಂಗದಲ್ಲಿ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆ ಮೂಡುತ್ತಿದೆ. ಶುಚಿತ್ವ ಮತ್ತು ಆರೋಗ್ಯದ ಬಗ್ಗೆ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ. ಕೆಲವೊಂದು ಪ್ರದೇಶಗಳಲ್ಲಿ ಹೆರಿಗೆ ಗುಡಿಸಲುಗಳ ಬದಲಾಗಿ ಹಟ್ಟಿಯ ಹೊರಗೆ ಚಿಕ್ಕ ಕೋಣೆಗಳನ್ನು ಸರ್ಕಾರ ಉಚಿತವಾಗಿ ಕಟ್ಟಿಸಿಕೊಟ್ಟಿದೆ. ಕುಡಿಯುವ ನೀರು ಆರೋಗ್ಯ ಶಿಕ್ಷಣ ನಾಗರೀಕತೆ ಮೊದಲಾದ ಅಂಶಗಳ ಬಗ್ಗೆ ಹಲವು ಸಂಘ ಸಂಸ್ಥೆಗಳು ಮಹಿಳಾ ಮಂಡಳಿಗಳು ಈ ಜನಾಂಗದ ಆರೋಗ್ಯ ಮತ್ತು ನೈರ್ಮಲ್ಯವನ್ನು ಕುರಿತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿವೆ. ಸ್ವಾತಂತ್ರ್ಯನಂತರ ಸರ್ಕಾರ ಹಲವಾರು ವೈದ್ಯಕೀಯ ಸೌಲಭ್ಯಗಳನ್ನು ನೀಡಿದ್ದರೂ. ಇವುಗಳ ಸಂಪೂರ್ಣ ಉಪಯೋಗ ಪಡೆಯಲು ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಆಗುತ್ತಿಲ್ಲ ಇದಕ್ಕೆ ಪ್ರಮುಖ ಕಾರಣವೆಂದರೆ ಈ ಜನಾಂಗದ ವಿದ್ಯಾವಂತ ಯುವಕ ಯುವತಿಯರು ಕೂಡ ಗೊಡ್ಡು ಸಂಪ್ರದಾಯಗಳನ್ನು ಸ್ವೀಕರಿಸುತ್ತಾರೆಯೇ ವಿನಃ ಪ್ರತಿಭಟಿಸುವುದಿಲ್ಲ. ಆದರೆ ಇತ್ತೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಭಾವದಿಂದ ಈ ಎರಡೂ ಜನಾಂಗದ ಹಟ್ಟಿಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯದಲ್ಲಿ ಸಾಕಷ್ಟು ಸುಧಾರಣೆಗಳು ಅಥವಾ ಪರಿವರ್ತನೆಗಳು ಕಂಡು ಬರುತ್ತವೆ.

೭. ಧಾರ್ಮಿಕತೆ

ಮ್ಯಾಸಬೇಡ ಮತ್ತು ಕಾಡುಗೊಲ್ಲರ ಧಾರ್ಮಿಕ ಜೀವನವು ಧರ್ಮದೊಂದಿಗೆ ಬೆಸದು ಕೊಂಡಿದೆ. ಇವರಲ್ಲಿ ಶೈವ ಮತ್ತು ವೈಷ್ಣವ ಎರಡೂ ಸಂಪ್ರದಾಯಗಳುಂಟು. ಮ್ಯಾಸಬೇಡರಲ್ಲಿ 'ಮಂದಲನಾಯಕನ ಬೆಡಗಿನವರು ನಾಮದವರು ಮತ್ತು ಮಲ್ಲಿನಾಯಕನ ಬೆಡಗಿನವರು ಲಿಂಗದವರು' ಎಂದು ಕರೆಯುತ್ತಾರೆ. ಈ ಎರಡು ಪಂಗಡಗಳಲ್ಲಿ 'ಸರ್ವಚೇತನವಾದ' ಮತ್ತು 'ಕುಲದೇವತಾವಾದ' ಪದ್ಧತಿ ಆಚರಣೆಯಲ್ಲಿದೆ. ಕಾಡುಗೊಲ್ಲರಿಗೆ ಐದು ಪಂಚಲಿಂಗಗಳು; ಮ್ಯಾಸಬೇಡರಿಗೆ ಹನ್ನೆರಡು ಪೆಟ್ಟಿಗೆ ದೇವರುಗಳು ಬಹು ಮುಖ್ಯವಾಗಿವೆ. ದೇವರು, ಧರ್ಮ, ಮತ್ತು ಧಾರ್ಮಿಕತೆಗೆ ಬಹಳ ಮಹತ್ವ ಕೊಡುತ್ತಾರೆ. ಹುಟ್ಟಿದ ಮಕ್ಕಳಿಗೆ ಮನೆ ದೇವರ ಹೆಸರಿಟ್ಟು ಮೂರು ವರ್ಷ ತುಂಬುವದರೊಳಗಾಗಿ ತಲೆ ಕೂದಲು ತೆಗೆಸುತ್ತಾರೆ. ವೈಯಕ್ತಿಕ ಆಚರಣೆಗಳಿಗಿಂತ ಸಾಮೂಹಿಕ ಆಚರಣೆಗಳಿಗೆ ಬಹಳ ಮಹತ್ವ ನೀಡುತ್ತಾರೆ. ಹುಟ್ಟು ಮತ್ತು ಸಾವುಗಳು ಸೂತಕವೆಂದು ತಿಳಿದು ಅವುಗಳ ಬಗ್ಗೆ ಕಟ್ಟುನಿಟ್ಟಾದ ಸಂಪ್ರದಾಯಗಳಿವೆ. ಹಟ್ಟಿಯೊಳಗಿರುವ ದೇವರ ಭಯದಿಂದ ಹಟ್ಟಿಯ ಹೊರಗೆ 'ಗುಡ್ಲ' ಕಟ್ಟಿ ಹೆರಿಗೆ ಮಾಡಿಸುತ್ತಾರೆ. ಋತುಮತಿಯಾದ ಹೆಣ್ಣನ್ನು ಕೂಡ ಹಟ್ಟಿ ಹೊರಗೆ ಇಡುತ್ತಾರೆ. ಹಳೆಯ ಸಂಪ್ರದಾಯಗಳಿಗೆ ಅಂಟಿಕೊಂಡ ಈ ಜನಾಂಗ ವಾಸದ ಮನೆ ಮತ್ತು ದೇವಸ್ಥಾನಗಳನ್ನು ಹುಲ್ಲುಗಳಿಂದಲೇ ಕಟ್ಟಿಕೊಳ್ಳುತ್ತಾರೆ. ತಮ್ಮ ಹಟ್ಟಿ ಮತ್ತು ದೇವಸ್ಥಾನದ ಸುತ್ತ ಮುಳ್ಳು ಬೇಲಿಯನ್ನು ಹಾಕಿಕೊಳ್ಳುತ್ತಾರೆ. ಈ ಬೇಲಿ ರಕ್ಷಣೆ ಮತ್ತು ಪವಿತ್ರತೆ ಎರಡು ದೃಷ್ಟಿಯಿಂದ ಕಟ್ಟಿಕೊಳ್ಳುತ್ತಾರೆ. ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ಹಂಚಿ ಹುಲ್ಲಿನ ದೇವಸ್ಥಾನಗಳು ಕಂಡು ಬಂದರೆ, ಹೊಳಲ್ಕೆರೆ, ಹೊಸದುರ್ಗ ಮತ್ತು ಹಿರಿಯೂರು

ತಾಲ್ಲೂಕುಗಳಲ್ಲಿ ಬಾಳೆಪಟ್ಟೆ ಮತ್ತು ಮುತ್ತುಗದ ಎಲೆಯಿಂದ ನಿರ್ಮಿಸಿದ ದೇವರ ಗುಬ್ಬಗಳು ಕಂಡು ಬರುತ್ತವೆ. ಈ ಎರಡೂ ಜನಾಂಗ ದೇವರು, ಧರ್ಮ, ಕುಲ, ಹಬ್ಬ ಮತ್ತು ಜಾತ್ರೆಗಳಿಗೆ ಕೊಟ್ಟಷ್ಟು ಮಹತ್ವ ಆರ್ಥಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ಕೊಡುವುದಿಲ್ಲ.

ಈ ಎರಡು ಬುಡಕಟ್ಟುಗಳಲ್ಲಿ ಕಂಡು ಬರುವ ಕೆಲವು ಗೊಡ್ಡು ಸಂಪ್ರದಾಯಗಳಲ್ಲಿ ವೈಜ್ಞಾನಿಕ ಅಂಶಗಳನ್ನು ಗುರ್ತಿಸಬಹುದು. ಮುಟ್ಟಾದ ಹೆಣ್ಣು ಐದು ದಿನಗಳವರೆಗೆ; ಹೆರಿಗೆಯಾದ ಹೆಣ್ಣು ಒಂದು ತಿಂಗಳವರೆಗೆ; ಹಟ್ಟಿಯಿಂದ ಹೊರಗೆ ವಾಸಿಸಬೇಕು. ಹುಟ್ಟು, ಸಾವು ಮತ್ತು ಮುಟ್ಟು ಸಂದರ್ಭದಲ್ಲಿ ಶುಭಕಾರ್ಯ ಮಾಡಬಾರದು. ಎಂಬ ಬಲವಾದ ಕಟ್ಟು ಕಟ್ಟಳೆಗಳಿವೆ. ಉಡಿಗೆ-ತೊಡುಗೆಯಲ್ಲೂ ಚಡ್ಡಿ, ಚಲ್ಲಣ, ತಲೆಗೆ ಪೇಟ, ಹೆಂಗಸರು ಸೀರೆ, ರವಿಕೆ ತೊಡುತ್ತಾರೆ. ವಯಸ್ಸಾದ ಸಂಪ್ರದಾಯಸ್ಥ ಹೆಂಗಸರು ರವಿಕೆ ತೊಡುವುದಿಲ್ಲ. ಶ್ರೀಕೃಷ್ಣ ಗೋಪಿಕೆ ಸ್ತ್ರೀಯರ 'ರವಿಕೆ' ಕದ್ದೊಯ್ದಿದ್ದಾನಂತೆ, ಅದಕ್ಕಾಗಿ ರವಿಕೆತೊಡುವುದಿಲ್ಲವಂತೆ. ಶ್ರೀಕೃಷ್ಣನೆ ನಮ್ಮ ನಿಜವಾದ ಗಂಡ ಎಂದು ಭಾವಿಸಿ, ಗಂಡ ಸತ್ತರೂ 'ಗೊಲ್ಲಕಡಗ' ಅಥವಾ 'ಕೃಷ್ಣಕಡಗ' ತೆಗೆಯುವುದಿಲ್ಲ. ಗಂಡ ಸತ್ತರೂ ನಾವು ವಿಧವೆಯರಲ್ಲ ಎಂದು ಹೇಳುವ ಕಾಡುಗೊಲ್ಲರ ಹೆಣ್ಣು ಮಕ್ಕಳು ಸದಾ ಮುತ್ತೈದೆಯರಾಗಿ ಬಾಳುತ್ತಾರೆ. ಆದರೆ ಸಂಪ್ರದಾಯಸ್ಥ ಹೆಂಗಸರು ಇದನ್ನೂ ಒಪ್ಪದೆ, ಹಿರಿಯೂರು ತಾಲ್ಲೂಕು ಹಲವಾರು ಗೊಲ್ಲರ ಹಟ್ಟಿಗಳಲ್ಲಿ ಗಂಡ ಸತ್ತರೆ 'ತಾಳಿ-ಬಳೆ' ತೆಗೆಯುತ್ತಾರೆ. ಹೂವು, ಕುಂಕುಮ ನಿಷಿದ್ಧ. ಶುಭ ಕಾರ್ಯದಲ್ಲಿ ಕಳಸ ಕನ್ನಡಿ ಹಿಡಿಯುವುದಿಲ್ಲ. ಆದರೆ ಗೊಲ್ಲ ಕಡಗ ಮಾತ್ರ ಬಲಗೈಯಲ್ಲಿ ಇದ್ದೇ ಇರುತ್ತದೆ. ಈ ರವಿಕೆ ತೊಡದ ಸಂಪ್ರದಾಯ ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರಲ್ಲಿ, ಬೋವಿಗಳಲ್ಲಿ ಕುರುಬರಲ್ಲಿ ಮತ್ತು ಹರಿಜನರಲ್ಲೂ ಕಾಣಬಹುದು.

ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ವಿಶೇಷವಾಗಿ ಮಣ್ಣಿನ ಮಡಿಕೆ, ಕುಡಿಕೆ, ಮುಚ್ಚಳಗಳನ್ನು ಬಳಸುತ್ತಾರೆ. ಕಂಚು, ಹಿತ್ತಾಳೆ, ತಾಮ್ರ ಮೊದಲಾದ ಪಾತ್ರೆಗಳಿಗಿಂತ ಮಣ್ಣಿನ ಮಡಿಕೆಗಳೆ ಶ್ರೇಷ್ಠ ಎಂದು ಹೇಳುತ್ತಾರೆ. ದೇವಸ್ಥಾನಗಳಲ್ಲಿ ದೇವರಿಗೆ ತಳಿ ಅಥವಾ ಮೀಸಲು ಅಡಿಗೆ ಮಾಡುವಾಗ ಹೊಸ ಮಣ್ಣಿನ ಮಡಕೆಯನ್ನೇ ಬಳಸುತ್ತಾರೆ. ಕೆಲವೊಂದು ದೇವರುಗಳಿಗೆ ಕಾರ ಅಥವಾ ಸಂಬಾರ ಆಗುವುದಿಲವೆಂದು ಬೆಲ್ಲ, ಬಾಳೆಹಣ್ಣು, ಎಳಗಂಜಿಹಾಲು, ಮೊಸರು, ಮಜ್ಜಿಗೆಯನ್ನು ನೈವೇದಕ್ಕೆ ಬಳಸುತ್ತಾರೆ. ಉಪ್ಪು ಹಾಕದ ಸಾರು ಮತ್ತು ಹುರುಳಿ ಗುಗ್ಗರಿಯನ್ನು ದೇವರಿಗೆ ಎಡೆ ಹಾಕುತ್ತರೆ. ಕೆಲವೊಂದು ದೇವರುಗಳಿಗೆ ಆಹಾರ ಪದಾರ್ಥಗಳು ನಿಗಧಿಯಾಗಿರುತ್ತವೆ. ಹೊಸದುರ್ಗ ತಾಲ್ಲೂಕು ಹಾರ್ನಕಣಿವೆ ರಂಗಪ್ಪಗೆ ಸಕ್ಕರೆ ಬಾಳೆಹಣ್ಣು, ಹೊಳಲ್ಕೆರೆ ತಾಲ್ಲೂಕು ದುಮ್ಮಿ ಜುಂಜಪ್ಪಗೆ ಹಾಲು-ಬೆಲ್ಲ, ಮೊಳಕಾಲ್ಮೂರು ತಾಲ್ಲೂಕು ಚಿಕ್ಕುಂತಿ ಕಂಪಳರಂಗಸ್ವಾಮಿಗೆ ಬೆಲ್ಲ, ಬಾಳೆಹಣ್ಣು, ಚಳ್ಳಕೆರೆ ತಾಲ್ಲೂಕು ದೊಡ್ಡಚಲ್ಲರೂ ಬಯಲು ಹನುಮಂತರಾಯಗೆ ಹೋಳಿಗೆ ತುಪ್ಪ, ಸಾಣೀಕೆರೆ ಗಿಡದಗಳ ವೀರಚಿಕ್ಕಣ್ಣಗೆ ಎಳಗಂಜಿಹಾಲು ಬೆಲ್ಲ ಎಡೆ ಹಾಕುತ್ತಾರೆ.

ಈ ಎರಡು ಬುಡಕಟ್ಟುಗಳಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಶ್ರೀಮಂತವಾಗಿದೆ. ಯಾವುದೇ ಜೀವನ ಸಂಕಷ್ಟಗಳಿಗೆ ಅಥವಾ ಸಮಸ್ಯೆಗಳಿಗೆ ದೇವರು, ದೆವ್ವ, ಭೂತಗಳೇ ಕಾರಣವೆಂದು ನಂಬಿ ಹರಕೆ ಹೊತ್ತು

ತೀರಿಸುತ್ತಾರೆ. ಹಾವು, ಚೇಳು, ಮೊಂಡರಗಪ್ಪೆ ಮೊದಲಾದ ವಿಷ ಜಂತುಗಳು ಕಚ್ಚಿದರೆ ಚಿತ್ರಲಿಂಗೇಶ್ವರ, ಹಾರ್‍ನಕಣಿವೆ ರಂಗಪ್ಪ, ಮದ್ದನಕುಂಟೆ ಯರ್‍ರಪ್ಪ ವದ್ದಿಕೆರೆ ಸಿದ್ದಪ್ಪ, ಜುಂಜಪ್ಪ ಮೊದಲಾದ ದೇವರ ಧೂಳ್ತ ಮತ್ತು ತೀರ್ಥ ತಂದು ಹಾಕುತ್ತಾರೆ. 'ಹಾವು ಚೇಳು ಕಚ್ಚಿದರೆ ಹಾರ್‍ನಕಣಿವೆ ರಂಗಪ್ಪನ ಧೂಳ್ತ ಹಚ್ಚಿದರೆ ಸಾಕು ವಿಷ ಇಳಿಯುತ್ತದೆ; ಹಾವು ಚೇಳು ಕಚ್ಚಿಸಿಕೊಂಡವರು ನಮ್ಮ ಹಟ್ಟಿಯಲ್ಲಿ ಯಾರು ಸತ್ತಿಲ್ಲವೆಂದು ಹಿರಿಯೂರು ತಾಲ್ಲೂಕು ಬೀರೇನಹಳ್ಳಿಯ ಕಾಡುಗೊಲ್ಲರ ಬಿ.ಟಿ.ರಂಗಸ್ವಾಮಿ ಹೆಮ್ಮೆಯಿಂದ ಹೇಳುತ್ತಾರೆ.' ಈ ಸತ್ಯಾಂಶದ ಘಟನೆಗಳನ್ನು ಹೊಳಲ್ಕೆರೆ ತಾಲ್ಲೂಕು ಚಿತ್ರಹಳ್ಳಿ ಗ್ರಾಮದ ಕಾಡುಗೊಲ್ಲರ ಮತ್ತು ಸಮಾಜಶಾಸ್ತ್ರ ಉಪನ್ಯಾಸಕರಾದ ಪ್ರೊ. ಎನ್.ದೊಡ್ಡಪ್ಪನವರು ಒಪ್ಪಿಕೊಳ್ಳುತ್ತಾರೆ. ದೇವರ ಧೂಳ್ತ-ತೀರ್ಥದಲ್ಲಿರುವ ನಂಬಿಕೆ; ಮಾತ್ರೆ-ಔಷಧಿಗಳಲ್ಲಿಲ್ಲ.

ಈ ಎರಡು ಜನಾಂಗದ ಹಟ್ಟಿಗಳಲ್ಲಿ, ಹೊರಗಿನ ಜನ ಅಥವಾ ಸರ್ಕಾರಿ ನೌಕರರನ್ನು ಸಂಶಯದಿಂದಲೇ ಕಾಣುತ್ತಾರೆ. ಒಮ್ಮೆ ಒಬ್ಬ ವ್ಯಕ್ತಿಯ ಮೇಲೆ ನಂಬಿಕೆ ಹುಟ್ಟಿದರೆ ಸಾಕು ಪ್ರಾಣಕೊಡಲು ಸಿದ್ದರಾಗುತ್ತಾರೆ. ಕಾಡುಗೊಲ್ಲರು ಪ್ರಸ್ತುತ ಯಾವುದೆ ದೇವರ ಕೆಲಸ ಕಾರ್ಯಗಳಿಗೆ ಚಳ್ಳಕೆರೆ ತಾಲ್ಲೂಕು ಗೋಸಿಕೆರೆ ಸಾರ್ವಾಡೇಶ್ವರ ಸ್ವಾಮಿಗಳ ಮಠದ ವಂಶಸ್ಥರಾದ ಶ್ರೀ. ಜಿ.ಎಂ. ಶ್ರೀಶೈಲಸ್ವಾಮಿಗಳನ್ನು ಕರೆಸಿಕೊಳ್ಳುತ್ತಾರೆ. ಮ್ಯಾಸಬೇಡರು ಹರಿಹರ ತಾಲ್ಲೂಕು ರಾಜನಹಳ್ಳಿ ಶ್ರೀವಾಲ್ಮೀಕಿ ಮಹಾಸಂಸ್ಥಾನ ಮಠದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಪುಣ್ಯಾನಂದಪುರಿ ಮಹಾಸ್ವಾಮಿಗಳನ್ನು ಕರೆಸಿಕೊಳ್ಳುತ್ತಾರೆ. ಬಹುಹಿಂದೆ ಗೋಸಿಕೆರೆ ಶ್ರೀ ಗುರು ಸಾರ್ವಾಡೇಶ್ವರ ಸ್ವಾಮಿಗಳೇ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಗುರುಗಳಾಗಿದ್ದರು. ಈ ಎರಡು ಬುಡಕಟ್ಟು ಜನಾಂಗ 'ಗುರುಸ್ಥಾನಕ್ಕೆ' ಬಹಳ ಭಕ್ತಿ ಮತ್ತು ಗೌರವ ತೋರಿಸುತ್ತಾರೆ.

೮. ರಾಜಕೀಯ ಕ್ರಮ

ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗವು ತನ್ನದೇ ಆದ ಮತ್ತು ವ್ಯವಸ್ಥಿತವಾದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿದೆ. ಆಧುನಿಕ ಪ್ರಜಾಪ್ರಭುತ್ವದ ರಾಜಕೀಯವಲ್ಲದಿದ್ದರೂ ತಮ್ಮದೇ ಆದ ಸರಳ ಸಂಘಟಿತ ರಾಜಕೀಯ ಕ್ರಮವನ್ನು ಹೊಂದಿರುತ್ತಾರೆ. ಈ ಸಂಘಟನೆ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳ ವಿರುದ್ಧ ಹೋರಾಡಿ ತಮ್ಮ ಪವಿತ್ರತೆ ಮತ್ತು ರಕ್ಷಣೆಯ ದೃಷ್ಟಿಯಿಂದ ಇದು ಅತ್ಯವಶ್ಯಕವಾಗಿದೆ. ತಮ್ಮ ಗುಂಪಿನ ನಾಯಕ ಅಥವಾ ಮುಖ್ಯಸ್ಥನಿಗೆ ಎಲ್ಲಾ ರೀತಿಯಿಂದಲೂ ಗೌರವ ಕೊಡುತ್ತಾರೆ. ಗುಂಪಿನ ನಾಯಕ ನನ್ನು ಸಾಮಾನ್ಯವಾಗಿ ಅನುವಂಶೀಯವಾಗಿಯೇ ಆಯ್ಕೆ ಮಾಡುತ್ತಾರೆ. ಹಟ್ಟಿಯ ಯಜಮಾನ, ಗೌಡ, ಪೂಜಾರಿ, ತಳವಾರ ಮೊದಲಾದ ಅಧಿಕಾರದ ಹುದ್ದೆಗಳು ಅನುವಂಶೀಯವಾಗಿ ಬರುತ್ತಿದ್ದವು. ಹಟ್ಟಿಯ ಯಾವುದೇ ಒಳಜಗಳಗಳಾದರೂ ಹಟ್ಟಿ ಪಂಚಾಯ್ತಿಯ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ಗಂಭೀರವಾದ ವಿಚಾರಗಳಿದ್ದರೆ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಿಗೆ ಹೋಗುತ್ತಿದ್ದರು. ಬಿಗಿಯಾದ ಕಟ್ಟು ಕಟ್ಟಳೆಗಳು, ದಂಡ, ಬಹಿಷ್ಕಾರಗಳಿಗೆ ಹೆದರಿ ಬುಡಕಟ್ಟು ಸಂಸ್ಕೃತಿಯ ಸಾಮಾಜಿಕ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರು. ಹಟ್ಟಿಯ ಮುಖಂಡ ಅಥವಾ ಯಜಮಾನ ಪ್ರಾಮಾಣಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ ಆಡಳಿತ ಕ್ರಮ ನಡೆಸುತ್ತಿದ್ದ. ಹಟ್ಟಿಯ ಯಾವುದೇ ಹಬ್ಬ, ಜಾತ್ರೆ, ಮದುವೆ, ಮಂಗಳ ಕಾರ್ಯಗಳನ್ನು ಹಟ್ಟಿಯ ಯಜಮಾನನ

ಮುಖಂಡತ್ವದಲ್ಲೇ ನಡೆಯುತ್ತಿದ್ದವು. ತಮ್ಮ ಜನಾಂಗಕ್ಕೋಸ್ಕರ ತ್ಯಾಗ ಬಲಿದಾನಗಳನ್ನು ಮಾಡಿದ 'ಹಟ್ಟಿಗೌಡ'ರ ಕಥೆಗಳು ಇತಿಹಾಸದಲ್ಲಿ ಪ್ರಸಿದ್ಧ ವಾಗಿವೆ. ಎಂತಹ ಕಷ್ಟ ನಷ್ಟಗಳು ಬಂದರೂ ಸಮುದಾಯದ ಗುಟ್ಟನ್ನು ಹಾಗೂ ಪವಿತ್ರತೆಯನ್ನು ಕಾಪಾಡಿ ಕೊಳ್ಳುತ್ತಿದ್ದರು. ನ್ಯಾಯನಿರ್ಣಯ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ತಪ್ಪಿತಸ್ಥರಿಗೆ ದಂಡ ಶಿಕ್ಷೆ ಹಾಗೂ ಬಹಿಷ್ಕಾರ ವಿಧಿಸುವ ವಿಶೇಷ ಅಧಿಕಾರವನ್ನು ಹಟ್ಟಿಯ 'ಯಜಮಾನ' ಅಥವಾ 'ಗೌಡ'ನಿಗೆ ಕೊಡಲಾಗಿತ್ತು. ಕೆಲವೊಂದು ಸಲ ಇವರ ರಾಜಕೀಯ ಕ್ರಮ ಹೇಗಿತ್ತೆಂದರೆ ಹಟ್ಟಿಯ ಗೌಡ ನ್ಯಾಯ ತೀರ್ಮಾನ ಮಾಡುವಾಗ ತನ್ನ ಮಗನನ್ನೇ ತಮ್ಮನನ್ನೇ, ಸೊಸೆಯನ್ನೇ ತಪ್ಪಿತಸ್ಥರೆಂದು ತೀರ್ಮಾನಿಸಿ ದಂಡ ಹಾಕುತ್ತಿದ್ದರು.

ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವ ಸರ್ಕಾರ ಚುನಾವಣೆ ವ್ಯವಸ್ಥೆ ಜಾರಿಗೆ ತಂದಾಗಲೂ ಕೂಡ, ಈ ಎರಡು ಬುಡಕಟ್ಟು ಜನಾಂಗ ಹಟ್ಟಿಯ 'ಯಜಮಾನ' ಅಥವಾ 'ಗೌಡ'ನ ಮೇಲಿನ ಗೌರವದಿಂದ, ಆತ ಸೂಚಿಸಿದ ಪಕ್ಷ ಅಥವಾ ವ್ಯಕ್ತಿಗೆ ಮತ ಹಾಕುತ್ತ ಬಂದರು. ಕಾಲಕ್ರಮೇಣ ಹಟ್ಟಿಯ 'ಮುಖಂಡ'ನೇ ತಮ್ಮ ಜನಾಂಗಕ್ಕೆ ದ್ರೋಹ ಬಗೆಯಲು ಪ್ರಾರಂಭಿಸಿದಾಗ, ವಿದ್ಯಾವಂತ ಯುವಕ ಯುವತಿಯರು ಪ್ರತಿಭಟನೆ ಮಾಡಬೇಕಾಯಿತು. ನಂತರ ಬುಡಕಟ್ಟು ಜನಾಂಗದ ಸಂಘಟನೆ, ಐಕ್ಯತೆ, ನಾವು ನಮ್ಮವರು ಎಂಬ ಭಾವನೆಗಳು ಕಣ್ಮರೆಯಾಗಿ ವಿಘಟನೆಗಳು ಪ್ರಾರಂಭವಾದವು. ಪ್ರಜಾಪ್ರಭುತ್ವ ನೀತಿ ಮತ್ತು ಧೋರಣೆಗಳನ್ನು ಅರ್ಥಮಾಡಿಕೊಂಡ ಯುವ ಜನಾಂಗ ತಾವೇ ಚುನಾವಣೆಗೆ ನಿಲ್ಲಲು ಮುಂದಾಗಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ವಿಧಾನ ಸಭೆ, ಲೋಕಸಭೆ ಮತ್ತು ರಾಜ್ಯಸಭೆ ಮೊದಲಾದ ಚುನಾವಣೆಯಲ್ಲಿ ಗೆದ್ದು. 'ಹಟ್ಟಿ'ಯಿಂದ 'ದಿಲ್ಲಿ'ವರೆಗೂ ಆಡಳಿತ ನಡೆಸುವಂತ ಹೆಸರಾಂತ ರಾಜಕಾರಣಿಗಳು ಈ ಜಿಲ್ಲೆಯಲ್ಲಿ ಹುಟ್ಟಿಕೊಂಡರು.

ಪ್ರಸ್ತುತ ಚಿತ್ರದುರ್ಗ ಜಿಲ್ಲೆಯ ಲೋಕಸಭಾ ಸದಸ್ಯರಾದ ಶ್ರೀ ಶಶಿಕುಮಾರ್ ಮತ್ತು ಮೊಳಕಾಲ್ಮೂರು ತಾಲ್ಲೂಕು ಶಾಸಕರಾದ ಶ್ರೀ. ಎನ್.ವೈ.ಗೋಪಾಲಕೃಷ್ಣರವರು ಕೂಡ ಮ್ಯಾಸಬೇಡರೆ. ಚಿತ್ರದುರ್ಗ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ.ಬಾಲರಾಜ್‌ರವರು ಕಾಡುಗೊಲ್ಲರಾದರೆ; ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಶ್ರೀ.ಸಿ.ಎಂ.ಅಶೋಕರವರು ಮ್ಯಾಸಬೇಡರಾಗಿದ್ದಾರೆ. ಚಿತ್ರದುರ್ಗ ಜಿಲ್ಲೆ ಹಲವು ಜಾತಿ ಜನಾಂಗಗಳು ವಾಸಿಸುವ ಇತಿಹಾಸ ಪ್ರಸಿದ್ಧ ನಾಡಾಗಿದೆ. ಈ ಜಿಲ್ಲೆಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಾರೆ. ಆದರೆ ಈ ಎರಡೂ ಬುಡಕಟ್ಟು ಜನಾಂಗದ 'ರಾಜಕೀಯ ವ್ಯವಸ್ಥೆ'ಯಲ್ಲಿ ನೂರಾರು ಜನ ವ್ಯಕ್ತಿಗಳು ಬಂದು ಹೋಗಿದ್ದರೂ ಮ್ಯಾಸಬೇಡರಲ್ಲಿ ಪ್ರಾಮಾಣಿಕ ರಾಜಕಾರಣಿ ಎಂದು ಹೆಸರುಗಳಿಸಿದ ಮಾಜಿ ಸಚಿವ ದಿ.ಹೋ.ಚಿ.ಬೋರಯ್ಯ ಮತ್ತು ಕಾಡುಗೊಲ್ಲರಲ್ಲಿ ಹೊಳಲ್ಕೆರೆ ತಾಲ್ಲೂಕು ಹಾವಿನಹಟ್ಟಿ ಶ್ರೀ.ಎ.ವಿ.ಉಮಾಪತಿ ಯವರ ಹೆಸರು ಚಿತ್ರದುರ್ಗ ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ.

ಪ್ರಸ್ತುತ ಗ್ರಾಮ ಪಂಚಾಯ್ತಿ ಚುನಾವಣೆಗಳಿಂದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಹಟ್ಟಿಗಳಲ್ಲಿ ಕೌಟುಂಬಿಕ ಅಂತಃ ಕಲಹಗಳು ಅಧಿಕವಾಗಿ ತಂದೆ-ಮಗ, ಅಣ್ಣ-ತಮ್ಮ, ಅತ್ತೆ-ಸೊಸೆ ಮೊದಲಾದವರು ಚುನಾವಣೆಯಲ್ಲಿ ಸ್ಪರ್ಧಿಸಿ, ಪ್ರತಿಸ್ಪರ್ಧಿಯ ವಿರುದ್ಧ ಜಯಗಳಿಸಲು ವೈವಿಧ್ಯಮಯವಾದ ವಾಮ ಮಾರ್ಗಗಳನ್ನು ಹುಡುಕುತ್ತಾರೆ. ತಾವು ವಾಸಿಸುವ ಪ್ರದೇಶಗಳನ್ನು ಪವಿತ್ರ ಸ್ಥಾನಗಳೆಂದು ನಂಬಿದ್ದ 'ಹಟ್ಟಿಗಳಿಗೆ' ಎಲ್ಲಾ ಜಾತಿ,

ಜನಾಂಗದವರು ನುಗ್ಗಲು ಪ್ರಾರಂಭಿಸಿದರು. ಒಂದೊಂದು ರಾಜಕೀಯ ಪಕ್ಷದವರು ಒಂದೊಂದು ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಈ ಎರಡು ಜನಾಂಗದ ರಾಜಕೀಯ ಮುಖಂಡರನ್ನು ತುಳಿದು, ಬೇರೊಂದು ಜಾತಿಯ ವ್ಯಕ್ತಿಗಳು ಚುನಾವಣೆಯಲ್ಲಿ ಜಯಗಳಿಸಿದರು. ಮತ ಕೊಟ್ಟ ಮ್ಯಾಸಬೇಡ ಮತ್ತು ಕಾಡುಗೊಲ್ಲರನ್ನೇ ಶೋಷಣೆಗೆ ಗುರಿಪಡಿಸಿದರು. ಆದರೆ ಚಿತ್ರದುರ್ಗ ಜಿಲ್ಲೆಯ ರಾಜಕೀಯ ವಿಚಾರವಾಗಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಎಚ್ಚೆತ್ತುಕೊಂಡು, ಈ ಎರಡು ಜನಾಂಗ ಪ್ರಾಮಾಣಿಕವಾಗಿ ಒಂದಾಗಿ ರಾಜಕೀಯ ಮಾಡಿದರೆ, ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಶಾಸಕರಾಗಿ ಮತ್ತು ಲೋಕಸಭಾ ಸದಸ್ಯರಾಗಿ ಅಧಿಕಾರ ಚಲಾಯಿಸುವ 'ಮತಗಳ' ಬೆಂಬಲ ಈ ಎರಡೂ ಜನಾಂಗಕ್ಕಿದೆ.

ಅಧ್ಯಾಯ - ೮

ಸಮಾರೋಪ

೮. ಸಮಾರೋಪ

ಕರ್ನಾಟಕದ ಚಿತ್ರದುರ್ಗ ಜಿಲ್ಲೆ ಐತಿಹಾಸಿಕ ಮಹತ್ವ ಪಡೆದಿರುವಂತೆ ಅನೇಕ ಬುಡಕಟ್ಟು ಸಮೂಹಗಳು ಇಲ್ಲಿ ನೆಲೆಸಿವೆ. ಅವುಗಳಲ್ಲಿ ಮುಖ್ಯವಾಗಿ ಮ್ಯಾಸಬೇಡರು ಮತ್ತು ಕಾಡುಗೊಲ್ಲರು ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಾರೆ. ಇಂಥ ಬುಡಕಟ್ಟುಗಳ ಬಗ್ಗೆ ಈಗಾಗಲೇ ಪ್ರತ್ಯೇಕವಾಗಿ ಅಧ್ಯಯನಗಳು ಆಗಿವೆ, ಆದರೆ ಅವುಗಳ ಸಮಗ್ರ ಅಧ್ಯಯನ ಆಗಿಲ್ಲವೆಂದರೆ ತಪ್ಪಾಗಲಾರದು. ಇನ್ನೂ ಈ ಎರಡು ಬುಡಕಟ್ಟುಗಳ ಹಲವು ಮುಖಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ದೃಷ್ಟಿಕೋನದಿಂದ 'ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು : ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಎಂಬ ಸಿದ್ಧಾಂತದ ಹಿನ್ನೆಲೆಯಲ್ಲಿ ತೌಲನಿಕ ಅಧ್ಯಯನ ಮಾಡಲಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಹರಿದು ಹಂಚಿ ಹೋದ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಪ್ರಮುಖ ನೆಲೆಯಾದ ಚಿತ್ರದುರ್ಗ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಚಳ್ಳಕೆರೆ, ಮೊಳಕಾಲ್ಮೂರು, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮತ್ತು ಚಿತ್ರದುರ್ಗ ಎಂಬ ಆರು ತಾಲ್ಲೂಕುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಆದರೂ ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳ ಕೆಲವೊಂದು ಪ್ರದೇಶಗಳನ್ನು ಕೂಡ ಸಮೀಕ್ಷೆಗೆ ಆಯ್ಕೆಮಾಡಿಕೊಂಡು, ಕ್ಷೇತ್ರಕಾರ್ಯ ಮತ್ತು ಗ್ರಂಥಿಕ ಸಾಹಿತ್ಯದ ಆಧಾರದ ಮೇಲಿಂದ ಮಹಾ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಮ್ಯಾಸಬೇಡರ ಮೂಲ ಉತ್ತರ ಭಾರತದ ಗಂಡಕಿ ನದಿ ಬಯಲು ಪ್ರದೇಶದಿಂದ ವಿಂಧ್ಯಪರ್ವತಕ್ಕೆ ವಲಸೆ ಬಂದವರು. ಕಾಡುಗೊಲ್ಲರು ಕೂಡ ದೆಹಲಿ ಸುತ್ತ-ಮುತ್ತಲಿನ ಪ್ರದೇಶದಲ್ಲಿ ನೆಲೆಸಿದ್ದವರು. ಅತಿವೃಷ್ಟಿ, ಅನಾವೃಷ್ಟಿ, ಆರ್ಯರ ದಬ್ಬಾಳಿಕೆ, ಇಲ್ಲವೇ ಮುಸ್ಲಿಂ ಆಕ್ರಮಣಕಾರರಿಂದ ಮಾನ ಪ್ರಾಣ ರಕ್ಷಣೆಗಾಗಿ ಸಾರ್ವಾಡೇಶ್ವರ ಸ್ವಾಮಿಗಳ ನೇತೃತ್ವದಲ್ಲಿ, ಮ್ಯಾಸಬೇಡ ಮತ್ತು ಕಾಡುಗೊಲ್ಲರು ದಕ್ಷಿಣ ಭಾರತದ ಕಡೆ ವಲಸೆ ಬಂದವರು. ಮ್ಯಾಸಬೇಡರು ಆಂಧ್ರಪ್ರದೇಶದ ಕಡೆಗೆ ವಲಸೆ ಹೋಗಿ ಶ್ರೀಶೈಲ, ಅಹೋಬಲ, ಕದರಿ, ತಿರುಪತಿ ಮೊದಲಾದ ಬೆಟ-ಗುಡ್ಡಗಳ ತಪ್ಪಲು ಪ್ರದೇಶಗಳಲ್ಲಿ ಬೇಟೆ ಮತ್ತು ಪಶುಪಾಲನೆ ವೃತ್ತಿ ಕೈಗೊಂಡವರು. ಕಾಡುಗೊಲ್ಲರು ಕರ್ನಾಟಕ ಆಂಧ್ರಪ್ರದೇಶದ ಗಡಿ ಭಾಗದ ಜಿಲ್ಲೆಗಳಲ್ಲಿ ಚದುರಿ ಹೋಗಿ ಬೆಟ್ಟ-ಗುಡ್ಡ ಪ್ರದೇಶಗಳಲ್ಲಿ ಕುರಿ, ಮೇಕೆ ಮತ್ತು ಪಶುಪಾಲನೆ ವೃತ್ತಿ ಕೈಗೊಂಡವರು. ಈ ಎರಡು ಬುಡಕಟ್ಟುಗಳ ನೇತೃತ್ವ ವಹಿಸಿ ಗುರುವಾಗಿ ಮಾರ್ಗದರ್ಶನ ಮಾಡಿದ ಸಾರ್ವಾಡೇಶ್ವರ ಸ್ವಾಮಿಗಳು ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿ ಭಾಗಕ್ಕೆ ಹತ್ತಿರವಿರುವ ಚಳ್ಳಕೆರೆ ತಾಲ್ಲೂಕು, ಗೋಸಿಕೆರೆ ಗ್ರಾಮದಲ್ಲಿ ಸ್ವಸ್ತಿ ಶ್ರೀಶಾಲಿವಾಹನ ಶಕ ೧೫೮೨ನೇ ಶಾರ್ವರಿನಾಮ ಸಂವತ್ಸರ ಮಾಘ ಶುದ್ಧ ಏಕಾದಶಿಯಲ್ಲಿ ಸಜೀವ ಸಮಾಧಿಸ್ತರಾಗಿರುವ ಗದ್ದುಗೆಯ ದೇವಸ್ಥಾನ ಈ ಹೊತ್ತಿಗೂ ಗೋಸಿಕೆರೆಯಲ್ಲಿ ಕಾಣಬಹುದು.

[illegible]

[illegible]

[illegible]

ಉತ್ತರ ಭಾರತದಿಂದ ಬಂದಂಥ ಈ ಎರಡು ಬುಡಕಟ್ಟುಗಳು ವೈಷ್ಣವ ಮತ್ತು ಶೈವ ಎರಡೂ ಸಂಪ್ರದಾಯ ಗಳನ್ನು ಪಾಲಿಸುತ್ತಾರೆ. ಮೂಲತಃ ಸಾಲಿಗ್ರಾಮಗಳ ಆರಾಧಕರಾದ ಇವರು ದಕ್ಷಿಣ ಭಾರತಕ್ಕೆ ವಲಸೆ ಬರುವಾಗಲೇ 'ಗಂಡಕಿನದಿ'ಯಲ್ಲಿ ಸಿಗುವ ಉತ್ಕೃಷ್ಟ ಸಾಲಿಗ್ರಾಮಗಳನ್ನು ಬಿದಿರು ಬುಟ್ಟಿಯಲ್ಲಿಟ್ಟು ದೇವರೆಂದು ಆರಾಧಿಸುವ ಪದ್ಧತಿ ಇವರಲ್ಲಿ ಆಚರಣೆಗೆ ಬಂದಿತು. ಆದರೆ ಸಾಲಿಗ್ರಾಮಗಳು 'ವೈಷ್ಣವ' ಅಥವಾ 'ಶೈವ' ಎಂದು ಗುರುತಿಸ ಲಾಗದಂಥ ಧಾರ್ಮಿಕ ಜ್ಞಾನ ಇವರಲ್ಲಿತ್ತು. ಆದ್ದರಿಂದಲೇ ಹೊಳಲ್ಕೆರೆ ತಾಲ್ಲೂಕು, ಚಿತ್ರಹಳ್ಳಿಯಲ್ಲಿ ಚಿತ್ರಲಿಂಗ, ಕಾಟಂಲಿಂಗ ಮತ್ತು ಓಬಳನರಸಿಂಹ ಎಂಬ ಮೂರು ಉದ್ಭವ ಲಿಂಗಗಳನ್ನು ತೋರಿಸುತ್ತಾರೆ. ಈ ಎರಡು ಬುಡಕಟ್ಟುಗಳ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಪರಸ್ಪರ ಹೋಲಿಕೆಗಳನ್ನು ಗಮನಿಸಬಹುದು. ಮೂಲತಃ ಈ ಎರಡು ಸಮುದಾಯಗಳು ಒಂದೇ ಬುಡಕಟ್ಟುಗಳಾಗಿದ್ದು ಕಾಲಾಂತರದಲ್ಲಿ ಕಾರಣಾಂತರಗಳಿಂದಾಗಿ ವಿಭಜನೆ ಹೊಂದಿ ಸಮಾನಾಂತರದಲ್ಲಿ ಸ್ವತಂತ್ರವಾಗಿ ತನ್ನ ಅಸ್ತಿತ್ವವನ್ನು ಹೇಗೆ ಉಳಿಸಿಕೊಂಡಿವೆ ಎಂಬುದನ್ನು ಈ ಹಿಂದಿನ ಅಧ್ಯಾಯಗಳಲ್ಲಿ ವಿವರಣೆ ನೀಡಲಾಗಿದೆ.

ಈ ಎರಡು ಬುಡಕಟ್ಟುಗಳನ್ನು ಕುರಿತು ನಡೆದಿರುವ ಅಧ್ಯಯನ ಮತ್ತು ಕ್ಷೇತ್ರಕಾರ್ಯದ ಅಂಶಗಳನ್ನು ಕೂಲಂಕುಷವಾಗಿ ವಿಮರ್ಶಿಸಿ, ಇದುವರೆಗೂ ಗುರುತಿಸಲಾಗದಂಥ ಅನೇಕ ಘಟನೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ. ಸಂಪ್ರದಾಯ ಮತ್ತು ನಂಬಿಕೆಗಳ ಹಿಂದಿರುವ ಸತ್ಯ ಸಂಗತಿಗಳನ್ನು ಬಹಿರಂಗ ಪಡಿಸಲಾಗಿದೆ. ಇತರ ಜಾತಿ ಜನಾಂಗದವರ ಜೊತೆ ಕೂಡಿ ಬಾಳುವಾಗ ಇವರ ಸಾಮಾಜಿಕ ಸ್ಥಿತಿ ಗತಿಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಮ್ಯಾಸಬೇಡ ಮತ್ತು ಕಾಡುಗೊಲ್ಲರು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದವರು ಎಂಬುದನ್ನು ಅಧ್ಯಯನ ಮಾಡುವಾಗ ಸಮುದಾಯದ ಹಿನ್ನೆಲೆ, ಪದ ನಿಷ್ಪತ್ತಿ, ಮೂಲ, ಪರಂಪರೆ, ಪುರಾಣಗಳು, ಐತಿಹ್ಯಗಳು, ಸಾಮ್ಯತೆ, ಭಿನ್ನತೆ, ಪ್ರದೇಶ ಅವರ ಸಾಂಸ್ಕೃತಿಕ ಬದುಕಿನ ಪರಂಪರೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಇವರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಉಡಿಗೆ-ತೊಡಿಗೆ, ಆಹಾರ ಪದ್ಧತಿ, ವಸತಿ ವ್ಯವಸ್ಥೆ, ವೃತ್ತಿಯ ಪ್ರಕಾರಗಳು, ಬೆಡಗುಗಳು, ರಕ್ತಸಂಬಂಧ, ಕುಟುಂಬ, ನ್ಯಾಯ ಪದ್ಧತಿಯಲ್ಲಿ ಬರುವ ಗುಡಿಕಟ್ಟೆ, ಕಟ್ಟೆಮನೆ, ಗುರುಸ್ಥಾನಗಳು ಮತ್ತು ವಿಧಿ-ನಿಷೇಧಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ. ಸಂಸ್ಕಾರಗಳು ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದ ಜನನ, ಹೆರಿಗೆಗುಡ್ಲು, ನಾಮಕರಣ, ಜೆನ್ನಿಗೆ ಕುಡಿಸುವುದು, ಜವಳ ತೆಗೆಸುವುದು, ಋತುಮತಿ ಶಾಸ್ತ್ರ, ವಿವಾಹ ಪದ್ಧತಿ, ಶವಸಂಸ್ಕಾರ ಮತ್ತು ದಿನಕರ್ಮಗಳಲ್ಲಿ ಕಂಡು ಬರುವ ಕಟ್ಟುಕಟ್ಟಳೆಗಳನ್ನು ವಿವರವಾಗಿ ಕೊಡಲಾಗಿದೆ.

ನಂಬಿಕೆಗಳು ಮತ್ತು ಆಚರಣೆಗಳಲ್ಲಿ ಪ್ರಕೃತಿ ಆರಾಧನೆ, ಧಾರ್ಮಿಕ ಕೇಂದ್ರಗಳು, ಪುರಾತನ ಕಾಲದ ವಸತಿ ದಿಬ್ಬಗಳು, ದೇವರ ಪೌಳಿ ಮತ್ತು ಗುಬ್ಬಗಳನ್ನು ಕಟ್ಟುವ ವಿಧಾನ, ದೇವರು, ಪೂಜಾ ಪದ್ಧತಿಗಳು, ಹರಕೆ, ಬಲಿ, ಎಡೆ, ಗಂಗೆಪೂಜೆ ಮಾಡುವ ವಿಧಾನ ಮತ್ತು ಪ್ರದೇಶಗಳು, ಇವರು ಆಚರಿಸುವ ಹಬ್ಬ, ಜಾತ್ರೆಗಳು, ಪೂಜಾರಿ ಮತ್ತು ದಾಸಯ್ಯಗಳ ಸಾಮಾಜಿಕ ನಿಯಮಾವಳಿಗಳು, ದೇವರೆತ್ತುಗಳು, ಬಸವ, ಅವುಗಳ ಪಾಲಕರಾದ ಕಿಲಾರಿಗಳು ಮತ್ತು ಅವರ ಜೀವನ ಪದ್ಧತಿಗಳನ್ನು ಕೂಲಂಕುಷವಾಗಿ ವಿವರಿಸಲಾಗಿದೆ.

ಭಾಷೆ, ಸಾಹಿತ್ಯ ಮತ್ತು ಕಲೆಯ ವಿಚಾರವಾಗಿ ವಿವರವಾದ ಮಾಹಿತಿ ಸಂಗ್ರಹಿಸಿದ್ದರೂ ಈ ಎರಡು ಬುಡಕಟ್ಟುಗಳ ಭಾಷೆ ಮತ್ತು ಬೆಡಗುಗಳ ಕುರಿತು ಪ್ರತ್ಯೇಕವಾದ ಅಧ್ಯಯನಗಳು ನಡೆದರೆ ಇನ್ನೂ ಹೆಚ್ಚಿನ ವಿಷಯ ಸ್ಪಷ್ಟತೆ ಮತ್ತು ಇತರ ಬುಡಕಟ್ಟುಗಳೊಂದಿಗೆ ಇವರ ಸಾಮ್ಯತೆ ಮತ್ತು ಭಿನ್ನತೆಗಳನ್ನು ಕಂಡುಕೊಳ್ಳಬಹುದು.ಸಮೃದ್ಧ ಜನಪದ ಸಾಹಿತ್ಯದಲ್ಲಿ ಹಾಡು, ಕಥೆ, ಗಾದೆ, ಒಗಟು, ಒಡಪು, ನುಡಿಗಟ್ಟು, ಲಾವಣಿಗಳನ್ನು ಸಂಗ್ರಹಿಸಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಜನಪದ ಕಲೆಗಳಲ್ಲಿ ಈ ಎರಡು ಸಮುದಾಯಕ್ಕೆ ಸಂಬಂಧಿಸಿದ ಕ್ರೀಡೆಗಳು, ವಾದ್ಯಗಳು, ಕಲಾವಿದರು, ನಾಟಕ, ಕೋಲಾಟ, ಭಜನೆ, ಮಣೇವು ಕುಣಿತ, ಮೊಂಡರು, ಬಲೆಗಳು, ಹಚ್ಚೆ ಮತ್ತು ರಂಗೋಲಿ ಕಲೆಗಳ ವಿಧಿ-ವಿಧಾನಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಅವರ ಸಮಸ್ಯೆಗಳು, ಸಂಘಟನೆಗಳು ಮತ್ತು ಪರಿಹಾರೋಪಾಯಗಳನ್ನು ಚರ್ಚಿಸುವಾಗ ಮ್ಯಾಸಬೇಡ ಮತ್ತು ಕಾಡುಗೊಲ್ಲರ ಭೌಗೋಳಿಕ ಪರಿಸರ, ಸಾಂಸ್ಕೃತಿಕ ವ್ಯವಸ್ಥೆ, ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸಂಕಷ್ಟಗಳು, ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯ, ಧಾರ್ಮಿಕತೆ, ರಾಜಕೀಯ ಸ್ಥಿತಿಗತಿಗಳನ್ನು ಚರ್ಚಿಸಿ ಅನೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸಲಾಗಿದೆ. ಸಮಾರೋಪ ಮತ್ತು ಅನುಬಂಧದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಅತ್ಯಂತ ಉಪಯುಕ್ತ ಮಾಹಿತಿಗಳನ್ನು ಕೊಡಲಾಗಿದೆ. ಚಿತ್ರದುರ್ಗ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಹರಿದು ಹಂಚಿ ಹೋದ ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳ ತೌಲನಿಕ ಅಧ್ಯಯನದಿಂದ ಕೆಲವೊಂದು ಮಹತ್ವವಾದ ಅಂಶಗಳನ್ನು ಕಂಡುಕೊಳ್ಳಬಹುದಾಗಿದೆ.

೮.೧. ಅಧ್ಯಯನದ ಫಲಿತಾಂಶಗಳು

೧. ಕರ್ನಾಟಕ ಮತ್ತು ಆಂಧ್ರಪ್ರದೇಶದ ಗಡಿಭಾಗದ ಜಿಲ್ಲೆಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಇವರು ನೆಲಸಿದ್ದರೂ; ಸಂಘ, ಸಂಸ್ಥೆ ಮತ್ತು ಸಂಘಟನೆಗಳ ಕೊರತೆಗಳಿವೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಲ್ಪ ಸ್ವಲ್ಪ ಸುಧಾರಿಸಿದ್ದರೂ ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ.

೨. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಪರಸ್ಪರ ಸಹೋದರ ಸಂಬಂಧಿಗಳೇ ವಿನಃ ಹೆಣ್ಣುಗಂಡಿನ ವಿವಾಹ ಸಂಬಂಧಗಳು ನಡೆಯುವುದಿಲ್ಲ. ಮೂಲತಃ ಒಂದೇ ಬುಡಕಟ್ಟಿನಿಂದ ಬಂದಂಥ ಮ್ಯಾಸಬೇಡ ಮತ್ತು ಕಾಡುಗೊಲ್ಲರಿಗೆ ಕುರುಬ, ಒಕ್ಕಲಿಗ, ಅಗಸ, ಮೊಂಡರು, ಮಾದಿಗ, ಹೊಲೆಯ, ಹೆಳವರೊಡನೆ ಬಳಕೆ ಹೆಚ್ಚು. ಇವರುಗಳ ನಡುವೆ ವೈವಾಹಿಕ ಸಂಬಂಧಗಳನ್ನು ಬಿಟ್ಟರೆ ಉಳಿದೆಲ್ಲ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಹೆಚ್ಚೇನು ಅಂತರ ಕಂಡು ಬರುವುದಿಲ್ಲ.

೩. ಬೇಡರ ಒಳಪಂಗಡಗಳಾದ 'ಮ್ಯಾಸಬೇಡರು' ಮತ್ತು 'ಊರುಬೇಡರು' ಮೂಲತಃ ಒಂದೇ ವಿನಃ ಬೇರೆಯಲ್ಲ. ಗೊಲ್ಲರ ಒಳಪಂಗಡಗಳಾದ 'ಕಾಡುಗೊಲ್ಲರು' ಮತ್ತು 'ಊರುಗೊಲ್ಲರು' ಮೂಲತಃ ಒಂದೇ ವಿನಃ ಬೇರೆಯಲ್ಲ. ಈ ನಾಲ್ಕು ಉಪ-ಪಂಗಡಗಳು ಕೂಡ ಒಂದೇ ತಾಯಿ ಮೂಲದಿಂದ ಬಂದಿವೆ. ಕೆಲವೊಂದು ಪ್ರದೇಶಗಳಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲರು ಬೇಟೆ, ಪಶುಪಾಲನೆ, ವ್ಯವಸಾಯ, ವ್ಯಾಪಾರ, ಹಬ್ಬ, ಜಾತ್ರೆ ಮೊದಲಾದವುಗಳನ್ನು ಇಬ್ಬರೂ ಕೂಡಿಯೇ ಮಾಡುತ್ತಿರುವ ಹೆಗ್ಗುರುತುಗಳು ಕಂಡು ಬರುತ್ತವೆ.

೪. ನಗರೀಕರಣ ಮತ್ತು ಆಧುನಿಕತೆಯ ಪ್ರಭಾವದಿಂದ ಪ್ರಸ್ತುತ ಈ ಎರಡು ಬುಡಕಟ್ಟುಗಳಲ್ಲಿ ಅನೇಕ ಬದಲಾವಣೆಗಳನ್ನು ಗುರುತಿಸಬಹುದು. ಕಾಡುಗೊಲ್ಲರ ಹಟ್ಟಿಗಳಲ್ಲಿದ್ದ ಬಿಗಿ, ಮ್ಯಾಸಬೇಡರ ಹಟ್ಟಿಗಳಲ್ಲಿ ಉಳಿದಿಲ್ಲ. ಮೂಲ ಬೇಟೆ ವೃತ್ತಿ ಕೈಬಿಟ್ಟು ಕುರಿ, ಮೇಕೆ, ಪಶುಪಾಲನೆ ಮತ್ತು ಕೃಷಿಯಲ್ಲಿ ತೊಡಗಿ ವೃತ್ತಿ ಸಂಘರ್ಷಕ್ಕೆ ಬಲಿಯಾಗಿದ್ದಾರೆ. ಅಲೆಮಾರಿ ಜೀವನ ಕೈಬಿಟ್ಟು ಸ್ಥಿರವಾದ ನೆಲೆಗಳಲ್ಲಿ ನೆಲೆಸಿ ಹಟ್ಟಿ ಅಥವಾ ಊರುಗಳನ್ನು ಕಟ್ಟಿಕೊಂಡಿದ್ದಾರೆ. ಸರ್ಕಾರದ ಅನೇಕ ಸೌಲಭ್ಯಗಳಿಂದ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದೆ ಬರಲು ಪ್ರಯತ್ನಿಸುತ್ತಿದ್ದಾರೆ.

೫. ಪ್ರಸ್ತುತ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಈ ಎರಡು ಬುಡಕಟ್ಟುಗಳು ಹೊಂದಿಕೊಳ್ಳುತ್ತಿದ್ದಾರೆ. ಗುಡಿಸಲುಗಳ ಬದಲಾಗಿ ಮನೆಗಳು, ದೇವರ ಗುಬ್ಬಗಳಿಗೆ ಬದಲಾಗಿ ಗುಡಿಗಳು ನಿರ್ಮಾಣವಾಗುತ್ತಿವೆ. ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿ ವಿಭಕ್ತ ಕುಟುಂಬಗಳು ಅಧಿಕವಾಗುತ್ತಿವೆ.

೬. ಈ ಎರಡು ಬುಡಕಟ್ಟುಗಳಲ್ಲಿ 'ವೈಷ್ಣವ' ಮತ್ತು 'ಶೈವ' ಎರಡು ಸಂಪ್ರದಾಯಗಳು ಪ್ರಧಾನವಾಗಿ ಕಂಡು ಬರುವುದರಿಂದ, ಇವರ ಸಂಪ್ರದಾಯ ಮತ್ತು ನಂಬಿಕೆಗಳಲ್ಲಿ ಎಷ್ಟು ಸಾಮ್ಯತೆಗಳಿವೆಯೋ; ಅಷ್ಟೇ ಭಿನ್ನತೆಗಳನ್ನು ಗುರುತಿಸಲು ಸಾಧ್ಯವಿದೆ.

೭. ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡ ಮತ್ತು ಕಾಡುಗೊಲ್ಲರನ್ನು ಕೇಂದ್ರವಾಗಿಟ್ಟುಕೊಂಡು ಪ್ರಬಂಧ ಸಿದ್ಧಪಡಿಸಿರುವುದರಿಂದ, ಇಡೀ ಕರ್ನಾಟಕದ ಮ್ಯಾಸಬೇಡ ಮತ್ತು ಕಾಡುಗೊಲ್ಲರನ್ನು ಕುರಿತಾದ ಅಧ್ಯಯನದ ಕೊರತೆ ಕಂಡು ಬರುತ್ತದೆ. ಈ ಎರಡು ಬುಡಕಟ್ಟುಗಳ 'ಭಾಷೆ' ಮತ್ತು 'ಬೆಡಗುಗಳು', 'ಹಬ್ಬ' ಮತ್ತು 'ಜಾತ್ರೆಗಳು' ಕುರಿತಂತೆ ಅಧ್ಯಯನ ಮಾಡಲು ಅವಕಾಶಗಳಿವೆ.

೮.೨. ಸಲಹೆಗಳು

೧. ಈ ಎರಡು ಬುಡಕಟ್ಟು ಸಮೂದಾಯಗಳೊಂದಿಗೆ ಇತರೆ ಬುಡಕಟ್ಟು ಸಮೂದಾಯಗಳನ್ನು ಹೋಲಿಸಿ, ತೌಲನಿಕ ಅಧ್ಯಯನ ಮಾಡುವ ಅಧ್ಯಯನಕಾರರು ಇದರಲ್ಲಿನ ಮಾಹಿತಿಗಳನ್ನು ಬಳಸಿಕೊಳ್ಳಬಹುದು.

೨. ಈ ಎರಡೂ ಸಮುದಾಯಗಳ ಅಧ್ಯಯನಕಾರರಿಗೆ, ಸಂಘ ಸಂಸ್ಥೆಗಳಿಗೆ, ಯೋಜನಾಕಾರರಿಗೆ, ಕಾನೂನು ತಜ್ಞರಿಗೆ ಮತ್ತು ಸರ್ಕಾರದ ಹಲವಾರು ಯೋಜನೆಗಳಿಗೆ ಇಲ್ಲಿ ಬಳಸಿರುವ ಅಂಕಿ ಅಂಶಗಳು ಪ್ರಯೋಜನ ವಾಗಬಹುದು.

೩. ಈ ಅಧ್ಯಯನಕ್ಕೆ ಒಳಪಟ್ಟ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳ ಜನರು ಕೆಲವು ಕಡೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಇಂತಹ ಸಮುದಾಯಗಳಿಗೆ ಸರ್ಕಾರ ಸೂಕ್ತವಾದ ಪರಿಹಾರೋಪಾಯಗಳನ್ನು ಕಲ್ಪಿಸಕೊಡಬೇಕಾಗಿದೆ.

೪. ಮ್ಯಾಸಬೇಡ ಮತ್ತು ಕಾಡುಗೊಲ್ಲರು ಒಂದೇ ಗುಣಲಕ್ಷಣಗಳನ್ನು ಹೊಂದಿದ್ದರೂ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸರ್ಕಾರವು ಕಾಡುಗೊಲ್ಲರನ್ನು ಕೈಬಿಡಲಾಗಿದೆ. ಆದ್ದರಿಂದ ಕಾಡುಗೊಲ್ಲರನ್ನು ಕೂಡ ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿ ಸೇರಿಸುವುದರಿಂದ ಈ ಬುಡಕಟ್ಟು ಸಮುದಾಯಕ್ಕೆ ಉಪಯೋಗವಾಗಬಹುದು.

೫. ವಿವಿಧ ಪ್ರದೇಶಗಳಲ್ಲಿ ವಾಸಿಸುವ ಹಲವಾರು ನಿರ್ಲಕ್ಷಿತ ಸಮುದಾಯಗಳ ಬಗ್ಗೆ ಅಧ್ಯಯನಗಳನ್ನು ಕೈಗೊಳ್ಳುವುದು ಸಮಂಜಸವಾಗಿದೆ. ಇದರಿಂದ ಬುಡಕಟ್ಟು ಸಮುದಾಯಗಳ ಹಲವು ಮುಖಗಳನ್ನು ಗುರುತಿಸಬಹುದು.

೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ ಮತ್ತು ಕ್ಷೇಮಾಭಿವೃದ್ಧಿ ಬಗ್ಗೆ ಸರ್ಕಾರ ಮತ್ತು ಸಂಘಸಂಸ್ಥೆಗಳು ಇತ್ತ ಗಮನ ಹರಿಸಬೇಕಾಗಿದೆ.

೭. ಮ್ಯಾಸಬೇಡ ಹಾಗೂ ಕಾಡುಗೊಲ್ಲ ಬುಡಕಟ್ಟುಗಳು ಮೂಲತಃ ಒಂದೇ ವಿನಃ ಬೇರೆಯಲ್ಲ. ಈ ಎರಡೂ ಸಮುದಾಯಗಳು ತಮ್ಮ ಒಳಪಂಗಡಗಳಲ್ಲಿರುವ ಭಿನ್ನತೆಗಳನ್ನು ಮರೆತು ಒಂದಾಗಲು ಪ್ರಯತ್ನಿಸಬೇಕು.

೮. ಮ್ಯಾಸಬೇಡ ಹಾಗೂ ಕಾಡುಗೊಲ್ಲರಲ್ಲಿರುವ ಜಾನಪದ ಸಂಪತ್ತು ಮತ್ತು ಸಂಸ್ಕೃತಿಗಳು ನಶಿಸಿಹೋಗುವ ಮುನ್ನ ಅಧ್ಯಯನಕಾರರು ಮತ್ತು ವಿಶ್ವವಿದ್ಯಾಲಯಗಳು ಅವುಗಳು ಮಾಹಿತಿ ಸಂಗ್ರಹಿಸಬೇಕಾಗಿದೆ.

ಭಾರತದ ಉದ್ದಗಲಕ್ಕೂ ಹರಡಿಕೊಂಡಿರುವ ಬೇಡ ಮತ್ತು ಗೊಲ್ಲ ಸಮುದಾಯಗಳನ್ನು ಕುರಿತು ಅಧ್ಯಯನ ಮಾಡುವವರಿಗೆ ಪ್ರಸ್ತುತ ಈ ಮಹಾಪ್ರಬಂಧ ಮಾರ್ಗಸೂಚಿಯಾಗಬಹುದು. ಒಟ್ಟಿನಲ್ಲಿ **ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ** ಎಂಬ ವಿಷಯದ ಮಹಾಪ್ರಬಂಧ ನನ್ನ ಪ್ರಾಮಾಣಿಕ ಪ್ರಯತ್ನವಾಗಿದೆ. ಆದಾಗ್ಯೂ ನನ್ನ ಗಮನಕ್ಕೆ ಬರದೆ ಇರುವ ಸಂಶೋಧನ ಅಂಶಗಳು ಕಣ್ಣು ತಪ್ಪಿ ಇನ್ನೂ ಉಳಿದಿರುವ ಸಾಧ್ಯತೆಗಳಿವೆ. ಅವುಗಳನ್ನು ಮುಂದಿನ ಅಧ್ಯಯನಕಾರರ ಅಧ್ಯಯನಕ್ಕೆ ಬಿಡಲಾಗಿದೆ.

ಅನುಬಂಧಗಳು

೧. ಹಾಡುಗಳು

೨. ಉರುಮೆ ಪದ

೩. ತಿರುಮಂತ್ರಗಳು

೪. ಗಂಟೆ ಹೆಳವರ ನುಡಿಗಳು

೫. ಹಸ್ತಪ್ರತಿಗಳು

೬. ಸಮೀಕ್ಷೆ ಮಾಡಿದ ಗ್ರಾಮಗಳ ನಕ್ಷೆ

೭. ಕ್ಷೇತ್ರ ಕಾರ್ಯ ಕೈಗೊಂಡ ಗ್ರಾಮಗಳ ಅಂಕಿ ಅಂಶಗಳು

೮. ಪ್ರಶ್ನಾವಳಿ

೯. ಪ್ರಮುಖ ವಕ್ತೃಗಳು

೧೦. ಪರಾಮರ್ಶನ ಗ್ರಂಥಗಳು

೧೧. ಪ್ರಾದೇಶಿಕ ಪದಗಳ ಅರ್ಥಸೂಚಿ

೧೨. ಛಾಯಾಚಿತ್ರಗಳು

ಹಾಡುಗಳು

೧.೧. ಶ್ರೀ ಅಹೋಬಲ ನರಸಿಂಹಸ್ವಾಮಿ

ಹುಲ್ಲಿನ ಗುಡಿ ಕಾಣೋ ಕಂಚಿನ ಕದಕಾಣೋ
ಅಲ್ಲುವನೆ ನಮ್ಮ ಮನೆ ಸ್ವಾಮಿ ಓಬಯ್ಯ । ನಾವು
ಇಲ್ಲಿಂದ ಕೈಯ್ಯ ಮುಗಿದೇವು ॥

ಹೋಗಿ ನೋಡನ ಬನ್ನಿ ಬಿಲ್ಲು ಗೂಡಿನ ಪೂಜೆಯ
ಸ್ವಾಮಿ ಓಬಯ್ಯನ ದಾಸರದ । ಪೂಜೆಯ
ಹೋಗಿ ನೋಡುವ ಬನ್ನೀರೆ ॥

ವೇದಾವತಿಯ ಗಂಗೆ ತಾಮ್ರದ ಕೈಚೆಂಬು
ಸ್ವಾಮಿ ಓಬಯ್ಯಗೆ ಶಿವಪೂಜೆ । ಆಗುವಾಗ
ನಿಡಗಲ್ಲು ಗಂಟೆ ಗಲಿರೆಂದು ॥

ಸಾಮ್ರಾಣಿ ಗಮನಕ್ಕೆ ಹೊಂಬಾಳೆ ಬಾರಕ್ಕೆ
ಸ್ವಾಮಿ ಓಬಯ್ಯ ಬೆವತಾನು । ಪೂಜಾರಿ
ಬೀಸಯ್ಯ ಬೆಳ್ಳೀ ಚವಲಾವ ॥

ಆರುತಿ ಹೊರಟಾವೆ ಕೀರುತಿ ಉಳ್ಳೋನಿಗೆ
ಕೆರೆಯೇರಿ ಮೇಲೆ ಮರೆಯಾಗಿ । ಓಬಯ್ಯಗೆ
ಆರುತಿ ನೂರಾರು ಹೊರಟಾವೆ ॥

ಎದ್ದು ನೋಡಾನ ಬನ್ನಿ ಬೆಳಗಿನ ಪೂಜೆಯ
ಮುದ್ದು ಓಬಯ್ಯನ ಕಂಬದ । ಪೂಜೆಯ
ಎದ್ದು ನೋಡೋರಿಗೆ ವನವಿಲ್ಲ ॥

ಅಪ್ಪ ಓಬಯ್ಯನ ಹಣೆಯ ಮೇಗಳ ನಾಮ
ಸಣ್ಣ ನೂಲೇಳೆ ತೆಗೆದಂಗ । ಓಬಯ್ಯ
ನಿಂಕೆನ್ನೆ ಮ್ಯಾಗಳಾ ಹರಿನಾಮ ॥

ಹಸಿವಿಗೆ ಹಾಲು ಕಾಣೋ ಶಿಶುವಿಗೆ ಬೆಣ್ಣೆ ಕಾಣೋ
ಹುಟ್ಟಿದ ಮಕ್ಕಳಿಗೆ ನಿನ್ನ ಹೆಸರು । ಓಬಯ್ಯ
ನೀ ಬಂದ ಬವರ ಹೊಡಕೋಳ್ಳೂ ॥

ಆಚೆಗೆ ನಾಗತಿಹಳ್ಳಿ ಈಚೆಗೆ ಮರಿಕುಂಟೆ
ವಾಲೆ ಮಾಡುತಾ ಯಲಗಟ್ಟೆ । ಊರ ಮುಂದೆ
ತನುವಾದ ಗಂಗೆ ಹರಿದಾಳು ॥

ಹಿಂದುಕೆ ನಾಗತಿಹಳ್ಳಿ ಮುಂದಾಕೆ ಮರಿಕುಂಟೆ
ತುಂಬಿ ಹರಿದಾಳು ಶಿವಗಂಗೆ । ತನುವೀಗೆ
ಅಲ್ಲಿ ಓಬಯ್ಯ ನೆಲಗೊಂಡ ॥

ಎತ್ತು ಕಾಯೋರ ಕೂಟ ಮತ್ತೆ ಬಂದ ಓಬಯ್ಯ
ಮುತ್ತಿನ ಚಂಬೇ ಬಲಗೈಲಿ । ನಾಗತಿಹಳ್ಳಿ
ದಿಕ್ಕೋಳ್ಳೇದೆಂದು ನೆಲೆಗೊಂಡ ॥

ಎತ್ತುಗಳ ಹೊಡಕೊಂಡು ಸ್ವಾಮಿಯ ತಕ್ಕೊಂಡು
ಹೊಟ್ಟೆ ಓಬಣ್ಣ ನಡೆದಾನು । ನಾಗತಿಹಳ್ಳಿ
ದಿಕ್ಕೋಳ್ಳೇದೆಂದು ನೆಲಗೊಂಡ ॥

ಹತ್ಯಾನು ಬಿಳಿ ಕುದುರೆ ನಡೆದಾನು ನಾಗತಿಹಳ್ಳಿ
ತಂಗಿ ಗೂಲಮ್ಮ ನೊಡಗೂಡಿ । ಓಬಯ್ಯ
ದಾರಿ ನಡೆದಾರು ಹರಿದೂರ ॥

ಆಚ್ಯಾಕೆ ನಾಗತಿಹಳ್ಳಿ ಈಚ್ಯಾಕೆ ಮರಿಕುಂಟೆ
ಕಪ್ಪಿನ ಮಾಟುಕದ ಯಲಗಟ್ಟೆ । ಊರ ಮುಂದೆ
ಒಪ್ಪಾದ ಗಂಗೆ ಹರಿದಾಳು ॥

ಕಪ್ಪಿನ ಮಾಟುಕದ ಯಲಗಟ್ಟೆ ಊರ ಮುಂದೆ
ಒಪ್ಪಾದ ಗಂಗೆ ಹರಿದಾಳು । ತನುವೀಗೆ
ಅಲ್ಲಿ ಓಬಯ್ಯನ ಮಹಾಪೂಜೆ ॥

ಹೊಳೆಯಾಗೆ ನಿಂತ್ಕೊಂಡು ಯಾರನ್ನ ಕೂಗುತ್ತೀಯ
ದೂರ ಹೋಗ್ಯವಳೆ ನಿನ ತಂಗಿ । ಗೂಲಮ್ಮ
ಪೂಜೆಗ್ಹೊಂಬಾಳೆ ತರುವಾಕೆ ॥

ಬೆಳ್ಳಿ ಬೆತ್ತದ ಕೋಲು ಚಿನ್ನದ ಬವನಾಸಿ
ಸ್ವಾಮಿ ಓಬಯ್ಯ ಹುಲಿಬ್ಯಾಟೆ । ಹೊರಟಾರೆ
ತಂಗಿ ಗೂಲಮ್ಮ ನೋಡ್ಯಾಳೆ ॥

ಹತ್ತಲಾರದ ಗುಡ್ಡ ಹತ್ಯಾನೆ ಓಬಯ್ಯ
ಹತ್ತಿ ನೋಡ್ಯಾನೆ ನಿಡಗಲ್ಲು । ಊರ ಮುಂದೆ
ಆಡೋ ಮಕ್ಕಳ ಸುಳವಿಲ್ಲ ॥

ನಿಡಗಲ್ಲು ಗುಡ್ಡಾದಿ ಗುಲಗಂಜಿ ಗಿಡಹುಟ್ಟಿ
ಅಬ್ಬರಿಸುತಾವೆ ಹುಲಿ ಕರಡಿ । ಓಬಯ್ಯ
ಸದ್ದಿಲ್ಲವೇನೋ ಗುಡಿಯಾಗೆ ॥

ಕಟ್ಟೇ ಮ್ಯಾಲೋಬಯ್ಯ ಸಿಟ್ಟೇಲಿ ಬರುವಾಗ
ಪಟ್ಟೆ ಸಾಲೇಲಿ ಒಳಗಿದ್ದು । ಓಬಯ್ಯಗೆ
ಮುತ್ತಿನಾರುತಿ ಹಿಡೆದೇವು ॥

ಏರೀಯ ಹತ್ತ್ಯಾನು ಸುತ್ತಾಲೂ ನೋಡ್ಯಾನು
ಏರೀಗೆ ನೀರು ಸಮನೆಂದ । ಮರಿಕುಂಟೆ
ಹತ್ಯಾನು ಓಬಯ್ಯ ಬಿಳಿಯ ತೇಜ ॥

ಹಟ್ಟಿಗೌಡರು ಮುಟ್ಟಿರೊಂದು ಇಳ್ಳೇವು
ನೆಟ್ಟಿನ ಕಲ್ಲು ಬರಬೇಕು । ನಾಗತಿಹಳ್ಳಿ
ಓಬಯ್ಯನ ಗುಡಿ ನಿಲ್ಲೇಕು ॥

ನೆಟ್ಟಿನ ಕಲ್ಲು ಕಂಭ ಭಕ್ತಿಯಿಂದ ಕಡೆದಾನು
ಕುರ್ಕೆಗುಡ್ಡದಲ್ಲಿ ಬೋವಿ । ಭೀಮಪ್ಪ
ಕುಕ್ಕಲಪಲ್ಲಿ ಗುಡಿ ಮುಂದಾಕೆ ॥

ಕಂಭ ಕಡಿವಣ್ಣಾಗೆ ನಿಂಬೆಹಣ್ಣ ಕೊಟ್ಟೆ
ಬಿಂದೀಗೆ ಹೊನ್ನ ಅಳಕೊಟ್ಟೆ । ಓಬಯ್ಯನ
ಕಂಭಾವ ಕಡೆದ ಬೋವಿಗೆ ॥

ಬಾಗಾಲ ಕಡೆದಣ್ಣಾಗೆ ಬಾಳೆಹಣ್ಣ ಕೊಟ್ಟೆ
ಜೋಳಿಗೆ ಹೊನ್ನ ಅಳಕೊಟ್ಟೆ । ಓಬಯ್ಯನ
ಬಾಗಾಲ ಕಡೆದ ಬಡಗೀಗೆ ॥

ಬಾಗಾಲ ಕಡೆದ ಸಾಲೆ ಮಂಚ ಕಡೆದ
ಸ್ವಾಮಿ ಓಬಯ್ಯ ಬಿಡಿಗಡೆದ । ಬಡಗೀಗೆ
ಮತ್ತೇನು ಕೊಟ್ಟೆ ಹಿರಿಯಣ್ಣ ॥

ಅಡವಿ ಹುಲ್ಲು ಬರ್ಲಿ ಮಡಗಿನ ನೀರು ಬರ್ಲಿ
ಗಡಿನಾಡಿನೋಳ ತೊಲೆ ಬರ್ಲಿ । ಮರಿಕುಂಟೆ
ಓಬಯ್ಯನ ಗುಡಿ ನಿಲ್ಲೇಕು ॥

ಕೆರೆಯಾಗೆ ಬರುವಾವು ಅರವೊತ್ತೊಂದಾರುತಿ
ಕೆರೆಯೆಲ್ಲ ಮಂಜುಗವುದಾವು । ಓಬಯ್ಯಗೆ
ಹರಿದಾರುತೀಯ ರವುಸೀಗೆ ॥

ಕಟ್ಯಾಗೆ ಬರುವಾವು ಇಪ್ಪತ್ತೊಂದು ಆರುತಿ
ಕಟ್ಯಾಲ್ಲ ಮಂಜುಗವುದಾವು । ಓಬಯ್ಯಗೆ
ನಿಸ್ತ್ರೀರ ಆರುತಿಯ ರವುಸೀಗೆ ॥

ತಾಯಿ ಮನೆ ದೇವರಿಗೆ ತಾಳೀಯ ಮಾಡಿಸೋದು
ನಮ್ಮ ಮಾವನ ಮನೆ ಸ್ವಾಮಿ । ಓಬಯ್ಯಗೆ
ಹೇಳಿ ಮಾಡಿಸಿದೋ ಪರಬಾಳೆ ॥

ಬೆಟ್ಟಾವ ಇಳಿವಾಗ ಬಿಚ್ಚಾವು ಪಾದದ ಗೆಜ್ಜೆ
ಉಟ್ಟಂಗ ದುಡಿಗೆ ಸ್ವಡಿಲಾವು । ಓಬಯ್ಯಗೆ
ಬೆಟ್ಟಾವ ಇಳಿವ ರವುಸೀಗೆ ॥

ಹಳ್ಳವ ಇಳಿವಾಗ ಚಲ್ಲ್ಯಾವು ಪಾದದ ಗೆಜ್ಜೆ
ಉಲ್ಲಂಗ ದುಡಿಗೆ ಸ್ವಡಿಲಾವು । ಓಬಯ್ಯಗೆ
ಹಳ್ಳವ ಇಳಿವ ರವುಸೀಗೆ ॥

ಗಂಗೆಯಾ ದಡದಲ್ಲಿ ನಿಂಬೇಯ ಮರಹುಟ್ಟಿ
ಅಂಗುಲಿಸ್ತಾವೆ ಹುಲಿಕರಡಿ । ಓಬಯ್ಯ
ವಂದೀಸಿ ಹೊಳೆಯ ಇಳಿದಾನು ॥

ಆಚೆಯ ದಡದಲ್ಲಿ ಧೂಪದ ಮರಹುಟ್ಟಿ
ಆಕುರುಸ್ತಾವೆ ಹುಲಿ ಕರಡಿ । ಓಬಯ್ಯ
ತೊತ್ತರಿಸಿ ಹೊಳೆಯ ಇಳಿದಾನು ॥

ಆರುಸಿದಂಗೆ ಆರು ಚಿಲುಮೇಯ ತೋಡಿ
ಸೂರ್ಯಂಗೆ ಮಂಜು ಗವುದಂಗೆ । ಓಬಯ್ಯಗೆ
ಜೇನು ತುಪ್ಪದಲ್ಲಿ ಶಿವಪೂಜೆ ॥

ಕತ್ತರಿಸಿದಂಗೆ ಹತ್ತು ಚಿಲುಮೇಯ ತೆಗೆದು
ಶುಕ್ರಗ ಮಂಜು ಗವುದಂಗೆ । ಓಬಯ್ಯಗೆ
ಉತ್ತುತ್ತಿ ಹಣ್ಣೀನ ಶಿವಪೂಜೆ ॥

ಎಲೆಯಾಗೆ ಇಕ್ಕಾರೆ ಬೆಲ್ಲಾವ ಇಟ್ಟಂಗೆ
ಏಳು ದಾಸರು ನಲಿನಲಿದು । ನಿಡುಗಲ್ಲು
ಓಬಯ್ಯಗೆ ಆಡ್ಯಾರೆ ಮಣೇವು ॥

ದಾಸ ದಾಸನೆ ದಾಸ ನಮ್ಮಯ್ಯನೆ
ಎಸುದಿಲೆ ಪಾರಿ ತಿರಗೋನೆ । ನಿಡಗಲ್ಲು
ದಾಸ ನಮ್ಮಾಲೆ ದಯವಿರಲಿ ॥

ಆಕಾಲಲಿ ಕುಣಿಯೋರು ಈ ಕಾಲಲಿ ಮೆರೆಯೋರು
ಗೀಕಿನ ಕೋಲಲಿ ಮಣೇವು । ಆಡುವ
ದಾಸಯ್ಯಗಳ್ಯಾವ ಸ್ಥಳದೋರು ॥

ಹೊಕ್ಕಳಕ್ಕಿ ಭೂತ ಅಚ್ಚು ಬೆಲ್ಲದ ಭೂತ
ರಕ್ಕಸರ ಭೂತ ರಣಭೂತ । ಬರುವಾಗ
ಮಕ್ಕಳ ತಾಯಿ ಒಳಗೀರೆ ॥

ಹತ್ತಾಳು ದಾಸರು ಹೊತ್ತೀಲಿ ರಣಭೂತಾರು
ಕತ್ತೀಯ ಗತಿಗೆ ಕುಣಿವಾರು । ಮಕ್ಕಳ
ಯತ್ತಲಿಂದ ತಂದ್ಯೋ ಚಿನುಮಾಯಿ ॥

ಹತ್ತು ಕಂಬಿಯ ಹಾಲು ಉಕ್ಕುತ ಮರಳೂತ
ಶಟ್ಟಿ ಸಿನಿಮೊಗಲೋರು ಮಗತಂದ । ನೊರೆಹಾಲು
ಅಪ್ಪ ಓಬಯ್ಯನ ತಳಿಗಾಗಿ ॥

ಅಪ್ಪ ಓಬಯ್ಯ ಬಾಗಿಲಿಗೆ ಬಂದಾರೆ
ನಾನೇನು ನೀಡಲಿ ಬಡಮಗಳು । ಓಬಯ್ಯಗೆ
ಇಕ್ಕೊಂದು ಎಮ್ಮೆ ನೊರೆಹಾಲು ॥

ದೇವರಿಗೆ ಹೂವೆರಗಿ ದಾವತಿ ನಮಗಿಲ್ಲ
ದಾವತಿ ನಮಗಿಲ್ಲ ದಾರಿ ನಡೆದಾರೆ । ಓಬಯ್ಯ
ದೇವರಿಗೆ ಹೋದಾರೆ ದಣಿವಿಲ್ಲ ॥

ಕಣಗಿಲೆ ಗಿಡದಡೆ ಕರುಣೆ ಮೂರುತಿಯಾದ
ಕಣಗಿಲೆ ಮೊಗ್ಗೇ ಉದುರೇವು । ಓಬಯ್ಯನ
ಕರುಣೆನ ಮ್ಯಾಲೆ ಹುತ್ತ ಬೆಳದಾವು ॥

ನಿಂಬೆಯ ಗಿಡದಡಿ ತುಂಬಿ ಮೂರುತಿಯಾದ
ನಿಂಬೀಯ ಮೊಗ್ಗೆ ಉದರೇವು । ಓಬಯ್ಯನ
ಕಂಬಿನ ಮ್ಯಾಲೆ ಹುತ್ತ ಬೆಳೆದಾವು ॥

ಹಾಲು ಬಾನವ ಕೊಡು ಮ್ಯಾಲೆ ಭಾಗ್ಯವ ಕೊಡು
ಬಾಲಕರ ಕೊಡು ಮನೆತುಂಬ । ಓಬಯ್ಯ
ಬಾಗೀಲ ರಜವ ಹೊಡೆದೇವು ॥

ಇಪ್ಪತ್ತು ಗೇಣೇಲಿ ಕಟ್ಟಿಸ್ತಾರು ಅರಮನೆ
ಓಬಯ್ಯನ ಪೆಟ್ಟೀಗೆ ಮುಂದೆ ಕಳಸಾವ । ಹಿಡಿಯುವ
ಪುತ್ರಿಯರೈವರ ಕೊಡು ಸ್ವಾಮಿ ॥

ಹರಕೆಯ ಒಪ್ಪಿಸುತ ದೊಡ್ನೋರ ಮಗನೇ
ನೀ ಸುತ್ತಿ ಬಾರೋ ಪೌಳೀಯ । ಬಾಗಿಲ್ಮುಂದೆ
ಹೊತ್ತು ಬಾರೋ ಹೊನ್ನ ಕಳಸಾನ ॥

ಕಷ್ಟಕ್ಕೆ ಆದವಗೆ ನಿಷ್ಟುರ ಹೊತ್ತವಗೆ
ಬಂದ ಬವರವ ಬಯಲಾನೆ ಮಾಡಿದ । ಓಬಯ್ಯ
ಪಾದಕ್ಕಿಟ್ಟೇವು ಇಡುಗಾಯಿ ॥

ಇಡುಗಾಯಿ ಇಡಿಸೇವು ವಡಗಾಯಿ ವಡಿಸೇವು
ಎಳೆ ನೀರಿನ ಕೋಡಿ ಹರಿಸೇವು । ಓಬಯ್ಯ
ನೀ ಕೋಣೆ ತುಂಬಿ ಹರಿದಾವು ॥

ಹಾಲು ಬಾನವ ಕೊಡು ಕಪ್ಪು ಬಂಗಾರವ ಕೊಡು
ಪುತ್ರರ ಕೊಡು ಮನೆತುಂಬ । ಓಬಯ್ಯ
ಪೌಳೀಯ ರಜವ ಹೊಡೆದೇವು ॥

ಆವು ಕಾಯೋರ ಕೋಟೆ ತಾವು ಬಂದ ಓಬಯ್ಯ
ತಾ ಹಿಡಿದ ಚಂಬು ಬಲಗೈಲಿ । ಹಿಡಕೊಂಡು
ತಾವೊಳ್ಳೇದೆಂದು ನೆಲೆಗೊಂಡ್ರು ॥

ಆವುಗಳ ಹೊಡಕೊಂಡು ದೇವಾರ ತಕೊಂಡು
ತಂಗಿ ಗೂಲಮ್ಮ ನಡೆದಾಳು । ನಾಗತಿಹಳ್ಳಿ
ತಾವೊಳ್ಳೇದೆಂದು ನೆಲೆಗೊಂಡಾಳು ॥

ವಡೆದು ಮೂಡ್ಯವಳೆ ಗುಡಿ ತುಂಬ ಗೂಲಮ್ಮ
ವಡೆವೆ ಇಕ್ಕವಳೆ ಮೈತುಂಬ । ಗೂಲಮ್ಮ
ಗುಡು ಗುಡು ಆಡ್ಯಾಳೆ ಗುಡಿತುಂಬ ॥

ಗೊಂಬೆಯ ಅಂಚಿ ಸೀರೆ ತಂದೀವಿ ಗೂಲಮ್ಮ
ಕಾಗೋಡ ಕರೆದು ಮುಸಕೀಡು । ಗೂಲಮ್ಮ
ಒಪ್ಪೀಸಿಕೊಳ್ಳೇ ಚಂದದಲಿ ॥

ಆರು ಕಂಬಿಯ ಹಾಲು ಕಾಯೂತ ಮರಳೂತ
ರಾಯ ಸಿನಮೊಗಲೋರ ಮಗತಂದ । ನೊರೆಹಾಲು
ತಾಯಿ ಗೂಲಮ್ಮನ ಎಡಿಗಾಗಿ ॥

ಸಂದಿ ಸಂದೀಗಿ ಮುತ್ತು ನಂದ ದೀವೀಗೆ ಬೆಳಕು
ಗಂಧಾದ ಕೊಠಡೀಲಿ ನೆಲೆಗಾರೆ । ಪಟ್ಟೈತೆ
ಸ್ವಾಮಿ ಓಬಯ್ಯನ ಗುಡಿಗೆಲ್ಲ ॥

೨. ಉರಮೆ ಪದ

೨.೧. ಉರುಮೆ ಪದ

ಹಿಂದಿನಾ ಕಾಲದಲ್ಲಿ
ಒಂದಾಳುದ್ದ ಮನುಷ್ಯರಂತೆ
ಮನುಷ್ಯರಾದದಿಂದಲ್ಲಿ
ಬೆಳ್ಳಿಯಂತ ದೇವರು
ಬೆಳ್ಳಿಯಂತ ಲಿಂಗ
ಬೆಳ್ಳಿಯಂತ ಪೂಜಾರಿ
ಬೆಳ್ಳಿಯಂತ ಒಕ್ಕಲು
ಬೆಳ್ಳಿಗೆ ಸರಿಸಮನಾದ
ದೇವರಯ್ಯಾ
ಬುದ್ಧೀ.... ದಾತಾರ..... ಭೂಪಾರ.

ಆಗಿನಾ ಕಾಲದಲ್ಲಿ
ಆರಾಳುದ್ದ ಮನುಷ್ಯರಂತೆ
ಮನುಷ್ಯರಾದದಿಂದಲ್ಲಿ
ಚಿನ್ನದಂತ ದೇವರು
ಚಿನ್ನದಂತ ಲಿಂಗ
ಚಿನ್ನದಂತ ಪೂಜಾರಿ
ಚಿನ್ನದಂತ ಒಕ್ಕಲು
ಚಿನ್ನಕ್ಕೆ ಸರಿಸಮನಾದ
ದೇವರಯ್ಯಾ
ಬುದ್ಧೀ..... ದಾತಾರ... ಭೂಪಾರ.

ಈಗಿನಾ ಕಾಲದಲ್ಲಿ
ಒಂದಾಳುದ್ದ ಮನುಷ್ಯರಂತೆ
ಮನುಷ್ಯರಾದದಿಂದಲ್ಲಿ
ಕಲ್ಲಿನಂತೆ ದೇವರು
ಕಲ್ಲಿನಂತೆ ಲಿಂಗ
ಕಲ್ಲಿನಂತ ಪೂಜಾರಿ
ಕಲ್ಲಿನಂತ ಒಕ್ಕಲು
ಕಲ್ಲಿಗೆ ಸರಿಸಮನಾದ
ದೇವರಯ್ಯಾ
ಬದ್ಧೀ..... ದಾತಾರ.... ಭೂಪಾರ.

ಒಂದು ನಾಮದಲಿ
ಹರ ನೀನಾದೆ
ಎರಡು ನಾಮದಲಿ
ನಾರಾಯಣನಾದೆ
ಮೂರು ನಾಮದಲಿ
ಮುಕ್ಕಣನಾದೆ

ನಾಲ್ಕು ನಾಮದಲಿ
ನರಸಿಂಹಸ್ವಾಮಿ ನೀನಾದೆ
ಐದು ನಾಮದಲಿ
ಪಂಚ ಪಾಂಡವರಾದೆ
ಆರು ನಾಮದಲಿ
ಷಣ್ಮುಖನು ನೀನಾದೆ
ಏಳು ನಾಮದಲಿ
ಏಳ್ಹೆಡೆ ಸರ್ಪ ನೀನಾದೆ
ಎಂಟು ನಾಮದಲಿ
ಶ್ರೀ ಕೃಷ್ಣನು ನೀನಾದೆ
ಒಂಬತ್ತು ನಾಮದಲಿ
ಹಂತಕನು ನೀನಾದೆ
ಹತ್ತು ನಾಮದಲಿ
ಹತ್ತು ತಲೆ! ಇಪ್ಪತ್ತು ಭಜವುಳ್ಳ!
ರಾವಣನು ನೀನಾದೆ
ಬುದ್ಧೀ..... ದಾತಾರ.... ಭೂಪಾರ.

ಬನ್ನಿಯ ಮರದಡಿಯಾ
ಗುರಿಯಿಟ್ಟು, ಗುರಿಯೆಸುವಾಗ
ಪಟ್ಟಿ ಸಿಂಗಣ್ಣನ ಹೆಂಡ್ತಿ
ಮೆಟ್ಟಿ ಮೆಟ್ಟಿ
ಮೊಸರು ಕಡೆವಳಂತೆ
ಎತ್ತಕ್ಕನಿಂತುರಭೋ
ಎತ್ತವ್ಯೋತೆಂದರೇ
ಹಾನಿಗಲ್ಲ ಸಿಕ್ಕವನ
ಪಾದನೇ ಸೇರಿ
ಅವಳ ಹೊಟ್ಟೆಯಲ್ಲಿ
ಏಳು ಮಂದಿ
ಕುಮಾರರು ಹುಟ್ಟಿದರಂತೆ
ಹುಟ್ಟಿದೇಳು ದಿನಕೆ
ಹುಲಿ ಇರದರಂತೆ
ಮತ್ತೇಳು ದಿನಕೆ
ರಾಮರ ಬಾಣವಾಗಿ
ನಿಂತರಂತೆ
ಬುದ್ಧೀ..... ದಾತಾರ.... ಭೂಪಾರ.

ಲಂಗೈಲಿ ಆರು ಕಂಡ ಈಸ
ಮುಂಗೈಲಿ ಮೂರು ಕಂಡ ಈಸ
ಆಕಾಶ ಬಿಟ್ಟರೆ

೨.೧. ಹಾಡಿದವರು : ಉರುಮೆ ತಿಪ್ಪೇಸ್ವಾಮಿ., ೪೮, ಚಲುವಾದಿ, ದೇವರಮರಿಕುಂಟೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಸಂದರ್ಶನ ದಿನಾಂಕ : ೨೬.೦೨.೧೯೯೪

ಆಕಾಶ ಉರದೊಯ್ತೆಂದು
ಭೂಮಿ ಬಿಟ್ಟರೆ
ಭೂಮಿಯೇ ಉರದೊಯ್ತೆಂದು
ತನ್ನ ಮೈಗೆ ತಾನೇ
ಲ್ಯಾಪೂನೆ ಮಾಡಿಕೊಂಡು
ದಡ್ಡಗಳ್ಳಿ ದಡ್ಡಮಾನ್ನ
ಎತ್ತೋಗಿ ಎತ್ತ ಬಂದ್ಯೆಪ್ಪಾ
ಬುದ್ಧೀ..... ದಾತಾರ.....ಭೂಪಾರ.

ಅವು ಲಿಂಗ
ಇವು ಲಿಂಗ
ಸುಳವ ಲಿಂಗ
ಸೂಕ್ಷ್ಮೇ
ಮಾದಲಿಂಗ
ಕೆಂಜೆಡೆಯ
ಸುಳಪಲ್ಲು
ಹೊಳವು ಕಂಠಾಭರಣ
ಗಂಡರಿಗೆ ಗಂಡ
ಬಲವರಿಗೆ ಮಾರ್ತಂಡ
ಅರಿಯತತ್ತರೂ
ಅರಿಕಾರನ ಮಗನೆ
ಅರಿಯ ತಂದು
ದೇವರಾ
ಬಿಂಕದೊಳಗೆ ನಿಂತು
ರನ್ನದ ಹಲಿಗೆ
ಚಿನ್ನದ ತೊಗಿನೇಣು
ರನ್ನ ಮಾಣೇಕ್ಯದ
ಕೊಡುವನೆ ತಕ್ಕೊಂಡು
ಟೋಪವೆಂದು ಟೋಪರಿಸಿದರೆ
ಬಿದ್ದವಂತಲಪ್ಪ ಮಲ್ಲಿಗೆ
ಕೆದರಿದವಂತಲಪ್ಪ ಕೇದಿಗೆ
ನಿನ್ನ ಮಂಡೆ ಮೇಲೆ
ಆಡುತ್ತಿದ್ದವಂತಲಪ್ಪ
ಎಳನಾಗರ ಸಂಪಿಗೆ
ಬದ್ಧೀ..... ದಾತಾರ... ಭೂಪಾರ.

ವಾಲಗದ ಮಗನಾ
ತಪ್ಪು ನೆಪ್ಪುಗಳನ್ನು
ಒಪ್ಪದಿಂದಲಿ ಇತ್ತು
ನನ್ನ ಸಲಹೋ ದೇವಾ
ಬುದ್ಧೀ.... ದಾತಾರ... ಭೂಪಾರ.

೨.೨. ದೇವರನ್ನು ಕೊಂಡಾಡುವದು

- ೧ -

ಮುವತ್ತು ಮೂರು ಸಾವಿರ ಕುಲ
ಮೂರು ಕಟ್ಟೆ ಮನೆ
ಕಂದನಳ್ಳಿ ಕಟ್ಟೆ
ಬಂದನೆಂದು ಕಲ್ಲ ದೇವಾಪುರ
ಕಡೆ ಕಟ್ಟೆ
ಗಂಜಿಗಟ್ಟೆ ಕಟ್ಟೆ
ಮಾಶ್ಯ ಮಂಡಳಿಯ
ಮೂರು ಕಟ್ಟೆ ಮನೆ
ಗುಡೆ ಕಟ್ಟೆಗಳು
ಏಳು ಮಂದಿ ಒಡೆಯರು
ಐದು ಮಂದಿ ಮುತ್ತೈದಿಯರು
ಮೂವರು ಪೂಜ್ಯಾರಾರು
ಮೂವರು ಯಾಜಮಾನರು
ಧಗಮೇಲ್ ಬೇರುಲ್ಲ
ಧಗು ಮುಪ್ಪರುಮೆ ವಾದ್ಯನೈಯ್ಯ
ಬಂಗಾಲು
ಬಗಲು
ಮೀಟಿ
ಬುರುಗು
ಶಂಕು
ಪಚ್ಚೆ
ಗಂಟೆ
ದೂಪಾರ್ತಿಗಳು
ಅವರೇನು ಬಲ್ಲೇವಪ್ಪ
ಗುರುವೇ ಸಬ್ಬು ಗಟ್ಟು
ವರದರೆ ವೈಯಾಲಿ
ಉಕ್ಕಿನ ಕಂಬನ್ನೈಯ್ಯ
ಅವರೇನು ಬಲ್ಲೇವಪ್ಪ
ಗುರುವೇ ಸಬ್ಬು ಗಟ್ಟು
ನಾದಿ ಸತ್ಯ ಸೋಕಿನ
ಹೇಮಮಾಲಿನಿ
ಗೋವಿಂದ
ಕಂಪಲಿ ಗೋವಿಂದ
ಪೇದ್ದರು ಮೇಲಿನ ದ್ಯಾವನ್ನೈಯ್ಯ
ನೆತ್ತಿರ ಮೇಲೆ ದ್ಯಾವನ್ನೈಯ್ಯ
ಕುಂಚುಮೊ ಕೊರುಮೊ
ಉಗ್ರ ನರಸಿಂಹನಾವತಾರ
ಶ್ರೀ ಕೃಷ್ಣ ಪರಮಾತ್ಮನಾವತಾರ

ವಿಷ್ಣು ಪರಮಾತ್ಮನಾವತಾರ
ದಶಾವತಾರ
ಪೂರ್‍ವ್ಯಾತಾರ
ಕೂರ್ಮ ಅವತಾರ
ವಾಮನಾವತಾರ
ಪರಶುರಾಮನಾವತಾರ
ರಾಮಾವತಾರ
ಶ್ರೀ ರಾಮನಾವತಾರ
ಕೃಷ್ಣವತಾರ
ಭೌದ್ಧವತಾರ
ಉಗ್ರವತಾರ
ಕಲ್ಕ್ಯಾವತಾರನೈಯ್ಯ
ಕಂಚಿನ ಉರುಮೇಲು
ಕಾಲ ಕಡೆಲು
ಉಗ್ರನ ಗುರುನಾಥ
ಪಂಚಲಗಲ
ಪರಶಿವ ಮೂರ್ತಿಲು
ಪಂಚೇದ ಗುರುಗಳೆ
ಮಾನ್ಯ ದೇವ
ನಿಮ್ಮ ನಾಟ್ಯವಪ್ಪ
ಗೋವಿಂದ ಗೋವಿಂದ
ಪ್ರಹ್ಲಾದ ಗೋವಿಂದ
ಲಕ್ಷ್ಮೀ ನಾರಾಯಣ ಗೋವಿಂದ
ಗೋವಿಂದ ಗೋವಿಂದ ಗೋವಿಂದಾ...... .

- ೨ -

ನಾರಾಯಣ ನಾರಾಯಣ
ಓಂ ನಮೋ ಶಿವ ನಾರಾಯಣ
ಇಟ್ಟಿರದು ಚಂದ್ರದ ಬೊಟ್ಟು
ರನ್ನ ಓ ನಾರಾಯಣದ ಕುದುರೆ
ಚಿನ್ನದ ಮಕನಟ್ಟು
ಜಿಂಗಿಲು ಕುದುರೆ
ಕವಳಿ ನಾಮ
ದ್ವರೆ ಸಪನ
ಪಚ್ಚೆ ಪದಿ
ರಾಗಲ್ಲ್ಯ ಪತಿ
ಬಾನುಗುಳ್ಳ ಬೈಯಪ್ಪ ರಾಜರು
ಬಾನುಗುಳ್ಳ ಸೂರಪ್ಪ ರಾಜರು
ಸೂರ್ಯ ಬಡಪಾಪು
ಸತ್ತರ ಒಡಲು
ದೊಡ್ಡಿಗೆ ದೊಡ್ಡಿ

ಮರದೊಡ್ಡಿ
ಕಂಚಿ ಮಿಂಚೇರು
ಹುಲಿರಾಜ ಹುಲಿರಾಜ
ಸತ್ಯ ಭಾಷೆ ತಪ್ಪಿ
ಸಕಲ ಗಂಡವನಾಗಿ
ಗಾದರಿದೇವರ ದೃಷ್ಟಿ ಮುಖಿ ಗಲಗಿನ
ಓಬಳದೇವರ ದೃಷ್ಟಿ ಮುಖಿ ಗಲಗಿನ
ಗುರುವೇ ಬಾವೇಶ್ವರನ ಬೀಕ್ಷಾ
ಪಂಚಲಗಲ
ಪರಶಿವ ಮೂರ್ತಿಲು
ಪಂಚೇದ ಗುರುಗಳೆ
ಮಾನ್ಯ ದೇವ
ನಿಮ್ಮ ನಾಟ್ಯವಪ್ಪ
ಗೋವಿಂದ ಗೋವಿಂದ
ಪ್ರಹ್ಲಾದ ಗೋವಿಂದ
ಲಕ್ಷ್ಮೀನಾರಾಯಣ ಗೋವಿಂದ
ಗೋವಿಂದ ಗೋವಿಂದ ಗೋವಿಂದಾ...... .

- ೩ -

ಸೂರ್ಯರಾಜರು
ಸೂರ್ಯ ಕಂಬರಾಜರು
ಭಾನುಗುಂಟೆ
ಬಲ್ಲದರಾಜರು
ಇಂಡಲಗಲ
ಸಂಸ್ಥಾನ
ಬಂಡಲಗಲ
ಹೆದೆಗೆ ನೀರು
ಬಾರಿ ನೀಗಳು
ಗದ್ದಲಿ
ಮಿದ್ದನೆ
ನಂದಡೆ
ಮುಪ್ಪಡೆ
ನಮಕರಡು ಪಿಂಡಜ
ಬಾಯ ಕರಡು ಬಲ್ಲೆಡೆ
ಅಡಿಗೆ ನವರುಮು
ಕೋರಿನ ತೆಲುಗೆ
ತೋಪೆಗೋರ
ಮಗಮಿ ಗಂಟೆ
ಪಂಚಲಗಲ
ಪರಶಿವ ಮೂರ್ತಿಲು
ಪಂಚೇದ ಗುರುಗಳೆ

ಮಾನ್ಯ ದೇವಾ
ನಿಮ್ಮ ನಾಟ್ಯವಪ್ಪಾ
ಗೋವಿಂದ ಗೋವಿಂದ ಗೋವಿಂದಾ...... .

- ೪ -

ನಾರಾಯಣ ನಾರಾಯಣ
ಓಂ ನಮೋ ನಾರಾಯಣ
ಕತ್ತಡೆ ಲಕ್ಷ್ಮಿ ನಾರಾಯಣ
ಮುಂದಲ ಸಾರಾರಿ
ಸೌರ್‍ಯನ ಮೂರಾರಿ
ಧಗಮೇಲ್ ಬೇರುಲ್ಲ
ಧಗುಮುಪ್ಪರುಮೆ ವಾದ್ಯನೈಯ್ಯ
ರಥ ಮಿದ್ಯ ಮಿಂದ್ಯ ರಾಯಾಬಿಲ್ಲು
ಆದಿ ನಾರಾಯಣ
ಮುನ್ನೂರು ವರಹಲು
ಮುದ್ದಡೆ ಮುಪ್ಪದಿಡಂ
ನಾನೂರು ವರಹಲು
ಗೋಲಂ ಪಚ್ಚಿಡಂ
ಐನೂರು ವರಹಲು
ಕೀರಟವಂ ಸುಟ್ಟು ಪಿಲ್ಲು ಪದಿ
ನೆಟ್ಟು ಪಿಲ್ಲು ಪದಿ
ಏಟಂ ಮೇಟಾನಿ
ತಿರುಗಾಸ್ತಾನೆ ಸ್ವಚ್ಚೆ
ಮಾನಕ್ಕೆವೆಚ್ಚು
ಪಂಬುಲಲು
ಪರ ದೇವರಯ್ಯ
ಯವಡರು
ಪವಡರು
ಪದ್ಮಕಲೋಕಲು
ಕುಂಚಿಲಾ ಕಲ್ಲು
ಯಪ್ಪಟರಾಶ್ಯೆತೆ
ಮಧ್ಯಾನ ಮಿಂಡನೆಂದು
ಜಂಗಮ ಮುಂಡನೆಂದು
ಪಳ ಪಳ ಲಂಭ
ಹೇಯಿ ವಾರಕ್ಕಜ
ಪಂಭರುಯೋಗಿ
ದ್ವಾರಕೇಜ ಪಂಬರು
ಮುನೇಜ ಪಂಬರು
ಕಂಪಳಿನಾಯಕ
ದೃಷ್ಟಗಟ್ಟೆ
ಮಲಗಿನ ಘಾದ್ರಿಪಾಲನಾಯಕ

ದೃಷ್ಟ ಗಟ್ಟೆ
ಮಲಗಿನ ಓಬಳಿದೇವರು
ದೃಷ್ಟ ಗಟ್ಟೆ
ಮಲಗಿನ ಬಂಗಾರದೇವರು
ದೃಷ್ಟ ಗಟ್ಟೆ
ಮಲಗಿನ ಹೀರೇಲಿಂಗ
ದೃಷ್ಟ ಗಟ್ಟೆ
ಮಲಗಿನ ಸಹಜ್ಯವೆ
ಬಹು ಮನಲು
ಕಾಲ ಕಡೆಲು
ಕಂಚಿನ ಉರುಮೆಲು
ಪಂಚಲಗಲ
ಪರಶಿವ ಮೂರ್ತಿಲು
ಪಂಚೇದ ಗುರುಗಳೆ
ಮಾನ್ಯ ದೇವಾ
ನಿಮ್ಮ ನಾಟ್ಯವಪ್ಪ
ಗೋವಿಂದ ಗೋವಿಂದ ಗೋವಿಂದಾ...... .

- ೫ -

ಕುಂಚುಮೊ ಕೊರಮೊ
ಉಗ್ರ ನರಸಿಂಹನಾವತಾರ
ಶ್ರೀ ಕೃಷ್ಣ ಪರಮಾತ್ಮನಾವತಾರ
ವಿಷ್ಣು ಪರಮಾತ್ಮನಾವತಾರ
ದಶಾವತಾರ
ಪೂರ್ವ್ಯಾತಾರ
ಕೂರ್ಮ ಅವತಾರ
ವಾಮನಾವತಾರ
ಪರಶುರಾಮನಾವತಾರ
ರಾಮಾವತಾರ
ಶ್ರೀ ರಾಮನಾವತಾರ
ಕೃಷ್ಣ ಅವತಾರ
ಬೌದ್ಧ ಅವತಾರ
ಉಗ್ರವತಾರ
ಕಲ್ಕಾವತಾರನ್ನೆಯ್ಯ
ದ್ವರೆ ಸಪನ
ಪಚ್ಚೆ ಪದಿ
ದ್ವರೆ ಗೆಡಲು
ನೀನಾಡಲು
ರಾಗಲ್ಲ್ಯಪತಿ
ಪಸರು ಪತಿ
ಕಲ್ಯಾಣ ರಾಜರು

ವಾನಕ್ಕೆ ಸುರುದಿ ದ್ಯಾವನ್ಯೆಯ್ಯ
ಸೂರ್ಯ ಬಡಪಾಪು
ರಾಗಲ್ಲ್ಯ ಪತಿ
ಪಸರು ಪತಿ
ಕಲ್ಯಾಣ ರಾಜರು
ಸೂರ್ಯರಾಜರು
ಬಾನುಗುಂಟೆ
ಬಲ್ಲದರಾಜರು
ಇಂಡಲಗಲ
ಸಂಸ್ಥಾನ
ಬಂಡಲಗಲ
ಗದ್ದಲಿ
ಮಿದ್ದನಿ
ನಂದಡೆ
ಮುಪ್ಪಡೆ
ನಮಕರುಡು ಪಿಂಡಜ
ಬಾಯ ಕರಡು ಬಲ್ಲೇಡೆ
ಗಾದ್ರಿ ಪಾಲನಾಯಕ
ಎರಡು ಒಂಟೆ ಆಡು
ಒಂಟೆವಾಡೆರಡು
ಪರಮೇಶ್ವರ
ಉಂಡದಿ
ಮೇಲಕ್ಕೆ
ದ್ಯೆ ಮೂಲಕ
ದ್ಯೆತಿರುಗುಡ್ಲಪೆ
ಪಿಂಡಕ್ಕೆ
ಸಂತಾನಮ
ಗಾದ್ರಿಪಾಲನಾಯಕಗಿಂತ
ಪುಲಿರಾಜ ಪುಲಿರಾಜ
ಸತ್ಯ ಬೇಸವನ್ನೇಡಿಸಿ
ಸತ್ಯ ಬೇಸವನ್ನೆ
ತೋಪೇಂ
ನೆಲಗೇತ್ರ
ಕಂಚವ್ವ ನಾಯಕರು
ಹಾಲು ಚೇಟೂರ
ಕಾಮವ್ವ ನಾಯಕರು
ಹಾಲು ಕಾಲುಕೋರ
ಪುಲಗನ್ನಗಲು
ಸರವತ್ತೆರಡು
ಕಪ್ಪುಗಾಳಿ ನಿಂತಾಗ
ಕಾಶ್ಮೀರ ರಾಜರು

ದೊಡ್ಡಿಗೆ ದೊಡ್ಡಿ
ಮರದೊಡ್ಡಿ
ಕರೆಮಲೆ
ಬಿಳೆಮಲೆ
ಮುರಿಗೇಂದ್ರಮಲೆ
ಉಕ್ಕೆಂದ್ರ ಮಲೆ
ದೇವೇಂದ್ರ ಮಲೆ
ಊರಿಗೊಂದು ಮಲೆ
ಅಭಾಗು ಜಬಾಗು
ಪಾಲ್ಗಡೆ ಪರವುತ್ತಾ
ಆ ಆಡ ಮಂಡಲ
ಪರಗುತ್ತಾ ಪೆಂಟೆ
ನನ್ನ ಮಜಣ
ಪರವುತ್ತಾ ಪೆಟ್ಟಿಗೆ
ನಾನು ಮಜಣ
ಪೆಂಡೆಂದಿಡು
ಮುಂದಲವಾನಿಕ್ಕೆ
ಪೆಂಡೆಂದಿಡು
ಮಲ್ಲಯ್ಯನಾಯಕನ ವಾನಿಕ್ಕೆ
ಕಗ್ಗಡೈತೆ
ಮಂಜು ನೋಡು
ಕಾಟಯ್ಯ ನಾಯಕನ
ಮಲ್ಲಯ್ಯ ನಾಯಕನ
ಮಲ್ಲಯ್ಯನ
ಬೀಕ್ಷಾ ಗುರುವಿಗೆ
ವಿಶ್ವೇಶ್ವರಯ್ಯನ ಬೀಕ್ಷಾ
ಅಂದನೂರು ಗಂಜಿಗಟ್ಟೆ
ಸಂಸ್ಥಾನಕ್ಕೆ ಮೇಲ್ನೋಡು
ಅಂದನೂರು ಸಿದ್ದೇಶ್ವರ
ಕೊಂಡು ಕೆಂಡವನು ಮಾಡಿ
ಸಕಲು ಗಂಡವನಾಗಿ
ಸಿರಿಯ ಗಂಧಲ
ತೋಟ ಹೊಂಬಾಳೆ
ವಾನಿಕ್ಕೆ
ತನ್ನಿ ನಿಪ್ಪಡೆಯಂ
ಪಂಚಲಗಲ
ಪರಶಿವ ಮೂರ್ತಿಲು
ಪಂಚೇದ ಗುರುಗಳೆ
ಮಾನ್ಯದೇವಾ
ನಿಮ್ಮ ನಾಟ್ಯಲಿಪ್ಪಾ
ಗೋವಿಂದ ಗೋವಿಂದ

ಪ್ರಹ್ಲಾದ ಗೋವಿಂದಾ
ಲಕ್ಷ್ಮೀನಾರಾಯಣ ಗೋವಿಂದ
ಗೋವಿಂದ ಗೋವಿಂದ ಗೋವಿಂದಾ..... .

೨.೨.(೫) ಹಾಡಿದವರು : ಜಿ.ಆರ್.ರವೀಂದ್ರ., ೨೬, ಆದಿದ್ರಾವಿಡರು, ದೇವರ ಗಂಜಿಗಟ್ಟೆ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಸಂದರ್ಶನದ ದಿನಾಂಕ : ೧೮.೦೯.೨೦೦೧

೩. ತಿರುಮಂತ್ರಗಳು

೩.೧. ತಿರುಮಂತ್ರ

ಶ್ರೀ ರಂಗನಾಥ ದಾಸಯ್ಯ
ನಮೋ ನಮಃ
ಬಹು ಪರಾಕು ಬಹು ಪರಾಕು
ಹರೇ ಹರೇ ಹರೇ......

ಅರಸು ಬಂದನು
ಭಕ್ತ ವತ್ಸಲ
ಪುರುಷ ಬಂದನೋ
ಭಾಗವತ ಜನ
ಕರುಣ ಬಂದನೋ
ತನ್ನ ನೆನದವರ ಮನದಲ್ಲಿ
ಪರಮ ಪದ್ಮ
ಭೀಮ ದೇವ ಬಂದನೋ
ಹರೇ ಹರೇ ಹರೇ......

ಧರಣೀ ನೀರಡಿ ಮಾಡಿದೆ
ಧನುಜು ಕುಲ ಸಂಹರಿಸಿದೆ
ಕಾರಣಾತ್ಮವ ತೋರಿ
ಕರುಣ ರೂಪವ ತಾಳಿ
ಮತ್ಸ್ಯ ಅವತಾರದಲ್ಲಿ
ಮತ್ಸ್ಯ ಶ್ರೀರಾಮು
ಹರೇ ಹರೇ ಹರೇ.......

ರಕ್ಷಿಸು ನೀ ಈವರನ್ನು
ಗಾಳಿ ಪೂಜೆ ಶ್ರೀ ರಂಗಧಾಮ
ಹರೇ ಹರೇ ಹರೇ.......

ಪರಾಕು ಪರಾಕು
ಪಾದಧ್ಯಾನ ಪರಾಕು
ಎಚ್ಚರಿಕೆ ಪರಾಕು ಸ್ವಾಮಿ
ಬುದ್ಧಿ ಪರಾಕು ಸ್ವಾಮಿ
ಹಿಮ್ಮಾಲು ಪರಾಕು
ಮುಮ್ಮಾಲು ಪರಾಕಯ್ಯಾ
ಅಷ್ಟಾದಾನ ಕುಂಜ
ಮಸ್ತ ಪರಾಕು
ಹರೇ ಹರೇ ಹರೇ......

ಕ್ಷತ್ರಿಯ ಕುಲದವರ
ಸಲುವುತಲಿ ಪರಾಕು
ಅರಸು ಬಂದನು

ಭಕ್ತವತ್ಸಲ ಪುರುಷ ಬಂದನೋ
ಭಾಗವತ ಜನ ಕರುಣೆ ಬಂದನೋ
ತನ್ನ ನೆನದವರ ಮನದಲ್ಲಿ
ಪರಮ ಪದ್ಮ
ಭೀಮ ದೇವ ಬಂದನೋ
ಹರೇ ಹರೇ ಹರೇ......

ಪರಮ ಪದ್ಮ
ಭೀಮ ದೇವ ಬಂದನೋ
ಮನಸ್ಸು ಬಂದರೆ ಮಾತನಾಡಿದೆ
ಮನಸ್ಸು ಬಾರದಿದ್ದರೆ ಮಾತನಾಡದಂಥ
ಮರುಳು ತಾಂಡವನಯ್ಯ ಪರಾಕು
ಹರೇ ಹರೇ ಹರೇ......

ಸೀತೆ ಸೆರ ಹರಿದೆ
ದ್ರೌಪದಿಯ ಮಾನವಂ ಕಾಯ್ದೆ
ಶ್ರೀ ರಾಮ ಸೀತಾವಲ್ಲಭ ರಾಮ
ದಶರಥರಾಮ ಅಯೋಧ್ಯರಾಮ
ಪಟ್ಟಾಭಿರಾಮ
ಭೂತನಿಯ ಮಲೆಯನುಂಡೆ
ತಾಟಕಿಯ ಸಂಹರಿಸಿದೆ
ಹರೇ ಹರೇ ಹರೇ.......

ಶ್ರೀ ಮನ್ನಾರಾಯಣ ವಲ್ಲಭ
ಆಕಳವಂ ಕಾಯ್ದೆ
ಗೋಕುಲದಲ್ಲಿ ವಡಬೆರತೆ
ಗೋವರ್ಧನ ಗಿರಿಯನ್ನೆತ್ತಿದೆ
ಕೃಷ್ಣದೇವರಾಗಿ ನಿಂದೆ
ಶಂಖು ಚಕ್ರಗದಾಧರ
ಹರೇ ಹರೇ ಹರೇ......

ಭೂದರಿಯ ತಾಳಿದೆ
ಗಜರೂಪಾದೆ
ಮೇಧನಿಯ ತಾಳಿದೆ
ಹರಿ ಕೂರ್ಮನಾದೆ
ಕಾಯ್ದು ಪ್ರಹ್ಲಾದನೆಂಬೋ
ನಾರಸಿಂಹನಾದೆ
ಹರೇ ಹರೇ ಹರೇ......

ಹುಲಿಯ ಭಂದಿಸಲೋಗಿ
ವಾಮರೂಪಾದೆ
ಧರಣೆ ನೀರಡಿ ಮಾಡಿದೆ
ಧನುಜ ಕುಲ ಸಂಹರಿಸಿದೆ

ಕಾರಣಾತ್ಮವ ತೋರಿ
ಕರುಣೆ ರೂಪವ ತಾಳಿ
ಮತ್ಸ್ಯ ಅವತಾರದಲ್ಲಿ
ಮತ್ಸ್ಯ ಶ್ರೀರಾಮ
ಹರೇ ಹರೇ ಹರೇ.....

ಕಲ್ಕಿಯ ಅವತಾರದಲ್ಲಿ
ಕಲ್ಕಿಯ ಶ್ರೀರಾಮ
ರಕ್ಷಿಸೋ ನೀ ಇವನನ್ನು
ಗಾಳಿ ಪೂಜೆ ಶ್ರೀರಂಗಧಾಮ
ಹರೇ ಹರೇ ಹರೇ.......

ದೇವದಾನವರಿಂದ ಸಮುದ್ರ ಮತನವನ್ನು
ಮಾಡಿಸಿದವನೇ ಗೋವಿಂದ
ಸಮುದ್ರ ಮತನದಿಂದ ಉದಿದವಾದ
ಸುರೇ ಅಮೃತವನ್ನು ದೇವದಾನವರಿಗೆ
ಹಂಚಿದವನೆ ಗೋವಿಂದಾ
ಹರೇ ಹರೇ ಹರೇ.......

ಮಾವ ಕಂಸನರಕಸಿಸ್ ಪಾಲದಂತ
ವಕ್ರನನ್ನು ಕೊಂದವನೆ ಗೋವಿಂದ
ಸಂಸಾರಿ ಎನಿಸಿದವನೆ ಗೋವಿಂದ
ಈ ಸಂಸಾರ ಸಾಗರವನ್ನು
ದಾಟಿಸುವನೆ ಗೋವಿಂದಾ
ಹರೇ ಹರೇ ಹರೇ.......

ಭಗೀರಥನಿಗೊಲಿದವನೆ ಗೋವಿಂದ
ಭಾಗೀರಥಿಯಾಗಿ ಈ ಭೂಲೋಕಕ್ಕೆ
ಬಂದವನೆ ಗೋವಿಂದ
ಸಗರ ಪುತ್ರರಿಗೆ ಮುಕ್ತಿಯನ್ನು
ಕೊಟ್ಟವನೆ ಗೋವಿಂದ
ಭಕ್ತರ ಬಾಗಿಲನ್ನು ಕಾಯ್ದುವನೆ ಗೋವಿಂದಾ
ಹರೇ ಹರೇ ಹರೇ......

ಭಾರತಿಯಾದವನೆ ಗೋವಿಂದ
ಸರಸ್ವತಿಯೆನಿಸಿದವನೆ ಗೋವಿಂದ
ಆದಿಲಕ್ಷ್ಮೀಯಾದವನೆ ಗೋವಿಂದ
ಅನಂತ ರೂಪಗಳನ್ನು ತಾಳಿದವನೆ ಗೋವಿಂದ
ಲಕ್ಷ್ಮೀರಮಣ ಗೋವಿಂದ ಗೋವಿಂದ
ಪ್ರಹ್ಲಾದ ವರದ ಗೋವಿಂದಾ
ಹರೇ ಹರೇ ಹರೇ.....

ಕಸರೊಳಗಣ ಮಾಣಿಕ್ಯದಂದಲಿ ಅಸುರಗೆ
ಪ್ರಹ್ಲಾದನೆಂಭೋ ಮಗ ಜನಿಸಿದನು

ನಿಸುನೆಯಂತೆ ಶಿಶು ಹೊಳೆಯುತ್ತ ಇರಲು
ಕುಸನಾದ ರಾಕ್ಷಸರಾಜಿ ಮುದ್ರಿಸಲು
ಪರೀಡಿಂಗರನು ಪ್ರಿಯಾದ ಕಾಂತೆ
ಹರಿದವು ದಿಕ್ಕು ದಿಕ್ಕಿನಲ್ಲಿ
ನಿಮ್ಮ ಶಾಂತಿಯೇ
ಹರೇ ಹರೇ ಹರೇ......

ದುರುಳ ಹಿರಣ್ಯಾರಾಕ್ಷಸನ ದೊರೆಯ
ಮಂತ್ರಿ ವರಹ ಕಲಿಸ ಬೇಕೆಂದನೋ
ತಂತ್ರಿ ಕರೆಸೆಂದನು ಬಾಲಕನ
ಕಡು ಬ್ರಾಂತಿ
ಹರೇ ಹರೇ ಹರೇ.......

ಓದೋ ಮಂಟಪದಲ್ಲಿ ಕಾಯ್ದು
ಕೊಂಡಿರುವ ದೈತ್ಯ ಕೋಟಿ
ಮತ್ತವನ ಮಾಧವ ಶ್ರೀ ರಂಗಧಾಮ
ಆದಿನಾರಾಯಣ ಗೊಲಿದಂಥವನು
ಪರಿಪಾದವೇ ಗುರುಪಾದವೇ
ಗತಿಯಂಭೋ ಚರಣ ಸೇವಕನೋ
ಹರೇ ಹರೇ ಹರೇ.......

ಓಂ ನಾಮ ಬರೆಯೆಂದರೆ ಅವನು
ಶ್ರೀಮನ್ ನಾರಾಯಣನೆಂದು ಬರೆದು
ನಾನಾ ವಿಧದಲ್ಲಿ ಕಲಿಸಿದನವನು
ಜ್ಞಾನಿ ಶ್ರೀರಂಗನ ಧ್ಯಾನವ
ಬಿಡಲೊ ಮರುಳು ಮಗನೆ
ಮಾಯದ ವಿಶಲನೆ ಸರಿ ನಮ್ಮ ವಂಶಕ್ಕೆ
ಇವನು ದೇಶವತಿರುಗುವ
ದಾಸೋತ್ತಮರ ಮಗನಂತಿವನು
ಲೇಸು ಕೊಡುವನೋ
ಎಂತುಟೋ ನಿನಗವನು
ಹಿಂದೆ ಪಾತಳಕ್ಕೆ ಬಿದ್ದಂಥವನೋ
ಹರೇ ಹರೇ ಹರೇ.......

ಬಂದು ಜೀವಿಸುವನೇ ಬಿಡು!
ಎನ್ನ ಹಗೆಯನೆ ಹಿಡಿದು
ಕಂಡೆಯದಲ್ಲಿ ಕಡಿದೊಟ್ಟುವೆನೂ
ಕಡಿ, ಕಡಿ, ಎನುತ ಕಡುಕೋಪದಲ್ಲಿ
ಕೇಳೆಲೋ ರಕ್ಷಾಸ ನಾ ನಿನ್ನ ಮಗನಲ್ಲ
ಎನ್ನ ಮನವನ್ನು ಶ್ರೀ ದೇವರಿಗೆ
ಮಾರಿದೆನೂ ವನಜಾಕ್ಷನನ್ನು
ನೆನೆನಂಬಿದೆನೂ ಘನತರ

ಆ ಬ್ರಹ್ಮನಲ್ಲದೆ ನಾನಿನ್ನರಿಯೆ
ಎನ್ನ ಮನದಲ್ಲಿ
ಶ್ರೀ ರಂಗಾ ಬಂದವನೆ
ಹರೇ ಹರೇ ಹರೇ......

ಪಟ್ಟದಾನೆಯ ತಾರೆಂದೆನಲು
ತಟ್ಟನೆ ಮಾವಟಿಗರು ಬಂದು
ಮೆಟ್ಟಿ ತುಳಿಸಿರೋ ಇವನೆಂದೆನಲು
ಮದಕರಿ ಕೆಟ್ಟೋಡುತ್ತ ಇರಲು
ಹರೇ ಹರೇ ಹರೇ......

ಎಲೋವಾದ ಕರೆಯೆಂದರವನು
ಬಂದ ಪ್ರಹ್ಲಾದ ಎಲ್ಲಿಹನೂ
ನಿನ್ನೊಡೆಯನ ತೋರು ತೋರು ಎಂದನೇ
ಹರೇ ಹರೇ ಹರೇ.......

ಇಲ್ಲೇ ತೋರುವೆನೆಂದನತರಳ
ಬಾಲಕನು ಕರೆಯಲು
ನಿಲ್ಲಿಸಿದ ಕಂಬ ಇಬ್ಭಾಗೆಯಾಯಿತು
ಸಿಡಿಯಾನು ರಾಕ್ಷಸನ ಗೊಬ್ಬು ಮುರಿಯಿತು
ಕಂಭ ಲಕ್ಕವಿಲ್ಲದೆ ಸಿಡಗೆರುಗುತ್ತಿರಲು
ಉಕ್ಕಿತ ಶರಧೀಶರೆ ಅಂಬರವು
ಚಕ್ರಧಾಮ ಮಹಿಮೆ ಕೊಲಾಹಲವು
ಚಿಟಿಲ್ ಚಿಟಿಲ್ ಧಗಾ ಧಗಾ
ನೊರೆ ಮೊರೆಗಳನ್ನೇ ಹಿಡುತ್ತಾ ಹೊಗೆ
ಬ್ರಹ್ಮಾಂಡಕ್ಕೆ ಹೊಕ್ಕು ಹೊರಡಿಸುತ್ತ
ಹರೇ ಹರೇ ಹರೇ......

ಗಗನದ ಸುರರೆಲ್ಲ ಬಂದು ನಿಂದು ನೋಡುತ್ತ
ನೀನಲ್ಲದೆ ಶ್ರೀ ವೀರ ಪವಾಡಗಳನ್ನೇ
ಗೆಲಿದೆ ಭಲ್ಲಿದ ಭಯಂಕರ
ವೀರನರಸಿಂಹ ಅಹೋಬಳನಾರಸಿಂಹ
ಹರೇ ಹರೇ ಹರೇ.......

ಪೆನ್ನೋಬಳ ನಾರಸಿಂಹ
ಜಾಲವಾನ ನಾರಸಿಂಹ
ಜೋಲವ ನಾರಸಿಂಹ
ಜವಳಿಗಂಬದಾಟದಯ್ಯ
ದಾಳಿವಾಟದ ವೀರನಾರಸಿಂಹ
ಫಲ್ಂ ಮಂಡೆ ಪಾತಾಳ ವೀರಭದ್ರಿ ನಾರಸಿಂಹ
ಕಂಚೋಬಳಿ ನಾರಸಿಂಹ
ಅಲಕೋಬಳೆ ನಾರಸಿಂಹ
ಹರೇ ಹರೇ ಹರೇ........

ಧಗ್ ಧಗ್‌ದಲ್ಲಿ ನಾರಸಿಂಹ
ಭುಗಿಲ್ ಭುಗಿಲ್‌ನಲ್ಲಿ ನಾರಸಿಂಹ
ಹರೇ ಹರೇ ಹರೇ......

ಹೊಳೆಸಾಲು ಮಾತ್ತುಹೊಂಗಿ
ತೋಪನಯ್ಯ
ಹರೇ ಹರೇ ಹರೇ......

ನೀನಲ್ಲದೆ ಶ್ರೀವೀರ ಪವಾಡಗಳನ್ನೇ
ಗೆಲಿದೆ ಭಲ್ಲಿದ ಭಯಂಕರ
ವೀರನಾರಸಿಂಹ
ಹರೇ ಹರೇ ಹರೇ......

ಪಲಮ್ ಬಂಡೆ ಪಾತಾಳ
ವೀರಗತ್ರಿ ನಾರಸಿಂಹ
ಕಂಚೋಬಳಿ ನಾರಸಿಂಹ
ಅಲಕೋಬಳಿ ನಾರಸಿಂಹ
ಕಟುಗ್ರ ನಾರಸಿಂಹ
ಕದರಿ ಕಂಬದ ನಾರಸಿಂಹ
ನೀನಲ್ಲದೆ ಶ್ರೀ ವೀರ ಪವಾಡಗಳನ್ನೇ
ಗೆಲಿದೆ ಭಲ್ಲಿದ ಭಯಂಕರ
ವೀರ ಸಾರಸಿಂಹ
ಹರೇ ಹರೇ ಹರೇ........

ಹಿಗೂ! ಹಿಗೂ!! ನಿನ್ನ ಚಾರ ಪುರುಷರು
ಸ್ವಾಮಿ ಕುಮಾರರು ಹತ್ತು ರಾಮ
ನುದಸಿದಂತವನು ದಿಕ್ಕು ದೇಶಾ
ಬಾಲಕರೊಡ ಗಂಧರ್ವರು
ಅಷ್ಟಾದಿಕ್ಪಾಲಕರು, ಉಂಚರು
ಕೆಂಚರು, ಲಂಡರು, ಪುಂಡರು
ಮಠ ಮಹಾತ್ ಪದ್ದು ಪವಾಡದವರು
ಹರೇ ಹರೇ ಹರೇ......

ದೊರೆಗಳು ಮಂತ್ರಿಗಳು
ಗೌಡ ಶ್ಯಾನಭೋಗರು
ಹನ್ನೆರಡು ಕೈವಾಡ
ಅರವತ್ತಾರು ಒಕ್ಕಲು
ತೋಟಿ ತಳವಾರರು
ನೀಟಾಗಿ ದೇವರ ಪಾದವೆ
ಗತಿಯೆಂದು
ಹರೇ ಹರೇ ಹರೇ.......

೩.೧. ಹಾಡಿದವರು : ಶ್ರೀ ಮಿಲ್ಪಿಓಬಣ್ಣ., ೮೫, ಮ್ಯಾಸಬೇಡರು, ದಾಸಯ್ಯ, ದೇವರ ಮರಿಕುಂಟೆ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಸಂದರ್ಶನ ದಿನಾಂಕ: ೧೩.೦೨.೨೦೦೧

ನೀನಲ್ಲದೆ ಶ್ರೀವೀರ ಪವಾಡಗಳನ್ನೇ
ಗೆಲಿದೆ ನಮೋ ನಮಃ
ಪದ್ದು ಪವಾಡದವರು
ದೊರೆಗಳು ಮಂತ್ರಿಗಳು
ಗೌಡ ಶ್ಯಾನಭೋಗರು
ಹನ್ನೆರಡು ಕೈವಾಡ
ಅರವತ್ತಾರು ಒಕ್ಕಲು
ತೋಟಿ ತಳವಾರರು
ನೀಟಾಗಿ ದೇವರ ಪಾದವೆ
ಗತಿಯೆಂದು
ಹರೇ ಹರೇ ಹರೇ........

ಚಿರಂಜಿವಿ ಪಂಕ್ತಿನೆ ವಸ್ತದರಸೆ
ಅವರ ಮೊರೆಯಲಾಲಿಸಿ ನಮ್ಮ
ಕೃಪೆಯ ಪಾಲಿಸೊ ಸ್ವಾಮಿ
ಈ ಭಕ್ತಾಧಿಗಳ ದೂರು
ವಿಚಾರಿಸೊ ಗೋವಿಂದಾ
ಹರೇ ಹರೇ ಹರೇ........

ದಯ ಮಯನೆ ಗೋವಿಂದ
ದಯ ಸಾಗರನೆ ಗೋವಿಂದ
ಭವರೋಗ ವೈದ್ಯನೆ ಗೋವಿಂದ
ಭಾರತೀಯೆ ಗೋವಿಂದ
ಸರಸ್ವತಿಯೆ ಗೋವಿಂದ
ಆದಿಲಕ್ಷ್ಮೀಯೆ ಗೋವಿಂದ
ಅಖಾಂಡ ಐಶ್ವರ್ಯಾಗಳನ್ನೆ
ಕೊಡುವವನೆ ಗೋವಿಂದ
ಹರೇ ಹರೇ ಹರೇ......

ರಮರಮಣನೆ ಗೋವಿಂದ
ಆನಾರದ ಸಂಭೂತನೆ ಗೋವಿಂದ
ದೇವೀ ಭಕ್ತನಿಗೆ ಆಶೀರ್ವಾದ
ಮಾಡುವವನೆ ಗೋವಿಂದಾ
ನಮೋ ನಮಃ............. .

೩.೨. ತಿರುಮಂತ್ರ

ಬಹು ಪರಾಕು ಬಹು ಪರಾಕು ಬಹು ಪರಾಕಯ್ಯ ||ಹರೇ||
ದೇವದೇವೋತ್ತಮ ದೇವತಾ
ಸಾರ್ವಭೌಮ ದೇವತಾ ಶಿಖಾಮಣಿ
ಪುಂಡರೀಕಾಕ್ಷ ಪ್ರವೇಶಾ
ಅಯೋಧ್ಯ ಪುರವರಾಧೀಶ್ವರಾ
ಶಕುನಿ ಗುರುಪಾದಮು

ಸಕಟ ಮಧ್ಯಾಂತ ನೀ ಪಾದಮು
ನೀ ಪಾದಮು ನಂಬಿತೇ
ಕಾಳಿಂಗ ಮುಟರಾದು
ಗರ್ಭಂಬು ತುಟಿರಾದು
ದೋಷ ಮುಟಿರಾದು
ಶಂಖ ಚಕ್ರಗದಾಧರ
ಅಹೋಬಲ ನಾರಸಿಂಹ
ಭೂದರಿಯ ತಾಳ್ದೆ ಹರಿಕೂರ್ಮನಾದೆ
ಕಾಯ್ದು ಪ್ರಹ್ಲಾದನಿಗೆ ನರಸಿಂಹನಾದೆ
ಧೀರ ಹಿರಿಯೋಬಳ ಪುರದಲ್ಲಿ
ಹೂವಿನ ಮಳೆಗರದೇ
ವಾರದ ಹರಿದಾಸರೆಲ್ಲ ಬಂದೂ
ಬಲ್ಲಿದ ಬಯತ್ಕರ ವೀರನಾರಸಿಂಹ
ದಾಳಿವಾಟ ವೀರಗ್ರತಿ ನಾರಸಿಂಹ
ಕದರಿ ಕಂಬದ ನಾರಸಿಂಹ
ಧಗ್ ಧಗ್ ನಾರಸಿಂಹ
ಭುಗಿಲ್ ಭುಗಿಲ್ ನಾರಸಿಂಹ
ಉಗ್ರನರಸಿಂಹ ಭಾರ್ಗವ ನಾರಸಿಂಹ
ಜ್ವಾಲಮುಖಿ ನಾರಸಿಂಹ
ನರಹರಿ ನಾರಸಿಂಹ
ಗಂಡರಿಗೆ ಗಂಡ
ಬಲವರಿಗೆ ಮಾರ್ಥಂಡ
ಕದರಿ ಕಂಚೋಬಳ ನಾರಸಿಂಹ
ಬಹು ಪರಾಕು ಬಹು ಪರಾಕು ಬಹು ಪರಾಕಯ್ಯ.... .

ಹೊಳೆಸಾಲು ಮುತ್ತಿನಂಗಿ ತೋಪಿನಯ್ಯ
ಏಳ್ಹೆಡೆಯ ಸರ್ಪ ಎಳನಾಗರ ಸಂಪಿಗೆ
ಯಾದಗಿರಿ ಪೆನ್ನೋಬಳ ನಾರಸಿಂಹ
ಸಿಂಹಾಚಲವಾಸ ಚೆಂಚುಲಕ್ಷ್ಮೀ ವಲ್ಲಭ
ಭಾರ್ಗವ ನಾರಸಿಂಹ
ಯೋಗಾನಂದ ನಾರಸಿಂಹ
ಛತ್ರಪಟ ನಾರಸಿಂಹ
ಕಾರಂಜಿ ನಾರಸಿಂಹ
ಅಹೋಬಲ ನಾರಸಿಂಹ
ವರಾಹ ನಾರಸಿಂಹ
ಮಾಲೋಲ ನಾರಸಿಂಹ
ಜ್ವಾಲಾವಾನ ನಾರಸಿಂಹ
ಪಾವನ ಮೂರ್ತಿ ನಾರಸಿಂಹ
ಪ್ರಹ್ಲಾದ ವರದ ನಾರಸಿಂಹ
ವೇದಾದ್ರಿ ಗರುಡ ಗಿರಿವಾಸ
ಅಚಲಭಾಯಾ ಮೇರು ವಾಸ

ಉಗ್ರಸ್ತಂಭ ನರಹರಿ ನಾರಸಿಂಹ
ಅನಂತ ಕೋಟಿ ಸೂರ್ಯ ಪ್ರಕಾಶ
ಒಂದು ನಾಮದಲಿ ಹರಿ ನೀನಾದೆ
ಎರಡು ನಾಮದಲಿ ನಾರಾಯಣನಾದೆ
ಮೂರು ನಾಮದಲಿ ಮುಕ್ಕಣ್ಣನಾದೆ
ನಾಕು ನಾಮದಲಿ ನಾರಸಿಂಹನಾದೆ
ಐದು ನಾಮದಲಿ ಪಂಚ ಪಾಂಡವರಾದೆ
ಆರು ನಾಮದಲಿ ಷಣ್ಮುಖನು ನೀನಾದೆ
ಏಳು ನಾಮದಲಿ ಏಳ್ಹೆಡೆ ಸರ್ಪನೀನಾದೆ
ಎಂಟು ನಾಮದಲಿ ಶ್ರೀ ಕೃಷ್ಣನು ನೀನಾದೆ
ಒಂಬತ್ತು ನಾಮದಲಿ ಹಂತಕನು ನೀನಾದೆ
ಹತ್ತು ನಾಮದಲಿ ರಾವಣನು ನೀನಾದೆ
ದಶಾವತಾರಗಳಲಿ
ದಶದಿಕ್ಕುಗಳನು ರಕ್ಷಿಸಿದೆ
ಅಖಿಲಾಂಡ ಕೋಟಿ ಬ್ರಹ್ಮಾಂಡ ಪಾಲ
ದೊರೆಗಳು ಮಂತ್ರಿಗಳು
ಗೌಡ ಶ್ಯಾನಭೋಗರು
ಹನ್ನೆರಡು ಕೈವಾಡ
ಅರವತ್ತಾರು ಒಕ್ಕಲು
ತೋಟಿ ತಳವಾರರು
ನೂರಾ ಒಂದು ಕುಲ
ಮೂರು ಕಟ್ಟೆಮನೆಯವರು
ಹನ್ನೆರಡು ಸಂಸ್ಥಾನ
ಎಪ್ಪತೇಳು ಪಾಳೆಗಾರರು
ನೀಟಾಗಿ ದೇವರ ಪಾದವೇಗತಿಯೆಂದು
ನೀನಲ್ಲದೆ ಶ್ರೀ ವೀರ ಪವಾಡಗಳನ್ನೇ
ಗೆಲಿದೆ ಭಲ್ಲಿದ ಭಯಂಕರ
ವೀರ ನಾರಸಿಂಹ
ಕಲ್ಲು ಕಂಭದ ನಾರಸಿಂಹ
ಮರಿಕುಂಟೆ ಓಬಳನಾರಸಿಂಹ
ಈ ಭಕ್ತರ ಮೊರೆಯನಾಲಿಸೊ ನಾರಸಿಂಹ
ಲಕ್ಷ್ಮೀರಮಣ ಗೋವಿಂದ ಗೋವಿಂದ......
ಶ್ರೀ ಮದ್ವೆಂಕಟರಮಣ ಗೋವಿಂದ ಗೋವಿಂದ......
ಅಹೋಬಲ ನಾರಸಿಂಹ ಗೋವಿಂದ ಗೋವಿಂದ...... .

೩.೨. ಹಾಡಿದವರು : ಶ್ರೀ ಎಸ್.ಕೆಂಗೋಬಯ್ಯ., ೭೦, ಮ್ಯಾಸಬೇಡರು, ದಾಸಯ್ಯ, ವಡೇರಹಳ್ಳಿ, ಚಳ್ಳಕೆರೆ ತಾಲ್ಲೂಕು, ಸಂದರ್ಶನ ದಿನಾಂಕ: ೧೨.೦೨.೨೦೦೧

೪. ಗಂಟೆ ಹೆಳವರ ನುಡಿಗಳು

ಶಿವ ಶಿವ್ಯಾss ಶಿವನು ಪರಮೇಶ್ವರಯ್ಯಾ, ಪಾರವತಿಯ್ಮರಿಯಾ ಆರು ಬ್ರಹ್ಮಾದಿಗಳು ಇವರು ತೂ.... . ಸ್ವಾಮಿ ನನ್ನಯ್ಯ ಮಾಕನಡುಕು ಕಂಚಯ್ಯ, ಕಂಚೋಬಳೇಶ ನಿಮ್ಮ ಪಾದುಗಳು ನಾವು ನೆನದ ಮೇಲೆ. ಆ ಕಾಲುದಲ್ಲಿ ನನ್ನಯ್ಯ. ಪೂದಿಮುಟ್ಟಿ ಗಾರುನಂತನಪ್ಪ ಪೂಡಿಮುಟ್ಟಿಗಾರನಂತನಯ್ಯ ವಡೇಲು ಗಂತುನಾರು ನಿಮ್ಮ ಪಾದಗಳು ನಾವು ನೆನದು ಮೇಲೆ, ಆ ಕಾಲುದಲ್ಲಿ ನನ್ನಯ್ಯ ಇವರು ಹುಟ್ಟು ಮ್ಯಾಸರಂತನಪ್ಪ, ಕಾಡು ಸುಂಚರಂತನಯ್ಯ, ಇವರು ಊಟ ಮಾಡುವುದು ಬಿದರಕ್ಕಿ ಜೇನುತುಪ್ಪವಂತೆ, ಹಾಸುವುದು ಏಳು ತ್ಯಾಗದೆಲೆಯಂತನಪ್ಪ, ಹೊದಿಯುವುದು ಏಳು ತ್ಯಾಗದೆಲೆಯಂತೆ.... .,

ಆ ಕಾಲುದಲ್ಲಿ ನನ್ನಯ್ಯ ಕೋಳಿ ಶಬ್ದವೇ ಕೇಳು ಬಾರದಯ್ಯ ಇವರು, ಹಂದಿ ಜಾಡು ತುಳಿಯಬಾರುದಲ್ಲೂ ಇವರು, ಈಸಲು ಚಾಪೆನ ಹಾಸಬಾರದಯ್ಯ, ಈಸಲು ಚಾಪೆ ಮೇಲೆ ಕುಂಡ್ರು ಬಾರದಲ್ಲೂ, ಸುತ್ತು ಭಾವಂತಿ ಏಕು ಸ್ತಂಭವಂತೆ, ಸ್ವಾಮಿ ನನ್ನಯ್ಯ ಸಾಲು ಮಳೇಲು, ಬಾಚೇವಾ ಮಳೇಶಬ್ದದ ದೊರೆಯ ಬಾಳೆ ಹೊನ್ನೂರು, ಗೊನ್ನಿ ಪಾಕಿ, ಉಜ್ಜನಿ, ಜರಮಲೆ, ಏಳೊಂದು ದೊರೆಯ ಮಕ್ಕಳಲ್ಲೂ. ಆಕಾಲುದಲ್ಲಿ ನನ್ನಯ್ಯ ದ್ವಾರವತಿ ಪಟ್ಟಣದೊಳಗ್ನೆಪ್ಪ ದೇವಮಹಾರಾಜ, ದಿವಟಿರಾಜ, ಸಿಡಿಮಿಲಿರಾಜ ಎಂಬ ಮೂರು ಜನ ದೊರೆಗಳು ರಾಜ್ಯ ಪರಿಪಾಲನೆ ಮಾಡಿಕೊಂಡು ಇರುವ ಕಾಲುದಲ್ಲಿ, ದೇವಮಹಾರಾಜನ ಹೆಂಡತಿ ಗಂಗಮ್ಮನ ಗರ್ಭುದಲ್ಲಿ ಮರಳಿ ಕಾಸೆಮ್ಮ ಪುಟ್ಟುತ್ತವಳೆ. ಒಂದಾನೊಂದು ದಿವಸನಪ್ಪ ಮರಳಿ ಕಾಸೆಮ್ಮ ಎಂಬುವುದನಯ್ಯ ಪಂಪಾದ್ರಿ ಚನ್ನಬಸವೇಶ್ವರನ ಮೇಲೆ ದ್ರಿಸ್ಟಿ ಇಟ್ಟಿದ್ದರಿಂದ ಮರಳಿ ಕಾಸೆಮ್ಮನ ಗರ್ಭುದಲ್ಲಿ ಮರಳುಮುತ್ತು ಬಸವಂತರಾಜ ಪುಟ್ಟುತವನಯ್ಯ, ಮರಳು ಮುತ್ತು ಬಸವಂತರಾಜನ ಗರ್ಭುದಲ್ಲಿ ಹಾಂಗಿರಸ ನಾಮ ಸಂಮತ್ಸರ, ಬಾದ್ರಪದ ಐದರಲ್ಲೂನಪ್ಪ ಸಪ್ತ ಋಷಿಗಳ ಆಚಾರ್ಯಕ್ಕೆ ಮಗನೆ, ಚಿತ್ತಕ್ಕೆ ಅನುಸರಿಸಿ ಸೂರ್ಯನಾರಾಯಣ ದೃಷ್ಟಿಯಿಂದ ಪಾಂಚಲಕ್ಕೆ ಉದ್ಭವಿಸಿದ ಏಳು ಜನ ದೊರೆಗಳು. ಏಳು ಜನ ದೊರೆಗಳು ಯಾರ‍್ಯರೆಂಬರಯ್ಯ, ಜಡುಕುರಾಜು, ಬಡುಕುರಾಜು, ಹಿಮ್ಮಡಿರಾಜು, ಮುಮ್ಮಡಿರಾಜುನಪ್ಪ, ಗಂಡರಾಜು, ದಡ್ಡಿರಾಜುನಯ್ಯ, ಮರಳುರಾಜು ಇವರು ಏಳುಮಂದಿ ಅಜ್ಜಗಳು ಹುಟ್ಟಿವಪ್ಪ, ಎಪ್ಪತೇಳು ಕೂಮಾರಿಕೆ ಕಟ್ಟಿಕೊಂಡು ಡಬ್ಬ ಏಳು ಪಾಳೇಗಾರರು ತಮ್ಮ ತಂದೆ ಬಣ್ಣಕ್ಕೆ ಲಕ್ಷ ದೇವುಗಂಪಳವೇನಿಟ್ಟು ಕೊಂಡು ಬಾಳುವಾಗೆ, ಒಂಟಿ ಕೊಂಬು ಬಲ್ಲೆವುನಪ್ಪ, ಪಂಪಾದ್ರಿ ಚನ್ನ ಬಸವನಿಟ್ಟುಕೊಂಡು ಬಾಳುತ್ತಿರುವ ಕಾಲದಲ್ಲಿ ಏಳು ಗೂಡಿನ ದನಗಳು ಇಟ್ಟುಕೊಂಡು ಬಾಳುವಾಗೆ, ಏಳು ಬರಗಾಲಗಳು ಬಂದುವಂತೆ. ಏಳು ಬರಗಾಲಗಳು ಯಾವ್ಯಾವು ಎಂದುರಯ್ಯ ದೊಕ್ಕೆಬರ, ದ್ಯಾಗಬರ, ಹಲ್ಲುಗಿಸಗನಬರ, ನಕನಾರಿಬರ, ಕೆಂದೂಳಿಬರ, ಸೊಪ್ಪಿನಬರ, ಏಳು ಬರಗಾಲದಲ್ಲಿ ಇವರು ಬಣ್ಣಕ್ಕೆ ಲಕ್ಷ ದೇವುಗಂಪಳವೇ ತೆಗೆದುಕೊಂಡು ಸೊಂಡೂರು, ಸ್ವಾರ್ಭನೂರು, ಗುಡೆಕೋಟೆ, ಹಂಪಿ, ಅರಮಲ, ಜರಮಲವೇ ಇವರು ದೊರೆತನವ ಆಳಿಕೊಂಡು ಅಲ್ಲಿ ನಿಂತನಪ್ಪ ಇವರು ಪುನಃ ಇಲ್ಲಿಗೆ ಹೋಗುತವರೆ ಕೊಡಚಿ, ಕೊಡಗಲ್ಲು, ವಡ್ಡು ದೊರೋಜಿ, ಉತ್ತರಮಲೆ, ಕಾಟಿನಕಂಭ, ಚಪ್ಪಾನ್ನಾರು ದೇಶವೇ ತಿರುಗಿ ಗೋಕರ್ಣಕ್ಕೆ ಹೋಗುತವರೆ. ಗೋಕರ್ಣದಲ್ಲಿ ಈಶ್ವರನ ಕುರಿತು ತಪ್ಪಸ್ಸುಮಾಡಿ ಈಶ್ವರಿನಿಂದ ಇವರು ಪ್ರಾಣಲಿಂಗವನು ಪಡೆದುಕೊಂಡರಂತೆ. ಅಲ್ಲಿ ಸಾಲಿಗ್ರಾಮ, ಬಲಮುರಿ ಶಂಖ, ನಾಗುಮುರಿ ಬೆತ್ತ, ಪಡೆದವರಂತೆ. ಅಲ್ಲಿಲ್ಲಿದ್ದನಪ್ಪ ಪುನಃ ಇಲ್ಲಿಗೆ ಹೋಗುತವರೆ ಬ್ರಹ್ಮಕಂಚಿಗೆ ಹೋಗುತವರನಪ್ಪ. ಬ್ರಹ್ಮಕಂಚಿಯಲ್ಲಿ ಬ್ರಹ್ಮದೇವರನು ಕುರಿತು ತಪಸ್ಸು ಮಾಡಿ

ಬ್ರಹ್ಮಲಿಂಗವನು ಪಡೆದು ಕೊಂಡರಂತೆ. ಬ್ರಹ್ಮ ಸಾಲಿಗ್ರಾಮಗಳನ್ನು ತೆಗೆದು ಕೊಂಡರಂತೆ. ಅಲ್ಲಿಲ್ಲಿದ್ದನಪ್ಪ ಪುನಃ ಇಲ್ಲಿಗೆ ಹೋಗುತವರೆ ಶಿವಕಂಚಿಗೆ ಹೋಗುತವರೆನಪ್ಪ. ಶಿವಕಂಚಿಯಲ್ಲಿ ಅವರು ನರಸಿಂಹ ಓಬಳಸ್ವಾಮಿ ದರುಶನ ಮಾಡಿ ಕೊಂಡರಂತೆ, ನರಸಿಂಹಸ್ವಾಮಿಯಿಂದ ಸಾಲಿಗ್ರಾಮ, ಬಲಮುರಿ ಶಂಖು, ನಾಗಮುರಿ ಬೆತ್ತ, ಮುತ್ತಿನ ಕಾಲ್ಪೆಂಡಿ, ಚಿನ್ನದ ಬಾಸಿಂಗ, ರತ್ನಗಂಬಳಿ, ಭೂಚಕ್ರಗೂಡುಗು ಪಡೆದರಂತೆ, ಇಷ್ಟು ಸಾಮಾನುಗಳು ಪಡೆದ ಮೇಲೆ ಅವರು ವಾಪಾಸು ತಿರುಗಿ ಭೂಕಂಚಿಗೆ ಬಂದರಂತೆನಪ್ಪ ಭೂಕಂಚಿಯಲ್ಲಿ ಅವರು ಮುದ್ರೆ ಸೀಲುಗಳ ಪಡೆದುಕೊಂಡರಂತೆ, ತೆರಬಿನ ಸಾಲುಗಳು ಪಡೆದುಕೊಂಡರಂತೆ, ಗಂಗಮ್ಮಗೆ ಆರುಕೇಲು ಬಡದರಂತೆ. ಇಷ್ಟು ಸಾಮಾನುಗಳು ಪಡೆದ ಮೇಲೆ ಇವರು ವಾಪಸ್ಸು ಹಿಂದುಕ್ಕೆ ತಿರುಗಿ ಬಿಟ್ಟರಂತೆ. ಬರುವ ದಾರಿಯಲ್ಲಿನಪ್ಪ ವಿದ್ಯಾನಗರದ ಹೊಳೆ ಬಂದು ಬಿಟ್ಟಿತಂತೆ, ಆವಾಗ ಇವರು ಕ್ಷೇತ್ರದಿಂದ ಕ್ಷೇತ್ರಕ್ಕೆ ಹೋಗಿ ತಪಸ್ಸು ಮಾಡಿ ತಂದಂತ ದೇವರಿಗೆ ಪೂಜೆಯ ವೇಳೆವು ಆಯಿತೆಂದು. ವಿದ್ಯಾನಗರದ ಹೊಳೆ ದಡದಲ್ಲಿ ಬಂದು ಅವ್ರು ಬಿಡಾರವನು ಬಿಟ್ಟರಂತೆ, ಏಳು ಜನ ದೊರೆಗಳು ನದಿಗೆ ಸ್ನಾನಕ್ಕೆ ಹೋಗುತವರೆ, ಆವಾಗ ಶ್ರೀ ಕಂಚಿ ಒಳಗೆನಂಬುವದುನಪ್ಪ ನೂರು ಮನೆ ಬ್ರಾಹ್ಮಣರು ನನ್ನ ಆಳು ಮಾಡಿ ಬಿಳಲಿಟ್ಟಿರುವದಂತೆ, ಸ್ವಾಮಿ ನನ್ನಯ್ಯ ಕಂಚಯ್ಯ ಕಂಚೋಬಳೇಶನೆಂಬುವದು, ಆವಾಗ ಜಕಣಾಚಾರಿ ಎಂಬ ಒಬ್ಬ ಬ್ರಾಹ್ಮಣನು ಇರುವನಂತನಪ್ಪ, ಜಕಣಾಚಾರಿಗೆ ಒಬ್ಬ ಗಂಡು ಮಗನು ಇರುವನಂತೆ; ಓಂಕಾರಸ್ವಾಮಿಯೆಂಬುವದು ಆವಾಗ ಜಕಣಾಚಾರಿ ಮಡಿದೋದ ಕಾಲಕ್ಕೆ ಓಂಕಾರಸ್ವಾಮಿಯೆಂಬುವದು ಜೀವನ ಮಾಡುವದು ತುಂಬ ಬಹಳ ಕಷ್ಟವಾಗಿರುವದಂತೆ; ಅಂತ ಏಳು ಬರಗಾಲದಲ್ಲಿ ಅವನು ಸುತ್ತು ಹಳ್ಳಿ ಭಿಕ್ಷಾಟಣೆ ಮಾಡಿಕೊಂಡು ಬಂದು ಪ್ರತಿ ನಿತ್ಯ ಸ್ವಾಮಿ ಪೂಜೆಯನ್ನು ಮಾಡುತ್ತಿರುವನಂತೆ, ಒಂದಾನೊಂದು ದಿವಸ ಓಂಕಾರಸ್ವಾಮಿ ಏನೆಂದು ಮಾತನಾಡುತವನೆ ನಾನು ಸ್ವಾಮಿ ಪೂಜೆಯನ್ನು ಮಾಡುತ್ತ ಇಲ್ಲೇ ಇದ್ದು ಬಿಟ್ಟರೆ, ನನ್ನ ಜೀವನವು ಇನ್ನೂ ಮುಂದೆ ನಡೆಯುದಿಲ್ಲವೆಂದು. ನಾನು ಮುಂದಲ ದೇಶಕ್ಕೆ ಸ್ವಾಮಿಯನ್ನು ತೆಗೆದುಕೊಂಡು ಹೋಗಬೇಕೆಂದರೆ ನನ್ನೊಬ್ಬನಿಂದ ಆಗುವುದಿಲ್ಲವೆಂದು ಗುಡಿಯೊಳಗೆ ಬಿಟ್ಟು ಹೋದರೆ ಸ್ವಾಮಿಗೆ ಪೂಜೆ ದಿಕ್ಕಿಲ್ಲದಂಗೆ ಆಗುತ್ತೈತೆಂದು ನಾನು ಇದ್ದಂಗಲೇ ಅದನು ತೆಗೆದುಕೊಂಡು ಹೋಗಿ ವಿದ್ಯಾನಗರದ ಹೊಳೆಯಲ್ಲಿ ಹಾಕಿಬಿಟ್ಟರೆ. ಯಾರಾದರೂ ಜಾಲಗಾರ್ರ ಕೈಗೆ ಸಿಕ್ಕರೆ ತೆಗೆದು ಕೊಂಡು ಹೋಗಿ ತನ್ನ ಮನೆಯಲ್ಲಿ ಗೂಡಿನೊಳಗೆ ಇಟ್ಟು ಕೊಂಡಾದರೂ ಪೂಜೆ ಮಾಡಿಕೊಳ್ಳುತವರೆ. ಗುಡಿಯೊಳಗೆ ಬಿಟ್ಟು ಹೋಗಬಾರದೆಂದು. ಶನಿವಾರದ ದಿವಸ ಕಲ್ಲು ನೀರು ಕರಗೂ ಹೊತ್ತಿನಲ್ಲಿ ಸ್ನಾನವನ್ನು ಮಾಡಿ ಬಿಟ್ಟನಂತೆ, ಮಡಿಯನ್ನು ಉಟ್ಟನಂತೆ ಓಂಕಾರಸ್ವಾಮಿವೆಂಬುವುದು ಸ್ವಾಮಿ ಪೆಟ್ಟಿಗೆಯನು ಹೊತ್ತುಕೊಂಡು ಹೋಗಿ ಮಗನೆ ವಿದ್ಯಾನಗರದ ಹೊಳೆಯಲ್ಲಿ ಹಾಕಿ ಬಿಟ್ಟನಂತೆ, ಅಲ್ಲಿಲ್ಲಿದ್ದ ಹೋಗಿ ಜಡಕನದುರ್ಗಕ್ಕೆ ನಿಂತನಂತೆ. ಆವಾಗ ಇವರು ಏಳು ಜನ ದೊರೆಗಳು ನದಿಯಲ್ಲಿ ಸ್ನಾನವನು ಮಾಡುತ್ತಿರುವಾಗ, ಸ್ವಾಮಿ ಪೆಟ್ಟಿಗೆಯೆಂಬುವದನಪ್ಪ ನದಿಯಲ್ಲಿ ಮುಳಗುತ್ತ ತೆಲುತ್ತ ಹೋಗುತ್ತಿರುವದಂತೆ, ಆವಾಗ ಹೋಗುತ್ತಿರುವ ಪಟ್ಟಿಗೆಯೆಂಬುವದ ಅವರ ಏಳು ಜನ ದೊರೆಗಳ ಕಣ್ಣಿಗೆ ಕಾಣುತ್ತಿರುವದಂತೆ, ಆವಾಗ ಹಿರಯ ಅಣ್ಣ ಏನೆಂದು ಹೇಳುತವನೆ. ಯಾವುದೋ ದೇವರ ಪಟ್ಟಿಗೆ ನದಿಯಗುಂಟೆ ಮುಳುಗುತ್ತ ತೆಲುತ್ತ ಬರುತ್ತಿದೆ. ತಮ್ಮಗಳೀರಾ ನಾವು ಏನಾದರೂ ಮಾಡಿ ಹಿಡಿದು ಸ್ವಾಧೀನ ಪಡಿಸಿಕೊಳ್ಳಬೇಕು ಎಂದು, ಆವಾಗ ಏಳು ಜನ ಅಣ್ಣ ತಮ್ಮಗಳು ಸ್ವಾಮಿ ಪಟ್ಟಿಗೆಯನ್ನು ಹಿಡಿಯಲಿಕ್ಕೆ ಹೋಗುತವರೆ ಈಜಿಕೊಂಡು. ಸ್ವಾಮಿ ಎಂಬುವದು ಇವರ ಧೃಡ ಭಕ್ತಿ ಸಹಾಸ ನೋಡಬೇಕೆಂದು ಮಾಯಾದ ಹೊಳೆಯಾಗಿ ಉಕ್ಕಿ ಬಂದು ಬಿಟ್ಟಿತಂತೆ ಅವರು ಎಷ್ಟು ಈಜಿಕೊಂಡು ಹೋದರು ಸ್ವಾಮಿ ಪೆಟ್ಟಿಗೆಯೆಂಬುವದು

ಅವರ ಕೈಗೆ ಸಿಗಲಿಲ್ಲವಂತೆ ನೀರಿನ ರಬಸಕ್ಕೆ ಎಷ್ಟು ಯೋಜನ ಕಳಗಡೆ ಕೊಚ್ಚಿಕೊಂಡು ಹೋಗಿ ಬಿಟ್ಟಿತಂತೆ, ಆವಾಗ ಏಳು ಜನ ಅಣ್ಣ ತಮ್ಮಗಳು ನದಿಯೊಳಗೆ ಈಜಿ, ಈಜಿ ಬಹಳ ಸೋತು ಬಿಟ್ಟರಂತೆ. ಆವಾಗ ಹಿರೇ ಅಣ್ಣಏನೆಂದು ಹೇಳುತವನೆ ಹಿಂಗಾದರೆ ಈ ಸ್ವಾಮಿ ನಮ್ಮಗೆ ಒಲಮೆಯಾಗದಿಲ್ಲ ತಮ್ಮಂದಿರ ನಾವು ಒಂದು ನೋಮವಾದರೂ ಮಾಡೋಣವೆಂದು ಆವಾಗ ಕರೆಕಂಬಳಿ ಗದ್ದುಗೆಯನು ಹಾಸಿ ಬಿಟ್ಟರಂತೆ ಗದ್ದುಗೆ ಮೇಲೆ ಸೂಜಿಯನು ಇಟ್ಟರಂತೆ, ಸೂಜಿಯ ತೂದಿಯ ಮೇಲೆ ಬಾಳೆ ಹಣ್ಣನ್ನು ಇಟ್ಟು, ಬಾಳೆ ಹಣ್ಣಿನ ತೂದಿಯ ಮೇಲೆ ನಿಂಬಿ ಹಣನ್ನು ಇಟ್ಟು, ನಿಂಬಿ ಹಣ್ಣಿನ ತುದಿಯ ಮೇಲೆ ಮಲ್ಲಿಗೆ ಹರಳನ್ನು ಇಟ್ಟು, ಮಲ್ಲಿಗೆ ಹರಳಿನ ಮೇಲೆ ಕುಂತು ಸೂರ್ಯನಾರಾಯಣ ತಪಸ್ಸು ಮಾಡುತವರೆ. ಆವಾಗ ಎಷ್ಟೋ ಯೋಜನ ನೀರಿನ ಗುಂಟೆ ಹೋದಂತ ಪಟ್ಟಿಗೆಯೆಂಬುವದು ಎದುರು ನೀರಿಗೆ ಹೋರಿ ಈಜಿಕೊಂಡು ಬಂದಂಗೆ ಬಂದು ಬಿಟ್ಟಿತಂತೆ, ಅವರು ಇದ್ದಂತ ದಡಕ್ಕೆ ಬಂದವಪ್ಪ ಹದ್ದು ಹಾರಿದಂಗೆ ಹಾರಿ ಬಂದು ಕರೆ ಕಂಬಳಿ ಗದ್ದುಗೆ ಮೇಲೆ ಕುಂತು ಬಿಟ್ಟಿತಂತೆ ಸ್ವಾಮಿ ನನ್ನಯ್ಯ ಕಂಚೋಬಳೇಶನೆಂಬುವದು. ಆವಾಗ ಒಂಬತ್ತು ವರ್ಷದ ಮಗುವಿನ ಮೇಲೆ ಬಂದು ಒಲವಾಗಿ ಕುಣಿಸಿಬಿಟ್ಟನಂತೆ, ನಾನು ಬ್ರಾಹ್ಮಣರು ದೇವರಯ್ಯ, ನಾನು ಶ್ರೀಕಂಚಿ ಓಬಳೇಶ ನಿಮ್ಮ ಬಣ್ಣಕ್ಕೆ ಲಕ್ಷ ದೇವ ಗಂಪಳುವೆ ನೋಡಿ ನಾನು ಒಲಿದು ಬರುತೀನಿ ಮಕ್ಕಳ್ಳೀರಾ ಎಂದು ಹೇಳುವಾಗ್ಗೆ, ಆವಾಗ್ಗೆ ಇವರು ಕ್ಷೇತ್ರದಿಂದ ಕ್ಷೇತ್ರಕ್ಕೆ ಹೋಗಿ ತಪ್ಪಸ್ಸು ಮಾಡಿ ತಂದಂತ ದೇವರ ಜೊತೆಗೆಯಿಟ್ಟು ಅವರು ಪೂಜೆ ಪಾರಾಯಣ ಮುಗಿಸಿಕೊಂಡು. ಅಲ್ಲಿಲ್ಲಿದನಪ್ಪ ಇವರು ಪುನಃ ಇಲ್ಲಿಗೆ ಹೋಗುತವರೆ ದಂಡು, ದಳ, ಮಂದಿ, ಮಾರ್ಬಲ ಎಲ್ಲಾ ತೆಗೆದುಕೊಂಡು, ಬಿದುರೂರ ಅಂಬೋಜಿ ಪಟ್ಟಣಕ್ಕೆ ಹೋಗುತವರೆ ಪೂರ್ವದಲ್ಲಿ ಬಿದುರೂರು ಅಂಬೋಜಿ ದೇವಿಯೆಂಬುವಳು ಮನೆ ದೇವತೆಯಂತೆ, ಆವಾಗ ಅಂಬೋಜಿ ದೇವಿಯೆಂಬುವಳು ಬನ್ನೀರಪ್ಪ ದೊರೆ ಮಕ್ಕಳೀರಾ, ನೀವು ಬಹುಕಾಲದಿಂದ ನನ್ನ ದರಶುನಕ್ಕೆ ಬಂದಿರಲಿಲ್ಲಿ ಮಕ್ಕಳೀರಾ ಈ ಹೊತ್ತು ನೀವು ಏಳು ಜನ ಅಣ್ಣ ತಮ್ಮಗಳು ಸೇರಿಕೊಂಡು ನೆಂಟರು ಬಂಟರು ಸೇರಿ ನನ್ನ ದರಶುನಕ್ಕೆ ಬಂದ ಮೇಲೆ ಮಕ್ಕಳೀರಾ, ನನಗೆ ಏನು ಆಹುತಿ ಕೊಡುತೀರಾ ಮಕ್ಕಳೀರಾ ಎಂದು ಅಂಬೋಜಿ ದೇವಿ ಕೇಳುತವಳೆ. ಆಯಿತವ್ವ ನಿನ್ನಗೆ ನೂರಾರು ಕುರಿ ಕೋಣ ಆಹುತಿ ಕೊಡುತಿವೆ ಎಂದು ಇವರು ಏಳು ಜನ ದೊರೆಗಳು ಹೇಳುತವರೆ, ಆ ಮಾತಿಗೆ ಅಂಬೋಜಿ ದೇವಿ ಒಪ್ಪಲಿಲ್ಲವಂತೆ ನೀವು ಬರೇ ಮಾತೀಲಿ ಹೇಳದೀರಿ ನಾನು ಒಪ್ಪಕ್ಕಿಲ್ಲ ಮಕ್ಕಳೀರಾ ನಾನು ಬೇಡಿದ್ದೆ ಕೊಡುತ್ತಿನೆಂದು ನೀವು ಏಳು ಜನ ದೊರೆಗಳು ನನಗೆ ಬಲಗೈ ಭಾಷೆಯನ್ನು ಕೊಡಬೇಕು ಮಕ್ಕಳೀರಾ. ಪಚ್ಚೇದು ಕಲ್ಲಿಗೆ ನಿತೀಶಾಸಾನ ಒಡದರೆ ನಾನು ಮುಂದಲ ವಿಚಾರ ಕೇಳುತ್ತಿನಿ ಮಗನೆ, ಇಲ್ಲವಾದರೆ ನಾನು ಕೇಳುತ್ತಿಲ್ಲ ಮಗನೆ ಎಂದು ಹೇಳುತವಳೆ. ಆಯಿತವ್ವ ನೀನು ಏನು ಬೇಡಿದಾಂಗ ನಾವು ಕೊಡುತಿವೆ ಎಂದು ಇವರು ಏಳು ಜನ ದೊರೆಗಳು ಬಲಗೈ ಭಾಷೆಯನ್ನು ಕೊಟ್ಟರಂತೆ. ಪಚ್ಚೇದ ಕಲ್ಲಿಗೆ ನಿತೀಶಾಸಾನ ಬಡದರಂತೆ, ಆವಾಗ ಇವರು ಪುನಃ ತಿರುಗಿ ಅಂಬೋಜಿ ದೇವಿನ ಇವರೇನು ಕೇಳುತವರೆ, ನೀನು ಕೇಳಿದ್ದು ನಾವು ಕೊಡುತ್ತಿವಿ ತಾಯಿ, ನಾವು ಏಳು ಜನ ಏನು ಕೇಳಿದಾಗ್ಯೂ ಅದನ್ನು ನೀನು ಕೊಡಬೇಕೆಂದು ಕೇಳುತವರೆ. ಆಯಿತಪ್ಪ ನೀವು ಏನು ಬೇಡಿದಾಂಗು ನಾನೂ ಕೊಡುತ್ತಿನಿ ಎಂದು ಏಳು ಜನ ದೊರೆಗಳಿಗೆ ಬಲಗೈ ಭಾಷೆಯನು ಕೊಟ್ಟಳಂತೆ ಪಚ್ಚೇದು ಕಲ್ಲಿಗೆ ನಿತೀಶಾಸಾನ ಬಡದಳೆಂತೆ. ಆವಾಗ ಒಬ್ಬರಿಗೊಬ್ಬರಿಗೆ ಪ್ರಮಾಣಗಳು ನಡದ ಮೇಲೆ ಅಂಬೋಜಿ ದೇವಿ ಏನೆಂದು ಬೇಡುವತವಳೆ, ಏನಪ್ಪ ದೊರೆ ಮಕ್ಕಳೀರಾ, ನನ್ನ ದರುಶನಕೆ ಬರದೆ ಇಲ್ಲಿಗೆ ಹನ್ನೆರಡು ವರ್ಷವಾಯಿತು ಮಕ್ಕಳೀರಾ, ಏಳು ಬರಗಾಲದಲ್ಲಿ ಹೋಗಿದ್ದರಿಪ್ಪ ಈ ಹೊತ್ತು ನೀವು ಏಳು ಜನ ಅಣ್ಣ ತಮ್ಮಗಳು ಸೇರಿ ಏಳು

